ಬೇಂದ್ರೆ ನಿಸರ್ಗಕಾವ್ಯ : ಅನುಭೂತಿ ಹಾಗೂ ಅಭಿವ್ಯಕ್ತಿ

ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರ ಪಡಿಸಿದ ಮಹಾಪ್ರಬಂಧ
೨೦೧೧

ಸಂಶೋಧಕ
ಬಸನಪ್ಪ ಪಂಚಪ್ಪ ಬೇವಿನಗಿಡದ
ಕಾರ್ಯಕ್ರಮ ಅಧಿಕಾರಿ
ಆಕಾಶವಾಣಿ, ಧಾರವಾಡ - ೫೮೦ ೦೦೮

ಮಾರ್ಗದರ್ಶಕರು
ಪ್ರೊ. ಎಚ್. ಎಮ್. ಬೀಳಗಿ
ವಿಶ್ರಾಂತ ಪ್ರಾಧ್ಯಾಪಕರು
ಕರ್ನಾಟಕ ಕಾಲೇಜು, ಧಾರವಾಡ

ಡಾ. ದ.ರಾ.ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಧಾರವಾಡ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ -೫೮೩ ೨೭೬

391

ಬೇಂದ್ರೆ ನಿಸರ್ಗಕಾವ್ಯ : ಅನುಭೂತಿ ಹಾಗೂ ಅಭಿವ್ಯಕ್ತಿ

ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರ ಪಡಿಸಿದ ಮಹಾಪ್ರಬಂಧ
೨೦೧೧

ಸಂಶೋಧಕ
ಬಸನಪ್ಪ ಪಂಚಪ್ಪ ಬೇವಿನಗಿಡದ
ಕಾರ್ಯಕ್ರಮ ಅಧಿಕಾರಿ
ಆಕಾಶವಾಣಿ, ಧಾರವಾಡ - ೫೮೦ ೦೦೮

ಮಾರ್ಗದರ್ಶಕರು
ಪ್ರೊ. ಎಚ್. ಎಮ್. ಬೀಳಗಿ
ವಿಶ್ರಾಂತ ಪ್ರಾಧ್ಯಾಪಕರು
ಕರ್ನಾಟಕ ಕಾಲೇಜು, ಧಾರವಾಡ

ಡಾ. ದ.ರಾ.ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಧಾರವಾಡ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ -೫೮೩ ೨೭೬

ಪ್ರಮಾಣ ಪತ್ರ

ಬಸನಪ್ಪ ಪಂಚಪ್ಪ ಬೇವಿನಗಿಡದ ಇವರು ನನ್ನ ಮಾರ್ಗದರ್ಶನದಲ್ಲಿ **ಬೇಂದ್ರೆ ನಿಸರ್ಗಕಾವ್ಯ : ಅನುಭೂತಿ ಹಾಗೂ ಅಭಿವ್ಯಕ್ತಿ** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಸಿದ್ಧಪಡಿಸಿದ್ದು, ಡಾ. ದ.ರಾ.ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಧಾರವಾಡ ಮಾನ್ಯತಾ ಸಂಸ್ಥೆಯ ಮೂಲಕ ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯಕ್ಕೆ ಸಲ್ಲಿಸುತ್ತಿದ್ದಾರೆ.

ಸದರಿ ಮಹಾಪ್ರಬಂಧ ಮೂಲ ಸಂಶೋಧನ ಕೃತಿಯಾಗಿದ್ದು ಇದರ ಯಾವುದೇ ಭಾಗ ಮತ್ತು ವಿಷಯವನ್ನು ಯಾವುದೇ ಉದ್ದೇಶಕ್ಕೆ ಬಳಸಿಕೊಂಡಿಲ್ಲ ಮತ್ತು ಈ ಮೊದಲು ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

(ಪ್ರೊ. ಎಚ್. ಎಮ್. ಬೀಳಗಿ)
ವಿಶ್ರಾಂತ ಪ್ರಾಧ್ಯಾಪಕರು
ಕರ್ನಾಟಕ ಕಾಲೇಜು
ಧಾರವಾಡ

ಸ್ಥಳ : ಧಾರವಾಡ
ದಿನಾಂಕ: ೨೦-೦೧-೨೦೧೧

ಘೋಷಣಾ ಪತ್ರ

ಬೇಂದ್ರೆ ನಿಸರ್ಗಕಾವ್ಯ : ಅನುಭೂತಿ ಹಾಗೂ ಅಭಿವ್ಯಕ್ತಿ ಎಂಬ ಶೀರ್ಷಿಕೆಯ ಪ್ರಸ್ತುತ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಪ್ರೊ. ಎಚ್. ಎಮ್. ಬೀಳಗಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಡಾ. ದ.ರಾ.ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಧಾರವಾಡ ಮಾನ್ಯತಾ ಸಂಸ್ಥೆಯ ಮೂಲಕ ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯಕ್ಕೆ ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಇನ್ನಿತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

(ಬಸನಪ್ಪ ಪಂಚಪ್ಪ ಬೇವಿನಗಿಡದ)
ಕಾರ್ಯಕ್ರಮ ಅಧಿಕಾರಿ
ಆಕಾಶವಾಣಿ, ಧಾರವಾಡ

ಸ್ಥಳ : ಧಾರವಾಡ
ದಿನಾಂಕ: ೨೦-೦೧-೨೦೧೧



ನೆನಪಿಗೆ ಮರಣವಿಲ್ಲ. ಅದು ಅನುಭೂತಿಯ ಅಖಂಡ ಸಮಾಧಿ.

- ಡಾ. ದ.ರಾ.ಬೇಂದ್ರೆ

ನಿವೇದನೆಗೆ ತುಸು ಹೊತ್ತು. . .

ಕಾವ್ಯಗಂಗೆ ಶಾಲ್ಮಲೆ ಹರಿಯುವ ಧಾರವಾಡದಲ್ಲಿ ೧೯೮೮ ರಲ್ಲಿ ನನ್ನ ಎಂ.ಎ., ಇಂಗ್ಲೀಷ್ ಮುಗಿದ ತಕ್ಷಣ ನನಗೆ ಪಿಎಚ್.ಡಿ. ಮಾಡಬೇಕೆನ್ನುವ ಆಸೆ ಏನೋ ಬಹಳಷ್ಟಿತ್ತು. ಆದರೆ ಆರ್ಥಿಕ ಪರಿಸ್ಥಿತಿಗಳು ಉದ್ಯೋಗ ಅರಸುವಿಕೆಯನ್ನೆ ಮುಖ್ಯವಾಗಿರಿಸಿದ್ದವು. ಆಕಾಶವಾಣಿಯ ಉದ್ಯೋಗ ಬದುಕಿಗೆ ಆಸರೆಯಾಗಿ ಒದಗಿದ ಮೇಲೆ ಪಿಎಚ್.ಡಿ. ಅನಿವಾರ್ಯವೆನಿಸಲಿಲ್ಲ. ಆಕಾಶವಾಣಿ ಸೇರುವ ಮೊದಲು ಒಂದು ವರ್ಷ ಕಾಲೇಜು ಉಪನ್ಯಾಸಕನಾಗಿದ್ದೆ. ಅಲ್ಲಿಯೇ ಮುಂದುವರೆದಿದ್ದರೆ ಆವಾಗಲೆ ಪಿಎಚ್.ಡಿ. ಅಧ್ಯಯನವನ್ನು ಮಾಡಿ ಮುಗಿಸಬಹುದಿತ್ತೇನೋ. ಆದರೆ ಅದರಿಂದ ನನಗೆ ಬಹಳಷ್ಟು ಲಾಭವೇ ಆಗಿದೆಯೆನ್ನಬೇಕು. ಮೊದಲನೆಯ ಲಾಭವೆಂದರೆ ವರಕವಿ ಡಾ. ದ.ರಾ.ಬೇಂದ್ರೆಯವರ ಮೇಲೆ ಅಧ್ಯಯನ ಮಾಡುವ ಅವಕಾಶ ಸಿಕ್ಕಿದ್ದು ಮತ್ತು ಎರಡನೆಯ ಸಂತೋಷದ ಸಂಗತಿಯೇನೆಂದರೆ ದ.ರಾ.ಬೇಂದ್ರೆ ಟ್ರಸ್ಟಿನ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಈ ಅಧ್ಯಯನವನ್ನು ಮಾಡುವಂತಾದುದು.

ಬೇಂದ್ರೆಯವರ ಕವಿತೆಗಳು ನನ್ನ ಮೇಲೆ ಮೊದಲಿನಿಂದಲೂ ಪ್ರಭಾವ ಬೀರಿದ್ದವು. ನನ್ನ ಮನಸ್ಸಿನ ಭಾವಗಳನ್ನು ಯಾವಾಗಲೂ ಕಲಕುತ್ತಲೇ ಇರುತ್ತಿದ್ದವು. ಅವರ ನಿಸರ್ಗ ಕಾವ್ಯದ ಅಧ್ಯಯನದಿಂದ ಬೇಂದ್ರೆ ಮಾಂತ್ರಿಕತೆಯನ್ನು ಮತ್ತಷ್ಟು ಸಮೀಪದಿಂದ ಸವಿಯಲು ಇದರಿಂದ ಸಹಾಯವಾಗಿದೆ. ಬೇಂದ್ರೆಯವರ ಸಾಹಿತ್ಯವನ್ನು ಅದರಲ್ಲೂ ಮುಖ್ಯವಾಗಿ ನಿಸರ್ಗ ಕವಿತೆಗಳನ್ನು ಲೌಕಿಕ ಹಾಗೂ ದೈವಿಕ ಅನುಭವಗಳ ಹಿನ್ನೆಲೆಯಲ್ಲಿ ಅಭ್ಯಾಸ ಮಾಡಿದ ದಿನಗಳು ನನಗೆ ಕವಿತೆಯ ಪಾಠಗಳನ್ನು ಹೇಳಿಕೊಟ್ಟಿವೆ. ಲೋಕಾನುಭವ ಹಾಗೂ ಅನುಭಾವದ ವಿಚಾರಗಳಿಂದ ಬೇಂದ್ರೆ ಸಾಹಿತ್ಯವನ್ನು ಅಧ್ಯಯನ ಮಾಡುವುದು ದೂರದಿಂದ ದೊಡ್ಡ ಸವಾಲಾಗಿ ಕಂಡಿತ್ತು. ಆದರೆ ಹತ್ತಿರ ಹೋದಾಗ ಸ್ನೇಹದಿಂದ ಒಳಗೆ ಬಿಟ್ಟುಕೊಟ್ಟಿತು. ಮೊದಮೊದಲು ದುರ್ಗಮವಾಗಿದ್ದ ಕಾವ್ಯದ ಕೋಟೆ ದಿನಗಳೆದಂತೆ, ಹೆಚ್ಚು ಹೆಚ್ಚು ಸಹೃದಯತೆಯನ್ನು ರೂಢಿಸಿಕೊಂಡಂತೆ ಅದೇ ಬಾಗಿಲು ತೆರೆದು ಅರ್ಥ ಹಾದಿ ನಡೆದು ಬಂದಂತೆನ್ನಿಸಿತು. ಹಾಗೆ ಅನ್ನಿಸಲು ಈ ಅಧ್ಯಯನದ ಮಾರ್ಗದರ್ಶಕರಾದ, ಸಾಹಿತಿಗಳಾದ ಪ್ರೊ. ಹಸನಬಿ ಬೀಳಗಿಯವರ ವಾತ್ಸಲ್ಯಪೂರಿತ ಕರುಣಾಪ್ರಸಾದವೆ ಕಾರಣವೆಂದು ನಾನು ತಿಳಿದಿದ್ದೇನೆ. ನಾವು ಗೆಳೆಯರು ಕರ್ನಾಟಕ ಕಾಲೇಜಿನಲ್ಲಿ ಓದುತ್ತಿದ್ದಾಗ ನಮಗೆ ಕನ್ನಡವನ್ನು ಅವರು ಪ್ರಭಾವಶಾಲಿಯಾಗಿ ಕಲಿಸುತ್ತಿದ್ದ ಆ ದಿನಗಳು ಸ್ಮರಣೀಯವಾಗಿವೆ. ಮಾರ್ಗದರ್ಶನದ ವೇಳೆಯಲ್ಲಿ ಒಂದು ದಿನವೂ ಅವರು ಬೇಸರ ಮಾಡಿಕೊಂಡವರಲ್ಲ. ತಮಗೆ ಹೊಳೆದ ಹೊಳವುಗಳನ್ನು ಕೂಡಲೇ ನನಗೆ ತಿಳಿಸಿ ಅಳವಡಿಸಿಕೊಳ್ಳಲು ಸೂಚಿಸುತ್ತಿದ್ದರು. ನನ್ನ ಬರವಣಿಗೆ ತೃಪ್ತಿ ತಂದಾಗ ಖುಷಿಪಡುತ್ತಿದ್ದರು. ಅವರು ನನಗೆ ಮಾರ್ಗದರ್ಶಕರಾಗಿದ್ದು ನನ್ನ ಅದೃಷ್ಟವೆಂದೇ ನಾನು ತಿಳಿಯುತ್ತೇನೆ. ಅದೇ ರೀತಿ ಪ್ರವೇಶ ಪಡೆಯುವಾಗ ನಾಡೋಜ ಡಾ. ಎಂ.ಎಂ.ಕಲಬುರ್ಗಿಯವರು ತೋರಿದ ಪ್ರೀತಿ, ಅಭ್ಯಾಸ ಮಾಡಲು ಅವರು ಹೇರಿದ ಒತ್ತಾಯ ಅಧ್ಯಯನ ದಡ ಮುಟ್ಟಲು ಸಹಾಯಕವಾಗಿವೆ. ಹಾಗೆಯೆ ಈಗ ದ.ರಾ.ಬೇಂದ್ರೆ ಟ್ರಸ್ಟಿನ ಅಧ್ಯಕ್ಷರಾಗಿರುವ ಡಾ. ಶ್ಯಾಮಸುಂದರ ಬಿದರಕುಂದಿ ಅವರು ಸತತವಾಗಿ ಪ್ರೋತ್ಸಾಹ ನೀಡಿ ಅಧ್ಯಯನ ಪೂರ್ಣಗೊಳ್ಳಲು ಸಹಕರಿಸಿದ್ದಾರೆ. ಹಿರಿಯ ಸಾಹಿತಿಗಳಾದ ಡಾ. ಗುರುಲಿಂಗ ಕಾಪಸೆಯವರು ಅಧ್ಯಯನ ಸಂದರ್ಭದಲ್ಲಿ ಸಲಹೆ-ಸೂಚನೆ ಕೊಟ್ಟು ದಾರಿಯ ದಣಿವನ್ನು ಹಗುರಗೊಳಿಸಿದ್ದಾರೆ. ನಾಡೋಜ

ಡಾ. ಚೆನ್ನವೀರ ಕಣವಿಯವರು ಕೂಡ ಬೇಂದ್ರೆಯವರ ನೆನಪುಗಳನ್ನು ಹೇಳಿ ಸ್ಫೂರ್ತಿ ತುಂಬಿದ್ದಾರೆ. ಸದಾ ಗಂಭೀರವಾಗಿರುವ ಡಾ. ಗಿರಡ್ಡಿ ಗೋವಿಂದರಾಜ ಅವರ ಮುಖದಲ್ಲಿ ನಗೆಯರಳಿತೆಂದರೆ ಅವರಿಗೆ ನಮ್ಮ ಕೆಲಸಗಳು ಇಷ್ಟವಾಗಿದೆಯೆಂದು ವಿಶ್ವವಿದ್ಯಾಲಯದ ದಿನಗಳಿಂದಲೂ ಅವರ ವಿದ್ಯಾರ್ಥಿಯಾಗಿರುವ ನನಗೆ ತಿಳಿದಿದೆ. ಡಾ. ಬಾಳಣ್ಣ ಸೀಗಿಹಳ್ಳಿ ಅನೇಕ ಸಲ ಪಿಎಚ್.ಡಿ.ಯ ಪ್ರಗತಿಯ ಬಗ್ಗೆ ವಿಚಾರಿಸಿ, ಬರವಣಿಗೆಯನ್ನು ಗಮನಿಸಿ, ಪುಸ್ತಕಗಳನ್ನು ನೀಡಿ ಅಂತಃಕರಣ ತೋರಿಸಿದ್ದಾರೆ. ಡಾ. ವೀಣಾ ಶಾಂತೇಶ್ವರ, ಡಾ. ಜಿ.ಎಂ. ಹೆಗಡೆ, ಡಾ. ಕೆ.ಆರ್. ದುರ್ಗಾದಾಸ ಅವರೂ ಕೂಡ ಆಗಾಗ ಅಧ್ಯಯನದ ಬಗ್ಗೆ ಕೇಳಿದ್ದಾರೆ. ಕೆ.ಎಚ್.ಚೆನ್ನೂರ, ಬಿ.ಡಿ. ಹಿರೇಗೌಡರ, ಪ್ರಕಾಶ ಬಾಳಿಕಾಯಿ ಅವರ ಸಹಕಾರ ಕೂಡ ಮುಖ್ಯವಾಗಿತ್ತು. ಈ ಎಲ್ಲ ಮಹನೀಯರನ್ನು ನಾನು ಈ ಸಂದರ್ಭದಲ್ಲಿ ಹೃದಯ ತುಂಬಿ ನೆನೆಯುತ್ತೇನೆ.

ನನಗೆ ಅಧ್ಯಯನ ಮಾಡಲು ಅವಕಾಶ ಕೊಟ್ಟಿರುವ ನಾನು ಕೆಲಸ ಮಾಡುವ ಸಂಸ್ಥೆ ಆಕಾಶವಾಣಿಯ ಎಲ್ಲ ಹಿರಿಯ ಅಧಿಕಾರಿಗಳನ್ನು ನೆನೆಯುತ್ತೇನೆ. ಡಾ. ಚೇತನ ನಾಯಕ್, ಸಿ.ಯು.ಬೆಳ್ಳಕ್ಕಿ, ಡಾ. ಆನಂದ ಪಾಟೀಲ ಬಹಳಷ್ಟು ಪ್ರೋತ್ಸಾಹ ನೀಡಿ ನನ್ನ ಬರವಣಿಗೆಗೆ ಬಲ ತುಂಬಿದ್ದಾರೆ. ಅವರಿಗೂ ಎಲ್ಲ ಸಹೋದ್ಯೋಗಿ ಮಿತ್ರರಿಗೂ ಅನಂತ ಕೃತಜ್ಞತೆಗಳು.

ಪ್ರೊ. ಮಲ್ಲಿಕಾರ್ಜುನ ಹಿರೇಮಠ ಈ ಸಂಶೋಧನೆಯ ಬಗ್ಗೆ ಆಸ್ಥೆ ವಹಿಸಿ ಪ್ರೋತ್ಸಾಹಿಸಿದ್ದಾರೆ. ಅಗತ್ಯ ಪುಸ್ತಕಗಳನ್ನು ಪ್ರೀತಿಯಿಂದ ಕೊಟ್ಟು ಚರ್ಚಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಾಲಯದ ಮುಖ್ಯಸ್ಥರಾದ ಎಸ್.ಬಿ. ಪಾಟೀಲ ಹಾಗೂ ಆರ್.ವಿ. ವಟ್ನಾಳ, ಜಿ.ಬಿ. ಹೊಂಬಳ, ಡಾ. ಡಿ.ಬಿ. ಗವಾನಿ, ಎಲ್ಲ ಸ್ನೇಹಿತರನ್ನು, ಸಹೋದ್ಯೋಗಿ ಮಿತ್ರರನ್ನು, ಬಂಧು ಬಳಗವನ್ನು ಪ್ರೀತಿಯಿಂದ ನೆನೆಯುತ್ತೇನೆ.

ನನ್ನ ಬದುಕಿನ ಸಂಗಾತಿ ಉಮಾ, ಮಕ್ಕಳಾದ ಚೈತ್ರಾ ಹಾಗೂ ರಾಕೇಶ ಎಲ್ಲ ಸಂದರ್ಭಗಳಲ್ಲಿಯೂ ಪ್ರೀತಿ ಹಾಗೂ ಬೆಂಬಲವನ್ನು ತೋರಿಸಿದ್ದಾರೆ. ನನ್ನ ಹೃದಯವನ್ನು ತುಂಬಿದ್ದಾರೆ. ತನ್ಮೂಲಕ ಬರವಣಿಗೆಗೆ ಶಕ್ತಿಯನ್ನು ತುಂಬಿದ್ದಾರೆ. ಅವರಿಗೂ ನನ್ನ ಮನದಾಳದ ಕೃತಜ್ಞತೆಗಳು.

ಅಧ್ಯಯನವನ್ನು ಸುಂದರವಾಗಿ ಗಣಕೀಕೃತಗೊಳಿಸಿದ ಶ್ರೀ ಮಹಾಗಣಪತಿ ಕಂಪ್ಯೂಟರ್ಸ್, ಧಾರವಾಡ ಹಾಗೂ ಬೈಂಡಿಗ್ ಕಾರ್ಯ ನಿರ್ವಹಿಸಿದ ಮಹಾಂತೇಶ್ ಬೈಂಡರ್ಸ್‌ನವರಿಗೆ ಕೃತಜ್ಞತೆಗಳು.

ನನ್ನ ಈ ಅಧ್ಯಯನದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನೆರವಾದ ಎಲ್ಲರಿಗೂ ನನ್ನ ನಮನಗಳು ಸಲ್ಲುತ್ತವೆ.

ಓದಿನ, ಹುಡುಕಾಟದ, ಶೋಧನೆಯ, ಚರ್ಚೆಯ, ಕುತೂಹಲದ ಈ ಪಿಎಚ್.ಡಿ. ಅಭ್ಯಾಸದ ದಿನಗಳ ನೆನಪುಗಳನ್ನು ನನ್ನೊಂದಿಗೆ ಮುಂದೆ ಕರೆದೊಯ್ಯುತ್ತಿದ್ದೇನೆ...

ಮತ್ತೊಮ್ಮೆ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ, ಅಲ್ಲಿಯ ಅಧ್ಯಯನಾಂಗಕ್ಕೆ, ಧಾರವಾಡದ ಡಾ. ದ.ರಾ.ಬೇಂದ್ರೆ ರಾಷ್ಟ್ರೀಯ ಟ್ರಸ್ಟಿಗೆ ಧನ್ಯವಾದಗಳನ್ನು ಹೇಳುತ್ತೇನೆ.

– ಬಸು ಬೇವಿನಗಿಡದ

ಬೇಂದ್ರೆ ನಿಸರ್ಗಕಾವ್ಯ : ಅನುಭೂತಿ ಹಾಗೂ ಅಭಿವ್ಯಕ್ತಿ

ಪರಿವಿಡಿ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧ ಪೀಠಿಕೆ

೧.೨ ಬೇಂದ್ರೆ ಮತ್ತು ನಿಸರ್ಗ

೧.೩ ಅನುಭೂತಿ

೧.೪ ಅಧ್ಯಯನದ ಉದ್ದೇಶ, ಸ್ವರೂಪ ಹಾಗೂ ವ್ಯಾಪ್ತಿ

೧.೫ ಅಧ್ಯಯನ ವಿಧಾನಗಳು

೧.೬ ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ - ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧ ಪೀಠಿಕೆ :

ಮನುಷ್ಯನನ್ನು ಲಾಲಿಸುವ ಮತ್ತು ಪಾಲಿಸುವ ನಿಸರ್ಗ ಒಂದು ರೀತಿಯಲ್ಲಿ ಅವನ ದೈವವಾಗಿದೆ. ನಿಸರ್ಗದ ಕಾಯಕ ಕೊಡುವುದೆ ಆಗಿದೆ. ಅದರ ಅರ್ಥವನ್ನು 'ಕೊಡುವಿಕೆ, ನೀಡುವಿಕೆ, ಸೃಷ್ಟಿ, ಉತ್ಪತ್ತಿ'[೧] ಎಂದು ಹಲವು ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಪ್ರಕೃತಿಯೊಡನೆ ಮನುಷ್ಯ ಜೀವನದ ಕೊಂಡಿ ಎಂದೆಂದೂ ಬಿಡಿಸಲಾಗದಂತೆ ಕೂಡಿಕೊಂಡಿದೆ. ಎಣೆಯಿಲ್ಲದಂತೆ, ಕೊನೆಯಿಲ್ಲದಂತೆ ತುಂಬಿ ನಿಂತಿರುವ ನಿಸರ್ಗದ ವೈವಿಧ್ಯತೆಯನ್ನು ವಿಸ್ಮಯದಿಂದ ನೋಡುವ ಮಾನವ ಅದರೊಡನೆ ತನ್ಮಯನಾಗಿ ಅದನ್ನು ಕಣ್ತುಂಬ ತುಂಬಿಕೊಳ್ಳುವ, ಸ್ಫೂರ್ತಿ ಪಡೆಯುವ, ಸಂಬಂಧದ ಸಾತತ್ಯ ಸ್ಥಾಪಿಸಿಕೊಳ್ಳುವ, ಸಾನುರಾಗದಿಂದ ಬೆರೆಯುವ ಅನುಭವವು ಅನನ್ಯವಾದುದು. ನಿಸರ್ಗವನ್ನು ತಿಳಿಯುವುದು, ಅದರ ಪ್ರೀತಿಗೆ ಪ್ರತಿಯಾಗಿ ತನ್ನ ಪ್ರೀತಿ ಕೊಡುವುದು, ಅದನ್ನು ತನ್ನ ಬದುಕಿನೊಂದಿಗೆ ಸಮೀಕರಿಸಿಕೊಳ್ಳುವುದು ಹಾಗೂ ಅದರ ಮೂಲಕ ತನ್ನ ದೈವವನ್ನು ಕಾಣಲು ಹಾತೊರೆಯುವುದು ಮನುಷ್ಯನ ಎದೆಯ ಹಂಬಲವಾಗಿದೆ. ಅದು ಅವನ ಜ್ಞಾನದ ಸೀಮೆ ವಿಸ್ತಾರಗೊಳ್ಳುವ ಪ್ರತೀಕವಾಗಿದೆ. ನಿಸರ್ಗ, ಪ್ರಕೃತಿ, ಸೃಷ್ಟಿ ಎನ್ನುವ ಹಲವಾರು ಹೆಸರುಗಳಿಂದ ಕರೆಸಿಕೊಂಡು ನಮ್ಮನ್ನು ಸುತ್ತುವರೆದಿರುವ ಈ ಪರಿಸರದೊಂದಿಗೆ ಮನುಷ್ಯನು ಆರಂಭದಿಂದಲೆ ಅವಿನಾಭಾವವಾದ ಸಂಬಂಧವನ್ನು ಇಟ್ಟುಕೊಂಡು ಬಂದಿದ್ದಾನೆ. ಮಾನವನ ಜೀವನಕ್ಕೆ ಆಗತ್ಯವಾಗಿರುವ ಅದು ಅವನೊಳಗಿನ ಆಧ್ಯಾತ್ಮಿಕ ಸಂಗತಿಗಳ ಜೊತೆಗೂ ನಂಟು ಬೆಸೆದುಕೊಂಡಿದೆ. ಗಿಡ, ಮರ, ಗುಡ್ಡ, ಬೆಟ್ಟ, ಕಾಡು, ಕಣಿವೆ, ನೀರು, ನೆಲ, ಸಮುದ್ರ, ಗಾಳಿ, ಬೆಳಕು, ಆಕಾಶ - ಹೀಗೆ ನಮ್ಮ ಸುತ್ತಮುತ್ತಲಿನದೆಲ್ಲ ನಿಸರ್ಗ ಎಂದು ಕರೆಯಿಸಿಕೊಳ್ಳುತ್ತದೆ.

ಹಲವಾರು ಜನ ಕವಿಗಳು, ದಾರ್ಶನಿಕರು ನಮ್ಮ ಸುತ್ತಲೂ ತುಂಬಿ ನಿಂತಿರುವ ಪ್ರಪಂಚದ ನಾನಾ ಬಗೆಯ ಈ ಪರಿಸರ ರಾಶಿಯನ್ನು ತಮ್ಮದೆ ಆದ ರೀತಿಯಲ್ಲಿ ಕಾಣುತ್ತ ಬಂದಿದ್ದಾರೆ. ನಿಸರ್ಗವನ್ನು ಭೌತಿಕ ದೃಷ್ಟಿಯಿಂದ ನೋಡುವವರಿಗೆ ಅದು ಎಲ್ಲ ಜೀವಿಗಳಿಗೆ ಆಸರೆಯಾಗಿರುವ ಒಂದು ನೆಲೆಯಾಗಿ, ಜಗತ್ತು ಕ್ರಮಬದ್ಧ ಬೆಳವಣಿಗೆ ಹೊಂದಿದ ವಿಕಾಸದ ಒಂದು ಹಂತವಾಗಿ ಮತ್ತು ಇನ್ನೂ ಅನೇಕ ಸಂಶೋಧನೆಗಳಿಗೆ ಒಡ್ಡಿಕೊಳ್ಳುತ್ತಿರುವ ಕೌತುಕವಾಗಿ ಕಂಡರೆ, ಆಧ್ಯಾತ್ಮದ ದೃಷ್ಟಿಯಿಂದ ನೋಡುವ ಕವಿಗಳಿಗೆ, ದಾರ್ಶನಿಕರಿಗೆ, ಸಾಧು ಸಂತರಿಗೆ, ಭಕ್ತರಿಗೆ ಪ್ರಕೃತಿಯೆನ್ನುವುದು ಅಗೋಚರ ಶಕ್ತಿಯ ಸೌಂದರ್ಯಸೃಷ್ಟಿಯಾಗಿ, ಚೈತನ್ಯ ಸ್ವರೂಪದ ಕಲೆಯ ರೂಪವಾಗಿ, ಸ್ಫೂರ್ತಿಯ ಸೆಲೆಯಾಗಿ, ಭವದಿಂದ ಬಿಡುಗಡೆ ಹೊಂದಲು ನೆರವಾಗುವ ಚೈತನ್ಯದಾಯಿಯಾಗಿ ಮತ್ತು ದೈವಿ ಸಂಗತಿಯ ಲೀಲೆಯಾಗಿ ಗೋಚರಿಸುತ್ತದೆ.

ನಿಸರ್ಗದ ಅನುಭೂತಿಯನ್ನು ಪಡೆಯುವುದು, ಅದರ ಮೂಲಕ ಲೌಕಿಕ ಮತ್ತು ದೈವಿಕ ಅನುಭವವನ್ನು ಸಾಕ್ಷಾತ್ಕರಿಸಿಕೊಳ್ಳುವುದು ಮನುಷ್ಯನ ಆಧ್ಯಾತ್ಮಿಕ ಶೋಧದ ವಿಚಾರದಷ್ಟೆ ಹಳೆಯದು. ಪ್ರಕೃತಿಯ ನಿರ್ಮಾಪಕನಲ್ಲಿ ಭಗವಂತನನ್ನು ಕಂಡ ಭಕ್ತ ಅನುಭಾವದ ಊಟ ಉಂಡ. ಅದರೊಡನೆ ಬೆರೆತ ಅನುಭೂತಿಯ ಎಳೆಗಳಿಂದ ಅಲೌಕಿಕ ಜಗತ್ತಿನೊಡನೆ ತನ್ನನ್ನು ಜೋಡಿಸಿಕೊಂಡ. ಅಲೌಕಿಕದ ಹಂಬಲ ಭಕ್ತನನ್ನು, ಭಕ್ತ ಕವಿಯನ್ನು, ಅನುಭಾವಿಯನ್ನು ಯಾವತ್ತೂ ಕಾಡುತ್ತ ಬಂದಿದೆ. ಈ ಲೌಕಿಕ ಜಗತ್ತಿನಲ್ಲಿದ್ದುಕೊಂಡೆ ಅಲೌಕಿಕದ ಬಾಗಿಲು ಬಡಿಯುತ್ತ, ಅದನ್ನು ಪ್ರವೇಶಿಸಿ ಅದರ ಆನಂದವನ್ನು ಹೀರುತ್ತ, ಸರಳ ಗ್ರಹಿಕೆಗೆ ಸಿಗದ ಆಧ್ಯಾತ್ಮಿಕ ಅನುಭೂತಿಯನ್ನು ತಮ್ಮ ಅಭಿವ್ಯಕ್ತಿಯಲ್ಲಿ ಹಿಡಿದಿಡುತ್ತ ಇಹ-ಪರದ ಹಾಡು ಹಾಡಿದ ಹಲವು ಮಹತ್ವದ ಕವಿ-ದಾರ್ಶನಿಕರಲ್ಲಿ ಬೇಂದ್ರೆಯವರೂ ಒಬ್ಬರು. ಬುದ್ಧಿ ಮತ್ತು ಭಾವಗಳನ್ನು ಬೆರೆಸಿದ ಅನುಭೂತಿಯನ್ನು ಅವರು ಹಂಚಿದರು. ಬೇಂದ್ರೆಯವರನ್ನು ಅಲ್ಲಮ, ಅರವಿಂದ, ಮಧುರಚೆನ್ನ, ಖಲೀಲ್ ಝೀಬ್ರಾನ್‌ರಂತೆ ಸಂಪೂರ್ಣ ಅನುಭಾವಿ ಎನ್ನಲಾಗದಿದ್ದರೂ ಅನುಭಾವದ ಅಂಶಗಳು ಅವರ ಕಾವ್ಯದಲ್ಲಿ ಗೋಚರಿಸುವುದನ್ನು ಮೊದಲ ನೋಟದಲ್ಲಿಯೆ ಕಂಡುಕೊಳ್ಳಬಹುದು. ಭಕ್ತಿ ಮತ್ತು ಅಲೌಕಿಕದ ಸಂಗತಿಗಳಲ್ಲಿ ತಮ್ಮ ಕಾವ್ಯವನ್ನು ಹೇಗೆ ಅದ್ದಿ ತೆಗೆಯಬೇಕೆಂಬುದನ್ನು ಅವರು ಅರಿತುಕೊಂಡವರಾದುದರಿಂದ ಇಹ-ಪರಗಳು ಅವರಲ್ಲಿ ಸಮ್ಮಿಲನವಾಗುವ ಬಗೆ ಆಶ್ಚರ್ಯ ಹುಟ್ಟಿಸುತ್ತದೆ. ಜೀವನ ಮತ್ತು ಕಾವ್ಯವನ್ನು ಬೆರೆಸುವಂತೆ ಭೂಮಿ ಮತ್ತು ಆಕಾಶವನ್ನು ಸಹಜವಾಗಿ ಬೆರೆಸುತ್ತಾರೆ. ಆಲಯ ಮತ್ತು ಬಯಲಿನ ಅರ್ಥಗಳನ್ನು ತಿಳಿಯುವವರಾಗುತ್ತಾರೆ.

೧.೨ ಬೇಂದ್ರೆ ಮತ್ತು ನಿಸರ್ಗ :

ಬೇಂದ್ರೆಯವರು ತಮ್ಮ ಅನುಭವಗಳನ್ನು ತುಂಬ ಸ್ವಾಭಾವಿಕ ರೀತಿಯಲ್ಲಿ ಕವಿತೆಗಳನ್ನಾಗಿಸಿದರು. ತಾವು ಪಟ್ಟ ಪಾಡನ್ನೆ ಹಾಡಾಗಿಸಿದರು. ಇಳೆಯಲ್ಲಿ, ಮುಗಿಲಲ್ಲಿ, ಮಳೆಯಲ್ಲಿ, ಹೊಳೆಯಲ್ಲಿ, ಚಳಿಯಲ್ಲಿ, ಬಿಸಿಲಲ್ಲಿ, ಸೂರ್ಯ ಚಂದ್ರರಲ್ಲಿ, ಅರಳುವ ಹೂವಿನಲ್ಲಿ, ಕೋಗಿಲೆ-ಪಾತರಗಿತ್ತಿಗಳಲ್ಲಿ ತಲ್ಲೀನವಾಗಿ ಮನುಷ್ಯನ ಬದುಕು ಕಂಡರು. ರಾಗ-ಅನುರಾಗ-ಬಿಕ್ಕಳಿಕೆಗಳನ್ನು ತೋಡಿಕೊಂಡರು. ತನ್ನ ವಿಲಕ್ಷಣ, ವೈಚಿತ್ರ್ಯಗಳೊಡನೆ ನಿಸರ್ಗ ಅವರನ್ನು ಕಾಡಿತು. ಸುಡುವ ಸೂರ್ಯನಿಂದ ಸಂತೈಸಿ ಹಕ್ಕಿಯ ತುಪ್ಪಳದಂತಹ ಬೆಳದಿಂಗಳನ್ನು ನೀಡಿತು. ಕಾಣುವ ಬೆಳಗು ಇದಿಷ್ಟೆ ಅಲ್ಲವೆನ್ನುವಂತೆ ಹೊಸ ಬೆಳಗು ತೋರಿತು. ನಿಸರ್ಗದ ಮಡಿಲಲ್ಲಿ ಬೆಳೆಯುತ್ತ, ಶ್ರಾವಣ ಚೈತ್ರಗಳಲ್ಲಿ ಗರಿಗೆದರುತ್ತ ನಿಸರ್ಗದಿಂದ ಹೊಸ ಹುಟ್ಟು ಪಡೆಯುವ ಬೇಂದ್ರೆ, ಹಾಲಗೇರಿಯಲ್ಲಿ ಮುಳುಗಿ ಏಳುತ್ತ, ಸೋಮೇಶ್ವರನ ಭಜನೆ ಕೇಳುತ್ತ ಚಿಮ್ಮುವ ಚಿಗರೆಯಾಗಿ, ಧ್ಯಾನದ ಬುಗುರಿಯಾಗಿ ಉತ್ಕಟ ನಿಸರ್ಗ ಕಾವ್ಯದ ನಿರ್ಮಾಪಕರಾಗಿದ್ದಾರೆ ಮತ್ತು ಅದ್ವಿತೀಯ ಸೃಜನಶೀಲತೆಯ ಪ್ರತೀಕವಾಗಿದ್ದಾರೆ. ಅವರು ನಿಸರ್ಗವನ್ನು ಅನುಭವಿಸಿದ ಪರಿ ಲೌಕಿಕವೂ ಹೌದು. ಅಲೌಕಿಕವೂ ಹೌದು. ಬೇಂದ್ರೆಯವರು ನಿಸರ್ಗವನ್ನು ಗಾಢವಾಗಿ ಹಚ್ಚಿಕೊಂಡಿದ್ದರು. ತಮ್ಮ ತಾಯಿಯಂತೆ ಅದನ್ನು ಪ್ರೀತಿಸಿದರು. ಪ್ರಕೃತಿಯನ್ನು ಅದರ ವೈವಿಧ್ಯತೆಯಲ್ಲಿ

ಅರ್ಥೈಸಿಕೊಂಡರು. ಅದನ್ನು ತಮ್ಮ ಕಾವ್ಯದ ಬಹುಮುಖ್ಯ ಪ್ರತಿಮೆಯಾಗಿಸಿಕೊಂಡರು. ನಿಸರ್ಗದ ಸಂಪತ್ತನ್ನೆಲ್ಲ ತಮ್ಮ ಕಾವ್ಯದಲ್ಲಿ ತಂದರು. ಬೇಂದ್ರೆಯವರು ನಿಸರ್ಗವನ್ನು ತಿಳಿದುಕೊಂಡ, ಅದು ಇದ್ದಲ್ಲಿಗೆ ತಲುಪಿದ ಹಾಗೂ ಅದನ್ನು ಸಹೃದಯರಿಗೆ ತಲುಪಿಸಿದ ಬಹುಮುಖ್ಯ ನಿಸರ್ಗ ಕವಿಗಳಲ್ಲೊಬ್ಬರು. ಅವರಲ್ಲಿ ನಾವು ನಿಸರ್ಗವನ್ನು ಕಾಣುತ್ತೇವೆ. ಅದು ನಮ್ಮ ಸ್ಪರ್ಶಕ್ಕೆ ಸಿಗುತ್ತದೆ. ನಮ್ಮ ಮನಸ್ಸಿನಲ್ಲಿ ಆವಿರ್ಭವಿಸುತ್ತದೆ. ಇಂತಹ ಹಲವು ಭಾವಗಳ, ವಿಚಾರಗಳ ಹುಟ್ಟುವಿಕೆಯನ್ನು ಸಾಧಿಸುವ ಬೇಂದ್ರೆಯವರು ಒಂದು ರೀತಿಯಲ್ಲಿ ನಿಸರ್ಗದ ಇರುವಿಕೆಯನ್ನು, ಅದರ ಚಲನಶೀಲತೆಯನ್ನು ರುಜುವಾತುಪಡಿಸುತ್ತಾರೆ. ಅಂದರೆ ಬೇಂದ್ರೆಯವರು ನಿಸರ್ಗವನ್ನು ಮ್ಯಾನಿಫೆಸ್ಟ್ ಮಾಡುತ್ತಾರೆ. ಪ್ರತ್ಯಕ್ಷವಾಗಿ ತೋರಿಸುತ್ತಾರೆ. ಅದರಲ್ಲಿ ತಾದಾತ್ಮ್ಯತೆ ಹೊಂದುತ್ತಾರೆ. ನಿಸರ್ಗವನ್ನು ಪ್ರತೀಕವಾಗಿಸಿಕೊಂಡು ಅನುಭಾವದ ಸಂಗತಿ ಹೇಳುತ್ತಾರೆ. ಇದನ್ನೆ ಅನುಭೂತಿ ಎಂದೆನ್ನಬಹುದು.

೧.೩. ಅನುಭೂತಿ :

ನಮ್ಮ ಇಂದ್ರಿಯಗಳ ಮೂಲಕ ಹರಿದು ಬರುವ ಜ್ಞಾನವನ್ನು ಸಂಪಾದಿಸುವುದು, ಸುಖ-ದುಃಖದ ಭಾವಗಳನ್ನು ಪಡೆಯುತ್ತಿರುವ ಮನಸ್ಸಿನ ಸ್ಥಿತಿ ತಿಳಿಯುವುದು, ಕಂಡುಂಡ ಅನುಭವಗಳನ್ನು ವೇದ್ಯಗೊಳಿಸುವುದು ಹಾಗೂ ಅವುಗಳನ್ನು ಅಭಿವ್ಯಕ್ತಿಸುವುದು, ಆತ್ಮಾನುಭಾವವನ್ನು ಗಳಿಸಿಕೊಳ್ಳುವುದು, ಪರತತ್ವದೆಡೆಗೆ ತುಡಿಯುವುದು ಹೀಗೆ ಹಲವು ಅರ್ಥಗಳನ್ನು ಅನುಭೂತಿಯು ಒಳಗೊಂಡಿದೆ. 'ನೇರವಾದ, ಪ್ರತ್ಯಕ್ಷಸಿದ್ಧವಾದ, ಸಾಕ್ಷಾತ್ತಾದ ಅನುಭವವೆಂದು'[3] ಸ್ವಂತ ಅನುಭವಕ್ಕೆ ಬಂದಿರುವ ತಿಳಿವೆಂದು, ಉಪಾಸನೆಯೆಂದು, ಧ್ಯಾನವೆಂದು, ಚಿಂತನೆ, ಆಲೋಚನೆ-ಭಾವನೆಯೆಂದು ಅನುಭೂತಿಯ ಅರ್ಥಗಳನ್ನು ಹಿಗ್ಗಿಸುತ್ತ ಹೋಗಬಹುದು. ಅನುಭೂತಿ ಉಂಟಾಗುವುದನ್ನು ಆಳವಾದ ಜ್ಞಾನ ಅಥವಾ ಅರಿವು ಉಂಟಾಗುವುದಕ್ಕೆ ಸಮೀಕರಿಸಬಹುದಾಗಿದೆ. 'ಅರಿವೇ ಗುರು' ಎಂಬುದನ್ನು ನೆನೆಯಬಹುದಾಗಿದೆ. ಈ ಅರಿವು ಸಾಮಾನ್ಯವೂ ಆಗಿರಬಹುದು; ಮಹತ್ತಮವೂ ಆಗಿರಬಹುದು. ಅರಿವಿನ ಭಾವವನ್ನು ಹೊಂದುವುದು ಬರೀ ಓದಿದಂತಲ್ಲ; ನೋಡಿದಂತಲ್ಲ: ಬರೀ ತಿಳಿದಂತಲ್ಲ. ಬೇಂದ್ರೆಯವರು ಇದು ಬರೀ ಬೆಳಗಲ್ಲ ಎಂದು ಹೇಳಿದಂತೆ ಅದರ ಅನುಭವವಾಗಿದೆ. ಹಾಗಾಗಿಯೇ ಈ ಅಧ್ಯಯನದಲ್ಲಿ ಅನುಭೂತಿಯೆಂದರೆ ನಿಚ್ಚಳ ಭಾವವನ್ನು ತಲುಪಿದ, ತಿಳಿದುಕೊಂಡ ಹಾಗೂ ಅದರಲ್ಲಿ ಮಿಂದ ಸ್ಥಿತಿಯನ್ನು ಹೇಳುತ್ತದೆ. ಬೇಂದ್ರೆಯವರು ನಿಸರ್ಗದಲ್ಲಿ ಮಿಂದ ಸ್ಥಿತಿಯನ್ನು, ನಿಸರ್ಗದ ಮೂಲಕ ಅವರು ಕಂಡುಕೊಂಡ ಅನುಭಾವವನ್ನು ಗುರುತಿಸುವ ಪ್ರಯತ್ನವನ್ನು ಈ ಅಧ್ಯಯನ ಮಾಡುತ್ತದೆ.

ಅನುಭೂತಿಯನ್ನು ಇಂಗ್ಲೀಷಿನ 'Empathy' ಶಬ್ದದ ಅರ್ಥಕ್ಕೆ ಸಮಾನವಾಗಿಯೂ ಕೂಡ ನೋಡಬಹುದಾಗಿದೆ. 'Empathy involves understanding the emotions of other people.... a distinction should be made between deliberately imagining being another person or being in their situation, and simply recognising their emotion. The ability to imagine oneself as another person is a sophisticated

imaginative process. It may be described metaphorically as an emotional kind of resource or mirroring'[೩] 'Empathy' ಶಬ್ದದ ಕೆಲವು ಕನ್ನಡದ ಅರ್ಥಗಳು ಹೀಗಿವೆ : 'ತಾದಾತ್ಮ್ಯಾನುಭೂತಿ; ಪರಾನುಭೂತಿಶಕ್ತಿ; ಚಿಂತಕನ ಮನಸ್ಸನ್ನು ಚಿಂತ್ಯ ವಸ್ತುವಿನೊಳಕ್ಕೆ ಹರಿಸಿ, ಅದನ್ನು ವ್ಯಾಪಿಸಿ, ತನ್ಮೂಲಕ ಅದನ್ನು ಪೂರ್ಣವಾಗಿ ಗ್ರಹಿಸುವ ಶಕ್ತಿ; ಬೇರೊಬ್ಬರ ಭಾವಗಳು, ಸಂಕಲ್ಪಗಳು ಯಾ ಭಾವನೆಗಳನ್ನು ತನ್ನಲ್ಲೇ ಆರೋಪಿಸಿಕೊಂಡು ಅದನ್ನು ತನ್ನದಾಗಿ ಅನುಭವಿಸುವ ಶಕ್ತಿ; ಸ್ವಾತ್ಮಾರೋಪ; ತನ್ನ ದೃಷ್ಟಿ, ಭಾವ, ಮನೋದೃಷ್ಟಿಗಳನ್ನು ಇನ್ನೊಂದು ವಸ್ತುವಿಗೆ (ಉದಾ: ನಿಸರ್ಗದ ವಸ್ತುವಿಗೆ ಯಾ ಕಲಾಕೃತಿಗೆ) ಅನ್ವಯಿಸುವುದು.'[೪] ಅಂದರೆ ಬೇಂದ್ರೆಯವರು ನಿಸರ್ಗದೊಡನೆ ತಾದಾತ್ಮ್ಯತೆಯನ್ನು ಹೊಂದಿ, ಅದರ ಭಾವನೆಯೊಳಗೆ ಹೊಕ್ಕು, ತಾನೆ ಅದರ ಭಾವನೆಯಾಗಿ, ಇದ್ದುದನ್ನು ಇದ್ದಂತೆ ಪ್ರತಿಫಲಿಸುವ, ತನ್ನದನ್ನಾಗಿ ಅನುಭವಿಸುವ, ತನ್ನ ಆತ್ಮದ ಸಂಗತಿಗಳಿಗೆ ನಿಸರ್ಗವನ್ನು ಆರೋಪಿಸಿಕೊಳ್ಳುವ ಶ್ರೇಷ್ಠ ಕಲ್ಪನಾಶಕ್ತಿ, ಭಾವನಾಶಕ್ತಿ ಮತ್ತು ಪ್ರತಿಭಾಶಕ್ತಿಯನ್ನು ಪಡೆದಿದ್ದರು.

ಅನುಭೂತಿ ಎಂಬುದನ್ನು ಅನುಭಾವಕ್ಕೆ ಸಮಾನಾರ್ಥವಾಗಿ ಬಳಸುವ ಪ್ರಯತ್ನವನ್ನು ಆಗೀಗ ಮಾಡಲಾಗಿದೆ. ಅನುಭೂತಿಯೆಂದರೆ ಆಳವಾಗಿ ತಿಳಿದುಕೊಳ್ಳುವದಾಗಿರುವದರಿಂದ ದೈವಿಕ ಅನುಭೂತಿಯೆಂದರೆ ಅನುಭಾವವೆ ಆಗಿದೆ. 'ಅನುಭಾವ' ಶಬ್ದಕ್ಕೆ ಅತೀಂದ್ರಿಯವಾದ ಅನುಭವ, ಆತ್ಮಾನುಭವ, ವಿಚಾರಮಥನ, ಜಿಜ್ಞಾಸೆ, ಶಿವಜೀವನ ಸಂಬಂಧ ಎಂಬ ಅರ್ಥಗಳನ್ನು ನೀಡಲಾಗಿದೆ. ಸಾಧಕ ತನ್ನ ಇಷ್ಟದೈವದ ಜೊತೆ ನಡೆಸುವ 'ಸುಖ ಸಂಭಾಷಣೆ'ಯೂ ಅನುಭಾವ ಎನಿಸಿಕೊಳ್ಳುತ್ತದೆ.[೫] ಲೌಕಿಕತೆಯಿಂದ ದೈವಿಕ ನೆಲೆಗಳನ್ನು ಹುಡುಕುವ ಸಾಧನೆಯ ಮಾರ್ಗದಲ್ಲಿ ಅನುಭಾವಿಗಳು ನಿರತರಾಗಿರುತ್ತಾರೆ. ತಮ್ಮ ಇಷ್ಟದೈವವನ್ನು ಅರಸುತ್ತ, ಪರಮಾತ್ಮನು ಜೀವನಲ್ಲಿ ಮನೆ ಮಾಡಿದ್ದಾನೆ ಎಂಬ ಅದ್ವೈತ ಭಾವದಿಂದ ಮಾನವೀಯತೆಗೆ ಮಿಡಿಯುವವರಾಗಿ ಆತ್ಮಶುದ್ಧಿಗೆ ಒತ್ತು ಕೊಟ್ಟಿರುತ್ತಾರೆ. ಅತೀಂದ್ರಿಯವಾದ ಅನುಭವವನ್ನು, ಆತ್ಮಾನುಭವವನ್ನುಗಳಿಸಿಕೊಳ್ಳುವದರಲ್ಲಿ ನಿರತರಾಗಿರುತ್ತಾರೆ. ಆತ್ಮಾನುಭೂತಿಯನ್ನು ಅನುಭಾವ ಎಂದು ಶಿವರಾಮ ಕಾರಂತರು ಹೇಳುತ್ತಾರೆ. ಆಳ ಅನುಭವವುಳ್ಳವನನ್ನು, ಜ್ಞಾನಿಯನ್ನು ಅವರು ಅನುಭಾವಿ ಎಂದು ಕರೆಯುತ್ತಾರೆ.[೬] 'ಅನುಭಾವ' ಎಂಬ ಬಹು ದೊಡ್ಡ ಹರವು ಹೊಂದಿರುವ ಶಬ್ದವನ್ನು ಇಂಗ್ಲೀಷಿನ 'Mysticism' ಶಬ್ದಕ್ಕೆ ಸಮಾನಾರ್ಥವಾಗಿ ಬಳಕೆಯಾಗಿದ್ದನ್ನು ಕಾಣಬಹುದು. 'Mysticism' ಎಂದರೆ 'beliefs, experiences of a mystic; teaching and belief that knowledge of God and of real truth may be obtained through meditation or spiritual insight'[೭] ಎಂಬ ಅರ್ಥವಿದೆ. ಹಾಗೆಯೇ 'Mystic' ಎನ್ನುವುದು 'hidden meaning or spiritual power, causing feeling of awe and wonder'[೮] ಎನ್ನುವದಾಗಿದೆ. 'Mystic' ಶಬ್ದದ ಕನ್ನಡ ಅರ್ಥಗಳನ್ನು ಹೀಗೆ ವಿವರಿಸಲಾಗಿದೆ : 'ಧ್ಯಾನದಿಂದಲೂ, ಆತ್ಮಾರ್ಪಣದಿಂದಲೂ ಪರಮಾತ್ಮನಲ್ಲಿ ಐಕ್ಯವಾಗಲು ಯಾ ಪರಮಾತ್ಮನ ಸಾಯುಜ್ಯ ಪಡೆಯಲು ಪ್ರಯತ್ನಿಸುವವನು, ಮುಕ್ತಿ ಬಯಸುವವನು, ಅನುಭಾವಿ; ತರ್ಕಕ್ಕೆ ಯಾ ಬುದ್ಧಿಗೆ ಮೀರಿದ ತತ್ವಗಳನ್ನು ಆಧ್ಯಾತ್ಮಿಕ ಜ್ಞಾನದ ಮೂಲಕ

ಅರಿಯಲು ಸಾಧ್ಯವೆಂಬ ನಂಬಿಕೆಯುಳ್ಳವನು.'[೯] ಸಕಲರಿಗೆ ಲೇಸನ್ನೆ ಬಯಸುವ 'ಅನುಭಾವಿಗಳು ತಾಯಿಭಾವ ಇಲ್ಲವೆ ಶಿಶುಭಾವದಲ್ಲಿ ಸದಾ ತೇಲುತ್ತಿರುತ್ತಾರೆ. ಇವೆರಡೂ ಅನುಭಾವದ ಎರಡು ಮುಖಗಳು.'[೧೦] ಮಾನವೀಯತೆಗೆ ಮಿಡಿಯುವವರಾಗಿ, ಸತ್ಯದ ಆವಿಷ್ಕಾರವನ್ನು ಬಯಸುವವರಾಗಿ, ತಾಯಿಪ್ರೇಮಕ್ಕೆ ಹಂಬಲಿಸುವವರಾಗಿ, ಸೃಷ್ಟಿಯ ನಿಗೂಢತೆಯನ್ನು ಕಾಯ್ದುಕೊಳ್ಳುತ್ತಲೆ ಆ ರಹಸ್ಯವನ್ನು ತೋರಬಲ್ಲವರಾಗಿ ಬೇಂದ್ರೆಯವರು ಆತ್ಮಜ್ಞಾನದ ಮಾರ್ಗದಲ್ಲಿ ನಡೆಯುತ್ತಾರೆ. ಬುದ್ಧಿಗೆ ಮೀರಿದ ಹಾಗೂ ಅತೀಂದ್ರಿಯವಾದ ಆಧ್ಯಾತ್ಮಿಕ ತತ್ವಗಳನ್ನು ಅಪರೋಕ್ಷವಾದ ಜ್ಞಾನದಿಂದ ತಿಳಿಯಬಹುದೆಂದು ಬೇಂದ್ರೆಯವರು ಸೂಚಿಸುತ್ತಾರೆ. ಅವರ ನಿಸರ್ಗ ಕವಿತೆಗಳಲ್ಲಿ ರಹಸ್ಯಮಯತೆ ಒಂದು ಮುಖ್ಯ ಲಕ್ಷಣವಾಗಿದೆ. ಅಲೌಕಿಕತೆ ಆ ಕವಿತೆಗಳ ಲೌಕಿಕತೆಯಲ್ಲಿ ಮನೆಮಾಡಿಕೊಂಡಿದೆ.

೧.೪ ಅಧ್ಯಯನದ ಉದ್ದೇಶ, ಸ್ವರೂಪ ಹಾಗೂ ವ್ಯಾಪ್ತಿ :

ನಿಸರ್ಗ ಕುರಿತಾದ ತಮ್ಮ ಹಂಬಲಗಳನ್ನು, ಅದರಲ್ಲಿ ತಲ್ಲೀನವಾದ ತಮ್ಮ ಭಾವಗಳನ್ನು, ಅದು ಸವರಿ ಹೋದ ಸುಖ-ದುಃಖದ ನೇವರಿಕೆಗಳನ್ನು ಮತ್ತು ಅದರಲ್ಲಿ ಕಂಡುಕೊಂಡ ಆನಂದವನ್ನು ಬೇಂದ್ರೆಯವರು ಪ್ರಕಟ ಮಾಡುವ ರೀತಿ ಕನ್ನಡಕ್ಕೆ ಅನನ್ಯವಾದುದು. ಕನ್ನಡ ಕಾವ್ಯಕ್ಕೆ ಕಸುವು ಕೊಟ್ಟಿರುವಂತಹದು. ಹೊಸತು ಸೇರಿಸಿರುವಂತಹದು. ಬೇಂದ್ರೆ ಕವಿಯಾಗಿ ನಿಸರ್ಗವನ್ನು ಬಣ್ಣಿಸಿರುವುದನ್ನು, ಅದರಲ್ಲಿ ಮಿಗಿಲಾದ ಸಂತೋಷ ಸವಿದಿರುವುದನ್ನು, ತಾವು ತಲುಪಬೇಕಾದ ನಿಲ್ದಾಣಕ್ಕೆ ನಿಸರ್ಗವನ್ನು ಪ್ರಯಾಣದ ನಡುವಿನ ತಂಗುದಾಣವನ್ನಾಗಿ ಮಾರ್ಪಡಿಸಿ ಚೈತನ್ಯ ಪಡೆದಿರುವುದನ್ನು ಅಭ್ಯಾಸ ಮಾಡುವುದು ಸಾಹಿತ್ಯ ಹಾಗೂ ಬೇಂದ್ರೆ ಕಾವ್ಯ ವಿಮರ್ಶೆಯ ದೃಷ್ಟಿಯಿಂದ ಒಂದು ಅಗತ್ಯ ಕ್ರಮವಾಗಿದೆ. ಬೇಂದ್ರೆಯವರ ನಿಸರ್ಗ ಕಾವ್ಯವನ್ನು ವಿಶ್ಲೇಷಿಸುವುದರ ಮೂಲಕ ಅವರು ಕಂಡುಕೊಂಡ ಕಾವ್ಯಸಿದ್ಧಿ ಹಾಗೂ ಅನುಭೂತಿಗಳನ್ನು ಅರಿಯಬಹುದಾಗಿದೆ. ಬೇಂದ್ರೆ ಕಾವ್ಯ ಲೌಕಿಕವಾಗಿದ್ದುಕೊಂಡೇ ಅಲೌಕಿಕತೆಯ ಕಡೆಗೆ ಮುಖ ಮಾಡಿರುವಂತಹದು. ಈ ನೆಲದ ಬದುಕಿನ ಸತ್ಯಗಳನ್ನು ಅರಿಯುತ್ತಲೆ ಪಾರಮಾರ್ಥಿಕ ಜಗತ್ತಿನ ತಿಳಿವನ್ನು ಹೊಂದಲು ಅವರ ಕಾವ್ಯ ತಹತಹಿಸುತ್ತದೆ. ಸರಳ ಕಾವ್ಯವಾಗಿದ್ದುಕೊಂಡೆ ಸಂಕೀರ್ಣ ಆಶಯಗಳನ್ನು ಬಿತ್ತರಿಸುವ ಅದು ಜೀವನವನು ಪ್ರೀತಿಸುತ್ತಲೆ ದೇವನೊಲುಮೆಗಾಗಿ ಹಾತೊರೆಯುತ್ತದೆ. ತ್ಯಾಗ, ಸದ್ಗುಣ, ವಿನಯಗಳೆಂಬ ಮೌಲ್ಯಗಳನ್ನು ಪ್ರಕೃತಿಯ ಭಾಷೆಯಲ್ಲಿ ತಿಳಿಸುತ್ತದೆ. ಪ್ರಕೃತಿಯ ಮೂಲಕ ಅವರು ಕಂಡುಕೊಂಡ ಅನುಭೂತಿ ಲೌಕಿಕ ಹಾಗೂ ದೈವಿಕ ಎರಡೂ ಹೌದು. ಅದು ಇಹವನ್ನು ಪ್ರೀತಿಸುತ್ತಲೆ ಪಾರಮಾರ್ಥಿಕ ಸತ್ಯಕ್ಕೂ ಕೈ ಚಾಚಿರುವಂತಹದು. ನಿಸರ್ಗವನ್ನು ಕುರಿತ ಅವರ ನೋಟ-ಒಳನೋಟ, ಹೊಸ ತಿಳಿವು ಹಾಗೂ ಆವಿಷ್ಕಾರಗಳನ್ನು ಪಡೆಯುವುದು ಈ ಅಧ್ಯಯನದ ಉದ್ದೇಶವಾಗಿದೆ. ನಿಸರ್ಗಪ್ರೀತಿ ಅವರಿಗೆ ಬದುಕಿನ ಪ್ರೀತಿಯನ್ನು ಹಾಗೂ ಅಲೌಕಿಕ ಸೆಳೆತವನ್ನು ಅಭಿವ್ಯಕ್ತಿಸುವ ವಾಹಕವಾಗಿ ಮಾರ್ಪಟ್ಟಿತು.

ಕಾವ್ಯ ಪರಂಪರೆಯನ್ನು ಅಭ್ಯಸಿಸಿದಾಗ ಕಾವ್ಯ ಯಾವಾಗಲೂ ಎರಡು ಪಾತಳಿಗಳ ಮೇಲೆ ನಡೆದದ್ದು ಅರಿವಿಗೆ ಬರುತ್ತದೆ. ಮೊದಲನೆಯದು ಇಂದ್ರಿಯಗಳ ಸಂಧಾನಕ್ಕೆ ಸಿಗುತ್ತ ಇಂದ್ರಿಯಗಮ್ಯವಾಗಿ ನಡೆಯುವ 'ಕಾಯ ಸಾಹಿತ್ಯ'ವಾದರೆ ಎರಡನೆಯದು ಅತಿಂದ್ರಿಯವಾದ ಅನುಭವವನ್ನು ತನ್ನದಾಗಿಸಿಕೊಳ್ಳುತ್ತ ಆತ್ಮ ಸಾಕ್ಷಾತ್ಕಾರದ ಹಾದಿಯಲ್ಲಿ ನಡೆಯುತ್ತ ಆತ್ಮ ಪಾತಳಿಗೆ ಅನುಸಾರವಾಗಿ ನಡೆಯುವ 'ಆತ್ಮ ಸಾಹಿತ್ಯ'. 'ವಚನಕಾರರ ದೃಷ್ಟಿಯಿಂದ ಸಾಹಿತ್ಯ ಎರಡು ವಿಧ. ಒಂದು : ಕಾಯ ಸಾಹಿತ್ಯ, ಇನ್ನೊಂದು : ಆತ್ಮಸಾಹಿತ್ಯ. ಅವರ ಪ್ರಕಾರ 'ಕಾಯ ಸಾಹಿತ್ಯ ಎಲ್ಲರಿಗೂ ಉಂಟು, ಆತ್ಮ ಸಾಹಿತ್ಯ ಅಪೂರ್ವ. ಇವುಗಳಲ್ಲಿ ಒಂದು ಎಂಟೂ ಭಾವನೆಗಳನ್ನು ಉದ್ರೇಕಗೊಳಿಸುತ್ತದೆ. ಇನ್ನೊಂದು ಉದ್ರೇಕಗೊಳಿಸುತ್ತಲೇ ಅಂತಿಮವಾಗಿ ಉಪಶಮನಗೊಳಿಸುತ್ತದೆ. ಈ ಉದ್ರೇಕ ಪ್ರಕ್ರಿಯೆಯವ ಮಹಾಕವಿ. ಉದ್ರೇಕ ಉಪಶಮನ ಪ್ರಕ್ರಿಯೆಯವ ಋಷಿ ಮಹಾಕವಿ.'[೧೧] ಇಂತಹ ವಿರಳ ಋಷಿಮಹಾಕವಿಗಳಲ್ಲಿ ಬೇಂದ್ರೆಯವರೂ ಒಬ್ಬರು. ಉದ್ರೇಕ ಉಪಶಮನ ಎರಡೂ ಸಾಧಿಸಿದ ಲೋಕಕವಿ-ಭಕ್ತ ಕವಿ ಬೇಂದ್ರೆ. ಬರೀ ಲೋಕಕವಿಯಾಗಿದ್ದುಕೊಂಡು ಪ್ರಸಿದ್ಧಿಗೆ ಬಂದವರು ಇರಬಹುದು. ಆದರೆ ಭಕ್ತಕವಿಯಾಗಿಯೂ ಲೌಕಿಕತೆಯನ್ನು ಮೆರೆಸಿದಂತಹ ಅಪರೂಪದ ಕವಿಯಾಗಿ ಬೇಂದ್ರೆ ಹೊರಹೊಮ್ಮಿದರು. ಸಾಹಿತ್ಯದಲ್ಲಿ ಶುದ್ಧ ಕಾಯಸಾಹಿತ್ಯದ ಅಂಶಗಳಿಲ್ಲದೆ ಆತ್ಮ ಸಾಹಿತ್ಯ ಸೃಷ್ಟಿಯಾಗಲಾರದು. ಅನುಭಾವ ಸಾಹಿತ್ಯದಲ್ಲಿ ಸ್ವಲ್ಪವೇ ಸ್ವಲ್ಪವಾದರೂ ಐಂದ್ರಿಕ ಸಾಹಿತ್ಯ ಇದ್ದೇ ಇರುತ್ತದೆ. ಬಂಗಾರದೊಡನೆ ತಾಮ್ರವು ಬೆರೆತುಕೊಂಡಂತೆ ಲೌಕಿಕದ ಅನುಭವ ಪ್ರಪಂಚ ಕಟ್ಟಲ್ಪಟ್ಟಿರುತ್ತದೆ. ಅಗಮ್ಯವಾಗಿರುವ ಅದನ್ನು ಅನುಭವ ಪ್ರಪಂಚದ ಕತೆ ಹೇಳುತ್ತಲೆ, ಲೌಕಿಕದ ರಸಾನುಭೂತಿ ಮಾಡಿಸುತ್ತಲೆ ಗಮ್ಯವಾಗಿಸಬೇಕು. ಬೇಂದ್ರೆ ಅದನ್ನು ಲೀಲಾಜಾಲವಾಗಿ ಮಾಡಿತೋರಿಸುತ್ತಾರೆ. ಅವರ ನಿರಾಯಾಸ ಕವಿತ್ವದ ಹಿಂದೆ ಅವರು ನಿರ್ಮಿಸಿಕೊಂಡ ಪರಂಪರೆಯ ಪರಿಶ್ರಮವಿದೆ. ಆ ಪರಂಪರೆ ಪಂಪ-ರನ್ನ- ಹರಿಹರ - ಅಲ್ಲಮಪ್ರಭು - ಕುಮಾರವ್ಯಾಸ - ಲಕ್ಷ್ಮೀಶ - ಕನಕದಾಸರು ನಿರ್ಮಿಸಿಕೊಟ್ಟ ಅವಿಚ್ಛಿನ್ನ ಪರಂಪರೆಯ ಕೊಂಡಿಗಳಿಂದ ಬಂಧುರವಾಗಿದೆ. ಜನಪದ, ತತ್ವಪದ ಹಾಗೂ ಆಧ್ಯಾತ್ಮದ ದೇಸಿ ಪರಂಪರೆಯಿಂದ ಅದು ಮತ್ತಷ್ಟು ಗಟ್ಟಿಯಾಗಿದೆ.

ಪ್ರಸ್ತುತ ಅಧ್ಯಯನವು ಬೇಂದ್ರೆಯವರ ನಿಸರ್ಗ ಕಾವ್ಯವನ್ನು ಗಮನದಲ್ಲಿಟ್ಟುಕೊಂಡು ಅಲ್ಲಿ ಒಡಮೂಡಿರುವ ಲೌಕಿಕ ಹಾಗೂ ಅಲೌಕಿಕ ಅನುಭವದ ಸಂಗತಿಗಳನ್ನು ಗುರುತಿಸುತ್ತ ಅವರ ನಿಸರ್ಗ ಕವಿತೆಗಳ ವೈವಿಧ್ಯವನ್ನು ಅಧ್ಯಯನ ಮಾಡುವುದು, ಅವರು ಚಿತ್ರಿಸಿರುವ ನಿಸರ್ಗದ ನಾನಾ ಮುಖಗಳನ್ನು ತೋರಿಸುವುದು, ಅವರ ನಿಸರ್ಗ ಕಾವ್ಯದ ಅನನ್ಯತೆಯನ್ನು ತಿಳಿಯುವುದು, ಸಂತೆಯೊಳಗಿದ್ದುಕೊಂಡು ಸಂತನ ಮನೋಭಾವ ಪ್ರಕಟಮಾಡುವ ವಿಸ್ಮಯ ಅರಿಯುವುದು, ನಿಸರ್ಗದ ಅಭಿವ್ಯಕ್ತಿಯ ಮೂಲಕ ಅನುಭಾವಿಕ ಅಂಶಗಳನ್ನು ತೋರಗೊಡುವುದು - ಇವೇ ಮುಂತಾದ ಅಂಶಗಳತ್ತ ಲಕ್ಷ್ಯ ಹರಿಸುತ್ತದೆ. ಈ ನಿಟ್ಟಿನಲ್ಲಿ ಸಂಶೋಧನೆ ಫಲಪ್ರದವಾಗಲು ಅಧ್ಯಯನವನ್ನು ಕನ್ನಡ ಕಾವ್ಯಪರಂಪರೆಯಲ್ಲಿ ನಿಸರ್ಗದ ಅನುಭೂತಿ, ಕವಿ ಪಡೆದ ಪ್ರೇರಣೆ, ಅವರ ಪ್ರಮುಖ ಸಮಕಾಲೀನರಲ್ಲಿ ಕಂಡುಬರುವ ಪ್ರಕೃತಿಯ ಚಿತ್ರಣ, ಕವಿಯ ನಿಸರ್ಗ ವೈವಿಧ್ಯತೆ ಮತ್ತು ಅಲ್ಲಿ

ಕಾಣಸಿಗುವ ಅನುಭೂತಿ ಹಾಗೂ ಅವರ ಅಭಿವ್ಯಕ್ತಿಯ ಕೌಶಲ ಎಂಬ ಭಾಗಗಳನ್ನಾಗಿ ಮಾಡಿಕೊಂಡು ಅಭ್ಯಾಸ ಮಾಡಲು ಪ್ರಯತ್ನಿಸಲಾಗಿದೆ. ಪ್ರತಿ ಅಧ್ಯಾಯವು ಒಳಗೊಂಡಿರುವ ಅಧ್ಯಯನ ವಿವರಗಳ ನೋಟ ಹಾಗೂ ಭಾಗಗಳನ್ನಾಗಿ ಮಾಡಿಕೊಂಡಿರುವ ಕ್ರಮವನ್ನು ಈ ಕೆಳಗಿನಂತೆ ಕೊಡಲಾಗಿದೆ.

'ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ' ಎಂಬ ಮೊದಲ ಅಧ್ಯಾಯವು ನಿಸರ್ಗ ಕುರಿತಾದ ಬೇಂದ್ರೆಯವರ ಭಾವಗಳನ್ನು, ನಿಸರ್ಗವನ್ನು ಮಾಧ್ಯಮ ಮಾಡಿಕೊಂಡು ಸುಖ-ದುಃಖ ಹಿಡಿದಿಟ್ಟಿರುವ ಅವರ ರೀತಿಯನ್ನು ಮತ್ತು ಅದರಲ್ಲಿ ಕಂಡುಕೊಂಡ ಆನಂದವನ್ನು ಅವರು ಪ್ರಕಟ ಮಾಡಿರುವ ರೀತಿಯ ಅಧ್ಯಯನದ ಉದ್ದೇಶವನ್ನು ತಿಳಿಯುವುದಾಗಿದೆ. ಬೇಂದ್ರೆ ಕವಿಯಾಗಿ ನಿಸರ್ಗವನ್ನು ಬಣ್ಣಿಸಿರುವುದನ್ನು, ಅದರಲ್ಲಿ ಕಂಡುಕೊಂಡಿರುವ ಅನುಭೂತಿಯನ್ನು, ತಾವು ತಲುಪಬೇಕಾದ ನಿರ್ಲ್ದಾಣಕ್ಕೆ ನಿಸರ್ಗವನ್ನು ಪ್ರಯಾಣದ ನಡುವಿನ ತಂಗುದಾಣ ಮಾಡಿಕೊಂಡು ಚೈತನ್ಯ ಪಡೆದಿರುವುದನ್ನು, ಹೊಸ ಬದುಕು ಕಟ್ಟಿರುವುದನ್ನು, ಹೊಸ ತಿಳುವಳಿಕೆ ಹಾಗೂ ದರ್ಶನ ನೀಡಿರುವುದನ್ನು ಅಭ್ಯಾಸ ಮಾಡುವುದು ಸಾಹಿತ್ಯ ಹಾಗೂ ಬೇಂದ್ರೆ ಕಾವ್ಯ ವಿಮರ್ಶೆಯ ದೃಷ್ಟಿಯಿಂದ ಮಹತ್ವದ ಮಾತಾಗಿದೆ. ಬೇಂದ್ರೆಯವರ ನಿಸರ್ಗ ಕಾವ್ಯವನ್ನು ಅಧ್ಯಯನ ಮಾಡುವುದರ ಮೂಲಕ ಅವರು ಕಂಡುಕೊಂಡ ಕಾವ್ಯಸಿದ್ಧಿ ಹಾಗೂ ಅನುಭೂತಿಯ ನೆಲೆಗಳನ್ನು ಅರಿಯಬಹುದಾಗಿದೆ.

ಬೇಂದ್ರೆಯವರ ಕಾವ್ಯ ಲೌಕಿಕದ ಮೂಲಕ ಅಲೌಕಿಕತೆಯ ಕಡೆಗೆ ಸಾಗುವ ಗುಣಗಳನ್ನು ಹೊಂದಿದೆ. ಈ ನೆಲದ ಬದುಕಿನ ಸತ್ಯಗಳನ್ನು ಅರಿಯುತ್ತಲೆ ಪಾರಮಾರ್ಥಿಕ ಜಗತ್ತಿನ ತಿಳಿವನ್ನು ಹೊಂದಲು ಅವರ ಕಾವ್ಯ ತಹತಹಿಸುತ್ತದೆ. ಸರಳ ಕಾವ್ಯವಾಗಿದ್ದುಕೊಂಡೆ ಸಂಕೀರ್ಣ ಆಶಯಗಳನ್ನು ಬಿತ್ತರಿಸುವ ಅದು ಜೀವನವನ್ನು ಪ್ರೀತಿಸುತ್ತಲೆ ದೇವನೊಲುಮೆಗಾಗಿ ಹಾತೊರೆಯುತ್ತದೆ. ತ್ಯಾಗ, ಸದ್ಗುಣ, ವಿನಯಗಳೆಂಬ ಮೌಲ್ಯಗಳನ್ನು ಪ್ರಕೃತಿಯ ಭಾಷೆಯಲ್ಲಿ ತಿಳಿಸುತ್ತದೆ. ಪ್ರಕೃತಿಯ ಮೂಲಕ ಅವರು ಕಂಡುಕೊಂಡಿರುವ ಅನುಭೂತಿ ಲೌಕಿಕ ಹಾಗೂ ದೈವಿಕ ಎರಡೂ ಹೌದು. ಇಹವನ್ನು ಆಳವಾಗಿ ಇಷ್ಟಪಡುತ್ತಲೆ ಪಾರಮಾರ್ಥಿಕ ಸತ್ಯಗಳನ್ನು ಪ್ರೀತಿಸುತ್ತದೆ.

ಜೀವನದ ವಿಕಾಸಕ್ಕೆ ಹೊಂದಿಕೆಯಾಗುವ ಅಂಶಗಳು ಪ್ರಕೃತಿಯ ಭಾಷೆಯಲ್ಲಿ ಮೈ ತಳೆಯುವುದು; ಪ್ರಕೃತಿಯ ಜೀವಂತಿಕೆಯನ್ನು ಹೊತ್ತು ತರುವ ಅಭಿವ್ಯಕ್ತಿಯ ಹೊಸತನವನ್ನು ಗುರುತಿಸುವುದು; ಅವರ ಪ್ರಕೃತಿ ಕಾವ್ಯದ ಅಭಿವ್ಯಕ್ತಿಯಲ್ಲಿ ಅಡಕವಾಗಿರುವ ಅನುಭಾವಿಕ ಅಂಶಗಳನ್ನು ತೋರಗೊಡುವುದು - ಇವೇ ಮುಂತಾದ ವಿಷಯಗಳತ್ತ ಈ ಅಧ್ಯಯನ ಗಮನ ಹರಿಸಿದೆಯೆಂಬುದನ್ನು ಹೇಳುತ್ತದೆ.

'ಆ ದಿನ ನೆನೆದು - ಬೇಂದ್ರೆ, ಜೀವನ ಮತ್ತು ವ್ಯಕ್ತಿತ್ವ' ಎನ್ನುವ ಎರಡನೆಯ ಅಧ್ಯಾಯವು 'ಮುತ್ತು ಬಿತ್ತಿ ಮುತ್ತು ಬೆಳೆದ ಕವಿ', 'ಗಂಗೆಯ ಕಷ್ಟವು ಗೌರಿಗೆ ತಿಳಿಯದು' 'ಕಿಡಿ ಬೆಂಕಿಯಿಂದ ಇಡಿನಿಧಿಗೆ', 'ಹಾಡಾಗಿ ಹರಿಯಿತು ದುಃಖದ ಕಡಲು', 'ಕಾವ್ಯದ ಕುಲುಮೆ ಹೊತ್ತಿಸಿದ ದಾರ್ಶನಿಕ ಕವಿ' ಎನ್ನುವ ಉಪಶೀರ್ಷಿಕೆಗಳ ಅಡಿಯಲ್ಲಿ ಬೇಂದ್ರೆಯವರ ಹುಟ್ಟು, ಬಾಲ್ಯದ ಪರಿಸರ, ವಿದ್ಯಾಭ್ಯಾಸದ ಹಂತಗಳು, ಸಾಹಿತ್ಯದ ಪ್ರೇರಣೆ, ಮೊದಲ

ಕವಿತೆಯ ಸಂಭ್ರಮ, ಮದುವೆ, ಮಕ್ಕಳು, ಸಾಹಿತ್ಯಿಕ ಸಾಧನೆ, ಪ್ರಶಸ್ತಿ-ಪುರಸ್ಕಾರ ಹಾಗೂ ಅವರ ಜೀವನದ ಸಂಭ್ರಮ ಹಾಗೂ ಸಂಕಟಗಳ ಕ್ಷಣಗಳನ್ನು ದಾಖಲಿಸುವದರೊಂದಿಗೆ ಅವರ ಬದುಕಿನ ಸ್ಥೂಲ ಪರಿಚಯವನ್ನು ನೀಡಲು ಪ್ರಯತ್ನಿಸುತ್ತದೆ. ಕಾವ್ಯವೆಂಬ ಮುತ್ತನ್ನು ಬಿತ್ತಿ ಮುತ್ತನ್ನು ಬೇಂದ್ರೆಯವರು ಹೇಗೆ ಬೆಳೆದರೆಂಬುದು ಕುತೂಹಲದ ಸಂಗತಿಯಾಗಿದೆ. ಅವರ ಬಾಲ್ಯದ ಪರಿಸರವೆ ಅವರಿಗೆ ನಿರಂತರ ಸ್ಫೂರ್ತಿಯ ಸೆಲೆಯಾದ ಬಗೆಯನ್ನು ಅಭ್ಯಾಸ ಮಾಡುವುದಾಗಿದೆ. ಜೀವನದಲ್ಲಿ ಕಷ್ಟಗಳ ಕಡಲನ್ನೆ ದಾಟಿ ಬಂದರೂ ಮನಸ್ಸನ್ನು ಕಹಿ ಮಾಡಿಕೊಳ್ಳದೆ ಧೀರೋದಾತ್ತ ಜೀವನವನ್ನು ಸವೆಸಿದ ಬೇಂದ್ರೆಯವರ ಬದುಕು ಒಂದು ಪ್ರೇರಣಾದಾಯಕ ಜೀವನ ಚರಿತ್ರೆಯಾಗಿದೆ. ಜೀವನದ ಪಾಡುಗಳನ್ನು ಹಾಡುಗಳನ್ನಾಗಿ ಮಾಡಿಕೊಂಡ ಮೇರು ಕವಿಯೊಬ್ಬನ ಜೀವನಗಾಥೆಯನ್ನು ಕಟ್ಟಿಕೊಡಲು ಈ ಅಧ್ಯಾಯದಲ್ಲಿ ಪ್ರಯತ್ನಿಸಲಾಗಿದೆ.

'ಕನ್ನಡ ಕಾವ್ಯ ಪರಂಪರೆಯಲ್ಲಿ ನಿಸರ್ಗದ ಅನುಭೂತಿ' ಶೀರ್ಷಿಕೆಯ ಮೂರನೆಯ ಅಧ್ಯಾಯವು ಜನಪದದಿಂದ ಪ್ರಾರಂಭಿಸಿ ಪಂಪ, ರನ್ನ, ವಚನಕಾರರು, ಹರಿಹರ, ಹರಿದಾಸರು, ಸರ್ವಜ್ಞ, ಕುಮಾರವ್ಯಾಸ, ಲಕ್ಷ್ಮೀಶ, ತತ್ವಪದಕಾರರವರೆಗಿನ ಕನ್ನಡದ ಪ್ರಮುಖ ಲೇಖಕರಲ್ಲಿ ಅಭಿವ್ಯಕ್ತಗೊಂಡಿರುವ ನಿಸರ್ಗದ ಚಿತ್ರಣವನ್ನು ವಿಶ್ಲೇಷಣೆ ಮಾಡುವ ಉದ್ದೇಶ ಹೊಂದಿದೆ. ನಿಸರ್ಗವನ್ನು ಚೈತನ್ಯದ ಸೆಲೆಯಾಗಿ, ಆಧ್ಯಾತ್ಮಿಕತೆಯ ಮೂಲವಾಗಿ ಕಂಡ ಪರಂಪರೆಯನ್ನು ಜನಪದದಲ್ಲಿಯೇ ಗುರುತಿಸಬಹುದಾಗಿದೆ. ಪ್ರಕೃತಿಯಲ್ಲಿ ಸರಸ್ವತಿಯನ್ನು, ಬದುಕಿನ ಗಂಗೆಯನ್ನು ಅರಸುವ ಜನಪದ ಕಾವ್ಯ ಪರಂಪರೆ ಬೇಂದ್ರೆಯವರಿಗೂ ಪ್ರೇರಕವಾಗಿ ದುಡಿದಿದೆ. ವಸಂತದ ಪ್ರೇರಣೆಯಿಂದ ಪ್ರಕೃತಿ ನಕ್ಕು ನಲಿಯುವದನ್ನು, ಕವಿತೆ ಚಿಗುರುವುದನ್ನು ಆದಿಕವಿ ಪಂಪ ಕಾಣುತ್ತಾನೆ. ಪ್ರಕೃತಿ ಮತ್ತು ಮನುಷ್ಯನ ಗಾಢವಾದ ಸಂಬಂಧವನ್ನು ಪಂಪ ಗುರುತಿಸುವುದನ್ನು ನಾವು ತಿಳಿಯಬಹುದಾಗಿದೆ. ಪಂಪನ ನಿಸರ್ಗದ ವರ್ಣನೆ, ಆಗಮಿಕ-ಲೌಕಿಕಗಳ ಸಮನ್ವಯ, ಮಾರ್ಗ-ದೇಸಿಗಳ ಒಗೆತನ; ರನ್ನನ ನಿಸರ್ಗದ ಪ್ರತಿಮೆಗಳು, ಬೆಳುದಿಂಗಳ ವರ್ಣನೆ; ಹರಿಹರನ ದೈವಿಕತೆಯ ಆಶಯ, ಪುಷ್ಪರಗಳೆ, ಗಿರಿಜೆಯ ತಪಸ್ಸು, ಚೇತನಾಮಯವಾದ ನಿಸರ್ಗ ಮುಂತಾದವುಗಳು ಬೇಂದ್ರೆಯವರಲ್ಲಿ ದೇಸಿತನದ, ಆಧ್ಯಾತ್ಮಿಕದ ಹೊಳಹುಗಳನ್ನು ನೀಡುವುದರ ಜೊತೆಗೆ ಬದುಕಿನಲ್ಲಿ ಲವಲವಿಕೆಯನ್ನು ಮೂಡಿಸಿದವು. ನಿಸರ್ಗದ ಬಗ್ಗೆ ಹೆಚ್ಚು ಆಸಕ್ತಿ ತಳೆಯುವಲ್ಲಿ ನೆರವಾದವು. ಪಂಪನ ವೀರತ್ವದ ಭಾರತಕ್ಕೆ ಪ್ರತಿಯಾಗಿ ಕುಮಾರವ್ಯಾಸನ ಭಾರತವು ಭಕ್ತಿಯ ಕಥೆಯಾಗಿ ರೂಪುಗೊಳ್ಳುತ್ತದೆ. ಕುಮಾರವ್ಯಾಸ ಭಾರತವು ಕೂಡ ಲೌಕಿಕ ಅಲೌಕಿಕಗಳು ಹೆಣೆದುಕೊಂಡ ಹಾಗೂ ಕೃಷ್ಣ ಭಕ್ತಿಯನ್ನು ಎಣೆಯಿಲ್ಲದಂತೆ ಸೂಸುತ್ತಿರುವ ಕಾವ್ಯವನ್ನಾಗಿ ನೋಡಬಹುದು. ಪ್ರಕೃತಿಯ ರೂಪಕಗಳನ್ನು ಉಪಯೋಗಿಸಿಕೊಂಡು ಕುಮಾರವ್ಯಾಸನು ಕಟ್ಟಿಕೊಡುವ ಮನುಷ್ಯ ಜೀವನದ ತಾತ್ವಿಕತೆ ಮುಖ್ಯವಾದುದು. ನಾದದ ಖಣಿಯಾಗಿರುವ ಲಕ್ಷ್ಮೀಶ ತನ್ನ ನಾದಮಯತೆಯಿಂದ ಬೇಂದ್ರೆಯವರಿಗೆ ತುಂಬ ಇಷ್ಟವಾದ ಕವಿ. ಕೃಷ್ಣಭಕ್ತಿಯನ್ನು ಸಾರುವ, ಸವಿದನಿಯಿಂದ ಕಾವ್ಯವನ್ನು ರಸದ ಒರತೆಯಾಗಿಸುವ ಜೈಮಿನಿ ಭಾರತವನ್ನು ಎಲ್ಲರೂ ಇಷ್ಟಪಡುತ್ತಾರೆ. ಕುಮಾರವ್ಯಾಸ, ಲಕ್ಷ್ಮೀಶರು

ನಿಸರ್ಗದ ಪ್ರತಿಮೆ, ರೂಪಕ ಉಪಯೋಗಿಸಿಕೊಂಡು ಕಟ್ಟಿದ ಕಾವ್ಯ ಹಾಗೂ ಜೀವನದ ಸಂದೇಶಗಳು ಬೇಂದ್ರೆಯವರಿಗೂ ಪ್ರಭಾವ ಬೀರಿದವು. ಈ ಪರಂಪರೆಯನ್ನು ಅಧ್ಯಯನ ಮಾಡಲು ಯತ್ನಿಸಲಾಗಿದೆ.

ಭಕ್ತಿಕಾವ್ಯ ಪರಂಪರೆಯಿಂದ ಬಂದಂತಹ ವಚನಕಾರರು, ಹರಿದಾಸರು, ಸರ್ವಜ್ಞ, ತತ್ವಪದಕಾರರು ಕೂಡ ಲೌಕಿಕ ಹಾಗೂ ಅಲೌಕಿಕ ಬದುಕಿನ ಅಭಿವ್ಯಕ್ತಿಯಲ್ಲಿ ಪ್ರಕೃತಿಯನ್ನೂ ಸಾಧನವನ್ನಾಗಿ ಮಾಡಿಕೊಂಡಿದ್ದನ್ನು ಕಾಣುತ್ತೇವೆ. ಜನಪದದಿಂದ ನವೋದಯದವರೆಗಿನ ಕನ್ನಡ ಕಾವ್ಯ ಪರಂಪರೆಯಲ್ಲಿ ಪ್ರಮುಖವಾಗಿ ಕಂಡುಬರುವಂತಹ ನಿಸರ್ಗದ ಅನುಭೂತಿಯನ್ನು ಬೇಂದ್ರೆಯವರ ಬೆಳವಣಿಗೆಯೊಂದಿಗೆ ಹೊಂದಿಸಿ ನೋಡಲು ಈ ಅಧ್ಯಾಯದಲ್ಲಿ ಪ್ರಯತ್ನಿಸಲಾಗಿದೆ.

'ಬೇಂದ್ರೆ ನಿಸರ್ಗ ಕಾವ್ಯ : ಪ್ರೇರಣೆಗಳು' -ಈ ನಾಲ್ಕನೆಯ ಅಧ್ಯಾಯದಲ್ಲಿ ಬೇಂದ್ರೆಯವರು ಕವಿತೆ ಬರೆಯಲು ಪ್ರಾರಂಭಿಸಿದ ಸಂದರ್ಭವನ್ನು ಅವಲೋಕನ ಮಾಡುತ್ತ ನವೋದಯದ ಆ ಸಂಕ್ರಮಣ ಕಾಲದ ನಿಸರ್ಗ ಪ್ರೀತಿ, ಹೊಸ ಕಾವ್ಯ ಪ್ರಯೋಗಗಳ ಬಗ್ಗೆ ಇದ್ದ ಉತ್ಸಾಹ, ಹೊಸ ಭಾವಸಂವೇದನೆ, ಇಂಗ್ಲೀಷ್ ಸಾಹಿತ್ಯದ ಪ್ರಭಾವ ಮುಂತಾದವುಗಳ ಕುರಿತು ಅಧ್ಯಯನ ನಡೆಸಲಾಗಿದೆ. ಮನುಷ್ಯನ ಭಾವನೆಗಳಿಗೆ ಇರುವ ಚೇತನಾಶಕ್ತಿಯನ್ನು ಹಾಗೂ ಅವನ ಕಲ್ಪನಾ ಶಕ್ತಿಗಿರುವ ಅಗಾಧತೆಯನ್ನು ನವೋದಯವು ಮನದಟ್ಟು ಮಾಡಿತು. ಮಾನವೀಯತೆ, ದಯೆ, ಕರುಣೆ, ಅನುಕಂಪ, ಪ್ರಕೃತಿಪ್ರೇಮ ಮುಂತಾದ ಮೌಲ್ಯಗಳು ಮುಂಚೂಣಿಗೆ ಬರತೊಡಗಿದವು. ನವೋದಯ ಮಾದರಿ ಪಾಶ್ಚಾತ್ಯದ ಕುರುಡು ಅನುಕರಣೆಯಲ್ಲ. ಪ್ರಗತಿಶೀಲತೆ ಹಾಗೂ ಸಮಾನತೆಯ ಅಂಶಗಳಿಂದ ಕನ್ನಡ ನವೋದಯವು ಭಿನ್ನಮಾರ್ಗವನ್ನು ತುಳಿದು ಬರಿ ರಮ್ಯತೆಯಿಂದ ದೂರವಿದ್ದಿತು. ದೇಸಿ ಮೌಲ್ಯಗಳನ್ನು ಬೇಂದ್ರೆ ಕಾವ್ಯವು ಒಳಗೊಳ್ಳುವ ಮೂಲಕ ಕನ್ನಡದ ಸತ್ವಯುತ ಪರಂಪರೆಯನ್ನು ಅದು ಮುಂದುವರೆಸಿದಂತಾಯಿತು.

ಬೇಂದ್ರೆಯವರ ಕಾವ್ಯ ಬೆಳವಣಿಗೆಯ ಹಂತದಲ್ಲಿ ಸ್ಫೂರ್ತಿ ಕೊಟ್ಟ ಬಾಲ್ಯದ ಪರಿಸರ, ಸ್ತ್ರೀ ಕೇಂದ್ರಿತ ಮನೆಯ ವಾತಾವರಣ, ಆಧ್ಯಾತ್ಮಿಕ ಸಂಗತಿಗಳ ನಂಟು, ಶರಣರ-ದಾಸರ-ಸೂಫಿ ಸಂತರ ಸಾಹಿತ್ಯದಲ್ಲಿ ಆಸಕ್ತಿ ಮುಂತಾದ ಅಂಶಗಳು ಅವರ ಕಾವ್ಯದಲ್ಲಿ ಭಕ್ತಿಯ ಎಳೆಗಳನ್ನು ನೇಯ್ದವು. ಅವರ ಪ್ರಾಪಂಚಿಕ ಲೋಕದಲ್ಲಿ ಭಕ್ತನೊಬ್ಬ ಇರುವುದು ಹಾಗೂ ಭಕ್ತಿಯ ಕಾವ್ಯದಲ್ಲಿ ಲೌಕಿಕ ಪ್ರೀತಿಯ ಅಂಶ ಅಡಗಿರುವುದನ್ನು ಕಾಣಬಹುದಾಗಿದೆ. ಇಂಗ್ಲೀಷ್ ಕವಿಗಳು ಅವರ ಮೇಲೆ ಮಾಡಿದ ಪ್ರಭಾವವು ಕೂಡ ಅವರ ಕಾವ್ಯವಿಮರ್ಶೆಯ ದೃಷ್ಟಿಯಿಂದ ಮಹತ್ವದ ಅಂಶವಾಗಿದೆ. ಹೀಗೆ ಬೇಂದ್ರೆಯವರ ನಿಸರ್ಗ ಕಾವ್ಯಕ್ಕೆ ಸ್ಫೂರ್ತಿ- ಪ್ರೇರಣೆಗಳು ದೊರೆತ ಸಂದರ್ಭ ಹಾಗೂ ಹಿನ್ನೆಲೆಗಳನ್ನು ಇಲ್ಲಿ ಗಮನಿಸಲು ಪ್ರಯತ್ನಿಸಲಾಗಿದೆ.

'ಬೇಂದ್ರೆ ಹಾಗೂ ಸಮಕಾಲೀನರಲ್ಲಿ ನಿಸರ್ಗ ಮನೋಧರ್ಮ' ಎನ್ನುವ ಐದನೆಯ ಅಧ್ಯಾಯವು 'ಆತ್ಮಯಾತ್ರಿಕ ಕವಿ ಮಧುರಚೆನ್ನ, ಆತ್ಮಶ್ರೀಯ ಹರಿಕಾರ ಕುವೆಂಪು'; 'ನಿಸರ್ಗದ ಮಮತೆಯಿಂದ ಕೇಡ ಗೆಲ್ಲುವ ಪು.ತಿ.ನ.', 'ಮಾಸ್ತಿಯವರಲ್ಲಿ ನಿಸರ್ಗದ ಸಾತ್ವಿಕ ಮನೋಧರ್ಮ'; 'ಕೆ.ಎಸ್.ನ ಕವಿತೆಗಳಲ್ಲಿ ಪ್ರಕೃತಿಯ

ಸುಕುಮಾರತೆ'; 'ಪ್ರೇರಣಾದಾಯಕ ನಿಸರ್ಗ ಪರಂಪರೆಯಲ್ಲಿ ಕಿರಿಯ ಸಮಕಾಲೀನರು- ಜಿ.ಎಸ್.ಎಸ್. ಹಾಗೂ ಚೆನ್ನವೀರ ಕಣವಿ' ಎಂದು ಬೇಂದ್ರೆಯವರ ಸಮಕಾಲೀನ ಪ್ರಮುಖರ ನಿಸರ್ಗ ಕಾವ್ಯವನ್ನು ಸ್ಥೂಲವಾಗಿ ಅವಲೋಕಿಸುವ ಉದ್ದೇಶವನ್ನು ಹೊಂದಿ ಬೇಂದ್ರೆಯವರ ಕಾಲದ ಪ್ರಕೃತಿಯ ವಿವಿಧ ಮನೋಧರ್ಮಗಳನ್ನು ಹಿಡಿದಿಡುವ ಪ್ರಯತ್ನವನ್ನು ತಿಳಿಯುವದಾಗಿದೆ. ಇಹ ಹಾಗೂ ಪರವೆನ್ನುವುದು ಈ ಕವಿಗಳಲ್ಲಿ ಕಾಣಿಸಿಕೊಂಡ ಬಗೆಯನ್ನು ಗುರುತಿಸುತ್ತ ನವೋದಯದ ಸಂದರ್ಭದಲ್ಲಿ ಕನ್ನಡ ಕಾವ್ಯದಲ್ಲಿನ ನಿಸರ್ಗ ಪರಂಪರೆಯನ್ನು ಗುರುತಿಸುವದಾಗಿದೆ.

ಬೇಂದ್ರೆ ಹಾಗೂ ಸಮಕಾಲೀನರ ನಿಸರ್ಗ ಕಾವ್ಯ, ಕಾವ್ಯವಸ್ತು ಹಾಗೂ ನಿರ್ವಹಣಾ ವಿಧಾನ, ಅನುಭಾವಿಕತೆಯ ಅಂಶಗಳು, ಬದುಕಿನ ತಾತ್ವಿಕತೆ ಮುಂತಾದವುಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಆ ಕಾಲದ ಪ್ರಮುಖ ಕವಿಗಳ ನಿಸರ್ಗ ಕಾವ್ಯದ ಅಭ್ಯಾಸವು ಪ್ರಕೃತಿ ಪ್ರೇಮದ ಅವರ ಬಾಂಧವ್ಯವನ್ನು ಮತ್ತು ಪರಸ್ಪರ ಪ್ರೇರಣೆಯ ಅಂಶಗಳನ್ನು ತಿಳಿಯಲು ಸಹಾಯಕವಾಗುತ್ತದೆ. ಅದೂ ಅಲ್ಲದೆ ಆ ಕವಿಗಳ ಸಾದೃಶ್ಯ ಹಾಗೂ ವೈದೃಶ್ಯದ ಉದಾಹರಣೆಗಳನ್ನು ಕೂಡ ತಿಳಿಯಬಹುದಾಗಿದೆ. ಒಂದೇ ಕಾಲ, ಒಂದೇ ಮನೋಧರ್ಮ ಹೊಂದಿದ್ದರೂ ಆಶಯ, ಅಭಿವ್ಯಕ್ತಿಯ ಕ್ರಮ, ತಾತ್ವಿಕತೆ ಭಿನ್ನವಾಗುವ ನೆಲೆಗಳನ್ನು ಕಾಣಬಹುದಾಗಿದೆ. ಬೇಂದ್ರೆ ಹಾಗೂ ಮಧುರಚೆನ್ನರ ನಡುವೆ ಗಾಢವಾದ ಗೆಳೆತನವಿತ್ತು. ಬೇಂದ್ರೆಯವರಲ್ಲಿ ಆಧ್ಯಾತ್ಮಿಕ ಹಂಬಲ ಬೆಳೆದುಬರಲು ಮಧುರಚೆನ್ನರು ಬಹುಮುಖ್ಯ ಪಾತ್ರ ವಹಿಸಿರುವ ಸಂಗತಿ ತಿಳಿದುಬರುತ್ತದೆ. ಮಧುರಚೆನ್ನ, ಬೇಂದ್ರೆಯವರ ಎದೆಯ ಭಾವದೀಪಗಳು ಸಮಾನವಾಗಿ ಉರಿಯುತ್ತಿದ್ದವು. ಗೆಳೆಯರ ಗುಂಪಿನ ಮೇಲೆ ಅರವಿಂದರು, ಎ.ಇ., ಖಲೀಲ್ ಜಿಬ್ರಾನ್ ಮುಂತಾದವರ ದಟ್ಟ ಪ್ರಭಾವವಿತ್ತು. ಬೇಂದ್ರೆಯವರಂತೆಯೇ ಲೌಕಿಕ ಹಾಗೂ ಆಧ್ಯಾತ್ಮಿಕ ಸಂಗತಿಗಳ ಅನುಭವಗಳನ್ನು ನಿಸರ್ಗದ ಶಬ್ದಗಳಲ್ಲಿ ಕವಿತೆಯಾಗಿಸಿದವರು ಕುವೆಂಪು ಅವರು. ಅವರ ಕಾವ್ಯದಲ್ಲಿನ ನಿಸರ್ಗದ ಅನುಭೂತಿ ಬದುಕಿಗೆ ಚೈತನ್ಯವನ್ನು ನೀಡುತ್ತದೆ. ವರ್ಡ್ಸ್‌ವರ್ತ್‌ನ ಪ್ರೇರಣೆಗೆ ನೀಡಿದ ಮಹತ್ವವನ್ನು ರಾಮಕೃಷ್ಣ, ವಿವೇಕಾನಂದರ ಪ್ರೇರಣೆಗೂ ಅವರು ನೀಡಿದರು. ಬೇಂದ್ರೆಯಂತೆ ಕುವೆಂಪು ಅವರಲ್ಲಿಯೂ ಬಾಲ್ಯದ ಸೆಳಕುಗಳು ನಿಸರ್ಗದ ಚಿತ್ರಗಳ ಮೂಲಕ ಪ್ರಾಪಂಚಿಕ ಹಾಗೂ ದೈವಿಕ ಸಂಗತಿಗಳ ಶ್ರೇಷ್ಠ ಅನುಭವ ನೀಡುತ್ತವೆ. ನಿಸರ್ಗದ ಮಮತೆಯ ಗುಣವನ್ನು ತಮ್ಮ ಕಾವ್ಯದಲ್ಲಿ ತಂದಿರುವ ಪು.ತಿ.ನ.; ಸಕಲವನ್ನು ಅರ್ಪಣೆ ಮಾಡುವ ನಿಸರ್ಗದ ದಯಾಗುಣದ ಬಗ್ಗೆ ಬರೆಯುವ ಮಾಸ್ತಿ; ಪ್ರಕೃತಿಯ ಸುಕುಮಾರತೆಯನ್ನು ಬಣ್ಣಿಸುವ ಕೆ.ಎಸ್.ನರಸಿಂಹಸ್ವಾಮಿ ಮುಂತಾದ ಕವಿಗಳ ನಿಸರ್ಗ ಪ್ರೀತಿಯನ್ನು ಹಾಗೂ ಆ ಮೂಲಕ ಅವರು ಕಂಡುಕೊಂಡ ತಾತ್ವಿಕತೆಗಳನ್ನು ಇಲ್ಲಿ ವಿವೇಚಿಸಲು ಯತ್ನಿಸಲಾಗಿದೆ. ನವೋದಯ ಕಾಲದಲ್ಲಿ ಬರೆಯಲು ಆರಂಭಿಸಿದ ಜಿ.ಎಸ್.ಎಸ್. ಹಾಗೂ ಚೆನ್ನವೀರ ಕಣವಿ ಅವರು ಕಿರಿಯ ಸಮಕಾಲೀನರಾಗಿ; ನಿಸರ್ಗ ಕಾವ್ಯ ಮುಂದುವರಿಕೆಯ ಪ್ರಾತಿನಿಧಿಕ ಕವಿಗಳಾಗಿ ಇಲ್ಲಿ ಪ್ರಸ್ತಾಪಗೊಳ್ಳುತ್ತಾರೆ. ಕಣವಿಯವರು ಹಂಚಿಕೊಂಡಿರುವ ಕೆಲವು ಸಂದರ್ಭಗಳು

ಜೊತೆಗೆ ದೇಹದೊಳಗಿನ ಆತ್ಮನನ್ನು ಹೊಂದಿಸುವ, ಸಂಬಂಧ ಕಲ್ಪಿಸುವ, ಲೋಕ-ಪರಲೋಕ ಬೆಸೆಯುವ ಸಾಧನೆಯ ಅನುಭವಗಳನ್ನು ಕೂಡ ಪ್ರಕೃತಿದತ್ತ ಭಾಷೆ ಹಿಡಿದಿಡುತ್ತದೆ.

'ಮೇರು ಅಭಿವ್ಯಕ್ತಿಯ ಹಂಬಲ' ಎನ್ನುವ ಏಳನೆಯ ಅಧ್ಯಾಯವು ಬೇಂದ್ರೆಯವರ ಪ್ರಕೃತಿ ಕಾವ್ಯವು ಮೈದಳೆದು ಬಂದಿರುವ ಕಾವ್ಯಶಿಲ್ಪವನ್ನು ಪರಿಶೀಲಿಸುವ ಪ್ರಯತ್ನವನ್ನು ಮಾಡುತ್ತದೆ. ಭಾಷೆ, ಶಬ್ದ, ಧ್ವನಿ, ನಾದ, ರಸ, ಉಪಮೆ, ಪ್ರತಿಮೆ, ರೂಪಕ, ನುಡಿಗಟ್ಟು ಮುಂತಾದ ಕಾವ್ಯ ಪರಿಕರಗಳ ಮೂಲಕ ಕವಿತೆ ಅವರಲ್ಲಿ ಪ್ರಕಟಗೊಳ್ಳುವ, ಅಭಿವ್ಯಕ್ತಿ ಪಡೆಯುವ ಮಾದರಿಗಳನ್ನು ಈ ಅಧ್ಯಾಯದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಬೇಂದ್ರೆಯವರು ಬರಿ ಭಾವದೊಡನೆ ಆಟವಾಡಿದವರಲ್ಲ. ಬುದ್ಧಿ-ಭಾವಗಳ ಸರಿಯಾದ ಬೆಸುಗೆಯಿಂದ ಮತ್ತು ಅಭಿವ್ಯಕ್ತಿ-ಕಾವ್ಯವಸ್ತುಗಳ ಸರಿಯಾದ ಹೊಂದಾಣಿಕೆಯಿಂದ ಅವರ ಕಾವ್ಯ ಪರಿಣಾಮಕಾರಿ ಯಶಸ್ಸು ಹಾಗೂ ಉತ್ಕಟ ಕಾವ್ಯಾನುಭವವನ್ನು ಸಾಧಿಸಲು ಸಾಧ್ಯವಾಯಿತು. ಕಾವ್ಯರಚನೆಯನ್ನು ಬರೀ ರಂಜನೆಯೆಂದು ತಿಳಿಯದೆ ತಮ್ಮ ಅನುಭವಗಳಿಗೆ ಪ್ರಾಮಾಣಿಕತೆಯ ಅಭಿವ್ಯಕ್ತಿಯನ್ನು ಕೊಟ್ಟರು. ಅವರ ಕಾವ್ಯವನ್ನು ಓದಿದ ಸಹೃದಯರಿಗೂ ಅಂತಹ ಅನುಭವ ಸಿಕ್ಕೇ ಸಿಗುವುದು. ಪ್ರಕೃತಿಯನ್ನು ಕವಿತೆಯೊಳಗೆ ತರುವುದು ಎಂದರೆ ಅದು ಬರೀ ವರ್ಣನೆಯಾಗದೆ, ಶಬ್ದವಿಲಾಸವಾಗದೆ ಪುರುಷಾರ್ಥಪೂರ್ಣವಾಗಬೇಕೆಂದು ಬೇಂದ್ರೆ ಬಯಸಿದರು. ಆನಂದ, ಹಿಗ್ಗು, ಭಕ್ತಿರಸ, ಕರುಣ ರಸಗಳ ಸಂಗಮವಾಗಿ ಕವಿತೆ ಸಾರ್ಥಕತೆಯನ್ನು ಪಡೆಯಬೇಕೆಂಬ ಹಂಬಲ ಅವರದಾಗಿತ್ತು. ಷಟ್ಪದಿ, ಭಾವಗೀತೆ, ಸೀಸಪದ್ಯ, ತತ್ವಪದ, ಕೋಲಾಟದ ಪದ,ಲಾವಣಿ ಪದ, ಗೀಗಿಪದ, ಸಾನೆಟ್, ಕೀರ್ತನೆ, ನಾಲ್ವರಿ, ದಶಪದಿ ಮುಂತಾದ ಛಂದೋಪ್ರಕಾರಗಳನ್ನು ಬೇಂದ್ರೆಯವರು ಸಮರ್ಥವಾಗಿ ಬಳಸಿಕೊಂಡರು. ರೂಪಕ, ಪ್ರತಿಮೆ, ಶ್ಲೇಷೆ, ನುಡಿಗಟ್ಟು, ಪ್ರಾದೇಶಿಕ ಸ್ವಭಾವ, ಗಾದೆಮಾತು, ನಾದದ ಮಾಧುರ್ಯ, ದೃಷ್ಟಾಂತ, ವೈರುಧ್ಯ, ಸಾದೃಶ್ಯ, ವೈದೃಶ್ಯಗಳ ಸಮರ್ಪಕ ಬಳಕೆಯಿಂದ ಅವರ ಅಭಿವ್ಯಕ್ತಿ ಅದ್ಭುತ ಕಾವ್ಯಕೌಶಲ್ಯದ ನಿದರ್ಶನವಾಗಿ ಕಾಣುತ್ತದೆ. ಅವರ ನಿಸರ್ಗಕಾವ್ಯದ ಅಭಿವ್ಯಕ್ತಿಯ ಕೌಶಲಗಳನ್ನು ಈ ಅಧ್ಯಾಯದಲ್ಲಿ ಅರಿಯುವ ಪ್ರಯತ್ನವಿದೆ.

ಕೊನೆಯ ಅಧ್ಯಾಯವಾದ 'ಸಮಾರೋಪ'ವು ಬೇಂದ್ರೆಯವರ ಜೀವನದ ಅನುಭವ ಹಾಗೂ ಆಧ್ಯಾತ್ಮಿಕ ಸಂಗತಿಗಳಿಗೆ ಪ್ರಕೃತಿಯು ಸಮರ್ಥ ಮಾಧ್ಯಮದ ಭಾಷೆಯಾಗಿ ಕೆಲಸ ನಿರ್ವಹಿಸಿದ ಬಗೆಯನ್ನು ಚರ್ಚಿಸುತ್ತ ಬೇಂದ್ರೆಯವರ ನಿಸರ್ಗಕಾವ್ಯದ ಕೊಡುಗೆಗಳನ್ನು, ಅಧ್ಯಯನದಲ್ಲಿ ಬರುವ ಫಲಿತಗಳನ್ನು, ಚರ್ಚೆಯ ನೆಲೆಗಳನ್ನು ದಾಖಲಿಸಲು ಲಕ್ಷ್ಯಗೊಡುತ್ತದೆ. ಬೇಂದ್ರೆಯವರ ನಿಸರ್ಗ ಕಾವ್ಯವನ್ನು ಅಧ್ಯಯನ ಮಾಡಿದುದರ ಫಲಶೃತಿ ಹಾಗೂ ಪರಿಣಾಮಗಳನ್ನು ಲೌಕಿಕ ಮತ್ತು ದೈವಿಕ ಸಂಗತಿಗಳ ಅನುಭೂತಿಯ ನೆಲೆಯಲ್ಲಿ ಕಂಡುಕೊಳ್ಳುವುದಾಗಿದೆ. ಅವರು ಊರು-ಅಡವಿಯ ನಡುವೆ ಮನೆ ಮಾಡಿರುವುದನ್ನು, ನಿಸರ್ಗವನ್ನು ಸೂರೆ ಮಾಡಿರುವುದನ್ನು, ಹಳೆಯ ಅರ್ಥಗಳಿಂದ ಹೊಸ ಅರ್ಥ ಕಂಡುಕೊಂಡಿರುವುದನ್ನು, ಆಧ್ಯಾತ್ಮಿಕತೆಯ ಹಾದಿಯಲ್ಲಿನ ಮನಸ್ಸಿನ ತಾಕಲಾಟಗಳನ್ನು ತಿಳಿಯುವದಾಗಿದೆ. ಕೆಲವು ಹೆಚ್ಚಿನ ಅಧ್ಯಯನ ಸಾಧ್ಯತೆಗಳನ್ನು ಕೂಡ ಸೂಚಿಸುವದಾಗಿದೆ.

ಒಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಬೇಂದ್ರೆಯವರ ನಿಸರ್ಗ ಕವಿತೆಗಳನ್ನು ಗಮನದಲ್ಲಿಟ್ಟುಕೊಂಡು ಅಲ್ಲಿ ಕಾಣಿಸಿಕೊಳ್ಳುವ ಉತ್ಕಟ ಜೀವನ-ಅನುಭವವನ್ನು, ದೈವಿಕ ಅನುಭೂತಿಯನ್ನು ಮತ್ತು ಇಹ-ಪರ ಸಂಬಂಧದ ತಿಳುವಳಿಕೆಯನ್ನು ವಿವೇಚಿಸುವ ಕೆಲಸ ಮಾಡುತ್ತದೆ. ನಿಸರ್ಗ ಬೇಂದ್ರೆಯವರಲ್ಲಿ ಬರೀ ಕಣ್ಣಿಗೆ ಕಾಣುವ ಗಿಡ-ಮರ, ಗುಡ್ಡ-ಬೆಟ್ಟ, ಗಾಳಿ-ಬೆಳಕು, ಹೊಳೆ-ಹಳ್ಳವಾಗದೆ ಅದರಾಚೆಗಿರುವ ಚೈತನ್ಯದ ಜೊತೆಗೆ ಜೀವನವನ್ನು ಹೊಂದಿಸುವದಾಗಿದೆ. ಕವಿ ಬೇಂದ್ರೆಯವರು ಅನುಭವಿಸಿದ ಬದುಕಿನ ಸಂತೆಯ ಆಕರ್ಷಣೆಯನ್ನು ಹಾಗೂ ಅವರೊಳಗಿನ ಸಂತನನ್ನು ತೆರೆದಿಡುವ ಪ್ರಯತ್ನವನ್ನು ಈ ಅಧ್ಯಯನ ಮಾಡುತ್ತದೆ.

ನಿಸರ್ಗದ ಭಾಷೆ, ರೂಪಕ, ಪ್ರತಿಮೆ, ವರ್ಣನೆಗಳ ಮುಖಾಂತರ ಜೀವನದ ಅನುಭವಗಳ ಅಭಿವ್ಯಕ್ತಿಯನ್ನು ಬೇಂದ್ರೆಯವರು ಅಸಾಧಾರಣವಾಗಿ ಸಾಧಿಸಿರುವುದನ್ನು ಶೋಧಿಸುತ್ತ ಅಲ್ಲಿ ಒಡಮೂಡಿರುವ ಲೌಕಿಕ ಹಾಗೂ ಅಲೌಕಿಕದ ಸತ್ಯಗಳನ್ನು ಮನಗಾಣುವುದು ಈ ಪ್ರಬಂಧದ ಉದ್ದೇಶವಾಗಿದೆ. ಲೋಕ ಸಂಗತಿಗಳ ಮುಖಾಂತರ ಹೊರಸೂಸುವ ಅನುಭವ ಮತ್ತು ಆಧ್ಯಾತ್ಮಿಕ ನೆಲೆಗಳ ಮೂಲಕ ಹೊರಡುವ ಅನುಭೂತಿ ಎರಡನ್ನೂ ಬೇಂದ್ರೆಯವರು ವಿಶಿಷ್ಟ ಬಗೆಯಲ್ಲಿ ಸಾಧಿಸಿದ ರೀತಿಗಳನ್ನು ಅವರ ಪ್ರಮುಖ ನಿಸರ್ಗ ಕವಿತೆಗಳ ಆಧಾರದ ಮೇಲೆ ತಿಳಿಯುವದಾಗಿದೆ. ಅದೂ ಅಲ್ಲದೆ ಬೇಂದ್ರೆಯವರ ನಿಸರ್ಗ ಕಾವ್ಯ ಕುರಿತು, ಕನ್ನಡದ ಕಾವ್ಯ ಪರಂಪರೆಯ ಕುರಿತು, ಭಕ್ತಿ ಹಾಗೂ ಅನುಭಾವದ ಅಭಿವ್ಯಕ್ತಿಯನ್ನು ಕುರಿತು ಬಂದಿರುವ ಹಲವು ಗ್ರಂಥಗಳನ್ನು ಅಧ್ಯಯನಕ್ಕಾಗಿ ಆನುಷಂಗಿಕವಾಗಿ ಬಳಸಿಕೊಳ್ಳಲಾಗಿದೆ. ಬೇಂದ್ರೆಯವರ ಪ್ರಕೃತಿ ಕಾವ್ಯ ಹಲವು ನೆಲೆಗಳಲ್ಲಿ ತನ್ನ ಇರುವಿಕೆಯನ್ನು ಪ್ರಕಟಪಡಿಸುತ್ತದೆ. ಕನ್ನಡದ ಪರಂಪರೆ ಹಾಗೂ ಅರ್ವಾಚೀನತೆಯನ್ನು ಏಕಕಾಲಕ್ಕೆ ವರಕವಿಯು ಗ್ರಹಿಸಬಲ್ಲವರಾಗಿದ್ದರು. ಆದುದರಿಂದ ಪಂಪನಿಂದ ಮೊದಲು ಮಾಡಿ ಬೇಂದ್ರೆಯವರ ಸಮಕಾಲೀನರ ತನಕ ಪ್ರಮುಖ ಕವಿಗಳು ತಮ್ಮ ಕಾವ್ಯದಲ್ಲಿ ತೋರಿರುವ ನಿಸರ್ಗದ ಅನುಭೂತಿಯನ್ನು ಗ್ರಹಿಸುತ್ತ ಮತ್ತು ಕನ್ನಡದ ಭಕ್ತಿ ಹಾಗೂ ನಿಸರ್ಗ ಕಾವ್ಯದೊಂದಿಗೆ ಬೇಂದ್ರೆಯವರು ಹೊಂದಿರುವ ಕರುಳಿನ ಸಂಬಂಧವನ್ನು ಗುರುತಿಸುವ ಪ್ರಯತ್ನವನ್ನು ಕೂಡ ಈ ಅಧ್ಯಯನ ಮಾಡುತ್ತದೆ. ಪ್ರಕೃತಿಯ ಭಾಷೆ-ಸಂಕೇತಗಳನ್ನು ಉಪಯೋಗಿಸಿಕೊಂಡು ಪ್ರಕೃತಿಯ ದನಿಯಲ್ಲಿ ಅನುಭವವನ್ನು ಹೇಳಿಕೊಂಡಿರುವ ಭಕ್ತಿ ಹಾಗೂ ಅನುಭಾವದ ನೆಲೆಗಳನ್ನು ಅರಸಲು ನಿಸರ್ಗದ ಪ್ರತಿಮೆಗಳು ಬಳಕೆಯಾಗಿರುವ ಬೇಂದ್ರೆಯವರ ಪ್ರಮುಖ ಕವಿತೆಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ಅಲ್ಲಿಯ ಲೋಕಾನುಭವ ಹಾಗೂ ದೈವಾನುಭೂತಿಗಳನ್ನು ತಿಳಿಯುವ ಪ್ರಯತ್ನವಾಗಿದೆ.

೧.೫ ಅಧ್ಯಯನ ವಿಧಾನಗಳು :

'ಬೇಂದ್ರೆ ನಿಸರ್ಗ ಕಾವ್ಯ : ಅನುಭೂತಿ ಹಾಗೂ ಅಭಿವ್ಯಕ್ತಿ' ಎನ್ನುವ ಈ ಅಧ್ಯಯನದಲ್ಲಿ ಹಲವು ಅಧ್ಯಯನ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ. ನವೋದಯದ ಕಾಲ ಸಂದರ್ಭಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ಬೇಂದ್ರೆಯವರ ನಿಸರ್ಗ ಕವಿತೆಗಳನ್ನು ಮೊದಲು ಬರಿ ವರ್ಣನೆಯ ನೆಲೆಯಿಂದ ಅಭ್ಯಾಸ ಮಾಡುವ

ಉಪಕ್ರಮವಿತ್ತು. ಆದರೆ ವಿಮರ್ಶೆಯ ನೆಲೆ, ಹರವು ವಿಸ್ತಾರವಾದಂತೆ ರಸವಿಮರ್ಶೆಯ ಜೊತೆಗೆ ವಿಶ್ಲೇಷಣಾತ್ಮಕ, ನಿರೂಪಣಾತ್ಮಕ, ಶೋಧಮಾದರಿ ಹಾಗೂ ವಿಮರ್ಶಾತ್ಮಕ ಗುಣಗಳಿಂದ ಅವರ ಕವಿತೆಗಳನ್ನು ಸೋಸುವ ಅಧ್ಯಯನಗಳು ನಡೆದಿವೆ. ಈ ಎಲ್ಲ ವಿಧಾನಗಳನ್ನು ಇಲ್ಲಿ ಅನುಸರಿಸುವ ಪ್ರಯತ್ನ ಮಾಡಲಾಗಿದೆ. ರೂಪ ಮಾದರಿಯು ಅಭಿವ್ಯಕ್ತಿಗೆ ಮಹತ್ವ ಕೊಟ್ಟರೆ, ವಸ್ತುಮಾದರಿ ರೂಪವನ್ನು ಕಡೆಗಣಿಸಿತು. ವಸ್ತು ಹಾಗೂ ರೂಪ ಎರಡೂ ಮುಖ್ಯವೆನ್ನುವ ರೀತಿಯಲ್ಲಿ ಬೇಂದ್ರೆಯವರ ನಿಸರ್ಗ ಕವಿತೆಗಳನ್ನು ಅಧ್ಯಯನ ಮಾಡಲು ಯತ್ನಿಸಲಾಗಿದೆ.

ಬೇಂದ್ರೆಯವರ ನಿಸರ್ಗ ಕಾವ್ಯದಲ್ಲಿ ಒಡಮೂಡುವ ಸಾಂಸ್ಕೃತಿಕ ಕಾಳಜಿಗಳು ಮುಖ್ಯವಾದವುಗಳು. ಹಾಗಾಗಿ ಆ ಸಂದರ್ಭದ ಆಶಯ, ಪರಿಸರ, ಸಾಂಸ್ಕೃತಿಕ ಬಿಕ್ಕಟ್ಟು, ವ್ಯಕ್ತಿತ್ವ ಶೋಧನೆ, ನಿಸರ್ಗ ಪ್ರೇಮ ಮುಂತಾದವುಗಳ ಶೋಧ ಮಹತ್ವದ್ದಾಗುವದರಿಂದ ಶೋಧ ಅಧ್ಯಯನದ ವಿಧಾನದ ಮೂಲಕ ಬೇಂದ್ರೆಯವರ ನಿಸರ್ಗ ಕವಿತೆಗಳಲ್ಲಿ ಆ ಮೌಲ್ಯಗಳನ್ನು ಈ ಪ್ರಬಂಧ ಶೋಧಿಸುತ್ತದೆ. ಅನುಭಾವದ ಸಂಗತಿ ಗಹನವಾಗಿದ್ದರೂ, ಬೇಂದ್ರೆಯವರು ಪ್ರಕೃತಿ ಕವಿತೆಯ ಮೂಲಕ ಅದನ್ನು ನಿರ್ವಹಿಸಿದ ರೀತಿ ವಿಸ್ಮಯಕಾರಿಯಾದುದು. ಬೇಂದ್ರೆಯವರು ಆಧ್ಯಾತ್ಮಿಕ ಸಂಗತಿಗಳನ್ನು ಲೋಕ ಸಂಗತಿಗಳೊಳಗೆ ಅಡಗಿಸಿರುವುದನ್ನು ಶೋಧಿಸುವುದು ಕೂಡ ಮುಖ್ಯವಾಗಿದೆ.

ಬೇಂದ್ರೆಯವರು ನಿಸರ್ಗ ಕವಿತೆಗಳಲ್ಲಿ ಸರಳವಾದವುಗಳು ಮತ್ತು ಸಂಕೀರ್ಣವಾದವುಗಳು ಇದ್ದು ಆ ಎರಡೂ ಮಾದರಿಗಳಿಂದ ಆಯ್ದ ಕವಿತೆಗಳನ್ನು ಅಭ್ಯಾಸ ಮಾಡಿ, ಸರಳತೆ-ಸಂಕೀರ್ಣತೆಗಳ ಸಮನ್ವಯವನ್ನು ಬೇಂದ್ರೆ ಸಾಧಿಸಿದ ವಿಶಿಷ್ಟತೆಯನ್ನು ನೋಡುವುದು ಬಹು ಮುಖ್ಯವಾದುದು. ಹೀಗಾಗಿ ಅಂತಹ ಕವಿತೆಗಳನ್ನು ಸೂಕ್ತವಾಗಿ ವಿಶ್ಲೇಷಿಸುವ ಮೂಲಕ ಅವರ ಸರಳತೆ-ಸಂಕೀರ್ಣತೆಗಳನ್ನು ತಿಳಿಯಪಡಿಸುವದಾಗಿದೆ.

ನಿಸರ್ಗ ಸೌಂದರ್ಯಾನುಭವ ಕೂಡ ಬೇಂದ್ರೆಯವರಿಗೆ ತುಂಬ ಇಷ್ಟವಾದ ಸಂಗತಿಯಾಗಿತ್ತು. ಸೃಷ್ಟಿಯ ಚೆಲುವು, ಮನೋಹರತೆ, ವಿಸ್ಮಯ ಮುಂತಾದವುಗಳ ವರ್ಣನೆ ಸಹೃದಯರ ಮನಸ್ಸನ್ನು ಆವರಿಸಿಕೊಳ್ಳುತ್ತದೆ. ಆ ವರ್ಣನೆಯನ್ನು ವಿವರಿಸುವ ಮಾದರಿಯನ್ನು ಕೂಡ ಇಲ್ಲಿ ಬಳಸಿಕೊಳ್ಳಲಾಗಿದೆ. ಸುಖ ಹಾಗೂ ದುಃಖದ ಅನುಭವಗಳು ನಿಸರ್ಗದ ಭಾಷೆಯಲ್ಲಿ ಮೈ ತಳೆಯುವದರಿಂದ ವಿವರಣಾತ್ಮಕ ಹಾಗೂ ನಿರೂಪಣಾತ್ಮಕ ಮಾದರಿಗಳ ನೆರವಿನಿಂದ ಬೇಂದ್ರೆಯವರ ಅನುಭವ, ಸಂಭ್ರಮ ಹಾಗೂ ವಿಷಾದಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ನವೋದಯದ ಕಾಲಘಟ್ಟದಲ್ಲಿ ಬೇಂದ್ರೆಯವರು ಕನ್ನಡ ಕಾವ್ಯ ಪರಂಪರೆಯ ನವವಧುವಾಗಿ ಕಾಣಿಸಿಕೊಂಡಿದ್ದರಿಂದ ಪರಂಪರೆಯ ಹಿನ್ನೆಲೆಯಲ್ಲಿ ಬೇಂದ್ರೆಯವರನ್ನು ನೋಡುವುದು ಮುಖ್ಯವಾದ ಸಂಗತಿಯಾಗಿದೆ. ಆದುದರಿಂದ ಪರಂಪರೆಯ ಕವಿಗಳ ಜೊತೆ ಹಾಗೂ ಸಮಕಾಲೀನರ ಜೊತೆ ನಿಸರ್ಗ ಕಾವ್ಯ ಹಾಗೂ ಭಕ್ತಿ ಅನುಭಾವದ ದೃಷ್ಟಿಯಿಟ್ಟುಕೊಂಡು ಬೇಂದ್ರೆಯವರ ಕಾವ್ಯವನ್ನು ಹೊಂದಿಸುವದರಿಂದ ಹೊಸ ಹೊಳಹುಗಳನ್ನು ಪಡೆಯಬಹುದಾಗಿದೆ. ಅದಕ್ಕಾಗಿ ತೌಲನಿಕ ಮಾದರಿಯ ಅಧ್ಯಯನ ವಿಧಾನದಿಂದ ಬೇಂದ್ರೆಯವರ ನಿಸರ್ಗ ಕವಿತೆಗಳನ್ನು ಕನ್ನಡ ಕಾವ್ಯದ ಪ್ರಮುಖರ ಜೊತೆ ಅಭ್ಯಾಸ ಮಾಡಲಾಗಿದೆ.

ತೌಲನಿಕ ವಿಧಾನದ ಅಧ್ಯಯನದಿಂದ ನವೋದಯ ಕಾವ್ಯಮಾರ್ಗವು ಭಕ್ತಿ ಹಾಗೂ ಅನುಭಾವ ಪರಂಪರೆಯ ಮೇರು ಅಭಿವ್ಯಕ್ತಿಗೆ ಸಾಕ್ಷಿಯಾಗಿ ಪರಿಣಮಿಸಿರುವುದನ್ನು ನೋಡಬಹುದಾಗಿದೆ. ಬೇಂದ್ರೆಯವರ ನಿಸರ್ಗಕವಿತೆಗಳನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸಿದ ಸಂದರ್ಭದಲ್ಲಿ ಕವಿಗಳನ್ನು ವಿಶ್ಲೇಷಣೆ, ಚರ್ಚೆಗೆ ಒಳಪಡಿಸಿ ಫಲಿತಗಳನ್ನು ಕಂಡುಕೊಳ್ಳುವ ವಿಧಾನವನ್ನು ಪಾಲಿಸಲಾಗಿದೆ. ಬೇಂದ್ರೆಯವರ ಕಾವ್ಯಕ್ಕೆ ದೊರಕಿದ ಪ್ರತಿಸ್ಪಂದನೆ ಮತ್ತು ಹುಟ್ಟು ಹಾಕಿದ ತಾತ್ವಿಕ ವಿಚಾರಗಳನ್ನು ಗುರುತಿಸುವ ಪ್ರಯತ್ನವನ್ನು ಕೂಡ ಇಲ್ಲಿ ಮಾಡಲಾಗಿದೆ.

ಈ ರೀತಿಯಾಗಿ ಬೇಂದ್ರೆಯವರ ನಿಸರ್ಗ ಕಾವ್ಯದಲ್ಲಿರುವ ಲೌಕಿಕ-ದೈವಿಕ ಅನುಭೂತಿ ಮತ್ತು ಅಭಿವ್ಯಕ್ತಿಯ ರೀತಿಗಳನ್ನು ದೊರಕಿಸಿಕೊಳ್ಳಲು ವರ್ಣನೆ, ನಿರೂಪಣೆ, ವಿಶ್ಲೇಷಣೆ, ಚರ್ಚೆ, ವಿಮರ್ಶೆ, ಶೋಧನೆ, ಹುಡುಕಾಟ, ವಸ್ತು-ರೂಪಗಳ ಕ್ರಮ, ತೌಲನಿಕ ವಿಧಾನ, 'Great poetry communicates before it is understood' ಎನ್ನುವ ಮಾತಿನಂತೆ ಆಪ್ತ ಹಾಗೂ ಸಮೀಪದ ಓದು, ಇತ್ಯಾದಿ ವಿಧಾನಗಳಿಂದ ಅವರ ನಿಸರ್ಗ ಕಾವ್ಯದ ಅಧ್ಯಯನವನ್ನು ಮಾಡಲಾಗಿದೆ.

೧.೬ ಇದುವರೆಗಿನ ಪ್ರಮುಖ ಅಧ್ಯಯನಗಳ ಪಕ್ಷಿನೋಟ :

ಮಾಸ್ತಿಯವರಿಂದ ಮೊದಲುಗೊಂಡು ಈ ದಿನದ ಯುವ ಲೇಖಕರ ಓದು, ವಿಶ್ಲೇಷಣೆ, ವಿಮರ್ಶೆ, ಅವಲೋಕನ, ಚರ್ಚೆಗೆ ಬೇಂದ್ರೆಯವರ ಕಾವ್ಯವು ಒಳಗಾಗಿದೆ. ಅವರ ನಿಸರ್ಗ ಕವಿತೆಗಳನ್ನು ಕುರಿತು ಹಾಗೂ ಅಲ್ಲಿ ಅಭಿವ್ಯಕ್ತಗೊಂಡಿರುವ ಲೌಕಿಕ-ದೈವಿಕ ಅನುಭವಗಳನ್ನು ವಿಶ್ಲೇಷಿಸಿರುವ ಕೆಲವು ಪ್ರಮುಖ ಕೃತಿ, ಪ್ರಬಂಧ, ಲೇಖನಗಳ ಕಡೆಗೆ ಒಂದು ದೃಷ್ಟಿ ಹಾಯಿಸುವುದು ಅಗತ್ಯವಾಗಿದೆ.

ಮಾಸ್ತಿಯವರು ಬೇಂದ್ರೆಯವರ 'ನಾದಲೀಲೆ'ಗೆ ಮುನ್ನುಡಿ ಬರೆಯುತ್ತ ನಿಸರ್ಗ ದೃಷ್ಟಿಕೋನವು ಬೇಂದ್ರೆಯವರಲ್ಲಿ ಸಮಷ್ಟಿ ಭಾವವನ್ನು ಸಾಧಿಸುವ ಆಶಯ ಹೊಂದಿರುವುದನ್ನು ನಿರೂಪಿಸಿದರು. 'ಬೆಳಗು' ಪದ್ಯ ಕನ್ನಡ ಕಾವ್ಯದ ಸಂದರ್ಭದಲ್ಲಿ ತುಂಬ ಮಹತ್ವದ ಪ್ರಕಟಣೆಯಾಯಿತೆಂಬ ಭಾವವು ಅವರ ಮಾತುಗಳಲ್ಲಿ ವ್ಯಕ್ತವಾಗಿದೆ. ಬೇಂದ್ರೆಯವರ ನಿಸರ್ಗ ಕಾವ್ಯದ ಪ್ರತಿಭೆಯನ್ನು ಆಗಿನ ಸಂದರ್ಭದಲ್ಲಿ ಬರಿ ಉದಯೋನ್ಮುಖವೆನ್ನದೆ ಕಾವ್ಯಸಿದ್ಧಿ ಎಂದು ಹೇಳಿ ಬೇಂದ್ರೆಯವರ ಕೊಡುಗೆಯನ್ನು ಗುರುತಿಸಿದರು.

ತಮ್ಮ ವಿಮರ್ಶೆಯಿಂದ ಬೇಂದ್ರೆಯವರ ಕಾವ್ಯವನ್ನು ಸೂರೆಗೊಂಡಿರುವ ಕೀರ್ತಿನಾಥ ಕುರ್ತಕೋಟಿಯವರು ಬೇಂದ್ರೆ ಕಾವ್ಯವು ಪಡೆದುಕೊಂಡಿರುವ ಹರವು-ವಿಸ್ತಾರಗಳನ್ನು, ನಿಸರ್ಗದ ಅಭಿವ್ಯಕ್ತಿಯೊಂದಿಗೆ ಅವರ ಕಾವ್ಯ ಸಾಧಿಸಿರುವ ಪರಿಣತಿಯನ್ನು ಹಲವಾರು ಕೃತಿಗಳಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಬೇಂದ್ರೆ ಕಾವ್ಯದಲ್ಲಿ ವಿಶಿಷ್ಟವಾಗಿ ಕಾಣಿಸಿಕೊಳ್ಳುವ ನಿಸರ್ಗದ ಚಿತ್ರ, ನೆಲದ ಪ್ರತಿಮೆ, ಆಕಾಶದ ವಿಸ್ತಾರ, ಗಾಳಿ ತರುವ ಅದೃಷ್ಟ, ಶಾಲ್ಮಲೆಯ ಗುಪ್ತಗಂಗೆ

ಇತ್ಯಾದಿ ಪ್ರತಿಮೆ-ರೂಪಕಗಳ ಬಗ್ಗೆ ವಿವರವಾಗಿ ಬರೆದಿರುವುದು ಬೇಂದ್ರೆ ಕಾವ್ಯಕ್ಕೆ ಭಾಷ್ಯ ಬರೆದಂತಿದೆ. ಬೇಂದ್ರೆಯವರಲ್ಲಿ ಕಾಣಿಸಿಕೊಳ್ಳುವ ಸೂರ್ಯ-ಚಂದ್ರ, ಸೀಗೆಗೌರಿ, ಅನುಭಾವದ ಹಂಬಲ, ಅಖಂಡ ಜೀವನಾನುಭವ ಮುಂತಾದ ಅಂಶಗಳ ಬಗ್ಗೆ ಆಪ್ತ ಒಳನೋಟವನ್ನು ನೀಡುತ್ತಾರೆ. ಬೇಂದ್ರೆಯವರ ಶ್ರಾವಣ ಪ್ರತಿಭೆಯನ್ನು ಗುರುತಿಸುತ್ತಾರೆ.

ಬೇಂದ್ರೆಯವರ ಪ್ರಕೃತಿ ಗೀತೆಗಳನ್ನು ಗಮನದಲ್ಲಿರಿಸಿಕೊಂಡು ತಮ್ಮ 'ಭುವನದ ಭಾಗ್ಯ'[೧೨] ಕೃತಿಯಲ್ಲಿ ಡಾ. ಜಿ.ಎಸ್.ಆಮೂರ ಅವರು 'ಪ್ರಕೃತಿ ಗೀತ' ಎನ್ನುವ ಅಧ್ಯಾಯದಲ್ಲಿ ಬೇಂದ್ರೆ ನಿಸರ್ಗ ಕವಿತೆಗಳ ಹಿಂದಿನ ತಾತ್ವಿಕತೆಯನ್ನು ಗುರುತಿಸಿದ್ದಾರೆ. ಇಂಗ್ಲೀಷ್ ರೋಮ್ಯಾಂಟಿಕ್ ಕಾವ್ಯವೂ ಸೇರಿದಂತೆ ಭಾರತೀಯ ಹಾಗೂ ಕನ್ನಡ ನಾಡಿನ ಸಾಂಸ್ಕೃತಿಕ ಬದುಕಿನ ಪ್ರೇರಣೆಗಳಿಂದ ತಮ್ಮ ಪ್ರಕೃತಿ ಕವಿತೆಗಳಲ್ಲಿ ಮನುಷ್ಯ ಹಾಗೂ ದೈವಿಕ ಸಂಬಂಧಗಳನ್ನು ವರಕವಿ ಅನಾವರಣಗೊಳಿಸುತ್ತಾರೆಂದು ಆಮೂರರು ನಂಬುತ್ತಾರೆ. ಅವರ ಮೇಲಿನ ಪ್ರಭಾವಗಳು ಕಾವ್ಯೋದ್ಯೋಗದ ಪ್ರಾರಂಭಕ್ಕೆ ಸ್ಫೂರ್ತಿಯಾಗಿ ಕೆಲಸ ಮಾಡಿದವೆಂದು ಹೇಳುತ್ತಾರೆ. ಪೂರ್ವಕವಿಗಳ ಪ್ರಕೃತಿಯ ಬರಿ ವರ್ಣಕ ದೃಷ್ಟಿಯನ್ನು ಬೇಂದ್ರೆಯವರು ಇಷ್ಟಪಡಲಿಲ್ಲವೆಂದು ಕಾಣುತ್ತದೆ. ಭಕ್ತಿಮಾರ್ಗ ಕವಿಗಳ ಬಗ್ಗೆ ಬೇಂದ್ರೆಯವರಿಗೆ ತುಂಬ ಆಸಕ್ತಿಯಿತ್ತು. ಆನಂದತತ್ವವು ಬೇಂದ್ರೆ ಪ್ರಕೃತಿ ಕಾವ್ಯದ ಮತ್ತೊಂದು ಮುಖ್ಯ ಅಂಶವಾಗಿದೆ ಎಂದು ಆಮೂರರು ಸ್ಪಷ್ಟಪಡಿಸಿದ್ದಾರೆ.

'ಬೇಂದ್ರೆ ಕಾವ್ಯದಲ್ಲಿ ಪ್ರಕೃತಿ' ಎನ್ನುವ ರಂ.ಶ್ರೀ. ಮುಗಳಿಯವರ ಲೇಖನ ಬೇಂದ್ರೆಯವರ ನಿಸರ್ಗದ ವೈಭವವನ್ನು ಚಿತ್ರಿಸುತ್ತದೆ. 'ಸೃಷ್ಟಿ ದೃಷ್ಟಿಗಳ ವಿಶಿಷ್ಟ ಸಮ್ಮಿಳನದಿಂದ ಪ್ರಕೃತಿ ಪುರುಷರನ್ನು ಒಂದುಗೂಡಿಸಿ'[೧೩] ಕಲ್ಪಕತೆ ಹಾಗೂ ಅನುಭಾವಗಳ ಎರಕದಿಂದ ಬೇಂದ್ರೆಯವರು ತಮ್ಮ ಪ್ರಕೃತಿ ಕಾವ್ಯವನ್ನು ವಿಶಿಷ್ಟವಾಗಿಸುತ್ತಾರೆಂಬುದು ಡಾ. ರಂ.ಶ್ರೀ. ಮುಗಳಿಯವರ ಅಭಿಪ್ರಾಯವಾಗಿದೆ.

'ಬೇಂದ್ರೆಯವರ ಕಾವ್ಯದಲ್ಲಿ ಅನುಭಾವ'[೧೪] ಎನ್ನುವ ವಿಜಯಾ ದಬ್ಬೆಯವರ ಲೇಖನವು ನವೋದಯದ ಕಾಲಘಟ್ಟದಲ್ಲಿ ಅನುಭಾವವು ಕಾವ್ಯರಚನೆ ಹಾಗೂ ಕಾವ್ಯಾನುಭವಕ್ಕೆ ಮುಖ್ಯವಾಗಿ ಒದಗಿದ್ದನ್ನು ಹೇಳುತ್ತ ದೇಶೀಯತೆ ಹಾಗೂ ಪಾಶ್ಚಾತ್ಯ ಪ್ರೇರಣೆಗಳೆರಡೂ ಬೇಂದ್ರೆ ತಾತ್ವಿಕತೆಯನ್ನು ರೂಪಿಸಿದವು ಎನ್ನುವ ಮಾತುಗಳನ್ನು ಹೇಳುತ್ತಾರೆ. 'ನಿಸರ್ಗ ಮೂಲದಿಂದ ಒದಗುವ ಸೌಂದರ್ಯಾನುಭವವು ನವೋದಯದ ಮುಖ್ಯ ಪ್ರೇರಕ ನೆಲೆಗಳಲ್ಲಿ ಒಂದಾಗಿತ್ತೆಂದು' ಹೇಳುತ್ತ ಕವಿತೆಗಳ ಅನುಭವವು ಅನುಭಾವದ ಮೇಲ್ಮನೆಗೆ 'ನಿಚ್ಚಣಿಕೆ' ಯಾಗುವುದನ್ನು ನಿರೂಪಿಸುತ್ತಾರೆ.

'ಕನ್ನಡ ಕಾವ್ಯ ಪರಂಪರೆ ಹಾಗೂ ಬೇಂದ್ರೆ'[೧೫] ಎನ್ನುವ ದೀರ್ಘ ಹಾಗೂ ಅಭ್ಯಾಸಯೋಗ್ಯ ಲೇಖನದಲ್ಲಿ ಡಾ. ಗಿರಡ್ಡಿ ಗೋವಿಂದರಾಜ ಅವರು ಬೇಂದ್ರೆ ಕಾವ್ಯ ಕುರಿತು ಹಲವು ಒಳನೋಟಗಳನ್ನು ನೀಡುತ್ತಾರೆ. ನಿಸರ್ಗ ರೂಪಕಗಳನ್ನು ಬೇಂದ್ರೆಯವರು ಕಾವ್ಯಾನುಭವ ಹಾಗೂ ಮಾತು-ಜ್ಯೋತಿಗಳ ಸಂಬಂಧಕ್ಕೆ ಮಾಧ್ಯಮವಾಗಿ

ಮಾಡಿಕೊಂಡಿದ್ದನ್ನು ನಿದರ್ಶನಗಳ ಮೂಲಕ ವಿಶ್ಲೇಷಿಸುತ್ತಾರೆ. ಗಂಗೆ, ಸೂರ್ಯ, ಸರಸ್ವತಿ, ಗಣಪತಿ ಮುಂತಾದ ಸ್ತುತಿಗಳು ವರಕವಿಯ ಮೇಲೆ ಪ್ರಭಾವ ಬೀರಿದ್ದನ್ನು ನಿರೂಪಿಸುತ್ತಾರೆ. ಅಭಿವ್ಯಕ್ತಿಯ ಹೊಸ ಕ್ರಮಗಳಿಂದ ಬೇಂದ್ರೆಯವರು ನಿಸರ್ಗಕಾವ್ಯಕ್ಕೆ ಒಂದು 'ಟಾಂಗು', ಕೊಟ್ಟದ್ದನ್ನು; ಲಯ-ನಾದಗಳ ವೈವಿಧ್ಯತೆಯನ್ನು ತಂದದ್ದನ್ನು ಮನದಟ್ಟು ಮಾಡುತ್ತಾರೆ. ಕನ್ನಡ ಕಾವ್ಯ ಪರಂಪರೆಯನ್ನು ಬೇಂದ್ರೆಯವರು ಅಸಾಮಾನ್ಯವಾಗಿ ಉಪಯೋಗಿಸಿಕೊಂಡಿದ್ದನ್ನು ಓದುಗರ ಮುಂದಿಡುತ್ತಾರೆ.

ಬೇಂದ್ರೆಯವರ ಅನುಭಾವದ ಹಂಬಲವನ್ನು ಕುರಿತು, ಬೇಂದ್ರೆ-ಮಧುರಚೆನ್ನರ ಅನುಭಾವದ ಸಖ್ಯ ಕುರಿತು ಆಳ ಅಭ್ಯಾಸ ನಡೆಸಿರುವ ಡಾ. ಗುರುಲಿಂಗ ಕಾಪಸೆ ಅವರು ಸಖ್ಯಯೋಗದಿಂದ ಬೇಂದ್ರೆಯವರು ನಿಸರ್ಗ ಹಾಗೂ ಅನುಭಾವಗಳಿಗೆ ಹತ್ತಿರವಾದರೆಂದು ಹೇಳುತ್ತಾರೆ. ಪ್ರಕೃತಿಯ ಶಬ್ದಗಳಲ್ಲಿಯೆ ಮಧುರಚೆನ್ನರು ಬೇಂದ್ರೆಯವರಿಂದ 'ಪಡೆದಪ್ಪನಾಗುವುದು' ನಿರೂಪಿತವಾಗಬೇಕಿತ್ತು. 'ಹರಕೆ' ಎನ್ನುವ ಪದ್ಯವನ್ನು ಉದಾಹರಿಸುತ್ತ 'ಗುಪ್ತ ಗಂಗೆಯಾದ ಶಾಲ್ಮಲೆಯ ನೀರು, ಹರಿಹರನ ಕಾಲ್ತೊಳೆವ ಪುಣ್ಯಜಲ, ಭವ್ಯ-ಗೋದೆಯ ದಿವ್ಯಜಲ, ಶ್ರೀರಂಗನ ಪಾದವ ತೊಳೆವ ಕಾವೇರಿ ನೀರು ಇತ್ಯಾದಿ ನೀರಿಗೆಲ್ಲ ನಮ್ಮ ಪರಂಪರೆಯ ಇತಿಹಾಸವಿದೆ. ಸಂಸ್ಕೃತಿಯ ಪರಿಭಾಯೆಯಿದೆ. ಎರೆಯುವ ಉದ್ದೇಶ ಘನವಾದದ್ದೇ ಆಗಿದೆ'[೧೬] ಎಂದು ಬೇಂದ್ರೆ ಕಾವ್ಯದಲ್ಲಿರುವ ಪ್ರಕೃತಿಯ ಭಾಷೆಗೆ ದೈವಿಕ ಅರ್ಥಗಳಿರುವುದನ್ನು ಹೇಳುತ್ತಾರೆ.

'ಕನ್ನಡದಲ್ಲಿ ಭಾವಗೀತೆ' ಎನ್ನುವ ಡಾ. ಪ್ರಭುಶಂಕರರ ಪಿಎಚ್.ಡಿ. ಕೃತಿಯ 'ಪ್ರಕೃತಿ ಗೀತೆಗಳು'[೧೭] ಎನ್ನುವ ಅಧ್ಯಾಯದಲ್ಲಿ ಸಂಶೋಧಕರು ಹಲವು ಕವಿಗಳ ಜೊತೆಗೆ ಬೇಂದ್ರೆಯವರ ಹಲವು ನಿಸರ್ಗ ಗೀತೆಗಳನ್ನು ಅಧ್ಯಯನಕ್ಕೆ ಒಳಪಡಿಸುತ್ತಾರೆ. ಗ್ರಾಮ್ಯತೆ, ನಾದಪ್ರಧಾನತೆ, ಪುನರುಕ್ತಿ ಮುಂತಾದ ವಿಶಿಷ್ಟ ಗುಣಗಳಿಂದ ಬೇಂದ್ರೆಯವರು ಒಬ್ಬ ಶ್ರೇಷ್ಠ ನಿಸರ್ಗ ಕವಿಯಾಗಿರುವುದನ್ನು ಹೇಳುತ್ತಾರೆ.

ಡಿ.ಆರ್.ನಾಗರಾಜ್ ಅವರ 'ಶಕ್ತಿ-ಶಾರದೆಯ ಮೇಳ'[೧೮] ಒಂದು ಶ್ರೇಷ್ಠ 'ಆಧುನಿಕ ಕನ್ನಡ ಕಾವ್ಯದ ಅಧ್ಯಯನ'ವಾಗಿದ್ದು, ಬೇಂದ್ರೆಯವರೂ ಕೂಡ ಅಲ್ಲಿ ಮುಖ್ಯ ಚರ್ಚೆಗೆ ಒಳಪಟ್ಟಿದ್ದಾರೆ. ಬೇಂದ್ರೆ ಕಾವ್ಯದಲ್ಲಿ ಪ್ರಕೃತಿಯು ದಿವ್ಯ ವಿಕಾಸದ ನೆಲೆಯಾಗಿ ಮಾರ್ಪಡುವುದನ್ನು; ಭೂಮಿ, ಬೇಂದ್ರೆ ವ್ಯಕ್ತಿತ್ವದ ಮೂಲ ಪ್ರೇರಣೆಗಳಲ್ಲಿ ಒಂದಾಗುವುದನ್ನು ಅವರು ಹೇಳುತ್ತಾರೆ. ಅನೇಕ ರೂಪ ರೀತಿಗಳಲ್ಲಿ ತಾಯಿತತ್ವವು ಪ್ರೀತಿ ಮತ್ತು ರಕ್ಷಕ ಗುಣದ ನೆಲೆಯಾಗುವುದನ್ನು ಡಾ. ಡಿ.ಆರ್.ನಾಗರಾಜ್ ಅವರು ಗುರುತಿಸುತ್ತಾರೆ. ವಾತ್ಸಲ್ಯಮಯಿ ಭೂಮಿಯನ್ನು, ಮನುಷ್ಯನ ಕ್ಷುದ್ರತನವನ್ನು ಮನ್ನಿಸುವ ಭೂಮಿಯ ಚಿತ್ರಣವನ್ನು ಬೇಂದ್ರೆಯವರು ಅಸಾಧಾರಣವಾಗಿ ರೂಪಿಸಿದ್ದಾರೆಂದು ನಾಗರಾಜ್ ಅಭಿಪ್ರಾಯಪಡುತ್ತಾರೆ.

'ಕನ್ನಡ ಭಾವಗೀತೆಗಳಲ್ಲಿ ಪ್ರಕೃತಿ : ಒಂದು ಅಧ್ಯಯನ'[೧೯] ಎನ್ನುವ ತಮ್ಮ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಡಾ.ಕೆ.ಆರ್.ಸಿದ್ಧಗಂಗಮ್ಮ ಅವರು ಕನ್ನಡದ ಕವಿಗಳಲ್ಲಿ ಕಂಡುಬಂದಿರುವ ಪ್ರಕೃತಿ ಚಿತ್ರಣದ ವಿವರಗಳನ್ನು

ನೀಡುತ್ತಾರೆ. ಸೂರ್ಯೋದಯ, ಹುಣ್ಣಿಮೆ, ಋತು, ಮೋಡ-ಮಳೆ, ಭೂಮಿ, ಪ್ರಾಣಿ-ಪಕ್ಷಿ, ಉದಕ, ಹಸುರು ಮುಂತಾದ ಪ್ರಕೃತಿಯ ವಿಲಾಸ ಕನ್ನಡ ಕವಿಗಳಲ್ಲಿ ಅಭಿವ್ಯಕ್ತವಾಗಿರುವ ಬಗೆಗಳನ್ನು ಹೇಳುತ್ತಾರೆ. ಬೇಂದ್ರೆಯವರ ನಿಸರ್ಗ ಕುರಿತಾದ ಭಾವಗೀತೆಗಳಿಗೆ ಇರುವ ಪ್ರಾಮುಖ್ಯತೆಯನ್ನು ಅವರು ಸ್ಪಷ್ಟಪಡಿಸುತ್ತಾರೆ. ಬೆಳಗಿನ ಅಪೂರ್ವ ಗಳಿಗೆಗಳನ್ನು ಬೇಂದ್ರೆಯವರು ಕಟ್ಟಿಕೊಡುವ ರೀತಿಯನ್ನು ದಾಖಲಿಸುತ್ತಾರೆ.

'ಬೇಂದ್ರೆಯವರ ಸಖಿಗೀತದಲ್ಲಿ ಋತುವರ್ಣನೆ' ಡಾ. ಸುಮತೀಂದ್ರ ನಾಡಿಗ ಅವರು ಬೇಂದ್ರೆ ಜಯಂತಿ ದಿನ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮಾಡಿದ ಭಾಷಣದ ಮುದ್ರಣರೂಪದ ಕಿರುಕೃತಿಯಾಗಿದೆ. ಸಖಿಗೀತದಲ್ಲಿ ಅಡಕವಾಗಿರುವ ನಿಸರ್ಗದ ವರ್ಣನೆಯ ವಿಶಿಷ್ಟತೆಯನ್ನು ಅದು ತೆರೆದಿಡುತ್ತದೆ. 'ಮಾವು ಫಲಬಿಟ್ಟು ಮಲ್ಲಿಗೆ ಹೂಬಿಟ್ಟು, ಕೋಗಿಲೆ ಕೂಗಿ ವಸಂತದ ಆಗಮನವನ್ನು ಸೂಚಿಸುತ್ತದೆ, ರತ್ಯುತ್ಸಾಹಕ್ಕೆ ಸುಗ್ಗಿಯೇ ಕಾಲುಗೆಜ್ಜೆಯಾಗಿ, ರೋಮಾಂಚವಾಯಿತು ಎಂದು ಹೇಳುವಾಗ, ಇದು ಕೇವಲ ಹೊರಗಿನ ಪ್ರಕೃತಿಯಲ್ಲಾದ ಪರಿವರ್ತನೆಯಾಗಿ ಕಾಣಿಸದೆ ನಾಯಕನಲ್ಲಾದ ದೈಹಿಕ ಮನೋವ್ಯಾಪಾರವಾಗಿ ಕಾಣುತ್ತದೆ'[೨೦] ಎಂದು ಡಾ. ನಾಡಿಗ ಅವರು ವಿಶ್ಲೇಷಿಸುತ್ತಾರೆ.

'ಹಾಡೆ ಹಾದಿಯ ತೋರಿತು' ಎನ್ನುವ ತಮ್ಮ ಪಿಎಚ್.ಡಿ. ಅಧ್ಯಯನದಲ್ಲಿ ಡಾ. ಎಚ್.ಎಸ್. ರಾಘವೇಂದ್ರರಾವ್ ಅವರು ಬೇಂದ್ರೆ, ಕುವೆಂಪು, ಪು.ತಿ.ನ. ಅವರ ಕವಿತೆಗಳ ವಿಶಿಷ್ಟತೆಯನ್ನು ಅಧ್ಯಯನ ಮಾಡಿದ್ದಾರೆ. ಮೂವರು ಕವಿಗಳು ಪ್ರಕೃತಿಯನ್ನು ಕಾವ್ಯವಸ್ತುವನ್ನಾಗಿ ನಿರ್ವಹಿಸಿದ ಬಗೆಗಳನ್ನು 'ಕಾವ್ಯವಸ್ತು ಹಾಗೂ ಅದರ ನಿರ್ವಹಣೆ' ಅಡಿಯಲ್ಲಿ ಅಭ್ಯಾಸ ಮಾಡಿದ್ದಾರೆ. ದ.ರಾ.ಬೇಂದ್ರೆಯವರಲ್ಲಿ ಪ್ರಕೃತಿ ಕಾವ್ಯವಸ್ತುವಾಗಿರುವ ಅಧ್ಯಾಯದಲ್ಲಿ 'ಭೂಮಿಯ ಇತಿಹಾಸ ಮುಖ ಮತ್ತು ಪ್ರಕೃತಿ ಮುಖಗಳ ನಡುವಿನ ಸಾಮ್ಯ ವೈಷಮ್ಯಗಳ ವೈಚಾರಿಕವಾದ ಆದರೂ ಕಾವ್ಯಾತ್ಮಕವಾದ ಪರಿಶೀಲನೆ ಬೇಂದ್ರೆ ಪ್ರಕೃತಿ ಕಾವ್ಯದ ಬಹುಮುಖ್ಯವಾದ ನೆಲೆ'[೨೧]ಯೆಂದು ಗುರುತಿಸುತ್ತಾರೆ. ನಿಸರ್ಗದ ರಂಜಕ ಅಭಿವ್ಯಕ್ತಿಗೆ ಗಮನ ಕೊಡದೆ ಪೋಷಕ ಹಾಗೂ ಆಧ್ಯಾತ್ಮಿಕ ನೆಲೆಗಳಿಗೆ ಬೇಂದ್ರೆಯವರು ಆದ್ಯತೆ ನೀಡಿದರೆಂದು ಹಲವು ಮುಖ್ಯ ಒಳನೋಟಗಳನ್ನು ಎಚ್.ಎಸ್.ರಾಘವೇಂದ್ರರಾವ್ ಅವರು ನೀಡುವಲ್ಲಿ ಸಫಲರಾಗಿದ್ದಾರೆ. ಪ್ರಕೃತಿ ಹಾಗೂ ಮನುಷ್ಯ ಒಂದಕ್ಕೊಂದು ಭಾಷ್ಯವಾದುದನ್ನು ನಿರೂಪಿಸಿದ್ದಾರೆ.

ಈ ಅಧ್ಯಯನಗಳ ಸಮೀಕ್ಷೆಯಿಂದ ಬೇಂದ್ರೆಯವರ ನಿಸರ್ಗ ಕಾವ್ಯವು ಪಡೆದಿರುವ ವ್ಯಾಪ್ತಿ -ಹರವುಗಳ ಸ್ಥೂಲ ನೋಟ ತಿಳಿಯುವದಲ್ಲದೆ ಬೇಂದ್ರೆಯವರ ಕಾವ್ಯವು ಇನ್ನೂ ಹಲವು ಆಯಾಮಗಳಲ್ಲಿ ಪಡೆಯಬೇಕಾಗಿರುವ ಅಗಾಧ ಅಧ್ಯಯನದ ಅರಿವು ಮೂಡುತ್ತದೆ. ಅವರ ನಿಸರ್ಗ ಕಾವ್ಯದಲ್ಲಿ ಅಡಗಿರುವ ಲೌಕಿಕದ ಬದುಕು ಹಾಗೂ ಪಾರಮಾರ್ಥಿಕ ಸಾಧನೆಯ ಅನುಭವ, ವಿಚಾರ-ತಾತ್ವಿಕತೆಗಳನ್ನು ಕನ್ನಡದ ಭಕ್ತಿ ಹಾಗೂ ಅನುಭಾವ ಪರಂಪರೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ಅವಶ್ಯವಾಗಿದೆಯೆಂದು ತಿಳಿಯಲಾಗಿದೆ. ಇದರಿಂದ ಬೇಂದ್ರೆ ನಿಸರ್ಗ

ಕಾವ್ಯದ ಹೊಸ ಫಲಿತಗಳನ್ನು ನಿರೀಕ್ಷಿಸುವುದು, ಅವರ ಪ್ರಕೃತಿ ಕಾವ್ಯದ ಅಧ್ಯಯನವನ್ನು ಮುಂದುವರೆಸುವುದು, ಕಾವ್ಯದ ಓದಿನಿಂದ ದೊರೆಯುವ ಅನುಭೂತಿ ಹಾಗೂ ಕನ್ನಡದ ಸಂಸ್ಕೃತಿ ಪಡೆಯುವ ಹೊಸ ಆಯಾಮವನ್ನು ಲೆಕ್ಕ ಹಾಕುವುದು, ಅನುಭಾವದ ಸಾದೃಶ್ಯಗಳಿಂದ ಬೇಂದ್ರೆ ನಿಸರ್ಗ ಕವಿತೆಗಳ ಹೊಸ ಅರ್ಥಗಳನ್ನು ತಿಳಿಯುವುದು ಮುಂತಾದ ಸಾಹಿತ್ಯಿಕ ಹಾಗೂ ಜೀವನ ಮೌಲ್ಯಗಳ ವರ್ಧನೆಯಾದಂತಾಗುತ್ತದೆಯೆಂದು ನಂಬಲಾಗಿದೆ.

ಅಡಿಟಿಪ್ಪಣಿಗಳು :

೧. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು : ಸಂಪುಟ-೫, ಕ.ಸಾ.ಪ. ಬೆಂಗಳೂರು, ೧೯೮೮.

೨. ಅದೇ.

೩. From Wikipedia, the free encyclopedia, (Internet).

೪. ಇಂಗ್ಲೀಷ-ಕನ್ನಡ ನಿಘಂಟು : ಪು. ೧೬೭೭, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೪.

೫. ಬಿದರಹಳ್ಳಿ ನರಸಿಂಹಮೂರ್ತಿ : 'ಅನುಭಾವ', ಲೇ. ಪು. ೧, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೩, ಹಂಪಿ.

೬. ಶಿವರಾಮ ಕಾರಂತ : 'ಸಿರಿಗನ್ನಡ ಅರ್ಥಕೋಶ', ಪು. ೧೪, ಪ್ರಕಾಶಕ- ಶಿವರಾಮ ಕಾರಂತ, ಪುತ್ತೂರು, ದ.ಕ., ೧೯೪೪.

೭. A.S. Hornby : 'Oxford Adv. Learner's Dictionary of Current English', p. 559, 1987.

೮. Ibid.

೯. ಮೈಸೂರು ವಿ.ವಿ. : ಇಂಗ್ಲೀಷ್-ಕನ್ನಡ ನಿಘಂಟು, ಪು. ೩೪೬೩, ಮೈಸೂರು ವಿ.ವಿ., ಮೈಸೂರು, ೧೯೯೯.

೧೦. ಬಿದರಹಳ್ಳಿ ನರಸಿಂಹಮೂರ್ತಿ : 'ಅನುಭಾವ', ಲೇ. ಪು. ೪, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೩, ಹಂಪಿ.

೧೧. ಹರಿಹರನ ರಗಳೆಗಳು ಸಂ. : ಡಾ. ಎಂ.ಎಂ.ಕಲಬುರ್ಗಿ, ಪು.vii, ಪೀಠಿಕೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೧೨. ಡಾ. ಜಿ.ಎಸ್. ಆಮೂರ : 'ಭುವನದ ಭಾಗ್ಯ', ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೭.

೧೩. ಡಾ. ರಂ.ಶ್ರೀ. ಮುಗಳಿ : 'ಬೇಂದ್ರೆ ಕಾವ್ಯದಲ್ಲಿ ಪ್ರಕೃತಿ', ಲೇ. ಪು. ೧೮೯, ('ಬೇಂದ್ರೆ ಕಾವ್ಯ'-ಸಂ. ಜಿ.ಎಸ್.ಆಮೂರ), ಕ.ಸಾ.ಅ. ಬೆಂಗಳೂರು, ೨೦೦೩.

೧೪. ವಿಜಯಾ ದಬ್ಬೆ : ಬೇಂದ್ರೆಯವರ ಕಾವ್ಯದಲ್ಲಿ ಅನುಭಾವ, ಲೇ. ಪು. ೨೪೪, ('ಬೇಂದ್ರೆ ಕಾವ್ಯ'-ಸಂ. ಜಿ.ಎಸ್.ಆಮೂರ), ಕ.ಸಾ.ಅ. ಬೆಂಗಳೂರು, ೨೦೦೩.

೧೫. ಡಾ. ಗಿರಡ್ಡಿ ಗೋವಿಂದರಾಜ : 'ಕನ್ನಡ ಕಾವ್ಯ ಪರಂಪರೆ ಹಾಗೂ ಬೇಂದ್ರೆ', ('ಬೇಂದ್ರೆ ಕಾವ್ಯ'-ಸಂ. ಜಿ.ಎಸ್.ಆಮೂರ), ಕ.ಸಾ.ಅ. ಬೆಂಗಳೂರು, ೨೦೦೩.

೧೬. ಡಾ. ಗುರುಲಿಂಗ ಕಾಪಸೆ : 'ಬೇಂದ್ರೆಯವರ ಕಾವ್ಯದಲ್ಲಿ ಸಖ್ಯ', ಪು. ೨೭೩, ('ಬೇಂದ್ರೆ ಕಾವ್ಯ'-ಸಂ. ಜಿ.ಎಸ್.ಆಮೂರ), ಕ.ಸಾ.ಅ. ಬೆಂಗಳೂರು, ೨೦೦೩.

೧೭. ಡಾ. ಪ್ರಭುಶಂಕರ : 'ಕನ್ನಡದಲ್ಲಿ ಭಾವಗೀತೆ', ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ಮೂ.ಮು., ೨೦೦೦.

೧೮. ಡಾ. ಡಿ.ಆರ್.ನಾಗರಾಜ್ : 'ಶಕ್ತಿ ಶಾರದೆಯ ಮೇಳ', ಅಕ್ಷರ ಪ್ರಕಾಶನ, ಸಾಗರ, ೧೯೮೭.

೧೯. ಡಾ. ಕೆ.ಆರ್. ಸಿದ್ಧಗಂಗಮ್ಮ : 'ಕನ್ನಡ ಭಾವಗೀತೆಗಳಲ್ಲಿ ಪ್ರಕೃತಿ : ಒಂದು ಅಧ್ಯಯನ', ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಧಾರವಾಡ, ೧೯೯೩.

೨೦. ಡಾ. ಸುಮತೀಂದ್ರ ನಾಡಿಗ : 'ಬೇಂದ್ರೆಯವರ ಸಖಿಗೀತದಲ್ಲಿ ಋತುವರ್ಣನೆ', ಪ್ರಸಾರಾಂಗ, ಕ.ವಿ.ವಿ. ಧಾರವಾಡ, ೨೦೦೦.

೨೧. ಡಾ. ಎಚ್.ಎಸ್. ರಾಘವೇಂದ್ರರಾವ್, 'ಹಾಡೆ ಹಾದಿಯ ತೋರಿತು', ಪು. ೩೦೨, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೯೫.

ಅಧ್ಯಾಯ – ಎರಡು

ಆ ದಿನ ನೆನೆದು – ಬೇಂದ್ರೆ ಜೀವನ ಮತ್ತು ವ್ಯಕ್ತಿತ್ವ

ಅಧ್ಯಾಯ - ೨

ಆ ದಿನ ನೆನೆದು
ಬೇಂದ್ರೆ ಜೀವನ ಮತ್ತು ವ್ಯಕ್ತಿತ್ವ

೨.೧ ಮುತ್ತು ಬಿತ್ತಿ ಮುತ್ತು ಬೆಳೆದ ಕವಿ :

ಬೇಂದ್ರೆಯವರ ಕಾವ್ಯದಂತೆ ಅವರ ಜೀವನದ ವಿವರಗಳು ಕೂಡ ತುಂಬ ಕುತೂಹಲದಿಂದ ಕೂಡಿವೆ. ಪ್ರೀತಿ, ಕರುಣೆ, ಮಾನವೀಯ ಘಳಿಗೆಗಳು ಬೆಸೆದುಕೊಂಡ ಹಾಗೂ ಸಂಕಟ, ನೋವು, ನಲಿವಿನ ಕ್ಷಣಗಳು ಕೂಡಿಕೊಂಡ ಅವರ ಜೀವನದ ಕಥೆ ಸ್ಫೂರ್ತಿದಾಯಕ ಮತ್ತು ಪ್ರೇರಣಾದಾಯಕ ಜೀವನಚರಿತ್ರೆಯಾಗಿದೆ. ಅಲ್ಲಿ ಮಾನವನ ಬದುಕಿನ ದುಃಖ -ದುಮ್ಮಾನ ಮತ್ತು ಸುಖ-ಸಂಭ್ರಮಗಳು ಕಾವ್ಯದ ಲೇಪ ಹಚ್ಚಿಕೊಂಡು ಕುಳಿತಿವೆ.

ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೆ
ನೀಡುವೆನು ರಸಿಕ ! ನಿನಗೆ !
ಕಲ್ಲು ಸಕ್ಕರೆಯಂಥ ನಿನ್ನೆದೆಯು ಕರಗಿದರೆ
ಆ ಸವಿಯ ಹಣಿಸು ನನಗೆ![೧]

ಜೀವನದಲ್ಲಿ ಕಷ್ಟಗಳ ಕಡಲನ್ನೆ ದಾಟಿ ಬಂದರೂ ಬೇಂದ್ರೆ ಮನಸ್ಸನ್ನು ಕಹಿ ಮಾಡಿಕೊಳ್ಳಲಿಲ್ಲ. ಬದಲಾಗಿ ವಿಷಾದ, ಅನುರಾಗಗಳನ್ನು ಉತ್ಕಟ ಕಾವ್ಯವಾಗಿಸಿದರು. ತಮ್ಮನ್ನು ರೂಪಿಸಿದ ನೆಲ-ನೀರು-ಗಾಳಿ-ಬೆಳಕಿನಿಂದ ಪ್ರೇರಣೆ ಪಡೆಯುತ್ತ, ಅಂಬಿಕೆಯ ಮಗನಾಗಿ ಹಂಬಾ ಎನ್ನುತ್ತ ಕಾವ್ಯದ ತಾಯಬೇರು ಅರಸಿ ಹೋದರು.

ಯಾವ ಯೋಗ ನಿದ್ರೆಯಲ್ಲಿ ಏನು ಕನಸು ಕಂಡೆನೋ।
ಯಾರ ಹಾಲನುಂಡೆನೋ ॥
ಈ ವಿಶ್ವಜಾಲದಲ್ಲಿ ಬಂದೆ ಅದಕೆ ಮಿಡುಕುತಾ।
ಅದರ ಧಾರೆ ಹುಡುಕುತಾ ॥[೨]

ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಸಾರಸ್ವತ ಲೋಕಕ್ಕೆ ಪರಿಚಿತರಾದ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರಲ್ಲಿ ಕವಿತ್ವವನ್ನು ಪ್ರಕಾಶಿಸಿದ ಆ ಕಾಲ, ದೇಶಗಳ ವಿವರಗಳಿಗೆ ಅಸಾಮಾನ್ಯತೆಯಿದೆ. ಬಾಲ್ಯದ ಆ ಆಟಗಳಿಗೆ ಮುಗಿಯಲಾರದ ಗುಣವಿದೆ. ಧಾರವಾಡದ ತಾಯಿಯ ಪೋಷಕ ಗುಣಕ್ಕೆ ಅಮರತ್ವವಿದೆ.

ಬದುಕಿನ ಕಷ್ಟಗಳನ್ನು ಕರಗಿಸಿಕೊಳ್ಳುತ್ತಲೆ ಬೇಂದ್ರೆಯವರು ಕಾವ್ಯ ಕಟ್ಟಿದರು. ತಾವು ಹುಟ್ಟಿ ಬೆಳೆದ ಪರಿಸರವನ್ನು ತಮ್ಮ ಕಣ್ಣಾಲಿಯಾಗಿಸಿಕೊಂಡರು. ಶಬ್ದಗಳ ಇಂದ್ರಜಾಲದಿಂದ ಹೊಸತೊಂದು ಕಾವ್ಯಜಗತ್ತನ್ನೆ ನಿರ್ಮಿಸಿದರು.

೧೮೯೬ನೆಯ ಇಸ್ವಿ ಜನವರಿ ತಿಂಗಳ ೩೧ನೆಯ ತಾರೀಖು ಅಂದರೆ ಮನ್ಮಥನಾಥ ಸಂವತ್ಸರದ ಗುರು ಪ್ರತಿಪದೆಯಂದು ಧಾರವಾಡದ ಮಂಗಳವಾರ ಪೇಟೆಯ ಪೋತನೀಸ ಓಣಿಯ ಗುಣಾರಿ ಎನ್ನುವವರ ಮನೆಯಲ್ಲಿ ಬೇಂದ್ರೆಯವರ ಜನನವಾಯಿತು. ತಾಯಿ ಅಂಬವ್ವ ಮತ್ತು ಅಜ್ಜಿ ಗೋದೂಬಾಯಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಗಂಡಮಾಲಿ ಕಾಯಿಲೆಯಿಂದ ಬಳಲುತ್ತಿದ್ದ ತಂದೆ ರಾಮಚಂದ್ರರಿಗೂ ಚೊಚ್ಚಿಲು ಮಗನ ಆಗಮನ ಖುಷಿಯನ್ನು ತಂದಿತ್ತು.

ಬೇಂದ್ರೆ ಮನೆತನದ ಹಿಂದಿನ ತಲೆಮಾರಿನವರು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯಿಂದ ಬಂದವರೆಂದು ತಿಳಿದುಬರುತ್ತದೆ. ಕುಂಭಾರು ಎಂಬ ಊರಿನಿಂದ ಕೇಳಶಿ ಗ್ರಾಮಕ್ಕೆ ವಲಸೆ ಹೋಗಿ ಅಲ್ಲಿಂದ ನಾಶಿಕ, ತಾಸಗಾಂವಕ್ಕೆ ಬಂದು ನಂತರ ಕರ್ನಾಟಕದ ಶಿರಹಟ್ಟಿಗೆ ಸ್ಥಳಾಂತರ ಮಾಡಿದರು. ಬೇಂದ್ರೆಯವರ ಅಜ್ಜನ ಹೆಸರು ಅಪ್ಪಾಭಟ್ ಎಂದಿತ್ತು. 'ಅಪ್ಪಾಭಟ್‌ರಿಗೆ ಇಬ್ಬರು ಮಕ್ಕಳು - ರಾಮಚಂದ್ರ (ತಾತಂಭಟ) ಇವರೆ ಬೇಂದ್ರೆಯವರ ತಂದೆ ಮತ್ತು ಬಂಡೋಪಂತ. ತಾತಂಭಟರು ಅಪ್ಪಾಭಟರ ಮಾರ್ಗದರ್ಶನದಲ್ಲಿ ವೇದಾಧ್ಯಯನ ಮಾಡಿ ವೈದಿಕ ವೃತ್ತಿಯಲ್ಲಿ ಶಿರಹಟ್ಟಿಯಲ್ಲಿ ಉಳಿದುಕೊಂಡರು. ಬಂಡೋಪಂತರು ಮ್ಯಾಟ್ರಿಕ್‌ವರೆಗೆ ವಿದ್ಯಾಭ್ಯಾಸ ಮುಗಿಸಿಕೊಂಡು ಪುಣೆಯಲ್ಲಿ ಮಿಲಿಟರಿ ಅಕೌಂಟ್ಸ್ ಖಾತೆಯಲ್ಲಿ ಸೇರಿದರು. ಬಂಡೋಪಂತರಿಗೆ ಮಕ್ಕಳಾಗಲಿಲ್ಲ. ಅವರು ತಮ್ಮ ಸಂಪೂರ್ಣ ಜೀವನವನ್ನು ಪುಣೆಯಲ್ಲಿಯೇ ಕಳೆದರು. ತಾತಂಭಟರಿಗೆ ಶಿರಸಿಯ ಒಂದು ಹೆಣ್ಣು ತಂದು ಮದುವೆ ಮಾಡಿದರು. ಆಕೆ ಬೇಗನೆ ತೀರಿಕೊಂಡಳು. ಆನಂತರ ತಲವಾಯಿಯಲ್ಲಿ ಹುಟ್ಟಿ, ಧಾರವಾಡದಲ್ಲಿ ತಾಯಿಯ ಮನೆಯಲ್ಲಿ ಬೆಳೆದ ಅಂಬವ್ವ (ಅಂಬಿಕಾ) ಮತ್ತು ತಾತಂಭಟರ ವಿವಾಹವಾಯಿತು. ಅಂಬಿಕಾ (ಪಾರ್ವತಿ) ಮತ್ತು ತಾತಂಭಟರಿಗೆ ನಾಲ್ಕು ಮಕ್ಕಳು - ದತ್ತಾತ್ರೇಯ, ಚಿದಂಬರ, ರಾಘು ಮತ್ತು ಕೃಷ್ಣಾ, ದತ್ತಾತ್ರೇಯ ಧಾರವಾಡದಲ್ಲಿ ಮತ್ತು ಕೃಷ್ಣ ಪುಣೆಯಲ್ಲಿ ಉಳಿದರು. ಚಿದಂಬರ ಮತ್ತು ರಾಘು ಬೇಗನೆ ತೀರಿಕೊಂಡರು.'[೩]

ಇದು ಬೇಂದ್ರೆಯವರ ಅಪ್ಪ-ಅಜ್ಜನ ಕಡೆಯ ಕಥೆಯಾದರೆ ತಾಯಿ ಅಂಬವ್ವನ ಬಳಗದ ವಾತ್ಸಲ್ಯ ಬೇಂದ್ರೆಯವರನ್ನು ಚಿಕ್ಕಂದಿನಲ್ಲಿ ಹೆಚ್ಚು ಪೊರೆದಿತ್ತು. ಮೂಲತಃ ನರಗುಂದದವಳಾದ ಗೋದೂಬಾಯಿ (ಬೇಂದ್ರೆಯವರ ತಾಯಿಯ ತಾಯಿ) ಹೆಬ್ಬಳ್ಳಿಯ ಕೃಷ್ಣಾಜಿಪಂತ ನಾತು ಅವರನ್ನು ಮದುವೆಯಾಗಿದ್ದಳು. ಬಡತನದ ಕಷ್ಟ ಕಾರ್ಪಣ್ಯದಲ್ಲಿ ಬೆಳೆದವಳಿಗೆ ಮಕ್ಕಳು ಕೂಡ ಹೆಚ್ಚೆ. ಆದರೆ ಉಳಿದವರು ಮಾತ್ರ ಮೂವರು ಹೆಣ್ಣುಮಕ್ಕಳು. ೧೮೭೮ ರ ಸುಮಾರಿಗೆ ಗಂಡ ಕೃಷ್ಣಾಜಿಪಂತ ತೀರಿಕೊಂಡಾಗ ಗೋದೂಬಾಯಿ ನಾಲ್ಕು ತಿಂಗಳ ಗರ್ಭಿಣಿ. ಹೆಬ್ಬಳ್ಳಿಯ ತಲವಾಯಿಯ ಒಬ್ಬ ಬಡಿಗೇರರ ಮನೆ ಅವಳಿಗೆ ಆಶ್ರಯವಾಗಿ ಅವರ ಮನೆಯ ಗೋದಲೆಯಲ್ಲಿ ಅಂಬವ್ವನಿಗೆ ಜನ್ಮವಿತ್ತಳು. ತಮ್ಮ ಅಜ್ಜಿಯನ್ನು ಬೇಂದ್ರೆ ಹೀಗೆ ನೆನಪಿಸಿಕೊಳ್ಳುತ್ತಾರೆ. 'ನನ್ನ ತಾಯಿಯ ತಾಯಿ ಗೋದೂಬಾಯಿ ಒಳ್ಳೆಯ ಧೈರ್ಯದ ಹೆಣ್ಣುಮಗಳು. ಆಕೆಯ ತವರುಮನೆ ನರಗುಂದದ ದೀಕ್ಷಿತರದು. ಆಕೆಯ ಜೀವನದ ಕಷ್ಟದ ಕಥೆ ನೆನೆಸಿದಂತೆಲ್ಲ ಆಕೆ ಮಹಾತಪಸ್ವಿನಿ ಎಂದೇ ಭಾಸವಾಗುವುದು...

ನಮ್ಮ ಅಜ್ಜಿ ತಲವಾಯಿಯ ಒಬ್ಬ ಬಡಿಗರ ಮನೆಯ ಗೋದಲೆಯಲ್ಲಿ ನಮ್ಮ ತಾಯಿಯನ್ನು ಹಡೆದಳಂತೆ. ಆಕೆಯ ಹೊಟ್ಟೆಯಲ್ಲಾದ೧೬-೧೭ ಮಕ್ಕಳಲ್ಲಿ ಕೊನೆಗೆ ಉಳಿದದ್ದು ಎರಡು ಹೆಣ್ಣು. ಅದರ ಮೇಲೆ ನಮ್ಮ ತಾಯಿ ಇನ್ನೊಂದು ಹೆಣ್ಣು.’[೪]

ಕಣ್ಣಿನ ಕೊನೆ ಮುತ್ತು, ಹೃದಯದ ಒಳತುತ್ತು
ಸಿಂಪಿ ಬಾಳಿದ ಹಾಗೆ ಬಾಳಿದಳು
ಆಳಾಗಿ ದುಡಿದರು ಅರಸಾಗಿ ಉಂಡಳು
ಬಂದ ಭೋಗಕ್ಕೆಲ್ಲ ತಾಳಿದಳು[೫]

ತನ್ನ ಗಂಡ ತೀರಿಕೊಂಡ ಮೇಲೆ ಗೋದೂಬಾಯಿ ತಲವಾಯಿಯಲ್ಲಿ ಪಡಬಾರದ ಕಷ್ಟ ಪಟ್ಟಳು. ಬಂಧು ಬಳಗದವರಾರೂ ಸಹಾಯಕ್ಕೆ ಬರಲಿಲ್ಲ. ಅದಕ್ಕಾಗಿ ಆಕೆ ತನ್ನ ಮೂವರೂ ಹೆಣ್ಣುಮಕ್ಕಳನ್ನು ಕಟ್ಟಿಕೊಂಡು ಧಾರವಾಡಕ್ಕೆ ಬಂದಳು. ಉಪಜೀವನಕ್ಕಾಗಿ ಒಂದು ಖಾನಾವಳಿ ತೆಗೆದಳು. ಚಿದಂಬರ ಸ್ವಾಮಿಗಳ ಭಕ್ತಳಾಗಿದ್ದ ಗೋದೂಬಾಯಿಯ ಖಾನಾವಳಿಗೆ ಗೋಂದವಲೇಕರ ಬ್ರಹ್ಮಚೈತನ್ಯ ಗುರುಗಳ ಭಕ್ತರು ಹೆಚ್ಚಾಗಿ ಬರುತ್ತಿದ್ದರು. ನರಗುಂದದ ಅಂತಹ ಒಬ್ಬ ಭಕ್ತರಿಗೆ ತನ್ನ ಒಬ್ಬ ಮಗಳನ್ನು, ಭತಕುಣಿಕೆಯ ಛತ್ರೆ ಎನ್ನುವವರಿಗೆ ಮತ್ತೊಬ್ಬ ಮಗಳನ್ನೂ ಹಾಗೂ ಕೊನೆಯ ಮಗಳು ಅಂಬವ್ವನನ್ನು ಶಿರಹಟ್ಟಿಯ ರಾಮಚಂದ್ರರಿಗೆ ಕೊಟ್ಟು ಮದುವೆ ಮಾಡಿದಳು. ತಾಯಿಯ ಸಂಸ್ಕಾರದಿಂದ ಅಂಬಿಕೆಗೂ ಗೋಂದವಲೇಕರ ಮಹಾರಾಜರಲ್ಲಿ ಭಕ್ತಿ ಹುಟ್ಟಿತ್ತು. ಅವರ ಭಾವಚಿತ್ರವನ್ನು ಆಕೆ ತಪ್ಪದೆ ಪೂಜಿಸುತ್ತಿದ್ದಳು. ಅಜ್ಜಿ ಮತ್ತು ತಾಯಿಯ ಗೋಂದಾವಲಿಯ ಎಳೆಗಳು ಬೇಂದ್ರೆ ಕಾವ್ಯದಲ್ಲಿ ಅಭಿವ್ಯಕ್ತಿ ಪಡೆಯುವುದು ತಪ್ಪುವುದಿಲ್ಲ.

ಸದ್ಗುರುನಾಥನ, ಶ್ರದ್ಧಾರ್ಥಜಾತನ,
ಆರ್ತಾರ್ತಿಪ್ರೀತನ ನೆನೆಸಿದಳು.
ಗಾಳಿಯಲಿ ನಡೆದಾಡಿ ಮೇಲು ಚಿಕ್ಕೆಯ ನೋಡಿ
ಕೊನೆಗಳಿಗೆ ಗೆದ್ದಳು ಎನಿಸಿದಳು.[೬]

* * *

ಗೋದಲೆಗೆ ಬಾ ಗೋದು ಹೇ
ಗೋಂದಾವಲಿಗೆ ಹಂಬಾ ತಂದಿಹೇ
ದಿನಾದಿನಾ ಮುಂದಿನಾ
ನಾಮಾ ರೂಪಾ ಹೊಂದಿ ನಾ
ತಂದಿ ನಾ ತಂದಿಹೇ ।।[೭]

ಭಕ್ತಿ, ಉಪವಾಸ, ನೇಮ, ಭಗವಂತನ ಸೇವೆ, ಶ್ರದ್ಧೆಯಂತಹ ಆಧ್ಯಾತ್ಮಿಕ ಎಳೆಗಳು ಬೇಂದ್ರೆಯವರ ಬಾಲ್ಯದಲ್ಲಿ ಪ್ರಭಾವ ಬೀರಿದ ಕಾರಣ ಸಹಜವಾಗಿ ಅವರು ಹಿಡಿದ ಮಾರ್ಗ ಭಕ್ತಿಪಂಥದ್ದಾಗಿತ್ತು. ಅಜ್ಜಿಯ ಮತ್ತು ತಾಯಿಯ ಕಷ್ಟಗಳು ಅವರನ್ನು ಹೇಗೆ ತಪಸ್ವಿನಿಯರಂತೆ ಮಾಡಿದವೋ ಅದೇ ತರಹ ಬೇಂದ್ರೆಯವರು ಕೂಡ ಲೌಕಿಕದ ಹೊಡೆದಾಟಗಳೊಂದಿಗೆ ಮತ್ತು ಧಾರವಾಡದ ಕಾಮನಕಟ್ಟೆಯ ಮುಗಿಯದ ಜಗಳಗಳೊಂದಿಗೆ ಅಲೌಕಿಕತೆಯನ್ನು ಮೆರೆದರು. ಅಂಬವ್ವ ಮತ್ತು ಗಂಡ ರಾಮಚಂದ್ರ ಗೋಂದಾವಲಿಗೆ ಹೋಗಿ ಗುರುಗಳ ದರ್ಶನ ಪಡೆದ ನಂತರ ಅವರಿಗೆ ಚೊಚ್ಚಿಲ ಮಗನ ಜನ್ಮವಾಯಿತು. ಆತನಿಗೆ ಅವರು ದತ್ತಾತ್ರೇಯನೆಂದು ಹೆಸರಿಟ್ಟರು. ಮಗ ದತ್ತಾತ್ರೇಯ ಹುಟ್ಟಿದ ಸಂಭ್ರಮ ಒಂದು ಕಡೆಯಾಗಿದ್ದರೆ, ಗಂಡ ರಾಮಚಂದ್ರನಿಗೆ ಗಂಡಮಾಲೆ ಕಾಯಿಲೆ ಪ್ರಾರಂಭವಾಗಿದ್ದ ನೋವು ಅಂಬಿಕೆಯನ್ನು ಮತ್ತೊಂದು ಕಡೆಗೆ ಕಾಡುತ್ತಿತ್ತು. ಅಜ್ಜಿ ಗೋದೂಬಾಯಿ, ತಾಯಿ ಅಂಬಿಕೆ ಬೇಂದ್ರೆಯವರ ಮನೆಗೆ ಆಧಾರಸ್ಥಂಭವಾಗಿದ್ದರು.

ಬೇಂದ್ರೆಯವರು ತಮ್ಮ ಬಾಲ್ಯವನ್ನು ಅಪರಿಮಿತ ಉತ್ಸಾಹದಿಂದ ಕಳೆದರು. ಧಾರವಾಡದ ಕಾಮನಕಟ್ಟೆಯ ಓಣಿಯೆನ್ನುವುದು ಅವರಿಗೆ ಎಲ್ಲವನ್ನೂ ತಂದುಕೊಟ್ಟಿತು. ಶಾಲೆಯಲ್ಲಿ ಅವರು ಕಲಿತದ್ದಕ್ಕಿಂತ ಹೊರಗಡೆ ಕಲಿತದ್ದೆ ಹೆಚ್ಚು. ಸಾಮಾನ್ಯರಲ್ಲಿ ಅತಿ ಸಾಮಾನ್ಯನಂತೆ ಬಾಲಕ ದತ್ತಾತ್ರೇಯ ಶಾಲೆಗೆ ಹೋಗುತ್ತಿದ್ದ, ಬರುತ್ತಿದ್ದ. ಆದರೆ ಪುಸ್ತಕ ಓದುವ ಗೀಳು ಮಾತ್ರ ಆತನನ್ನು ದೊಡ್ಡ ಓದುಗನನ್ನಾಗಿ ಮಾಡಿತು. ಕನ್ನಡ, ಮರಾಠಿ, ಇಂಗ್ಲೀಷ್, ಸಂಸ್ಕೃತ ಗ್ರಂಥಗಳನ್ನು ಓದುವುದು; ಭಕ್ತಿ ರಚನೆ, ಕೀರ್ತನೆ ಮತ್ತು ಪುರಾಣ ಪುಣ್ಯಕಥೆಗಳನ್ನು ತಾಯಿಗೆ ಓದಿ ಹೇಳುವುದು ಬೇಂದ್ರೆಗೆ ಖುಷಿ ಕೊಡುವ ಸಂಗತಿಗಳಾಗಿದ್ದವು. ವಾಚನಾಲಯಗಳಲ್ಲಿ ಓದುತ್ತ ಕುಳಿತರೆ ಸಮಯ ಸರಿದುಹೋದದ್ದೇ ಗೊತ್ತಾಗುತ್ತಿರಲಿಲ್ಲ. ಅದರ ಜೊತೆಗೆ ಧಾರವಾಡದ ಕಾಮನಕಟ್ಟಿ ಮತ್ತು ಸುತ್ತಮುತ್ತಲಿನ ಓಣಿಗಳ ಜನಜೀವನದ ಸಂಪರ್ಕ ಬೇಂದ್ರೆಯ ಅನುಭವವನ್ನು ಹಿಗ್ಗಿಸುತ್ತಿತ್ತು. ವಿವಿಧ ಹಬ್ಬ-ಹರಿದಿನ, ಬಯಲಾಟ, ಸೋಗು ಹಾಕುವುದು, ದುರ್ಗಮುರ್ಗಿಯವರ ಆಟ ಮುಂತಾದವು ಅವರ ಮನಸ್ಸಿನಲ್ಲಿ ಗೆರೆ ಕೊರೆದಂತೆ ಉಳಿದುಬಿಟ್ಟವು. ತತ್ವಪದ, ಭಜನೆಪದ, ಹೆಣ್ಣುಮಕ್ಕಳ ಸಂಪ್ರದಾಯದ ಪದ, ಸೋಬಾನೆ, ಜೋಗುಳಪದ, ಕವಲೆತ್ತಿನ ಆಟ ಅವರನ್ನು ಸೆರೆ ಹಿಡಿದವು. ಬೇಂದ್ರೆಯವರಿಗೆ ಅನುಕೂಲಕರವಾಗಿದ್ದ ಮತ್ತೊಂದು ಸಂಗತಿಯೆಂದರೆ ಬಾಲ್ಯದಲ್ಲಿ ಅವರು ಅನುಭವಿಸಿದ ಅಪರಿಮಿತ ಸ್ವಾತಂತ್ರ್ಯ. ತಾಯಿಗೆ ದತ್ತಾತ್ರೇಯ ಆಡಿ ಬರುವುದು, ಪುಸ್ತಕ ಓದುವುದು, ಗೆಳೆಯರ ಜೊತೆ ರಮಣೀಯವಾದ ಪ್ರಕೃತಿಯಲ್ಲಿ ಹಣ್ಣು-ಹಂಪಲ ತಿಂದು ಬರುವುದು ಸಂತೋಷ ಕೊಡುತ್ತಿತ್ತು. ಒಟ್ಟಿನಲ್ಲಿ ಮಗ ಚೆಂದಾಗಿ ಬೆಳೆದರೆ ಸಾಕು ಎನ್ನುವ ಭಾವ ತಾಯಿಯಲ್ಲಿತ್ತು. ಮಗ ಕೂಡ ಪೆಟ್ಟು ಕೊಡದೆ ತಾಯಿಯ ಮಾತೃವಾತ್ಸಲ್ಯದ ಪರಿಧಿಯನ್ನು ಬಿಟ್ಟು ಹೋಗಲಿಲ್ಲ.

ಎಳೆತನದ ಹುಡುಗಾಟಗಳ ನಡುವೆಯೆ ಕನ್ನಡ ಭಾಷೆಗೆ ಮರಾಠಿಯಿಂದ ಒದಗಿದ ದುರವಸ್ಥೆ ಕಂಡು ಈ ಭಾಗದಲ್ಲಿ ಕನ್ನಡ ಪುನರುಜ್ಜೀವನದ ಕೆಚ್ಚು ಬೇಂದ್ರೆಯವರಲ್ಲಿ ಮೂಡಿತು. ಅದೇ ಆಗ ಧಾರವಾಡದಲ್ಲಿ ಕರ್ನಾಟಕ

ಆಂದೋಲನದ ಗಾಳಿ ಪ್ರಬಲವಾಗತೊಡಗಿತ್ತು. ವಿದ್ಯಾವರ್ಧಕ ಸಂಘ ಬೇಂದ್ರೆಯವರಿಗೆ ಪ್ರಿಯವಾಗತೊಡಗಿತ್ತು. ಸ್ವಾತಂತ್ರ್ಯ ಆಂದೋಲನದ ಹುಮ್ಮಸ್ಸು ಕೂಡ ಮೈದುಂಬಿಕೊಳ್ಳತೊಡಗಿತು. ೧೯೧೦ ರಲ್ಲಿ ಪುಣೆಯ ತಮ್ಮ ಕಕ್ಕನ ಮನೆಗೆ ಹೋಗಿ ಬಂದರು. ಅಲ್ಲಿಯ ಸ್ವಾತಂತ್ರ್ಯ ಹೋರಾಟ, ಸಾಹಿತ್ಯಿಕ ವಾತಾವರಣ ಬೆಳೆಯುತ್ತಿದ್ದ ಬೇಂದ್ರೆಯಲ್ಲಿ ಒಂದು ನಿರ್ದಿಷ್ಟ ಗುರಿಯನ್ನು ಮೂಡಿಸಿದವು.

ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಓದುತ್ತಿದ್ದ ಬೇಂದ್ರೆಯವರು ೧೯೧೩ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಯನ್ನು ಪಾಸಾದರು. ಆದರೆ ಆ ಸಂಭ್ರಮವನ್ನು ಹೇಳಿಕೊಳ್ಳಲು ತಾಯಿ-ಮಗನಿಗೆ ಊರುಗೋಲಾಗಿದ್ದ ಅಜ್ಜಿ ಗೋದುಬಾಯಿ ಬದುಕಿರಲಿಲ್ಲ. ಬೇಂದ್ರೆಯವರು ಮುಂದೆ ಕಲಿಯಲು ಇದ್ದ ಒಂದೇ ಒಂದು ಆಶಾಕಿರಣವೆಂದರೆ ಪುಣೆಯಲ್ಲಿದ್ದ ಅವರ ಚಿಕ್ಕಪ್ಪ ಬಂಡೋಪಂತರು. ತಮ್ಮ 'ಸಾಹಿತ್ಯದ ವಿರಾಟ ಸ್ವರೂಪ'ದಲ್ಲಿ ಚಿಕ್ಕಪ್ಪನ ನೆರವನ್ನು ಬೇಂದ್ರೆ ಹಲವು ಸಲ ನೆನೆಸಿಕೊಳ್ಳುತ್ತಾರೆ. 'ನಮ್ಮ ಅಜ್ಜ-ಮುತ್ತಜ್ಜಂದಿರ ಪುಣ್ಯವೆಲ್ಲ ನಮ್ಮ ಇನ್ನೊಬ್ಬ ಚಿಕ್ಕಪ್ಪ ಬಂಡೋಪಂತರ ಬೆನ್ನಿಗೆ ನಿಂತು, ಬೇಂದ್ರೆಯವರ ಬಡಕುಟುಂಬಕ್ಕೆ ಅವರು ಆಧಾರಸ್ತಂಭರಾದರು. ನನ್ನ ಬಿ.ಎ. ವರೆಗಿನ ಅಭ್ಯಾಸ ನಮ್ಮ ಚಿಕ್ಕಪ್ಪನ ಆಶ್ರಯದಲ್ಲಿ ಪೂನಾ ಫರ್ಗ್ಯೂಸನ್ ಕಾಲೇಜಿನಲ್ಲಾಯಿತು. ನಾನು ಬಿ.ಎ. ಪಾಸು ಮಾಡಿದ ಮೇಲೆ ೧೫ ವರ್ಷದ ಅನಂತರ ದೈವಯೋಗದಿಂದ ಪೂನಾದ ಆಶ್ರಯ ಮಾಡಬೇಕಾಯಿತು. ೨ ವರ್ಷಗಳಲ್ಲಿ ಎಂ.ಎ. ಮಾಡಿದೆ ಚಿಕ್ಕಪ್ಪನ ಹರಕೆಯಿಂದ. ನನ್ನ ಎಂ.ಎ. ರಿಜಲ್ಟು ಆಗುವುದರೊಳಗಾಗಿ ಅವರು ಇಹಲೋಕ ಬಿಟ್ಟರು.'[೮]

ಒಂದಾದ ಮೇಲೊಂದರಂತೆ ಸಾವು, ನೋವು ಕಾಡುತ್ತಿದ್ದರೂ ಅದರಿಂದ ಧೃತಿಗೆಡದೆ ಜೀವನ ಸಾಗರವನ್ನು ಬೇಂದ್ರೆ ಈಜಿದರು. ಅಜ್ಜಿಯ ಸಾವು, ಚಿಕ್ಕಪ್ಪನ ಸಾವು, ತಾಯಿಯ ಸಾವು ಕೊನೆಗೆ ಎದೆಯೆತ್ತರ ಬೆಳೆದ ಮಗನ ಸಾವು, ಚಿಕ್ಕ ಮಕ್ಕಳ ಸಾವು ಎಲ್ಲವನ್ನೂ ಸವಾಲಾಗಿ ಸ್ವೀಕರಿಸಿದರು. ಬಾಳ ಕಡಲಿನಲ್ಲಿ ಹುಟ್ಟು ಹಾಕುವುದನ್ನು ಮಾತ್ರ ಅವರು ನಿಲ್ಲಿಸಲಿಲ್ಲ. 'ಜೀವನವೆಂಬುದನ್ನು ಬಿಟ್ಟು ಸಾವು ಬೇರೆ ಇಲ್ಲ. ಸಾವನ್ನು ಸಾವಾಗಿ, ಜೀವನವನ್ನು ಜೀವನವನ್ನಾಗಿ ಕಾಣುವುದೇ ಚೆಲುವು, ನೋಡುವುದೇ ಒಲವು.'[೯] ಬದುಕಿನ ದುರ್ಭರ ಪ್ರಸಂಗಗಳಲ್ಲಿಯೂ ಅವರು ಚೆಲುವು-ಒಲವನ್ನು ಹೆಕ್ಕಿ ಆಯ್ದುಕೊಂಡರು. ಅನುಭಾವಿ-ಸಂತರ ಕೃತಿಗಳನ್ನು ಓದುವುದರ ಮೂಲಕ ಅವರು ಆ ಸ್ಥಿತಪ್ರಜ್ಞೆಯನ್ನು ಬೆಳೆಸಿಕೊಂಡರು.

ಬದುಕಿನಲ್ಲಿ ಯಾವ ದುರಂತಕ್ಕೂ ಅಂಜಬಾರದೆನ್ನುವ ಧೈರ್ಯದ ಗುಣವನ್ನು ಬೇಂದ್ರೆಯವರು ಅಜ್ಜಿ ಗೋದೂಬಾಯಿ ಮತ್ತು ತಾಯಿ ಅಂಬಿಕೆಯಿಂದ ಕಲಿತಿದ್ದರು. ಸ್ವಾಭಿಮಾನ ಮತ್ತು ವಿನಯವನ್ನು ಕೂಡ ಅವರು ತಾಯಿಯಿಂದ ಬಳುವಳಿಯಾಗಿ ಪಡೆದಿದ್ದರು. ಕುಟುಂಬ ತಮ್ಮ ಮೇಲೆ ಹರಿಸಿದ ಪ್ರೇಮದಿಂದ ವಾತ್ಸಲ್ಯದ ಮಹಾಪೂರವೆ ಅವರ ಕವಿತೆಗಳಲ್ಲಿ ಹರಿದು ಬಂದಿತು.

ಮುತ್ತು ಬಿತ್ತಿ ಮುತ್ತು ಬೆಳೆದೆ

ಮಾತೆ, ಚಿತ್ತದಲ್ಲಿಯೂ

ನನ್ನ ಸುತ್ತಲೆಲ್ಲಿಯೂ

....

ಚಿಕ್ಕೆಗಳಲಿ ಹೂವುಗಳಲಿ

ಒಂದು ಸ್ಪಂದಿಸುತ್ತಿದೆ

ಅದುವೆ ಜಗವ ಮುತ್ತಿದೆ

ಈ ವಿನೋದ

ವಿಮಲ ಬೋಧ

ಜೀವ ಮೋದವಾಗಿದೆ

ಬಾಳು ಅರಳಿ ಬಂದಿತು

ತನ್ನ ಮರಳಿ ಹೊಂದಿತು

ತಾನು ಬಾನು ಆಗಿರೆ[೧೦]

ಬೇಂದ್ರೆಯವರಿಗೆ ಪ್ರೇರಣೆ ನೀಡಿದ ಸಂಗತಿಗಳು, ಗೆಳೆಯರ ಗುಂಪು, ಭೂಮಿತಾಯಿ-ಹೆತ್ತತಾಯಿ, ಧಾರವಾಡದ ತಾಯಿ, ಆಧ್ಯಾತ್ಮಿಕ ತಾಯಿ ಹೀಗೆ ತಾಯಿಯೆಂಬ ತತ್ವ ಅವರಲ್ಲಿ ನಿರೂಪಿತವಾದ ಬಗೆ ಮುಂತಾದವುಗಳನ್ನು ಮುಂದಿನ ಅಧ್ಯಾಯಗಳಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಅವರ ಜೀವನದ ಪ್ರಮುಖ ವ್ಯಕ್ತಿಗತ ವಿವರಗಳ ಮೇಲೆ ಮಾತ್ರ ಈ ಅಧ್ಯಾಯ ಬೆಳಕು ಚೆಲ್ಲುತ್ತದೆ. ಒಮ್ಮೊಮ್ಮೆ ಸಂಕ್ಷೇಪವಾಗಿ ಬಂದು ಹೋಗುವ ಸಂಗತಿಗಳು ಮುಂದಿನ ಅಧ್ಯಾಯಗಳಲ್ಲಿ ಸಂದರ್ಭಕ್ಕನುಗುಣವಾಗಿ ಹೆಚ್ಚಿನ ವಿವರಗಳೊಂದಿಗೆ ಬರುವುದರಿಂದ ಅದು ವಿಷಯದ ಪುನರಾವರ್ತನೆಯಾಗದೆ ಹೆಚ್ಚು ಹೆಚ್ಚು ಅರ್ಥೈಸುವ, ಅಧ್ಯಯನವನ್ನು ವಿಸ್ತರಿಸುವ, ನಿದರ್ಶನಗಳೊಂದಿಗೆ ವಿವರಿಸುವ ಪ್ರಯತ್ನವಾಗಿದೆ.

೧೯೧೪ ರಿಂದ ೧೯೧೮ ರ ವರೆಗೆ ಬೇಂದ್ರೆಯವರು ಪೂನಾದ ತಮ್ಮ ಕಾಕಾನ ಮನೆಯಲ್ಲಿದ್ದುಕೊಂಡು ಓದಿದರು. ನಡುನಡುವೆ ಧಾರವಾಡಕ್ಕೆ ಬಂದು ಹೋಗುವುದು ನಡೆದಿತ್ತು. ಪೂನಾ ಹಾಗೂ ಧಾರವಾಡಗಳಲ್ಲಿ ಗೆಳೆಯರ ಮುಂದೆ ಕವಿತಾ ವಾಚನ ನಡೆದಿತ್ತು. ೧೯೧೭ ರಲ್ಲಿ ರಜೆಗೆ ಎಂದು ಧಾರವಾಡಕ್ಕೆ ಬಂದಾಗ ಕನ್ಯಾ ಪರೀಕ್ಷೆ ನಡೆಯಿತು. ನರಗುಂದಕ್ಕೆ ಹೋಗಿ ಲಕ್ಷ್ಮೀಬಾಯಿಯನ್ನು ನೋಡಿದರು. ಮದುವೆಯ ಬಗ್ಗೆ ತಾಯಿಯೊಂದಿಗೆ ಹೆಚ್ಚಿಗೆ ಚರ್ಚಿಸದೆ ಬಿ.ಎ. ಕೊನೆಯ ವರ್ಷವೆಂದು ಪರೀಕ್ಷೆಯ ಕಡೆಗೆ ಗಮನ ಕೊಟ್ಟರು. ೧೯೧೮ ರಲ್ಲಿ ಬಿ.ಎ. ಮುಗಿಯಿತು. ಅಷ್ಟರಲ್ಲಿ ನವಕವಿಯೆಂದು ಪ್ರಸಿದ್ಧರಾಗಿದ್ದ ತರುಣ ಬೇಂದ್ರೆಯವರನ್ನು ಧಾರವಾಡ ಕೈಬೀಸಿ

ಕರೆಯಿತು. ತಾವು ಕಲಿತ ವಿಕ್ಟೋರಿಯಾ ಹೈಸ್ಕೂಲಿನಲ್ಲಿಯೇ ಅವರು ಶಿಕ್ಷಕರಾಗಿ ನೇಮಕವಾದರು. ಆ ವರ್ಷವೆ ಧಾರವಾಡದ ಸಾಹಿತ್ಯ ಸಮ್ಮೇಳನದಲ್ಲಿ 'ಕೋಗಿಲೆ' ಎನ್ನುವ ತಮ್ಮ ಕವಿತೆಯನ್ನು ಓದಿ ಜನರ ಮನಸೂರೆಗೊಂಡರು. ಈ ಸಮಯದಲ್ಲಿಯೆ ಬೇಂದ್ರೆ ಮತ್ತು ಅವರ ಗೆಳೆಯರೆಲ್ಲ ಸೇರಿಕೊಂಡು ಕಟ್ಟಿದ್ದ ಗೆಳೆಯರ ಗುಂಪು ಕೂಡ ಗರಿಬಿಚ್ಚಿ ಹಾರತೊಡಗಿತ್ತು. ಸ್ನೇಹಿತರಲ್ಲಿ ಸಾಹಿತ್ಯದ ಗಂಧ-ಗಾಳಿ ಸೂಸುತ್ತಿತ್ತು.

೨.೨ 'ಗಂಗೆಯ ಕಷ್ಟವು ಗೌರಿಗೆ ತಿಳಿಯದು' :

ಶಿಕ್ಷಕ ವೃತ್ತಿಯ ಭದ್ರ ನೆಲೆ ಸಿಕ್ಕ ಮೇಲೆ ಬೇಂದ್ರೆಯವರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಮೂಲತಃ ಹಾವೇರಿಯ ಜೋಗಳೇಕರ ಮನೆತನದವರಾಗಿದ ಲಕ್ಷ್ಮೀಬಾಯಿಯನ್ನು ೧೯೧೯ ರಲ್ಲಿ ಮದುವೆಯಾದರು. ಕವಿಯ ಸುಖ-ದುಃಖಗಳಲ್ಲಿ ಭಾಗಿಯಾಗಲೆಂದು ಲಕ್ಷ್ಮೀಬಾಯಿ ಸಖನಿಗೆ ಮಾಲೆ ಹಿಡಿದು ನಿಂತಿದ್ದರು.

ಅಂತಃಪಟದಾಚೆ ವಿಧಿ ತಂದ ವಧು ನೀನು
ಮಾಲೆಯ ಸಾವರಿಸಿ ನಿಂತಿದ್ದೀಯೆ[೧೧]

ಜೀವನದ ಗೆಳತಿಯನ್ನು ಹೆಂಡತಿಯ ರೂಪದಲ್ಲಿ ದೈವ ತಂದುಕೊಟ್ಟಿದೆ. ಮದುವೆ ತಂದಿರುವ ಗಂಡು-ಹೆಣ್ಣಿನ ಪ್ರಣಯದಾಟ ದೈವಕೃಪೆಯಿಂದ ಚಿಗುರಬೇಕು.

ಏನು ಸಂಭ್ರಮವದು! ಹರೆಯದ ಹಬ್ಬವು
ಕನಸು ಮನಸೂ ಹೆಣೆದು ಬೆಳೆ ಬೆಳೆದವೇ[೧೨]

'ಸಖಿಗೀತ'ದ ಈ ಸಾಲುಗಳು ಬೇಂದ್ರೆಯವರ ಬದುಕಿನ ಸುಖದ ಕ್ಷಣಗಳನ್ನು ಚಿತ್ರಿಸುವಂತೆ ಅವರ ಜೀವನದ ಅಗ್ನಿದಿವ್ಯಗಳ ಕಥನವೂ ಆಗಿ ೯೬೦ ಸಾಲುಗಳ ಆ ದೀರ್ಘ ಕವನ ಕವಿಯ ವ್ಯಕ್ತಿಗತ ಸಂಗತಿ ಮತ್ತು ಸಾಮಾಜಿಕ ಅಭಿವ್ಯಕ್ತಿಯಾಗಿ ತೆರೆದುಕೊಳ್ಳುತ್ತದೆ. ಹೆಣ್ಣಿನ ಕಷ್ಟವನ್ನು ಹೆಣ್ಣೆ ಅರ್ಥ ಮಾಡಿಕೊಳ್ಳುವುದು ಕಷ್ಟವಿರುವಾಗ ದೂರ ಮಾಡುವುದು ತುಂಬ ಕಷ್ಟಸಾಧ್ಯವಾದುದೆಂದು ಆಗಿನ ಮಹಿಳೆಯರ ಕಷ್ಟಗಳನ್ನು ಬೇಂದ್ರೆಯವರು ಚಿತ್ರಿಸುತ್ತಾರೆ. ಸದಾ ಕಾಲಕ್ಕೆ ದುಃಖದಲ್ಲಿಯೆ ಮುಳುಗಿ ಬಂದಿರುವ ಭಾರತೀಯ ಕುಟುಂಬದ ಹೆಣ್ಣಿನ ಚಿತ್ರವನ್ನು ನಮ್ಮ ಮುಂದಿಡುತ್ತ, ಪುರುಷಪ್ರಧಾನ ವ್ಯವಸ್ಥೆಯನ್ನು ಟೀಕಿಸುತ್ತ, ಹೆಂಡತಿಯನ್ನು ಗಂಡಿನ ಗುಲಾಮಳಂತೆ ಕಾಣದೆ ಜೀವನದ ಸಖಿಯಂತೆ ಪರಿಗಣಿಸಬೇಕೆಂದು ಬೇಂದ್ರೆ ಹೇಳುತ್ತಾರೆ. ಹೆಣ್ಣಿನ ಮನಸ್ಸಿನೊಳಗೆ ಹೋಗಿ ಅವಳ ದುಃಖವನ್ನು ತಮ್ಮದಾಗಿಸಿಕೊಂಡ ಕಾವ್ಯದ ಸಂವೇದನೆ ಅಪರೂಪದ್ದಾಗಿದೆ.

ಏಕೆಂದು - ಸಾಕೆಂದು - ಬೇಕೆಂದು - ನೂಕೆಂದು
ರಮಿಸಲಾಡಿದಿರಲ್ಲ ನಿಮ್ಮಿಷ್ಟಕ್ಕೆ
ಗಂಗೆಯ ಕಷ್ಟವು ಗೌರಿಗೆ ತಿಳಿಯದು

ಹೆಂಗಸಿನ ಕಷ್ಟವು ಗಂಡಸಿಗೆ
ಎಂದಿಗು ತಿಳಿಯದು ! ಏತಕೆ ತಿಳಿಯೋದು?
ದುಃಖವು ನಮ್ಮದು ನಮಗೆ ಇದೆ'
ಎಂದು ನಿಟ್ಟುಸಿರಿಗೆ ಮಿಡಿದ ಕಂಬನಿ ಬಂದು
ಈ ಗಲ್ಲ ಸೋಕಲು ನಾ ನಡುಗಿದೆ[೧೩]

ಸಖಿಯ ಇಂತಹ ಬಾಳಬೆಂಕಿಯನ್ನು, ನಿಟ್ಟುಸಿರನ್ನು ತಮ್ಮದಾಗಿಸುತ್ತ ಯಾವಾಗಲಾದರೊಮ್ಮೆ ಬರುವ ಸುಖದ ಕ್ಷಣಗಳನ್ನು ದೀರ್ಘವಾಗಿಸುತ್ತ ನಡೆದರು.

ಹಗೆಯಾಗದಿರಲೆಂದೆ ಇಬ್ಬರೂ ಹವಣಿಸಿ
ಒಬ್ಬರನ್ನೊಬ್ಬರ ತೂಗಿದೆವು[೧೪]

ತಾಯಿಯ ಸಾವು, ಮಕ್ಕಳ ಸಾವು, ನಿರುದ್ಯೋಗತನ, ಬ್ರಿಟಿಷ್ ಪ್ರಭುತ್ವದ ದರ್ಪ, ಸೆರೆವಾಸ ಮುಂತಾದ ಕಷ್ಟಗಳನ್ನು ನಿಸರ್ಗ ತಾಪ ನುಂಗುವ ರೀತಿಯಲ್ಲಿ ನುಂಗಿದರು.

ಬೆಳಕಿನ ಕೆಚ್ಚನು ಕತ್ತಲೆಯ ಕಿಚ್ಚನು
ಮುಗದದ ಗವಿಯಲ್ಲಿ ನೆರೆ ಕಂಡೆವು
ಹುಚ್ಚಾಗಿ ನಕ್ಕೆವು ನಚ್ಚಿಗೆ ಸಿಕ್ಕೆವು
ನೆಚ್ಚಿಗೆಯಾತರದಿದೆ? ಎಂದೆವು[೧೫].

ದೇಶಿ ನೆಲೆಯ ವಿವಾಹ ಸಂಬಂಧಗಳನ್ನು ಗಟ್ಟಿಗೊಳಿಸುವ, ಲೈಂಗಿಕತೆಯೆನ್ನುವುದು ಮದುವೆಯೆಂಬ ಸಂಸ್ಥೆಯ ಮೂಲಕ ರಸಾಪೇಕ್ಷೆಯಿಂದ ಮಾಗಬೇಕೆನ್ನುವ ವಿಚಾರಗಳು ಕೂಡ ಅಲ್ಲಿ ವ್ಯಕ್ತವಾಗುತ್ತವೆ. 'ಅಗ್ನಿಸಾಕ್ಷಿಯಾಗಿ ದಾನವಾಗಿ ಬಂದ ಕನ್ನೆಯನ್ನು ಸ್ನೇಹದ ಅಭ್ಯಾಸದಿಂದ, ಸುಖ-ದುಃಖಗಳಲ್ಲಿ ಸಮಭಾಗಿಯಾಗುವ ಸಹಾನುಭೂತಿಯ ಅಂತಃಕರಣದಿಂದ ಸಖಿಯನ್ನಾಗಿ ಮಾಡುವ ಕ್ರಮವೊಂದು ಎಡೆಬಿಡದೆ ಸಾಗಿರುವುದು.'[೧೬] ಬೆಳದಿಂಗಳಿನಲ್ಲಿ ಮಧುರ ಭಾವದಿಂದ ಗಂಡ-ಹೆಂಡತಿ ಸಮ-ಸುಖಿಯಾದರೆ 'ಜೀವನದೀಪ'ದ 'ಬೆಳಕಿನ ಕುಡಿ' ಪ್ರೀತಿಯಿಂದ ಉರಿಯುತ್ತದೆಯೆಂದು ಬೇಂದ್ರೆ ಭಾವಿಸುತ್ತಾರೆ. 'ಸಖಿಗೀತ'ವಂತೂ ನಿಸರ್ಗದ ಚಿತ್ರಗಳಿಂದಲೆ ತುಂಬಿದೆ. ಪ್ರಕೃತಿಯ ಹಿನ್ನೆಲೆಯಲ್ಲಿ ಕವಿಯ (ಮನುಷ್ಯನ) ಬದುಕು ಹೊಂದಿಸಲ್ಪಟ್ಟಿದೆ.

ವೃಕ್ಷವಾಟಿಕೆಗಳಲಿ ಬಳಬಳಸಿ ಹೋಗುವ
ಹಾದಿಬೀದಿಗಳುಂಟು ನಾಲ್ಕೆಡೆಗು
ತೋಪು ತೋಟಗಳುಂಟು ಜೋಳದ ಹೊಲವುಂಟು

ಭತ್ತದ ಗದ್ದೆಯ ಬದಿಬದಿಗು
ಬನದೇವಿಯೆಡೆಯಾಟ ಕೆಡೆಗೊಡುವ ಗುಡ್ಡದ
ಸಾಲಿನ ತೋಳುಂಟು ಪಡುವಲೊಳು
ಶಬರಿ ಪಾಮರಿಯರ ಸುಳಿದಾಟ ನಲಿದಾಟ
ಸುಗ್ಗಿಸುಗ್ಗಿಗು ಉಂಟು ಅದರದರೊಳು[೧೭]

೧೯೩೨ ರಲ್ಲಿ ಮಾಸ್ತಿ ಮತ್ತು ಇತರ ಸ್ನೇಹಿತರ ನೆರವಿನಿಂದ ಅವರ 'ಗರಿ' ಸಂಗ್ರಹ ಪ್ರಕಟಗೊಂಡಿತು. ಈ ಕವನ ಸಂಕಲನ ಆಗಲೆ ಹೆಸರುವಾಸಿಯಾಗಿದ್ದ ಅವರಿಗೆ ಮತ್ತಷ್ಟು ಪ್ರಸಿದ್ಧಿಯನ್ನು ತಂದುಕೊಟ್ಟಿತು. ಸುಖದ ಬೆನ್ನಿಗೆ ದುಃಖ ಕಾದು ಕುಳಿತಿತ್ತು. 'ಗರಿ' ಸಂಕಲನದ 'ನರಬಲಿ' ಎನ್ನುವ ಕವನ ಆಗಿನ ಬ್ರಿಟಿಷ್ ಸರಕಾರಕ್ಕೆ ಅಪಥ್ಯವೆನಿಸಿ ಅವರು ಜೈಲಿಗೆ ಹೋಗಬೇಕಾಯಿತು. ಸರಕಾರದ ಸಂಶಯದ ಅವಕೃಪೆಯಿಂದ ಬೇಂದ್ರೆ ಮೂರು ತಿಂಗಳು ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ ಮತ್ತು ಒಂಭತ್ತು ತಿಂಗಳು ಧಾರವಾಡ ಸಮೀಪದ ಮುಗದ ಎಂಬ ಊರಿನಲ್ಲಿ ನಜರ್‌ಬಂಧಿಯಾಗಿ ಕಾಲ ಕಳೆಯಬೇಕಾಯಿತು. ಮಲೆನಾಡಿನ ಸುಖ-ದುಃಖದ ರುಚಿ ಗೊತ್ತಾಯಿತೆಂದು ಬೇಂದ್ರೆ ಹೇಳುತ್ತಾರೆ.

'ನರಬಲಿ' ಕವನವು ಬಲಿ ಮಾಡಿತೆನ್ನನು
ಹೆಳವನಿದ್ದಲ್ಲಿಗೆ ಹೊಳೆ ಬಂದಿತು
....
ಪ್ರಾಣದ ಒಗರಷ್ಟು ಹಿಂಡಿತು ಹಿಂಡಲಿಗೆ
ಮುಗದದ ಮಲೆಗಾಳಿ ಮುಂದೆಳಿದಿತು[೧೮]

೨.೩ 'ಕಿಡಿಬೆಂಕಿಯಿಂದ ಇಡಿನಿಧಿ'ಗೆ :

ಜೈಲು ಕಂಡು ಬಂದಿದ್ದರಿಂದ ಎಲ್ಲಿಯೂ ಕೆಲಸಕ್ಕೆ ಸೇರಿಸಿಕೊಳ್ಳಬಾರದೆಂಬ ಸರಕಾರದ ಆದೇಶವಿತ್ತು. ಅದಕ್ಕೂ ಮೊದಲು ನೋವಿನ ಸಾಲುಸಾಲೆ ಅವರ ಕಾಲು ಹಿಡಿದು ಎಳೆದಿತ್ತು. ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಮೂರು ವರ್ಷ ಕೆಲಸ ಮಾಡಿ ರಾಷ್ಟ್ರೀಯ ಶಾಲೆಯನ್ನು ಸೇರಿ ಅಲ್ಲಿ ಮೂರು ವರ್ಷ ಕೆಲಸ ಮಾಡಿದ್ದರು. ಸೊಂಡೂರು ಸಂಸ್ಥಾನದಲ್ಲಿ ಸ್ವಲ್ಪ ದಿನ ಕೆಲಸ ಮಾಡಿದರು. ಖಾಯಂ ಉದ್ಯೋಗವೆನ್ನುವುದು ಅವರಿಗೆ ಮರೀಚಿಕೆಯಾಗಿತ್ತು. ವೈಯಕ್ತಿಕ ಬಾಳಿನಲ್ಲಿ ನಷ್ಟ ತೂಗಲಾರದಷ್ಟಿತ್ತು. ಮೊದಲ ಮಗ ಕ್ಷೇಮೇಂದ್ರ ಹೆಚ್ಚು ದಿನ ಉಳಿಯಲಿಲ್ಲ. ಅವರಿಗೆ ಜೀವಸೆಲೆಯಾಗಿದ್ದ ಅವರ ತಾಯಿ ಅಂಬಕ್ಕ ೧೯೨೪ ರಲ್ಲಿ ತೀರಿಕೊಂಡಾಗ ಮೊದಲ ಬಾರಿಗೆ ಬೇಂದ್ರೆ ನರಳಿದರು.

ಕನಸಿಗು ಹೊಳೆಯದ ಬರಸಿಡಿಲೆರಗಿತು
ತಾಯಿ-ಗಿಡವು ಮಾಯವಾಯಿತೆಲೇ[೧೯]

ಮನೆಯ ಕಷ್ಟಗಳು ಸಾಕಾಗಲಿಲ್ಲವೆಂಬಂತೆ ಮೈತ್ರಿಯಲ್ಲಿಯೂ ಕೂಡ ಬಿರುಕು ಕಾಣಿಸಿಕೊಂಡಿತು. 'ಗೆಳೆಯರ ಗುಂಪು' ಅಭಿಪ್ರಾಯ ಭೇದಗಳಿಂದ ನಿಲ್ಲುವ ಸ್ಥಿತಿಗೆ ಬಂದಿತು. 'ಜಯ ಕರ್ನಾಟಕ' ಪತ್ರಿಕೆಯನ್ನು ಯಾರು ನಡೆಸಬೇಕೆಂಬ ವಿಚಾರದಲ್ಲಿ ಸಣ್ಣಗೆ ಜಗಳಗಳು ಆರಂಭವಾಗಿದ್ದವು.

ಗುಡಿ ಹೋಯ್ತು ಹುಡಿಗೂಡಿ ಗಾಳಿಗೋಪುರ ಗಾಳಿ-
ಗೂಡಿತು ಮಾಟದ ಆಟದೊಲು;
ಮೂರ್ತಿಯು ಇಂಗಿತ್ತು, ಮೈತ್ರಿಯು ಹಿಂಗಿತ್ತು
ಮನ ಕನಸ ನುಂಗಿತ್ತು ಒಂದಿರುಳೊಳ್[೨೦]

ವ್ಯವಹಾರಿಕ ಜೀವನದ ಪ್ರಶ್ನೆ ಬಂದಾಗ ಭಿನ್ನಾಭಿಪ್ರಾಯಗಳು ತಲೆದೋರುವುದು ಸಹಜವಾಗಿದೆ. ಗೆಳೆಯರ ಗುಂಪಿನ ವಿರಸದ ಅವಧಿಯನ್ನು ಡಾ.ವಿ.ಕೆ.ಗೋಕಾಕ ಅವರು ಹೀಗೆ ಬಣ್ಣಿಸುತ್ತಾರೆ. 'ಗೆಳೆಯರ ಗುಂಪಿನಲ್ಲಿ ಕಾರ್ಯಗೌರವವು ಹೆಚ್ಚಿದಂತೆ ಒಂದು ಹೊಯ್ದಾಟವು ಆರಂಭವಾಯಿತು. ತಮ್ಮ ಅಂಕಿತದಲ್ಲಿದ್ದ ಆಸ್ತಿಯನ್ನು ತಮ್ಮದಾಗಿಸಬೇಕೆಂದು ಒಬ್ಬರಿಗೆನಿಸಿದರೆ ಉಳಿದವರಲ್ಲಿ ಪರಸ್ಪರ ಅಸಹನೆ, ಅಸೂಯೆ, ಭಿನ್ನಾಭಿಪ್ರಾಯಗಳು ತಲೆಯೆತ್ತಿದವು. ಬೇಂದ್ರೆಯವರು 'ಅರ್ಥಸ್ವಾರ್ಥವಿಲ್ಲದ' ಭಾವಲೋಕಕ್ಕೆ ಒಯ್ದು ಆನಂದಗೊಳಿಸುವುದರಲ್ಲಿ ಅದ್ವಿತೀಯರಾಗಿದ್ದರು. ಆದರೆ ವ್ಯವಹಾರದಿಂದ ವರ್ತುಲದಲ್ಲಿ ಬಿರುಕುಬಿಟ್ಟು ಬೆಳೆದ ಈ ಕ್ಷೋಭೆಯನ್ನು ಇಲ್ಲದಾಗಿಸುವ ಅನುಭವ ಬೇಂದ್ರೆಯವರಿಗೆ ಇರಲಿಲ್ಲ..... ಈ ಸಮಯದಲ್ಲಿ 'ನರಬಲಿ' ಎಂಬ ಬೇಂದ್ರೆಯವರ ಕವಿತೆ ಸರಕಾರದ ವಿರುದ್ಧವಿದೆ ಎಂದು ಅಧಿಕಾರಗಳಿಗೆನಿಸಿ, ಬೇಂದ್ರೆಯವರನ್ನು ಸೆರೆಹಿಡಿದು ಹಿಂಡಲಗಿ ಸೆರೆಮನೆಯಲ್ಲಿಡಲಾಯಿತು. ಮುಂದೆ ಧಾರವಾಡದಿಂದ ಆರೇಳು ಮೈಲು ದೂರವಿದ್ದ ಮುಗದದಲ್ಲಿ ಅವರು ಸ್ಥಾನಬದ್ಧರಾದರು. ಹೀಗಾಗಿ ಧಾರವಾಡದಲ್ಲಿಯ 'ಜಯ ಕರ್ನಾಟಕ' ಕಚೇರಿಯಲ್ಲಿ ಭಿನ್ನಾಭಿಪ್ರಾಯಗಳು ಇನ್ನಷ್ಟು ನಿರಾತಂಕವಾಗಿ ಬೆಳೆದವು. ಸ್ಥಾನಬದ್ಧತೆಯಿಂದ ಮುಕ್ತರಾದ ಬೇಂದ್ರೆಯವರು ಧಾರವಾಡಕ್ಕೆ ಬಂದು ಗುಂಪಿನ ಕಗ್ಗಂಟನ್ನು ಬಿಚ್ಚಿ ಅದರಿಂದ ತಮ್ಮನ್ನು ಬಿಡಿಸಿಕೊಂಡರು. ಮುದ್ರಣಾಲಯವೂ, 'ಜಯಕರ್ನಾಟಕ' ಪತ್ರಿಕೆಯೂ ಇಬ್ಬರು ಗೆಳೆಯರ ಸೊತ್ತಾದವು. ಇಬ್ಬರು ಮೂವರು ಗೆಳೆಯರು ಮನೋಹರ ಗ್ರಂಥಮಾಲೆಯನ್ನು ಪ್ರಾರಂಭಿಸಿ ತಮಗೊಂದು ಸಾಹಿತ್ಯದ ಉದ್ಯೋಗವಾಗಿಸಿಕೊಂಡರು. ಒಟ್ಟಿನಲ್ಲಿ ಗೆಳೆಯರ ಗುಂಪು ಮತ್ತೆ ಆದಿಯಲ್ಲಿದ್ದಂತೆ ನಿರಾಕಾರವಾಯಿತು.'[೨೧]

ಕೆಲವರು ನೌಕರಿ ಹಿಡಿದು ದೂರ ಹೋದುದು; ಕೆಲವರು ತಮ್ಮ ವೈಯಕ್ತಿಕ ಸಾಧನೆಗಾಗಿ ತಮ್ಮ ಗುರಿಯ ಬೆನ್ನು ಹತ್ತಿದುದು; ಜೀವನ ನಿರ್ವಹಣೆಯ ತಾಪತ್ರಯಗಳಲ್ಲಿ ಗುಂಪನ್ನು ಕೆಲವರು ಹಚ್ಚಿಕೊಳ್ಳದಿದ್ದುದು ಸಂಭವಿಸಿ

ಮೊದಲಿನ ಸಂಭ್ರಮ ಮತ್ತು ವ್ಯವಸ್ಥಿತ ರೂಪಗಳನ್ನು 'ಗೆಳೆಯರ ಗುಂಪು' ಮುಂದುವರೆಸಿಕೊಂಡು ಹೋಗುವುದು ಸಾಧ್ಯವಾಗಲಿಲ್ಲ. ಗೆಳೆಯರೆಲ್ಲ ದೂರ ದೂರ ಇದ್ದುದರಿಂದ ಮತ್ತು ಪ್ರತಿಯೊಬ್ಬರಿಗೂ ತಮ್ಮದೆ ಪ್ರಪಂಚ ಇದ್ದುದರಿಂದ ಅದನ್ನು ಮತ್ತೆ ಒಂದುಗೂಡಿಸಲು ನಡೆದ ಪ್ರಯತ್ನಗಳು ಯಶಸ್ವಿಯಾಗಲಿಲ್ಲ. ಆದರೆ ಸ್ನೇಹದ ಸಂಬಂಧ ಮರೆಯಾಗುವ ಹಾಗಿರಲಿಲ್ಲ. ಸ್ನೇಹಿತರೆಲ್ಲ ಸೂಟಿಯಲ್ಲಿಯೋ, ಯಾವುದೋ ನಿಮಿತ್ತವಾಗಿಯೋ ಸೇರಿದಾಗ ಆಪ್ತತೆ ಹರಿದಾಡುತ್ತಿತ್ತು. ಗುಂಪಿನ ಗೆಳೆತನದ ಮಾಧುರ್ಯ ಮುಂದಿನ ದಿನಗಳಿಗೆ ಸಂಜೀವಿನಿಯಾಗುತ್ತಿತ್ತು. 'ಮಲ್ಲಾಡದ ಗಿಣಿಯೇ!'[೨೨] ಎನ್ನುವ ಪದ್ಯದಲ್ಲಿ ಗೆಳೆಯರ ಗುಂಪಿನ ಸಿಹಿ - ಒಗರನ್ನು, ಸಂಕಟ-ಸಂಭ್ರಮವನ್ನು ಬೇಂದ್ರೆ ತೆರೆದಿಟ್ಟಿರುವ ರೀತಿ ಅಪೂರ್ವವಾಗಿದೆ. ಧಾರವಾಡ ಹಾಗೂ ಗೆಳೆಯರನ್ನು ಬಿಟ್ಟ ವ್ಯಥೆ ಅಲ್ಲಿ ತುಂಬಿಕೊಂಡಿದೆ.

ಹಿಂಡನಗಲಿ ಬಂದೆ । ಇಲ್ಲಿ
ಕಂಡ ಕಡಿಗೆ ಬಾಯಿ ಬಿಡುವೆ । ಏ....
ವಾರಿ ಗೋಣಿನ ಎಣಿಕೆ । ಏಸು
ಹಾರಿ ಹೋಗಲಿಂಬಿಲ್ಲೇನಽ । ಏ....

ಮುಗದದಲ್ಲಿ ಕುಳಿತುಕೊಂಡು ಎಲ್ಲ ಕಡೆಯೂ ಬರಿ ಬಿಸಿಲೆ ಎನ್ನುವಂತಹ ಬಟ್ಟ ಬಯಲನ್ನು ಬಟ್ಟಗಣ್ಣಿಂದ ಬಿಟ್ಟೂ ಬಿಟ್ಟೂ ನೋಡುತ್ತಲಿರುವ ಮಲ್ಲಾಡದ ಗಿಣಿಯ ಮನಸ್ಸಿನ ಭಾವ ಆ ಇಡಿ ಕಾಲ ಹಾಗೂ ಸಂವೇದನೆಯನ್ನು ಹಿಡಿದಿಟ್ಟಿರುವುದು ಸಂಕಟದ ಬೆಂಕಿಯಲ್ಲಿ ಗಾಢ ಅಭಿವ್ಯಕ್ತಿಯನ್ನು ಬೇಂದ್ರೆ ಹೊರಡಿಸುವ ಬಗೆಯಾಗಿದೆ. ಮರಕ್ಕೂ ಮಾತು ಕಲಿಸಿದ ಮಾತಿನ ಜಾಣೆ ಈಗ ಜಡವಾಗಿ ಮಾತನ್ನೆ ಮರೆತಿರುವದು ಕವಿಗೆ ಆಶ್ಚರ್ಯ ತರಿಸುತ್ತದೆ.

ಮರ ಮರಕೊಂದು ಮಾತ । ಕಲಿಸಿ
ಮರವಟ್ಟೇನಽ ಮಾತಿನ ಜಾಣೆ । ಏ...

ಆದರೆ ಬಯಲಿನಲ್ಲಿಯೂ ತೊರೆ ಹುಡುಕುವುದು ಅವಶ್ಯವಾಗಿದೆ. ಹಿಂದಿನ ದಿನಗಳ ಸವಿನೆನಪಿನಲ್ಲಿ ಬರಲಿರುವ ದಿನಗಳ ಕನಸು ಕಾಣುವುದು ಜೀವನಕ್ಕೆ ಅನಿವಾರ್ಯವಾದುದು.

ಮುಗಿಲ ಹೂವಿನ ಜೇನ । ನೆನಿಸಿ
ಹಗಲ ಕಳಿಯಬೇಕ ಇಲ್ಲಿ । ಏ....

ಬಯಲು ತೊರಿಯ ನೀರ । ಕಂಡು
ಬಯಕಿ ತೀರಿಸಬೇಕ ಇಲ್ಲಿ । ಏ....

ಹಿಂದ ತಿರುಗವರೇನಽ । ಚದುರಿ
ಬಂದ ಹಾದಿಗೆ ಹೋಗುವರೇನ: । ಏ...

ರೆಂಬಿ ನಂಬಿಕಿ ಏಸು? । ಇನ್ನ

ಇಂಬಿಲಿ ಮುಗಿಲ ಮನಿಯ ಹುಡುಕು । ಏ...

ಆನಂದದ ಅನುಭವ ಸದಾಕಾಲ ಇರುವಂತಹುದಲ್ಲ. ಅನ್ಯರ ನೆರವಿನಲ್ಲಿ ಬದುಕನ್ನು ಸಾಗಿಸಲಾಗುವುದಿಲ್ಲ. ಗೆಳೆತನದ ರೆಂಬೆಗಳನ್ನು ನಂಬಿಕೊಂಡು ಕೊನೆಯ ಕಾಲದವರೆಗೂ ಮುಗಿಲಿಗೆ ಹಾರದೆ ಕುಳಿತುಕೊಳ್ಳಲಾಗುವುದಿಲ್ಲವೆನ್ನುವ ಅರಿವು, ಎಚ್ಚರ, ವಾಸ್ತವದ ಜೀವನಮಾರ್ಗವನ್ನು ಬೇಂದ್ರೆಯವರು ಕಲಿತರು. ಸಹಜೀವನದಲ್ಲಿಯೂ ಏಕಾಕಿತನವನ್ನು ಉಳಿಸಿಕೊಳ್ಳುವ ವೈಶಿಷ್ಟ್ಯವನ್ನು ಅವರು ಅರಿತುಕೊಂಡರು. ಮುಂದೆ ಅದು ಲೌಕಿಕ ಹಾಗೂ ಅಲೌಕಿಕ ದಾರಿಗಳನ್ನು ಬೆಸೆಯಲು ಅನುಕೂಲವಾಯಿತೆನ್ನಬೇಕು. ನಾವು ನಡೆಯುವ ದಾರಿಯಲ್ಲಿ ದಾರಿಗರು ಮುಗಿದುಹೋದರೆಂದು ದಾರಿ ಸವೆಸುವುದನ್ನು ಬಿಡಬಾರದೆನ್ನುವ ನಂಬಿಕೆ ಹಾಗೂ ಚೈತನ್ಯಸ್ವರೂಪನನ್ನು ದಾರಿಗ ಮತ್ತು ಮಾರ್ಗದರ್ಶಿಯನ್ನಾಗಿ ಮಾಡಿಕೊಳ್ಳಬೇಕೆಂಬ ಹಂಬಲ ಅವರಲ್ಲಿ ಮೂಡಿತೆಂದು ಕಾಣುತ್ತದೆ.

ಹಾರಿ ಹಾರಿಧಾಂಗ । ಮುಂದ

ದಾರಿಗೆ ದಾರಿಗರಿಲ್ಲ ಇಲ್ಲಿ । ಏ...

ಆಸರ ಕಾಲಿಗಿಲ್ಲ । ಹಾರಿ

ಬೇಸರವಿಲ್ಲದೆ ರೆಕ್ಕಿ ಬಡಿಯೆಃ । ಏ...

ಯಾವ ದುಃಖ ಮತ್ತು ಸಂಕಟಕ್ಕೂ ಬೇಸರ ಮಾಡಿಕೊಳ್ಳದೆ ಜೀವನದಲ್ಲಿ ರೆಕ್ಕೆ ಬಡಿಯುತ್ತ ಹಾರುತ್ತಲೆ ಮುಗಿಲಿನ ಮನೆಯ ಸ್ನೇಹಿತನೊಡನೆ ಸಂಭಾಷಣೆ ನಡೆಸುತ್ತ ಇಹ-ಪರಗಳನ್ನು ತಮ್ಮ ಹೋರಾಟದ ಬದುಕಿನಲ್ಲಿ ಅವರು ಹೊಂದಿಸಿಕೊಂಡರು. ಅನುಭಾವಿಕರ ಮತ್ತು ಸಾಧು-ಸಂತರ ಸ್ಮರಣೆ, ಪ್ರಭಾವ ಈ ಅವಧಿಯಲ್ಲಿ ದಟ್ಟವಾಗಿ ಕಾಣಿಸಿಕೊಂಡಿದ್ದರಿಂದ ದೈವಭಕ್ತಿ ಹಾಗೂ ಅನುಭಾವಿಕತೆಯ ಅಂಶಗಳು ಅವರ ಕವಿತೆಗಳಲ್ಲಿ ಮತ್ತಷ್ಟು ಸೇರ್ಪಡೆಗೊಂಡವು. ಮೂಡಣದ ಕೆಂಪು ಮೂಡುವ ಹಾದಿಯಲ್ಲಿ ಅಂದರೆ ಅರವಿಂದರ ಪಾಂಡಿಚೇರಿಯ ಕಡೆಗೆ ಮುಖಮಾಡಿ ಗಿಣಿ ಹಾರಲು ತೊಡಗುತ್ತದೆ. ವಿಘಟನೆ, ವಿಫಲತೆ, ವೈರುಧ್ಯಗಳನ್ನು ಸಮ ಮಾಡಿಕೊಂಡ ಬೇಂದ್ರೆಯವರ ಹೋರಾಟದ ಕಾಲವನ್ನು ಈ ಕವಿತೆ ಬಿಚ್ಚಿಡುವುದರಿಂದ ಇದನ್ನು ವಿವರವಾಗಿ ಚರ್ಚಿಸಲಾಯಿತು. ಈ ಕವಿತೆಯಲ್ಲಿರುವ ಆತ್ಮಶೋಧನೆಯ ದಾರಿಯನ್ನು ವಿನಾಯಕರು ಗುರುತಿಸಿರುವುದು ಮಹತ್ವದ್ದಾಗಿದೆ. 'ಸಹಜೀವನದ ಪ್ರಯೋಗ ಉರುಳಿ ಬಿದ್ದು ಇನ್ನುಳಿದ ಚೇತನದ ಮಾರ್ಗವೆಂದರೆ ಆತ್ಮಶೋಧನೆಯೇ ಸರಿ. ಈ ಹಾದಿಯಲ್ಲಿ ಅವ್ಯಾಹತ ಸಾಧನೆ ಹಾಗೂ ಜೊತೆಗೆ ಒಂದು ಸಂಸಾರವಿದ್ದರೂ, ಏಕಾಕಿತ್ವ; ಈ ಮಧ್ಯೆ ಸಾಧನೆಯನ್ನು ಬೆಳೆಸಬೇಕೆಂಬ ಹಂಬಲ... ಹಾಗಾದರೆ ಇನ್ನುಮುಂದೆ ಆನಂದದ ಯಾವ ದಾರಿ ಕಾಣಬಹುದು? ಇಲ್ಲಿ ನಿರ್ವ್ಯಾಜ್ಯ ಆಪತ್‌ಬಂಧುವಿನ, ಅನಾಥನಾಥನ ದರ್ಶನವಾಗುತ್ತದೆ. ಅವನ ಪ್ರೇಮ ಲಭಿಸುತ್ತದೆ. ಅವನ ಮಾತನ್ನು ಕೇಳಿ ಅದರ

ಬೆಳಕಿನಲ್ಲಿ ನಡೆದರೆ ಗಿಳಿ ಅರಗಿಣಿಯಾಗುತ್ತದೆ... ಈ ದಾರಿಯಲ್ಲಿ ಶ್ರೀ ಅರವಿಂದರೇ ಮಾರ್ಗದರ್ಶಿಗಳೆಂದು ಪೂರ್ವದಿಕ್ಕಿಗಿದ್ದ ಪಾಂಡಿಚೇರಿಯನ್ನೇ ಬೇಂದ್ರೆಯವರು ಸೂಚಿಸುತ್ತಾರೆ.

ಮೂಡಣ ಕೆಂಪು ಮೂಡಿ। ದಲ್ಲಿ
ಹೂಡ ನಿನ್ನ ಹೊಸ ಸಂಸಾರ। ಏ...

ಈ ಕವನಕ್ಕೂ ಗೆಳೆಯರ ಗುಂಪಿನ ಇತಿಹಾಸಕ್ಕೂ ಇದ್ದ ಸಂಬಂಧವನ್ನು ಬೇಂದ್ರೆಯವರೇ ನನಗೆ ಹೇಳಿದ್ದುಂಟು.'[೨೨]

ಅನಾಥಭಾವ ಮೈಮನವನ್ನೆಲ್ಲ ತುಂಬಿಕೊಂಡು ಮುಗದದಲ್ಲಿ ದಾರಿ ಕಾಣದೆ ಕುಳಿತಾಗ ಅನಾಥ ಮತ್ತು ದೀನಸ್ಥಿತಿಯ ಭಾವನೆಯನ್ನು ಹೋಗಲಾಡಿಸುವ ಮಾರ್ಗವೆಂದರೆ ಪರಮಾತ್ಮನಲ್ಲಿ ಧೀರತೆಯನ್ನು ಕೇಳಿಕೊಳ್ಳುವದು. ಹಾರುವಾಗ ರೆಕ್ಕೆ ಸೋಲದಿರಲೆಂದು ಪ್ರಾರ್ಥಿಸುವುದು. ಇಂತಹ ಪ್ರಾರ್ಥನೆಯನ್ನು ಪ್ರಕೃತಿಯ ಮಡಿಲಲ್ಲಿ, ಅದರ ರೂಪಕಗಳಲ್ಲಿ, ಸಂಸಾರದ ತಾಪತ್ರಯಗಳಲ್ಲಿ, ವಿಷಾದದ ಅಭಿವ್ಯಕ್ತಿಯಲ್ಲಿ ಬೇಂದ್ರೆ ಕಟ್ಟುತ್ತ ಹೋದರು. ಮುಗಿಲಿಗೆ ಹಾರುತ್ತಿರುವ ಮನದ ಅರಗಿಣಿಯು ಭೂಮಿ ಮತ್ತು ಹಸುರಿನ ರೆಂಬೆಯ ಸಂಬಂಧವನ್ನು ಕಳೆದುಕೊಳ್ಳದಂತೆ ಕೂಡ ಅವರು ಜಾಗ್ರತೆ ವಹಿಸಿದರು.

ಕಿಡಿಬೆಂಕಿ ಕೊಡು ನನಗೆ ಇಡಿ ನಿಧಿಯ ಹಾಕುವೆನು
ಅಡಿಪಿಡಿದು ಕೂಡುವೆನು ನನ್ನ ದೊರೆಯೇ
ಮಿಡಿಯು ಪಣ್ಣಾದೀತು, ಬಿಡಿಯು ಇಡಿಯಾದೀತು
ಒಡಲು ಮಡಿಯಾದೀತು ನಿನ್ನ ಬೆರೆಯೇ[೨೩]

ನೌಕರಿ ಇಲ್ಲದಿರುವಿಕೆ, ಜೈಲುವಾಸದ ಕಹಿನೆನಪು, ಗೆಳೆಯರ ಗುಂಪಿನಲ್ಲಿಯ ಒಡಕು ಬೇಂದ್ರೆಯವರಲ್ಲಿ ಬೇಸರ ಮೂಡಿಸಿದವು. ಎಂ.ಎ. ಪರೀಕ್ಷೆ ಪಾಸು ಮಾಡಿದರೆ ನೌಕರಿ ಸಿಗಬಹುದೆಂಬ ಆಸೆಯಿಂದ ಮತ್ತೆ ಪೂನಾ ಹಾದಿ ಹಿಡಿದರು. ಹೆಂಡತಿ ಲಕ್ಷ್ಮೀಬಾಯಿ, ಇಬ್ಬರು ಮಕ್ಕಳು ರಾಮ ಮತ್ತು ಪಾಂಡುರಂಗ ಇವರೊಂದಿಗೆ ಕಾಕಾನ ಮನೆಯಲ್ಲಿ ಇರಲಿಕ್ಕೆ ಸಂಕೋಚವೆನಿಸಿದರೂ ಬಾಳಿನ ಅನಿವಾರ್ಯತೆಯಿಂದ ಅವರಿಗೆ ಬೇರೆ ಹಾದಿಯಿರಲಿಲ್ಲ. ಎಂ.ಎಂ. ಮುಗಿಸಿ ಇನ್ನೇನು ಅವರು ನಿರಾಳವಾದರೆನ್ನುವಷ್ಟರಲ್ಲಿ ಆಶ್ರಯದಾತ ಕಕ್ಕ ಇನ್ನಿಲ್ಲವಾದರು. ೧೯೩೫ರಲ್ಲಿ ಪೂನಾದಿಂದ ಮರಳಿ ಧಾರವಾಡಕ್ಕೆ ಬಂದರು. ನೌಕರಿಯಿಲ್ಲದೆ ಸಂಸಾರ ತೂಗಿಸುವುದು ಕಷ್ಟವಾಯಿತು.

ಹರಿವ ನೀರಿನ ಮೇಲೆ ಹರಗೋಲ-ಮನೆ ಕಟ್ಟಿ
ಗೊತ್ತಿಲ್ಲದೆ ನಲ್ಲೆ ಹೊರಟಿಹೆವು
ನೆಲವೆಂದು ಸ್ಥಿರವೆಂದು ಆಸ್ತಿವಾರವ ಹಾಕಿ

ನಾಡಾಡಿ ಜನ, ಮನೆ ಕಟ್ಟಿಹುದು
ಪರಿಣಾಮಕ್ಕೆಡೆಗೊಟ್ಟು ಪರಣತಿಗೊಳ್ಳುವ
ಸೃಷ್ಟಿಗೆ ಸರಿ ನಮ್ಮ ಬಾಳುವೆಯು
ಕುದಿ ಎಸರು ಬರದಿರೆ, ಚಳಿ ಬಿಸಿಲು ಉಣದಿರೆ
ಪರಿಪಾಕವೆಂಬುದು ಎಂತಹುದು?[೨೫]

ಅಲ್ಲಿ ಇಲ್ಲಿ ಕೆಲಸ ಮಾಡುತ್ತ, ಉಪಜೀವನಕ್ಕೆ ಸಾಕಾಗದ ದುಡ್ಡು ಪಡೆಯುತ್ತ, ಕಾವ್ಯಾಯೋಗವನ್ನೆ ಸಂತೃಪ್ತಿಯ ನೆಲೆಯನ್ನಾಗಿ ಬೇಂದ್ರೆಯವರು ಮಾಡಿಕೊಂಡಿದ್ದರು.

ಇದೇ ಸುಮಾರಿಗೆ ಮಗ ವಾಮನನ ಜನನವಾಯಿತು. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಅವರ ನೆರವಿಗೆ ಬಂದವರು ಮಾಸ್ತಿಯವರು. 'ಜೀವನ' ಪತ್ರಿಕೆಯ ಸಂಪಾದಕನೆಂದು ಬೇಂದ್ರೆಯವರನ್ನು ಮಾಸ್ತಿ ನೇಮಕ ಮಾಡಿ ತಮ್ಮ ಹೃದಯ ವೈಶಾಲ್ಯತೆ ಮೆರೆದರು. ಸಾಹಿತ್ಯ ಕ್ಷೇತ್ರದ ಏಳ್ಗೆಯನ್ನು ಮನಸ್ಸಿನಲ್ಲಿಟ್ಟುಕೊಂಡು ರಾಜ್ಯದ ಉದ್ದಗಲಕ್ಕೂ ಮಾಸ್ತಿಯವರೊಂದಿಗೆ ಪ್ರವಾಸ ಮಾಡುವ ಯೋಗ ಬೇಂದ್ರೆಗೆ ಲಭಿಸಿತು. ಭಾಷಣ, ಕವಿತಾ ವಾಚನದಿಂದ ಹೆಚ್ಚು ಜನಪ್ರಿಯರಾದರು. ಉದ್ಯೋಗವಿಲ್ಲದಿದ್ದರೂ ಹೊಸ ಮೈತ್ರಿಯ ಪರ್ವಕಾಲದಿಂದ ಹೊಸ ಬಾಳನ್ನೆ ಬೇಂದ್ರೆ ಕಟ್ಟಿಕೊಂಡರು. ಸಾಹಿತ್ಯವನ್ನೇ ತಮ್ಮ ಉಪಾಸನೆಯನ್ನಾಗಿಸಿಕೊಂಡರು. ಬರವಣಿಗೆ ಒಂದೇ ಸಮನೆ ಸಾಗಿತ್ತು. 'ಸಖಿಗೀತ', 'ನಾದಲೀಲೆ', 'ಉಯ್ಯಾಲೆ' ಸಂಕಲನಗಳು ಪ್ರಕಟವಾಗಿ ಪ್ರಸಿದ್ಧಿ ಮತ್ತಷ್ಟು ಪಸರಿಸಿತು. 'ನಿರಾಭರಣ ಸುಂದರಿ' ಮತ್ತು 'ಸಾಹಿತ್ಯ ಸಂಶೋಧನ' ಕೃತಿಗಳು ಕೂಡ ಇದೆ ಹೊತ್ತಿಗೆ ಬೆಳಕು ಕಂಡವು.

'ಕವಿತೆಯಲ್ಲದೆ ಇತರ ಸಾಹಿತ್ಯ ಪ್ರಕಾರಗಳಲ್ಲಿಯೂ ನಾನು ಸಾಕಷ್ಟು ಕೈಯಾಡಿಸಿದ್ದೇನೆ. ಬರೆದ ಅನೇಕ ಕಥೆಗಳು ಕಳೆದಿವೆ. ಉಳಿದವು 'ನಿರಾಭರಣ ಸುಂದರಿ'ಯಲ್ಲಿ ಬಂದಿವೆ. ನಾಟಕಗಳಲ್ಲಿಯೂ ನಾನು ಯಶಸ್ವಿಯಾದೆ. ನನ್ನ 'ತಿರುಕರ ಪಿಡುಗ'ನ್ನು ಮೊದಲು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ನಾನೇ ಓದಿದೆ... ಆದರೂ ನಾನು ನಾಟಕ, ನಗೆಬರಹಗಳಲ್ಲಿ ಬಹಳ ಕೃಷಿ ಮಾಡಲಿಲ್ಲ. ಇದಕ್ಕೆ ಒಂದು ಕಾರಣ ಹಾಸ್ಯವು ಭೀಕರ ಪರಿಣಾಮಕ್ಕೆಳೆಯಬಹುದೆಂಬ ಪ್ರಜ್ಞೆ ನನಗೆ ಬಂದದ್ದು. ನಗುವ ಚಟ ಹಿಡಿಸಿದರೆ, ದೇಶಕ್ಕೆ ಕ್ಷೇಮ ಇಲ್ಲ ಎಂಬುದನ್ನು ಮಹಾರಾಷ್ಟ್ರದ ಅನುಭವದಿಂದ ನಾನು ಕಂಡೆ. ನಗೆ ಎಂಬುದೊಂದು ಎಚ್ಚರ. ಆ ಎಚ್ಚರ ಉಳಿಯದಿದ್ದರೆ, ಅದು ತಾಮಸವಾಗುತ್ತದೆ. ಅಲ್ಲದೆ ನಾಟಕ ಬರೆಯುವವರೆಗಿರುವ ಕಷ್ಟಗಳನ್ನು ನಾನು ಶ್ರೀರಂಗ ಮೊದಲಾದವರ ಅನುಭವದಿಂದ ಕಂಡಿದ್ದೆ. ನಾಟಕ ಒರೆಗೆ ಹತ್ತುವುದು ರಂಗದ ಮೇಲೆ. ರಂಗಕ್ಕೆ ಅದನ್ನು ತರಬೇಕಾದರೆ ಅಗತ್ಯವಾದ ಸಂಘಟನಾ ಯತ್ನದ ಅಗಾಧತೆಯು ನನ್ನನ್ನು ಹಿಂಜರಿಯುವಂತೆ ಮಾಡಿತು.'[೨೬]

'ಜಾತ್ರೆ', 'ಸಾಯೋ ಆಟ', 'ಉದ್ಧಾರ', 'ಹೊಸ ಸಂಸಾರ' ಮುಂತಾದ ಗಮನಾರ್ಹ ನಾಟಕಗಳನ್ನು ಬೇಂದ್ರೆಯವರು ಬರೆದರೂ ಅವರ ಆತ್ಯಾಸಕ್ತಿಯ ಮಾಧ್ಯಮ ಕಾವ್ಯವೇ ಆಗಿತ್ತು. ಹಲವು ನಾಟಕಗಳಲ್ಲಿ

ಅಳವಡಿಸಿಕೊಳ್ಳಬೇಕೆಂದು ಅವರು ಬರೆದ 'ರಸಿಕಾ ಪೇಳೋ', 'ರಾಧೆಯ ಪಾಡು', 'ಮನೆಗೆ ಹೋಗವ್ವಾ', 'ತುಂಬಿ ಬಂದಿತ್ತು', 'ಹುಬ್ಬಳ್ಳಿಯಾಂವಾ' ಮುಂತಾದವು ಶ್ರೇಷ್ಠ ಕವಿತೆಗಳಾಗಿ ಉಳಿದಿವೆ. ಪ್ರೇಮ, ಭಕ್ತಿ, ಆಧ್ಯಾತ್ಮಿಕ ಸಂಗತಿ, ಜೀವನ ಕಲ್ಯಾಣ ಮುಂತಾದ ವಸ್ತುವಿನ ಹರವು ಅವರ ಕಲ್ಪನೆಯ ನಾಟಕಗಳಿಗೆ ಇದ್ದಿರಬಹುದೆಂದು ಊಹಿಸಬಹುದು. ಅದೇನೆ ಇರಲಿ, ಬೇಂದ್ರೆಯವರು ಮನಸ್ಸು ಮಾಡಿದ್ದರೆ ಕನ್ನಡದ ಒಬ್ಬ ಶ್ರೇಷ್ಠ ನಾಟಕಕಾರರೂ ಆಗುವ ಸಂಭವವಿತ್ತು ಎಂದು ಡಾ. ಜಿ.ಎಸ್. ಆಮೂರ, ಡಾ. ಎಚ್.ಎಸ್.ರಾಘವೇಂದ್ರರಾವ್ ಸೇರಿದಂತೆ ಹಲವು ವಿಮರ್ಶಕರು ಅವರ ನಾಟಕೀಯ ದೃಷ್ಟಿಯನ್ನು ಮೆಚ್ಚಿಕೊಂಡಿದ್ದಾರೆ. 'ತುಂಬಿ ಬಂದಿತ್ತು' ಎನ್ನುವ ಬರೆಯದೇ ಹೋದ 'ತಲೆದಂಡ' ನಾಟಕದ ಹಾಡನ್ನು ಓದಿದಾಗ ಅವರು ವಿಶ್ಲೇಷಿಸಲಿದ್ದ ಆಧ್ಯಾತ್ಮದ ಘರ್ಷಣೆಗಳು ಕುತೂಹಲ ಹುಟ್ಟಿಸುತ್ತವೆ. ನಾಟಕ, ಕತೆ, ಹರಟೆ, ರೇಡಿಯೊ ರೂಪಕಗಳಲ್ಲದೆ ಸಾಹಿತ್ಯ ವಿಮರ್ಶೆಯ ಕೃತಿಗಳನ್ನು ಬೇಂದ್ರೆಯವರು ಹೊರ ತಂದರು. 'ಸಾಹಿತ್ಯದ ವಿರಾಟ ಸ್ವರೂಪ' (೧೯೭೪) ಅವರ ಗದ್ಯದ ಒಂದು ಪ್ರಾತಿನಿಧಿಕ ಕೃತಿ ಎಂದು ಹೇಳಬಹುದು. ಅದಲ್ಲದೆ 'ಸಾಹಿತ್ಯ ಮತ್ತು ವಿಮರ್ಶೆ' (೧೯೩೭), 'ಸಾಹಿತ್ಯ ಸಂಶೋಧನೆ' (೧೯೪೦), 'ಜೈಮಿನಿ ಭಾರತಕ್ಕೆ ಮುನ್ನುಡಿ' (೧೯೫೪), 'ಮಾತೆಲ್ಲ ಜ್ಯೋತಿ' (೧೯೭೦) ಮುಂತಾದ ಸಾಹಿತ್ಯ ವಿಮರ್ಶೆ ಹಾಗೂ ಭಾಷಣಗಳ ಸಂಕಲನಗಳು ಅವರ ಪ್ರಖರ ಚಿಂತನೆಗೆ ಪುರಾವೆ ಒದಗಿಸುತ್ತವೆ.

ಗೋಕಾಕ, ಮಧುರಚೆನ್ನ, ಮಾಸ್ತಿ ಮುಂತಾದ ಗೆಳೆಯರ ಬೆಂಬಲದಿಂದ ಅಸ್ತವ್ಯಸ್ಥವಾಗಿದ್ದ ಬದುಕು ಸುವ್ಯವಸ್ಥಿತವಾಗಿ ನಡೆದಿತ್ತು. ಪ್ರತಿ ನೋವನ್ನು ಹಾಡಾಗಿಸುತ್ತ ನಡೆದಿದ್ದರು. ಸುಖ ದುಃಖವನ್ನು ಬಿಂಬಿಸುವಂತೆ ಬೇಂದ್ರೆಯವರ 'ಸಖಿಗೀತ' ಎಲ್ಲ ಸಹೃದಯರನ್ನು ಗೆದ್ದಿತು. ಅದರಲ್ಲಿಯ ನಿಸರ್ಗವರ್ಣನೆ, ಪ್ರಕೃತಿ ಪ್ರೇಮ, ಋತುವಿಲಾಸ, ಸೃಜನಶೀಲತೆಯನ್ನು ಸಾಧಿಸಬೇಕೆನ್ನುವ ನಾಯಕನ ಹಟ, ಕನ್ನಡದಲ್ಲಿ ಒಂದು ಸಾಧನೆಯಂತೆ ಪ್ರಕಟಗೊಂಡಿತು. ಜೀವನದಲ್ಲಿ ಕಷ್ಟ-ಸುಖ, ಸರಸ-ವಿರಸಗಳನ್ನು ಅನುಭವಿಸುವುದರ ಜೊತೆಗೆ ಚೆಲುವು, ಒಲವುಗಳನ್ನು ಸಂಪಾದಿಸಬೇಕೆನ್ನುವ ಇಚ್ಛೆ ಬೇಂದ್ರೆಯವರಲ್ಲಿ ಬಲವಾಗಿತ್ತು. ನಿಸರ್ಗದ ನಡುವೆ, ದುಃಖಗಳ ನಡುವೆ ನಾಯಕ ತನ್ನ ಅಸ್ಮಿತೆಯನ್ನು ಕಂಡುಕೊಳ್ಳುವ ಹಂತದಲ್ಲಿದ್ದಾನೆ. ''ಸಖಿಗೀತ'ದ ಎರಡುನೂರಕ್ಕೂ ಹೆಚ್ಚು ಸಾಲುಗಳು ವೈವಾಹಿಕ ಚೌಕಟ್ಟನ್ನು ಮೀರಿ ಪ್ರಕೃತಿಯ ಸಾನಿಧ್ಯದಲ್ಲಿ ನಾಯಕ ತನ್ನ ಸೃಜನಶೀಲತೆಯನ್ನು ಕಂಡುಕೊಳ್ಳುವ ಕ್ರಿಯೆಯನ್ನೇ ವರ್ಣಿಸುತ್ತವೆ''[೨] ಎಂಬ ಡಾ. ಜಿ.ಎಸ್. ಆಮೂರರ ಮಾತು ಜೀವನ ಪ್ರೀತಿಯ ಆ ಮಹಾಗೀತದಲ್ಲಿ ಅಡಕವಾಗಿರುವ ಬದುಕಿನ ಒಲವು ಮತ್ತು ಅನುಭೂತಿಗಳನ್ನು ಮೇಲ್ಮೈಗೆ ತರುತ್ತದೆ.

ತಮ್ಮ ಮೇಲೆಯೇ ಪ್ರಭಾವ ಬೀರಿರುವ ತಮ್ಮ ರಚನೆ ಯಾವುದಾದರೂ ಇದ್ದರೆ ಅದು 'ಕನ್ನಡ ಮೇಘದೂತ'ವೆಂದು ಬೇಂದ್ರೆ ಹೇಳಿರುವುದರಿಂದ ಹಿಂದೆ ಅವರು ಕಂಡ ಪ್ರೇಮ-ಪ್ರಣಯಗಳ ತಿಳುವಳಿಕೆಯನ್ನು ಗುರುತಿಸಬಹುದು. ೧೯೪೩ ರಲ್ಲಿ ಬಂದ 'ಮೇಘದೂತ'ದಲ್ಲಿಯೂ ನಿಸರ್ಗದ ಚೆಲುವು ಓತಪ್ರೋತವಾಗಿ ಹರಿದಿದೆ. ವಿರಹದ ಮೂಲಕ ಮನಸ್ಸಿನ ಶುದ್ಧಿಯನ್ನು ಕೈಗೊಳ್ಳಬಹುದೆಂಬ ಆಶಯ ಅಲ್ಲಿ ಅಡಗಿದೆ. ಬೇಂದ್ರೆಯವರೆ

ತಮ್ಮ ಪ್ರಸ್ತಾವನೆಯಲ್ಲಿ ಅದನ್ನು ಹೇಳುತ್ತಾರೆ. 'ಮೇಘದೂತದಲ್ಲಿ ಒಬ್ಬ ಯಕ್ಷ ಯಕ್ಷಿಯರ ವಿರಹಾವಸ್ಥೆಯ ವರ್ಣನೆ ಇದೆ. ವಿರಹಾವಸ್ಥೆಯಲ್ಲಿ ತಾಳಿ ಬಾಳುವ ಕಾಮವೇ ಧರ್ಮ... ಯಕ್ಷನ ಲಲಿತದಲ್ಲಿಯೇ ಒಂದು ಪ್ರಶಾಂತಿ ಇದೆ; ಒಂದು ಉದಾತ್ತತೆ ಇದೆ.... ಕಾಮಿ ಯಕ್ಷ ವಿರಹದಿಂದ ಕವಿಯಾಗುವನು. ಅವನ ಕಣ್ಣು ಚೆಲುವಿಗೆ ಕಣ್ಣಾಗುವುದು. ಅವನ ಹೃದಯ ರಸಕ್ಕೆ ನೆಲೆಯಾಗುವುದು. ... ಎಲ್ಲ ಪುರುಷ ಹೃದಯಗಳೂ ಯಕ್ಷನಾಗಿ, ಯಕ್ಷಿ ಪ್ರೀತಿಯ ಅಧಿದೇವಿಯಾಗಿ, ಗುಡ್ಡ, ಹೊಳೆ, ಜನ, ಜನಪದ, ಪಶು, ಪಕ್ಷಿಗಳಿಂದ ತುಂಬಿದ ಪ್ರಕೃತಿ ಚೆಲುವಿನ ಓಲೆಯಾಗುವುದು. ಧರ್ಮಾವಿರುದ್ಧವಾದ ಕಾಮದಲ್ಲಿ ಹುಟ್ಟಿದ ಕಾವ್ಯ ಭಕ್ತಿಯ ಸಂಕೇತವಾಗುವುದು.'[೧೮]

ಲೌಕಿಕವಾದ ಪ್ರೇಮದಲ್ಲಿ ಹೀಗೆ ಭಕ್ತಿ, ಅನುರಾಗಗಳನ್ನು ಉಂಟುಮಾಡುವ ಬೇಂದ್ರೆಯವರು ಪ್ರೇಮದ ಅನುಭೂತಿ ಮತ್ತು ಆಧ್ಯಾತ್ಮಿಕ ದೃಷ್ಟಿಯನ್ನು ತರುವಲ್ಲಿ ಯಶಸ್ವಿಯಾಗುತ್ತಾರೆ:

ಅನ್ನಪ್ರಾಣಗಳ ಮಿಥುನದಂತೆ ಮೈ ಎರಡು ಕಲೆತು ಬೆರೆತು
ವನದ ಕಾವಿನಲಿ ಕಾಮವಾಗಿ ಮನದಾಚೆಗೇನೋ ಅರಿತು ॥
ಚಿತ್ತದಲಿ ನಿಷ್ಕಾಮರತಿಯು ರಸಪಾಕವಾಗಿ ನಿಂತು
ಧಾರೆಗೆಡದೆ ಭಗವಂತನಲ್ಲಿ ಚಿರಭಕ್ತಿಯಾಗಿ ಬಂತು॥[೧೯]

ಕಾಳಿದಾಸನನ್ನು ಭಾವಗ್ರಹಣ ಮಾಡಿದ ಬೇಂದ್ರೆ ತಾವೆ ಯಕ್ಷನಾಗಿದ್ದಾರೆ. ಸುಪ್ರೇಮದಲ್ಲಿ ಅರಳಿದ್ದಾರೆ. ಅಲ್ಲದೆ ತಮ್ಮ ಸೌಭಾಗ್ಯಲಕ್ಷ್ಮೀ ಲಕ್ಷ್ಮೀದೇವಿಗೆ ಈ ಕೃತಿಯನ್ನು ಅವರು ಅರ್ಪಿಸಿರುವುದು ಕೂಡ ಅನನ್ಯವಾಗಿದೆ.

ಕಾಲಿದಾಸನ ಕಡಲ
ಮುತ್ತುಮಾಲೆಯ ನಿತ್ತೆ
ಮುಡುಪನೊಪ್ಪಿದೆಯೆಂದು ಮುಕ್ತಳಾಗು ॥
ಓ ಯಕ್ಷಿ, ಚೈತ್ಯಾಕ್ಷಿ,
ಚೆನ್ನೆ, ಹೃದಯದ ಸಾಕ್ಷಿ,
ನನ್ನ ಕಲ್ಯಾಣಕ್ಕೆ ಯುಕ್ತಳಾಗು ॥[೨೦]

ಅವರ ಕವಿತೆಯ ಪ್ರತಿಯೊಂದು ನಡೆಯೂ ಆತ್ಮ ಕಲ್ಯಾಣದ ಕಡೆಗೆ ಇತ್ತು.

ವೈಯಕ್ತಿಕ ಬದುಕಿನ ದುಃಖಗಳಿಗೆ ಸುಖದ ಅಂಚುಗಳಿದ್ದವೆಂದು ತೋರುತ್ತದೆ. ಅವರ ಜೀವನದ ಕಾರ್ಮೋಡಗಳು ಸರಿಯತೊಡಗಿದವು. ೧೯೪೧ ರಲ್ಲಿ ಗದುಗಿನ ವಿದ್ಯಾದಾನ ಸಮಿತಿಯ ಹೈಸ್ಕೂಲಿಗೆ ಹೆಡ್‌ಮಾಸ್ತರರಾಗಿ ಬೇಂದ್ರೆ ನೇಮಕಗೊಂಡರು. ಒಂದಷ್ಟು ದಿನ ವಾರದಲ್ಲಿ ಮೂರು ದಿನದಂತೆ ಹುಬ್ಬಳ್ಳಿಯ ನ್ಯೂ ಇಂಗ್ಲೀಷ್ ಸ್ಕೂಲಿನಲ್ಲಿ ಸಹ ಕೆಲಸ ಮಾಡಿದರು. ಆದರೆ ಗದಗದ ಸಮಿತಿ ಹೈಸ್ಕೂಲಿನ ಕೆಲಸ ಒಂದು ವರ್ಷ

ಕೂಡ ನಿಲ್ಲಲಿಲ್ಲ. ದೈವ ನೆರವಿಗೆ ಬಂದು ೧೯೪೨-೪೩ ರಲ್ಲಿ ಪೂನಾದ ಕಾಮರ್ಸ್ ಕಾಲೇಜಿನಲ್ಲಿ ಹಂಗಾಮಿ ಕನ್ನಡ ಉಪನ್ಯಾಸಕರಾಗಿ ನೇಮಕಗೊಂಡರು. ೧೯೪೩ ರಲ್ಲಿ ಅವರ ಬದುಕಿನ ಮತ್ತೊಂದು ಮಹತ್ವದ ಕೆಲಸ ನೆರವೇರಿತು. ಪಾಂಡಿಚೇರಿಯಲ್ಲಿ ಶ್ರೀ ಅರವಿಂದರ ದರ್ಶನವಾಯಿತು. ಅದೇ ವರ್ಷ ಶಿವಮೊಗ್ಗದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ಕನ್ನಡದ ಜನತೆ ವರಕವಿಗೆ ಕೊಟ್ಟು ಗೌರವ ಸೂಚಿಸಿತು. ಸಾಹಿತ್ಯವನ್ನು ಉಪಾಸನೆಯ ವ್ರತವನ್ನಾಗಿ ಮಾಡಬೇಕೆಂಬ ಅವರ ಹಂಬಲ ಅಧ್ಯಕ್ಷ ಭಾಷಣದಲ್ಲಿ ವ್ಯಕ್ತಗೊಂಡಿತು. ತಾನು ಸರಸ್ವತಿಯ ಸೇವಕ ಎಂದು ಅವರು ಹೇಳಿದರು. 'ಅಣ್ಣ ಮಾಸ್ತಿಯವರೊಡನೆ ೧೯೩೦ ರಲ್ಲಿ ಇಲ್ಲಿ ಬಂದಾಗಲೇ ಸ್ಥಾಪಿತವಾದ ಕರ್ನಾಟಕ ಸಂಘ, ಅಣ್ಣ ಮಾಸ್ತಿಯವರೇ ಪರಿಷತ್ತಿನ ಉಪಾಧ್ಯಕ್ಷರಿರುವಾಗ, ತಾನು ಕಟ್ಟಿಸಿಕೊಂಡ ಕನ್ನಡದ ಗುಡಿಯಲ್ಲಿ, ಸರಸ್ವತಿಯ ಮಹಾಪೂಜೆಯ ಕಾಲಕ್ಕೆ, ನನ್ನನ್ನು ಪೂಜಾರಿಯೆಂದು ಸಾಹಿತ್ಯದ ಮಂತ್ರಗಳನ್ನು ಉಚ್ಚರಿಸಲು ಕರೆಸಿಕೊಂಡಿದೆ.'[೩೧] ನುಡಿಯ ಸಸಿಯನ್ನು ಮೊಳಗಿಸುವ, ಉಸಿರ ಎಳೆ ಎಳಸುವ, ಜೀವ ಜಲದಲ್ಲಿ ಚಲಿಸುವ ಮಂತ್ರವಾಗಿ, ಬೆಳಕಾಗಿ, ನದಿಯಾಗಿ ಗಂಗೆ ಹರಿಯಲೆಂದು ಸಮಷ್ಟಿ ಕಲ್ಯಾಣದ ದೃಷ್ಟಿಯಿಂದ ಕವಿ ಕೋರುತ್ತಾರೆ. ಎದೆಯೊಳಗಿನ ಚೈತನ್ಯ ಬೆಳಗಬೇಕೆಂಬುದು ಬೇಂದ್ರೆಯ ಆಶಯವಾಗಿ ಹರಿಯುತ್ತದೆ.

೨.೪ ಹಾಡಾಗಿ ಹರಿಯಿತು ದುಃಖದ ಕಡಲು :

೧೯೪೪ ರಲ್ಲಿ ಸೊಲ್ಲಾಪುರದ ಡಿ.ಎ.ವಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಬೇಂದ್ರೆ ಖಾಯಂ ಆಗಿ ನೇಮಕವಾಗುವ ಮೂಲಕ ಮೊದಲ ಬಾರಿಗೆ ಒಂದು ನಿಶ್ಚಿತ ಆದಾಯ ಹಾಗೂ ಒಳ್ಳೆಯ ನೌಕರಿಯ ಜಗತ್ತಿನಲ್ಲಿ ಕಾಲಿಟ್ಟರು. ಡಾ. ವಿ.ಕೃ.ಗೋಕಾಕ ಮತ್ತು ಶ್ರೀ ಗಾಂವಕರ ಅವರು ಡಿ.ಎ.ವ್ಹಿ. ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಸೂರಜಭಾನ ಅವರಿಗೆ ಬೇಂದ್ರೆಯವರ ಹೆಸರನ್ನು ಸೂಚಿಸಿ ವಾತ್ಸಲ್ಯ ಮೆರೆದಿದ್ದರು.

ಸಮಾಧಾನ-ನೆಮ್ಮದಿಯ ನೆಲೆ ಸಿಕ್ಕಿತೆಂದು ಬೇಂದ್ರೆ ಸಂಭ್ರಮ ಪಡುತ್ತಿರುವಾಗಲೆ ಅದೇ ವರ್ಷದ ಕೊನೆಯ ಹೊತ್ತಿಗೆ ಅವರ ೮-೯ ತಿಂಗಳ ಕಿರಿಯ ಕೂಸು ಆನಂದ ಮತ್ತು ಹಿರಿಯ ಮಗ ರಾಮ ಕೇವಲ ಎಂಟು ದಿನಗಳ ಅಂತರದಲ್ಲಿ ಸತ್ತುಹೋದರು. ಮುಂದಿನ ದಿನಗಳಲ್ಲಿ ಉಳಿದ ಮೂವರು ಮಕ್ಕಳಾದ ಪಾಂಡುರಂಗ, ವಾಮನ ಮತ್ತು ಮಂಗಲಾ ಅನಾರೋಗ್ಯಕ್ಕೆ ತುತ್ತಾಗಿ ದೈವಬಲದಿಂದ ಮರಳಿ ಆರೋಗ್ಯವಂತರಾದರು. ಮಕ್ಕಳ ಸಾವಿನಿಂದ, ವಿಷಮಜ್ವರದಿಂದ ಜರ್ಜರಿತಳಾಗಿದ್ದ ಹೆಂಡತಿ ಲಕ್ಷ್ಮೀಬಾಯಿಯೂ ಕೂಡ ದೈವಕೃಪೆಯಿಂದ ಬದುಕುಳಿದಳೆಂದು ಬೇಂದ್ರೆ ಶ್ರೀಗುರುಗಳ ಮತ್ತು ಶ್ರೀಮಾತೆಯ ಆಶೀರ್ವಾದದ ಬಲವನ್ನು ನೆನೆಯುತ್ತಾರೆ. ಬೇಂದ್ರೆಯವರ ಎಡಗಾಲಿಗೆ ಪೆಟ್ಟುಬಿದ್ದು ನಂತರ ಗುಣವಾಯಿತು. ಕುಟುಂಬಕ್ಕೆ ಆದ ಆಘಾತ ಸಾಲದೆಂಬಂತೆ ಆಧ್ಯಾತ್ಮಕ್ಕೆ ಸೇತುವೆಯಾಗಿದ್ದ ಗೆಳೆಯ ಮಧುರಚೆನ್ನರು, ಶಂಕರಗೌಡರು, ಶ್ರೀ ಅರವಿಂದರು, ಪಾಂಡಿಚೇರಿ ಆಶ್ರಮದ ಕಪಾಲಿಯವರು ಈ ದಿನಗಳಲ್ಲಿ ತೀರಿಕೊಂಡರು.

ಇಂತಹ ಮಹಾಸಂಕಟದ ದಿನಗಳನ್ನು ಅವರು ಬಲು ಕಷ್ಟದಿಂದಲೆ ದೂಡಿದರು. ಹೆಂಡತಿಯ ಕಣ್ಣಂತೂ ಅತ್ತು ಅತ್ತು ಆಳಕ್ಕೆ ಸರಿದಿದ್ದವು. ಇಬ್ಬರು ಪ್ರೀತಿಯ ಮಕ್ಕಳನ್ನು ಕಳೆದುಕೊಂಡದ್ದು ಸೂರ್ಯಚಂದ್ರರನ್ನೆ ಕಳೆದುಕೊಂಡಂತಾಗಿತ್ತು. ಭರವಸೆ ಮೂಡಿಸಿದ್ದ ದೊಡ್ಡ ಹುಡುಗ ರಾಮ ಆಕಾಶದಲ್ಲಿ ತೇಜಃಪುಂಜವಾಗಿ ಮಿನುಗಿ ಕಣ್ಮರೆಯಾಗುವ ಉಲ್ಕೆಯಂತೆ ಕ್ಷಣಮಾತ್ರದಲ್ಲಿ ಕಣ್ಮರೆಯಾಗಿಬಿಟ್ಟ. 'ಎದೆಯ ಹತ್ತಿರ ಹೆಗಲ ಎತ್ತರ' ಬೆಳೆದಿದ್ದ ಆತನನ್ನು ಕಳೆದುಕೊಂಡ ಪಾಡನ್ನು 'ಪಾಡು' ಎನ್ನುವ ೨೧೨ ಸಾಲುಗಳ ಒಂದು ದೀರ್ಘ ಕವಿತೆಯಲ್ಲಿ ದಾಖಲಿಸಿದ್ದಾರೆ. ಅದು ಹೃದಯವನ್ನು ತಲ್ಲಣಗೊಳಿಸುವ ಒಂದು ಶೋಕಗೀತೆಯಾಗಿದೆ.

ಎದೆಯ ಹತ್ತಿರ ಹೆಗಲ ಎತ್ತರ ಬೆಳೆದು ಬೆಂಬಲವಾಗುತ
ಉಲ್ಕೆ ಉಳುಕಿದ ಹಾಗೆ ಗಳಕನೆ ಕಳಚುವರೆ ಕೆಳಸಾಗುತ
ನಿನ್ನ ಹದಮಿದು ನಿನ್ನ ಹಿತಮಿತ 'ನಿಮ್ಮ ವಿವು' ನನಗೆಂದೆಯೋ
ನಿನ್ನ ನಗೆಬಗೆ-ಎಂಥ ಲಗುಬಗೆಯಿಂದ ಕಣ್ಮರೆ ಸಂದೆಯೋ
....
ಸತ್ತ ದಶರಥ ಇದ್ದ ರಾಮನಿಗಾಗಿ ಅತ್ತನು ಅಂದಿಗೆ-
ಸತ್ತ ರಾಮಗೆ ಅತ್ತೆ ಅಳುವನು ಇರುವ ದತ್ತನು ಇಂದಿಗೆ
ಜೀವ ಜೀವವು ಅಗಲದಂದದ ಅರಿವು ಬೆಳೆವುದು ಎಂದಿಗೆ
ಅಂದೆ ಸಾಕೆನಿಸೀತು ಶೋಕವು ಹುಟ್ಟಿ ಸಾಯುವ ಮಂದಿಗೆ[೩೨]

೨.೫ ಕಾವ್ಯದ ಕುಲುಮೆ ಹೊತ್ತಿಸಿದ ದಾರ್ಶನಿಕ ಕವಿ :

ದುಃಖದ ಭಾರವನ್ನು ಕಡಿಮೆ ಮಾಡಬೇಕೆಂತಲೋ ಏನೋ ಸುಖದ ಘಳಿಗೆಗಳು ಮತ್ತೆ ಬರತೊಡಗಿದವು. ಕ್ರಮೇಣ ಸೊಲ್ಲಾಪುರ ಬೇಂದ್ರೆಯವರಿಗೆ ಒಂದು ಸ್ಥಿರತೆಯನ್ನು ತಂದುಕೊಟ್ಟಿತು. ಅವರ ಮನೆಯಲ್ಲಿ ಯಾವಾಗಲೂ ಸಾಹಿತ್ಯದ ಸಮಾರಾಧನೆಯೆ ನಡೆದಿರುತ್ತಿತ್ತು. ಕನ್ನಡ ಮತ್ತು ಮರಾಠಿ ಸ್ನೇಹಿತ ವಲಯ ಮುತ್ತಿಕೊಂಡಿರುತ್ತಿತ್ತು. ೧೯೪೬ ರಲ್ಲಿ ಕರ್ನಾಟಕದ ಬೇಂದ್ರೆ ಅಭಿಮಾನಿಗಳು ಮತ್ತು ಅಸಂಖ್ಯಾತ ಸಹೃದಯರು ಅವರ ೫೦ನೆಯ ಹುಟ್ಟುಹಬ್ಬವನ್ನು ಸಡಗರ, ಸಂಭ್ರಮಗಳಿಂದ ಆಚರಿಸಿದರು. ಕವಿಗೆ ೬೦ ವರ್ಷ ತುಂಬಿದ ನೆನಪಿಗೆ ಅವರು ಸೊಲ್ಲಾಪುರವನ್ನು ಬಿಟ್ಟು ಬಂದ ಮೇಲೆ ೧೯೫೭ ರಲ್ಲಿ ಸತ್ಕಾರ ಏರ್ಪಡಿಸಿ ಗೌರವ ಸಲ್ಲಿಸಿದರು.

ಅದೇ ತರಹ ಸೊಲ್ಲಾಪುರದ ಮಂದಿ ಕೂಡ ಎರಡು ಸಲ ಅವರ ಹುಟ್ಟುಹಬ್ಬದ ಕಾರ್ಯಕ್ರಮ ಏರ್ಪಡಿಸಿ ಪ್ರೀತಿ, ವಿಶ್ವಾಸಗಳನ್ನು ಪ್ರಕಟ ಮಾಡಿದರು. ಈ ನಡುವೆ ಬೇಂದ್ರೆಯವರ 'ಹಾಡುಪಾಡು'(೧೯೪೬), 'ಗಂಗಾವತರಣ' (೧೯೫೧), 'ಕೃಷ್ಣಾಕುಮಾರಿ ಮತ್ತು ಹಾಡು-ಪಾಡು' (೧೯೫೦), 'ಸೂರ್ಯಪಾನ' (೧೯೫೬), 'ಹೃದಯ ಸಮುದ್ರ' (೧೯೫೬), 'ಮುಕ್ತಕಂಠ' (೧೯೫೬) ಕವನ ಸಂಕಲನಗಳು ಪ್ರಕಟಗೊಂಡವು. ಇಲ್ಲಿಂದ

ಬೇಂದ್ರೆಯವರು ಹಿಂದೆ ನೋಡಲಿಲ್ಲ. ಸಾಹಿತ್ಯ ರಚನೆ ನಿರಾತಂಕವಾಗಿ ಸಾಗಿತು. ಸಹೃದಯರ ಪ್ರೀತಿ ಬೆಳೆಯುತ್ತ ಹೋಯಿತು.

ಬೇಂದ್ರೆಯವರಿಗೆ ೬೦ ವರ್ಷಗಳಾದುದರಿಂದ ಸೊಲ್ಲಾಪುರದ ಡಿ.ಎ.ವ್ಹಿ. ಕಾಲೇಜಿನ ಕನ್ನಡ ಪ್ರಾಧ್ಯಾಪಕರ ಕೆಲಸ ಮುಗಿಯಿತು. ಅವರು ಮರಳಿ ಧಾರವಾಡದ ತಮ್ಮ ಸಾಧನಕೇರಿಯ ಮನೆಗೆ ಬರಲು ನಿರ್ಧರಿಸಿದರು. ಸುದೈವಕ್ಕೆ ಆಕಾಶವಾಣಿಯಲ್ಲಿ ಉನ್ನತ ಹುದ್ದೆಯಲ್ಲಿದ್ದ ಲಾಡ್ ಎನ್ನುವ ಸ್ನೇಹಿತರ ನೆರವಿನಿಂದ ಬೇಂದ್ರೆಯವರಿಗೆ ಧಾರವಾಡ ಆಕಾಶವಾಣಿಯಲ್ಲಿ ಸಾಹಿತ್ಯ ಸಲಹೆಗಾರರು ಎನ್ನುವ ಹುದ್ದೆ ದೊರೆಯಿತು. 'ಗೋಕಾಕರು ಆಕಾಶವಾಣಿಯ ಸಲಹಾ ಸಮಿತಿಯಲ್ಲಿ ಸದಸ್ಯರಾಗಿದ್ದರು. ಅವರು ದಿಲ್ಲಿಗೆ ಹೋದಾಗ ಆಕಾಶವಾಣಿಯ ಅತ್ಯುನ್ನತ ಅಧಿಕಾರಿ ಪುರುಷೋತ್ತಮ ಮಂಗೇಶ್ ಲಾಡ್ ಎಂಬುವರನ್ನು ಕಂಡಿದ್ದರು. ಲಾಡ್ ಆಯ್.ಸಿ.ಎಸ್. ಅಧಿಕಾರಿ, ಮರಾಠಿ ಕವಿ. ಸೊಲ್ಲಾಪುರದ್ಲಲಿ ಕಲೆಕ್ಟರ್ ಆಗಿದ್ದಾಗ ಬೇಂದ್ರೆಯವರ ಬಳಿ 'ಕಾವ್ಯ-ಕಥಾ-ವಿನೋದ'ಕ್ಕೆ ಹಲವಾರು ಬಾರಿ ಹೋಗುತ್ತಿದ್ದರು. ಬೇಂದ್ರೆಯವರು ನಿವೃತ್ತರಾಗಿ ಧಾರವಾಡಕ್ಕೆ ಮರಳಿ ಬಂದ ವಿಷಯ ಗೋಕಾಕರಿಂದ ತಿಳಿದರು. ಇಂಥ ದೊಡ್ಡ ಕವಿಯ ಸಹಾಯ-ಸಲಹೆ ಆಕಾಶವಾಣಿಯು ಪಡೆಯುವ ಯೋಜನೆಯನ್ನು ಕಲ್ಪಿಸಿದರು.'[೩೩]

ಅವರು ಆಕಾಶವಾಣಿಯಲ್ಲಿದ್ದಾಗ ಸಾಹಿತ್ಯಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ಬಲ ಬಂದಿತು. ಪ್ರತಿಭೆಗಳಿಗೆ ಅವಕಾಶ ದೊರೆಯಿತು. ಪ್ರೊ. ಎಂ.ವಿ.ಸೀತಾರಾಮಯ್ಯ ಅವರು ತಮಗೊದಗಿದ ಅಂತಹ ಅಪರೂಪದ ಸಂದರ್ಭವನ್ನು ಹೀಗೆ ಬಣ್ಣಿಸುತ್ತಾರೆ. '೧೯೬೧ ರ ಆಕಾಶವಾಣಿಯ ರಾಷ್ಟ್ರಮಟ್ಟದ ಕವಿ ಸಮ್ಮೇಳನದಲ್ಲಿ ಭಾಗವಹಿಸಲು ನಿನ್ನ ಹೆಸರು ಸೂಚಿತವಾಗಿದೆ, ಗಣರಾಜ್ಯ ದಿನದ ಈ ಸಮಾರಂಭಕ್ಕೆ ನೀನು ದೆಹಲಿಗೆ ಹೋಗಬೇಕು ಎಂದು ನನ್ನ ಕಾಲೇಜು ದಿನಗಳ ಸನ್ಮಿತ್ರ, ಬೆಂಗಳೂರು ಆಕಾಶವಾಣಿಯ ನಿಲಯ ನಿರ್ದೇಶಕ ಡಾ. ಎ.ಎಮ್.ನಟೇಶ್ ಕಾಲೇಜಿಗೆ ಬಂದು ತಿಳಿಸಿದಾಗ, 'ನಾನು-ನೀನು ಸ್ನೇಹಿತರೆಂದು ಕೆಲವರಿಗಾದರೂ ತಿಳಿದಿದೆ. ಇದು ಪಕ್ಷಪಾತದ ಆಯ್ಕೆ ಎಂದು ನಿನ್ನ ಮೇಲೆ ಆರೋಪ ಬರಬಹುದು. ನಾನು ಹೋಗುವುದಿಲ್ಲ' ಎಂದು ಆಹ್ವಾನವನ್ನು ನಿರಾಕರಿಸಿದೆ. ''ಆಯ್ಕೆ ನನ್ನದಲ್ಲ ಮಗೂ, ಧಾರವಾಡ ನಿಲಯದ ಸಾಹಿತ್ಯ ಸಲಹಾಕಾರ ಬೇಂದ್ರೆ ಅವರದ್ದು'' ಎಂದಾಗ ಸಂತಸದ ಉಕ್ಕಿನಲ್ಲಿ ಅವಾಕ್ಕಾದೆ. ದೆಹಲಿಗೆ ಹೋದೆ, ಪದ್ಯ ಓದಿದೆ. ದೆಹಲಿಗೆ ಬೇಂದ್ರೆಯವರೂ ಬಂದಿದ್ದರು... ಅವರ ಹರಕೆ ಕಾವ್ಯದ ಮುನ್ನಡೆಗೆ ಮೀಟುಗೋಲಾಯಿತು.'[೩೪]

ಹತ್ತು ವರ್ಷಗಳ ಕಾಲ ಜನರಲ್ಲಿ ಸಾಹಿತ್ಯದ ಅಭಿರುಚಿ ಬೆಳೆಸುವಲ್ಲಿ ಅವರು ದುಡಿದರು. ಸಾಕಷ್ಟು ಪ್ರವಾಸ ಮಾಡಿದರು. ಅವರ ನೌಕರಿಯ ಉದ್ದೇಶವೂ ಅದೇ ಆಗಿತ್ತು. ೧೯೫೭ ರಲ್ಲಿ ಪ್ರಕಟವಾದ ಅವರ 'ಅರಳು-ಮರಳು' ಕವನ ಸಂಕಲನಕ್ಕೆ ೧೯೫೯ ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ಸಿಕ್ಕಿತು. ೧೯೬೫ ರಲ್ಲಿ ಮರಾಠಿ ಗ್ರಂಥ 'ಸಂವಾದ'ಕ್ಕೆ ಕೇಳಕರ ಪ್ರಶಸ್ತಿ, ೧೯೬೬ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್, ೧೯೬೮

ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಮತ್ತು ಕಳಸಪ್ರಾಯವೆಂಬಂತೆ ೧೯೭೪ ರಲ್ಲಿ 'ನಾಕುತಂತಿ' ಕೃತಿಗೆ 'ಜ್ಞಾನಪೀಠ' ಪುರಸ್ಕಾರ ಲಭಿಸಿತು.

ಬೇಂದ್ರೆಯವರ ಜೊತೆ ಸಮೀಪದಿಂದ ವ್ಯವಹರಿಸಿರುವ, ಕಾವ್ಯಸಂಧಾನ ನಡೆಸಿರುವ ಡಾ. ಜಿ.ವಿ.ಕುಲಕರ್ಣಿ ಹಾಗೂ ಡಾ. ಕೆ.ಎಸ್.ಶರ್ಮಾ ಅವರು ಬೇಂದ್ರೆ ಬದುಕಿನ ಕೆಲವು ಆಪ್ತ ಒಳನೋಟಗಳನ್ನು ಕೊಡುತ್ತಾರೆ. ಅವರ ಮಾತಿನ ಶೈಲಿ, ಹರಟೆ, ಕಾವ್ಯಝರಿ, ಕಷ್ಟದ ದಿನ, ಅನುವಾದಗಳಲ್ಲಿ ಕೂಡಿ ಮಾಡಿದ ಕೆಲಸ, ಸಭೆ-ಸಮಾರಂಭಗಳಲ್ಲಿ ಹಾಸ್ಯಚಟಾಕಿ, ಕೊನೆಯ ದಿನಗಳು ಮುಂತಾದವುಗಳ ಬಗ್ಗೆ ಪ್ರಥಮ ಮಾಹಿತಿ ದೊರೆಯುತ್ತದೆ.' ನಾವು ಅವರಲ್ಲಿ ಹೋದಾಗ ತಮ್ಮ ಹೊಸ ಕವನಗಳನ್ನು ಓದಿ ತೋರಿಸುತ್ತಿದ್ದರು. ಸ್ವಾರಸ್ಯಕರ ವಿಷಯವೆಂದರೆ ಬೇಂದ್ರೆಯವರಿಗೆ ಜ್ಞಾನಪೀಠ ಪ್ರಶಸ್ತಿಯನ್ನು ದೊರಕಿಸಿದ 'ನಾಕುತಂತಿ' ಸಂಗ್ರಹದ, 'ನಾಕುತಂತಿ' ಕವನದ ಪ್ರಥಮ ಶ್ರೋತೃಗಳು ನಾನು - ಜೀವಿ ಆಗಿದ್ದೆವು...

ಆವು-ಈವಿನ
ನಾವು ನೀವಿಗೆ
ಆನು ತಾನದ
ತನನನಾಽ...

...ಈ ಕವನ ಸಂಕಲನದ ಹಿಂದಿ ಅನುವಾದಗಳನ್ನು ಜ್ಞಾನಪೀಠ ಸಮಿತಿಯು ಪ್ರೊ. ಪುತ್ರನ್‌ಗೆ ಒಪ್ಪಿಸಿದ್ದರು. ಪ್ರೊ. ಜೀವಿಯ ಸಹಯೋಗದೊಂದಿಗೆ ಅವರು ಈ ಕಾರ್ಯ ಪೂರ್ಣಗೊಳಿಸಿದ್ದರು. ಅಂತೆಯೇ 'ನಾಕು ತಂತಿ' ಆಯ್ದ ಕವನಗಳ ಆಂಗ್ಲ ಅನುವಾದವನ್ನು ಡಾ. ಕೆ. ರಾಘವೇಂದ್ರರಾವ್, ಬಾಳಣ್ಣ (ಡಾ. ವಾಮನ ಬೇಂದ್ರೆ) ಹಾಗೂ ನಾನು (ಡಾ. ಕೆ.ಎಸ್.ಶರ್ಮಾ) ಕೂಡಿಕೊಂಡು ಸಿದ್ಧಪಡಿಸಿದೆವು. ಈ ಕೃತಿ 'Four Strings' ಜ್ಞಾನಪೀಠ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲೇ ಬಿಡುಗಡೆಯಾಯಿತು...ವರಕವಿ ಡಾ. ದ.ರಾ.ಬೇಂದ್ರೆಯವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಶಿಪ್ ಕೊಡಲಾಯಿತು. ಇದರ ವಿಶಿಷ್ಟತೆಯೆಂದರೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಥಮ ಫೆಲೋಶಿಪ್‌ಗಳು ಇವಾಗಿದ್ದು, ಸಾಹಿತ್ಯ ಕ್ಷೇತ್ರದಲ್ಲಿ ಮೇರು ಸಾಧನೆಗಳನ್ನು ಮಾಡಿದ್ದ ಆಗಿನ ರಾಷ್ಟ್ರಪ್ರಧಾನಿ ಜವಾಹರ್‌ಲಾಲ್ ನೆಹರು ಹಾಗೂ ರಾಷ್ಟ್ರದ ಪ್ರಥಮ ಗವರ್ನರ್ ಜನರಲ್ ಚಕ್ರವರ್ತಿ ರಾಜಗೋಪಾಲಾಚಾರಿ ಇವರೊಡನೆ ಈ ಗೌರವವನ್ನು ಬೇಂದ್ರೆಯವರು ಹಂಚಿಕೊಂಡಿದ್ದರು.'[೩೫]

ಶರ್ಮಾರವರ ಮಾತುಗಳು ಬೇಂದ್ರೆಯವರ ವೈಯಕ್ತಿಕ ಬದುಕಿನ ನೋಟಗಳನ್ನು ವಿವರಿಸುವುದಲ್ಲದೆ ಸಾರ್ವಜನಿಕವಾಗಿ ಮಹತ್ವವಾಗುವುದನ್ನು ಹೇಳುತ್ತವೆ. 'ಗುರುಗೋವಿಂದ್ ಸಿಂಗ್' ಪುಸ್ತಕವನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಬೇಂದ್ರೆಯವರು ಅನುವಾದಿಸುವಾಗ ಶರ್ಮಾ ಹಾಗೂ ಡಾ. ವಾಮನ ಬೇಂದ್ರೆಯವರನ್ನು ಆ ಕೆಲಸದಲ್ಲಿ ತೊಡಗುವಂತೆ ಮಾಡಿ ಸಂಭಾವನೆಯನ್ನೂ ಮೂರು ಭಾಗಗಳನ್ನಾಗಿ ಹಂಚಿದರು. ಸುಖವಾಗಲಿ, ಸಂಭ್ರಮವಾಗಲಿ,

ನೋವಾಗಲಿ, ಮಾತಾಗಲಿ, ಹರಟೆಯಾಗಲಿ ಬೇಂದ್ರೆ ಸಹಜ ರೀತಿಯಲ್ಲಿ ತೆಗೆದುಕೊಳ್ಳುತ್ತಿದ್ದರು. ಆರಾಮವಿಲ್ಲದ್ದಕ್ಕೆ ಕೊನೆಯ ದಿನಗಳನ್ನು ಮುಂಬೈಯ ಆಸ್ಪತ್ರೆಯಲ್ಲಿ ಕಳೆಯಬೇಕಾಗಿ ಬಂದುದಕ್ಕೆ 'ನನ್ನ ಜೀವನವನ್ನೇ ಕರ್ನಾಟಕಕ್ಕೆ ಕೊಟ್ಟಿದ್ದೇನೆ. ದೇಹವನ್ನು ಬಹುಶಃ ಮಹಾರಾಷ್ಟ್ರದಲ್ಲಿ ಬಿಡುವೆ'[೩೬] ಎಂದು ಅವರು ಆಡಿದ ಮಾತು ನಿಜವಾಗಿ ಪರಿಣಮಿಸಿದ್ದು ದುರಂತವೆನ್ನಬೇಕು.

ನಲುಮೆಯ ಸಖಿ ಲಕ್ಷ್ಮೀಬಾಯಿ ೧೯೬೬ ರಲ್ಲಿ ಬೇಂದ್ರೆಯವರನ್ನು ಬಿಟ್ಟು ನಡೆದರು. ಕಟುವಾಗಿಯೂ, ಮಧುರವಾಗಿಯೂ ಇದ್ದ ಸಂಬಂಧವನ್ನು ಕವಿ ನೂರಾರು ಕವಿತೆಗಳಲ್ಲಿ ವ್ಯಾಖ್ಯಾನದೊಡಗೂಡಿ ವಿವರಿಸಿದ್ದಾರೆ. ದಾಂಪತ್ಯವನ್ನು ಅವರು ಸಾಧನೆಯ ಮೆಟ್ಟಿಲನ್ನಾಗಿ ಮಾಡಿಕೊಂಡರು.

'ನಾಕುತಂತಿ'ಯಿಂದ ಬೇಂದ್ರೆಯವರ ಕಾವ್ಯಮಾರ್ಗ ಸಂಖ್ಯೆ, ವೇದ, ಉಪನಿಷತ್ತು, ಶಾಸ್ತ್ರಗಳ ಕಡೆಗೆ ಹೊರಳಿತು. 'ಬಾಲಬೋಧೆ' ಕೃತಿಯ ಕವನಗಳು ಅಂತಹ ಅಭ್ಯಾಸವನ್ನು ನಿರೀಕ್ಷಿಸುತ್ತವೆ. ತಮ್ಮ ಕೊನೆಯ ದಿನಗಳಲ್ಲಿ ಬೇಂದ್ರೆಯವರು ತುಳಿದ ಹಾದಿಯ ಬಗ್ಗೆ ಕೆಲವರಿಗೆ ಅಸಮಾಧಾನವಿದೆ. ವೈದಿಕ ನಂಬಿಕೆಗಳ ಬಗ್ಗೆ ಆಕ್ಷೇಪಗಳಿವೆ. ಸರಸ-ವಿರಸಗಳನ್ನು ಬೇಂದ್ರೆಯವರು ಬದುಕಿನ ಭಾಗವಾಗಿಯೆ ತೆಗೆದುಕೊಂಡರು.

೧೯೮೧ ರ ಸುಮಾರಿಗೆ ಬೇಂದ್ರೆಯವರಿಗೆ ಆರೋಗ್ಯ ಕೈ ಕೊಡಲಿಕ್ಕೆ ಹತ್ತಿತು. ಡಾ. ವಾಮನ ಬೇಂದ್ರೆಯವರು ತಮ್ಮ ತಂದೆಯ ಕೊನೆಯ ದಿನಗಳ ಬಗ್ಗೆ ಹೀಗೆ ಬರೆಯುತ್ತಾರೆ. '೧೯೮೧ ರಿಂದ ಆರೋಗ್ಯ ಸಂಪೂರ್ಣ ಕೆಟ್ಟಿತು. ಆಹಾರ ಸೇವನೆ ನಿಂತು ಹೋಯಿತು. ಆದುದರಿಂದ ಇಂಟ್ರಾವ್ಹೀನಸ್ ಔಷಧೋಪಚಾರ ಮಾಡಲೇಬೇಕಾಗಿ ಬಂದಿತು. ಬೇಂದ್ರೆಯವರು ತಮ್ಮ ಇಡಿ ಈ ಜೀವಮಾನದಲ್ಲಿ ಯಾರಿಗೂ ಬಗ್ಗಿದವರಲ್ಲ. ತಮ್ಮ ಮಾತನ್ನೇ ನಡೆಸಿದವರು. ಆದರೆ ಅವರ ಲೀವರ್ ಈಗ ಅವರ ಮಾತನ್ನು ಕೇಳದಂತೆ ಆಗಿ ಅವರು ಸತತವಾಗಿ ಸೂಜಿಮದ್ದಿಗೆ ಬಲಿಯಾಗಬೇಕಾಗಿ ಬಂದಿತು...೨೬.೧೦. ೧೯೮೧ ರಂದು ಹರಿಕಿಸನ್‌ದಾಸ್ ಆಸ್ಪತ್ರೆಯಲ್ಲಿ ಮಧ್ಯಾಹ್ನ ೧.೧೮ ಕ್ಕೆ ಬೇಂದ್ರೆಯವರು ನಿರ್ವಾಣ ಹೊಂದಿದರು.'[೩೭]

ಬೇಂದ್ರೆಯವರ ನಿಧನದಿಂದ ಕನ್ನಡ ಕಾವ್ಯ ಪರಂಪರೆಯ ಒಂದು ಸಮೃದ್ಧ ಕೊಂಡಿ ಕಳಚಿದಂತಾಯಿತು. ಒಬ್ಬ ಮೇರು ಹಾಗೂ ಜನಪ್ರಿಯ ಕವಿಯಾಗಿ ಅವರು ಜನಮಾನಸದಲ್ಲಿ ಬದುಕಿರುವುದರಿಂದ ಅವರ ಕಾವ್ಯಕ್ಕೆ ಸಾವಿರಲಾರದು. ಹೊಸ ಕಾವ್ಯಕ್ಕೆ ಅವರ ಪ್ರಭಾವ ನೀರು ಮತ್ತು ಗಾಳಿಯನ್ನು ಕುಡಿಸುತ್ತಲೆ ಇರುತ್ತದೆ. ಮನುಷ್ಯನಿಗೆ ಸಾವು ಇದೆ. ಆದರೆ ನೆಲಕ್ಕೆ, ನೆನಪಿಗೆ ಸಾವಿಲ್ಲವೆಂದು ಬೇಂದ್ರೆಯವರು ನಂಬಿದ್ದರು. ನೀರಿನಲ್ಲಿರುವ ಕಮಲ ಬೆಳಕಿಗೆ ಕೆರಳಿ ಅರಳಿದಂತೆ ಬೇಂದ್ರೆಯವರು ಕೂಡ ಭೂಮಿಯನ್ನು ತಾಯಿಯಾಗಿ ಕಲ್ಪಿಸಿಕೊಂಡು ಅವಳ ತುಂಬಿದ ಬಸುರಿನಲ್ಲಿ ಅವಳ ಉಸಿರನ್ನು ಉಸಿರಾಗಿಸಿಕೊಂಡು ಗಾಳಿ ಬೆಳಕಿನೊಂದಿಗೆ ನಿಸರ್ಗದ ಪ್ರೇಮರಸವನ್ನು ಉಂಡಿದ್ದಾರೆ.

ಭೂಮಿತಾಯಿಯ ಮೈಯ ಹಿಡಿಮಣ್ಣ ಗುಡಿಗಟ್ಟಿ

ನಿಂತಂತ ಮೂರ್ತಿ ನಾನು![೩೮]

ಭೂಮಿತಾಯಿಯ ಮಗನಾಗಿಯೂ, ಅಂಬಿಕೆಯ ತನಯನಾಗಿಯೂ ತಾಯ ಉದರದ ಹೂವನ್ನು ಕಾವ್ಯ ಸರಸ್ವತಿಗೆ ಸಲ್ಲಿಸಿದ್ದಾರೆ.

ನಿನ್ನ ಉದರದೊಂದ ಹೂವ ಸರಸ್ವತಿಗೆ ಸಲಿಸಿದೆ ।

ಚುಕ್ಕೆಯಾಗಿ ನೆಲೆಸಿದೆ ॥

ಸಾವಿರದ ಮನೆಗಳಲ್ಲಿ ನನಗೆ ಮನೆಯ ಮಾಡಿದೆ ।

ತಾಯಿ ಆಟ ಹೂಡಿದೆ ॥[೩೯]

ಸಾವು ಇಲ್ಲದ ಮನೆಗಳಲ್ಲಿ ಹಾಗೂ ಸಾವಿರ ಸಾವಿರ ಮನೆಗಳಲ್ಲಿ ಚೈತನ್ಯದ ಸೃಜನಶೀಲತೆ ಮನೆ ಮಾಡಲಿಕ್ಕೆ ತಾಯಿ ಕಾರಣಳಾಗಿದ್ದಾಳೆ. ‘ಜೈವಿಕ ನೆಲೆಗಳಾದ ಮಣ್ಣು, ಪರಾಗಜ್ಯೋತಿ, ಗಾಳಿ, ಜೀವಂತ ಮಮತೆ, ಜೀವ, ದೇಹ ಇವುಗಳು ಪೂಜಿಸುವ ಅಮೂರ್ತ ಕಲ್ಪನೆಗಳಲ್ಲ. ಬದಲಾಗಿ ಸಂಪೂರ್ಣವಾಗಿ ನೆಲಕ್ಕಂಟಿದ ಅನುಭೂತಿ. ಹೀಗಾಗಿ ಕವಿ ಇಲ್ಲಿ ಅಮೂರ್ತವಾದಂತದ್ದನ್ನು ಆವಾಹಿಸಿಕೊಳ್ಳುತ್ತಿದ್ದಾರೆ’[೪೦] ಎನ್ನುವ ಕಿ.ರಂ.ನಾಗರಾಜರ ಮಾತುಗಳಲ್ಲಿ ಪ್ರಕೃತಿಯ ಪ್ರತೀಕಗಳ ಮೂಲಕ ಬೇಂದ್ರೆಯವರು ತಮ್ಮ ಅಂತರಂಗವನ್ನು ಅರಳಿಸಿಕೊಂಡುದದರ ಚೈತನ್ಯಸ್ವರೂಪನನ್ನು ಆವಾಹಿಸಿದುದರ ಪರಿಕಲ್ಪನೆಯನ್ನು ಕಾಣಬಹುದು. ನೆಲದ ಸಂಬಂಧದಿಂದ ನೂರೆಂಟು ಸಂಬಂಧಗಳನ್ನು ಹಾಗೂ ಬದುಕಿನ ಮೌಲ್ಯಗಳನ್ನು ಅವರು ಹುಡುಕಿ ಹೋಗಿದ್ದರು. ಅವುಗಳಿಗಾಗಿ ಯಾವಾಗಲೂ ಹೃದಯವನ್ನು ಬೆಂಕಿಯಲ್ಲಿ ಕಾಯಿಸುತ್ತಿದ್ದರು, ಕೆರಳುತ್ತಿದ್ದರು. ತಮ್ಮ ಇಳಿವಯಸ್ಸಿನಲ್ಲಿಯೂ ಧಾರವಾಡದ ನೆಲವನ್ನು ಪ್ರಾಣಕ್ಕಿಂತಲೂ ಹೆಚ್ಚಾಗಿ ಅವರು ಪ್ರೀತಿಸುತ್ತಿರುವುದಕ್ಕೆ ಕುರ್ತಕೋಟಿಯವರು ಹೇಳುವ ಈ ಘಟನೆ ಒಂದು ನಿದರ್ಶನವಾಗಿದೆ : ‘೧೯೭೭ ರ ಮೇ ತಿಂಗಳಲ್ಲಿ (ಬಹುಶಃ ೩೦ನೆಯ ತಾರೀಖು ಇರಬೇಕು) ನಾನು ಧಾರವಾಡದಲ್ಲಿದ್ದಾಗ ಬೇಂದ್ರೆಯವರು ಬೆಳಿಗ್ಗೆ ೮ ಗಂಟೆಗೆ ನಾನು ಇಳಿದುಕೊಂಡಲ್ಲಿಗೆ ಬಂದರು. ಇಬ್ಬರೂ ಕೂಡಿ ಧಾರವಾಡದಲ್ಲಿ ತಿರುಗಾಡಿ ಬರಬೇಕೆಂದರು... ಹಾಗೇ ಮುಂದೆ ಬೇಂದ್ರೆಯವರು ಹುಟ್ಟಿದ ಮನೆಗೆ ಬಂದೆವು. ಬಾಗಿಲು ದಾಟಿದರೆ ಸಣ್ಣ ಒಳಂಗಳ, ಅದರ ಮಗ್ಗುಲಿಗೆ ಒಂದು ಚಿಕ್ಕ ಮನೆ. ಎದುರಿಗೆ ಮಾತ್ರ ದೊಡ್ಡದಾದ ಕತ್ತಲೆ ತುಂಬಿದ ಮನೆ. ಬೆಳಗಿನ ಈ ಹೊತ್ತಿನಲ್ಲೂ ಎಡವಿ ಬೀಳುವಷ್ಟು ಕತ್ತಲೆಯಾದ ಮನೆ... ಹಿತ್ತಲಲ್ಲಿ ಒಂದು ದೊಡ್ಡ ಬಾವಿ. ಅದರ ಮೇಲೆಲ್ಲ ತನ್ನ ನೆರಳನ್ನು ಚೆಲ್ಲಿದ್ದ ದೆವ್ವನಂಥ ಹುಣಿಸೇ ಮರ ನೋಡಿದೆವು... ಸಾಯುವದಿಲ್ಲವೆಂದು ಹಟ ಹಿಡಿದು ಜೀವ ಹಿಡಿದ ಮುದುಕರಂತಿದ್ದ ಮನೆಗಳನ್ನು ಕಂಡಾಗ ಅವರ ಮನಸ್ಸು ನೆನಪುಗಳನ್ನು ಹುಡುಕಿಕೊಂಡು ಹೋಗುತ್ತಿತ್ತು. ‘ಇಲ್ಲಿಯತನಕ ರಣಭೂಮಿಯಲ್ಲಿ ಕೌರವ ನಡೆದು ಬಂದಂತೆ ಬಂದೆವಲ್ಲ! ಈ ಹಾಳಿನಲ್ಲಿ ನನಗೆ ದೊರೆತಿರುವ ಜೀವನ ಪ್ರತಿಮೆಗಳು ಮಾತ್ರ ಅಮೂಲ್ಯವಾದವುಗಳು ಎಂದರು.’

ಬೇಂದ್ರೆಯವರ ಕಾವ್ಯದಲ್ಲಿ ಪ್ರೀತಿಯ, ವಾತ್ಸಲ್ಯದ ಹಾಗೂ ಕರುಣದ ನೂರಾರು ಚಿತ್ರ ಪ್ರತಿಮೆಗಳು ಈ ನೆಲದಿಂದಲೇ ಬಂದವುಗಳು.'[೪೮]

ಕನ್ನಡ ಕವಿತೆಗೆ ಉನ್ಮತ್ತತೆಯನ್ನು, ಸದಾ ಉಕ್ಕುವ ಚೈತನ್ಯವನ್ನು ದೊರಕಿಸಿದವರಲ್ಲಿ ಬೇಂದ್ರೆ ಅಗ್ರಗಣ್ಯರೆಂಬ ಅರ್ಥವುಳ್ಳ ಮಾತನ್ನು ಕಿ.ರಂ.ನಾಗರಾಜ ಅವರು ಹೇಳುತ್ತಾರೆ. ಆಧುನಿಕ ಕನ್ನಡ ಕವಿತೆ ಉಜ್ವಲವಾಗಿರುವಲ್ಲಿ, ರಮ್ಯವಾಗಿರುವಲ್ಲಿ, ಚೈತನ್ಯದ ಕಾಂತಿಯಿಂದ ಹೊಳೆಹೊಳೆಯುವದರಲ್ಲಿ, ವಿಲಕ್ಷಣತೆ ಹಾಗೂ ಆಕರ್ಷಣೆಯನ್ನು ರೂಢಿಸಿಕೊಂಡಿರುವಲ್ಲಿ ಬೇಂದ್ರೆಯವರ ಕೊಡುಗೆ ಅಪಾರವಾಗಿದೆ. ಬೇಂದ್ರೆಯವರಿಗೆ ದತ್ತವಾಗಿರುವ ಕಾವ್ಯದ ಮಾಂತ್ರಿಕತೆ ಅವರಿಗೇ ವಿಶಿಷ್ಟವಾದದ್ದು. ಕಿರಂ ಅವರು ಒಂದು ಉಪನ್ಯಾಸದಲ್ಲಿ ಅದನ್ನು ಸೂಕ್ತವಾಗಿಯೆ ಬಣ್ಣಿಸಿದ್ದಾರೆ: 'ಕನ್ನಡ ಭಾಷೆಯ ಅತ್ಯಂತ ಸೂಕ್ಷ್ಮ ನೆಲೆಯಲ್ಲಿ ನಿಂತು-ಛಂದಸ್ಸಂಗೀತ, ವಸ್ತು ವೈವಿಧ್ಯ ಮತ್ತು ಬದುಕಿನ ಅಗಾಧ ವಿವರಗಳು ಅಭಿವ್ಯಕ್ತಗೊಂಡ ಇಂತ ಸೃಷ್ಟಿಶೀಲತೆ ಈ ಶತಮಾನದ ಮಹೋನ್ನತ ಕಾವ್ಯ ಕುತೂಹಲಗಳಲ್ಲಿ ಒಂದಾಗಿ ಮೈ ತಳೆದಿದೆ... ಎಂಬತ್ತೈದು ವರ್ಷಗಳಿಗೂ ಮೀರಿ ಜೀವಿಸಿದ್ದ ಈ ಕವಿ ತನ್ನ ಕಾಲದಲ್ಲೇ ಲೆಜೆಂಡರಿ ಎನಿಸಿಕೊಂಡರು. ಅಲ್ಲದೇ ಈ ಶತಮಾನದ ವರ್ಣರಂಜಿತ ನಾಯಕ ಹೇಗಿರುತ್ತಾನೆಂಬುದಕ್ಕೆ ಬೇಂದ್ರೆ ಅತ್ಯಂತ ಶ್ರೇಷ್ಠ ಉದಾಹರಣೆಯೂ ಆದರು. ಇಂಥ ವ್ಯಕ್ತಿಚೈತನ್ಯವನ್ನು ನಾವು ಈ ಕಾಲದಲ್ಲಿ ಕಂಡದ್ದು ತುಂಬಾ ಸಮಕಾಲೀನ ಸಾಹಿತ್ಯಿಕ ಘಟನೆ ಎಂದೇ ತಿಳಿಯಬೇಕು.'[೪೯] ತಮ್ಮ ಕಾಲವನ್ನು ಅಭಿವ್ಯಕ್ತಿಸುತ್ತ ಎಲ್ಲ ಕಾಲದ ಅಭಿವ್ಯಕ್ತಿಯನ್ನು ತಮ್ಮ ಕವಿತೆಯೊಳಗೆ ಸಾಧಿಸಿದ ಬೇಂದ್ರೆಯವರು ಜಗತ್ತಿನ ಪ್ರಮುಖ ದಾರ್ಶನಿಕ ಕವಿಗಳಲ್ಲಿ ಒಬ್ಬರಾದರು. ಬೇಂದ್ರೆ ಕಾವ್ಯವು ಒದಗಿಸುವ ಅನುಭೂತಿಯಿಂದ ನಮ್ಮ ಅಂತಃಕರಣವನ್ನು ಹಸನು ಮಾಡಿಕೊಳ್ಳುವ, ಅವರ ಕಾವ್ಯದ ಜೊತೆ ಮತ್ತೆ ಮತ್ತೆ ಅನುಸಂಧಾನ ನಡೆಸುವ ಪ್ರಕ್ರಿಯೆಯೆ ಬೇಂದ್ರೆಯವರನ್ನು ಎಂದೆಂದೂ ಸಮಕಾಲೀನವಾಗಿರಿಸಿಕೊಳ್ಳಬಲ್ಲುದು.

ಭೂಮಿಯನ್ನು ಊಳಲಿಕ್ಕೆ ರಂಟೆ, ಕುಂಟೆ, ನೇಗಿಲು ಅವಶ್ಯವಾಗಿರುವಂತೆ ಕಾಲಕಾಲಕ್ಕೆ ಅವುಗಳ ಕುಳಗಳನ್ನು ಕಾಯಿಸುವುದು, ಹರಿತ ಮಾಡುವುದು ಕೂಡ ಮುಖ್ಯವಾದುದು. ಕಮ್ಮಾರನ ಕುಲುಮೆಯಲ್ಲಿ ನಿಗಿ ನಿಗಿ ಹೊಳೆಯುವ ಕೆಂಡದಲ್ಲಿ ಕುಡಗಳನ್ನು ಕೆಂಪಗೆ ಕಾಯಿಸಿ ತೀಕ್ಷ್ಣ ಮಾಡುವಂತೆ ಉತ್ಕಟ ಕಾವ್ಯಕ್ಕಾಗಿ ಕವಿಯಾದವನು ಅಂತಹ ಕುಲುಮೆಯಲ್ಲಿ ಹಾಯ್ದು ಬರಬೇಕೆಂದು ಬೇಂದ್ರೆ ಬಯಸಿದರು. ಎಲ್ಲ ಸ್ತರಗಳಲ್ಲಿಯೂ ಪರಿಪೂರ್ಣತೆಯನ್ನು ಸಾಧಿಸುವತ್ತ ಕವಿಯಾದವನು ಅದರಲ್ಲಿಯೂ ಹೊಸ ಕವಿಯಾದವನು ಯತ್ನಿಸಬೇಕು. ತಮ್ಮ ಕಾವ್ಯವನ್ನು ಅವರು ಅಂತಹ ಅಗ್ನಿಪಥದಲ್ಲಿ ಹಾಯಿಸಿಕೊಂಡು ಬರುತ್ತಿದ್ದರು. ಬೇಂದ್ರೆಯವರು ಇಲ್ಲವಾದ ಸಂದರ್ಭದಲ್ಲಿ ಕೀರ್ತಿನಾಥ ಕುರ್ತಕೋಟಿಯವರು ಪತ್ರಿಕೆಯೊಂದಕ್ಕೆ ಬರೆದ ಮಾತುಗಳು ಬೇಂದ್ರೆ ಕಾವ್ಯದ ಚಿರಂತನತೆಯನ್ನು ಬಣ್ಣಿಸುವಂತಿವೆ: 'ಬೇಂದ್ರೆ, ಈ ಯುಗದ ಅತ್ಯಂತ ಮೇಧಾವಿಯಾದ ಕವಿ ಎಂದು ಹೇಳಿದರೆ ಅತಿಶಯೋಕ್ತಿಯ ಮಾತಾಗಲಾರದು. ಸ್ಮೃತಿ, ಮತಿ, ಬುದ್ಧಿ, ಧೀ, ಮೇಧಾ, ಪ್ರತಿಭಾ ಎಂದು ಅನೇಕ ಬಗೆಯ ಸ್ತರಗಳನ್ನು ಮನುಷ್ಯನ ಪ್ರಜ್ಞೆಯಲ್ಲಿ

ಪ್ರಾಚೀನ ಶಾಸ್ತ್ರಕಾರರು ಗುರುತಿಸಿದ್ದಾರೆ. ಬೇಂದ್ರೆಯವರ ಕಾವ್ಯ ಈ ಎಲ್ಲ ಸ್ತರಗಳನ್ನೂ ಉಪಯೋಗಿಸಿಕೊಂಡು ಅಭಿವ್ಯಕ್ತವಾಗಿರುವುದು ಅದರ ಹೆಚ್ಚಳವಾಗಿದೆ. ಅರ್ಧ ಶತಮಾನಕ್ಕೂ ಮೀರಿ ಗುಡುಗಾಡಿದ ಈ ದನಿ ಈಗ ಮೌನವಾಗಿದೆ. ಈಗ ಉಳಿದಿರುವುದು ಅಶರೀರವಾಣಿ. ಬಹುಶಃ ಮೊದಲಿನದಕ್ಕಿಂತ ಹೆಚ್ಚು ಪ್ರಭಾವಪೂರ್ಣವಾದ ದನಿ.

ಹೊಯ್ತು ರಾಜ್ಯವು
ಬಂತು ರಾಜ್ಯವು
ಸಾಕ್ಷಿಗೆಲ್ಲಿನ ಗೊಮ್ಮಟ?
ಬೇರೆ ಕುಡಗಳು
ಕುಲುಮೆಯಲ್ಲಿವೆ
ಇಲ್ಲಿ ಕಾವ್ಯದ ಕಮ್ಮಟ'

ಕರ್ತಾರನ ಕಮ್ಮಟಕ್ಕಿಂತ ಇದು ಕಡಿಮೆಯದೇನಲ್ಲ'[೪೩]

ಸೃಷ್ಟಿಕರ್ತನ ಕುಲುಮೆಯಲ್ಲಿ ರೂಪುಗೊಳ್ಳುವ ಜಗತ್ತಿನಂತೆ ಕಾವ್ಯದ ಕುಲುಮೆಯಲ್ಲಿ ಆಕಾರ ತಳೆಯುತ್ತಿರುವ ಕುಡಗಳು ಲೋಕವನ್ನು ಸುಂದರಮಯವನ್ನಾಗಿ, ಶಿವಮಯವನ್ನಾಗಿ ಮಾಡಬಲ್ಲ ಶಕ್ತಿ ಪಡೆದಿವೆ. ಬೇಂದ್ರೆಯವರ ಭಾವಶಕ್ತಿ ಹಾಗೂ ಬೌದ್ಧಿಕತೆ ನಿಗಿನಿಗಿಯೆನ್ನುವ ಕುಲುಮೆಯಲ್ಲಿ ನಿಶಿತತೆಯನ್ನು ಪಡೆದುಬರುವ ರೀತಿ ಮಾತ್ರ ಅನುಪಮವಾದುದು ಹಾಗೂ ಅಸದೃಶವಾದುದು. ಅದಕ್ಕಾಗಿ ಬೇಂದ್ರೆ ಕಾವ್ಯಲೋಕವು ಸೃಷ್ಟಿಕರ್ತನ ಸೃಜನಾತ್ಮಕ ಲೋಕಕ್ಕೆ ಸಮಾನವಾದುದಾಗಿದೆ.

ಅಡಿಟಿಪ್ಪಣಿಗಳು :

೧. ದ.ರಾ.ಬೇಂದ್ರೆ: 'ನಾದಲೀಲೆ', ಪು. ೧೬, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು. ೧೯೫೫.
೨. ದ.ರಾ. ಬೇಂದ್ರೆ: 'ಗಂಗಾವತರಣ', ಪು. ೧೩, ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೫೫.
೩. ಡಾ. ವಾಮನ ಬೇಂದ್ರೆ: 'ಬೇಂದ್ರೆ ಜೀವನ ಪರಿಚಯ', ಪು. ೫, ವಿಶಾಖಾ ಪ್ರಕಾಶನ, ೧೯೯೮. (ಐ.ಆ.)
೪. ದ.ರಾ.ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೪೧, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.
೫. ದ.ರಾ. ಬೇಂದ್ರೆ: 'ಮತ್ತೆ ಶ್ರಾವಣ ಬಂತು', ಪು. ೫, (ಅಂಬಿಕಾತನಯದತ್ತರ ಸಮಗ್ರ ಕಾವ್ಯ, ಸಂ. ೩-ವಿಕಾಸ,) ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೩.
೬. ಅದೇ.

೭. ದ.ರಾ. ಬೇಂದ್ರೆ: 'ಪರಾಕಿ', ಪು. ೫೩, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೨.

೮. ದ.ರಾ.ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೪೨, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೯. ಅದೇ, ಪು. ೧೦೦.

೧೦. ದ.ರಾ.ಬೇಂದ್ರೆ: 'ನಮನ', ಪು. ೮೮-೮೯, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೮.

೧೧. ದ.ರಾ. ಬೇಂದ್ರೆ: 'ಸಖೀಗೀತ', ಪು. ೬೬, ಮನೋಹರ ಗ್ರಂಥ ಪ್ರಕಾಶನ ಸಮಿತಿ, ೧೯೪೦.

೧೨. ಅದೇ, ಪು. ೬೭.

೧೩. ಅದೇ, ಪು. ೯೯.

೧೪. ಅದೇ, ಪು. ೮೯.

೧೫. ಅದೇ, ಪು. ೯೦.

೧೬. ಅದೇ, ಪು. ೬೨.

೧೭. ಅದೇ, ಪು. ೭೫.

೧೮. ಅದೇ, ಪು. ೮೮.

೧೯. ಅದೇ, ಪು. ೬೯.

೨೦. ಅದೇ, ಪು. ೯೨.

೨೧. ಡಾ. ವಿ.ಕೃ.ಗೋಕಾಕ: 'ಬೇಂದ್ರೆಯವರ ಕಾವ್ಯಗುಣ ಹಾಗೂ ಪ್ರಯೋಗಶೀಲತೆ', ಪು. ೫, ಪ್ರಸಾರಾಂಗ, ಕ.ವಿ.ವಿ. ಧಾರವಾಡ, ೧೯೮೪.

೨೨. ದ.ರಾ.ಬೇಂದ್ರೆ: 'ನಾದಲೀಲೆ', ಪು. ೯, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು. ೧೯೫೫.

೨೩. ಡಾ. ವಿ.ಕೃ.ಗೋಕಾಕ: 'ಬೇಂದ್ರೆಯವರ ಕಾವ್ಯಗುಣ ಹಾಗೂ ಪ್ರಯೋಗಶೀಲತೆ', ಪು. ೭, ಪ್ರಸಾರಾಂಗ, ಕ.ವಿ.ವಿ. ಧಾರವಾಡ, ೧೯೮೪.

೨೪. ದ.ರಾ.ಬೇಂದ್ರೆ: 'ಸಂಚಯ', ಪು. ೫೨, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೯.

೨೫. ದ.ರಾ. ಬೇಂದ್ರೆ: 'ಸಖೀಗೀತ', ಪು. ೮೯, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೪೦.

೨೬. ದ.ರಾ. ಬೇಂದ್ರೆ: 'ನನ್ನ ನಾ ಕಂಡಂತೆ', ಲೇ. ಪು. ೮೩, ('ಬೇಂದ್ರೆ ಜೀವನ ಪರಿಚಯ' - ಸಂ. ವಾಮನ ಬೇಂದ್ರೆ) ವಿಶಾಖಾ ಪ್ರಕಾಶನ, ಹುಬ್ಬಳ್ಳಿ, ೧೯೯೮.

೨೭. ಡಾ. ಜಿ.ಎಸ್.ಆಮೂರ: 'ಭುವನದ ಭಾಗ್ಯ', ಪು. ೧೨೪, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೭.

೨೮. ಡಾ. ದ.ರಾ.ಬೇಂದ್ರೆ: 'ಕನ್ನಡ ಮೇಘದೂತ', ಪು. ೪, ಸಾಧನ ಮುದ್ರಣಾಲಯ, ಧಾರವಾಡ, ೧೯೪೩.

೨೯. ಅದೇ, ಪು. ೩.

೩೦. ಅದೇ.

೩೧. ದ.ರಾ.ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೪, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೩೨. ದ.ರಾ.ಬೇಂದ್ರೆ: 'ಕೃಷ್ಣಾಕುಮಾರಿ ಮತ್ತು ಹಾಡು-ಪಾಡು', ಪು. ೪೯-೫೨, ಸಮಾಜ ಪುಸ್ತಕಾಲಯ, ಧಾರವಾಡ, ದ್ವಿ.ಮು., ೧೯೫೬.

೩೩. ಜಿ.ವಿ. ಕುಲಕರ್ಣಿ : 'ನಾ ಕಂಡ ಬೇಂದ್ರೆ : ಜೀವನ ಮತ್ತು ಸಾಹಿತ್ಯ', ಪು. ೧೨೮, ಹರ್ಷವರ್ಧನ ಪ್ರಕಾಶನ, ಮುಂಬಯಿ, ೧೯೯೭.

೩೪. ಎಂ.ವಿ. ಸೀತಾರಾಮಯ್ಯ : 'ಚಾರಣ ಕವಿ ಬೇಂದ್ರೆ', ಲೇ. ಪು. ೧೫ ('ಬೇಂದ್ರೆ ಸ್ಮೃತಿ' ಸಂ: ಎಂ.ವಿ.ಸೀ., ಗೋ.ಆ.ಜಾ.) ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೮೨.

೩೫. ಡಾ. ಕೆ.ಎಸ್.ಶರ್ಮಾ : 'ನಾನು, ಜೀವಿ ಮತ್ತು ಬೇಂದ್ರೆ', ಲೇ. ಪು. ೧೬೮-೧೬೯, (ನಾ ಕಂಡ ಬೇಂದ್ರೆ - ಜೀವನ ಮತ್ತು ಸಾಹಿತ್ಯ :'ಜೀವಿ') ಹರ್ಷವರ್ಧನ ಪ್ರಕಾಶನ, ಮುಂಬಯಿ, ೧೯೯೭.

೩೬. ಅದೇ, ಪು. ೧೪೮.

೩೭. ಡಾ. ವಾಮನ ಬೇಂದ್ರೆ : 'ಬೇಂದ್ರೆ ಜೀವನ ಪರಿಚಯ', ಪು. ೬೭, ವಿಶಾಖಾ ಪ್ರಕಾಶನ, ಐ.ಆ. ೧೯೯೮.

೩೮. ದ.ರಾ. ಬೇಂದ್ರೆ : 'ಗಂಗಾವತರಣ', ಪು. ೧೨, ಪ್ರತಿಭಾ ಗ್ರಂಥಮಾಲೆ, ಧಾರವಾಡ, ಎ.ಮು. ೧೯೫೫.

೩೯. ಅದೇ, ಪು. ೧೫.

೪೦. ಕಿ.ರಂ. ನಾಗರಾಜ : 'ಮತ್ತೆ ಮತ್ತೆ ಬೇಂದ್ರೆ', ಪು. ೪೫, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, ೨೦೧೦.

೪೧. ಕೀರ್ತಿನಾಥ ಕುರ್ತಕೋಟಿ : 'ಬಾರೋ ಸಾಧನಕೇರಿಗೆ', ಪು. ೩೦೨, ಮನೋಹರ ಗ್ರಂಥಮಾಲೆ, ಧಾರವಾಡ, ೧೯೯೩.

೪೨. ಕಿ.ರಂ. ನಾಗರಾಜ : 'ಮತ್ತೆ ಮತ್ತೆ ಬೇಂದ್ರೆ', ಪು. ೭೪, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, ೨೦೧೦.

೪೩. ಪ್ರೊ. ಕೀರ್ತಿನಾಥ ಕುರ್ತಕೋಟಿ : 'ಬೇಂದ್ರೆ : ವ್ಯಕ್ತಿ, ವ್ಯಕ್ತಿತ್ವ, ಜೀವನ', ಲೇ. ಪು. ೨೨, ('ಬೇಂದ್ರೆ ಸ್ಮೃತಿ', ಸಂ. ಎಂ.ವಿ.ಸೀ ಮತ್ತು ಗೋ.ಆ.ಜಾ) ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೮೨.

ಅಧ್ಯಾಯ – ಮೂರು

ಕನ್ನಡ ಕಾವ್ಯದಲ್ಲಿ ನಿಸರ್ಗದ ಅನುಭೂತಿ

ಅಧ್ಯಾಯ - ೩

ಕನ್ನಡ ಕಾವ್ಯ ಪರಂಪರೆಯಲ್ಲಿ ನಿಸರ್ಗದ ಅನುಭೂತಿ

೩.೧ ಪೀಠಿಕೆ :

ನಿಸರ್ಗವಿಲ್ಲದೆ ಮನುಷ್ಯ ಬದುಕಿ ಬಾಳುವುದು ಅಸಾಧ್ಯವಾದುದರಿಂದ ಅದರೊಡನೆ ಜೀವ ಜೀವದ ಸಂಬಂಧವನ್ನು ಅವನು ಮೊದಲಿನಿಂದಲೂ ಇಟ್ಟುಕೊಂಡು ಬಂದಿದ್ದಾನೆ. ಮನುಷ್ಯನ ಭೌತಿಕ ಬದುಕಿನ ಅಸ್ತಿತ್ವಕ್ಕೆ ಕಾರಣವಾಗಿರುವ ಅದು ಚೈತನ್ಯಸ್ವರೂಪನ ಇರುವಿಕೆಯ ನಿದರ್ಶನಗಳನ್ನು ಅವನೆದುರು ತೋರ್ಪಡಿಸುತ್ತ ಬಂದಿದೆ. ನೀರು-ನೆಲ-ಗಾಳಿ-ಬೆಳಕು- ಆಕಾಶ ಮನುಷ್ಯನಿಗೆ ದೈವವಾಗಿ ಪೂಜೆಗೊಳ್ಳುತ್ತ ಬಂದಿದ್ದನ್ನು; ಆಧ್ಯಾತ್ಮದ ಸಾಧನೆಗೆ ಸಾಧನವಾಗಿದ್ದನ್ನು ನೋಡಬಹುದಾಗಿದೆ. ವಿಜ್ಞಾನ ಹಾಗೂ ಕಲೆಯ ದೃಷ್ಟಿಗಳು ಪ್ರಕೃತಿ ಚೈತನ್ಯವನ್ನು ತಿಳಿಯುವುದಕ್ಕೆ ಪೂರಕವಾಗಬೇಕು ಎಂದು ಬೇಂದ್ರೆಯವರು ನಂಬಿದ್ದರು. ಒಬ್ಬ ಭೌತವಾದಿ ಪ್ರಕೃತಿಯನ್ನು ನೋಡುವ ರೀತಿಗೂ ಒಬ್ಬ ಕವಿ ಪ್ರಕೃತಿಯನ್ನು ನೋಡುವ ರೀತಿಗೂ ವ್ಯತ್ಯಾಸಗಳಿದ್ದರೂ, ಬದುಕಿನ ಜೀವರಸವನ್ನು ಅನುಭವಿಸಲು ವ್ಯತ್ಯಾಸಗಳು ಅಡ್ಡಬರಬಾರದೆಂದು ಅವರು ತಿಳಿದಿದ್ದರು. 'ವಿಜ್ಞಾನಕ್ಕೆ ಜೀವ ರಸ; ತತ್ವಕ್ಕೆ ಜ್ಯೋತಿ ರಸ; ಧರ್ಮಕ್ಕೆ ಭಕ್ತಿ ರಸ; ಕಾವ್ಯಕ್ಕೆ ಸ್ವಾನಂದ ರಸ. ರಸಕ್ಕೆ ನಾಲ್ಕು ದಳ. ಸ್ವಾನಂದದ ಎಸಳಿಲ್ಲದೆ ಕಾವ್ಯವು ಉಳಿದ ರಸ ಜಾತಿಗಳನ್ನು ಜೀರ್ಣಿಸಿಕೊಳ್ಳಲಾರದು. ಕವಿಯ ಸ್ವಾನಂದ ಶಕ್ತಿಯು ಸ್ವಾಭಾವಿಕವಾದ ಹಸಿವಿದ್ದಂತೆ; ಅನ್ನವನ್ನು ಜೀರ್ಣಿಸಿ ಜೀವ ರಸಗತ ಮಾಡಿಕೊಳ್ಳಲಾರದಾದರೆ ಅದಾವ ಆರೋಗ್ಯ? ಧರ್ಮದ ಮರ್ಮವನ್ನು ಕಾವ್ಯದ ಧರ್ಮ ಮಾಡಿಕೊಳ್ಳಲು ಅಂತಸ್ಥ ಸಾಧನೆ ಬೇಕು. ರವೀಂದ್ರನಾಥ ಠಾಕೂರರ ಕಾವ್ಯವು ಅಂಥ ಸಾಧನೆಯ ಪರಿಪಾಕ ತಾನೆ. ಕವಿಯು ವಿಶ್ವರೂಪ ದರ್ಶನಕಾರ. ತನ್ನ ಕಾಣ್ಕೆಯಿಂದ ರಸಿಕರ ನೇತ್ರೋನ್ಮೀಲನ ಮಾಡುವುದು ಕವಿಯ ಶಬ್ದಶಿಲ್ಪ'[1] ಎಂದು ಬೇಂದ್ರೆಯವರು ಕಾವ್ಯಕ್ಕೆ ಧರ್ಮ ಹಾಗೂ ಭಕ್ತಿಯಲ್ಲಿ ಹಾದು ಬರಬಹುದಾದ ಅನುಭಾವ ಲೇಪನದ ಅಗತ್ಯವಿದೆಯೆಂದು ಪ್ರತಿಪಾದಿಸುತ್ತಾರೆ. ಭೌತಮಯ ಸೂರ್ಯ, ಚಂದ್ರ, ನಕ್ಷತ್ರ, ಆಕಾಶ, ಮಣ್ಣು, ನೀರು, ಗಾಳಿಯ ಸ್ವರೂಪವನ್ನು ಅರಿಯುವ ಅಗತ್ಯವಿರುವಂತೆ ಸತ್ಯಮಯನಾಗಿರುವ, ತೇಜಸ್ಸಿನಿಂದ ಹೊಳೆಯುವ, ಜೀವದಾಯಿನಿ ಆಗಿರುವ ನಿಸರ್ಗದ ಹಿಂದಿನ ಸತ್ಯದ ಸ್ವರೂಪವನ್ನು ಅರಿಯುವುದು ಅಷ್ಟೇ ಮುಖ್ಯವಾದುದೆಂದು ಬೇಂದ್ರೆಯವರು ಗ್ರಹಿಸಿದರು. ಅನುಭಾವ ಹಾಗೂ ಭಕ್ತಿನೆಲೆಯ ಕವಿಗಳ ಸತತಾಭ್ಯಾಸದಿಂದ ಇದು ಅವರಿಗೆ ಸಾಧ್ಯವಾಯಿತು. ಅರವಿಂದ, ಎ.ಇ., ಮೆಂಟರ್‌ಲಿಂಕ್, ಜಿಬ್ರಾನ್, ಯೇಟ್ಸ್‌ರನ್ನು ಓದಿಕೊಂಡಂತೆ ತತ್ವಪದಕಾರರ ಕಾವ್ಯದಳದ ರಸವನ್ನು ಜೀರ್ಣಿಸಿಕೊಂಡರು. ಲೌಕಿಕ ಹಾಗೂ ಅಲೌಕಿಕವನ್ನು ಸೇರಿಸಬಯಸಿದರು. ಅದಕ್ಕಾಗಿಯೇ ಅವರಿಗೆ ರವೀಂದ್ರನಾಥ ಟ್ಯಾಗೋರರು ಪ್ರೀತಿಯ ಕವಿಯಾಗುತ್ತಾರೆ. ಅಂತಹ ಭಾರತೀಯ ಸಂಪ್ರದಾಯಕ್ಕೆ ಒಲಿಯುತ್ತಾರೆ. ಕವಿಯೊಬ್ಬನಿಗೆ ಪ್ರಕೃತಿಯು ಕೇವಲ ಗಿಡ-ಮರವಾಗದೆ, ಗಾಳಿ-ಬೆಳಕಾಗದೆ ಅವನನ್ನು ಪೊರೆಯುವ ಚೈತನ್ಯವಾಗುತ್ತದೆ. ಒಬ್ಬ ಅನುಭಾವಿ ಕವಿ ನಿಸರ್ಗವನ್ನು ಅನುಭವಿಸುವ ರೀತಿಗೂ, ಸಂಪೂರ್ಣ ಅನುಭಾವಿಯೊಬ್ಬ

ನಿಸರ್ಗವನ್ನು ಅನುಭವಿಸುವ ರೀತಿಗೂ ಭಿನ್ನತೆಗಳುಂಟು. ಮಧುರಚೆನ್ನರಂತಹ ಅನುಭಾವಿ ಕವಿಗೆ ನಿಸರ್ಗವು ದೈವಿಕ ಸಂಗತಿಗೆ ದಾರಿಯಾದರೆ ಸಂಪೂರ್ಣ ಆಧ್ಯಾತ್ಮದಲ್ಲಿ ಮುಳುಗಿರುವ ಅರವಿಂದರಿಗೆ ನಿಸರ್ಗ ಭೌತಿಕ ವಸ್ತುವಾಗಿ ಏನೇನೂ ಅಲ್ಲ. ಅವರ ಧ್ಯಾನ ಏನಿದ್ದರೂ ಅದರಾಚೆಗಿರುವ ಚೈತನ್ಯದ ಕಡೆಗಿದೆ. ಸಂಪೂರ್ಣ ಅನುಭಾವಿಯೊಬ್ಬ ನಿಸರ್ಗದ ಜೊತೆಗೆ ಯಾವುದೇ ಸಂಬಂಧ ಇಟ್ಟುಕೊಳ್ಳುವುದಿಲ್ಲ. ಅವನು ನಿಸರ್ಗದ ಕುರಿತು ಮಾತನಾಡಿದರೂ ಕೂಡ ಅದು ಅವನ ದೈವಿಕ ಅನುಭವದ ಅಭಿವ್ಯಕ್ತಿಗೆ ಮಾರ್ಗವಾಗಿ ಮಾತ್ರ ಬಂದಿರುತ್ತದೆ. ಅವನು ಕಾದಿರುವುದು ಕೇವಲ ಬಿಡುಗಡೆಗಾಗಿ. ಹಾಗಾಗಿ ಅರವಿಂದ, ಅಲ್ಲಮಪ್ರಭು, ಕಬೀರ, ಎ.ಇ., ಖಲೀಲ್ ಜಿಬ್ರಾನ್‌ರು ಕಂಡ ನಿಸರ್ಗಕ್ಕೂ ಬಸವಣ್ಣ, ಶಿಶುನಾಳ ಶರೀಫ, ಕನಕದಾಸ, ಕುವೆಂಪು, ಬೇಂದ್ರೆ ಕಂಡ ನಿಸರ್ಗಕ್ಕೂ ಸ್ಪಷ್ಟ ವ್ಯತ್ಯಾಸಗಳಿವೆ. ಅರವಿಂದ, ಅಲ್ಲಮಪ್ರಭು ಅವರು 'ಬೀಸಿಹೋದ ಸೆರಗಿನಿಂದ' ಅವರ ಅನುಭಾವ-ನಿಸರ್ಗದ ನಾಲ್ಕು ಸಾಲು ಇವರಿಗೂ ದಕ್ಕಿರಬಹುದು. ಅವರ ದೈವಿಕತೆಯ ಜೊತೆಗೆ ಇವರೂ ಸಂಬಂಧದ ಎಳೆಗಳನ್ನು ಉಳಿಸಿಕೊಂಡಿರಬಹುದು. ಅವರದು ಬರೀ 'ಪರ'ದ ಹಾದಿ ಇವರದು 'ಇಹ-ಪರ' ಎರಡರ ಹಾದಿ. ಭಕ್ತಿಯ ಮಾರ್ಗದಲ್ಲಿದ್ದುಕೊಂಡು ಇಹ ಹಾಗೂ ಪರ ಎಂಬ ಎರಡು ಲೋಕಕ್ಕೂ ಭಕ್ತಕವಿಗಳು ಕೈಚಾಚುತ್ತಾರೆ. ನಿಸರ್ಗದ ಅನುಭೂತಿ ಸಾಧಿಸುತ್ತ ನೆಲಮುಗಿಲಿನ ನಡುವೆ ಜೀವತಂತುಗಳನ್ನು ಜೋಡಿಸುತ್ತಾರೆ. ಇವರಲ್ಲಿ 'ದೈನಿಕವೇ ಸಾರ್ವಕಾಲಿಕ; ಮಾತೇ ಮಂತ್ರ; ನೀರಿಗೆಂದು ಹೊರಟ ರಾಧೆ, ಮೋಹಿತನಾದ ಹುಡುಗ ಕೃಷ್ಣ; ಜೋಳದ ರೊಟ್ಟಿ ತಿನ್ನುವ ಪ್ರತಿ ತಾಯಿ ಮೊಲೆಯನ್ನುಣ್ಣಿಸುವುದು ಕೃಷ್ಣನಿಗೆ; ಭಿಕ್ಷೆಯೆತ್ತುವ ಜೋಗಿ ಶಿವನ ಗಣ. ತುಕಾರಾಮ್, ಕಬೀರ್, ಅಕ್ಕ, ಚೈತನ್ಯ, ಶಿಶುನಾಳ ಶರೀಫ್ - ಹೀಗೆ ಇಹಪರಗಳನ್ನು ಒಡಲಲ್ಲಿ ಕಟ್ಟಿಕೊಂಡು ಸಂತೆಯಲ್ಲಿ ಒಡನಾಡಿದವರು. ಧಾರವಾಡದ ಬೇಂದ್ರೆ ಅಂಥವರಲ್ಲಿ ಒಬ್ಬರು. ಆದರೆ ಅವರೆಲ್ಲರಿಗಿಂತ ಇನ್ನಷ್ಟು ಹೆಚ್ಚು ರಸಿಕ, ಹೆಚ್ಚು ಲೌಕಿಕ, ಮೈ ಮರೆತಾಗಲೂ ಮೈಯ ಪರಿವೆ ಕಳಕೊಳ್ಳಲಾರದವ'[೨] ಎಂದು ಯು.ಆರ್. ಅನಂತಮೂರ್ತಿ ಭಕ್ತಕವಿಗಳ ಮಹತ್ವ ಮನಗಾಣಿಸುತ್ತಾರೆ. ಲೌಕಿಕ ಜಗತ್ತಿನ ಅಪಾರ ಅನುಭವ ಸಂಪತ್ತನ್ನು, ಅಲೌಕಿಕ ಲೋಕದ ಅಗಮ್ಯ ಅನುಭವವನ್ನೂ ಸಹೃದಯರಿಗೆ ಧಾರೆಯೆರೆದ ಕವಿ ಬೇಂದ್ರೆ. ಭಕ್ತಕವಿಯಾದವನು ನಿಸರ್ಗವನ್ನು ಬರೀ ಸಾಮಾನ್ಯ ದೃಷ್ಟಿಯಿಂದ ನೋಡದೇ ಅದರ ಜುಳುಜುಳು ನಾದದಲ್ಲಿ, ಕಾಡು-ಕಣಿವೆಯಲ್ಲಿ, ಬಿಸಿಲು-ಬೆಳದಿಂಗಳಲ್ಲಿ, ಹೂ-ತೋಟದಲ್ಲಿ ಎಲ್ಲದರಲ್ಲಿ ಒಂದು ಚೈತನ್ಯ ಶಕ್ತಿಯನ್ನು ಕಾಣುತ್ತಾನೆ. ನೆಲದ ಹೂದೋಟ 'ನಂದನದ ತೋಟ'ವಾಗುತ್ತದೆ. ಪ್ರಕೃತಿಯಲ್ಲಿನ ಜೀವಾತ್ಮವನ್ನು ಪರಿಚಯಿಸುವುದರ ಜೊತೆಗೆ ಅದರ ಭೌತಿಕವನ್ನು ಕೂಡ ಇನ್ನಿಲ್ಲದಂತೆ ಕವಿ ಮರೆಸುತ್ತಾನೆ. ಹಾಗಾಗಿ ಬೇಂದ್ರೆಯವರಂತಹ ಕವಿಯಲ್ಲಿ ನಿಸರ್ಗವೆನ್ನುವುದು ರಭಸದಿಂದ ಹರಿಯುತ್ತದೆಯಲ್ಲದೆ ತನ್ನೊಳಗಿನ ಚೈತನ್ಯದಿಂದ ಶಾಂತಿರಸದ ಮಡುವಿಗೆ ನಮ್ಮನ್ನು ತೆಕ್ಕೆ ಮಾಡಿ ತೆಗೆದುಕೊಳ್ಳುತ್ತದೆ.

ಇಂದ್ರಿಯಗಮ್ಯವಾದ ನಿಸರ್ಗನೋಟದಲ್ಲಿ ನಿಸರ್ಗ ಬೃಹತ್ತಾಗಿಯೂ, ಈ ಲೋಕದ ಆಗು ಹೋಗುಗಳಿಗೆ ಕಾರಣವಾಗಿಯೂ ಪರಿಣಮಿಸಿ ಮನುಷ್ಯನು ನಿಸರ್ಗದ ಮಗುವೆಂಬ; ಜೀವ, ನಿಸರ್ಗದಿಂದ ಹೊರಟ ಒಂದು

ಅಂಶವೆಂಬ ಭೌತವಿಜ್ಞಾನದ ವ್ಯಾಖ್ಯೆಗೆ ತನ್ನನ್ನು ಅಧೀನಗೊಳಿಸಿಕೊಳ್ಳುತ್ತದೆ. ಪೃಥ್ವಿ, ನೀರು, ತೇಜಸ್ಸು, ವಾಯು ಮತ್ತು ಆಕಾಶಗಳೆಂಬ ಪಂಚಭೂತಗಳಿಂದ ಎಲ್ಲ ಜೀವಗಳು ಆರಂಭಗೊಂಡು ಅದರಲ್ಲಿಯೆ ಅಂತ್ಯವಾಗುತ್ತವೆ ಎನ್ನುವ ನೆಲೆ ಹಿಡಿದು ಹೊರಟು ನಿಸರ್ಗವನ್ನು ನೋಡುವ ಭೌತಿಕ ದೃಷ್ಟಿ ಒಂದು ಕಡೆಯಾದರೆ ಆಧ್ಯಾತ್ಮಿಕ ದೃಷ್ಟಿಯಿಂದಲೂ ನಿಸರ್ಗವನ್ನು ನೋಡುವುದು ಅಷ್ಟೆ ಮಹತ್ವದ್ದೆಂದು ಹಲವು ಕವಿ-ದಾರ್ಶನಿಕರ ಅಭಿಪ್ರಾಯವಾಗಿದೆ. ಕವಿ ಅಥವಾ ದಾರ್ಶನಿಕನೊಬ್ಬ ನಿಸರ್ಗದಾಚೆಗೆ ಇರಬಹುದಾದ ಚೈತನ್ಯಶಕ್ತಿಯ ಕಡೆಗೆ ಮನಸ್ಸು ಹಾಯಿಸುತ್ತಾನೆ. ಭೌತಿಕವಾಗಿ ನಾವು ಕಾಣುತ್ತಿರುವ ಬೆಳಕನ್ನು ಮೀರಿ ಕಾಣುವ ಬೆಳಕು, ಬೆವೆತಿರುವ ಬಿಸಿಲಲ್ಲಿ ಹೊಸ ವಸಂತವೊಂದಕ್ಕೆ ಕೂಗುವ ಕೋಗಿಲೆ, ಕೊಳದ ತಳದಲ್ಲಾಡುವ ಹಂಸ, ನೂರು ಕಣ್ಣಿನ ನವಿಲು ಹೀಗೆ ನಿಸರ್ಗದ ಜೀವಚೈತನ್ಯಗಳ ಮೂಲಕ ಕವಿಯಾದವನು ಸಹೃದಯನಿಗೆ ಅಗೋಚರವಾಗಿರುವ, ಅನಿರ್ವಚನೀಯವಾಗಿರುವ ಅನುಭವ ಲೋಕವೊಂದರ ಪರಿಚಯ ಮಾಡಿಸುತ್ತಾನೆ. ಮಾಮರ, ಬೆಳದಿಂಗಳು, ಕೋಗಿಲೆ, ಕಾಡು, ನದಿ, ನವಿಲು ಎಲ್ಲ ರೂಪಿಸಿದವನ ಚೈತನ್ಯಕ್ಕೆ ಬೆರಗಾದ ಕವಿ ಆ ಬೆರಗನ್ನು ಸಹೃದಯನಿಗೂ ಉಣಬಡಿಸುತ್ತಾನೆ. ನಿಸರ್ಗದ ಮಡಿಲಲ್ಲಿ ಕವಿ ಕಲಿಯುವ ಪಾಠಗಳು ಅವನು ಇತರರಿಗೆ ಹೇಳುವ ಪಾಠಗಳೂ ಆಗಿವೆ. ತಾನು ಕಂಡದ್ದನ್ನು, ಅನುಭವಿಸಿದ್ದನ್ನು ಹೇಳುವ ಅವನ ಅಭಿವ್ಯಕ್ತಿಯಲ್ಲಿ ನಿಸರ್ಗದ ಅಮೂಲ್ಯ ಪಾಠಗಳು ಅಡಕವಾಗಿರುತ್ತವೆ. ಕವಿ ತಾನು ಕಂಡ ಸತ್ಯವನ್ನು ಇತರರಿಗೆ ತಿಳಿಸುವ ಹಾದಿ ಒಮ್ಮೆ ಸುಗಮವೂ, ಮತ್ತೊಮ್ಮೆ ದುರ್ಗಮವೂ; ಒಮ್ಮೊಮ್ಮೆ ಪ್ರತ್ಯಕ್ಷವೂ ಮತ್ತೆ ಕೆಲವೊಮ್ಮೆ ಪರೋಕ್ಷವೂ ಆಗಿರಬಹುದು. ತನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿಸಿರೆಂದು ಅಳಿಸಂಕುಲವನ್ನು, ಮಾಮರವನ್ನು, ಕೋಗಿಲೆಯನ್ನು ಕೇಳುವ ಅಕ್ಕಮಹಾದೇವಿ; ನವಿಲಿನ ನೂರು ಕಣ್ಣ ಬಣ್ಣಗಳನ್ನು ಎಣಿಸಲಾರದೆ ಎಲ್ಲವನ್ನೂ ರೂಪಿಸಿದ ಚೈತನ್ಯಮಯಿ ಎಲ್ಲಿ ಅಡಗಿದ್ದಾನೆಂದು ಮೊರೆಯಿಡುವ ಮಧುರಚೆನ್ನ; ಚೈತನ್ಯಮಯಿ ಗಿಡಗಂಟೆಗಳ ಕೊರಳಿನಿಂದ ಹೊರಟಿರುವ ಹಾಡಿನಲ್ಲಿ ತಲ್ಲೀನನಾಗಿರುವ ಬೇಂದ್ರೆ; ನೀಲಿಯ ನಗೆ ಜೀರಿರುವ ಬಾನಿನಲ್ಲಿ ತೇಲಿಬಂದ ಬೆಳ್ಳಕ್ಕಿಗಳ ಸಾಲಿನಲ್ಲಿ ದೇವರ ರುಜು ಕಾಣುವ ಕುವೆಂಪು; ಹಸನಾದ ಹುಣ್ಣಿಮೆಯ ನೂಲಿನಲಿ ಹೊಸದಾಗಿ ಹೊಸೆದ ಜನಿವಾರವನ್ನು ಸದ್ಗುರುನಾಥ ತನಗೆ ತೊಡಿಸುವುದನ್ನು ಕಾಣುವ ಶರೀಫ - ಹೀಗೆ ಅವರ ಅನುಭೂತಿಗೆ ದೊರಕಿರುವ ಚೈತನ್ಯವನ್ನು ನಿಸರ್ಗದ ವಿವಿಧ ರೂಪ-ಬಣ್ಣಗಳಲ್ಲಿ ಮತ್ತು ಅದರ ಇರುವಿಕೆಯಲ್ಲಿ ಅವರು ಗುರುತಿಸುತ್ತಾರೆ.

ಪ್ರಕೃತಿಯನ್ನು ಪ್ರೀತಿಸುವ, ಅದರಲ್ಲಿ ಒಂದಾಗುವ, ಅದರ ಬೆಳಕಿನಲ್ಲಿ ತನ್ನನ್ನು ಹುಡುಕಿಕೊಳ್ಳುವ ಕ್ರಿಯೆಗಳು ಕೂಡ ಮನುಷ್ಯನಿಗೆ ದೈವಿ ಸಂಪತ್ತನ್ನು, ಶಾಂತಿರಸದ ಸನ್ಮಾರ್ಗವನ್ನು ತೋರಬಲ್ಲ ಶಕ್ತಿ ಹೊಂದಿವೆಯೆಂದು ಹಲವಾರು ಕವಿಗಳು ಅಭಿಪ್ರಾಯಪಟ್ಟಿದ್ದಾರೆ. 'ಹಸುರು ಹುಲ್ಲಿನ ತುದಿಯಲ್ಲಿ ಮುತ್ತಿನ ಹಾಗೆ ಬೆಳ್ಳಗಿರುವ ಹಿಮದ ಹನಿ ಬಿಡಿಬಿಡಿಯಾಗಿ, ಮಣಿಮಣಿಯಾಗಿ ಸಾವಿರ ಸಾವಿರವಾಗಿ ಹೊಳೆಯುತ್ತಿರುವಾಗ ಬೆಳಗಿನ ವೇಳೆಯಲ್ಲಿ ಉದಯ ಭಾನುವಿನ ಬೆಚ್ಚನೆಯ ಹೊಂಬಿಸಿಲು ಬಿದ್ದ ಗಳಿಗೆಗೆ ಆ ಹಿಮಮಣಿಗಳು ಒಂದೊಂದೂ ಒಂದೊಂದು

ವಜ್ರದ ಕಿಡಿಯಾಗಿ ಜ್ವಲಿಸುತ್ತವೆ. ಆ ವಜ್ರ ಜ್ಯೋತಿಯ ಪ್ರಭೆಯ ಸಂಪರ್ಕದಿಂದ ಕವಿಯ ಪ್ರತಿಭಾ ಜ್ಯೋತಿ ಹೊತ್ತಿ ಭಾವದ ಅಗ್ನಿಜ್ವಾಲೆ ಎದ್ದು ಕವಿಯ ಚೇತನ ಸಮಸ್ತವೂ ಆ ವಜ್ರದ ಕಿಡಿಯಾಗಿ ತಲ್ಲೀನವಾಗುತ್ತದೆ'[೩] ಎಂದು ಕುವೆಂಪು ಹೇಳುವುದನ್ನು; 'ಎಲೆಗಳ ಮೇಲೆ, ಹೂಗಳ ಒಳಗೇ ಅಮೃತದ ಬಿಂದು ಯಾರಿರಿಸಿರುವರು ಮುಗಿಲ ಮೇಲಿಂದಿಲ್ಲಿಗೇ ತಂದು'[೪] ಎಂದು ಬೇಂದ್ರೆ ಅಚ್ಚರಿಪಡುವುದನ್ನು '...the trees that whisper round a temple, become soon dear as the temple's self, so does the moon the passion poesy, glories infinite haunt us... They always must be with us; or we die'[೫] ಎಂದು ಕೀಟ್ಸ್ ತಾನು ನಿಸರ್ಗದಲ್ಲಿ ಮಿಂದ ಸ್ಥಿತಿ ಹೇಳುವುದನ್ನು; ಪ್ರಕೃತಿ ತನ್ನನ್ನು ಪಾಲಿಸಿ ಪೋಷಿಸಿದ ತಾಯಿಯೆಂದು, ತನ್ನ ಹೃದಯ ಕಾಯುವ ರಕ್ಷಕನೆಂದು ವರ್ಡ್ಸ್‌ವರ್ತ್ ಬಣ್ಣಿಸುವುದನ್ನು ನೋಡಿದಾಗ ಪ್ರಕೃತಿ ರಸಾನುಭವವನ್ನು ನೀಡಿ ಅದರ ಸಾನಿಧ್ಯದಲ್ಲಿರುವ ವ್ಯಕ್ತಿಗೆ ಆನಂದ ಹಾಗೂ ಶಾಂತಿ-ಸಮಾಧಾನದ ಹೊಳೆ ಹರಿಸುತ್ತದೆಯೆಂಬುದು ನಮ್ಮ ತಿಳಿವಿಗೆ ಬರುತ್ತದೆ. ಮನುಷ್ಯನ ಬದುಕಿನಲ್ಲಿ ಕಾಣಿಸಿಕೊಳ್ಳುವ ಲೌಕಿಕ ಹಾಗೂ ದೈವಿಕ ಸಂಗತಿಗಳನ್ನು ಕವಿ-ದಾರ್ಶನಿಕರು ಅನುಭವಿಸಿ ತಮ್ಮ ರಸಾನುಭೂತಿಯನ್ನು ಸಹೃದಯರಿಗೆ ಹಣಿಸುತ್ತ ಹೋಗುತ್ತಾರೆ.

ನಿಸರ್ಗದೊಡನೆ ಮಾನವ ಬದುಕಿನ ಕೊಂಡಿ ಎಂದೆಂದೂ ಬಿಡಿಸಲಾಗದಂತೆ ಬೆರೆತಿರುವ ಸಂಗತಿ ನಮ್ಮ ಕಾವ್ಯಪರಂಪರೆಯಲ್ಲಿ ಅತ್ಯಂತ ಸಶಕ್ತವಾಗಿ ಅಭಿವ್ಯಕ್ತಿಸಲ್ಪಟ್ಟಿದೆ. ಆ ಸಾಹಿತ್ಯ ಪರಂಪರೆ ಮೌಖಿಕವೂ ಇರಬಹುದು. ಲಿಖಿತವೂ ಇರಬಹುದು. ಮನುಷ್ಯನ ಇತಿಹಾಸದಲ್ಲಿ ನಿಸರ್ಗಕ್ಕಿರುವ ಮಹತ್ವವನ್ನು ಯಾರೂ ಅಲ್ಲಗಳೆಯಲಾರರು. ಕವಿಗಳಂತೂ ಪ್ರಕೃತಿಯನ್ನು ವೈಮರೆತು ಬಣ್ಣಿಸುತ್ತಾರೆ. ಅದು ನಿಸರ್ಗದ ಬಾಹ್ಯ ಸೌಂದರ್ಯದ ವರ್ಣನೆಯಾಗಿರಬಹುದು. ನಿಸರ್ಗವನ್ನು ಶಕ್ತಿಯ ರೂಪವಾಗಿ ಕಂಡದ್ದಿರಬಹುದು. ಪ್ರಕೃತಿಯನ್ನು ದೈವವಾಗಿ ಆರಾಧಿಸಿರಬಹುದು. ತಾಯಿಯಾಗಿ ಕಂಡು ಆಕೆಯ ತೋಳಲ್ಲಿ ಸಮಾಧಾನ ಕಂಡಿರಬಹುದು. ಸಂಸ್ಕೃತಿ ಅಧಃಪತನ ಹೊಂದಿದಂತೆ ಮನುಷ್ಯ ದುರುಳನಾಗಿ ಪ್ರಕೃತಿಯನ್ನೆ ಬೇಟೆಯಾಡಿದ್ದಿರಬಹುದು. ಅಲ್ಲದೆ ಬೇಂದ್ರೆಯಂತೆ ನಿಸರ್ಗದಲ್ಲಿ ಚೈತನ್ಯದ ರೂಪವನ್ನು, ಗಿಡಮರಗಳಲ್ಲಿ ಪಲ್ಲವಿಸಿರುವ ಸಂಭ್ರಮವನ್ನು ಮನಗಂಡಿರಬಹುದು. ನಮ್ಮ ಜನಪದ ಸಾಹಿತ್ಯದಿಂದ ಹಿಡಿದು ಮಹಾಕಾವ್ಯಗಳ ತನಕ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ನಿಸರ್ಗ ವೈವಿಧ್ಯಮಯವಾಗಿ ಕಾಣಿಸಿಕೊಂಡಿದೆ. ಒಂದಿಲ್ಲೊಂದು ರೀತಿಯಲ್ಲಿ ಕಾಡಿದೆ. ಅವರನ್ನು ಚಿಂತನೆಗೆ ಹಚ್ಚಿದೆ. ಕೆಲವರಿಗದು ಅನುಭೂತಿಯ ತೇಜವಾಗಿ ಹೊರಹೊಮ್ಮಿದೆ. ಮತ್ತೆ ಕೆಲವರಿಗೆ ಆತ್ಮ ಸಾಕ್ಷಾತ್ಕಾರದ ದಾರಿಯಾಗಿ ಕಂಡಿದೆ.

೩.೨ ಜನಪದದಲ್ಲಿ ನಿಸರ್ಗದ ಅಭಿವ್ಯಕ್ತಿ :

ನಿಸರ್ಗವನ್ನು ಚೈತನ್ಯದ ಸೆಲೆಯಾಗಿ, ದೈವಿಕತೆಯ ರೂಪವಾಗಿ ಕಂಡ ಒಂದು ದೊಡ್ಡ ಕಾವ್ಯ ಪರಂಪರೆಯೇ ಕನ್ನಡದಲ್ಲಿದೆ. ಜನಪದದಲ್ಲಿಯೆ ಅದರ ಬೇರುಗಳು ನಮಗೆ ಕಾಣಸಿಗುತ್ತವೆ. ಪ್ರಕೃತಿಯೊಂದಿಗಿನ ಜನರ ಒಡನಾಟ, ಅವರ ನಂಬಿಕೆ, ಅದನ್ನು ನಂಬಿ ಅವರು ನಡೆಸುತ್ತಿದ್ದ ಆಚರಣೆಗಳು ಜನಪದ ಕಾವ್ಯದಲ್ಲಿ ಹೇರಳವಾಗಿ ವ್ಯಕ್ತವಾಗಿವೆ.

‘ಅವ್ವನ ಸೀರೆ ಮಡಚಲಾರೆ, ಅಪ್ಪನ ರೊಕ್ಕ ಎಣಿಸಲಾರೆ’ ಎನ್ನುವ ಜನಪದದ ಮಾತು ಆಕಾಶದ ಅಗಾಧತೆಯನ್ನು, ಅಸಂಖ್ಯ ನಕ್ಷತ್ರಗಣವನ್ನು ಬಣ್ಣಿಸುತ್ತದೆ. ‘ಮರದೊಳಗೆ ಮರ ಹುಟ್ಟಿ ಮರದಂತೆ ಕಾಯಾಗಿ ತಿನ್ನಬಾರದ ಹಣ್ಣು ಬಲುಸವಿ’ ಎನ್ನುವ ಮಾತಿನಲ್ಲಿ ತಾಯಿ-ಮಗುವಿನ ಸಂಬಂಧ ನಮ್ಮ ಮುಂದೆ ಬಿಚ್ಚಿಕೊಳ್ಳುತ್ತದೆ. ಜನಪದ ಜೀವನ ಪ್ರಾರಂಭವಾಗುವುದೇ ದೈವಸ್ತುತಿಯಿಂದ; ಮೊಟ್ಟ ಮೊದಲಿಗೆ ಅವರು ಭೂಮಿತಾಯಿಯನ್ನು ನೆನೆಯುತ್ತಾರೆ.

ಏಳುತಲೆ ಎದ್ದು ಯಾರ್‍ಯಾರ ನೆನೆಯಲಿ।
ಎಳ್ಳು ಜೀರಿಗೆ ಬೆಳೆಯೋಳ। ಭೂಮಿತಾಯ।
ಎದ್ದೊಂದು ಗಳಿಗೆ ನೆನೆದೇನು ।।[೬]

ಎಳ್ಳು ಜೀರಿಗೆ ಬೆಳೆಯುವ ಭೂಮಿ ಅವರಿಗೆ ದೈವವಾಗಿ ಕಾಣಿಸಿಕೊಳ್ಳುತ್ತದೆ. ಜೀರಿಗೆ ಮತ್ತು ಎಳ್ಳು ಇವು ನಮ್ಮ ಸಂಸ್ಕೃತಿಯಲ್ಲಿ ಶುಭ-ಅಶುಭದ ಸಂಕೇತಗಳಾಗಿ ಬರುತ್ತವೆ. ಬದುಕು ಮತ್ತು ಸಾವುಗಳಲ್ಲಿ ಜೊತೆಯಾಗಿರುವ ವಸ್ತುಗಳನ್ನು ಧಾರೆ ಎರೆಯುತ್ತಿರುವ ಭೂಮಿತಾಯಿಯನ್ನು ನೆನೆಯುವುದು ಅರ್ಥಪೂರ್ಣವಾಗಿದೆ. ಜನಪದರಿಗೆ ಪ್ರಕೃತಿ ದೈವವೇ ಆಗಿತ್ತು. ಸೃಷ್ಟಿಯ ಚರಾಚಯ ವಸ್ತುವಿನಲ್ಲಿ ದೈವತ್ವ ಕಂಡ ಜನಪದರು ನೀರು, ನೆಲ, ಮುಗಿಲು, ಗಾಳಿ, ಬೆಳಕುಗಳೆಂಬ ಪಂಚಮಹಾಭೂತಗಳನ್ನು ಆರಾಧಿಸಿ ಸೃಷ್ಟಿಯ ಚೈತನ್ಯಕ್ಕೆ ಕಾರಣವಾಗಿರುವ ದೈವವನ್ನು ನೆನೆಯುತ್ತಾರೆ. ಹೀಗಾಗಿ ಜನಪದರು ಮಾಡುವ ನಿಸರ್ಗಸ್ತುತಿ ಒದು ರೀತಿಯಲ್ಲಿ ದೇವಸ್ತುತಿಯೆ ಆಗಿದೆ.

ಆಕಾಶದಡವ್ಯಾಗ ಧೂಪದ ಹೊಗೆಯೆದ್ದು।
ಆಯ್ತು ಮಲ್ಲಯ್ಯನ ಶಿವಪೂಜಿ। ಆಗಾಗ।
ಆಕಾಶದ ಘಂಟೆ ಘಳಲೆಂದು ।।[೭]

ಮಳೆಯ ಮೋಡಗಳಿಂದ ಕರ್‍ರಗಿರುವ ಮುಗಿಲೆಂಬ ದಟ್ಟಡವಿಯನ್ನು ಮುತ್ತಿರುವ ಮೋಡಗಳು ಧೂಪದ ಹೊಗೆಯಂತೆ ಕಂಡು ಅದು ಸುರಿಸುವ ಮಳೆಯ ನಡುವೆ ಕೇಳಿಬರುವ ಗುಡುಗಿನ ಸಪ್ಪಳ ದೇವಪೂಜೆಯ ಘಂಟೆಯ ನಾದವಾಗಿ ಕೇಳಬರುತ್ತಿದೆಯೆಂದು ವರ್ಣಿಸುವ ಈ ಪದ್ಯ ಪ್ರಕೃತಿಯ ಪೂಜೆಯಲ್ಲಿ ದೈವಿಕ ಸಂಗತಿ ಅಡಗಿರುವುದನ್ನು ಅತ್ಯಂತ ಸ್ಪಷ್ಟವಾಗಿ ತೋರಿಸುತ್ತದೆ.

ಹೂವಿನ್ಯಾಗ ಹುದುಗ್ಯಾನ ಮಾಲ್ಯಾಗ ಮಲಗ್ಯಾನ
ಮೊಗ್ಗ್ಯಾಗ ಕಣ್ಣು ತೆರೆದಾನ। ಲಿಂಗಯ್ಯನ
ನೋಡಟಿಗೆ ನಿದ್ದಿ ಬಯಲಾಗಿ।।[೮]

ನಿಸರ್ಗದ ಒಡನಾಟದಿಂದ ನಾವು ನಮ್ಮ ಲೌಕಿಕ ಸಂಗತಿಗಳ ಪರದೆ ಸರಿಸಿಕೊಂಡು ಶಿವರಾಯನನ್ನು ನೋಡಬಹುದೆಂದು, ನಮ್ಮ ಮರೆವಿನ ‘ನಿದ್ದೆ’ಯನ್ನು ತಿಳಿಗೊಳಿಸಬಹುದೆಂದು ಈ ಕವಿತೆ ಹೇಳುತ್ತದೆ.

ನಿಸರ್ಗದಲ್ಲಿಯೆ ತಾವು ನಂಬಿರುವ ದೈವ ನೆಲೆಗೊಂಡಿದೆ. ಅದರ ಗುಡ್ಡ, ಬಾವಿ, ಎಳೆಮಾವಿನ ಬನದಲ್ಲಿ ತಮ್ಮನ್ನು ಪೊರೆಯುವ ದೇವತೆ ನೆಲೆಸಿದ್ದಾಳೆಂದು ಜನಪದ ನಂಬುತ್ತದೆ.

ಚೆಂದ ಚೆಂದದ ಗುಡ್ಡ ಮುಂದ ಜೋಗುಳ ಭಾವಿ।
ಮುನ್ನೂರರವತ್ತು ಎಳೆಮಾವ। ಬನದಾಗ।
ರಂಭಿ ಸತ್ತೆವ್ವ ನೆನೆದಾಳ್

ಹಾಗೆಯೇ ಪ್ರಕೃತಿಯಲ್ಲಿ ಸರಸ್ವತಿಯನ್ನು, ತಮ್ಮ ಬದುಕಿನ ಹಾಡನ್ನು ಅರಸುವ ಜನಪದ ಅಚ್ಚರಿ ಹುಟ್ಟಿಸುತ್ತದೆ. ಹಳ್ಳ-ಕೊಳ್ಳಗಳಲ್ಲಿ ಮುಳ್ಳು ಜಾಜಿ ಸಂಪಿಗೆ ವನದಲ್ಲಿ ಅವರು ತಮ್ಮ ಪದಸರಸ್ವತಿಯನ್ನು ಹುಡುಕುತ್ತಾರೆ.

ಹಳ್ಳ ಕೊಳ್ಳದಲ್ಲಿ ಮುಳ್ಜಾಜಿ ವನದಲ್ಲಿ।
ಒಳ್ಳೆವಳು ನಿನ್ನ ಅರಸೀದೆ। ಸರಸೋತಿ
ಎಲ್ಲಿ ಹೋದೆವ್ಮ ಪದ ಬರಲಿ।।[೧೦]

ಜನಪದ ಸಾಹಿತ್ಯದಲ್ಲಿ ಕಂಡುಬರುವ ನಿಸರ್ಗದ ಬಣ್ಣನೆ ಹಾಗೂ ಸೌಂದರ್ಯದ ಉಪಾಸನೆ ಶ್ರೇಷ್ಠ ಕಾವ್ಯದ ನಿದರ್ಶನಗಳಾಗಿವೆ. ಲೋಕದ ವ್ಯಾಪಾರ ಮೊದಲುಗೊಂಡು ಶಿವನ ಸಂಕಲ್ಪದ ತನಕ; ಸಣ್ಣ ನಡುವಿನ ಹುಡುಗಿಯನ್ನು ವರ್ಣಿಸುವದರಿಂದ ಮೊದಲು ಮಾಡಿ ಸಂಪಿಗೆ ತೆನೆಯಂತಹ ಹುಡುಗನನ್ನು ಬಣ್ಣಿಸುವ ತನಕ; ಅತ್ತೆ ಮನೆಯ ಬೆಳದಿಂಗಳು ಬಿಸಿಲಾಗುವ ಸೊಸೆಯ ಕಷ್ಟದಿಂದ ಹಿಡಿದು ಸುಣ್ಣದ ನೀರನ್ನು ಹಾಲು-ಅನ್ನ ಎಂದು ಬಡಿಸುವ ಅತ್ತಿಗೆಯ ಸಂಚಿಗೆ ಮರಗುವ ನಾದಿನಿಯ ತನಕ; ಕಿವಿಯಲ್ಲಿ ಹೊನ್ನಿನ ಓಲೆ ಹಾಗೂ ಕೆನ್ನೆಯಲ್ಲಿ ಹೊಳೆಯುವ ಸೂರ್ಯನನ್ನು ಧರಿಸಿರುವ ಸತಿಯಿಂದ ಶ್ರೀಕೃಷ್ಣನಂತಹ ಪತಿಯತನಕ ಜನಪದದ ಹಾಡಿನಲ್ಲಿ ಅಡಗಿರುವ ನೆಲದ ಸಂಸ್ಕೃತಿಯ ಧ್ವನಿ, ರಸ, ಅಲಂಕಾರ, ರೀತಿ, ನೀತಿ, ಬದುಕಿನ ಮೌಲ್ಯ ಹಾಗೂ ದರ್ಶನಗಳು ಕನ್ನಡದ ಎಲ್ಲ ಕವಿಗಳಿಗೆ ಪ್ರೇರಕವಾಗಿ ಪರಿಣಮಿಸಿವೆ.

'ನಿಸರ್ಗದ ಶಿಶುವಾದ ಶ್ರೀಸಾಮಾನ್ಯ ಪ್ರಕೃತಿಯಾರಾಧಕನಾಗುವುದು ಸಹಜವೇ. ಪ್ರಕೃತಿಯಾರಾಧನೆಯೆಂದರೆ ಸೌಂದರ್ಯೋಪಾಸನೆಯೇ ಸರಿ. ಹೆಣ್ಣಿನ ಅಂಗಾಂಗಗಳಲ್ಲಿ ಚೆಲುವನ್ನು ಕಾಣುವಂತೆಯೇ ನಿಸರ್ಗದ ಅಂಗಾಂಗಗಳಲ್ಲಿ ಮತ್ತು ವ್ಯಾಪಾರಗಳಲ್ಲಿ ಸೌಂದರ್ಯವನ್ನು ದರ್ಶಿಸುತ್ತಾನೆ. ರಮ್ಯ, ಸೌಮ್ಯ, ಸೌಕುಮಾರ್ಯಗಳು ಮಾತ್ರ ಸೌಂದರ್ಯದ ಲಕ್ಷಣಗಳಲ್ಲ. ಭೀಕರಾದ್ಭುತಗಳೂ ಅದರ ಭಿನ್ನ ಭಿನ್ನ ಮುಖಗಳೆಂಬುದನ್ನು ಮರೆಯಲಾಗದು. ಮಳೆಗಾಲದ ವರ್ಣನೆಯಂತೂ ರುದ್ರಮನೋಹರವಾಗಿದೆ. ಕಾರೆಂಬೊ ಕತ್ತಲೆ, ಭೋರೆಂಬ ಮಳೆರಾಯ ಬಂದಾಗ ಪರ್ವತಾರಣ್ಯ ಕಣಿವೆಗಳೆಲ್ಲ ಒಂದಾಗುತ್ತವೆ.

ಗುಡುಗುಡು ಗುಟ್ಟೀತು ನಡುಬಾಣ ಮಿಂಚೀತು
ಮಂಡಾದ್ರಿ ಅಂಬು ದಂಡೀನ । ಕುದುರೆ ಮೇಲೆ
ಚಂಡಾಡ್ತ ಹುಯ್ಯೋ ಮಳೆರಾಯ'[೧೧]

ಪ್ರಕೃತಿಯು ಸೂಕ್ಷ್ಮವೂ, ಕೋಮಲವೂ ಆಗಿರುವಂತೆ ಭೀಕರವೂ, ಭೀಷಣವೂ ಆಗಿರಬಲ್ಲುದೆಂದು ಹಲವು ಹಾಡುಗಳಲ್ಲಿ ನಾವು ನೋಡಬಹುದು. ಸಾಹಿತ್ಯದ ಸಂಜೀವಿನಿಯಂತೆ ಸ್ಫೂರ್ತಿವಾಹಕವಾಗಿ ಕಾವ್ಯದ ತಾಯಿಬೇರು ಆಗಿ ಜನಪದ ಸಾಹಿತ್ಯ ಕೆಲಸ ಮಾಡಿರುವುದನ್ನು ಬೇಂದ್ರೆಯವರು ನೆನೆದಿದ್ದಾರೆ. 'ಈ ಜನಪದ ವೇದವೇ ಎಲ್ಲ ಕನ್ನಡಿಗರಿಗೂ ಸಾಮಾನ್ಯವಾದ ತಾಯಮೊಲೆಯ ಹಾಲು ಎಂಬುದು ಇದನ್ನೋದಿದವರ ಅನುಭವಕ್ಕೆ ಬರದೆ ಇರದು. ಪ್ರಜಾಪ್ರಭುತ್ವದ ಈ ಕಾಲದಲ್ಲಿ ಜನಸಾಮಾನ್ಯರ ಹೃದಯದೊಳಗಿನ ಸುಖದ ಕನಸೆಂತಹದೆಂಬುದನ್ನು ಕಂಡುಕೊಳ್ಳಲು ಇದರಂತಹ ಬೇರೆ ಕೈಗನ್ನಡಿಯಿಲ್ಲ. ಸಾಹಿತ್ಯ ಸಂಸ್ಕಾರದ ದೃಷ್ಟಿಯಿಂದಲೂ ಇದರ ಮಹತ್ವವಿದೆ. ಸ್ಕಾಟ್, ಬರ್ನ್ಸ್, ವರ್ಡ್ಸ್‌ವರ್ತ್ ಮೊದಲಾದ ಆಂಗ್ಲ ಕವಿಗಳ ಕಾವ್ಯಗಳಲ್ಲಿ ನಾಡಹಾಡುಗಳ, ಜನಪದ ಗೀತಗಳ ಸಂಸ್ಕಾರವನ್ನು ಕಾಣಬಹುದು. ನಮ್ಮ ಈಗಿನ ಕನ್ನಡ ಸಾಹಿತ್ಯಕ್ಕೆ ಆ ಸಂಸ್ಕಾರವು ಅವಶ್ಯವಿದೆ. ಸಂಸ್ಕೃತ, ಇಂಗ್ಲೀಷ್, ಹಳೆಗನ್ನಡಗಳ ಪ್ರತಿಬಿಂಬವನ್ನು ತಳೆದ ಸಾಹಿತ್ಯಕ್ಕಿಂತಲೂ, ಅಚ್ಚಕನ್ನಡದ ಅಚ್ಚೊತ್ತಿದ್ದ ಸಾಹಿತ್ಯದ ಅಗತ್ಯವು ಅಷ್ಟಿಷ್ಟೆಂದು ಹೇಳಬರದು. ಕಟ್ಟುಳ್ಳ ಮೈ, ಹುಟ್ಟು ಸವಿಯುಳ್ಳ ನುಡಿ, ತಿಳಿಯಾದ ಬಗೆ, ಇವೆಲ್ಲವೂ ಬೇಕು ಈಗಿನ ಕವನಗಳಲ್ಲಿ.'[೧೨]

ಜನಪದ ಸಾಹಿತ್ಯದ ಸಂಸ್ಕಾರವನ್ನು ಇತರ ಹಲವು ಪ್ರೇರಣೆಗಳ ಜೊತೆಗೆ ಬೇಂದ್ರೆಯವರು ಪಡೆದಿದುರ ಪರಿಣಾಮದಿಂದಾಗಿ ಅವರ ಕಾವ್ಯ ಆಡುಮಾತು, ದೇಸಿತನ ಹಾಗೂ ಮಾರ್ಗದ ಎರಕದಲ್ಲಿ ಹುಟ್ಟಿಬಂದಿತು. ಆಡುನುಡಿ, ಜನಪದ ನುಡಿಗಟ್ಟು, ಗಾದೆಮಾತುಗಳ ಬಳಕೆ ಮುಂತಾದವುಗಳನ್ನು ಕಾವ್ಯದಲ್ಲಿ ಬಳಸಬಹುದೆ ಎನ್ನುವಷ್ಟರ ಮಟ್ಟಿಗೆ ಬೇಂದ್ರೆಯವರ ಕಾಲಕ್ಕೆ ಜನಪದ ಭಾಷೆಯ ಬಗ್ಗೆ ಅಲಕ್ಷ್ಯವಿತ್ತು. ಅಂತಹ ಪೂರ್ವಾಗ್ರಹ, ಅಲಕ್ಷ್ಯಗಳನ್ನು ದೂರಮಾಡಿ ಅದರಲ್ಲಿನ ಸತ್ವವನ್ನು ಸೂರೆಮಾಡಿದ ಅವರು ಜನಪದ ಕವಿಯನ್ನು ಮೀರಿ ತಮ್ಮ ತಾತ್ವಿಕತೆ, ಅನುಭಾವ, ದರ್ಶನ, ಪ್ರತಿಭಟನೆ, ವಾತ್ಸಲ್ಯಭಾವಗಳನ್ನು ಪ್ರಕಟಿಸಿದರು. ಜನಪದದ ಪ್ರಕಾರಗಳಾದ ತ್ರಿಪದಿ, ಗೀಗೀಪದ, ಲಾವಣಿ, ಗೊಂದಲಿಗರ ಪದ, ಹಾಡುಗಬ್ಬ, ಸಂವಾದ ಮುಂತಾದ ಹತ್ತು ಹಲವು ಮೌಖಿಕ ಛಂದೋರೂಪಗಳು ಬೇಂದ್ರೆಯವರನ್ನು ಸೆಳೆದವು. ಜಾನಪದದ ಗತ್ತು, ಗುಂಗು, ಲಯ, ತಾಳಗಳು ಅವರ ಕಾವ್ಯದಲ್ಲಿ ಉಸಿರು ತಾಳುತ್ತವೆ.

ಟೊಂಕದ ವ್ಯಾಲೆ ಕೈ ಇಟ್ಟಕೊಂಡು
ಬಿಂಕದಾಕಿ ಯಾವಾಕಿ
ವಂಕಿತೋಳ ತೋರಸ್ತಾಳ
ಸುಂಕದ ಕಟ್ಟ್ಯಾಂವಗ[೧೩]

ಹಳ್ಳದ ದಂಡ್ಯಾಗ ಮೊದಲಿಗೆ ಕಂಡಾಗ
ಏನೊಂದು ನಗಿ ಇತ್ತಽ
ಏನೊಂದು ನಗಿ ಇತ್ತ ಏಸೊಂದು ನಗಿ ಇತ್ತ
ಎರಿಕಿ ನಗಿ ಇತ್ತ ॥ಪ॥

ನಕೊಮ್ಮೆ ಹೇಳ ಚೆನ್ನಿ ಆ ನಗಿ ಇತ್ತಿತ್ತ
ಹೋಗೇತಿ ಎತ್ತೆತ್ತಽ[೧೪] ॥ ಅನುಪಲ್ಲ ॥

* * *

ನನ್ನ ಕೈಯ ಹಿಡಿದಾಕೆ ಅಳು ನುಂಗಿ ನಗು ಒಮ್ಮೆ
ನಾನೂನು ನಕ್ಕೇನಽ
ಇಲದಿರಕ ನಿನ ಅಳುವ ಹುಚ್ಚು ಹಳ್ಳದ ಕಳ್ಳ-
ಹುದುಲಾಗ ಸಿಕ್ಕೇನಽ[೧೫]

* * *

ಕುಣಿಯೋಣು ಬಾರಽ
ಕುಣಿಯೋಣು ಬಾ ॥ಪ॥

ಆ ಕಾಗಿ
ಯಾಕಾಗಿ
ಕುಣಿಯೋದು ಬೇಕಾಗಿ
ಇಲ್ದ ಬಣ್ಣದ ಸೋಗಿ ॥[೧೬]

ಇಂತಹ ಹಲವಾರು ಉದಾಹರಣೆಗಳನ್ನು ನೀಡುತ್ತ ಹೋಗಬಹುದು. ಜನಪದ ಸಾಹಿತ್ಯದಿಂದ, ಅದು ಕವಿಯ ಮೇಲೆ ಬಿದ್ದ ನಾದದಿಂದ ಜಾನಪದವೆನ್ನಬಹುದಾದ ಛಂದೋರೂಪಗಳನ್ನು ಬಳಸಿಕೊಂಡು ತಮ್ಮ ವಸ್ತು ಹಾಗೂ ಉದ್ದೇಶವನ್ನು ಅವರು ನಿರ್ವಹಿಸಿದರು. ನಿಸರ್ಗದ ಅನುಭೂತಿಯನ್ನು ದಕ್ಕಿಸಿಕೊಂಡ 'ಬೆಳಗು', 'ಸಣ್ಣಸೋಮವಾರ', 'ತುಂಬಿತ್ತು ಹಾಲಗೇರಿ', 'ಸಚ್ಚಿದಾನಂದ', 'ಜೋಗಿ' ಮುಂತಾದ ಅವರ ಮೇರು ಕವಿತೆಗಳು ಕೂಡ ದೇಶಿಯ ಪರಿವೇಷದಲ್ಲಿ ಅಭಿವ್ಯಕ್ತಗೊಳ್ಳುವ ಮೂಲಕ ಕನ್ನಡ ಭಾಷೆಯ ಸತ್ವವನ್ನು ಹೆಚ್ಚಿಸಿವೆ. ಜನಪದದ ಲಾಸ್ಯ, ನಾದ, ಭಾಷೆಯ ಬನಿಗಳ ಜೊತೆಗೆ ಮಾರ್ಗದ ಮನೋರತೆ, ಸುಕುಮಾರತೆಯನ್ನು ಅವರು ಬೆರೆಸಬಲ್ಲವರಾದರು. ಹಳೆಯ ಪರಂಪರೆ ಹಾಗೂ ಹೊಸ ಪ್ರಜ್ಞೆಯನ್ನು ಕೂಡಿಸಿ ಬೇಂದ್ರೆಯವರು ಕವಿತೆ ಕಟ್ಟಬಲ್ಲವರಾದರು. 'ಬೇಂದ್ರೆ ನಿಸರ್ಗ ಕಾವ್ಯ :ಪ್ರೇರಣೆಗಳು' ಅಧ್ಯಾಯದಲ್ಲಿ ಅವರ ಆಧುನಿಕ ಸಂವೇದನೆಗಳ ಪ್ರೇರಣೆಗಳನ್ನು ಕುರಿತು ಹೆಚ್ಚಿನ ಚರ್ಚೆಯನ್ನು ಮಾಡಲಾಗಿದೆ.

ಜಾನಪದ ಜಗತ್ತಿನ ಧಾಟಿ, ವಿನ್ಯಾಸ, ಪ್ರತಿಮೆ, ಪರಿಸರಗಳನ್ನು ಬಳಸಿದರೂ ಹೆಚ್ಚಾಗಿ ಅವರ ಕವಿತೆಯ ಆಶಯ ಮಾತ್ರ ಜಾನಪದದ್ದಲ್ಲ. ನಿಸರ್ಗ ಪ್ರೇಮದಿಂದ ಹಿಡಿದು ಗಂಭೀರ ಓದು ಬಯಸುವ ಅನುಭಾವದ ತನಕ, ವಾತ್ಸಲ್ಯ ಭಾವದಿಂದ ಹಿಡಿದು ಬೆಳಕಿನ ಹಣ್ಣಿನಂತಿರುವ ಚಿತ್ರದ ಹೆಣ್ಣನ್ನು ಬಣ್ಣಿಸುವ ತನಕ, ಹಂಚು ಮಾಳಿಗೆ ತಿನ್ನುತ್ತದೆಯೆನ್ನುವ ಬೆಡಗಿನಿಂದ ಹಿಡಿದು ಎದೆಯ ಹೊಲವನ್ನು ಹರಗುವ ನಂಬಿಕೆಯ ಒಕ್ಕಲು ಮಾಡುವ ತನಕ ಬೇಂದ್ರೆ ಕಾವ್ಯದ ವೈವಿಧ್ಯಪೂರ್ಣ ಆಶಯಗಳು ಹರಿದಾಡುತ್ತವೆ.

ಜನಪದ ಸಂಸ್ಕೃತಿಯ ಪರಿಸರ, ಉತ್ತರ ಕರ್ನಾಟಕದ ಆಡುಭಾಷೆ, ಭಾಷೆಯ ಜೋಡನುಡಿ, ದ್ವಿರುಕ್ತಿ, ಪ್ರಾಸ, ಲಯ ಅದು ಸೂಚಿಸುವ ನೂರೆಂಟು ಅರ್ಥಗಳು ಬೇಂದ್ರೆಯವರ ಕಾವ್ಯವನ್ನು ವಿಶಿಷ್ಟವಾಗಿರಿಸಿದವು. ತ್ರಿಪದಿ, ಗೀಗೀಪದ, ಲಾವಣಿ, ತತ್ವಪದ ಮುಂತಾದ ಜನಪದ ಪ್ರಕಾರದ ಪರಿಧಿಯೊಂದು ಬೇಂದ್ರೆ ಕಾವ್ಯವನ್ನು ಸುತ್ತುವರಿದಿರುವಂತೆ ಕಂಡರೂ ಒಳಗಿನ ಆಶಯ ಮಾತ್ರ ಜನಪದವೆನ್ನಬಹುದಾದ ಸಂವೇದನೆಗಳ ಆಳ-ವಿಸ್ತಾರಗಳನ್ನು ಮೀರಿರುತ್ತದೆ. ಕೇವಲ ಬಾಹ್ಯವಲಯಕ್ಕೆ ಮಾತ್ರ ಇಂತಹ ಪ್ರೇರಣೆಗಳು ಸೀಮಿತಗೊಂಡಿರುತ್ತವೆ. ಆಂತರ್ಯದಲ್ಲಿರುವ ಸಂವೇದನೆ ಆಧುನಿಕವಾಗಿದ್ದು ಕವಿಯ ಪ್ರತಿಭೆಯನ್ನು ಸೂಚಿಸಿರುತ್ತದೆ. 'ಆಧುನಿಕ ಮನಸ್ಸಿನ ಕವಿಯಾಗಿಯೇ, ಆಧುನಿಕ ಮನಸ್ಸಿನ ಅನುಭವ-ಸಂವೇದನೆಗಳ ಅಭಿವ್ಯಕ್ತಿಗಾಗಿಯೇ ಅವರು ಜನಪದ ಕಾವ್ಯವನ್ನು ಮತ್ತು ಆ ಮೂಲಕ ಆಡುಭಾಷೆಯನ್ನು ಬಳಸಿಕೊಂಡರು'[೧೭] ಎಂದು ಹೇಳುವ ಡಾ. ಗಿರಡ್ಡಿ ಗೋವಿಂದರಾಜ ಅವರು ಜನಪದ ಲಾವಣಿ, ಹಾಡುಗಳ ರೀತಿಯಲ್ಲಿ ಬೇಂದ್ರೆಯವರು ಬರೆದ 'ನಾವು ಬರ್ತೇವಿನ್ನ' (ಹಾಡು-ಪಾಡು) ಸಚ್ಚಿದಾನಂದ (ನಾದಲೀಲೆ), 'ಚಿಗರಿಗಂಗಳ ಚೆಲುವಿ' (ನಾದಲೀಲೆ), 'ಗಮಾಗಮಾ ಗಮಾಡಸ್ತಾವ ಮಲ್ಲಿಗಿ' (ಗಂಗಾವತರಣ), 'ತಾನಾದಲೋ ತಾಯಿ' (ಮತ್ತೆ ಶ್ರಾವಣಾ ಬಂತು) ಮುಂತಾದ ಕವಿತೆಗಳನ್ನು ಉದಾಹರಿಸುತ್ತಾರೆ. 'ಲಾವಣಿಗಳ ಆಡುಮಾತು, ಕುಣಿತದ ಗತ್ತು, ಪ್ರಾಸಾನುಪ್ರಾಸಗಳ ಆವರ್ತನ, ಹುಸಿತಾಳಗಳ ಮುರಿತ, ನಿರರ್ಗಳ ಓಟ, ಹಾಡಿನ ಹದ, ಮಾತಿನ ಚಮತ್ಕಾರ, ವಾಚಾಳಿತನ ಬೇಂದ್ರೆಯವರನ್ನು ವಿಶೇಷವಾಗಿ ಆಕರ್ಷಿಸಿವೆ.'[೧೮]

ಹೆಣ್ಣಸಲ ಜಾತ ಪದ್ಮಿನೀ
ಸುರತ ಚಂದ್ರಿಣೀ
ಹೊಂಟೆ ನಾಗಿಣೀ । ನೋಡ ತಿರುಗಿ ।
ಮರಿಗುದುರು ಕುಣಿಸಿದ್ಹಂಗೆ ನಾಜೂಕು ನಿನ್ನ ನಡಗಿ ।
ಹೊಳೆ ನೀರ ತೆರೆಯು ಹೊಡೆದಂಗೆ ಚದುರೆ ನಿಲಗಿ ।
....
ತ್ರಿಲೋಕ ತಿರುಗಿ ಬಂದೆ ಹಾಡಿ

ಇಲ್ಲ ನಿನ್ನ ಜೋಡಿ
ರಂಭೆ ನಿನ್ನ ನೋಡಿ ನಾಚ್ಯಾಳ ಕಡಿಗ್[೧೯]

ಇಂತಹ ಲಾವಣಿಯ ಲಯ, ಗತ್ತು ಉಪಯೋಗಿಸಿಕೊಂಡು ಬೇಂದ್ರೆಯವರು ಅನೇಕ ಕವಿತೆಗಳನ್ನು ಹೊಸ ರೀತಿಯಲ್ಲಿ, ಆಧುನಿಕ ಕಾಲದ ಗಂಡ ಹೆಂಡಿರ ಪ್ರೇಮವನ್ನು ಬಣ್ಣಿಸುವಂತೆ ಬರೆದರು. 'ಸಚ್ಚಿದಾನಂದ' ಹೆಸರಿನ ಕವಿತೆ ಹೀಗೆಯೆ ಸುರುವಾಗುತ್ತದೆ.

ಬಾ, ಹಾಕು ರಿಂಗಣಾ ಗಗನದಂಗಣಽದಾಗ ।
ನನ್ನ ಕಾಲಾಗ ॥
ಒಳಗೊಳಗ ಕುದಿವ ಭೂಕಂಪ
ಹೊರಗೆ ಹಸಿತಂಪ
ಮೇಲೆ ನರುಗಂಪೋ । ಮೇಲೆ ನರುಗಂಪು
ಬಂತೆಲ್ಲ ನೆಲದ ಬಸಿರಿಂದ । ಮನೆಯು ನೆಲದಿಂದ
ಅನ್ನ ಮಣ್ಣಿಂದ । ಮೈಯು
ಅದರಿಂದೋಂ ಸಚ್ಚಿದಾನಂದ।[೨೦]

ಜಾನಪದ ಗತ್ತಿನ ಈ ಕವಿತೆ ಸರಳ ಕವಿತೆಯಾಗಿರದೆ ಜೀವ-ಜೀವಾತ್ಮಗಳ ಸಂಬಂಧವನ್ನು ಅರಸುವ ಗಹನ ವಿಷಯವನ್ನು ತನ್ನ ಒಡಲಲ್ಲಿ ತುಂಬಿಕೊಂಡಿದೆ. ಗಂಡ-ಹೆಂಡತಿಯ ಪ್ರೀತಿಯ ಸಂಭಾಷಣೆಯಂತೆ ಮೇಲುನೋಟಕ್ಕೆ ಕಂಡರೂ ಎದೆಯಲ್ಲಿ ದೀಪವಾಗಿರುವ ಜೀವ, ಜಗತ್ತನ್ನು ವ್ಯಾಪಿಸಿರುವ ಜೀವಾತ್ಮನ ಬೆಳಕಿನೊಡನೆ ಸಂವಾದ ನಡೆಸುತ್ತಿದೆ. ಮನಸ್ಸಿನ ಮಕರಂದ, ಓಂ ಎನ್ನುತ್ತಿರುವ ಅರವಿಂದ ಒಂದು ಬಗೆಯ ಅವರ್ಣನೀಯ ಆನಂದವನ್ನು ಸೃಷ್ಟಿಸಿವೆ. 'ಇಡು ಬೆಳಕ ಕಾಣಿಕೆ ತಂದ । ಇಟ್ಟು ನನ್ನ ಮುಂದ ।'[೨೧] ಎನ್ನುವಂತಹ ಸಲಿಗೆಯನ್ನು 'ಸುತ್ತೆಲ್ಲಾ ಕತ್ತಲಾ ಒಳಗ ಬೆಳಗತಽದ ದೀಽಪಾ। ಬಾ ಸಮೀಪಾ'[೨೨] ಎನ್ನುವ ಪ್ರೇಮದ ಅಭೀಪ್ಸೆಯನ್ನು ಹೆಂಡತಿ ಗಂಡನಲ್ಲಿ ತೋರಿಸುತ್ತಾಳೆ. ದೇಹದೊಳಗಿನ ಜೀವ ಹೆಂಡತಿಯಾಗಿ, ಸಚ್ಚಿದಾನಂದನ ರೂಪದಲ್ಲಿರುವ ಭಗವಂತ ಗಂಡನಾಗಿ ಇಲ್ಲಿ ಕಾಣಿಸಿಕೊಳ್ಳುವುದು ಸ್ಪಷ್ಟವಾಗಿದೆ. ಶರಣರ 'ಶರಣ ಸತಿ-ಲಿಂಗಪತಿ' ನೆಲೆಯಿಂದಲೂ ಈ ಕವನವನ್ನು ವಿಶ್ಲೇಷಿಸುವುದು ಸಾಧ್ಯವಿದೆ. ಅಕ್ಕಮಹಾದೇವಿ ತೋರುವಂತಹ ವಿರಹದ ಉತ್ಕಟತೆ ಇಲ್ಲಿ ಪ್ರಕಟಗೊಳ್ಳುತ್ತದೆ. ಕವಿತೆಯ ಭಾವಸಂದರ್ಭದಲ್ಲಿ 'ಸಚ್ಚಿದಾನಂದ' ಒಂದು ಅನುಭಾವ ಗೀತೆಯೆಂಬುದನ್ನು ಬೇಂದ್ರೆಯವರು ಪರೋಕ್ಷವಾಗಿ ಹೇಳಿದಂತಿದೆ. 'ಅನ್ನ, ಪ್ರಾಣ, ಮನ, ಜ್ಞಾನ-ಕಾಯಗಳಲ್ಲಿ ಜೀವ ಸತಿಯಂತೆ ತನ್ನ ಮಿಡುಕಿನಲ್ಲಿಯೂ ಗೌರವ ಕಾಯ್ದುಕೊಂಡು ತನ್ನ ಅಂತರಂಗದ ಶ್ರದ್ಧೆಯ ಉದ್ಗಾರಗಳನ್ನು ಹೇಳುತ್ತಿದೆ. ಸಚ್ಚಿದಾನಂದದ ವಾಣಿಯಾಗಿ ಪತಿರೂಪದಲ್ಲಿ ದಿವ್ಯತೆ ಉತ್ಸಾಹದಾಯಕವಾಗಿ ದುಡಿಯುತ್ತಿದೆ.'[೨೩]

ಈ ರೀತಿಯಲ್ಲಿ ಬೇಂದ್ರೆಯವರು ತಮ್ಮ 'ಸಚ್ಚಿದಾನಂದ' ಕವಿತೆಗೆ ಲಾವಣಿಯ ರೂಪವನ್ನು ತೊಡಿಸಿದರೂ ಅದು ಹೊರಡಿಸುವ ಧ್ವನಿ ಮಾತ್ರ ಸಂಪೂರ್ಣವಾಗಿ ಆಧುನಿಕವಾಗಿದೆ. ಕವಿಯ ಅನುಭವ ತೀವ್ರತೆಯನ್ನು ಪ್ರಕಟಿಸುತ್ತದೆ. 'ದಿವ್ಯ'ವಾಗಿರುವ ಆ ಆನಂದವನ್ನು ಪಡೆದುಕೊಳ್ಳುವ ಸಲುವಾಗಿ ಭಕ್ತ ಹಲಬುತ್ತಿದ್ದಾನೆ. ನಲ್ಲೆಯಂತೆ ವಿರಹದಿಂದ ಸುಡುತ್ತಿರುವ ಭಕ್ತನನ್ನು ಸಚ್ಚಿದಾನಂದ ಎನ್ನುವ ಬೆಳಕಿನಲ್ಲಿ ನಲ್ಲ ತಬ್ಬುತ್ತಾನೆ. ತನ್ನೆದೆಯ ಕದ ತೆರೆಯುತ್ತಾನೆ.

ಒಳಹೊರಗ ಬೆಳಕು ನಾನಿರಲು ಯಾಕ ನಿನ್ನ ಹಣತಿ।
ಬಾರ ನನ್ನ ಗೆಣತಿ ॥[೨೪]

ನಿಸರ್ಗ, ಜೀವ, ಪರಮಾತ್ಮರನ್ನು ಸಂವಾದಕ್ಕೆಳಸಿರುವ ಹಾಗೂ ದಿವ್ಯತೆಯನ್ನು ಸಹೃದಯರಿಗೆ ಮನಗಾಣಿಸುವ ಈ ಪದ್ಯದ ವಿಶೇಷತೆಯನ್ನು ಕೀರ್ತಿನಾಥ ಕುರ್ತಕೋಟಿಯವರು ಹೇಳಿರುವುದು ತುಂಬಾ ಸಮಂಜಸವಾಗಿದೆ. 'ದೊಡ್ಡ ಸಾಲುಗಳ ಬೀಸು ಆಕಾಶದ ವಿಶಾಲತೆಯನ್ನು, ಚಿಕ್ಕವಾದ ಪ್ರಾಸಬದ್ಧ ಪಂಕ್ತಿಗಳು ಭೂಮಿಯ ತಿರುಗುವಿಕೆಯನ್ನು ಮತ್ತು ಹೆಣ್ಣಿನ ಬಾಗು ಬಳುಕುಗಳನ್ನು ನೆನಪಿಗೆ ತರುವಂತಿದೆ. ಜೀವ ಮತ್ತು ಪರಮಾತ್ಮರ ವಿವಾದ ಮತ್ತು ಸಂವಾದಗಳನ್ನು ಸತಿಪತಿಯರ ಸರಸ ಸಂಭಾಷಣೆಯ ರೂಪಕದ ಮೂಲಕವಾಗಿ ಬಿತ್ತರಿಸಿದ್ದನ್ನು ನೆನೆದರೆ ಈ ಛಂದೋಪ್ರಕಾರದ ವಿಶಿಷ್ಟತೆಯ ಅರಿವಾಗಬಹುದು. 'ಸಚ್ಚಿದಾನಂದ' ಎಂಬ ಪದಸಮೂಹ ಇಡೀ ಸಾಲಿನ ತುಂಬ ಪುನರುಕ್ತವಾಗುತ್ತ, ಅನುರಣಿತವಾಗುತ್ತ, ತಂಬೂರಿಯ ನಿರಂತರ ಶ್ರುತಿಯಂತೆ ಕವಿತೆಯಲ್ಲಿಯ ಉಳಿದ ವಿವಾದಿ ಹಾಗೂ ಸಂವಾದಿ ಭಾವಗಳನ್ನು ಹುಟ್ಟಿಸುತ್ತಲೇ ತನ್ನಲ್ಲಿ ಲೀನವಾಗಿಸಿಕೊಳ್ಳುತ್ತದೆ. ಸಚ್ಚಿದಾನಂದ ತಾನಾಗಿಯೇ ಒಂದು ಅವ್ಯಕ್ತವಾದ, ಅನಿರ್ವಚನೀಯವಾದ ತತ್ವ, ಆದರೂ ವ್ಯಕ್ತವಾಗಿರುವದೆಲ್ಲ ಜೀವದ ನೋವು, ಭೂಮಿಯ ಭೌತಿಕ ವೇದನೆ, ಹೆಣ್ಣಿನ ವಿರಹಾವಸ್ಥೆ, ಗೊಂದಲ, ಕಳವಳ, ಕಾಮ-ಸಚ್ಚಿದಾನಂದಕ್ಕೆ ವಿಸಂಗತವೇನೂ ಅಲ್ಲ ಎಂಬಂತೆ ಈ ಕವಿತೆಯ ಪ್ರಾಸಯೋಜನೆ ಇದೆ.'[೨೫] ಮನಸ್ಸಿನ ದೀಪದ ಸುತ್ತಲಿರುವ ಅಹಂಕಾರವೆಂಬ ಕತ್ತಲೆಯನ್ನು ದಾಟಿದಾಗ, ಆ ಪರದೆಯನ್ನು ಹರಿದು ಹಾಕಿದಾಗ ಜಗವನ್ನು ಬೆಳಗಿರುವ ಜ್ಯೋತಿ ಸ್ವರೂಪನಾದ ಪರಮಾತ್ಮನನ್ನು ಕಾಣಲು ಸಾಧ್ಯವಾಗುತ್ತದೆ ಎನ್ನುವುದು ಕವಿತೆಯ ನಿಲುವಾಗಿದೆ.

ಇಂತಹದೆ ನಡೆ ಹೊಂದಿರುವ ಶೃಂಗಾರಭಾವದ ಜನಪದ ಲಾವಣಿ ಗತ್ತಿನ ಪದ್ಯವೆಂದರೆ 'ಬೆಳುದಿಂಗಳ ನೋಡs'. ಆ ಬೆಳದಿಂಗಳಿನಲ್ಲಿ ಗಂಧ ತುಳುಕುತ್ತದೆ. ಮೈಮನ ಬೆಳಗುತ್ತದೆ. ಕತ್ತಲು ಇಂಗುತ್ತಿದೆ.

ನಡು ನಿದ್ದಿಯೊಳಗ ಇದ್ದಾಂಗ
ಕನಸು ಬಿದ್ದಾಂಗ
ಕನಸು ಬಿದ್ದಾಂಗ:
ತೆರೆದsದ ತಣವೀಕಿ ನೊsಡs
ಬೆಳುದಿಂಗಳ ನೋಡs[೨೬]

ಜನಪದ ಪರಿಸರದಿಂದ ಬೇಂದ್ರೆಯವರು ಕಟ್ಟಿಕೊಡುವ ಕವಿತೆಯ ಮಾಯಾಪ್ರಪಂಚ ಜನಪದ ಕವಿಗೆ ನಿಲುಕುವಂತಹುದಲ್ಲ. ಸಮಷ್ಟಿ ಪ್ರಜ್ಞೆಯನ್ನು ಬಳಸಿಕೊಂಡು ವ್ಯಷ್ಟಿ ಪ್ರಜ್ಞೆಯನ್ನು ಅಭಿವ್ಯಕ್ತಗೊಳಿಸುತ್ತ ವ್ಯಷ್ಟಿ-ಸಮಷ್ಟಿಗಳೆರಡನ್ನೂ ಹಿಗ್ಗಿಸುವ ಪ್ರತಿಭೆ ಬೇಂದ್ರೆಯವರಿಗಿದ್ದುದರಿಂದ ಹಲವು ಪ್ರೇರಣೆಗಳನ್ನು ಪಡೆದು ತನ್ನತನವನ್ನು ಸಾಧಿಸಲು ಅವರು ಶಕ್ಯರಾದರು. 'ಬೇಂದ್ರೆಯವರ ಭಾಷೆ ಸಂಪೂರ್ಣವಾಗಿ ಜಾನಪದ ಭಾಷೆ ಎಂದರೆ ತಪ್ಪಾದೀತು. ಅವರ ಕಾವ್ಯದ ಭಾಷೆಯ ಶೈಲಿಗಳ ವೈವಿಧ್ಯ ಬೆರಗುಗೊಳಿಸುವಂಥದಾಗಿದೆ. ಅಚ್ಚಗನ್ನಡ, ಬಳಕೆಗನ್ನಡ, ಗ್ರಾಮೀಣ ಭಾಷೆ, ನಗರದ ಭಾಷೆ, ಸಂಸ್ಕೃತಿ ಭೂಮಿಷ್ಠವಾದ ಭಾಷೆ ಇವೆಲ್ಲವನ್ನೂ ಅವರ ಕಾವ್ಯದಲ್ಲಿ ಕಾಣಬಹುದಾಗಿದೆ.'[೨೭] ಈ ರೀತಿಯಲ್ಲಿ ಬೇಂದ್ರೆಯವರು ಜನಪದ ಸಾಹಿತ್ಯದಲ್ಲಿರುವ ಐಕ್ಯಭಾವವನ್ನು, ಪಂಪನ ದೇಸಿ-ಮಾರ್ಗದ ಸಮನ್ವಯವನ್ನು, ಶರಣರ ದರ್ಶನವನ್ನು, ರತ್ನಾಕರವರ್ಣಿಯ ಭೋಗ-ಯೋಗವನ್ನು, ಲಕ್ಷ್ಮೀಶನ ಮಾಲೋಪಮೆಗಳನ್ನು, ತತ್ವಪದಕಾರರ -ದಾಸರ ಭಕ್ತಿಯನ್ನು, ತನ್ನ ಬತ್ತಲೆತನವನ್ನು ತಾನೆ ನೇಯ್ದ ಬಟ್ಟೆಯಿಂದ ಮುಚ್ಚಿಕೊಳ್ಳಬೇಕೆನ್ನುವ ಜಿಬ್ರಾನ್‌ನ ಅನುಭಾವವನ್ನು, ಜಯದೇವನ ನಾದವನ್ನು ಸ್ವೀಕರಿಸಿ ಆ ಪ್ರೇರಣೆಗಳನ್ನು ತಮ್ಮ ಪ್ರತಿಭೆಯ ಗಾಣದಲ್ಲಿ ಅರಗಿಸಿ, ಕಲ್ಪನೆಯ ಶಕ್ತಿಯಲ್ಲಿ ಕರಗಿಸಿ ಅಂಬಿಕಾತನಯನೆಂಬ ಕವಿಯ ಹೆಸರಿನಲ್ಲಿ ಕೊಡುವುದಕ್ಕೆ ಸಮರ್ಥರಾದರು.

ಅನಾಮಧೇಯ ಜನಪದ ಕವಿಗಳು ವರ್ಣಿಸಿದ ನಿಸರ್ಗ, ಭೂಮಿತಾಯಿ, ಹಬ್ಬ-ಹರಿದಿನ, ಸೂರ್ಯ, ಚಂದ್ರ, ಶಿವ, ಉಮೆ, ಪಾರ್ವತಿ, ಗಂಡ-ಹೆಂಡಿರ ಪ್ರೇಮ, ವಿರಹ, ಸಿಟ್ಟು, ಸೆಡವು, ಪೂಜೆ-ಪುನಸ್ಕಾರ ಮುಂತಾದ ಕನ್ನಡದ ಕಾವ್ಯ ಪರಂಪರೆಯಲ್ಲಿ ಮೂಡಿಸಿದ ಅಭಿವ್ಯಕ್ತಿಯ ಸಂಸ್ಕಾರಗಳು ಪ್ರತಿಯೊಬ್ಬ ಕವಿಯು ನಡಿಗೆ ಕಲಿಯಲು ಬಳಸುವ ಸಾಧನಗಳಾಗಿವೆಯೆನ್ನಬಹುದು.

ಹಳ್ಳದ ದಂಡ್ಯಾಗ ಹಸರುಬಣ್ಣದ ಗುಬ್ಬಿ
ಬಿಸಲೀಗಿ ಬಾಯ ಬಿಡತೈತಿ ಆ ಗುಬ್ಬಿ
ಕುಸಲದ ನಗುವ ನಗತೈತಿ[೨೮]

* * * *

ನೆಲದಾಗ ಗಿಡ ಚೆಲುವ ಮಾವೀನ ಗಿಡ ಚೆಲುವ
ಹಕ್ಕಿ ಪಕ್ಕ್ಯಾಗ ಗಿಣಿ ಚೆಲುವ ವ್ಯಾಲೀನ
ಚಿಕ್ಕ್ಯಾಗ ಚೆಲುವ ಚಂದ್ರಾಮ[೨೯]

* * * *

ಮಾಗೀನ ಮಳಿಗಾಲ ಹ್ಯಾಂಗಿದ್ದಿ ಕೋಗಿಲ
ಆಗರಭಾಳ ಅಡಕೀಯ ಬನದಾಗ
ಕೂಗ್ಯಾಡಿ ಹೊತ್ತ ಕಳದೇನ[೩೦]

ಹಾಡಿದವು ಬಿಕ್ಕುಗಳು, ಬೇಡಿದವು ಕಾಡುಗಳ
ಹಾಡುಗೊಲ್ಲಾಳ ಬೆಳತನಕ ಶಿವಲೋಕ
ನೋಡು ನೋಡುತಲೆ ಬೆಳಗಾಯ್ತು[೩೧]

ಈ ಹಳ್ಳದ ದಂಡೆ, ಹಸಿರು ಬಣ್ಣದ ಗುಬ್ಬಿ, ಹಾಡುವ ಕೋಗಿಲೆ, ತೇಲುವ ಚಂದ್ರ, ಬೆಳ್ಳನೆ ಬೆಳಗುಗಳನ್ನು ಬೇಂದ್ರೆಯವರು ಸಹ ಕಣ್ತುಂಬ ಕಂಡು ಮನಸ್ಸಿನಲ್ಲಿ ತುಂಬಿಕೊಂಡರು.

೩.೩ ಪ್ರಕೃತಿಯಾರಾಧನೆಯ ಪರಂಪರೆ :

ಇಪ್ಪತ್ತನೆ ಶತಮಾನದ ಕನ್ನಡದ ಒಬ್ಬ ಮೇರು ಕವಿಯಾಗಿ ಬೇಂದ್ರೆ ನಿಸರ್ಗವನ್ನು ಅತ್ಯಂತ ಶಕ್ತವಾಗಿ ತಮ್ಮ ಅಭಿವ್ಯಕ್ತಿಗೆ ಅಳವಡಿಸಿಕೊಂಡಿರುವುದರ ಹಿಂದೆ ಕನ್ನಡದ ಪರಂಪರೆ ಕೆಲಸ ಮಾಡಿದೆ. ಜನಪದ ಹಾಗೂ ಕನ್ನಡ ಕಾವ್ಯ ಪರಂಪರೆಯಲ್ಲಿ ಮೂಡಿಬಂದಿರುವ ನಿಸರ್ಗ ಲೋಕ ಅವರಿಗೆ ಸ್ಫೂರ್ತಿ ಕೊಟ್ಟಿರಬೇಕು. ಮನುಷ್ಯನ ಸೃಜನಶೀಲತೆಗೆ, ಆತನ ವೀರತ್ವಕ್ಕೆ, ಆಗಮಿಕ ಹಾಗೂ ಲೌಕಿಕ ಅಂಶಗಳಿಗೆ ನಿಸರ್ಗವನ್ನು ಕೂಡ ಒಂದು ಸ್ಫೂರ್ತಿ ನೀಡುವ ಕೇಂದ್ರವನ್ನಾಗಿ ಮಾಡಿಕೊಂಡ ಆದಿಕವಿ ಪಂಪ ಒಂದು ಪರಂಪರೆಯ ಹರಿಕಾರನಾದವೆನ್ನುವುದನ್ನು ವಿಮರ್ಶೆ ಗುರುತಿಸಿದೆ. ನಿಸರ್ಗವನ್ನು ಆತ ಭಾಷೆಯಲ್ಲಿ ಕಟ್ಟಿಕೊಟ್ಟಿರುವ ರೀತಿ ನೋಡಿದಾಗ ಕನ್ನಡಕ್ಕೆ ಅವನು ಹೊಸ ಇತಿಹಾಸ ಕಟ್ಟುತ್ತಿದ್ದನೆಂದು ಸುಲಭವಾಗಿ ತಿಳಿಯಬಹುದಾಗಿದೆ. ಅಂದರೆ ಒಂದು ಕಾವ್ಯ ಪರಂಪರೆ ಒಮ್ಮೆಲೇ ನಿರ್ಮಾಣವಾಗಿರುವಂತಹುದಲ್ಲ.

ಕಾಲಕಾಲಕ್ಕೆ ಆಗಿಹೋದ ಪ್ರಮುಖ ಕವಿಗಳು ಪರಂಪರೆಯನ್ನು ಸೃಷ್ಟಿಸುತ್ತ ಹೋಗುತ್ತಾರೆ. ಆ ಪರಂಪರೆಗಳು ವಿವಿಧ ಆಶಯ, ಕಾಲಧರ್ಮ ಹಾಗೂ ಅಭಿವ್ಯಕ್ತಿಯ ಕ್ರಮಗಳಲ್ಲಿರಬಹುದು. ಆಗಮಿಕ-ಲೌಕಿಕದ ಸಂಘರ್ಷವಾಗಿರಬಹುದು; ಮಾರ್ಗ ತೊರೆದು ವಚನ ಹಿಡಿದ ಹಾದಿಯಾಗಿರಬಹುದು; ಮಾರ್ಗ-ದೇಸಿಗಳ ಸಮನ್ವಯವಾಗಿರಬಹುದು; ನವೋದಯದ ಉದಯವಾಗಿರಬಹುದು; ಅನುಭವ ಮಂಟಪವಾಗಿರಬಹುದು; ಆಕ್ರೋಶದ ನುಡಿಯಾಗಿರಬಹುದು. ಒಬ್ಬ ಮೇರು ಕವಿ ತನ್ನ ಭಾಷೆಯ ಪರಂಪರೆಯ ಪಲ್ಲಟಗಳನ್ನು ತನ್ನೊಳಗೆ ಅರಗಿಸಿಕೊಂಡು ಹೊಸ ಮಾರ್ಗವೊಂದನ್ನು ಹುಡುಕಿಕೊಳ್ಳುತ್ತಾನೆ. ಬೇಂದ್ರೆ ನಿಸರ್ಗಕಾವ್ಯದ ಹಿಂದೆ ಕೂಡ ಕನ್ನಡ ನಿಸರ್ಗಕಾವ್ಯದ ಸಂಪ್ರದಾಯ ಕೆಲಸ ಮಾಡಿರುತ್ತದೆ. ಯಾವ ಕವಿಯೂ ಇತಿಹಾಸವನ್ನು ಬಿಟ್ಟು ಹೋಗುವುದಿಲ್ಲವೆಂಬ ಮಾತು ಅದಕ್ಕಾಗಿಯೆ ಇದೆಯೆನಿಸುತ್ತದೆ. ಟಿ.ಎಸ್. ಎಲಿಯಟ್‌ನ ಪರಂಪರೆಯ ಮುಂದುವರಿಕೆಯ ಮಾತೊಂದು ಪ್ರಸಿದ್ಧವಾಗಿದೆ: 'In poetry there is no such thing as complete originality owing nothing to the past. Whenever a Virgil, a Dante, a Shakespeare, a Goethe is born, the whole future of European poetry is altered. When a great poet has lived, certain things have been done once and for all, and cannot

be achieved again; but on the other hand, every poet adds something to the complex material out of which future poetry will be written'[೩೨]

ಪರಂಪರೆಯೊಂದನ್ನು ಒಬ್ಬ ಕವಿ ಹೇಗೆ ಹುಟ್ಟು ಹಾಕುತ್ತಾನೆ ಹಾಗೂ ಪರಂಪರೆಯೊಂದಕ್ಕೆ ಕವಿಯೊಬ್ಬ ಹೇಗೆ ಉಪಕೃತನಾಗಿರುತ್ತಾನೆ ಎನ್ನುವುದನ್ನು ಟಿ.ಎಸ್.ಎಲಿಯಟ್ ವಿವರಿಸುತ್ತಾನೆ. ಮುಂದೆ ಭವಿಷ್ಯದಲ್ಲಿ ಕವಿಯೊಬ್ಬ ಬರೆಯಬಹುದಾದ ಸಾಲುಗಳನ್ನು ಬರೆಯಲಿಕ್ಕೆಂದು ನೆಲವನ್ನು ಹದ ಮಾಡುವ, ಭಾಷೆಯನ್ನು ಸಿದ್ಧಗೊಳಿಸುವ, ಮುಂದಿನ ಕವಿಗೆ 'ಮಾರ್ಗ' ತೋರುವ, ಅವನಿಗೆ 'ದೇಸಿ' ತೊಡಿಸುವ ಕೆಲಸವನ್ನು ಹಿಂದೆಯೆ ಇನ್ನೊಬ್ಬ ಕವಿ ಮಾಡಿರುತ್ತಾನೆ. ಕವಿಯೊಬ್ಬನಿಗೆ ಆ ಪ್ರೇರಣೆ ಪ್ರತ್ಯಕ್ಷವಾಗಿ ಸಿಕ್ಕಿರಬಹುದು. ಇಲ್ಲವೆ ಪರೋಕ್ಷವಾಗಿ ಅವನ ಎದೆಯೊಳಗೆ ಕೆಲಸ ಮಾಡಿರಬಹುದು. ಆ ಪರಂಪರೆಯಿಂದ ಪ್ರೇರಿತನಾದ ಕವಿಯು ಮುಂದೆ ತನ್ನಂತಹ ಕಾವ್ಯ ಬರೆಯಲಿಕ್ಕೆ ಶಕ್ಯವಿಲ್ಲದಂತಹ ಕಾವ್ಯವನ್ನು ಬರೆದು ಸಾಹಿತ್ಯ ಲೋಕವನ್ನು ಬೆರಗುಗೊಳಿಸುತ್ತಾನೆ. ಅಷ್ಟು ಸರಳವಾಗಿ ಯಾರೂ ಅನುಕರಿಸಲಾಗದಂತಹ ಕಾವ್ಯಮಾರ್ಗವನ್ನು, ಕಾವ್ಯ ಮನೋಧರ್ಮವನ್ನು ಸೃಷ್ಟಿ ಮಾಡಿ 'ವರಕವಿ'ಯೆಂದೆನಿಸಿಕೊಳ್ಳುತ್ತಾನೆ. ಬೇಂದ್ರೆ ಕನ್ನಡ ಕಾವ್ಯ ಪರಂಪರೆಯನ್ನು ಅತ್ಯಂತ ಶಕ್ತವಾಗಿ ಉಪಯೋಗಿಸಿಕೊಂಡು ಹೊಸ ಪರಂಪರೆ ಹಾಕಿದ ಕವಿ. ಪಂಪನ ಬನವಾಸಿ ಹಾಗೂ ಅಲ್ಲಿ ಹರಿಯುವ ಸೀತೋದಾ ನದಿ, ಅಲ್ಲಿಯ ಕೋಗಿಲೆ, ಜೀಂಯ್‌ಗುಡುವ ದುಂಬಿ; ಹಂಪೆಯ ಹರಿಹರನ ನೆಲ ಹಾಗೂ ಆತನ ದೈವವಾದ ವಿರುಪಾಕ್ಷನ ಸನ್ನಿಧಿ; 'ಕ್ರಿಯಾ ಮಥನವಿಲ್ಲದೆ ಕಾಣುಬಂದದೆ ಕಾಷ್ಠದೊಳಗಣ ಅಗ್ನಿ'[೩೩] ಯೆಂದು ಕೇಳಿದ ಅಲ್ಲಮಪ್ರಭುವಿನ ಸತ್ಕ್ರಿಯಾಚರಣೆಯೆ ಸಾಧನ; 'ಪಸರಿಸಿತು ಮಧುಮಾಸ'ವೆಂದು 'ಸರ್ವಾಂಗ ಶೃಂಗಾರದ'[೩೪] ವಸಂತದಲ್ಲಿಯೆ ಪಾಂಡು ಸಾವು ತಬ್ಬುವುದನ್ನು ಚಿತ್ರಿಸುವ ಕುಮಾರವ್ಯಾಸನ ವರ್ಣನೆ ಹೀಗೆ ಜನಪದದಿಂದ ಮುದ್ದಣನವರೆಗಿನ ರಸಸಾರವನ್ನು ಹಾಗೂ ಅದರ ಜೊತೆಗೆ ಸಂಸ್ಕೃತಿ, ಇಂಗ್ಲೀಷ, ಅನ್ಯ ಭಾರತೀಯ ಭಾಷೆಗಳ ಪ್ರೇರಣೆ, ಅಂತಃಸತ್ವವನ್ನು ಹೀರಿಕೊಂಡು ಬೇಂದ್ರೆ ಬೆಳೆದರು.

ಬೇಂದ್ರೆಯವರ ಪ್ರಕೃತಿಯಾರಾಧನೆ ಒಂದು ದೊಡ್ಡ ಕಾವ್ಯ ಸಂಪ್ರದಾಯದ ಮುಂದುವರಿಕೆಯಾಗಿ ನಮಗೆ ಕಾಣುತ್ತದೆ. ಅದು ಪಂಪ, ಲಕ್ಷ್ಮೀಶರಿಂದ ಬಂದಂತಹ ಸಂಪ್ರದಾಯ. ಕನ್ನಡ ಕಾವ್ಯದ ಇತಿಹಾಸದಲ್ಲಿ ನಿಸರ್ಗದ ಪೂಜೆ ಅವ್ಯಾಹತವಾಗಿ ನಡೆದು ಬಂದಿದೆ. ಕೆಲವು ಹಳೆಯ ಕಾವ್ಯಗಳಲ್ಲಿ ನಿಸರ್ಗದ ವರ್ಣನೆ ಕಥಾವಸ್ತುವಿಗೆ ಬೇಕಾಗಿರಲಿ, ಬೇಡವಾಗಿರಲಿ ಆದರೂ ಅದೊಂದು ಅವಶ್ಯಕ ವರ್ಣನಾಭಾಗವೆಂದು ಕವಿಗಳು ಚಿತ್ರಿಸಿಕೊಂಡು ಬಂದರು. 'ಆದರೆ ಯಾವುದೇ ವರ್ಣನೆ ತನ್ನಷ್ಟಕ್ಕೆ ಎಷ್ಟೇ ಸುಂದರವಾಗಿರಲಿ ಕೃತಿಯ ಸಂವಿಧಾನಕ್ಕೆ ಪೂರಕವಾಗಿದ್ದಾಗ ಮಾತ್ರ ಅದಕ್ಕೆ ಬೆಲೆ ಮತ್ತು ಔಚಿತ್ಯವೆಂಬ ಅಂಶವನ್ನು ಗಮನಿಸಿದವರು ಕೆಲವೇ ಲಾಕ್ಷಣಿಕರು ಮತ್ತು ಇನ್ನೂ ತೀರ ಕೆಲವೇ ಕವಿಗಳು'[೩೫] ಅಷ್ಟಾದಶ ವರ್ಣನೆಗಳು ಕಾವ್ಯಗಳ ತಾಂತ್ರಿಕ ಅಗತ್ಯವಾಗಿ ಉಪಯೋಗವಾದ ಬಗೆಯನ್ನು ನಾವು ನೋಡಿದ್ದೇವೆ. 'ತಂತ್ರವೇ ಕಾವ್ಯಗುಣ'ವಾಗಬಾರದೆಂಬ ಎಚ್ಚರಿಕೆಯನ್ನು ಪಾಲಿಸದಿರುವ ಉದಾಹರಣೆಗಳನ್ನು

ಕೂಡ ಕನ್ನಡ ಕಾವ್ಯ ಪರಂಪರೆಯಲ್ಲಿ ಕಾಣಬಹುದು. ಅಷ್ಟಾದಶ ವರ್ಣನೆಯ ಭಾಗವಾಗಿ ಸಮುದ್ರ, ಪರ್ವತ, ಪುರ, ಚಂದ್ರೋದಯ, ಸೂರ್ಯೋದಯ, ಋತು, ವನವಿಹಾರ, ಜಲಕ್ರೀಡೆ, ಮಧುವನ ಮುಂತಾದ ನಿಸರ್ಗ ವರ್ಣನೆಗಳು ಹಿಂದಿನ ಕೆಲವು ಕಾವ್ಯಗಳಲ್ಲಿ ಕವಿಗಳ ಕರ್ತವ್ಯವೆಂಬಂತೆ, ಅವರ ಅಭಿವ್ಯಕ್ತಿಯ ಸಾಮರ್ಥ್ಯವೆಂಬಂತೆ ಬಂದಿವೆಯೆ ಹೊರತು ಕಾವ್ಯವಸ್ತುವಿಗೆ ಪೂರಕವಾಗಿ ಅಲ್ಲ. ನಿಸರ್ಗದಲ್ಲಿ ತಲ್ಲೀನವಾಗಿ, ಅದರಲ್ಲಿ ಸುಖ-ಸೌಖ್ಯ ಕಾಣುತ್ತ, ಅದರ ಮಡಿಲಲ್ಲಿ ಶಾಂತಿ-ಸಮಾಧಾನ ಅರಸುತ್ತ, ಅದರ ಉಪಾಸಕರಾದ ಕವಿಗಳು ವಿರಳವೆಂದು ಕಾಣಿಸುತ್ತದೆ. ನವೋದಯದ ಕಾಲಕ್ಕೆ ನಿಸರ್ಗ ಹಾಗೂ ಮನುಷ್ಯನ ನಡುವಿನ ಗಾಢ ಸಂಬಂಧ ಕವಿಯ ಅಂತರಾತ್ಮಕ್ಕೆ ತಟ್ಟತೊಡಗಿತೆಂದು ಅನಿಸುತ್ತದೆ. ಪಾಶ್ಚಾತ್ಯ -ಪೌರ್ವಾತ್ಯಗಳ ಪ್ರಭಾವ, ಅರಿವಿನ ಎಲ್ಲೆಗಳ ವಿಸ್ತರಣೆ, ಪ್ರಕೃತಿಯ ನಾಶ, ಸಂಸ್ಕೃತಿಯ ಅಧಃಪತನ ಮುಂತಾದವುಗಳು ಮನುಷ್ಯನನ್ನು ಮತ್ತೆ ನಿಸರ್ಗದ ಕಡೆಗೆ ತಿರುಗಿಸಿದವು. ಬೇಂದ್ರೆ ನಿಸರ್ಗದ ಜೊತೆಗಿನ ಹೊಕ್ಕಳಿನ ಹುರಿಯಂಥ ಭಾವಸಂಬಂಧವನ್ನು ಎಂದಿಗೂ ಅಲಕ್ಷಿಸದೆ ಮರಳಿ ಮರಳಿ ನಿಸರ್ಗಕ್ಕೆ ಹೋಗುತ್ತಾರೆ. ತಮ್ಮ ಕಾವ್ಯವನ್ನು ಅದರಲ್ಲಿ ಅದ್ದಿ ತೆಗೆಯುತ್ತಾರೆ.

ಪ್ರಕೃತಿಯ ಬಾಹ್ಯ ಸೌಂದರ್ಯಕ್ಕೆ ಮನಸೋತು ಅದನ್ನು ಕಾವ್ಯದಲ್ಲಿ ಹಿಡಿದ, ಪ್ರಕೃತಿಯನ್ನು ದೈವವೆಂದು ನಂಬಿ ಅದರ ಪೂಜೆ ನಡೆಸಿದ, ಅದನ್ನು ದೇವನ ಲೀಲೆಯೆಂದು ನಂಬಿ ಅದರೊಳಗೆ ಚೈತನ್ಯವನ್ನು ಗುರುತಿಸಿದ, ಅದರಲ್ಲಿ ಅದಮ್ಯ ಶಕ್ತಿ-ಸ್ವರೂಪಗಳನ್ನು ನೋಡಿದ ಹಾಗೂ ಪ್ರಕೃತಿಯಲ್ಲಿ ಮನುಷ್ಯನ ಸಂಬಂಧದ ಎಳೆಗಳನ್ನು ಗುರುತಿಸಿದ ಹಲವಾರು ಪ್ರಮುಖ ಕವಿಗಳು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ತಮ್ಮ ವೈಶಿಷ್ಟ್ಯದಿಂದ ಕನ್ನಡ ಕಾವ್ಯವನ್ನು ಸಮೃದ್ಧಗೊಳಿಸಿದ್ದಾರೆ. ಪ್ರಕೃತಿಯ ಮಹಾಬೆಟ್ಟಕ್ಕೆ ಮೆಟ್ಟಿಲುಗಳಾಗಿದ್ದಾರೆ. ಪರಂಪರೆಯ ಕೊಂಡಿಗಳಾಗಿದ್ದಾರೆ. ಅಂತಹ ಕೆಲವು ಪ್ರಮುಖ ಕವಿಗಳ ಬೆಳಕಿನ ಕಿರಣಗಳ ಕಡೆ ಕಣ್ಣು ಹಾಯಿಸಬಹುದು.

೩.೪ ಆದಿಕವಿ ಪಂಪ :

ವಸಂತದ ಪ್ರೇರಣೆಯಿಂದ ನಿಸರ್ಗ ನಲಿಯುವುದನ್ನು, ಕವಿತೆ ಪಲ್ಲವಿಸುವುದನ್ನು ಪಂಪ ಕಾಣುತ್ತಾನೆ. ಪ್ರಕೃತಿ ಮತ್ತು ಮನುಷ್ಯನ ಗಾಢ ಸಂಬಂಧವನ್ನು ಕೂಡ ಪಂಪ ಗುರುತಿಸುತ್ತಾನೆ. ಸೀತೋದಾ ನದಿ, ಆ ನದಿಯ ದಂಡೆಗುಂಟ ಗದ್ದೆಗಳಲ್ಲಿ ಅರಳಿ ನಿಂತಿರುವ ನೈದಿಲೆ, ಅದರ ಕಡುಗಂಪು, ಪರಿಮಳ ಬೀರುವ ಭತ್ತದ ಗದ್ದೆ ಇವುಗಳನ್ನೆಲ್ಲ ಪಂಪ ಆದಿಪುರಾಣದಲ್ಲಿ ವರ್ಣಿಸುವಾಗ ಪರವಶನಾಗುತ್ತಾನೆ. ಹೆಣ್ಣಿನ ಹುಬ್ಬಿನ ಚೆಲುವಾದ ಕೊಂಕಿನಂತೆ ಅಂಕು-ಡೊಂಕಾಗಿರುವ ಆ ನದಿ; ಅದರಲ್ಲಾಡುವ ಹಂಸ; ಅದರ ಮಧುರ ನಿನಾದ; ಲವಂಗ, ಮಾವು ಹಾಗೂ ಹೂವು ಪಸರಿಸಿರುವ ಪರಿಮಳ ಆ ಪರಿಸರವನ್ನು ಸ್ವರ್ಗಮಯವಾಗಿ ಪರಿವರ್ತಿಸಿವೆ.

> 'ಪ್ರಿಯಹಂಸೀಯುತ ಹಂಸನಾದೆಯ ಮಹಾಕುತ್ಕೀಲಕೂಟ ಪ್ರಭೇ
> ದೆಯ ತೀರಸ್ಥಲವಂಗಚೂತಲವಲೀಪುಷ್ಪಾಸವಾಸ್ವಾದಿತೋ
> ದಯುತೋನ್ಮಾದೆಯ ತದ್ವಿದೇಹಜನತಾಸ್ವಾಂತಾರ್ಪಿತೋದ್ಯತ್ಪ್ರಮೋ
> ದೆಯ ಸೀತೋದೆಯ ಪೋಲ್ವೆಗಿಲ್ಲ ತೊರೆಗಳ್ ವಿಶ್ವಂಭರಾಭಾಗದೊಳ್'[೩೬]

ಪ್ರೀತಿಯಿಂದ, ಸಂತೋಷದಿಂದ, ಮತ್ತಳಾಗಿ ಹರಿಯುತ್ತಿರುವ ಸೀತೋದಾ ನದಿಗೆ ಸರಿಸಮನಾದ ನದಿ ವಿಶ್ವದ ಯಾವ ಭಾಗದಲ್ಲಿಯೂ ಇಲ್ಲವೆನ್ನುವ ಪಂಪ -

'ಮಡಿಗಳೊಳಗಲರ್ದ ನೆಯ್ದಿಲ್
ಕಡುಗಂಪು ಮನಿವರ ಕಂಪು ಗೆಲ್ದುವು ಸಾಸಿ
ರ್ಮಡಿಯನೆ ಪೊಂಬಣ್ಣದ ಕೆಂ
ಪಿಡಿದಿರೆ ಸೊಗಯಿಪುವು ಗಂಧಶಾಳಿವನಂಗಳ್‌॥'[೩೭]

ಗದ್ದೆಗಳ ಮಡಿಗಳಲ್ಲಿ ಅರಳಿರುವ ಕನ್ನೈದಿಲೆ ಹೂವುಗಳ ಸುವಾಸನೆಯನ್ನು ಸಾವಿರಪಟ್ಟು ಗೆದ್ದವೆನ್ನುವಂತೆ ಬಂಗಾರ ಬಣ್ಣದ ಕೆಂಪು ತುಂಬಿಕೊಂಡು ಗಂಧಗಾಳಿ ವನಗಳಲ್ಲಿನ ಪರಿಮಳ ಬೀರುತ್ತಿರುವ ಭತ್ತದ ಗದ್ದೆಗಳು ಸೊಗಸಾಗಿವೆಯೆಂದು ಪಂಪ ವರ್ಣಿಸುತ್ತಾನೆ.

ಪಂಪ ವರ್ಣಿಸುವ ಬನವಾಸಿಯ ಸೊಬಗು ಕನ್ನಡದ ಪರಂಪರೆಯ ಉದ್ದಕ್ಕೂ ಸ್ಫೂರ್ತಿಯ ಸೆಲೆಯಾಗಿದೆ. ತನ್ನ ನಾಡಿನ ಚೆಲುವು-ಸೌಂದರ್ಯಗಳನ್ನು ಪಂಪ ಅರ್ಜುನನ ಮೂಲಕ ಪಂಪಭಾರತದಲ್ಲಿ ಹೇಳಿಸಿದ್ದಾನೆ.

ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ ಪೂತ ಜಾತಿ ಸಂ
ಪಣಿಯೆ ಕುಕಿಲ್ವ ಕೋಗಿಲೆಯ ಪಾಡುವ ತುಂಬಿಯೆ ನಲ್ಲರೊಳ್ಮೊಗಂ
ನಗೆ ಮೊಗದೊಳ್ ಪಳಂಚಲೆಯ ಕೂಡುವ ನಲ್ಲರೆ ನೋೞ್ಪೊಡಾವ ಬೆ
ಟ್ಟುಗಳೊಳಮಾವ ನಂದನ ವನಂಗಳೊಳಂ ಬನವಾಸಿ ದೇಶದೊಳ್।[೩೮]

'ಬನವಾಸಿಯ ಬೆಟ್ಟದಲ್ಲಿಯೆ (ಸಹ್ಯಾದ್ರಿ) ಆಗಲಿ, ನಂದನವನದಲ್ಲಿಯೆ ಆಗಲಿ ಅರಳಿದ ಅನೇಕ ಜಾತಿಯ ಹೂಗಿಡಗಳು, ಸೊಗಸಿನಿಂದ ಕೂಡಿರುವ (ಚಿಗುರಿರುವ) ಮಾವಿನ ಮರಗಳು, ಸರಗೈಯುವ ಕೋಗಿಲೆಗಳು, ಝೇಂಕರಿಸುವ ದುಂಬಿಗಳು, ಪ್ರಸನ್ನವದನರಾಗಿ ಕೂಡುವ ಪ್ರೇಮಿಗಳು ಕಂಡುಬರುತ್ತಾರಂತೆ.... ಇಂತಹ ಬನವಾಸಿಯಲ್ಲಿ ಮನುಷ್ಯರಾಗಿ ಹುಟ್ಟುವುದಕ್ಕೆ ಪುಣ್ಯ ಬೇಕಂತೆ. ಆ ಪುಣ್ಯವಿಲ್ಲದಿದ್ದರೆ 'ಮರದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್'[೩೯] ಎಂದು ಪಂಪ ಹಂಬಲಿಸಿದ್ದಾನೆ. ಕವಿಯೊಬ್ಬನ ಬಾಲ್ಯದ ಪರಿಸರ ಅವನನ್ನು ಎಂದಿಗೂ ಬಿಟ್ಟು ಹೋಗುವುದಿಲ್ಲವೆನ್ನುವುದಕ್ಕೆ ಪಂಪ ಆಗಾಗ ಬನವಾಸಿಯನ್ನು ನೆನೆದು ಆಂತರಿಕ ಪ್ರೇರಣೆ ಪಡೆಯುತ್ತಾನೆ. 'ಸೊಬಗಿನ ನೆಲೆವೀಡಾಗಿದ್ದ ಬನವಾಸಿಯಿಂದ ದೂರವಿರಬೇಕಾಗಿ ಬಂದ ಪಂಪ ತೆಂಕಣ ಗಾಳಿ ಸೋಂಕಿದರೆ, ಮೃದು ಮಧುರ ವಚನಗಳನ್ನು ಕೇಳಿದರೆ, ಇಂಪಾದ ಸಂಗೀತವನ್ನು ಆಲಿಸಿದರೆ, ಅರಲಿದ ಮಲ್ಲಿಗೆಗಳನ್ನು ಕಂಡರೆ ತಕ್ಷಣವೇ ಬನವಾಸಿಯನ್ನು ನೆನೆಯುತ್ತಾನೆ. 'ಆರಂಕುಶಮಿಟ್ಟೊಡಂ ನೆನೆವುದೆನ್ನ ಮನಂ ವನವಾಸಿ ದೇಶಮಂ'[೪೦] ಎನ್ನುತ್ತಾನೆ.

ಪಂಪ ಲೌಕಿಕವನ್ನೆ ಕುರಿತು ಬರೆಯಲಿ ಅಥವಾ ಆಗಮಿಕ ಅನುಭವವನ್ನೆ ಹೇಳಲಿ-ತನ್ನ ಕಾವ್ಯತತ್ತ್ವ ಹಾಗೂ ರಸಾನುಭೂತಿಗಳನ್ನು ಅದರಲ್ಲಿ ಎರಕ ಹೊಯ್ಯಲು ಮರೆಯುವುದಿಲ್ಲ. ಅವನ ನಿಸರ್ಗ ವರ್ಣನೆ, ಸೌಂದರ್ಯ ಪ್ರಜ್ಞೆ, ಕಾವ್ಯಸಂಗತಿಗಳ ಅಂಗವಾಗಿ ಬಂದು ಅಗಾಧ ಪರಿಣಾಮವನ್ನುಂಟು ಮಾಡುತ್ತವೆ. 'ಕನ್ನಡದ ಅನೇಕ ಕವಿಗಳು ಮಾಡಿರುವ ಅಷ್ಟಾದಶ ವರ್ಣನೆಗಳಲ್ಲಿ ಕಂಡುಬರುವುದು ನೀರಸತೆ. ಪಂಪನಲ್ಲಿ ಅಲ್ಲಿಯೂ ತುಳುಕುತ್ತದೆ ರಸದೊರತೆ. ಅದಕ್ಕೆ ಕಾರಣ ಪಂಪನ ಹುಟ್ಟು ರಸಿಕತೆ. ಪಂಪನ ಪಂಚಕರಣಗಳ ಸೂಕ್ಷ್ಮತೆಗಳನ್ನು ಸಾರುವ ನೂರಾರು ಸನ್ನಿವೇಶಗಳಿವೆ. ಅನೇಕ ವೇಳೆ ಅದು ಇಂದ್ರಿಯ ಮಟ್ಟದಲ್ಲೇ ಪರ್ಯಾವಸಾನಗೊಳ್ಳದೆ ಇನ್ನೂ ಆಳಕ್ಕೆ ಬೇರುಬಿಡುತ್ತಧೆ. ಅವನಿಗೆ ಈ ಹೊರಚೆಲುವು ಬರಿ ಚೆಲುವಷ್ಟೆ ಅಲ್ಲ, ಚೈತನ್ಯವೂ ಆಗಿದೆ. ಚೆಲುವಿನ ನಿಲುದಾಣಗಳಾದ ಹೂ, ಹಣ್ಣು, ಗಿಡ, ಮರ, ಹಕ್ಕಿಗಳ ಒಳಗೆ ಮಿಡಿವ ಚೈತನ್ಯದ ಸ್ಪಂದನವನ್ನು ಪಂಪ ಗುರುತಿಸುತ್ತಾನೆ.'[೪೧] ಮಾರ್ಗ-ದೇಸಿಗಳನ್ನು ಸಮನ್ವಯಗೊಳಿಸಿ ಬರೆಯುತ್ತ, ತನ್ನ ಹಿಂದಿನ ಸಂಪ್ರದಾಯಗಳನ್ನು ಮೀರುತ್ತ, ಅಪಾರ ಜೀವನಶ್ರದ್ಧೆ ಸ್ಫುರಿಸುತ್ತ ತನ್ನ ಕಾಲವನ್ನು ಅದರೆಲ್ಲ ಆಯಾಮಗಳೊಂದಿಗೆ ಭಾಷೆಯಲ್ಲಿ ಹಿಡಿದಿಟ್ಟ ಪಂಪ ಆದಿಕವಿಯ ಹೆಸರಿಗೆ ಅನ್ವರ್ಥವಾದ. ಪಂಪನ ಮಾರ್ಗ-ದೇಸಿಗಳ ಬಳಕೆ, ಶೈಲಿ, ಭಾವ-ರಸ-ಧ್ವನಿಯ ಸಂಪತ್ತು ಕಾವ್ಯನಾದ, ಕರ್ಣರಸಾಯನವಾಗಿರುವ ವಸ್ತು, ಭಾಷೆ ಬೇಂದ್ರೆಯವರ ಮೇಲೂ ಅಗಾಧ ಪರಿಣಾಮ ಮಾಡಿವೆ. ಅವನ ಭಾರತವನ್ನು ಅವರು ಬಹಳಷ್ಟು ಮೆಚ್ಚಿಕೊಂಡಿದ್ದರು: 'ಪಂಪ ಕವಿಯ 'ವಿಕ್ರಮಾರ್ಜುನ ವಿಜಯ'ವು ಕವಿಯಂತೆ ಕವಿಯ ಭಾಷೆಗೂ ಚೂಡಾಮಣಿ ಎನಿಸಿ ಶೋಭಾಯಮಾನವಾಗುವ ಕೃತಿ.'[೪೨]

೩.೫ ರನ್ನ :

'ಗದಾಯುದ್ಧ' ಅಥವಾ 'ಸಾಹಸಭೀಮವಿಜಯ'ದ ಕರ್ತೃವೆಂದು ಜನಮಾನಸದಲ್ಲಿ ಉಳಿದಿರುವ ರನ್ನ ತನ್ನ ಕಥಾಭಾಗಗಳಲ್ಲಿ ವರ್ಣನೆಗಳನ್ನು ತಂದು ಪ್ರಸಿದ್ಧನಾದವನು. ಕರುಣ ವೀರರಸಗಳ ಸಂಗಮವಾದ 'ಗದಾಯುದ್ಧ'ದಲ್ಲಿ ಆಗಾಗ ನಿಸರ್ಗದ ರೂಪಕಗಳು ಹಣಿಕಿ ಹಾಕುತ್ತವೆ. ಆದರೆ ರನ್ನ ಚಿತ್ರಿಸುವ ರೌದ್ರರಮಣೀಯ ಕೆಚ್ಚಿನ ಸನ್ನಿವೇಶಗಳಲ್ಲಿ ಅವು ಮುಚ್ಚಿ ಹೋಗುತ್ತವೆ. ''ಭೀಮನ ಕೋಪಾಗ್ನಿಗೆ ಸರೋವರದ ಜಲಚರಗಳು ಕಾಯ್ದೆ ಸರಿನಲ್ಲಿ ಕೂಳ್ ಕುದಿವಂತೆ ಕುದಿದವು' ಎನ್ನುವ ಸಂದರ್ಭವನ್ನು ನೋಡಬಹುದು. 'ಉರ್ವಿಗಂಧಕಾರಂ ಕವಿ ತರ್ಪಿನಂ ಕುರುಕುಲಾರ್ಕನುಮಸ್ತಮೆಯ್ದಿದರ್' ಈ ಸಾಲಿನಲ್ಲಿ ಕವಿ ಪ್ರಕೃತಿಯ ಘಟನೆಯನ್ನು ಕಥಾಸಂದರ್ಭದಲ್ಲಿ ಸಮನ್ವಯಗೊಳಿಸಿ ಹೇಳಿದ್ದಾನೆ. ಅಲ್ಲದೆ ವೈಶಂಪಾಯನ ಸರೋವರದ ವರ್ಣನೆಯಲ್ಲಿ ಪ್ರಕೃತಿ ಕೆಟ್ಟವರ ವಿಷಯದಲ್ಲಿ ಅಸಹನೆಯನ್ನು ತೋರುತ್ತಾಳೆ ಎಂಬ ಅಂಶವನ್ನು ಎತ್ತಿ ಹೇಳಿದ್ದಾನೆ.''[೪೩]

ಕವಿ ತನ್ನ ಭಾವನೆಗಳನ್ನು ಪ್ರಕೃತಿಗೆ ಅರ್ಪಿಸಿ ಅದರಲ್ಲಿ ಒಂದಾಗುವ, ಚೈತನ್ಯ ಹುಡುಕುವ ಪರಿ ರನ್ನನಲ್ಲಿಯೂ ಕಂಡುಬರುತ್ತದೆ. ಅವನ 'ಅಜಿತನಾಥ ಪುರಾಣ'ದಲ್ಲಿಯ ಕೆಳಗಿನ ಸಾಲುಗಳು ಪ್ರಕೃತಿಗೆ ಆತ ಮನಸೋತಿದ್ದರ

ಉದಾಹರಣೆಗಳಾಗಿವೆ. ವಸಂತ ಮಾಸ ಯಾರಿಗೆ ತಾನೆ ಇಷ್ಟವಾಗುವುದಿಲ್ಲ? ಆ ಋತುವನ್ನು ಕರೆಯಲು ನಾ ಮುಂದು-ತಾ ಮುಂದು ಎನ್ನುತ್ತಾರೆ. ಆ ಅತಿಥಿಯನ್ನು ರನ್ನ ಪ್ರೀತಿಯಿಂದ ಎದುರುಗೊಳ್ಳುತ್ತಾನೆ. 'ಪ್ರಕೃತಿಗೂ ಚೈತನ್ಯವಿದೆಯೆಂದು ಭಾವಿಸಿ ಸ್ವಾಗತಿಸುವ ಕ್ರಮವಿದೆ -

ಬಂದಿರೆ ಮಾಮರಂಗಳಿರ ಮಲ್ಲಿಗೆ ಬಂದಿರೇ ಕೋಕಿಲಾಳಿನೀ
ವೃಂದಮೆ ಬನ್ನಿ ಮಿತಶುಕ ನೀಂಸೊಕಮೇರಜನೀಂದ್ರ ಚಂದ್ರಸೈ
ಪಿಂದಮೆ ಬಂದಿರೇ ಕುಶಲಮೇ ನಿಮಗೆಂದು ಮಧುಪ್ರವೇಶದೊಳ್
ಬಂದುಮನೋಜನೇನನಿತುಮಂ ಪೆಸರ್ಗೊಂಡನೊ ಕೂಡಿಕೊಂಡನೇ'[೪೪]

ರನ್ನನ ಆಗಮಿಕ ಕೃತಿ 'ಅಜಿತನಾಥ ಪುರಾಣ' ಆದಿಕವಿ ಪಂಪನ 'ಆದಿಪುರಾಣ'ವನ್ನು ಅನುಸರಿಸುತ್ತದೆಯೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಆದರೂ ರನ್ನ ಪಂಪನ ಪ್ರತಿಬಿಂಬವಾಗಲು ಇಚ್ಛೆಪಡದೆ ಪ್ರತಿಸ್ಪರ್ಧಿಯಾಗಲು ಹವಣಿಸಿದ ಚಿತ್ರ ಅವನ ಕಾವ್ಯದಲ್ಲಿ ಕಂಡುಬರುತ್ತದೆ. ರನ್ನನ ವರ್ಣನೆಗಳು ಬಹಳಷ್ಟು ಸಮೃದ್ಧವಾದವುಗಳು. 'ಅಭಿಷೇಕದ ವರ್ಣನೆ, ಇಂದ್ರಪೂಜೆಯ ವರ್ಣನೆ, ಅಜಿತನಾಥನ ತಪಸ್ಸಿನ ವರ್ಣನೆ ಇವೆಲ್ಲ ಕಥನಕ್ಕೆ ಪರ್ಯಾಯವಾಗಿರುವ ಅಂಶಗಳು. ಆದರೆ ಕತೆಯಲ್ಲಿಯ ಶೂನ್ಯವನ್ನು ತುಂಬಿಕೊಳ್ಳಲು ಇವು ಸಹಾಯ ಮಾಡುತ್ತವೆಯೇ ಹೊರತು ಕತೆ ಯಾವ ಲಾಭವನ್ನೂ ಪಡೆಯುವುದಿಲ್ಲ. ಆರನೆಯ ಆಶ್ವಾಸದಲ್ಲಿ ಬೆಳದಿಂಗಳನ್ನು ಬಣ್ಣಿಸುವ ಒಂದು ಪದ್ಯ ಹೀಗಿದೆ.

ಬೆಲಗಸೆ ತೀವಿಕೊಂಡು ಕುಡಿಯಲ್ ಮೊಗೆಯಲ್ ಕೊಡಗೊಂಡು ತಿರ್ದಿಬ
ಚ್ಚಲನೆಲೆದೋಂಟದೊಳ್ ಪರಿಯಿಸಲ್ ಪರುಗೊಲ್ಗಳನಿಕ್ಕಿ ಪಾಯಿಸಲ್
ನೆಲೆಯಿನಿಸೆಂದು ನೋಡಲೊಳಪೊಕ್ಕು ಧುಡುಮಮಿರಿದಾಡಲೀಸಲ-
ಗ್ಗಲಿಸದಲಂಪಿನಿಂದದ ಬಗೆದುದಂದು ಜನಂ ಘನ ಚಂದ್ರಿಕಾಂಬುವಂ॥

ಇಂಥ ವರ್ಣನೆಯನ್ನು ಸೃಷ್ಟಿಸಿದ ಪ್ರತಿಭೆ ಶ್ರೇಷ್ಠವಾದದ್ದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.'[೪೫]

ಕಾವ್ಯದಲ್ಲಿ ವೀರರಸಕ್ಕೆ ಹಾಗೂ ನಾಟಕೀಯತೆಗೆ ರನ್ನ ಪ್ರಸಿದ್ಧನಾದವನು. ಜಿ.ಎಂ.ಶ್ರೀ, ಕುವೆಂಪು, ಬೇಂದ್ರೆ ಹಾಗೂ ಇತರರು ಆತನ ಶಕ್ತಿ ಸಮನ್ವಿತವಾದ ನಾಟಕೀಯತೆಯನ್ನು ಮೆಚ್ಚಿದ್ದಾರೆ. ರೌದ್ರ ಹಾಗೂ ವೀರಾವೇಶದ ಸನ್ನಿವೇಶಗಳಲ್ಲಿ ಆತನ ನಾಟ್ಯ ಪರಿಪೂರ್ಣತೆ ಅನುಭವಕ್ಕೆ ಬರುತ್ತದೆ. ಪಾತ್ರಗಳ ಉದ್ಗಾರಗಳು ನಮ್ಮ ಎದೆಯಿಂದ ಹೊರಡುತ್ತವೆನ್ನುವಷ್ಟರ ಮಟ್ಟಿಗೆ ಆ ನಾಟಕೀಯತೆಯಲ್ಲಿ ಸಹೃದಯ ಒಂದಾಗುತ್ತಾನೆ. ಅಲ್ಲಿ ಸೂರೆಗೊಳ್ಳುವ ಸಂವೇದನೆ, ಕರುಣೆಯ ರಸ, ಕಲಾತ್ಮಕತೆ ಮರೆಯಲಾರದ ದೃಶ್ಯಕಾವ್ಯವನ್ನು ನಮ್ಮ ಮುಂದಿಡುತ್ತವೆ. ಇಂತಹ ನಾಟಕೀಯ ಸನ್ನಿವೇಶಗಳನ್ನು ಬೇಂದ್ರೆ ಕಾವ್ಯವು ಒಳಗೊಳ್ಳುತ್ತದೆ. ಕಾವ್ಯದ ಹಲವು ರಸಗಳನ್ನು ಪಡೆದುಕೊಳ್ಳಲು ರನ್ನನಿಂದಲೂ ಬೇಂದ್ರೆಯವರು ಪ್ರೇರಿತರಾಗಿರುವ ಸಾಧ್ಯತೆಯಿದೆ. ಹಲವು ರಸಭಾವಗಳಿಂದ ಮಾತ್ರ ಕಾವ್ಯ

ಜೀವಂತಿಕೆ ಪಡೆದುಕೊಳ್ಳಬಹುದೆಂದು ಬೇಂದ್ರೆ ನಂಬಿದ್ದರು. ರನ್ನನ 'ಗದಾಯುದ್ಧ'ದಲ್ಲಿ ರೌದ್ರವು ಪ್ರಮುಖವಾಗಿ ತೋರಿಬಂದರೂ ಇನ್ನೂ ಅನೇಕ ರಸವಿಶೇಷಗಳು ಅವನಲ್ಲಿ ಹರಿಯುತ್ತವೆಯೆಂದು ಬೇಂದ್ರೆ ಹೇಳುತ್ತಾರೆ. 'ಒಂದು ಮಹಾಕಾವ್ಯದಲ್ಲಿ ಒಂದೇ ರಸವಿರಲಾರದು. ಅನೇಕ ರಸಭಾವಗಳೂ ಇರುವುದುಂಟು. ಆದರೆ ಮೊತ್ತದಲ್ಲಿ ಯಾವುದರ ಪ್ರಮಾಣವು ಹೆಚ್ಚೋ, ಯಾವುದು ಮೊದಲಿಂದ ಕೊನೆಯವರೆಗೂ ಸೂತ್ರದಂತೆ ಪವಣಿಸಿಕೊಂಡು ಬರುವುದೋ, ಅದಕ್ಕೆ ಸ್ಥಾಯಿರಸವೆಂದೂ, ಉಳಿದುದಕ್ಕೆ ಸಂಚಾರಿ ರಸಗಳೆಂದೂ ಹೇಳುವುದು ಲಕ್ಷಣಶಾಸ್ತ್ರದ ರೀತಿಯಾಗಿದೆ. 'ಗದಾಯುದ್ಧ'ದಲ್ಲಿ ವಿದೂಷಕನ ಪ್ರಸಂಗದಲ್ಲಿ ಮರಳುಗಳು ದುರ್ಯೋಧನನ್ನು ಮೂದಲಿಸುವಾಗ ಹಾಸ್ಯವೂ, ದುರ್ಯೊಧನ, ದುಶ್ಶಾಸನ-ಕರ್ಣರ ಕಳೇಬರವನ್ನು ನೋಡಿದಾಗ ಕರುಣವೂ, ರಣಾಂಗಣದ ವಿವಿಧ ಸ್ಥಳಗಳಲ್ಲಿ ಭಯಾನಕ ಬೀಭತ್ಸಗಳೂ, ಯುದ್ಧದ ಕೆಲವೊಂದು ಮೆಟ್ಟಿನಲ್ಲಿ ಅದ್ಭುತವೂ, ವೇಣಿಸಂಹಾರಪ್ರಸಂಗಾ ನಂತರದಲ್ಲಿ ಶೃಂಗಾರವೂ, ದುರ್ಯೋಧನನು ಸಂಜಯ-ಭೀಷ್ಮಾದಿಗಳೆದುರು ಮಾತನಾಡುವಾಗ ವೀರವೂ ಹೀಗೆ ವಿವಿಧ ರಸಭಾವಗಳ ಆಟವು ಎಡೆಗೆ ಕಂಡರೂ ರೌದ್ರರಸವೊಂದು ಮಾತ್ರ ಕಾವ್ಯದುದ್ದಕ್ಕೂ ಪೋಷಿತವಾಗಿ ಬರುವದೆಂಬುದು ಕ್ರೋಧಭಾವಸ್ಥಾಯಿಯಿಂದಲೂ, ರೌದ್ರ-ಕರ್ಮಗಳಿಂದಲೂ, ಇವುಗಳಿಗೆ ತಕ್ಕ ಭಾವಾನುಭಾವಗಳಿಂದಲೂ ಮನದಟ್ಟಾಗುವುದು.'[೪೬]

ಇಂತಹ ರಸಭಾವಗಳ ಅರಿವು ಬೇಂದ್ರೆಯವರಿಗಿದ್ದುದರಿಂದ ತಮ್ಮ ಕಾವ್ಯದಲ್ಲಿ ಉತ್ಕಟತೆಯನ್ನು ಸಾಧಿಸಲು ಅವರಿಗೆ ಸಾಧ್ಯವಾಯಿತು. ಅವರ ಪ್ರಕೃತಿ ಕಾವ್ಯದಲ್ಲಿಯೂ ಕೂಡ ಪ್ರೀತಿ, ಅನುರಾಗ, ಕರುಣ, ಭಯಾನಕ-ಬೀಭತ್ಸದ ಅಂಶಗಳು ಹರಿಯುತ್ತವೆ. ಶಾಂತಿರಸ ಹಾಗೂ ದೈವಿಕ ಅನುಭೂತಿಯು ಸ್ಥಾಯಿಯಾಗಿ ಹರಿದು ಇತರ ಎಲ್ಲ ರಸ-ಭಾವಗಳ ಝರಿಗಳಿಂದ ಅದು ತುಂಬಿಕೊಳ್ಳುತ್ತದೆ.

೩.೬ ಹರಿಹರನ ಭಕ್ತಿಕಾವ್ಯದ ಪರಂಪರೆ :

ಪ್ರಕೃತಿಯನ್ನು ಶಿವಮಯವನ್ನಾಗಿ ಮಾಡಿಕೊಂಡು ಅದರಲ್ಲಿ ಸಂಪೂರ್ಣವಾಗಿ ಬೆರೆತುಹೋದ ಭಕ್ತಮಾರ್ಗದ ಒಬ್ಬ ದೊಡ್ಡ ಕವಿಯೆಂದರೆ ಹರಿಹರ. ಅವನ ಕಾವ್ಯವನ್ನು ಆಸ್ವಾದಿಸುವಾಗ ತುಂಗೆಯ ದಡದ ಹಂಪೆಯ ವಿರುಪಾಕ್ಷನ ಸನ್ನಿಧಿಯಲ್ಲಿ ನಿಂತಂತೆ ಭಾಸವಾದರೆ ಅದರಲ್ಲಿ ಅಚ್ಚರಿಯಿಲ್ಲ. ಆ ಭೌಗೋಳಿಕ ಪರಿಸರದಲ್ಲಿಯೆ ಹರಿಹರ ತಾನು ನಂಬಿದ ದೈವವನ್ನು ಸಾಕ್ಷಾತ್ಕರಿಸಿಕೊಂಡ. 'ಶಿವನಿಗೆ ಎನ್ನ ನಾಲಿಗೆಯಂ ಮಾರಿದೆಂ' ಎಂದು ಹೇಳಿದ ಆತ ತನ್ನ ದೈವಕ್ಕೆ ಎಷ್ಟು ಫಲ-ಪುಷ್ಪಗಳಿಂದ, ಎಷ್ಟು ಭಾವಗಳಿಂದ, ಎಷ್ಟು ಮುಗ್ಧತೆಯಿಂದ ಅರ್ಪಿಸಿಕೊಂಡರೂ ಕೂಡ ಕವಿಗೆ ಸಮಾಧಾನವಿಲ್ಲ, ತೃಪ್ತಿಯಿಲ್ಲ. ಭಕ್ತಿಯ ಉತ್ಕಟತೆಯಲ್ಲಿ ಸಹೃದಯರನ್ನು ತನ್ನ ಜೊತೆಗೆ ಕರೆದೊಯ್ಯುತ್ತಾನೆ. ತಿರುನೀಲಕಂಠರು ನಡೆಸುವ ಪೂಜೆಯಲ್ಲಿ ಯಾವ ಓದುಗನಾದರೂ ಕೂಡ ಪಾಲ್ಗೊಳ್ಳುತ್ತಾನೆ :

ಸಲ್ಲೀಲೆಯಿಂ ಪೂಜಿಸಲ್ಕೆಂದು ಮೈವೆಚ್ಚಿ
ಪೂವಿನಿಂದೊಮ್ಮೆ ಪೊಸಪುಳಕದಿಂದೊಮ್ಮೊಮ್ಮೆ
ಭಾವದಿಂದೊಮ್ಮೆ ಭರತಾಶ್ರುವಿಂದೊಮ್ಮೊಮ್ಮೆ
ತೊದಳಿಂದಲೊಮ್ಮೊಮ್ಮೆ ಗದುಕೆಯಿಂದೊಮ್ಮೊಮ್ಮೆ
ಮುದದಿಂದಲೊಮ್ಮೊಮ್ಮೆ ಮುಗ್ಧತೆಯಿಂದಲೊಮ್ಮೊಮ್ಮೆ[೪೭]

ಶಿವನನ್ನು ಒಲಿಸಲು ಭಕ್ತನು ಕೈಗೊಳ್ಳುವ ಈ ಪೂಜೆ ಭಕ್ತನ ಸುತ್ತಲೂ ಒಂದು ಅಲೌಕಿಕದ ವಾತಾವರಣವನ್ನು ನಿರ್ಮಾಣ ಮಾಡುತ್ತದೆ. ಮನಸ್ಸು, ದೇಹ, ಶಿವನಿಗೆ ಅರ್ಪಿತವಾಗುತ್ತದೆ. ಶಿವಭಕ್ತಿಯೊಂದೆ ಹರಿಹರನ ಮನಸ್ಸನ್ನು ಆವರಿಸಿದೆ. 'ತಿರುನೀಲಕಂಠರ ರಗಳೆಯಲ್ಲಿ ತೊಂಭತ್ತು ವರ್ಷಗಳವರೆಗೆ ಸತಿಪತಿಯರು ಪರಸ್ಪರ 'ಮುಟ್ಟಿದರೆ ಶಿವನಾಣೆ ಎಂಬುದನ್ನು ಅಖಂಡವಾಗಿ ಕಾಯ್ದುಕೊಂಡು ಬಂದು, ಮುಪ್ಪಿನ ಮುದುಕರಾದಾಗ, ಶಿವ ಅವರನ್ನು ಪರೀಕ್ಷೆಗೆ ಒಡ್ಡಿ ಅವರ ಮಹತ್ವವನ್ನು ಲೋಕಕ್ಕೆ ಪ್ರಕಟ ಮಾಡುತ್ತಾನೆ. ಆದರೆ ಈ ಸಂದರ್ಭದಲ್ಲಿ, ಉಳಿದ ಅನೇಕ ಶರಣರ ವಿಚಾರದಲ್ಲಿ ನಡೆದುಕೊಂಡಂತೆ ಅವರನ್ನೂ ವಿಮಾನವೇರಿಸಿ ಕೈಲಾಸಕ್ಕೆ ಕರೆದುಕೊಂಡು ಹೋಗಬಹುದಾಗಿತ್ತು. ಆದರೆ ಶಿವ ಹಾಗೆ ಮಾಡಲಿಲ್ಲ. ಅವರಿಗೆ ನವಯೌವನವನ್ನು ಕರುಣಿಸಿ, ಇನ್ನಷ್ಟು ವರ್ಷ ಈ ಭೂಮಿಯ ಮೇಲೆ ಸುಖವಾಗಿ ಇದ್ದು ನಮ್ಮಲ್ಲಿಗೆ ಬನ್ನಿ' ಎನ್ನುತ್ತಾನೆ. ಇಲ್ಲಿ ಕಾಣುವ ಶಿವನ ನಿಲುವು ಗಮನಿಸಬೇಕಾದದ್ದು. ಅಲ್ಲದೆ ಈ ಮರ್ತ್ಯಭೋಗದ ವಿಚಾರದಲ್ಲಿ ಹರಿಹರನು ತಾಳಿದ ನಿಲುವು ಇದು ಎಂಬುದನ್ನು ಗುರುತಿಸಿಕೊಳ್ಳಬೇಕಾಗಿದೆ.'[೪೮] ಅಂದರೆ ಈ ಲೋಕವಿಲ್ಲದೆ ಆ ಲೋಕವಿಲ್ಲ. ಜೀವನವನ್ನು ವಿರೋಧಿಸುವ, ಹುಟ್ಟಿ ಬಂದ ತನುವಿನ ಮೇಲೆ ಜಿಗುಪ್ಸೆ ತಾಳುವ ಜೀವವಿರೋಧಿ ನಿಲುವನ್ನು ಹರಿಹರ ಪ್ರಕಟಿಸಲಿಲ್ಲ. ಭಕ್ತಿಯನ್ನು ಎದೆಯಲ್ಲಿ ತುಂಬಿಕೊಂಡು ಲೌಕಿಕವನ್ನನುಭವಿಸುವುದು ಎದ್ದು ಕಾಣುತ್ತದೆ. ಬೇಂದ್ರೆಯವರು ಪ್ರಕಟ ಮಾಡುವ ಗುಣ ಕೂಡ ಇಂತಹ ನೀರಿನಿಂದ ಹುಟ್ಟಿ ಬಂದುದಾಗಿದೆ. ಜೀವನಕ್ಕೆ ಅವರು ಕೊಡುವ ಅದಮ್ಯ ಉತ್ಸಾಹವೆ ಅದಕ್ಕೆ ಸಾಕ್ಷಿಯಾಗಿದೆ. ಭಕ್ತಿ ಒಳಗೆ ಬೆಳಗುವ ದೀಪವಾಗಿದೆ. ಹರಿಹರ ಕೂಡ ಅದನ್ನೇ ಹೇಳಿದ್ದ. 'ಹರಿಹರ ದೃಷ್ಟಿಗೆ ಭಕ್ತಿ ಎಬುದು ಪ್ರದರ್ಶನದ ವಸ್ತುವಲ್ಲ. ಅದೊಂದು 'ಅಂತರಂಗದ ರತ್ನ'. .. ನಿಸರ್ಗದಲ್ಲಿ ಹೂವೊಂದು ಸದ್ದಿಲ್ಲದೆ ಹಣ್ಣಾಗುವ ಕ್ರಿಯೆಯಂಥದು'[೪೯] ಹರಿಹರನದು ಭಕ್ತಿಕಣದ ರೀತಿ. ಇಂತಹ ಪರಂಪರೆಯನ್ನು ಹರಿಹರ ಹುಟ್ಟುಹಾಕಿದ.

ಪರಂಪರೆಯಾಗಿ ಮುಂದುವರೆಯುವ ಯೋಗ್ಯತೆಯುಳ್ಳ ಒಂದು ಹೊಸ ಸಾಹಿತ್ಯ ಮಾರ್ಗವನ್ನು ಸ್ಥಾಪಿಸಿದ ಹೆಗ್ಗಳಿಕೆ ಹರಿಹರನದು ಎಂದು ಡಾ. ಎಂ.ಎಂ.ಕಲಬುರ್ಗಿ ಅಭಿಪ್ರಾಯಪಡುತ್ತಾರೆ. 'ವಚನಕಾರರು ಪ್ರಜ್ಞಾಪೂರ್ವಕವಾಗಿ ಕಾವ್ಯ ಬರೆಯಲು ಹೊರಟವರಲ್ಲ; ಕಾವ್ಯ ಸಂಪ್ರದಾಯ ಸ್ಥಾಪಿಸುವುದೂ ಅವರ ಉದ್ದೇಶವಾಗಿರಲಿಲ್ಲ. ಅವರು ಬರೆದುದು ಸಮಾಜ ಸುಧಾರಣೆಗಾಗಿ, ಆ ಬರವಣಿಗೆ ಆಕಾರ ಪಡೆದುದು ಸಾಹಿತ್ಯವಾಗಿ ಹರಿಹರನ ಧೋರಣೆ ಇದರಿಂದ ಒಂದಿಷ್ಟು ಭಿನ್ನವಾಗಿದೆ. ಅವರು ಶರಣನಾಗಿ ಬರೆದವನಲ್ಲ, ಶರಣಕವಿಯಾಗಿ

ಬರೆದ... ಹರಿಹರ ವಚನಕಾರರ ಆಶಯವನ್ನು, ಕೆಲವೊಮ್ಮೆ ಶೈಲಿ ವಿನ್ಯಾಸವನ್ನು ಕಾವ್ಯಪ್ರಜ್ಞೆಯಿಂದ ಮುನ್ನಡೆಸಿದನೆಂಬುದನ್ನು ಮರೆಯುವಂತಿಲ್ಲ.'[೨೮] ಹರಿಹರನ ಸಾಹಿತ್ಯದ ಇನ್ನೊಂದು ಲಕ್ಷಣ, ಉತ್ಸಾಹ, ವಿರಹಕ್ಕೆ ಕಾರಣವಾಗಿ ಪರಿವೆನಾಚೆಗೆ 'ಅಶೋಕ ಸಶೋಕ, ಮಾಮರಂ ತೋಮರಂ, ಬೆಳ್ದಿಂಗಳು ಬಿಳಿಯಂಗಳಂ, ಕೊಳಂ ಕೊಳುಗಳಂ, ಶಶಿಬಿಸಿ, ಲತೆ ಅಸಿಲತೆ, ಸಂಪಗೆ ಪಗೆ ಎನಿಸಿದವು. ಇಂಥ ಶಬ್ದವಿಲಾಸವನ್ನು, ಪದೋತ್ಸಾಹವನ್ನು ಹರಿಹರನಲ್ಲಿ ಮಾತ್ರ ಕಾಣುತ್ತೇವೆ.'[೨೯]

ತನ್ನ ಸುತ್ತಲಿನ ನಿಸರ್ಗದಲ್ಲಿ ದೈವಿಕತೆ ತುಂಬಿಕೊಂಡಿರುವುದನ್ನು ಕಾಣುವ ಹರಿಹರ ಅದರಿಂದಲೆ ತನ್ನ ಕಾವ್ಯಕ್ಕೆ ಪ್ರೇರಣೆಗಳನ್ನು ಪಡೆಯುತ್ತಾನೆ. 'ಹರಿಹರನಿಗೆ ಸತ್ಯ ಕಾಣುವುದು ಹಂಪೆಯ ನೆಲದಲ್ಲಿ. ಅಲ್ಲಿಯ ಬೆಟ್ಟ-ಬಂಡೆಗಳಿಂದ ಆವೃತವಾದ ಪರಿಸರ, ಅಲ್ಲಿಯ ತೋಟಗಳಲ್ಲಿ ಅರಳಿದ ಹೂವು, ತುಂಗಭದ್ರೆಯ ನೀರು ಇವೆಲ್ಲವುಗಳಿಗೆ ವಿರೂಪಾಕ್ಷನ ಅಸ್ತಿತ್ವದಿಂದ ಒಂದು ಅಮೃತತ್ವ ಪ್ರಾಪ್ತವಾಗಿದೆ. ಭಕ್ತಿಯ ಮತ್ತು ಭಕ್ತಿಕಾವ್ಯದ ಮೂಲಸ್ರೋತ್ರ ನಮಗೆ ದೊರೆಯುವುದು ಬಹುಶಃ ಹರಿಹರನಲ್ಲಿಯೇ ಎಂದು ಕಾಣುತ್ತದೆ. ಕಾಮದಹನ, ಪಾರ್ವತಿಯ ತಪಸ್ಸು, ವಿಪ್ರವೇಷದ ಜವನಿಕೆಯ ಹಿಂದೆ ವಿರುಪಾಕ್ಷ ಪ್ರತ್ಯಕ್ಷನಾಗುವುದು ಇವೆಲ್ಲ ಹರಿಹರನ ಮಟ್ಟಿಗೆ ಇತಿಹಾಸಪೂರ್ವದ ಕಾಲದಲ್ಲಿ ನಡೆದ ಘಟನೆಗಳೇ ಅಲ್ಲ. ಅವೆಲ್ಲ ನಡೆಯುವುದು ಹಂಪೆಯ ಹೇಮಕೂಟದಲ್ಲಿ. ಹರಿಹರನ ಪ್ರಾತಿಭ ದೃಷ್ಟಿಯಲ್ಲಿ.'[೩೦]

ಪಾರ್ವತಿಯ ತಪಸ್ಸನ್ನು ಆಧರಿಸಿ ಹರಿಹರ ಬರೆದ ಚಂಪೂಕಾವ್ಯ 'ಗಿರಿಜಾಕಲ್ಯಾಣ' ಅವನ ಒಂದು ಅದ್ಭುತ ಸೃಷ್ಟಿಯಾಗಿದೆ. ಪಾರ್ವತಿಯ ಭಕ್ತಿಯ ಉತ್ತುಂಗವನ್ನು ಈ ಕಾವ್ಯದಲ್ಲಿ ನೋಡಬಹುದಾಗಿದೆ. ಅಲ್ಲಿ ಇಡೀ ನಿಸರ್ಗವೇ ಅವಳೊಡನೆ ಶಿವನಿಗಾಗಿ ತಪಸ್ಸಿಗೆ ಕುಳಿತಂತೆ ಭಾಸವಾಗುತ್ತದೆ. 'ಗಿರಿಜೆ ಘೋರ ತಪಸ್ಸನ್ನಾಚರಿಸುವಾಗ ಬರುವ ಚಳಿಗಾಲದ ಸಾಂದ್ರತೆಯ ಮನೋಜ್ಞ ವರ್ಣನೆ ಹೀಗಿದೆ:

ನುಡಿಯೆಹುಹು ನಡೆಯ ಮಾತೇ
ಕೊಡಲೆ ಪ್ರಾಣಂಗೆ ಚಳಿಯ ಕುಪ್ಪಸ ಮಾಯ್ತೆಂ
ದೊಡೆ ಮಹಿಮೆಯ ಪೇ
ಳ್ದೊಡೆ ಕೇಳ್ವವನಾವನೊರ್ವನುರ್ವೀತಳದೊಳ್'[೩೧]

ಪಾರ್ವತಿಯ ಈ ಘೋರ ತಪಸ್ಸಿನಿಂದ ಇಡೀ ನಿಸರ್ಗ ಅವಳೊಡನೆ ಬೆರತಂತಿದೆ. ಅವಳ ದನಿ ನಿಸರ್ಗದ ದನಿಯಾಗಿದೆ. ಆದುದರಿಂದ ಸೃಷ್ಟಿಯು ಶಿವನನ್ನು ಒಲಿಸಿಕೊಳ್ಳುವುದರಲ್ಲಿ ನಿರತವಾಗಿದೆ. ಆಕೆಯ ಮನಸ್ಸಿನ ಭಾವ ಪ್ರಕೃತಿಯದೇ ಆಗಿದೆ. ಇಂತಹ ನಿಸರ್ಗವನ್ನು ವರ್ಣಿಸುವಲ್ಲಿ ಹರಿಹರನ ಮಹತ್ವ ಎದ್ದು ಕಾಣುತ್ತದೆ.

'ಬೇಸಿಗೆಯ ತಾಪ, ಮಳೆಗಾಲದ ಉತ್ಕಟವಾದ ಭಾವವರ್ಷ, ಶರತ್ಕಾಲದ ಪ್ರಸನ್ನತೆ, ಚಳಿಯಲ್ಲಿಯ ದೇಹಪ್ರಾಣಗಳ ಅಭಿನ್ನತೆ ಇವೆಲ್ಲ ಪಾರ್ವತಿಯ ತಪಸ್ಸಿನ ವಿವಿಧ ಭಾಲಲಹರಿಗಳಾಗಿ ಕಾಣುತ್ತವೆ. 'ಒಡಲೇ ಪ್ರಾಣಂಗೆ

ಚಳಿಯ ಕುಪ್ಪಸವಾಯ್ತು' ಎಂಬ ಚಳಿಯ ವರ್ಣನೆಯಲ್ಲಿ ಚಮತ್ಕಾರವಿಷ್ಟೇ ಇಲ್ಲ, ಪಾರ್ವತಿಯ ತಪಸ್ಸಿನ ಹಿನ್ನೆಲೆಯಲ್ಲಿ ಪ್ರಕೃತಿಯ ಈ ವ್ಯಾಪಾರಕ್ಕೆ ಒಂದು ಅರ್ಥ ಬರುತ್ತದೆ. ಋತುವರ್ಣನೆ ಪರಮಾತ್ಮನಿಂದ ಅಗಲಿದ ಪ್ರಕೃತಿಯ ವಿರಹವರ್ಣನೆಯಾಗುತ್ತದೆ.'[೫೪]

ಹರಿಹರನ 'ಪುಷ್ಪರಗಳೆ'ಯಲ್ಲಿ ನಿಸರ್ಗ ಮೈ ತಳೆದು ಬರುವ ಪರಿ ಆಶ್ಚರ್ಯಕರವಾಗಿದೆ. ಶಿವನನ್ನು ಉಪೂಜಿಸಲೆಂದು, ಅವನಿಗೆ ಅರ್ಪಿತವಾಗಲೆಂದು ವಿಧ ವಿಧವಾದ ಹೂಗಳು ಸೃಷ್ಟಿಯಲ್ಲಿ ಅರಳಿ ನಿಂತಿವೆ. ಭಕ್ತ ಸುಗಂಧಮಯವಾದ ಆ ಪುಷ್ಪಗಳನ್ನು ದೇವರಿಗೆ ಮುಡಿಸುತ್ತಾನೆ.

ಓಜೆಯಿಂ ದುಂಡುಮಲ್ಲಿಗೆಯ ಪದಕವನಿತ್ತು
ಮರುಗದೊಡ್ಡಣೆಗಳಿಂ ಜಗಚರ್ಮವುಂ ತೊಡಿಸಿ
ನೆರೆದ ಸಂಪಗೆಗಳಿಂ ಹುಲಿದೊವಲನೊಲಿದುಡಿಸಿ
ಸುರಹೊನ್ನೆಯರಳ್ಗಳಿಂದುರಗಕಂಕಣವಿಕ್ಕಿ
ಚರಣದೊಳು ಕಮಲಕರ್ಣಿಕೆಯ ವು (ಗುಳ್ಗಳನಿಕ್ಕಿ)[೫೫]

ಚೇತನಮಯವಾದ ನಿಸರ್ಗದ ಪುಷ್ಪಗಳನ್ನು ದೇವನಲ್ಲಿ ಹರಿಹರ ಸುರಿಯುತ್ತಾನೆ. ತನ್ಮೂಲಕ ಆ ಅನುಭೂತಿಯಲ್ಲಿ ಮೀಯುತ್ತಾನೆ. 'ಹರಿಹರನ ಪುಷ್ಪರಗಳೆ ಸಸ್ಯಮೂಲ ಧಾತುವಿನ ಅಖಂಡ ಪ್ರವಾಹವೇ ಆಗಿದೆ. ಸ್ಥಳೀಯ ಭೂಗೋಳದ 'ಸಂದರ್ಭ'ವೊಂದನ್ನು 'ಸಾತತ್ಯ'ಕ್ಕೆ ತಂದ ಬಗೆಯಿದು. ಈ ರಗಳೆಯಲ್ಲಿ ಸಸ್ಯಗಳು ಮತ್ತು ಮಾನವರು ಎಂಬ ದ್ವೈತ ಭಾವಕ್ಕೆ ಪ್ರವೇಶವೇ ಇಲ್ಲ... ಇಲ್ಲಿ ಹೂವುಗಳು ಮತ್ತು ಶರಣ ಚೇತನಗಳ ಮಧ್ಯೆ ಅದ್ವೈತ ಭಾವ ಹೃದ್ಯವಾಗಿ ಮೂಡಿಬಂದಿದೆ.'[೫೬] ತನ್ನ ಹಂಪೆಯ ಪರಿಸರವನ್ನು ಕಾವ್ಯದಲ್ಲಿ ಚೈತನ್ಯ ಹಾಗೂ ಶಕ್ತಿ ಹರಿಸುವ ಮೂಲಸ್ತೋತ್ರವಾಗಿ ಹರಿಹರ ಬಳಸಿಕೊಂಡಿದ್ದಾನೆ. ಪ್ರಕೃತಿಯು ಕೂಡ ದೈವದೆಡೆಗೆ ತುಡಿಯುವುದನ್ನು ಆತ ಮನಗಾಣಿಸುತ್ತಾನೆ. 'ಹಂಪಿಯ ಸ್ಥಳೀಯ ಭೂಗೋಳವು ಹರಿಹರನ ಪಾಲಿಗೆ ಮೂಲಧಾತುವಾಗಿದೆ...' ಸ್ಥಳೀಯ ಭೂಗೋಳವೆಂಬ ಧಾತುವಿನ ಅಖಂಡ ಪ್ರವಾಹವನ್ನು ವರ್ಣಿಸುವದೆಂದರೆ ಅದು ಏಕಕಾಲಕ್ಕೆ ಅಂತರಂಗದ ಖಗೋಳ ಮತ್ತು ವಿಶ್ವರಂಗದ ಖಗೋಳವನ್ನು ವರ್ಣಿಸುವದೆಂದೇ ಅರ್ಥ.'[೫೭] ಬಾಹ್ಯ ಹಾಗೂ ಆಂತರಿಕ ಪ್ರಕೃತಿಗಳೆರಡೂ ತನ್ನ ಕಾವ್ಯದಲ್ಲಿ ಹರಿದಿರುವಂತೆ ಹರಿಹರ ನೋಡಿಕೊಂಡ.

ಹೊರಗೆ ಮುಳ್ಳೊಳಗೆ ಕಂಪಕ್ಕಕ್ಕು ನಿನ್ನ ಪರಿ
ಹೆರಿಸೂಡಿದನ ಗುಪ್ತಭಕ್ತನಂತಿಪ್ಪ ಪರಿ
ಆಹ ದೆಸೆದೆಸೆಗೆ ಬೀರುವ ಸುಗಂಧದ ಸೂರೆ
ಆಹ ಕೇತಕಿ ನಿನ್ನ ಪರಿಮಳದ ಪರಿ ಬೇರೆ
ಪರಿಮಳಂ ಸುಳಿಗೊಂಡು ಬೆಳೆದು ಕವಲೆಳಿಯಿತೋ
ಉರಿವಣಿಸಿ ಬೆಳೆದ ಪರಿಮಳಕೆ ಗರಿಮೂಡಿತೋ[೫೮]

ಹೊರಗೆ ಮುಳ್ಳು ಚಾಚಿಕೊಂಡು ಒಳಗೆ ಸುಗಂಧದ ಕಂಪನ್ನಿಟ್ಟುಕೊಂಡಿರುವ ಕೇದಗೆ ಹೂವು ಹರಿಹರನಿಗೆ ಶಿವನ ಗುಪ್ತಭಕ್ತನಂತೆ ತೋರುವುದು ಆತನ ಕಲ್ಪಕಶಕ್ತಿ ಹಾಗೂ ವಿಸ್ಮಯವನ್ನು ಸಾಧಿಸುವ ಪ್ರತಿಭೆಯನ್ನು ಸೂಚಿಸುತ್ತದೆ. 'ಇಡೀ ನಿಸರ್ಗದ ಜಗತ್ತು ಇಲ್ಲಿ ರಾಗಭಾವಗಳನ್ನುಳ್ಳ ಮಾನುಷ ಜಗತ್ತಾಗಿಬಿಡುತ್ತದೆ. ಗಿಡಗಳು, ಹೂವುಗಳು, ಅವರ ನಡುವೆ ಬರುವ ಈ ಭಕ್ತ, ಇವರೆಲ್ಲರ ಕೇಂದ್ರದಲ್ಲಿರುವ ಮೌನಿ ವಿರುಪಾಕ್ಷ ಇವರ ಆತ್ಮೀಯ ಸಂಬಂಧಗಳನ್ನು ಚಿತ್ರಿಸುವ ಪುಷ್ಪ ರಗಳೆಯು ಕನ್ನಡ ಕಾವ್ಯ ಪರಂಪರೆಯಲ್ಲಿ ವಿಶಿಷ್ಟವಾದ, ಪ್ರಸಿದ್ಧವಾದ ಸ್ಥಾನ ಪಡೆದುಕೊಂಡಿದೆ.'[೫೯]

ಹರಿಹರ, ಚಾಮರಸರ ಕಾವ್ಯವನ್ನು ಓದಿ ಬೇಂದ್ರೆಯವರು ಭಕ್ತಿ ರಸೋತ್ಕಟತೆಗಳನ್ನು ಅನುಭವಿಸಿದ್ದಾರೆ: 'ಬರಿ ಕ್ಷೇತ್ರಜ್ಞಾನವಾದರೆ ಸಾಲದು. ಕ್ಷೇತ್ರ ಕ್ಷೇತ್ರಜ್ಞರ ಒಂದೊಂದೂ ಕೂಡಲಸಂಗಮವು ಸಾಗರ ಸಂಗಮಕ್ಕೆ ಹೋಗಲೇಬೇಕು. ಅಲ್ಲಿ ಸರ್ವ ಕ್ಷೇತ್ರಜ್ಞ ಶರ್ವಲೀಲೆ ಮಾಡುತ್ತಾನೆ. ಆ ಪ್ರಳಯ ಜಲಧಿಯಲ್ಲಿ, ವಟಪತ್ರದಲ್ಲಿ ತನ್ನ ಅಂಗುಷ್ಟವನ್ನು ತಾನೇ ಚೀಪುತ್ತಿರುವ ಚಿರಂತನದ ಶಿಶು ಶಿಂಶುಮಾರ-ಶಿಶುಮಾರ ಬಾಲಲೀಲೆ ಮಾಡುತ್ತಾನೆ. 'This child is the father of man' ಶಿವಶಕ್ತಿಯರ ಸಹಜ ಶಿಶು ಈತ. ಈ ಮಹದತೀತ ಶಿಶುವಿನಿಂದಲೇ ಶಿವಶಕ್ತಿಗಳ ದ್ವಿಲಿಂಗತ್ವ, ಅಲಿಂಗ ಶಿಶುವನ್ನು ದ್ವಿಲಿಂಗವಾಗಿ ಪಡೆದಾಗ ಆತ ಗಣಪತಿಯಾಗುತ್ತಾನೆ. ಹರ ಜಟಾಟೂಟದಿಂದ ಇಳಿದು ಬಂದದ್ದು ಪಾದದಿಂದ ಹರಿಯಲೇಬೇಕು. ಈ ಹರ ಹರಿಯರ ಹರಿಯುವ ಹರವನ್ನು ಅನುಭಾವಿಸದವರು ಹಿಗ್ಗಲಾರರು.'[೬೦]

ಭಕ್ತಿಯ ಕಾವ್ಯ ಕೇಳುತ್ತ ಅದರ ಎಳೆಯನ್ನು ಹಿಡಿದು ಪುರಾಣ, ಉಪನಿಷತ್ತುಗಳ ಕಥೆಗಳ ಜೊತೆ ಗಂಟು ಹಾಕುವುದು ಬೇಂದ್ರೆಯವರ ಕಾವ್ಯದಲ್ಲಿ ಸಾಮಾನ್ಯವಾಗಿ ಸಂಭವಿಸುತ್ತದೆ. ಲೌಕಿಕದ ಸಂಗತಿಗಳಿಂದ ದಢಕ್ಕನೆ ಅವರ ಕವಿತೆ ಅಲೌಕಿಕ ಸಂಗತಿಗಳ ದರ್ಶನ ಮಾಡಿಸುತ್ತದೆ. ಚಾಮರಸನ 'ಪ್ರಭುಲಿಂಗ ಲೀಲೆ'ಯಲ್ಲಿ ಅಲ್ಲಮಪ್ರಭು ಜ್ಯೋತಿಯ ಸ್ವರೂಪವಾಗಿ, ಮಾಯೆಯನ್ನು ಅವಳ ಮೋಹಪಾಶದಿಂದಲೆ ಜಿಗಿಯುವ ಕಾವ್ಯನಾಯಕನಾಗಿ ಕಾಣಿಸಿಕೊಳ್ಳುವುದನ್ನು ಬೇಂದ್ರೆಯವರು ಹೇಳುತ್ತ ಅಲ್ಲಮನ ವಚನಗಳಲ್ಲಿಯ ಪ್ರಕಾಶದಿಂದ ಅನುಭಾವದ ಬೆಳಕು ಉಂಟಾಗುವದನ್ನು ತೋರಿಸುತ್ತಾರೆ. 'ಅಲ್ಲಮನ ರಸ ವಚನಗಳಿಗೆ ವಿರಸದ ಅರ್ಥ ಬರಬಾರದು. ಅವು ಬರೀ ಬೆಡಗಿನ ಕೂಟ ಪ್ರಶ್ನೆಗಳಾಗಬಾರದು. ಅವು ಒಂದೊಂದೂ ಜ್ಯೋತಿರ್ಲಿಂಗಗಳು... ಎಲ್ಲ ಶಿವಸಂಕಲ್ಪಗಳು. ಉಮಾಹೈಮವತಿಯ ಈ ಯಕ್ಷಕ್ಷೇತ್ರದಿಂದ ಬರುತ್ತವೆ.'[೬೧]

ಭಕ್ತಿಯ ಗಾಳಿ ಭಕ್ತನೊಳಗೆ ತುಂಬಿಕೊಂಡಂತೆ ಅನುಭಾವದ ಸಂಸ್ಕಾರ ಆಗುತ್ತ ಹೋಗುತ್ತದೆ. ಬೇಂದ್ರೆಯವರ 'ತುಂಬಿತ್ತು ಹಾಲಗೇರಿ' ಪದ್ಯದಲ್ಲಿ ಎಳೆತನದಿಂದ ಇಂತಹ ಭಕ್ತಿಯ ಪರಿಸರ ಅವರೊಳಗೆ ಸೇರಿಹೋದದ್ದರ ಅನುಭವದ ಕಥನವಿದೆ. ತಾಯಿ ಮಗನೊಳಗೆ ಆ ಸಂಸ್ಕಾರವನ್ನು ತುಂಬುತ್ತಿದ್ದಾಳೆ.

ಸೂರ್ಯ ಆಡತಿದ್ದ ಕಣ್ಣುಮುಚ್ಚಣಿಕಿ
ಮೋಡದ ಹಿಂದಿಂದ ಹಾಕತಿದ್ದ ಹಣಿಕಿ
ಸಾಕ್ಷಿ ಆಗಿದ್ದ ಶ್ರಾವಣಾ ಕೆಣಕಿ
ಎಂದೋ ಕಂಡಿತ್ತು ಚಿದಂಬರ ಬಿಂಬಾ
ದತ್ತನ ತುಂಬುತ್ತಿದ್ದಳು ಜಗದಂಬಾ
ಲಲನಾ ಚಕ್ರದಾಚೀ ತೋರಿತಿತ್ತು ಲಲಿತೆಯ ಮೊಲೀ
ಶ್ರೀಕೃಷ್ಣನ ಹ್ವಾದಲಿ, ಹತ್ತದಣ್ಣಾ ಅದರಾಽ ನೆಲೀ
ತಪ ತಪಽ ತೊಯ್ದು ಗಂಗಾಪಾತಾ
ಮಂದಾಕಿನಿಯ ಪಾರಿಜಾತಾ
ಆದಕ್ಕ ಮಂದಾರ 'ಹೂ'ವಿನ ನಾತಾ
ಹಿಮಾಲಯದ ಎತ್ತರದಿಂದ ಉಮಾ, ಹೈಮಾವತೀ
ವಿವರಸ್ತಾಳ ಭಾರತದ ಕಥೀ

ಈ ನೆಲದ ಪರಂಪರೆಯನ್ನು, ಕಥೆಯನ್ನು ವಿವರಿಸುವ ಉಮಾಹೈಮವತಿ ಅಲ್ಲಮಪ್ರಭುವಿನಲ್ಲಿಯೂ, ಚಾಮರಸನಲ್ಲಿಯೂ, ಹರಿಹರನಲ್ಲಿಯೂ, ಬೇಂದ್ರೆಯಲ್ಲಿಯೂ ಹರಿದಿರುವುದು; ಅನುಭಾವದ ರಸಗಂಗೆಯಿಂದ ಅವರನ್ನು ತೋಯಿಸಿರುವುದು ಮಹತ್ವದ್ದಾಗಿ ಕಾಣುತ್ತದೆ. ಗಣಪತಿಯು ಪಾರ್ವತಿಯ ಮೈಮಣ್ಣಿನ ಮೂರ್ತಿಯಾಗದೆ ಶಿವಶಕ್ತಿಯರ ಚಿರಂತನದ ಶಿಶುವಾಗಿ, ಶಿಶುಮಾರನಾಗಿ, ಶ್ರೀಕೃಷ್ಣನಾಗಿ ಬಾಲಲೀಲೆಗಳಿಂದ ಅಸುರೀಶಕ್ತಿಯನ್ನು ನಾಶಮಾಡುವುದು ಬೆಳಕಿನೆದುರು ತಮಂಧ ಇಲ್ಲವಾಗುವ ರೂಪಕವಾಗಿದೆ. ಭಾರತೀಯ ಭಕ್ತಿ ಪರಂಪರೆಯ ಕಾವ್ಯವನ್ನು ಬೇಂದ್ರೆಯವರು ಗಾಢವಾಗಿ ಓದಿಕೊಂಡುದರ ಪರಿಣಾಮವಾಗಿ ಭಕ್ತಕವಿಯ ರಸಭಾವಗಳನ್ನು ತಮ್ಮ ಕಾವ್ಯದಲ್ಲಿ ತುಂಬಿಕೊಳ್ಳಲು ಅವರಿಗೆ ಸಾಧ್ಯವಾಯಿತು. ಶಕ್ತಿಯಲ್ಲಿ ಲಕ್ಷ್ಮೀ-ಪಾರ್ವತಿ-ಸರಸ್ವತಿ-ಮಹೇಶ್ವರಿ-ಸಾವಿತ್ರಿಯರನ್ನು ಕಾಣಲು ಸಾಧ್ಯವಾಯಿತು. 'ನಾಕು ತಂತಿ' ಸಂಕಲನದ 'ಶಿಶುಮಾರನ ಲಾಲಿ' ಕವಿತೆಯಲ್ಲಿ ಭಕ್ತಿಯ ದಳಗಳಿಂದ ಮೂಡಿರುವ ಕಮಲಕೆ, ಕಮಲದಂತೆ ಶೋಭಿಸುವ ಶಿಶುವಿಗೆ ಮತ್ತು ಶ್ರೀಕೃಷ್ಣನಿಗೆ ಆರತಿ ಬೆಳಗುತ್ತಾರೆ.

ಲಕ್ಷ್ಮೀ ಪಾರ್ವತಿ ಸರಸ್ವತಿಯೊಳಗಽ
ಮಾಹೇಶ್ವರಿ ಮುಖದೊಳಗ
ಓಂ ತತ್‌ಸತ್ ಅದ್ ಇತಿಯೊಳಗಽ
ಗತಿಯೊಳಗಽ ಸ್ಥಿತಿಯೊಳಗಽ ರಸರತಿಯೊಳಗಽ

ಚತ್ವಾರಿ-ಚಾರು-ಚರಿತ್ರೇ

ಪವಿತ್ರೇS-ಸೋಮಾನನೆ ಬಾರೇ

ಸಾವಿತ್ರೇS

ಸತ್ಯಾ-ಸಾವಿತ್ರಿ ಕಂದಾ, ಗೋವಿಂದಾ

ಅರರೇ ಸಾವಿರದಾ ಕಡೆಯಿಂದಾ

ದಳದಳಕೂಡಿ ಮೂಡ್ಯSದ ಅರವಿಂದಾ; ಆರತಿ ಬೆಳಗS[೬೩]

ಬೇಂದ್ರೆಯವರಲ್ಲಿ ಭಕ್ತಿಯ ಎಳೆಗಳು ಅವರು ಎಳೆಯರಾಗಿದ್ದಾಗಿನಿಂದ ಮತ್ತು ತರುಣರಿದ್ದಾಗಿನಿಂದ ಬಂದವು. ಆ ಪರಿಸರದಲ್ಲಿ ಹಾಗೂ ಭಕ್ತಿಕಾವ್ಯದ ಪರಂಪರೆಯಲ್ಲಿ ಅವರ ಕಾವ್ಯ ವಿಕಾಸ ಪಡೆದಿದುದರಿಂದ ದೈವಿಕ ಅನುಭವ ಅವರ ಪದ್ಯಗಳಲ್ಲಿ ಕಾಣಿಸಿಕೊಳ್ಳುತ್ತದೆ. ಬೇಂದ್ರೆಯವರು ವಚನಕಾರರಂತೆ ಹರಿಹರನಂತೆ, ರತ್ನಾಕರನಂತೆ, ಸರ್ವಜ್ಞನಂತೆ ಭಕ್ತಿಕಾವ್ಯ ಮಾರ್ಗದ ಕವಿ ಎನ್ನಲು ಅಡ್ಡಿಯಿಲ್ಲ. ಸಂಪೂರ್ಣ ಅನುಭಾವಿಯಾಗಲು ಅವರೆ ಇಷ್ಟಪಟ್ಟಿರಲಿಲ್ಲ. ಆ ಮಾರ್ಗದ ಸೆಳಕುಗಳಿಂದ ತೋಯಿಸಿಕೊಳ್ಳಲು ಮಾತ್ರ ಇಷ್ಟಪಟ್ಟರೆಂದು ಕಾಣುತ್ತದೆ. ಡಾ. ಚಂದ್ರಶೇಖರ ಕಂಬಾರರು ಅದನ್ನು ಸೂಕ್ತವಾಗಿ ಹೇಳಿದ್ದಾರೆ: 'ಜೈನರ, ಶರಣರ ಅಲೌಕಿಕ ಕಲ್ಪನೆ ನಿರ್ದಿಷ್ಟವಾಗಿರುವಂತೆ, ತರ್ಕಗಮ್ಯವಾಗಿರುವಂತೆ ಬೇಂದ್ರೆಯವರ ಅಲೌಕಿಕ ಸ್ಪಷ್ಟವಾಗಿಲ್ಲ ನಿಜ. ಆದರೆ ಅದು ತಕ್ಕೊಳ್ಳುವ ಆಕಾರ ಅವರ ಭಾವದ ತೀವ್ರತೆಯನ್ನವಲಂಬಿಸಿರುವಂಥಾದ್ದು. ಪ್ರಾರಂಭದಲ್ಲಿ ಲೌಕಿಕತೆ ಸ್ಥಾಯಿಯಾಗಿ ಅಂಥ ಕಾವ್ಯದ ಪ್ರಮಾಣ ಜಾಸ್ತಿಯಾಗಿದ್ದು ಅಲೌಕಿಕತೆ ಸಂಚಾರಿಯಾಗಿ ಆಗಾಗ ಬೀಳುವ ಕನಸುಗಳಂತೆ ಕಾಣಿಸಿಕೊಳ್ಳುತ್ತದೆ. ಇತ್ತೀಚಿನ ಕಾವ್ಯದಲ್ಲಿ ಅಲೌಕಿಕತೆ ಹೆಚ್ಚಾಗಿದೆ. ಲೌಕಿಕ ಕಾವ್ಯದ ಭಾರೀ ಸಮೃದ್ಧಿಯ ಕಾಲದಲ್ಲೇ ಅವರು ಭಕ್ತಿ ಹತ್ತನೇ ರಸವೆಂದು ಪ್ರತಿಪಾದಿಸಿದ್ದರು. ಅಲೌಕಿಕದ ಅದ್ವೈತ ಮುಟ್ಟುವ ಮುನ್ನಿನ ಅವರ ಕಾವ್ಯದಲ್ಲಿ ಭಕ್ತಿಯೇ ಸ್ಥಾಯಿಯಾಗಿ ಬಂದಿದೆ. ಈ ಭಕ್ತಿ ಕೂಡ ಶಂಕರಾಚಾರ್ಯರು, ಶರಣರು, ದಾಸರು, ಜಾನಪದದ ಜೋಗಿತಿಯರು, ಸೂಫಿಪಂಥದ ಅನುಭಾವಿಗಳು ಹಾಡಿದ ಭಕ್ತಿಯೇ ಆಗಿದೆ. ಅದ್ವೈತದ ಕವನಗಳಲ್ಲೂ 'ಬರಿ ಅಂತರಿಕ್ಷದಿ ಹಕ್ಕಿ ಹಾರೀತೆಷ್ಟು, ಬೇಕು ತಂಗಲು ಮುಂಗೈಯಾಸರೆಯು' ಎಂಬ ತಿಳವಳಿಕೆ ಜಾಗೃತವಾಗಿರುತ್ತದೆ.'[೬೪] ಲೌಕಿಕ ಮತ್ತು ಅಲೌಕಿಕ ಜಗತ್ತುಗಳೆರಡನ್ನೂ ತಮ್ಮ ಅನುಭವಲೋಕದಿಂದ ತುಂಬಿಕೊಟ್ಟ ಬೇಂದ್ರೆಯವರು ಸಹೃದಯರಿಗೆ ಸಮದ್ಧ ಕಾವ್ಯ ರಸಾಯನವನ್ನು ಉಣಬಡಿಸಿದರು. ಕಾವ್ಯದಲ್ಲಿ, ಭಕ್ತಿಯಲ್ಲಿ ಹಲವು ರೀತಿಯಲ್ಲಿ ಪ್ರಕಟಗೊಂಡರೂ ಬೇಂದ್ರೆಯವರಿಗೆ ತೃಪ್ತಿಯಿಲ್ಲ. ಈ ವಿಚಾರದಲ್ಲಿ ಬೇಂದ್ರೆ ಹಾಗೂ ಹರಿಹರ ಒಂದೆ ಎಂದು ಕಂಬಾರರು ಹೇಳುತ್ತಾರೆ. ''ಬೇಂದ್ರೆಯವರ ಒಟ್ಟು ಕೃಷಿಯನ್ನು ಗಮನಿಸಿದಾಗ 'He is on the wheel of endless becoming' ಎಂದು ಅನ್ನಿಸುತ್ತದೆ. ಕನ್ನಡದ ಇನ್ನೊಬ್ಬ ಇಂಥ ಕವಿ ಹರಿಹರ. ಎಷ್ಟೊಂದು ಶರಣರ ಮೈ ಹೊಕ್ಕು ಭಕ್ತಿಯನ್ನು ಅನುಭವಿಸಿದರೂ ಎಷ್ಟೊಂದು ಜೀವಸಂದರ್ಭಗಳಲ್ಲಿ ಹೊಕ್ಕು ಭಕ್ತಿ ರಸಾಯನವುಂಡರೂ ತೃಪ್ತವಾಗದ

ಜೀವ ಆತನದು. ರಗಳೆಯ ತೀವ್ರಓಟದಲ್ಲಿ ಅವನ ಈ ಅವಿಶ್ರಾಂತ ಸ್ಥಿತಿ ಗೊತ್ತಾಗುತ್ತದೆ.''[೬೫] ಹರಿಹರನ ಲಕ್ಷ್ಯ ಅಲೌಕಿಕತೆಯ ಕಡೆಗಿದ್ದರೂ ಅವನ ಕಾವ್ಯದ ಉತ್ಕಟತೆ ನೆಲದ ಮೇಲಿನ ಶರಣರಲ್ಲಿಯೆ ಕೇಂದ್ರೀಕೃತವಾಗಿದೆ. ಲೌಕಿಕತೆಯನ್ನು ಮರೆಸುತ್ತಲೆ ಅಲೌಕಿಕತೆಯ ದರ್ಶನವನ್ನು ಕ್ಷಣಮಾತ್ರಕ್ಕಾದರೂ ತೋರಿಸುವ ಕಾವ್ಯಸಿದ್ಧಿಯನ್ನು, ಚಾಣಾಕ್ಷತೆಯನ್ನು, ಪ್ರತಿಭೆಯನ್ನು ಬೇಂದ್ರೆ ರೂಢಿಸಿಕೊಳ್ಳುತ್ತ ಬಂದರು. ಬೇಂದ್ರೆಯವರು ಹರಿಹರನನ್ನು ಓದುತ್ತ ಅವನಿಂದ ಪ್ರೇರಿತವಾದ ಕುತೂಹಲಕರ ಉದಾಹರಣೆಯನ್ನು ಡಾ. ಗಿರಡ್ಡಿ ಗೋವಿಂದರಾಜ ನೀಡುತ್ತಾರೆ. ''ಗಿರಿಜಾ ಕಲ್ಯಾಣ ಮಹಾಪ್ರಬಂಧದ ಒಂದು ಪದ್ಯದಲ್ಲಿ ಗಿರಿಜೆಯ ದೃಷ್ಟಿ ಶಿವನ ತಲೆಯಿಂದ ಪಾದದವರೆಗೆ ಹರಿದಾಡಿ ಅವನ ಅಂಗಾಂಗಗಳನ್ನೆಲ್ಲ ಸ್ಪರ್ಶಿಸಿ ಸುಖಿಸುವ ಸುಂದರವಾದ ವರ್ಣನೆ ಇದೆ.

ಪೊಸೆ ಜೆಡೆಯೊಳ್ ತೊಂಡಂಕಿ, ನೊಸಲೊಳ್ ನಡೆಪಾಡಿ, ಕಪೋಲಭಾಗದೊಳ್
ಪಸರಿಸಿ, ಲೋಚನಂಗಳೊಳಮರ್ಚಿ, ತದಾಸ್ಯದೊಳೊಂದಿ, ಕಂಠದೊಳ್
ಮಿಸುಗಿ, ಭುಜಾಗ್ರದೊಳ್ ತೊಳಗಿ, ವಕ್ಷದೊಳಾಳ್ದು, ಕರಂಗಳೊಳ್ ವಿರಾ
ಜಿಸಿ ಪದದಲ್ಲಿ ಬಿಳ್ದುವು ಭವಾನಿಯ ಮಾನಿಯ ದೈನ್ಯದೃಷ್ಟಿಗಳ್॥ (೫-೮೬)

ಹರಿಹರನ ಈ ಪದ್ಯದ ಪ್ರೇರಣೆಯಿಂದ ತಾವು 'ಶಿವದೃಷ್ಟಿ' ಎಂಬ ಕವಿತೆಯನ್ನು ಬರೆದಿರುವದಾಗಿ ಬೇಂದ್ರೆಯವರು ಕವಿತೆಯ ಸಂದರ್ಭ ಮತ್ತು ಪ್ರೇರಣೆಗಳನ್ನು ತಾವೇ ಸೂಚಿಸಿದ್ದಾರೆ.

ಅವನ ನೋಟ ಅವಳ ಕೂಟ ಏನೋ ಆಟವಾಡಿತು
ಏನೇನೋ ಮಾಡಿತು॥
ಕೂದಲನ್ನು ಹಣಿಗೆಯಂತೆ ಹಿಕ್ಕಿ ಹಿಕ್ಕಿ ಬಾಚಿತು
ಕರುಳಿಗೆ ಕುಡಿ ಚಾಚಿತು॥

ಎಂದು ಆರಂಭವಾಗುವ ಕವಿತೆಯಲ್ಲಿ ಹರಿಹರನ 'ಗಿರಿಜಾದೃಷ್ಟಿ' 'ಶಿವದೃಷ್ಟಿ'ಯಾಗಿ ಬದಲಾಗಿದೆ. ಹರಿಹರನ 'ಆಗಮಿಕ' ಪಠ್ಯದ ವಿವರಗಳನ್ನು 'ಲೌಕಿಕ' ವಿವರಗಳಾಗಿ ಬೆಳೆಸುವ/ಪರಿವರ್ತಿಸುವ ಮೂಲಕ ಬೇಂದ್ರೆಯವರ ಕವಿತೆ ಜಗತ್ತಿನ ಮಾತಾಪಿತರಾದ ಪಾರ್ವತಿ-ಪರಮೇಶ್ವರನ ಸಂಬಂಧವನ್ನು ತನ್ನ ಅರ್ಥದಲ್ಲಿ ಉಳಿಸಿಕೊಂಡು ಇನ್ನಷ್ಟು ಅರ್ಥಪೂರ್ಣವಾಗುತ್ತದೆ.''[೬೬] ಜೀವನದ ಉತ್ಸಾಹವನ್ನು, ಅಂತರಾತ್ಮವನ್ನು ಬೇಂದ್ರೆ ಈ ರೀತಿ ಹಿಡಿದಿಟ್ಟರು. ಮನುಷ್ಯನ ಬದುಕನ್ನು ಚಿತ್ರಿಸುತ್ತಲೆ ಆಗಮಿಕದ ಅಂಶವನ್ನು ಅವನಲ್ಲಿ ತುರುಕಿಬಿಡುತ್ತಿದ್ದರು. ತಾವು ಬೆಳೆದುಬಂದ ವಾತಾವರಣ, ಕಲಿತ ಕಾವ್ಯದ ಪಾಠ ಹಾಗೂ ಕನ್ನಡದ ಕಾವ್ಯ ಪರಂಪರೆಯನ್ನು ಹೇಗೆ ಅರ್ಥಪೂರ್ಣವಾಗಿ ಬೆರೆಸಬೇಕೆಂಬುದು ಬೇಂದ್ರೆಯವರಿಗೆ ಗೊತ್ತಿತ್ತು. ಹರಿಹರನು ಕೂಡ ಅವರಿಗೆ ಅನಂತ ಕಾವ್ಯಸಾಧ್ಯತೆಗಳನ್ನು ತೋರಿಸಿಕೊಟ್ಟನು. ಪ್ರಕೃತಿಯನ್ನು ಆರಾಧಿಸುವುದು, ಅಲ್ಲಿ ಚೈತನ್ಯವನ್ನು ಗುರುತಿಸುವುದು ಹಾಗೂ ಸರ್ವವನ್ನು

ಭಗವಂತನಿಗೆ ಅರ್ಪಿಸುವುದು ಮುಂತಾದವು ಮರ್ತ್ಯವನ್ನು ಸ್ವರ್ಗವನ್ನಾಗಿ ಮಾಡುವ ಪರಿಯೆಂದು ಹರಿಹರನ ಕಾವ್ಯ ನಿರೂಪಿಸಿತ್ತು.

೩.೭ ಕುಮಾರವ್ಯಾಸ :

ಹಿಂದಿನ ಇತಿಹಾಸವನ್ನು ಬಿಟ್ಟುಕೊಟ್ಟು ವರ್ತಮಾನವು ಬದುಕಲಿಕ್ಕಾಗುವುದಿಲ್ಲ. ಇತಿಹಾಸ ವರ್ತಮಾನಗಳು ಸೇರಿಯೆ ಭವಿಷ್ಯವನ್ನು ರೂಪಿಸಬೇಕಾಗುತ್ತದೆ. ಪರಂಪರೆಯ ಹೊರಗಡೆ ಮೇರು ಕವಿಗಳು ಬಂದು ನಿಲ್ಲುವುದಿಲ್ಲ. ಸಾಹಿತ್ಯ ಸ್ಥಾಪಿಸುತ್ತ ಬಂದಿರುವ ಸಾಹಿತ್ಯದೊಡನೆ ಪ್ರತಿಯೊಬ್ಬ ಕವಿಯೂ ಸಂಬಂಧವನ್ನು ಸ್ಥಾಪಿಸಿಕೊಳ್ಳಬೇಕಾಗುತ್ತದೆ. ಹಾಗಾದಾಗ ಮಾತ್ರ ಪರಂಪರೆ ಮುಂದುವರೆಯುತ್ತದೆ. ಬೇಂದ್ರೆ ಅರ್ಥವಾಗಬೇಕಾದರೆ ಪಂಪನ ಕಡೆಗೆ ನಾವು ಹೋಗಲೇಬೇಕಾಗುತ್ತದೆ. ವಚನಕಾರರ ಅನುಭವ ಮಂಟಪದಲ್ಲಿ ಭಾಗವಹಿಸಬಲೇಕಾಗುತ್ತದೆ. ತತ್ವಪದಕಾರರು ಕಂಡ ದೈವಿಕ ಕಾಣ್ಕೆಗಳನ್ನು ತಿಳಿಯಬೇಕಾಗುತ್ತದೆ. ಅರವಿಂದರನ್ನು ಅರಿಯಬೇಕಾಗುತ್ತದೆ. ಹರಿಹರನ ವಿರುಪಾಕ್ಷನ ಸನ್ನಿಧಿಯಲ್ಲಿ ಇದ್ದು ಬರಬೇಕಾಗುತ್ತದೆ. ಹಾಗೂ ಲಕ್ಷ್ಮೀಶನ ನಾದಲೋಕಕ್ಕೆ ಮರುಳಬೇಕಾಗುತ್ತದೆ. ಪರಿಣಿತಿಯೆನ್ನುವುದು ಪಕ್ವವಾಗುತ್ತ, ಆಶಯ ಹಾಗೂ ಮನೋಧರ್ಮಗಳಲ್ಲಿ ವ್ಯತ್ಯಾಸವಾಗುತ್ತ, ವಸ್ತು-ಅಭಿವ್ಯಕ್ತಿಯ ಸ್ವಾತಂತ್ರ್ಯ ಭಿನ್ನವಾಗುತ್ತ ಬರುತ್ತದೆ. ಕವಿಯ ಅಭಿವ್ಯಕ್ತಿಯ ಸ್ವಾತಂತ್ರ್ಯದಲ್ಲಿ, ಅವನ ಪ್ರತಿಭಾಶಕ್ತಿಯ ದುಡಿಕೆಯಲ್ಲಿ ವ್ಯತ್ಯಾಸಗಳಿದ್ದರೂ ಕೂಡ ತನ್ನ ಪರಂಪರೆಯ ಸಂಬಂಧದ ಎಳೆಗಳನ್ನು ಯಾರೂ ಕತ್ತರಿಸಿಕೊಳ್ಳಲು ಆಗುವುದಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಪರಂಪರೆ ಯಾವಾಗಲೂ ಕವಿಯ ನೆರಳಾಗಿ ಇದ್ದೇ ಇರುತ್ತದೆ. ಪಂಪಭಾರತದ ಶೌರ್ಯಕಥೆಗೆ ಭಿನ್ನವಾಗಿ ಭಕ್ತಿಕಥೆಯೊಂದನ್ನು ಚಿತ್ತರಿಸುವುದು ಕುಮಾರವ್ಯಾಸನಿಗೆ ಬೇಕಾಗಿತ್ತು. ಹಾಗಾಗಿಯೇ ಕುಮಾರವ್ಯಾಸ ಕೃಷ್ಣನನ್ನು ಕೇಂದ್ರವಾಗಿರಿಸಿಕೊಂಡು ಮಹಾಭಾರತವನ್ನು ಬರೆದ.

ವೀರನಾರಾಯಣನೆ ಕವಿ ಲಿಪಿ
ಕಾರ ಕುವರವ್ಯಾಸ ಕೇಳುವ
ಸೂರಿಗಳು ಸನಕಾದಿಗಳು ಜಂಗಮು ಜನಾರ್ಧನರು
ಚಾರು ಕವಿತೆಯ ಬಳಕೆಯಲ್ಲವಿ
ಚಾರಿಸುವೊಡಳವಲ್ಲ ಚಿತ್ತವ
ಧಾರು ಹೋ ಸರ್ವಜ್ಞರಾದರು ಸಲುಗೆ ಬಿನ್ನಪವ'[೬೭]

ದೈವವೆ ತನ್ನನ್ನು ಲಿಪಿಕಾರನನ್ನಾಗಿ ಮಾಡಿಕೊಂಡು ಮನುಷ್ಯನಿಗೆ ದೈವಿಕ ಕರುಣೆಯ ಕಥೆಯನ್ನು ಹೇಳುತ್ತಿದೆಯೆಂದು ಭಕ್ತ ಕವೀಶ್ವರನಾದ ಕುಮಾರವ್ಯಾಸನು ಅಭಿಪ್ರಾಯಪಡುತ್ತಾನೆ. ಕವಿಗೆ ಕೃಷ್ಣನ ಅಗಮಿಕರಂಗದ ಭೂಮಿಕೆಯಾಗುತ್ತದೆ. ಕುಮಾರವ್ಯಾಸನ ಪಾತ್ರಗಳು ದೈವದೊಡನೆ ಛಲ ಬೆಳೆಸುವ, ಹೋರಾಡುವ ಮತ್ತೆ

ಅರಿತುಕೊಂಡು ಒಂದಾಗುವ ಪ್ರಕ್ರಿಯೆಯಲ್ಲಿ ಮನುಷ್ಯ ದೈವದ ಅವಿನಾಭಾವ ಸಂಬಂಧ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಮನುಷ್ಯನೆದುರಿಗಿರುವ ಭಕ್ತಿಯ ಹಾದಿ ತೆರೆದುಕೊಳ್ಳುತ್ತದೆ. ಹರಿಹರನಂಥದೇ ಅಭಿವ್ಯಕ್ತಿಯ ಕ್ರಮ ಕುಮಾರವ್ಯಾಸನದೆಂದು ಹೇಳಬಹುದು. ಮರಳಿ ಮರಳಿ ತನ್ನ ದೈವಕ್ಕೆ ಹೋಗುವ; ದೈವ ಸಂಕಲ್ಪದಿಂದ ಮನುಷ್ಯನ ಅಪೇಕ್ಷೆ ನೆರವೇರುವ ಉದಾಹರಣೆಗಳು ಹೇರಳವಾಗಿ ಸಿಕ್ಕುತ್ತವೆ. ಸರ್ವವ್ಯಾಪಿಯಾಗಿರುವ ಚೈತನ್ಯಸ್ವರೂಪನನ್ನು ಎಷ್ಟು ನೆನೆದರೂ ಕವಿಗೆ ಕಡಿಮೆಯೆ ಅನಿಸುತ್ತದೆ.

ದೇವ ಬಂದನು ತನ್ನ ನೆನೆವರ
ಕಾವ ಬಂದನು ದೈತ್ಯ ಕುಲವನ
ದಾವ ಬಂದನು ಭಾಗವತಜನಲೋಲುಪನು ಬಂದ
ಭಾವಿಸುವಡಘಹಾರಿ ಬಂದನು
ಓವಿ ಬಂದರೆ ತನ್ನ ಬೀರುವ
ದೇವ ಬಂದನು ವೀರನಾರಾಯಣ ಬಂದನರಮನೆಗೆ[೧೮]

'ಕೃಷ್ಣನಿಗೆ ಬೇರೆ ಬೇರೆ ವಿಶೇಷಣಗಳನ್ನು ಕೊಟ್ಟು, ಕೃಷ್ಣ ಬಂದಿದ್ದನ್ನು ಹತ್ತು ಮಾತುಗಳಲ್ಲಿ ಹೇಳೋದು. ವಿಸ್ತಾರಗೊಳ್ಳಬೇಕಾದಂಥ ಮತ್ತು ವಿಸ್ತಾರದ ಹಂತಗಳನ್ನು ಇಟ್ಟುಕೊಂಡಂಥ ಒಂದು ಸಂಕ್ಷೇಪ ಇದು.. ಬಾಯಿ ಮಾತಿನ ಕಾವ್ಯದಲ್ಲಿ, ಬಾಯಿಮಾತಿನ ಶಕ್ತಿಯನ್ನು ನಿಲ್ಲಿಸಿಕೊಂಡೇ ಕನ್ನಡದಲ್ಲಿ ತರಬೇಕು.'[೧೯] ಇಂತಹ ಮಾತಿನ ಓಘವನ್ನು, ಮನಸ್ಸಿನಲ್ಲಿ ನಾಟುವಂತಹ ಗುಣವನ್ನು, ಹಲವು ಪಾತ್ರಗಳು ಕಣ್ಣೆದುರು ಕುಣಿಯುವಂತಹ ನಾಟಕೀಯ ಭಿತ್ತಿಯನ್ನು ಬೇಂದ್ರೆಯವರು ಕುಮಾರವ್ಯಾಸನಲ್ಲಿ ಕಂಡರು.

'ಗದುಗಿನ ಭಾರತ'ವನ್ನು ದೇಸಿ ಪರಂಪರೆಯ ಕಾವ್ಯವೆಂದು ಹೇಳುತ್ತ ಅದು ಪ್ರೇರೇಪಿಸಿರುವ ಸಂಗತಿಗಳು ಅಗಣಿತವೆಂದು; ಲೌಕಿಕ ಹಾಗೂ ಅಲೌಕಿಕ ಸಂಗತಿಗಳನ್ನು ಸಮನ್ವಯಗೊಳಿಸಿದ ಕೃತಿಯೆಂದು, ಭಕ್ತಿ ಸೂಸುವ ದರ್ಶನ ಕಾವ್ಯವೆಂದು ಡಾ. ಎಂ.ಎಂ.ಕಲಬುರ್ಗಿಯವರು ಅಭಿಪ್ರಾಯಪಡುವುದು ಸೂಕ್ತವಾಗಿದೆ. ''ತನ್ನ ಶಕ್ತಿಯ ಆಗಮಿಕವನ್ನು ಆದಿಪುರಾಣಕ್ಕೆ ಹಂಚಿ ಹಾಕಿದ್ದ ಪಂಪ, ಲೌಕಿಕವನ್ನು ಭಾರತಕ್ಕೆ ಮೀಸಲಿಟ್ಟನು. ಕುಮಾರವ್ಯಾಸ ಮಾತ್ರ ಇವೆರಡನ್ನು ಭಾರತದಲ್ಲಿಯೇ ಸಮನ್ವಯಗೊಳಿಸಿದ. ಇದರಿಂದಾಗಿ ಲೌಕಿಕ ಸಂವೇದನೆಗಳ ಪಂಪಭಾರತ ಎಂಟು ರಸಗಳ 'ಕಾಯಸಾಹಿತ್ಯ' ಪಾತಳಿಯಲ್ಲಿ ವ್ಯವಹರಿಸಿದರೆ, 'ಕುಮಾರವ್ಯಾಸ ಭಾರತ' ಶಾಂತ ಅಥವಾ ಭಕ್ತಿಯೆಂಬ ಒಂಭತ್ತನೆಯ ರಸಸ್ಪರ್ಶದಿಂದಾಗಿ ಲೌಕಿಕದಲ್ಲಿ ಹೊಕ್ಕು, ಆಗಮಿಕದಲ್ಲಿ ವಿರಮಿಸುತ್ತ ಅಂತಿಮವಾಗಿ 'ಆತ್ಮಸಾಹಿತ್ಯ' ಪಾತಳಿಯಲ್ಲಿ ನಿಲುಗಡೆ ಪಡೆಯುವಂತೆ ಮಾಡಿದ.''[೨೦]

ಪಂಪ ಅರಮನೆಯಲ್ಲಿ ಕುಳಿತು ಅರ್ಜುನನ್ನು ನಾಯಕನನ್ನಾಗಿ ಮಾಡಿ ಭಾರತವನ್ನು ಬರೆದರೆ ಕುಮಾರವ್ಯಾಸ ಗದುಗಿನ ದೇವಸ್ಥಾನದಲ್ಲಿ ಕುಳಿತು ಭಾರತವನ್ನು ಕೃಷ್ಣಕಥೆಯನ್ನಾಗಿ ನಿರೂಪಿಸಿದ. ಅಂದರೆ ಅವರು ತುಳಿದ

ಹಾದಿಗಳು ಭಿನ್ನವಾಗಿದ್ದವು. ಪಂಪನಿಗೆ ಅದು ಅರಿಕೇಸರಿಯ ಶೌರ್ಯದ ಕಥೆಯಾಗಿತ್ತು. ವೀರನಾರಾಯಣಪ್ಪನಿಗೆ ಅದು ಕೃಷ್ಣನ ಭಕ್ತಿಯಲ್ಲಿ ಮೀಯುವದಾಗಿತ್ತು. 'ವಿಕ್ರಮಾರ್ಜುನ ವಿಜಯ'ವನ್ನು ಅದ್ಭುತ ಲೌಕಿಕತೆಯ ಪ್ರತೀಕವಾಗಿಸಿದ ಪಂಪ ತನ್ನ ಆಗಮಿಕದ ಹಂಬಲವನ್ನು 'ಆದಿಪುರಾಣ'ದಲ್ಲಿ ಅಭಿವ್ಯಕ್ತಿಸಿದ. ಕುಮಾರವ್ಯಾಸನಿಗೆ ಲೌಕಿಕದ ಕಥೆ ಹೇಳುತ್ತಲೆ ಅಲೌಕಿಕದ ರೂಪವನ್ನು ತೋರಿಸಬೇಕಾಗಿತ್ತು. ಭಕ್ತಿರಸ ಅವನಲ್ಲಿ ಉಕ್ಕಿ ಹರಿಯುತ್ತದೆ.

ತಿಳಿಯ ಹೇಳುವೆ ಕೃಷ್ಣಕಥೆಯನು
ಇಳೆಯ ಜಾಣರು ಮೆಚ್ಚುವಂತಿರೆ
ನೆಲೆಗೆ ಪಂಚಮ ಶ್ರುತಿಯನೊರೆವೆನು ಕೃಷ್ಣ ಮೆಚ್ಚಲಿಕೆ[೬೧]

ತಾನು ನಂಬಿದ ದೈವದಲ್ಲಿ ಭಕ್ತಿ ಪರವಶತೆಯಿಂದ ಮೈಮರೆಯುವ, ಕಾವ್ಯವನ್ನು ಮೆರೆಸುವ ಕುಮಾರವ್ಯಾಸ ಭಕ್ತಿಪಂಥ ಕಾವ್ಯದ ಒಂದು ಮುಖ್ಯ ಕೊಂಡಿಯಾಗಿದ್ದಾನೆ. ಬೇಂದ್ರೆಯವರು ಅವನಿಗೆ ಆಕರ್ಷಿತರಾದುದರಲ್ಲಿ ಆಶ್ಚರ್ಯವಿಲ್ಲ. ವೀರನಾರಾಯಣನೆ ಕವಿ, ತಾನು ಬರೀ ಲಿಪಿಕಾರನೆಂದು ಹೇಳಿಕೊಂಡು ವಿನಯವಂತಿಕೆ ಹಾಗೂ ಭಕ್ತಿಯನ್ನು ತೋರ್ಪಡಿಸುತ್ತಾನೆ. ಪರಂಪರೆಗೆ ಮತ್ತು ಸಾಹಿತ್ಯದ ಆಸ್ತಿಗೆ ಮಗನ ರೂಪವಾಗಿ-ಕುಮಾರನಾಗಿ ಹೊರಹೊಮ್ಮುತ್ತಾನೆ. ಬೇಂದ್ರೆಯವರು ಕೂಡ ಕಾವ್ಯಶಕ್ತಿಯಾದ ಅಂಬಿಕೆಯ ತನಯನನ್ನಾಗಿ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ಕಾವ್ಯತಾಯಿ ಕೊಟ್ಟದ್ದನ್ನು ತಾನು ಸಹೃದಯರಿಗೆ ಕೊಡುತ್ತಿದ್ದೇನೆ ಎಂಬ ವಿನಯ ಪ್ರಕಟಿಸುತ್ತಾರೆ. ಮಲೆನಾಡಿನ ಮಲೆಗಳಿಂದ ಬಂದ ಕುವೆಂಪು ಕಾಡಿನ ಕೊಳಲು ಆಗಲು, ಕಾಡಕವಿ ಆಗಲು ಇಷ್ಟಪಡುತ್ತಾರೆ. ಭಕ್ತಿಯ ಪರಂಪರೆಗೆ ತಮ್ಮನ್ನು ಅರ್ಪಿಸಿಕೊಳ್ಳುತ್ತಾರೆ.

ಭಕ್ತಿಪಂಥದ ಪ್ರಮುಖ ಕವಿಯಾಗಿ ಭಕ್ತಿ ಸಾಹಿತ್ಯವನ್ನು ಉದ್ದೀಪಿಸಿದ ಕುಮಾರವ್ಯಾಸ ಜನಪ್ರಿಯತೆ ಹಾಗೂ ಶ್ರೇಷ್ಠತೆಗಳೆರಡನ್ನೂ ಬೆಸೆದವನು ಎಂದು ಡಾ. ಜಿ.ಎಸ್.ಶಿವರುದ್ರಪ್ಪ ಅಭಿಪ್ರಾಯಪಡುತ್ತಾರೆ. 'ಕುಮಾರವ್ಯಾಸ ಕರ್ನಾಟಕದ ಭಕ್ತಿಪಂಥವೊಂದರ ಪ್ರಮುಖ ಕವಿಯಾಗಿದ್ದಾನೆ. ಭಕ್ತಿ ಸಾಹಿತ್ಯದ ಒಂದು ಬಹುಮುಖ್ಯವಾದ ಲಕ್ಷಣವೆಂದರೆ, ಕವಿ ತನ್ನನ್ನು ತಾನು ಸಾಧಕ ಭಾವದಲ್ಲಿ ನಿಲ್ಲಿಸಿಕೊಳ್ಳುವುದು ಮತ್ತು ತನ್ನ ಇಷ್ಟದೈವದ ಒಂದು ಉಪಕರಣ ಅಥವಾ ಮಾಧ್ಯಮ ಎಂದು ಭಾವಿಸುವುದು. ಕನ್ನಡದ ವೀರಶೈವ ಭಕ್ತಿ ಚಳವಳಿಯ ಸಂದರ್ಭದಲ್ಲಿ ಕಾಣಿಸಿಕೊಂಡ ಬಸವಣ್ಣನವರ ವ್ಯಕ್ತಿತ್ವವಾಗಲೀ, ಅನಂತರದ ಕವಿ ಹರಿಹರನ ವ್ಯಕ್ತಿತ್ವವಾಗಲಿ ಇದೇ ಬಗೆಯದು. ವೀರಶೈವ ಭಕ್ತಿ ಚಳುವಳಿಯ ನಂತರ ಕರ್ನಾಟಕದಲ್ಲಿ ಪ್ರವರ್ಧಮಾನಕ್ಕೆ ಬಂದ ಭಾಗವತ ಸಂಪ್ರದಾಯದ ಕುಮಾರವ್ಯಾಸ ಮತ್ತು ಅದರ ಪರಿಣಾಮವಾದ ಹರಿಭಕ್ತಿ ಚಳುವಳಿಯ ದಾಸಶ್ರೇಷ್ಠರೂ ಈ ಭಕ್ತಿ ಸಾಹಿತ್ಯವನ್ನು ಕನ್ನಡದಲ್ಲಿ ಮುಂದುವರಿಸಿದರು.'[೬೨]

ಇಂತಹ ಭಕ್ತಿಯ ಪರಂಪರೆಯನ್ನು ದುಡಿಸಿಕೊಂಡ ಬೇಂದ್ರೆಯವರು ಹೃದಯಸ್ವರೂಪನ, ಚೈತನ್ಯಹರನ ಹುಡುಕಾಟದಲ್ಲಿ ಆ ಅನುಭವವನ್ನು ವಿನಿಯೋಗಿಸಿಕೊಂಡರು, 'ನಾರಣಪ್ಪನ ಭಾರತವು ಅರಸುಗಳಿಗೆ

ವೀರವಿರಬಹುದು. ಮಂತ್ರಿಜನಕೆ ಬುದ್ಧಿಗುಣವೂ ಇರಬಹುದು. ಆದರೆ ಅದಕ್ಕಿಂತ ಭಾವಕರ ಕುಲದೈವ, ಹರಿಶರಣರಿಗೆ ವರವಿದು. ವೀರಯುಗವು ಪಂಡಿತರದು; ಬಲ್ಲಿದರದು; ಭಕ್ತಿಯುಗವು ಪಾಮರರದು, ಬಡವರದು. ನಾರಣಪ್ಪನ ಕಾಲಕ್ಕೆ ವೀರಯುಗವನ್ನು ಭಕ್ತಿಯುಗವು ಆವರಿಸುತ್ತಲಿತ್ತು. ರನ್ನನಂತೆ ಕುಮಾರವ್ಯಾಸನು ರೂಪಕಶಕ್ತಿಯುಳ್ಳವನು; ಕನ್ನಡ ಭಾರತವೊಂದು ರೂಪಕಮಾಲೆ.'[೭೩] ಕುಮಾರವ್ಯಾಸನ ಭಾವಪ್ರಪಂಚದಿಂದ, ಚಿತ್ರಪಟದಿಂದ, ರಸೋತ್ಕರ್ಷದಿಂದ, ನಿಸರ್ಗದ ರೂಪಕಗಳಿಂದ ಬೇಂದ್ರೆಯವರು ಪ್ರಭಾವಿತರಾದುದರಲ್ಲಿ ಎರಡು ಮಾತಿಲ್ಲ.

ಕುಮಾರವ್ಯಾಸನನ್ನು ರೂಪಕಗಳ ಕವಿಯೆಂದು ಬೇಂದ್ರೆ ಹೇಳುತ್ತಾರೆ. ರೂಪಕಗಳು ಅವನಲ್ಲಿ ಶಕ್ತವಾಗಿ ದುಡಿಯುತ್ತವೆ. ನಮ್ಮ ಕಣ್ಣಮುಂದೆ ಮಹಾಭಾರತವನ್ನು ತಂದಿರಿಸುತ್ತವೆ. ಅದಕ್ಕಾಗಿಯೇ ಕುವೆಂಪು 'ಕುಮಾರವ್ಯಾಸ ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು. ಭಾರತ ಕಣ್ಣಲ್ಲಿ ಕುಣಿಯುವುದು' ಎಂದರು. 'ಅವನು ನುಡಿಯುವ ಭಾಷೆಯೇ ಭಾವವಾಗುತ್ತದೆ; ಭಾಷೆಯೇ ರೂಪಕವಾಗುತ್ತದೆ. ರೂಪಕವನ್ನು ಆ ನುಡಿಯಿಂದ ಬಿಡಿಸಿ ತೆಗೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಯಾರನ್ನಾದರೂ ಅನುವಾದ ಮಾಡಬಹುದು. ಕುಮಾರವ್ಯಾಸನನ್ನು ಅನುವಾದ ಮಾಡುವುದು ಎಂದೆಂದಿಗೂ ದುಸ್ಸಾಧ್ಯ. ಕಾರಣ ಅವನ ಪ್ರತಿಭೆ ಭಾಷೆಯಲ್ಲಿ ಆವಿರ್ಭವಿಸಿದೆ. ಆದುದರಿಂದಲೇ ಅವುಗಳಲ್ಲಿ ಅವಿಭಾಜ್ಯವಾದ ಶಕ್ತಿ ಪ್ರಜ್ವಲಿಸುತ್ತದೆ. 'ಬವರವಾದರೆ ಹರನ ವದನಕೆ ಬೆವರ ತಹೆ', 'ಮೃತ್ಯು ಮರೆಹೊಕ್ಕಳು ಮಹೇಶ್ವರನ', 'ಹಡಗು ಜಲಧಿಯಳೋಡಿ ಗಿರಿಗಳನೆಡಹಿ ನುಗ್ಗಾದಂತೆ', 'ಕಾಲಕೂಟದ ಕಮಲ ತುಂಬಿಗೆ ಪಥ್ಯವಲ್ಲ'... 'ಅರಿವಿನ ಹೆರಗು ಹಾರಿತು', 'ಅಂಬುನಿಧಿ ಮಕರಂದವಾದರೆ ತುಂಬಿಯಾಗನೆ ವಡಬ?' ಇಂತಹವು ನೂರಲ್ಲ, ಸಹಸ್ರಾರು ಉದಾಹರಣೆಗಳನ್ನು ಕೊಡಬಹುದು'[೭೪] ಎಂದು ಕುವೆಂಪು ಅವರು ಅವನ ರೂಪಕ ಶಕ್ತಿಯನ್ನು ಬಣ್ಣಿಸುತ್ತಾರೆ. ಪ್ರಕೃತಿ ವರ್ಣನೆಯ ಚಿತ್ರಗಳೂ ಮಾಸದೆ ಉಳಿಯುತ್ತವೆ. ಭೀಷ್ಮ ಶರಶಯ್ಯೆಯಲ್ಲಿ ಮಲಗಿದಾಗ ಆಕಾಶದಲ್ಲಿ ಮುಳುಗುತ್ತಿದ್ದ ಸೂರ್ಯನನ್ನು ಹೋಲಿಸಿ ಬಣ್ಣಿಸಿದ ಈ ಪದ್ಯ :

ಬೀಳುಕೊಂಡರು ರಾಯರಿಬ್ಬರು
ಪಾಳಯಗಳಿಗಿತ್ತ ಪಡುವಣ
ಶೈಲ ವಿಪುಲ ಸ್ತಂಭದೀಪಿಕೆಯಂತೆ ರವಿ ಮೆರೆದ
ಮೇಲು ಮುಸುಕಿನ ಮುಖದ ಚಿತ್ರದ
ಕಾಳಿಕೆಯ ದುಮ್ಮಾನ ಜಲಧಿಯ
ಕಾಲುವೆಗಳೆನೆ ಕೌರವರು ಹೊಕ್ಕರು ನಿಜಾಲಯವ[೭೫]

ವಸಂತಕಾಲ ಹೇಗಿತ್ತೆಂದರೆ 'ತೆಗೆದುದಗ್ಗದ ತಂಪು, ನದಿ ಸರಸಿಗಳ ತಡಿಯಲಿ ಹೆಜ್ಜೆಯಾದುದು. ಹಗಲು ಹಾವಸೆ ಹರಿದು ಹೊಕ್ಕರಿಸಿದುದು ಹಿಮಜಲವ, ಸೊಗಸಿದವು ನೆಳಲುಗಳು, ದೂರಕೆ ಸೆಗಳಿಕೆಗಳೇರಿದವು. ತಂಗಾಳಿಗೆ ವಿಹಾರಿಸಿ

ಮೈಯ ತೆತ್ತುದು ಕೂಡೆ ಜನ ನಿಕರ... ಸೂರ್ಯೋದಯ ಜೀಯುಗವನ್ನು ತೆರೆಯುತ್ತದಂತೆ'[೨೨] ಮುಂತಾದ ರಮಣೀಯವಾದ ಅಸದಳ ಚೆಲುವಿನಿಂದ ಕೂಡಿದ ನಿಸರ್ಗದ ಕಾವ್ಯ ಚಿತ್ರಗಳು ಕುಮಾರವ್ಯಾಸನ ಪ್ರತಿಭೆಗೆ ಸಾಕ್ಷಿಯಾಗಿವೆ. ಕುಮಾರವ್ಯಾಸನು ಸೃಷ್ಟಿಸುವ ನಿಸರ್ಗದ ಭೀತಿಯ ರೂಪಕಗಳಾದ ಅಗ್ನಿ ಮತ್ತು ಸರ್ಪ ಮನುಷ್ಯನನ್ನು ಸುತ್ತುವರೆದು ಕಾಡುವ ರೂಪಕಗಳಾಗಿವೆ. ಇಡೀ ಭಾರತವೇ ಅದರಲ್ಲಿ ಬೇಯುತ್ತದೆ. 'ಕೋಲಗುರುವಿನ ಮರಣ ವಾರ್ತಾ ಕಾಲಸರ್ಪವ ತಂದು ಹೇಳಿಗೆಯ ನೀಡಾಡಿದನು ಸಂಜಯ ಧೃತರಾಷ್ಟ್ರನಿದುರಿನಲಿ' ಎನ್ನುವಲ್ಲಿ ಭೀಷ್ಮಾವಸಾನ ಎನ್ನುವ ಶ್ರವಣವಿಷ ದ್ರೋಣನ ಸಾವಿನಲ್ಲಿ ಕಾಳಸರ್ಪದ ರೂಪಕವಾಗಿ ಬೆಳೆಯುತ್ತ ಹೋಗುತ್ತದೆಯೆಂದು ಕುರ್ತಕೋಟಿಯವರು ಸಮರ್ಥವಾಗಿ ಗುರುತಿಸುತ್ತಾರೆ: 'ನುಡಿಗಳು ಕಾಲಕೂಟವಾಗ್ತಾವೆ. ಹಾವಾಗ್ತವೆ, ಮಹಾಭಾರತದಲ್ಲಿ ಮೊದಲಿಂದ ಕೊನೆಯವರೆಗೂ ಹಾವು, ಬೆಂಕಿ ಇವೆರಡೂ ಬರಲೇಬೇಕು. ದಾಯಾದಿ ಮತ್ಸರವನ್ನು ಬೇರೆ ಪ್ರತಿಮೆಗಳು ಹಿಡಿಯಲಾರವು. ಅದು ಬೆಂಕಿ ಆಗಬೇಕು, ಲಾಕ್ಷಾಗೃಹದ ಬೆಂಕಿಯಾಗಬೇಕು. ಖಾಂಡವವನದ ಬೆಂಕಿ ಆಗಬೇಕು'[೨೭] ಆದಿಕವಿ ಪಂಪ ಕಂಡದ್ದು ಕೂಡ ಅದನ್ನೆ. 'ಧೂಪದ ದಟ್ಟವಾದ ಹೊಗೆಯಿಂದ ಉಸಿರುಗಟ್ಟಿ ಸಾಯುವ ಪ್ರಣಯಿಗಳು, ಖಾಂಡವ ದಹನದ ಹೊಗೆಯಲ್ಲಿ ಸಾಯುವ ಪ್ರಣಯಿಗಳು ಪಂಪ ಈ ಚಿತ್ರಗಳನ್ನು ಎದೆಯಿಕ್ಕದೆ ನೋಡುತ್ತ ಮನುಷ್ಯ ಜೀವನವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ.'[೨೮] ಭೀಕರ ಹಾಗೂ ರೌದ್ರ ಪ್ರಕೃತಿಯನ್ನು ಮನುಷ್ಯನು ಒಲಿಸಿಕೊಳ್ಳುವ, ಶಾಂತರಸದ ಸಂಪ್ರೀತಿಯಿಂದ ಮತ್ತೆ ತೇವಗೊಳ್ಳುವ ಚಿತ್ರಣ ಇಬ್ಬರಲ್ಲೂ ಎದ್ದು ಕಾಣುತ್ತದೆ.

೩.೮ ಲಕ್ಷ್ಮೀಶ :

ಅಹಂಕಾರ, ಮದ, ಮತ್ಸರ, ಭೋಗ, ಬೇಟೆಗಳಲ್ಲಿ ಸುಖವಿದೆಯೆಂದು ಭಾವಿಸಿ ಆ ಲೋಲುಪತೆಗಳಲ್ಲಿ ಮುಳುಗಿರುವ ಮನುಷ್ಯನ ಎಂದೆಂದೂ ಮುಗಿಯದ ಯುದ್ಧಗಳ ಬಗ್ಗೆ ಲಕ್ಷ್ಯ ಹರಿಸಿ, ಮೃಗೀಯ ಆಸಕ್ತಿಗಳು ನಿರರ್ಥಕವೆಂದು ಸಾರಿ ಅವನಿಗೆ ಭಕ್ತಿಯ ಹಾದಿ ತೋರಿದ ಕನ್ನಡ ಕಾವ್ಯ ಪರಂಪರೆಯ ಮತ್ತೊಬ್ಬ ಪ್ರತಿಭಾಶಾಲಿ ಕವಿಯೆಂದರೆ ಲಕ್ಷ್ಮೀಶ. ಯುದ್ಧಗಳ ನಡುವೆ ಹರಿಯುವ ಶಾಂತರಸವೇ ಅವನ ಕಾವ್ಯದ ತಿರುಳು. ಬಳಲಿರುವ ಅವನ ವೀರರು ಅದು ಸಿಕ್ಕಾಗ ಸಮಾಧಾನಗೊಳ್ಳುತ್ತಾರೆ. ನೆಮ್ಮದಿಯಿಂದ ಕೃಷ್ಣನೆಡೆಗೆ ನೋಡುತ್ತಾರೆ. ಕೃಷ್ಣಭಕ್ತಿಯನ್ನು ಅರಹುವ ಅವನ ಜೈಮಿನಿಭಾರತಕ್ಕೆ ಮಾರುಹೋಗದವರೇ ವಿರಳ. ನಾದಲೋಲ ಲಕ್ಷ್ಮೀಶನನ್ನು ಬೇಂದ್ರೆ ವರ್ಣಿಸುವ ರೀತಿ ತುಂಬ ಅನನ್ಯವಾಗಿದೆ. ಹಾಡಲು ಅನುಕೂಲವಾಗಿರುವ ಜೈಮಿನಿ ಭಾರತಕ್ಕೆ ಗಮಕಿಗಳ ಅಗತ್ಯವನ್ನು ಬೇಂದ್ರೆ ಪ್ರತಿಪಾದಿಸುತ್ತ ಅದು ಅವರ ಕಾಲದಲ್ಲಿ ಸಾಕಾರಗೊಳ್ಳಲು ಪ್ರಾರಂಭಿಸಿರುವುದಕ್ಕೆ ಸಂತೋಷಪಡುತ್ತಾರೆ. ಲಕ್ಷ್ಮೀಶನ ರಸಸೃಷ್ಟಿ, ಅಷ್ಟಾದಶ ವರ್ಣನೆ ವರ್ಣಿಸಲಸದಳ ಎನ್ನುತ್ತಾರೆ. 'ಕಡಲಂತೆ ಮೊರೆಯುವ, ಪಡೆಯಂತೆ ಹುಯ್ಲಿಡುವ, ಕಾಮಿನಿಯರಂತೆ ಕ್ರೀಡಿಸುವ, ಗಾಳಿಯಂತೆ ಸುಳಿಯುವ, ಹೊಳೆಯಂತೆ ಹರಿಯುವ, ದುಃಖಿತರಂತೆ ನರಳುವ, ಹೂವಿನಂತರಳುವ, ಕಾಡಿನಂತೆ ಕಂಗೆಡಿಸುವ, ಬಾಲರಂತಾಡುವ, ಹಕ್ಕಿಯಂತೆ ಹಾಡುವ ಲಕ್ಷ್ಮೀಶನ

ಲೀಲಾವತಾರಿಯಾದ ಷಟ್ಪದಿಯ ಸೊಗಸು, ಸೊಬಗು, ಬೆಡಗು, ಯಮಕ, ಒಯ್ಯಾರಗಳು'[೨೯] ರಸದ ಕಡಲಲ್ಲಿ ನಮ್ಮನ್ನು ನೂಕುತ್ತವೆ ಎನ್ನುತ್ತಾರೆ. 'ಅಷ್ಟಾದಶ ವರ್ಣನೆಯ ಅಂಶವಿರಲಿ, ಅನಂತ ಭಾವರಸಗಳ ಲೇಶವಿರಲಿ, 'ಸವಿದನಿಯಿಂದ ಸಮೆದ' ಆದೊಂದು ಲೋಕದಲ್ಲಿ ಅವನು ನಮ್ಮನ್ನು ಹೊಗಿಸಿಬಿಡುವನು.'[೩೦]

ಲಕ್ಷ್ಮೀಶನ ಕಾವ್ಯದಿಂದ ಬೇಂದ್ರೆಯವರು ಬಹಳಷ್ಟು ಪ್ರಭಾವಿತರಾದರು. ಮುಖ್ಯವಾಗಿ ನಿಸರ್ಗದ ಹಲವಾರು ಛಾಯೆಗಳು ಅವರಲ್ಲಿ ಅಚ್ಚಳಿಯದೆ ಉಳಿದವು. ಸೃಷ್ಟಿಯಲ್ಲಿ ಜರಗುವ ಹಲವು ಚಮತ್ಕಾರಗಳನ್ನು ಭಗವಂತನ ಸಂಬಂಧಗಳನ್ನು ಆತನ ವಿವಿಧ ರೂಪಗಳನ್ನು ಲಕ್ಷ್ಮೀಶ ಕಡೆದಿಟ್ಟನು. ಬೇಂದ್ರೆ ಹೇಳುತ್ತಾರೆ : 'ಇಂಥ ಹೃದಯಂಗಮವಾದ ಕಾವ್ಯದಲ್ಲಿ ನನಗೆ ಮುಖ್ಯವಾಗಿ ರುಚಿಸುವುದು ಅಲ್ಲಲ್ಲಿ ಬರುವ ಲಕ್ಷ್ಮೀಶನ ದೇವತಾಸ್ತುತಿಗಳು. ಆ ದೇವತಾಸ್ತುತಿಗಳಲ್ಲಿ ಲಕ್ಷ್ಮೀಶನ ರೀತಿಯೇ ಬಹಳ ಚಮತ್ಕಾರದ್ದಾಗಿದೆ. ಮೂರು ಲೋಕದಿಂದ ಹರಿದುಬಂದ ಗಂಗೆಯ ಸ್ತುತಿ, ಪ್ರತ್ಯಕ್ಷ ದೇವತೆಯಾದ ಸೂರ್ಯನ ಸ್ತುತಿ, 'ಉದಯಾಚಲದ ವಿಸ್ತಾರ'ದಂತೆ ಕಂಡ ಗಣಪತಿಯ ಸ್ತುತಿ, ಸರಸ್ವತಿಯ ಸ್ತುತಿ, ಪಾರ್ವತಿಯ ಸ್ತುತಿ ಇಂಥ ಸ್ತುತಿಗಳನ್ನು ಎಷ್ಟು ಓದಿದರೂ ಸಾಕಾಗದು.'[೩೧] ಲಕ್ಷ್ಮೀಶನ ಭಕ್ತಿಯ ಗಂಗೆ ಬೇಂದ್ರೆಯವರಲ್ಲಿಯೂ ಸೆಲೆಯೊಡೆಯಿತು.

ಮನುಷ್ಯನ ಬದುಕಿನಲ್ಲಿ ಅನಿವಾರ್ಯವಾಗಿ ತೋರುವ ಹೋರಾಟಗಳ ಲೌಕಿಕತೆಯ ನಡುವೆ ಅಲೌಕಿಕತೆಯ ಮಿಂಚು ಸುಳಿದು ಹೋಗುವುದನ್ನು ಎಲ್ಲ ದಾರ್ಶನಿಕರೂ ಚಿತ್ರಿಸುತ್ತಾರೆ. ಪಂಪನಿಂದ ಹಿಡಿದು ಕುವೆಂಪು, ಬೇಂದ್ರೆಯವರೆಗಿನ ಕನ್ನಡದ ಪ್ರಮುಖ ಕವಿಗಳು ಕೂಡ ಮಾಡಿದ್ದು ಅದನ್ನೇ. ಲೌಕಿಕ ಹಾಗೂ ಅಲೌಕಿಕ ಅನುಭೂತಿಗಳನ್ನು ಅವರು ಬೆರೆಸಿ ಇಟ್ಟರು. 'ಪರ'ದ ಕಡೆಗೆ ಕೈಚಾಚುವ 'ಇಹ'ದ ತುಡಿತವನ್ನು ತೆರೆದಿಟ್ಟರು. 'ರತ್ನಾಕರವರ್ಣಿಯ ಭರತ ಲೌಕಿಕವನ್ನು ಇಲ್ಲಿಯೆ ಬಿಟ್ಟು ನೈಜ ಪದವಿಯನ್ನು ಪಡೆದನು. ಚಾಮರಸನ ಅಲ್ಲಮನು ಹಂತಹಂತವಾಗಿ ಇಲ್ಲಿಂದಲ್ಲಿಗೆ ಹತ್ತಿಹೋಗಿ ಪರಶಿವನೊಳಗೆ ಒಂದಾದನು. ಲಕ್ಷ್ಮೀಶನ ಕೃಷ್ಣನು ಇಹದಲ್ಲಿದ್ದವನಂತೆ ಕಂಡರೂ ಪರದಲ್ಲಿ ಮೆರೆದ. ಇಹ-ಪರದ ಸಂಬಂಧವನ್ನು ಹೇಳುವುದೇ ಸಾಹಿತ್ಯದ ಕಾರ್ಯ.'[೩೨]

ಪರ ತಲುಪುವಾಗಿನ ಇಹದ ಯುದ್ಧಗಳ ಬಗ್ಗೆ ಲಕ್ಷ್ಮೀಶ ಪರಿಣಾಮಕಾರಿಯಾಗಿ ಹೇಳುತ್ತಾನೆ. ಅವನ ನಿಸರ್ಗದ ವರ್ಣನೆ ಕೂಡ ಅದ್ಭುತವಾಗಿದೆ. ಡಾ. ವಾಮನ ಬೇಂದ್ರೆಯವರ 'ಲಕ್ಷ್ಮೀಶನ ಜೈಮಿನಿ ಭಾರತ : ಒಂದು ಅಧ್ಯಯನ' ಕೃತಿಯು ಲಕ್ಷ್ಮೀಶನನ್ನು ಕುರಿತ ಅತ್ಯಂತ ಮೌಲಿಕವಾದ ಅಧ್ಯಯನಗಳಲ್ಲಿ ಒಂದೆಂದು ಬರೆಯುತ್ತ ಡಾ. ಸಿ.ಎನ್.ರಾಮಚಂದ್ರನ್ ಅವರು ಹೀಗೆ ಹೇಳುತ್ತಾರೆ. 'ಸಂಸ್ಕೃತ ಮೂಲದಲ್ಲಿಲ್ಲದ ಋತುವರ್ಣನೆಗಳ ಮೂಲಕ ಅಂದರೆ ಕಾವ್ಯ, ವಸಂತ ಋತುವಿನಲ್ಲಿ ಶುರುವಾಗಿ, ಇತರ ಋತುಗಳಲ್ಲಿ ಮುಂದುವರೆದು, ಶಿಶಿರ ಋತುವಿನಲ್ಲಿ ಮುಗಿಯುವುದರ ಮೂಲಕ ಲಕ್ಷ್ಮೀಶನು ತನ್ನ ಕಾವ್ಯಕ್ಕೆ ಎಂತಹ ಬಂಧವನ್ನು ಕೊಟ್ಟಿದ್ದಾನೆಂದೂ, ಅವರು ಎಲ್ಲರೂ ಒಪ್ಪುವ ರೀತಿಯಲ್ಲಿ ಮಂಡಿಸಿದ್ದಾರೆ.'[೩೩] ಗುಣಸಂಪನ್ನರಾದವರು ಸಂಕಷ್ಟಕ್ಕೀಡಾದಾಗ ಪ್ರಕೃತಿ ಕೂಡ ದುಃಖಿಸುತ್ತದೆಮೆಂದು ಲಕ್ಷ್ಮೀಶ ಹೇಳುತ್ತಾನೆ. ಅದರಲ್ಲಿ ಚೇತನವಿದೆಯೆಂದೇ ಅದು ಮನುಷ್ಯನ ನೋವಿಗೆ

ಸ್ಪಂದಿಸುತ್ತದೆ. ಪತಿಯಿಂದ ಪರಿತ್ಯಕ್ತಳಾಗಿರುವ ಸೀತೆ ಘೋರ ಕಾಡಿನಲ್ಲಿ ಏಕಾಂಗಿಯಾಗಿ ದುಃಖ ಅನುಭವಿಸುವಾಗ 'ವೃಕ್ಷಲತೆಗಳ್ ಬಾಡಿ ಸೊರಗುರ್ತಿರ್ದುವು, ಶೋಕ ಭಾರದಿಂ ಕಲ್ಮರಂ ಕರಗುತಿರ್ದುವು ಜಗದೊಳುತ್ತಮರ ಹಾನಿಯಂ ಕಂಡು ಸೈರಿಸುವರುಂಟೆ'[೨೫] ಎಂದು ಕೇಳುವ ಲಕ್ಷ್ಮೀಶ ಜಗತ್ತಿನಲ್ಲಿ ಉತ್ತಮರ ಹಾನಿ-ನಷ್ಟಗಳಿಗೆ ಪ್ರಕೃತಿ ಕರುಳು ಮಿಡಿದು ಅವರನ್ನು ಸಂತೈಸುತ್ತದೆ ಎನ್ನುತ್ತಾನೆ.

ಪಾಲಿಸುವ ದೈವ ತನ್ನ ಜೊತೆಗಿರುವಾಗ ಯಾವ ದುಷ್ಟರೂ ತನಗೇನೂ ಮಾಡಲಾರರೆಂಬ ಸಮಾಧಾನ ಅವನಲ್ಲಿದೆ. ತಾನು ಭಕ್ತಿಯ ಹಾದಿಯಲ್ಲಿರುವಾಗ ಯಾವ ಕೇಡೂ ತನ್ನನ್ನು ತಲುಪಲಾರದೆಂಬ ಭಾವನೆ ಭಕ್ತನಲ್ಲಿದೆ. ಅಂತಹ ಭಕ್ತಿಯಿಂದಾಗಿಯೇ ಬಸವಣ್ಣ ಶಾಂತನಾಗಿದ್ದುದು; ಅಂತಹ ಕೇಡಿಲ್ಲದ, ಸಾವಿಲ್ಲದ ಸಿರಿಗಾಗಿಯೇ ಅಕ್ಕಮಹಾದೇವಿ ಅರಮನೆಯನ್ನು ತ್ಯಜಿಸುದುದು; ಅಂತಹ ಬೆಳಗುವ ಜ್ಯೋತಿಗಾಗಿಯೇ ಅಲ್ಲಮಪ್ರಭು 'ನಡೆದೂ ನಿರ್ಗಮನಿ' ಯಾದುದು.

೩.೯ ಭಕ್ತಿಕಾವ್ಯ ಮತ್ತು ಅನುಭಾವ :

ಕನ್ನಡ, ತಮಿಳು, ತೆಲುಗು, ಮರಾಠಿ, ಬಂಗಾಲಿ, ಹಿಂದೀ, ಉರ್ದು, ಅಸ್ಸಾಮಿ, ಒರಿಯಾ, ಮೈಥಿಲಿ ಮುಂತಾದ ಭಾಷೆಗಳಲ್ಲಿ ವೈವಿಧ್ಯಪೂರ್ಣವಾಗಿ ಕಾಣಿಸಿಕೊಂಡ ಭಕ್ತಿಸಾಹಿತ್ಯವು ಸಂಸ್ಕೃತ ಭಾಷೆಯ ಪರಂಪರಾಗತ ಸಾಹಿತ್ಯ ಪ್ರಕಾರಕ್ಕೆ ಭಿನ್ನವಾಗಿ ದೇಸಿ ಸಂಸ್ಕೃತಿ, ಅನುಭಾವದ ಆಶಯ, ಸಾಮಾಜಿಕ ಅಭ್ಯುದಯದ ಪ್ರತಿಪಾದನೆಗಳಿಗೆ ಒತ್ತು ಕೊಟ್ಟಿತು. ಜನರಾಡುವ ಭಾಷೆಯಲ್ಲಿ ತಮ್ಮ ತತ್ವವನ್ನು ಅಭಿವ್ಯಕ್ತಿಗೆ ಒಳಪಡಿಸಿದ ಭಕ್ತಕವಿಗಳು ದಿನನಿತ್ಯದ ಪ್ರತಿಮೆಗಳ ಮೂಲಕ ಈ ಲೋಕದ ಬದುಕನ್ನು ಹಾಗೂ ಅಧ್ಯಾತ್ಮದ ಅಂಶಗಳನ್ನು ಬೆರೆಸಿ ಇಟ್ಟರು. ಮನುಷ್ಯನ ಒಳಿತು ಬಯಸುವ ಚಿಂತನೆಗಳನ್ನು ಪ್ರತಿಪಾದಿಸಿದ ಭಕ್ತರ ಕವಿಗಳು ಸಮಾಜದ ಎಲ್ಲ ಜನರನ್ನು ಪ್ರತಿನಿಧಿಸುವ ರೀತಿಯಲ್ಲಿ ನೇಕಾರಿಕೆ, ಕೃಷಿ, ಕೂಲಿ, ಕುಂಬಾರಿಕೆ, ಕಂಬಾರಿಕೆ, ಚಮ್ಮಾರಿಕೆ, ತೋಟಗಾರಿಕೆ, ಗುಡಿಕೈಗಾರಿಕೆಗಳಂತಹ ಹಲವು ವೃತ್ತಿ ಮೂಲಗಳಿಂದ ಬಂದವರಾಗಿದ್ದರು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಿನ್ನೆಲೆಯಿಂದಲೂ ಬಂದ ಕವಿಗಳು ಇದ್ದರು. ಧರ್ಮ ಹಾಗೂ ಜಾತಿಗಳನ್ನು ಮೀರುವ ಮೂಲಕ ಮನುಷ್ಯನ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಉನ್ನತಿ ಸಾಧಿಸಬೇಕೆಂಬ ಆಶಯ ಅವರಲ್ಲಿ ಮುಖ್ಯವಾಗಿದ್ದಿತು.

ಕನ್ನಡದಲ್ಲಿ ಆದಿಕವಿ ಪಂಪ ಹಾಕಿಕೊಟ್ಟ ಲೌಕಿಕ ಹಾಗೂ ಆಗಮಿಕ ಎಂಬ ಎರಡು ಹಾದಿಗಳ ಕೃತಿರಚನೆ ಆ ಕಾಲದ ಇತರರಿಗೆ ಮಾದರಿಯಾಗಿದ್ದಂತೆ ಆತನ ದೇಸಿ ಮತ್ತು ಮಾರ್ಗ ಸಮನ್ವಯದ ರಸಸಿದ್ಧಿಯೂ ಕನ್ನಡದ ಸತ್ವವನ್ನು ಬೆಳೆಸುವಲ್ಲಿ ಸಹಾಯ ಮಾಡಿತು. ಪ್ರೌಢ, ಗಂಭೀರ ಚಂಪೂ ಕಾವ್ಯ ಕನ್ನಡಕ್ಕೆ ಸಂಸ್ಕೃತದಿಂದ ಬೇರೆಯಾದ ಉತ್ತಮ ಪರಂಪರೆಯನ್ನು ಒದಗಿಸಿತು. ಕಥಾವಸ್ತುವಿನ ನಿರ್ವಹಣೆ ಹಾಗೂ ಪ್ರಕೃತಿಯ ವರ್ಣನೆಗಳು ಸಾಧ್ಯವಾದ ಮಟ್ಟಿಗೆ ಭಿನ್ನ ಹಾದಿ ತುಳಿದಿದ್ದವು. ಇದನ್ನು ಅಡಿಪಾಯ ಮಾಡಿಕೊಂಡ ಭಕ್ತಿಪ್ರಧಾನವಾದ ಸಾಹಿತ್ಯ ಚಳುವಳಿಯೊಂದು ಕನ್ನಡದಲ್ಲಿ ಕಾಣಿಸಿಕೊಂಡಿತು. ರಾಜಕೀಯ ಏಳುಬೀಳುಗಳ ಸ್ಥಿತ್ಯಂತರದ ಕಾಲದಲ್ಲಿ ಸಾಮಾಜಿಕ

ಬದಲಾವಣೆಯ ಗಾಳಿಯ ಜೊತೆ ದೇಸಿ ಪರಂಪರೆಯ ಹೊಸ ಸಾಹಿತ್ಯದ ಗಾಳಿ ಸೇರಿಕೊಂಡು ಬಹುಮುಖಿ ಬದಲಾವಣೆಗೆ ನಾಂದಿ ಹಾಡಿತು. ಆ ಕಾಲದಲ್ಲಿದ್ದ ಅಂಧವಿಶ್ವಾಸ, ಮೇಲು-ಕೀಳು ಎಂಬ ತಾರತಮ್ಯ, ಪುರೋಹಿತಶಾಹಿಯ ದೌರ್ಜನ್ಯ, ವೈದಿಕ ಧರ್ಮದ ಆಚರಣೆಯಿಂದ ಸಮಾಜದಲ್ಲಿ ಉಂಟಾಗಿದ್ದ ಅಸಮಾನತೆ, ಮಹಿಳೆಯ ಕಡೆಗಣನೆ ಮುಂತಾದವು ಮನುಷ್ಯನ ನಾಗರಿಕತೆಯನ್ನು ಕೀಳುಮಟ್ಟಕ್ಕೆ ಇಳಿಸಿತ್ತು. ಡಾಂಭಿಕ ಭಕ್ತಿಯೆ ಭಕ್ತಿ ಎಂಬುದಾಗಿತ್ತು. ಇಂತಹ ಅರಾಜಕತೆಯ ಸಂದರ್ಭದಲ್ಲಿ ದೇವರ ದಾಸಿಮಯ್ಯ, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಇತ್ಯಾದಿ ಶಿವಶರಣರು ಸ್ವತಂತ್ರ ಮಾರ್ಗವನ್ನು ತುಳಿಯುವ ಮೂಲಕ, ವೈದಿಕ ವ್ಯವಸ್ಥೆಯನ್ನು ಪ್ರಶ್ನಿಸುವ ಮೂಲಕ, ಸಮಾಜಕ್ಕೆ ಕ್ರಾಂತಿದರ್ಶನವನ್ನು ನೀಡುವ ಮೂಲಕ ಕರ್ನಾಟಕದ ನೆಲದಲ್ಲಿ ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ಸಾಹಿತ್ಯಿಕ ಕ್ಷೇತ್ರಗಳಲ್ಲಿ ಅಭೂತಪೂರ್ವ ಬದಲಾವಣೆಗಳನ್ನು ತಂದರು. ಶರಣನಿಗಿಂತ ಹಿರಿದಾದ ಮನುಷ್ಯನಿಲ್ಲ ಎನ್ನುವ ಮೂಲಕ ರಾಜನು ದೈವವೆಂಬ ಕಲ್ಪನೆ ಮೂಲೆಗುಂಪಾಯಿತು. ಮನುಷ್ಯ-ಮನುಷ್ಯರಲ್ಲಿ ಪ್ರೀತಿ, ಕರುಣೆ, ಸಮಾನತೆ, ಇಷ್ಟದೈವದಲ್ಲಿ ನಿಷ್ಠೆಗಳಿಂದಾಗಿ ಸಮಾನಸ್ತರದ ಹೊಸ ಸಮಾಜದ ಕನಸು ಚಿಗುರೊಡೆಯಿತು. ಅನುಭಾವದ ನೆಲೆಯಿಂದ ಪರಮಾತ್ಮನ ದಾರಿ ಸಮೀಪವಾಯಿತು.

'ವಚನವೆಂಬ ಸಾಹಿತ್ಯರೂಪದ ಉದಯ ಹಾಗೂ ವೈವಿಧ್ಯಯುತವಾದ ಅದರ ನಿರ್ಮಾಣ ಸಂಪತ್ತಿ ಇದು ಈ ಯುಗದ ಪ್ರಥಮ ವೈಶಿಷ್ಟ್ಯವಾಗಿದೆ. ವಚನವೆಂಬುದು ಭಾವಗೀತ ಲಕ್ಷಣದಿಂದ ಕೂಡಿದ ಅನುಭಾವಗದ್ಯವೇ ಸರಿ. ಇದರಲ್ಲಿ ಶಿವಶರಣರು ಅಂತರಂಗದ ಆಳವಾದ ಅನುಭವಕ್ಕೆ ಕನ್ನಡಿ ಹಿಡಿದಿದ್ದಾರೆ. ನಿರ್ಭಯವಾದ ಆತ್ಮನಿರೀಕ್ಷಣೆಯನ್ನೂ ಮಾಡಿದ್ದಾರೆ. ನೀತಿ, ಮತ, ತತ್ವ, ಅನುಭಾವಗಳಲ್ಲಿ ಉಗಮ ಹೊಂದಿಯೂ ವಚನಗಳು ಸಾಮಾನ್ಯವಾಗಿ ಸಾಹಿತ್ಯಗುಣದಿಂದ ಕೂಡಿವೆ. ಕೆಲವು ಸಲ ಘನತೆಗೆ ವೀಳ್ಯವೆತ್ತಿವೆ'[೨೫] ಎಂದು ರಂ.ಶ್ರೀ.ಮುಗಳಿಯವರು ವಚನಕಾರರ ಯುಗದ ವೈಶಿಷ್ಟ್ಯಗಳನ್ನು ಹೇಳಿರುವುದು ಸೂಕ್ತವಾದುದಾಗಿದೆ. ವಚನಕಾರರು ಹಾಗೂ ನಂತರದ ಭಕ್ತ ಕವಿಗಳು ಅಭಿವ್ಯಕ್ತಿಗೆ ಹೊಸ ರೂಪಗಳನ್ನು ಕೊಡುವ ಮೂಲಕ ಸಾಹಿತ್ಯಸೃಷ್ಟಿಯಲ್ಲಿ ವೈವಿಧ್ಯತೆಯನ್ನು ತಂದರು. ರಗಳೆ, ತ್ರಿಪದಿ, ಷಟ್ಪದಿ, ನೀತಿಪದ್ಯ, ಸೀಸಪದ್ಯ, ವ್ಯಾಖ್ಯಾನಗದ್ಯ, ನಾಮಾವಳಿಗಳಂತಹ ವಿವಿಧ ಛಂದೋರೂಪಗಳಲ್ಲಿ ಸಾಹಿತ್ಯ ನಿರ್ಮಾಣವಾಗತೊಡಗಿತು. ವಚನಸಾಹಿತ್ಯವೆ ಕನ್ನಡದ ಮಧ್ಯಕಾಲೀನ ಭಕ್ತಿಸಾಹಿತ್ಯ, ದಾಸಸಾಹಿತ್ಯ ತತ್ವಪದಗಳಿಗೆ ಪ್ರೇರಕವಾಗಿ ಪರಿಣಮಿಸಿತು.

ಧರ್ಮಸಾರ, ಧಾರ್ಮಿಕ ನಂಬಿಕೆ, ಭಕ್ತಿ ಮುಂತಾದ ಪರಿಕಲ್ಪನೆಗಳು ಕನ್ನಡದ ಪ್ರಾಚೀನ ಸಾಹಿತ್ಯದಲ್ಲಿ ಮೊದಲು ಬಂದಿದ್ದರೂ 'ಅನುಭಾವ' ಎಂಬ ಮಾತು ಮೊಟ್ಟ ಮೊದಲು ಬಳಕೆಗೆ ಬಂದದ್ದು ಹನ್ನೆರಡನೆಯ ಶತಮಾನದ ಸಾಮಾಜಿಕ ಹಾಗೂ ಧಾರ್ಮಿಕ ಚಳುವಳಿಗೆ ಮೂಲವಾಗಿದ್ದ ವಚನ ಚಳುವಳಿಯ ಸಂದರ್ಭದಲ್ಲಿ ಎಂದು ಡಾ.ಜಿ.ಎಸ್.ಶಿವರುದ್ರಪ್ಪನವರು ಅಭಿಪ್ರಾಯ ತಾಳುತ್ತಾರೆ: 'ಈ ಸಂದರ್ಭದ ಅಭಿವ್ಯಕ್ತಿಗಳಾದ ವಚನಗಳಲ್ಲಿ 'ಅನುಭಾವ' ಎಂಬ ಪದವೊಂದು ಸೃಷ್ಟಿಯಾಗಿ, ಯಾವುದನ್ನು ನಾವು ಇಂಗ್ಲೀಷಿನಲ್ಲಿ ಈಗ Mysticism ಎಂದು

ಕರೆಯುತ್ತೇವೋ, ಆ ಒಂದು ಅನುಭವವನ್ನು ಅತ್ಯಂತ ಸಮರ್ಥವಾಗಿ ಸೂಚಿಸುವ ಪದವಾಗಿ ಬಳಕೆಗೊಂಡಿತ್ತೆಂಬುದು ತುಂಬಾ ವಿಶೇಷದ ಸಂಗತಿಯಾಗಿದೆ. ಅಷ್ಟೇ ಅಲ್ಲ Mysticism ಎಂಬ ಪದ ಯಾವದೈವೀ ಅನುಭೂತಿಯನ್ನು ಇಂದು ಸೂಚಿಸಲು ಬಳಕೆಯಾಗುತ್ತದೆಯೋ, ಅದನ್ನು ಹೇಳುವಂಥ ಸರಿಯಾದ ಯಾವ ಶಬ್ದವೂ ಭಾರತೀಯ ವೇದಾಂತ ಪರಂಪರೆಯಲ್ಲಿ ಇಲ್ಲದಿದ್ದ ಸಂದರ್ಭದಲ್ಲಿ, ವಚನಕಾರರು ಈ ದೈವೀ ಅನುಭವವನ್ನು ಸೂಚಿಸಲು ಟಂಕಿಸಿದ 'ಅನುಭಾವ' ಎನ್ನುವ ಪದ ಭಾರತೀಯ ವೇದಾಂತ ಸಾಹಿತ್ಯಕ್ಕೆ ಕನ್ನಡ ವಚನಕಾರರ ಕೊಡುಗೆಯಾಗಿದೆ.'[೨೧] ತಾವು ಹುಟ್ಟಿದ ಧರ್ಮದಲ್ಲಿ ತೋರಿಸುವ ಧರ್ಮಶ್ರದ್ಧೆ, ಅದರ ಪ್ರಸಾರ ಇತ್ಯಾದಿ ಧಾರ್ಮಿಕ ಸಾಹಿತ್ಯವಾಗಿ ರೂಪಗೊಂಡರೆ ಭಕ್ತಿ ಹಾಗೂ ಅನುಭಾವ ಸಾಹಿತ್ಯ ರಚಿಸುವವನಿಗೆ ಕೇವಲ ಧರ್ಮಶ್ರದ್ಧೆ ಮುಖ್ಯವಾಗದೆ ಮಾನವೀಯವಾಗಿರುವ ಕಾಳಜಿ, ಆಧ್ಯಾತ್ಮದ ಒಲವು, ವೈಯಕ್ತಿಕ ಸಾಧನೆಯ ಹಂಬಲ ಇರುವುದು ಅಗತ್ಯವೆಂದು ಅಧ್ಯಯನಗಳು ಹೇಳಿವೆ. ಹೀಗಾಗಿ ಭಕ್ತಿ ಹಾಗೂ ಅನುಭಾವ ಸಾಹಿತ್ಯಗಳನ್ನು ಪ್ರತ್ಯೇಕವಾಗಿ ನೋಡುವಾಗ ಎಚ್ಚರವನ್ನು ವಹಿಸಬೇಕಾಗುತ್ತದೆ. ಅನುಭಾವದಲ್ಲಿ ಭಕ್ತಿ ಇರಬಹುದಾದರೂ ಭಕ್ತರಾದವರೆಲ್ಲರೂ ಅನುಭಾವಿಗಳು ಎಂದು ಹೇಳುವುದು ತಪ್ಪಾಗುತ್ತದೆ. 'ಅನುಭಾವಿಯು ಮೂಲತಃ ಭಕ್ತನಾಗಿದ್ದರೂ, ಅದನ್ನು ಮೀರುತ್ತಾನೆ.'[೨೨] ಅಧ್ಯಯನದ ಅನುಕೂಲಕ್ಕಾಗಿ ನಾವು ಹೀಗೆ ಲೌಕಿಕ, ಅಲೌಕಿಕ, ಭಕ್ತಿ, ಅನುಭಾವ, ಧಾರ್ಮಿಕ ನೆಲೆಗಟ್ಟಿನಲ್ಲಿ ರಚಿತವಾದ ಸಾಹಿತ್ಯವೆಂದು ವಿಂಗಡಿಸಿಕೊಂಡರೂ ಅವುಗಳು ಮೇಳಗೊಂಡ, ಜೊತೆಜೊತೆಯಾಗಿ ನಿಂತ, ಒಂದಕ್ಕೊಂದು ಆಚೆ ಈಚೆ ತಮ್ಮ ವ್ಯಾಪ್ತಿಯನ್ನು ಹರಡಿದ ಸಂದರ್ಭಗಳು ಎಲ್ಲ ದೇಶ ಕಾಲದ ಸಾಹಿತ್ಯದಲ್ಲಿ ಕಂಡುಬರುವುದು ಸ್ವಾಭಾವಿಕವಾದ ಸಂಗತಿಯಾಗಿದೆ. ಭಕ್ತಿ ಹಾಗೂ ಅನುಭಾವ ಸಾಹಿತ್ಯಗಳು ಕೂಡ ಒಂದಕ್ಕೊಂದು ಪ್ರೇರಕವಾಗಿರುವ, ಒಂದರ ಮೇಲೊಂದು ವ್ಯಾಪಿಸಿರುವ, ಅತಿಕ್ರಮಿಸಿರುವ (overlapping) ಪ್ರಸರಿಸಿರುವ, ಪ್ರಮಾಣ ಹೆಚ್ಚು ಕಡಿಮೆಯಾಗಿರುವ, ಲೌಕಿಕದ ಗಾಳಿ- ಬೆಳಕಲ್ಲಿ ಜೀವಿಸಿರುವ ಅನೇಕ ನಿದರ್ಶನಗಳನ್ನು ನೋಡಬಹುದಾಗಿದೆ. ಅನುಭಾವವು ಅನುಭವದಿಂದ ಹುಟ್ಟುವ ಸಂಗತಿಯಾಗಿರುವುದರಿಂದ ಅನುಭವ ಲೋಕದ ಪ್ರತಿಮೆಗಳಿಂದಲೆ ಅದು ವ್ಯಕ್ತವಾಗಬೇಕು. ತೋರಿಕೆಯ ಭಕ್ತಿ ಹಾಗೂ ನಿಜವಾದ ಆಧ್ಯಾತ್ಮದ ಸಂಗತಿಗಳ ಮಧ್ಯೆ ವ್ಯತ್ಯಾಸ ಗೊತ್ತಾಗಬೇಕು. ಅಂಧಶ್ರದ್ಧೆ ಹಾಗೂ ಅನುಭಾವಗಳ ನಡುವಿನ ಅಂತರ ತಿಳಿಯಬೇಕು.

ಅನುಭಾವದ ಕಡೆಗೆ ತುಡಿಯುವ, ಲೌಕಿಕವನ್ನು ಈಡು ಮಾಡಿಕೊಂಡಿರುವ ವಚನ ಸಾಹಿತ್ಯ, ದಾಸಸಾಹಿತ್ಯ, ತತ್ವಪದ ಮುಂತಾದವುಗಳ ಮೇಲೆ ಬೇಂದ್ರೆಯವರಿಗೆ ಅತೀವ ಪ್ರೀತಿಯಿತ್ತು. ನಿಜವಾದ ಭಕ್ತನಾದವನು ತನ್ನ ಬದುಕನ್ನೆ ಸಾಹಿತ್ಯದ ವಸ್ತುವನ್ನಾಗಿ ಪರಿಗಣಿಸಿ ದಿವ್ಯವಾದ ಕೃತಿಯನ್ನು ಬರೆದುಬಿಡಬಲ್ಲ. ದ್ರಷ್ಟಾರನಾದವನು ಅದಕ್ಕಿಂತ ಹೆಚ್ಚಿನದನ್ನು ಸಾಧಿಸುತ್ತಾನೆ. ಅವನು ಬೋಧಿಸುವ ಕೈವಲ್ಯಬೋಧ ಜನಾಂಗವನ್ನು ಸನ್ಮಾರ್ಗದತ್ತ ಕರೆದೊಯ್ಯುತ್ತದೆ. ಅಲ್ಲಮಪ್ರಭು, ಬಸವಣ್ಣ, ಕಬೀರದಾಸ, ಅರವಿಂದರು, ಕನಕದಾಸ, ರವೀಂದ್ರನಾಥ ಟ್ಯಾಗೋರ್, ಮೆಟರ್‌ಲಿಂಕ್.ಎ.ಇ., ಅಕ್ಕಮಹಾದೇವಿ, ಮೀರಾ, ಪಂಪ, ಜನ್ನ, ರತ್ನಾಕರವರ್ಣಿ, ಲಕ್ಷ್ಮೀಶ,

ಹರಿಹರ, ಕುಮಾರವ್ಯಾಸ, ಸರ್ವಜ್ಞ ಮುಂತಾದ ಕವಿಗಳು ತೋರಿದ ಚಿರಂತನದ ಬೆಳಕು ನಾಡಿಗೆ ದಾರಿದೀಪವಾಗಿದೆಯೆಂದು ಬೇಂದ್ರೆ ನಂಬಿದ್ದರು. 'ತಮ್ಮ ಜೀವನವನ್ನೆ ದಿವ್ಯ ಕೃತಿಯಾಗಿ ಮಾಡಿ ಅದರ ಉಚ್ಛ್ವಾಸದಂತೆ ವಚನಪದಗಳನ್ನು ಹಾಡಿದ ನಮ್ಮ ಶರಣರ, ದಾಸರ ಶಕ್ತಿ ಹೆಚ್ಚಿನದು... ಶರಣರ, ದಾಸರ ಸಾಹಿತ್ಯದಲ್ಲಿ ಶಾಂತಿಯ ಕಾರಂಜಿಯಿಂದ ಸತಿ-ಪತಿ ಭಾವದ ಮಾಧುರ್ಯವಾಗುವಂತೆ ಹೊಮ್ಮುವದು, ಚಿಮ್ಮುವುದು ಭಾವರಸ.[೨೮]

ಈ ನಾಡಿನ ಶರಣರ, ಸಂತರ, ದಾಸರ, ಅರವಿಂದರ, ಪಾಶ್ಚಾತ್ಯ ಅನುಭಾವಿಗಳ ಪ್ರೇರಣೆಗಳು ಬೇಂದ್ರೆಯವರ ಕಾವ್ಯದಲ್ಲಿ ಒಂದು ಆರ್ಷದೃಷ್ಟಿಯನ್ನು ಬೆಳೆಸಲು ನೆರವಾದವು. ಸಾಧನೆಯ ಮಾರ್ಗದಲ್ಲಿ ಮುನ್ನಡೆಯಲು ಸಹಾಯಕಾರಿಯಾದವು. ಅವರ ಕಾವ್ಯ ಆಳ ಹಾಗೂ ವಿಸ್ತಾರಗಳನ್ನು ಪಡೆದುಕೊಂಡಿತು. ಬೇಂದ್ರೆಯವರ 'ಅರಳು-ಮರಳು' ಕೃತಿಗೆ ಮುನ್ನುಡಿ ಬರೆದ ವಿನಾಯಕರು ಭಕ್ತಿಯ ಹುಡುಕಾಟದ ಎಳೆ, ಆರ್ಷದೃಷ್ಟಿ, ಸಾಧನೆಯ ಹಂಬಲ ಬೇಂದ್ರೆ ಕಾವ್ಯದಲ್ಲಿ ಹೆಚ್ಚುತ್ತ ಹೋಯಿತೆಂಬುದನ್ನು ವಿವರಿಸುತ್ತಾರೆ. 'ಇಲ್ಲಿ ಮುಖ್ಯವಾದುದು ಕವಿಯ ಆರ್ಷದೃಷ್ಟಿ. ಹೀಗೆಂದೊಡನೆ ಬೇಂದ್ರೆಯವರನ್ನು ಋಷಿಗಳೆಂದು ನಾನು ಕರೆದೆನೆಂದು ನೂರು ಆಕ್ಷೇಪಗಳು ಏಳಬಹುದು. ಬೇಂದ್ರೆಯವರು ಸಾಧಕರು ನಿಜ. ಅದಕ್ಕಿಂತಲೂ ಹೆಚ್ಚೆಂದು ಅವರೇ ಒಪ್ಪುವುದಿಲ್ಲ. ಆದರೆ ಅವರಲ್ಲಿ ಅಂಬಿಕಾತನಯದತ್ತನೆಂಬ ವರಕವಿ ಗೂಡುಗಟ್ಟಿದ್ದಾನೆ. ಬೇಂದ್ರೆಯವರ ಸಾಧನೆಯಲ್ಲಿ ಸಿದ್ಧವಾದುದೆಲ್ಲ ಉಂಡ, ಕಂಡ ಬದುಕೆಲ್ಲ ಈ ಕವಿಯ ಸ್ಫೂರ್ತವಾಣಿಯಲ್ಲಿ ಕಾವ್ಯವಾಗಿ ಉಕ್ಕಿ ಬರುತ್ತದೆ. ಒಂದು ರೀತಿಯಿಂದ ಅಂಬಿಕಾತನಯದತ್ತನೇ ಬೇಂದ್ರೆಯವರನ್ನು ಸಾಧನೆಯ ಮಾರ್ಗದಲ್ಲಿ ಮುಂದುವರೆಸಿದ್ದಾನೆ. ಇನ್ನೊಂದು ದೃಷ್ಟಿಯಿಂದ ಬೇಂದ್ರೆಯವರೇ ಅಂಬಿಕಾತನಯದತ್ತರ ಸಿದ್ಧಿಗೆ ಸಾಧನಗಳನ್ನು ಒದಗಿಸುತ್ತಿದ್ದಾರೆ. ಬೇಂದ್ರೆಯವರು ಸೂತ್ರಧಾರನಾದ ಬಾಲಕ. ಅಂಬಿಕಾತನಯದತ್ತ ಅಂತರಿಕ್ಷದಲ್ಲಿ ತೂಗಾಡುವ ಗಾಳಿಪಟ.'[೨೯] ಒಬ್ಬರೊಳಗೊಬ್ಬರಿರುವುದು ಈ ಮಾತುಗಳಿಂದ ಸ್ಪಷ್ಟವಾಗುತ್ತದೆ. ನೆಲದ ಮೇಲೆ ನಿಂತಿರುವ ಬೇಂದ್ರೆಯವರಲ್ಲಿ ಆಕಾಶದ ಗಾಳಿಪಟವಾಗಿರುವ ಅಂಬಿಕಾತನಯನು ಇರುವ ಸೂಚನೆ ಅವರ ಕಾವ್ಯದಲ್ಲಿ ಸಿಕ್ಕುತ್ತದೆ. ಹಲವು ಪ್ರಭಾವಗಳು ಅವರನ್ನು ಆ ದಿಕ್ಕಿನಲ್ಲಿ ಮುನ್ನಡೆಸಿದವು. ಜೀವನದೃಷ್ಟಿ ವಿಕಾಸವಾಗುತ್ತ ಹೋಯಿತು. ಬೇಂದ್ರೆಯೆಂಬ ಲೌಕಿಕ ಮಾಸ್ತರನಲ್ಲಿ ಕವಿ ಅಂಬಿಕಾತನಯನಿರುವನು ಎಂದು ಅವರೇ ಹೇಳಿಕೊಂಡದ್ದರಲ್ಲಿ ಲೌಕಿಕ-ಅಲೌಕಿಕಗಳ ಸಾಮರಸ್ಯವನ್ನು ಸಹ ಗುರುತಿಸಬಹುದಾಗಿದೆ.

೩.೧೦ ವಚನ ಚಳುವಳಿ :

ಶರಣರ ಚಳುವಳಿಯನ್ನು, ವಚನಕ್ರಾಂತಿಯನ್ನು, ಅಲ್ಲಮ -ಬಸವಣ್ಣ-ಅಕ್ಕಮಹಾದೇವಿ ಮುಂತಾದ ಸಾಧಕರ ಜೀವನವನ್ನು ಕರ್ನಾಟಕಕ್ಕೆ ಸಿಕ್ಕ ಪುಣ್ಯದ ಗಂಟು ಎಂದು ಬೇಂದ್ರೆಯವರು ಭಾಷಿಸಿದ್ದರು. 'ಕರ್ನಾಟಕದ ಕಲ್ಯಾಣ, ಭಾರತದ ಮಂಗಲ, ಭೂಮಂಡಲದ ಶುಭ, ಇವು ಒಮ್ಮುಖವಾದಾವೇ? ಕರ್ನಾಟಕದ ಲೆಕ್ಕಕ್ಕೆ ಪುಣ್ಯದ

ಗಂಟಿದೆ. ಅದನ್ನು ಬಳಸುವ ಬಂಟರು ಧರ್ಮದ ನೆಂಟರಾಗಬೇಕು. ಕ್ರಾಂತಿಯ ಕುಂಟು ನೆವದಿಂದ ಅದು ಅಣಕದ ಪಾತ್ರವಾಗಬಾರದು. ಇಂಥ ಎಚ್ಚರಿಕೆ ಕರ್ನಾಟಕದ ಅಷ್ಟಾಂಗ ಸಿದ್ಧಿ-ಸಂಸ್ಕೃತಿ ಎಚ್ಚರದಿಂದ ಹೊರಬರಬೇಕಾಗಿದೆ. ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಜೈನ, ವೀರಶೈವ, ಕೌಟುಂಬಿಕ, ರಾಜಕೀಯ, ಸಾಮಾಜಿಕ ಒಂದು ಹದದ ಪಾಕಕ್ಕೆ ಬರಬೇಕು. ಪಾಂಡಿಚೇರಿಯ ಶ್ರೀ ಮಾತೆಯವರು ಜಗದುದ್ಧಾರದ ಮುಹೂರ್ತ ಬಂದಿದೆ ಎಂದು ಕಲ್ಲಿನ ಕೋಳಿ ಕೂಗಿಸಿದ್ದಾರೆ. ಉದಯರಾಗಕ್ಕೆ, ಬೆಳಗಿನ ಭೂಪಾಳಿಗೆ, ಸೋದರ ದೇವತೆಗಳು ಹೊಸ ಬಾಂಧವ್ಯದ ಬಿಗುವಿನಲ್ಲಿ ಏಳಬೇಕು.'[೮೨]

ನಾಡು, ದೇಶ, ಪ್ರಪಂಚ ಸಾಮರಸ್ಯದಿಂದ ಬೆಳಗಿಗೆ ಕಣ್ಣು ತೆರೆಯಬೇಕು ಎಂದು ಬೇಂದ್ರೆಯವರು ಹೇಳುವಲ್ಲಿ ಪ್ರಪಂಚದಾದ್ಯಂತ ಅನುಭಾವಿಗಳು ತೋರಿಸಿಕೊಟ್ಟ ಮಾರ್ಗದಲ್ಲಿ ಮುನ್ನಡೆಯಬೇಕೆಂಬ ಆಶಯವಿದೆ. ಅಹಂಕಾರದಿಂದ ಅರ್ಧಜಗತ್ತು ಹಾಳಾಗಿದೆ. ವಿನಯವಿಲ್ಲದೆ ಮನುಷ್ಯ ಕೇಡು ತಂದುಕೊಟ್ಟಿದ್ದಾನೆ. ಒಂದು ರೀತಿಯಲ್ಲಿ ವಿಶ್ವ ಭ್ರಾತೃತ್ವ ಸಾಧಿಸುವ ಹಂಬಲವಿದೆ. ರೂಪ ರೂಪಗಳನ್ನು ದಾಟುತ್ತ, ನಾಮಕೋಟಿಗಳನು ಮೀಟುತ್ತ ದಿಗ್‌ದಿಗಂತವಾಗಿ ಚೈತನ್ಯ ಸ್ವರೂಪನಲ್ಲಿ ಬೆರೆಯುವ; ಶಾಶ್ವತವಲ್ಲದ ಮನೆಯನ್ನು ಕಟ್ಟದೆ ಇರುವ; ಅನುಭಾವದ 'ಅನಿಕೇತನ'ವನ್ನು ಕಟ್ಟುವ ಕುವೆಂಪು ಅವರ ವಿಚಾರಧಾರೆಯಂತೆ ಬೇಂದ್ರೆಯವರು ಕೂಡ ಜಗತ್ತಿನ ಏಳಿಗೆ ಕರ್ನಾಟಕದಿಂದಲೆ ಎನ್ನುವ ಮಾತನ್ನು ಹೇಳಿದರು. ಬುದ್ಧ, ಬಸವ, ಗಾಂಧಿಯವರು ಮಾತ್ರ ಜಗತ್ತನ್ನು ಗೆಲ್ಲಬಲ್ಲ ಶಕ್ತಿ ಹೊಂದಿರುವ ವ್ಯಕ್ತಿಗಳೆಂದು ಬೇಂದ್ರೆಯವರು ನಂಬುತ್ತಾರೆ. ಭಕ್ತಿ ಪರಂಪರೆ ಅಷ್ಟು ಸತ್ವಶಾಲಿಯಾದದ್ದೆಂದು ಅದರ ಅರ್ಥವಾಗಿದೆ.

ಭಕ್ತಕವಿಯಾದವನಿಗೆ ತಾನು ನಂಬಿದ ಮತ, ಧರ್ಮವು ಮುಖ್ಯವಾಗದೆ ಮನುಷ್ಯನ ವ್ಯಕ್ತಿ ವಿಕಸನದ ಬಗೆಗೆ ಆತ ಹೊಂದುವ ನಿಲುವು ಮುಖ್ಯವಾಗುತ್ತದೆ. ತನ್ನ ವೈಯಕ್ತಿಕ ಸಾಧನೆಯೂ ಅವನಿಗೆ ಮುಖ್ಯವಾಗುತ್ತದೆ. ಇದನ್ನು ಡಾ. ಜಿ.ಎಸ್.ಶಿವರುದ್ರಪ್ಪನವರು ಸೂಕ್ತವಾಗಿ ವಿಶ್ಲೇಷಿಸಿದ್ದಾರೆ: 'ಭಕ್ತಿ ಸಾಹಿತ್ಯ' ಮತ್ತು 'ಅನುಭಾವ ಸಾಹಿತ್ಯ'ಗಳಲ್ಲಿ ಅವನು ಬರೆಯುವವನಿಗೆ ಕೇವಲ ಧರ್ಮಶ್ರದ್ಧೆ ಮಾತ್ರವಲ್ಲದೆ ಒಂದು ಬಗೆಯ ಆಧ್ಯಾತ್ಮಿಕ ನಿಲುವೂ ಮತ್ತು ಅದರೊಂದಿಗೆ ವೈಯಕ್ತಿಕವಾದ ಸಾಧನೆಯೂ ಮುಖ್ಯವಾಗುತ್ತದೆ... ಇಂಥ ನೆಲೆಯಿಂದ ಬರೆದವರು ವಚನಕಾರರು, ಹರಿದಾಸರು, ಹರಿಹರ, ಕುಮಾರವ್ಯಾಸ, ಲಕ್ಷ್ಮೀಶಾದಿಗಳು. 'ಅನುಭಾವ ಸಾಹಿತ್ಯ' ಎನ್ನುವುದು ಭಕ್ತಿ ಸಾಹಿತ್ಯದೊಳಗಿನ ಒಂದು ಪ್ರಭೇದ ಎನ್ನಬಹುದು. 'ಅನುಭಾವ' ಎನ್ನುವುದು ಒಂದು ವಿಶೇಷವಾದ ಮಾನಸಿಕ ನಿಲುವು. ಆ ನಿಲುವಿನಿಂದ ಅನುಭಾವಿಯು ಕಂಡ 'ಕಾಣ್ಕೆಗಳು' ಅನುಭಾವ ಸಾಹಿತ್ಯದಲ್ಲಿ ಪ್ರಕಟವಾಗುತ್ತವೆ. ಅನುಭಾವಿಯು ಮೂಲತಃ ಭಕ್ತನಾಗಿದ್ದರೂ, ಅದನ್ನು ಮೀರುತ್ತಾನೆ. ಆದರೆ 'ಭಕ್ತ'ರಾದವರೆಲ್ಲರೂ ಅನುಭಾವದ ನೆಲೆಗೆ ಏರಿದವರಾಗಿರುತ್ತಾರೆಂದು ಹೇಳಲುಬಾರದು.'[೮೩] ಭಕ್ತಿಯ ನೆಲೆಯಿಂದ ಭಗವಂತನ ಸ್ವರೂಪವನ್ನು ಅರಿತುಕೊಳ್ಳಲು ಹೊರಟ ಈ ಅನುಭಾವದ ಮಾರ್ಗದಲ್ಲಿ ಬೇಂದ್ರೆಯವರು ಕೂಡ ಒಬ್ಬ ಸಹಯಾತ್ರಿಕರಾಗಿದ್ದಾರೆ. ತಾವು ಕಂಡ

ದೈವಿಕ ಅನುಭೂತಿಯಿಂದ 'ಕಾಣ್ಕೆ'ಗಳನ್ನು ಕೊಡಲು ಸಫಲರಾಗಿದ್ದಾರೆ. ಶರಣರು ಕಾಯಕದೊಳಗೆ ಕೈಲಾಸ ಕಂಡಂತೆ, ಸಂಸಾರದಲ್ಲಿದ್ದುಕೊಂಡು ಶಿವಯೋಗವನ್ನು ಪಡೆದುಕೊಂಡಂತೆ ಬೇಂದ್ರೆಯವರು ಕೂಡ ಲೌಕಿಕದ ಸಂತೆಯೊಳಗೆ ಸಂತನ ಭಾವ ಪ್ರಕಟಿಸುವ ಆಸ್ಥೆ ಪ್ರಕಟಿಸುತ್ತಾರೆ. ಬದುಕಿನ ಪ್ರೀತಿಯನ್ನು ಪ್ರಕಟಿಸುತ್ತಲೆ ಆಧ್ಯಾತ್ಮ ಸಾಧನೆಯ ಮೆಟ್ಟಿಲುಗಳನ್ನು ಹತ್ತಿದರು. ಈ ಸೃಷ್ಟಿಯ ಪ್ರೇಮ-ಕಾಮ, ಒಲವು-ವಿರಹಗಳ ಅನುಭವದಲ್ಲಿ ತಮ್ಮ ಅರ್ಥಗಳನ್ನು ಹೊಂದಿಸಿದರು.

೩.೧೧ ಬಸವಣ್ಣ :

ನಿಜವಿಲ್ಲದವನ ಭಕ್ತಿ ಚಿತ್ರದ ಕಬ್ಬು ತಿಂದ ರೀತಿ ರುಚಿಯಿಲ್ಲದ್ದೆಂದು ಹೇಳುವ ಬಸವಣ್ಣ ಲೌಕಿಕ - ಅಲೌಕಿಕಗಳೆರಡನ್ನೂ ಅದ್ಭುತವಾಗಿ ತನ್ನ ವಚನಗಳಲ್ಲಿ ಬೆರೆಸಿದ ಕವಿ-ದಾರ್ಶನಿಕ. ಬಸವಣ್ಣನಿಗೆ ಈ ಲೋಕವೂ ಬೇಕು. ಆ ಲೋಕವೂ ಬೇಕು.

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ
ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ![೨]

ಎಂದು ಹೇಳಿ ಇಹದಲ್ಲಿ 'ಸದ್ವಿನಿಯ' ಸಾಧಿಸಿದವರು ಪರದಲ್ಲಿ ಸದಾಶಿವನ ಒಲುಮೆಯನ್ನು ಸಾಧಿಸಿಯೇ ಸಾಧಿಸುತ್ತಾರೆಂದು ಅವನು ಹೇಳುತ್ತಾನೆ. ನಮ್ಮ ನಮ್ಮ ತನು-ಮನಗಳನ್ನು ನಾವು ಸಂತೈಸಿಕೊಂಡಾಗ ಬೇರೆ ಲೋಕದಲ್ಲಿ ಡೊಂಕು ಇರುವುದಿಲ್ಲ. ಬಸವಣ್ಣನಲ್ಲಿ ಲೌಕಿಕ ಮತ್ತು ಅಲೌಕಿಕ ಇವು ಸಾಹಚರ್ಯದಿಂದ ಒಂದನ್ನೊಂದು ತಾಗುತ್ತವೆ.

ಸಂಜೆಯ ಮಂಜಿನ ಕಪ್ಪು
ಅಂಜಿದಡೆ ಶಂಕೆ-ತದ್ರೂಪವಾಗಿ ನಿಂದಿತ್ತು
ತನ್ನ ಭಾವದ ನಟನೆ ನಡೆವನ್ನಕ್ಕರ ನಡೆಯಿತ್ತು
ಅದು ನಿಂದಲ್ಲಿಯೆ ನಿಂದಿತ್ತು
ಅದರಂತುವನರಿದಡೆ ಹಿಂದೆ ಹುಸಿ
ಮುಂದೆ ಕೂಡಲಸಂಗಮದೇವರ ನಿಲವು ತಾನ್[೩]

ಭಯಾನಕವೆನಿಸುವ ಕಾಳರಾತ್ರಿಯನ್ನು ಧೈರ್ಯದಿಂದ ಎದುರುಗೊಂಡರೆ ಅನುಭಾವ ತೆರೆದುಕೊಳ್ಳುತ್ತದೆ. ಅಲೌಕಿಕವೆನ್ನುವುದು ಲೌಕಿಕ ಜೀವನದ ಅಂಚಿಗೆ ತಾಗಿಕೊಂಡೆ ಇರುವುದನ್ನು ಬಸವಣ್ಣ ಹೇಳುತ್ತಾನೆ.

'ಈ ವಚನದ ಭಾಷೆಯಲ್ಲಿ ಎಲ್ಲಿಯೂ ಗೊಂದಲಕ್ಕೆ ಎಡೆಯೇ ಇಲ್ಲ. ಆತ್ಮದ ಅರಿವು ದೇಹದ ಮರೆವು ಕೂಡಿಕೊಂಡು 'ಸಂಜೆಯ ಮಂಜಿನ ಕಪ್ಪ'ನ್ನು ಹುಟ್ಟಿಸುತ್ತದೆ. ಈ ಕತ್ತಲೆಯಲ್ಲಿ ಅಂಜಿದರೆ ಸಂಶಯ ತದ್ರೂಪವಾಗಿ

ಮನುಷ್ಯ ದೇಹವನ್ನು ನಿರ್ಮಿಸುತ್ತದೆ. ಆಯುಷ್ಯದ ಕೊನೆಯವರೆಗೆ ಇದೇ ಭಾವದ ನಟನೆ ನಡೆದಿರುತ್ತದೆ. ಈ ಪ್ರಕ್ರಿಯೆಯ ರಹಸ್ಯವನ್ನು ಭೇದಿಸಿದರೆ ಕೊನೆಯಲ್ಲಿ ಕೂಡಲಸಂಗಮದೇವರ ನಿಲವು ಕಂಡು ಹಿಂದೆ ಅನುಭವಿಸಿದ್ದೆಲ್ಲ ಹುಸಿಯಾಗುತ್ತದೆ.'[೯೪] 'ಅಗಮ್ಯ'ವಾಗಿರುವ 'ಅಗೋಚರ'ವಾಗಿರುವ 'ಅಪ್ರತಿಮ' ಕೂಡಲ ಸಂಗಮದೇವರ ನಿಲುವು ಬಸವಣ್ಣನ ಪಾಲಿಗೆ ಇಡೀ ಜಗತ್ತನ್ನು ತುಂಬಿಕೊಂಡಿರುವಂತಹದು, ಪಾತಾಳದಿಂದ ಅತ್ತತ್ತ ಇರುವ, ಬ್ರಹ್ಮಾಂಡದಿಂದ ಅತ್ತತ್ತ ಇರುವ ನಿಲುವು 'ಜಗದಗಲ'ವಾಗಿ ನಮ್ಮ ಮಿಗೆಗೆ ಸಿಗಲಾರದಂತಹದು. ಆ ಅಗೋಚರ ಚೈತನ್ಯ ಸಜ್ಜನಿಕೆಯಲ್ಲಿ, ಸದ್ವಿನಿಯದಲ್ಲಿ ಕಾಣುವಂತಹದು.

ಜಗದಗಲ, ಮುಗಿಲಗಲ, ಮಿಗೆಯಗಲ ನಿಮ್ಮಗಲ;
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ;
ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ
ಕೂಡಲಸಂಗಯ್ಯಾ
ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯಾ![೯೫]

ಆ ಚೈತನ್ಯವನ್ನು ಕಾಣಲು ಅಳಿವಿರುವ ಸ್ಥಾವರಕ್ಕೆ ಹೋಗಬೇಕಾಗಿಲ್ಲ. ಮನುಷ್ಯನ ದೇಹದಲ್ಲಿರುವ ಶಿವಾಲಯವೇ ಸಾಕು. ಮನೆಯೊಳಗೆ ಮನೆಯೊಡೆಯನಿದ್ದಾಗ ಮನೆ ಶುದ್ಧವಾಗಿರುತ್ತದೆ. ಶುಭ್ರವಾಗಿರುತ್ತದೆ. ಹೊಸ್ತಿಲಲ್ಲಿ, ಬಾಗಿಲಲ್ಲಿ ಕಸಹುಟ್ಟಿ, ರೇಜಿಗೆ ತುಂಬಿರುವುದಿಲ್ಲ. ಆದರೆ ಯಾವಾಗ ಮನುಷ್ಯನ ಮನಸ್ಸಿನಲ್ಲಿ ಹಸುರಿನ ವಿಷಯಾಸಕ್ತಿಗಳು ತುಂಬಿ, ಪರಸ್ತ್ರೀ-ಪರಧನವೆಂಬ ದೆವ್ವಗಳು ಮನದಲ್ಲಿ ಹುಟ್ಟಿ, ತನುವಿನೊಳಗೆ ಬರಿ ಹುಸಿ ತುಂಬಿ ಕಾಡಲು ಪ್ರಾರಂಭಿಸುತ್ತವೆಯೋ ಆಗ ಭಕ್ತನ ಆ ಮನೆಯಲ್ಲಿ ದೇವನೆಂಬ ಮನೆಯೊಡೆಯನಿಲ್ಲದೆ ಹೊರಟು ಹೋಗುತ್ತಾನೆ. ಹಾಗಾಗಿಯೇ ಭಕ್ತನಾದವನು ಹರಿಯುವ ಹಾವಿಗೆ ಅಂಜುತ್ತ, ಉರಿವ ನಾಲಿಗೆಗೆ ಹೆದರುತ್ತ, ಸುರಗಿಯ ಮೊನೆಗೆ ಅಳುಕುತ್ತ ನಡೆಯಬೇಕೆಂದು ಬಸವಣ್ಣ ಬಯಸುತ್ತಾನೆ. ಕೂಡಲಸಂಗಮದೇವನ ಗೆಳೆತನ ಮಾಡಿದ ಮೇಲೆ ಘನವಾದ ತಮಂಧ ಪುಟ್ಟ ಜ್ಯೋತಿಗೆ ಕರಗಿ ಹೋಗುತ್ತದೆ. ಕಿರಿದಾದ ವಜ್ರಕ್ಕೆ ಘನವಾದ ಗಿರಿ ಪುಡಿಪುಡಿಯಾಗುತ್ತದೆ. ಅಂಕುಶಕ್ಕೆ ಆನೆ ಕೂಡ ಹೆದರುತ್ತದೆ. ಬಸವಣ್ಣ ಕಟ್ಟಬೇಕೆನ್ನುವುದು ಕಲ್ಯಾಣವನ್ನೇ ಹೊರತು ಅರಮನೆಯನ್ನಲ್ಲ. ಅನುಭವಮಂಟಪವೆ ಅದಕ್ಕೆ ಅಸ್ತಿಭಾರ ಹಾಕಬೇಕು. ಅದಕ್ಕೆಂದೆ ಬಸವಣ್ಣ ಈ ಲೋಕದೊಳಗಿದ್ದುಕೊಂಡೆ ಆ ಲೋಕವನ್ನೂ ಕಂಡವನು. 'ಮಿಥ್ಯೆ'ಯನ್ನು ದೂರ ಮಾಡಿ 'ಆಚಾರ'ಕ್ಕೆ ಅರಸನಾದಾಗ ಸ್ವರ್ಗ ಇಲ್ಲಿಯೇ ನಿರ್ಮಾಣಗೊಳ್ಳುತ್ತದೆಯೆಂದು ನಂಬಿದವನು. ಬಸವಣ್ಣನ 'ಭಕ್ತಿಯೆಂದರೆ ತತ್ವವೂ ಹೌದು, ಪ್ರೀತಿಯೂ ಹೌದು. ಬಸವಣ್ಣನವರ ಭಕ್ತಿಯಿಂದ ಅಲ್ಲಮನೂ ಸೋಲಬೇಕಾಯಿತು.'[೯೬] ಅಲ್ಲಮನದು 'ಪರ'ದಲ್ಲಿ ನಂಬಿಕೆಯಿಟ್ಟು ಅದಕ್ಕಾಗಿಯೇ ತುಡಿಯುವ ಸಂಪೂರ್ಣ ಅನುಭಾವವಾದರೆ ಬಸವಣ್ಣನದು ಸಜ್ಜನರ ಸಂಗದಲ್ಲಿ ಭಕ್ತಿಯ ಸಂಸಾರ ಕಟ್ಟಿ 'ಪರ'ಕ್ಕೆ 'ಇಹ'ದ ಮೆಟ್ಟಿಲು ಜೋಡಿಸುವುದು.

ಭಕ್ತಕವಿಗಳ ಸಾಹಿತ್ಯ ಹಿರಿದು; ಸತ್ವ ಹಿರಿದು, ಅವರ ಬದುಕಿನ ಅನುಭವವು ಇತಿಹಾಸವಾಗುತ್ತ ಹೋಗುವುದು. ಅಲ್ಲಮನ, ಬಸವಣ್ಣನ ವಚನಗಳಿಂದ ಬೇಂದ್ರೆಯವರು ಬಹಳಷ್ಟು ಪ್ರಭಾವಿತರಾಗಿದ್ದರು. ಅಲ್ಲಿಯ ಭಕ್ತಿ-ಅನುಭಾವದಿಂದ ಪ್ರೇರಣೆಗೊಂಡಿದ್ದರು. 'ಬಸವನ ವಚನಗಳೇ ಆಗಲಿ, ಮಹಾದೇವಿಯ ವಚನಗಳೇ ಆಗಲಿ, ಪ್ರಭುವಿನ ವಚನಗಳೇ ಆಗಲಿ ಅವುಗಳಲ್ಲಿ ಮಹತ್ತರವಾದ ಪ್ರಾಣಶಕ್ತಿಯು ಸ್ಪಂದಿಸುವುದು. ಅವರ ಜೀವನವೇ ಬೇರೆ ಕವಿಗಳಿಗೆ ಕಾವ್ಯವಸ್ತುವಾಯಿತು. ಸಾಹಿತ್ಯಕವಿಗಳಿಗೆ ಆ ವರಜೀವನವಿಲ್ಲ. ಶೂನ್ಯ ಸಂಪಾದನೆಗಳಲ್ಲಿ ಮೋಡದಂತೆ ಗುಡುಗು ಹಾಕುವ, ಮಿಂಚಿನಂತೆ ಸೆಳೆಯುವ, ಸಿಡಿಲಿನಂತೆರಗುವ, ಸುರಿಮಳೆಯಂತೆ ಸಂತೈಸುವ ಆ ಪ್ರಭುವಿನ ವಾಣಿಯನ್ನು ಯಾರು ಮರೆಯಬಹುದು? 'ದುಂಧುಬಿಗಭೀರ ನಿನದ'ನಾದ ಪಂಪನ ಸೊಲ್ಲೂ ಬನವಾಸೆಯ ಪದ್ಯಗಳಲ್ಲಿಯೂ ಆದಿಪುರಾಣದ ಪುಷ್ಪಾಪಚಯ ಪ್ರಸಂಗದಲ್ಲಿಯೂ ಮೂಡಿ ಮುಳುಗುವುದು, ಮುಳುಗಿ ಮೊಳಗುವುದು... ಬಸವನ ವಚನಗಳಲ್ಲಿ ಬಸವನ ಭಕ್ತಿ, ಜೀವನದ ಸ್ಪಂದನೆಯ ಛಂದೋಗತಿಯೇ ಅನುಭವಕ್ಕೆ ಬರುವುದು. ಆ ಸರಸಸಜ್ಜನಿಕೆ, ಆ ಅನುಕಂಪಾಮೃದುಹೃದಯ, ವಿನಯವ ತೊರೆಯದ ಅಭಯ. ಜೀವದುಸಿರೆ ಸಾಹಿತ್ಯದ ಹೆಸರಿನಲ್ಲಿ ಹೃದಯಂಗಮವಾಗುವುದು.'[೯೭] ಬೇಂದ್ರೆಯವರ ಈ ಮಾತುಗಳಲ್ಲಿ ಕನ್ನಡದ ಭಕ್ತಿಕಾವ್ಯ ಪರಂಪರೆಗೆ ಅವರು ಮಾರುಹೋದ ಸಂಗತಿ ಸ್ಪಷ್ಟವಾಗುತ್ತದೆ. ಕನ್ನಡದ ಋಷಿಕವಿಗಳ, ದಾರ್ಶನಿಕ ಕವಿಗಳ ಅನುಭವವನ್ನು, ಅನುಭಾವವನ್ನು ಅವರು ವರ್ಣಿಸುವಾಗ ಸುರಿಮಳೆ, ಮಿಂಚು, ಬೆಳಕು, ನಾದ, ಹೂವು, ದುಂಬಿ ಮುಂತಾದ ನಿಸರ್ಗ ರೂಪಕಗಳನ್ನು ಬಳಸುವುದನ್ನು ಗಮನಿಸುವ ಅಗತ್ಯವಿದೆ. ಅಂದರೆ ಪ್ರಕೃತಿಯನ್ನು ಬಣ್ಣಿಸುವ, ಪ್ರಕೃತಿಯನ್ನು ತೆರೆದಿಡುವ ಕಾವ್ಯದಲ್ಲಿ ಭಕ್ತಿ-ಅನುಭೂತಿಯೆನ್ನುವುದು ಸಹಜವಾಗಿ ಮನೆ ಮಾಡಿರುತ್ತದೆ. ರೂಪಕ, ಉಪಮೆ, ಹೋಲಿಕೆ, ಗೂಢಾರ್ಥಗಳ ಮೂಲಕ ಅದು ಅಭಿವ್ಯಕ್ತಗೊಂಡಿರಬಹುದು. ನಿಸರ್ಗವೂ ಕೂಡ ಒಂದು ವಾಹಕವಾಗಿ ಕೆಲಸ ಮಾಡುತ್ತದೆ.

ತೂಕದಿಂದ ಕಡೆಯದಿದ್ದರೆ ಬೆಣ್ಣೆ ಕೈಗೆ ಬರುವದಿಲ್ಲವೆಂದು ಬೇಂದ್ರೆ ಹೇಳುತ್ತಾರೆ. ಬೆಣ್ಣೆ ತೆಗೆಯುವ ಕ್ರಮ ಗೊತ್ತಿಲ್ಲದಿದ್ದರೆ ಮೊಸರಿನಲ್ಲಿಯೆ ಅದು ಕಲಸಿ ಹೋಗುತ್ತದೆ. ಈ ಪ್ರಪಂಚದೊಡನೆ ಕೂಡಿಯೆ ಇರುವ ಅಲೌಕಿಕದ ಅನುಭವ ಅದನ್ನು ತಿಳಿಯುವ ಕ್ರಮದಲ್ಲಿ ಅಡಗಿದೆ. ಬಸವಣ್ಣ ಅದನ್ನು ತಿಳಿದಿದ್ದರಿಂದಲೆ, ಶರಣರು ತಮ್ಮ ಕಾಯಕದೊಡನೆ ಕೈಲಾಸದ ಸಂಬಂಧವನ್ನು ಇರಿಸಿಕೊಂಡಿದ್ದರಿಂದಲೆ ಇಹ-ಪರವನ್ನು ತೂಗಲು ಸಾಧ್ಯವಾಯಿತು. ನದಿಯೊಳಗೆ ನದಿ ಬೆರೆತಂತೆ, ಹಾಲಿನೊಳಗೆ ಹಾಲು ಬೆರೆತಂತೆ, ನಿತ್ಯದ ಬದುಕಿನೊಳಗೆ ಪಾರಮಾರ್ಥಿಕದ ದಾರಿ ಎಂದು ಬಸವಣ್ಣ ತಿಳಿದಿದ್ದನು. ಸಂಸಾರದ ಕಷ್ಟಗಳನ್ನು ತೂಗಿಸುತ್ತ ಚೈತನ್ಯ ಸ್ವರೂಪನು ಮಲಗಿರುವ ತೊಟ್ಟಿಲನ್ನು ತೂಗಬೇಕು ಎಂದನು.

ಬಯಲ ರೂಪ ಮಾಡಬಲ್ಲಾತನೆ ಶರಣನು;
ಆ ರೂಪ ಬಯಲ ಮಾಡಬಲ್ಲಾತನೆ ಲಿಂಗಾನುಭಾವಿ

ಬಯಲ ರೂಪ ಮಾಡಲರಿಯದಿದ್ದರೆ ಎಂತು ಶರಣನೆಂಬೆ?
ಆ ರೂಪ ಬಯಲ ಮಾಡಲರಿಯದಿದ್ದರೆ ಎಂತು ಲಿಂಗಾನುಭಾವಿಯೆಂಬೆ?
ಈ ಉಭಯವೊಂದಾದರೆ ನಿಮ್ಮಲ್ಲಿ ತೆರಹುಂಟೆ,
ಕೂಡಲಸಂಗಮದೇವಾ?[೯೮]

ಬಯಲನ್ನು ರೂಪವನ್ನಾಗಿ, ರೂಪವಿದ್ದುದನ್ನು ಬಯಲನ್ನಾಗಿ ಪರಿವರ್ತಿಸುವ ಕಲೆ-ಸತ್ಯಗಳು, ವಿನಯ-ಸಜ್ಜನಿಕೆಗಳು ಗೊತ್ತಿರುವವನೆ ಕವಿಯಾಗಲು, ಅನುಭಾವಿಯಾಗಲು, ವರಕವಿ-ದಾರ್ಶನಿಕನಾಗಲು ಸಾಧ್ಯವೆಂಬುದು ಇಲ್ಲಿ ಹುದುಗಿರುವ ಅರ್ಥವಾಗಿದೆ.

೩.೧೨ ಅಲ್ಲಮಪ್ರಭು :

ಅಲ್ಲಮಪ್ರಭುದೇವರೆಂದರೆ ಭಕ್ತ ಹೃದಯದ ಒಕ್ಕಲಿಗ' ನಿದ್ದಂತೆ. ಯಾವುದೋ ಮಾಮರಕ್ಕೆ ಎಲ್ಲಿಂದಲೋ ಬರುವ ಕೋಗಿಲೆಯು ತಂದುಕೊಡುವ ಸಂಬಂಧ ಮನುಷ್ಯನನ್ನು ಚೈತನ್ಯದ ಸಂಬಂಧಕ್ಕೆ ಜೋಡಿಸುವ ಪ್ರತಿಮೆಯಾಗಿ ಅಲ್ಲಮಪ್ರಭುವಿನಲ್ಲಿ ಕೆಲಸ ಮಾಡುತ್ತದೆ.

'ಎತ್ತಣ ಮಾಮರ ಎತ್ತಣ ಕೋಗಿಲೆ? ಎತ್ತಣಿಂದೆತ್ತ ಸಂಬಂಧವಯ್ಯ?
ಬೆಟ್ಟದ ನೆಲ್ಲಿಕಾಯಿ, ಸಮುದ್ರದೊಳಗಣ ಉಪ್ಪು,
ಎತ್ತಣಿಂದೆತ್ತ ಸಂಬಂಧವಯ್ಯ? ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯ?'[೯೯]

ಕೊಟ್ಟ ಕುದುರೆಯನ್ನು ಏರದೆ ಮತ್ತೊಂದು ಕುದುರೆಯ ಬಯಸಬಾರದು ಎಂದು ಹೇಳಿದ ಪ್ರಭು ಲೌಕಿಕದ ಪ್ರೀತಿಯನ್ನು ಮೊದಮೊದಲು ತೋರಿಸಿದರೂ ನಂತರ ಪ್ರಕಾಶ ಶರೀರಧಾರಿಯಾಗಿ ನಿರ್ಮೋಹಿಯಾದವನು. ಅಲ್ಲಮಪ್ರಭು ಮನೆ ಬಯಲುಗಳೆರಡನ್ನೂ ನೆಚ್ಚಿ ಕೂಡುವುದಿಲ್ಲ. ಆತ ಬಯಲಲ್ಲಿ ಬಯಲಾಗಿಯೆ ಇರಬಯಸುವವನು. ಆತನ ಧ್ಯಾನ ಏನಿದ್ದರೂ ಲೋಕವನ್ನು ವ್ಯಾಪಿಸಿರುವ ಸಕಲ ವಿಸ್ತಾರದ ರೂಪಿನತ್ತ ಎಂಬುದನ್ನು ಗಮನಿಸಬೇಕು. ಅಖಂಡ ಜ್ಯೋತಿಯ ಪ್ರಕಾಶಕ್ಕೆ ತೆರೆದುಕೊಂಡಿರುವ ಬಯಲಲ್ಲಿ ಕಸ್ತೂರಿಯ ಮೃಗ ಬಂದು ಸುಳಿದು ಹೋಯಿತು ಎನ್ನುವಲ್ಲಿ ಅಲ್ಲಮಪ್ರಭುವಿಗೆ ದೈವಿಕ ಅನುಭೂತಿ ದೊರೆತಿರುವುದರ ಸೂಚನೆಯಿದೆ. ಅಲ್ಲಮಪ್ರಭುವಿನಲ್ಲಿ ಬರುವ ನಿಸರ್ಗದ ಪ್ರತಿಮೆಗಳು ಅನುಭಾವದ ಅಭಿವ್ಯಕ್ತಿಗಾಗಿ ಸಮರ್ಥವಾಗಿ ದುಡಿಯುತ್ತವೆ. ಅಲ್ಲಿ ನಿಸರ್ಗದ ಲೌಕಿಕ ಸಂಗತಿಗಳನ್ನು ಎಣಿಸಲುಬಾರದಂತೆ ದಟ್ಟ ಅನುಭಾವ ತುಂಬಿಕೊಂಡಿದೆ.

ಗಗನವೇ ಗುಂಡಿಗೆ, ಆಕಾಶವೇ ಅಗ್ಘವಣಿ!
ಚಂದ್ರಸೂರ್ಯರಿಬ್ಬರು ಪುಷ್ಪನೋಡಾ!

ಬ್ರಹ್ಮ ಧೂಪ, ವಿಷ್ಣು ಧೂಪ,

ರುದ್ರನೋಗರ-ಸಯಧಾನ ನೋಡಾ!

ಗುಹೇಶ್ವರ ಲಿಂಗಕ್ಕೆ ಪೂಜೆ ನೋಡಾ![೧೦೦]

ಗುಹೇಶ್ವರನ ಮಹತ್ತ ಪೂಜೆಯಲ್ಲಿ ಇಡೀ ನಿಸರ್ಗವೇ ಆರಾಧನೆಯ ಸಲಕರಣೆಯಾಗಿ ಪಾಲ್ಗೊಳ್ಳುತ್ತದೆ. ಸೂರ್ಯ-ಚಂದ್ರರಿಬ್ಬರೂ, ಪುಷ್ಪಗಳಾಗಿ ಅರ್ಪಿತಗೊಳ್ಳುತ್ತಾರೆ.

'....ಜಲವೇ ಪದಶಿಲೆ, ಪೃಥ್ವಿಯೇ ಪಿಂಡಿಗೆ, ಆಕಾಶವೇ ಲಿಂಗ, ಸಪ್ತಸಮುದ್ರವೆ ಪಂಚಾಮೃತ, ಮೇಘವೇ ಅಗ್ಘವಣಿಯ ಬಿಂದಿಗೆ

ಮಳೆಗಾಲವೇ ಮಜ್ಜನ, ಚಂದ್ರಮನೇ ನೊಸಲ ಗಂಥ

ನಕ್ಷತ್ರವೇ ಅಕ್ಷತೆ, ತರುಮಕಾದಿಗಳೆ ಪತ್ರಪುಷ್ಪ

ವೊಳಗೆ ಪಂಚಮಹಾಶಬ್ದ, ವಾಗಿಯೆಂಬ ಪರಿಯಾಣವ ಬೆಳಗಿ,

ಬೇಸಗೆಯೆಂಬ ಓಗರವ ಗಡಣಿಸಿ, ಸರ್ವಪರಿಮಳದ ತುಪ್ಪವನೆರೆದು

ಪರವೆಂಬ ಮೋಲೋಗರವನಿಕ್ಕಿ,

ಬೆಳಕು ಕತ್ತಲೆಯೆಂಬ ಕಣ್ಣಡಕವ ಕಟ್ಟಿ....

'ಈ ವಚನಗಳು ವಿಲಂಬ ರೂಪಕಗಳಾದರೆ ಇಲ್ಲಿ ಚಿತ್ರ ಅದ್ಭುತಗಳನ್ನು ತೆರೆಯುತ್ತ ಬರುತ್ತವೆ. ಆಕಾಶವೆ ಲಿಂಗ, ನಕ್ಷತ್ರ ಅಕ್ಷತೆ, ಮೇಘ ಅಗ್ಘವಣಿಯ ಬಿಂದಿಗೆ, ಮಳೆಗಾಲದ ಮಜ್ಜನ, ಬೆಳಕು ಕತ್ತಲೆಯ ಕಣ್ಣಡಕ, ಚಂದ್ರಮನೇ ನೊಸಲ ಗಂಧ, ವಾಯು ವಸ್ತ್ರ, ನಾನು ನೀನು ಅನುಲೇಪನ ಗಂಧ ಕಲ್ಪನೆಯನ್ನು ಹಿಗ್ಗಿಸುತ್ತ ಬರುವ ಭೂಮಚಿತ್ರಗಳು'[೧೦೧] ಅತ್ಯಂತ ಸಶಕ್ತ ರೂಪಕಗಳ ಮೂಲಕ ಅನುಭಾವದಡಿಗೆಯನ್ನು ಸಹೃದಯರಿಗೆ ಉಣಬಡಿಸುವ ಅಲ್ಲಮಪ್ರಭು ಒಂದಿಲ್ಲೊಂದು ದಿನ ಅಳಿವು ಕಾಣುವ ಲೌಕಿಕ ಸಂಗತಿಗಳ ಜೊತೆಗೆ ಹೆಚ್ಚಿನ ಸಂಪರ್ಕವಿರಿಸಿಕೊಳ್ಳಲಾರ. ಹಾಗಾಗಿ ನೆಲ, ನಿಸರ್ಗವೂ ಅವನಿಗೆ ವಿಸ್ತಾರದ ಬಯಲೆ. ಅಲ್ಲಮಪ್ರಭು ಗುಹೇಶ್ವರನನ್ನು ಒಮ್ಮೆ ಅಪ್ಪಿಕೊಂಡ ಬಳಿಕ ಭವದ ಬಗ್ಗೆ ಮತ್ತೆ ಮನಸ್ಸು ಕೆಡಿಸಿಕೊಳ್ಳುವವನಲ್ಲ. ತಾನು ಕಂಡ ದೈವಿಕ ಸಂಗತಿಯ ಅನುಭವವನ್ನು ಕಟ್ಟಿಕೊಡುವಾಗ ಲೌಕಿಕತೆಯ ರೂಪಕಗಳನ್ನೆ ಆತ ಬಳಸಬೇಕಾಗುತ್ತದೆ. ಒಮ್ಮೊಮ್ಮೆ ಅಲ್ಲಿಯೆ ಹುದುಗಿರುವ ವಿಧಾನವನ್ನು ನಮಗೆ ತೆಗೆದು ತೋರಿಸುತ್ತಾನೆ. ಶಿಲೆಯೊಳಗಿನ ಬೆಂಕಿ, ನೀರೊಳಗಿನ ಪ್ರತಿಬಿಂಬ, ಬೀಜದಲ್ಲಿನ ಮರ, ಅಗೋಚರವಾಗಿರುವ ದೈವ ಹಾಗೂ ಮಾನವ ಸಂಬಂಧವನ್ನು ಕಟ್ಟಿಕೊಡುತ್ತವೆ. ಅಲೌಕಿಕದ ಗಾಢ ಅನುಭವ ನೀಡುವ ಅಲ್ಲಮಪ್ರಭು, ಅದಕ್ಕಾಗಿ ತಹತಹಿಸುತ್ತಿದ್ದ ಬೇಂದ್ರೆಯವರನ್ನು ಕಾಡಿರುವುದು ಸಹಜವಾಗಿದೆ.

ಮಾತು ಜ್ಯೋತಿರ್ಲಿಂಗವೆಂದು ಹೇಳಿದ ಅಲ್ಲಮಪ್ರಭು ಬೇಂದ್ರೆಯವರನ್ನು ವಿಶೇಷವಾಗಿ ಪ್ರಭಾವಿಸಿದ ಸಂಗತಿಯನ್ನು ಕನ್ನಡದ ವಿಮರ್ಶೆ ಗುರುತಿಸಿದೆ. ಬಸವಣ್ಣನನ್ನು 'ಜಗದ್ವಿಲಕ್ಷಣಮೂರ್ತಿ', 'ಕರ್ನಾಟಕದ ಇತಿಹಾಸದಲ್ಲಿ ಇವನಂಥವ, ಇವನೊಬ್ಬನೆ'[೧೦೨] ಎಂದು ಕೊಂಡಾಡಿದ ಬೇಂದ್ರೆಯವರು ಅಲ್ಲಮನನ್ನು 'ನೀರ, ನೇಹಿಗ, ನಂಟ, ಬಂಟ, ಸಂವಾದಿ, ಗುರು, ಶಿಷ್ಯ, ಪ್ರೀತಿಯ ಜಾತಿಗಾರ!'[೧೦೩] ಎಂದು ಕರೆದು ತಮ್ಮ ಪ್ರೀತಿಯನ್ನು ತೋಡಿಕೊಂಡಿದ್ದಾರೆ. ಮನಸ್ಸು ವಿಹ್ವಲಗೊಂಡಾಗ, ಸಂಘರ್ಷದಲ್ಲಿ ಬಸವಳಿದಾಗ ಸಂತೈಸುವ ವ್ಯಕ್ತಿ ಅಲ್ಲಮನೆಂದು ಅವರು ಅಂದುಕೊಳ್ಳುತ್ತಾರೆ. ಪ್ರಭುವಿನ ಕುರಿತ ಅವರ ಸುನೀತವೊಂದು ಬಹಳ ಪ್ರಸಿದ್ಧವಾದುದು:

ಮನದ ಬಯಲಲಿ ಬವಣೆಗೊಂಡೆ, ಬಿಸಿಲಿನ ಝಳದೆ
ಹುಲ್ಲೆ ಹಂಗಿಸುವ ಹುಸಿನೀರ ಕಾಂಬೋಲು ಕಂಡೆ-
ನೀರ, ನೇಹಿಗ, ನಂಟ, ಬಂಟ, ಸಂವಾದಿ, ಗುರು,
ಶಿಷ್ಯ, ಪ್ರೀತಿಯ ಜಾತಿಗಾರ! ಎಲ್ಲಿರುವೆ ರಸ-
ಸಿದ್ಧ ಗೋರಕ್ಷನುಕ್ಕಿಲೆ ಹೊಯ್ದರೂ ಮುಕ್ಕು
ತುಕ್ಕರಿಯದಿದ್ದ ಮೈಕವಚ ಕಳೆದಿಡುವಂತೆ
ಕೆಳಗಿರಿಸಿ, ಕದಳಿಯಲ್ಲಡಗಿ ಕಾಣದೆ ಹೋದ,
ಲಿಂಗ ಲೀಲಾವಿಲಾಸದಲಿ ನಟಿಸಿದ ಮೂರ್ತಿ

ವಚನ ವಿದ್ಯಾನಟಿಯು ಕುಣಿಕುಣಿದಳಂದು, ಮ
ದ್ದಳೆಯ ಸೊಲ್ಲಿಗೆ ವಿವಿಧ ಭಂಗಿಯಲಿ; ಶೂನ್ಯದಲಿ
ಹುಟ್ಟುಗಟ್ಟಿತು ಹದುಳದೊಂದು ಹುಣ್ಣಿಮೆ; ಬೆಡಗು
ಬಿನ್ನಾಣ ಬಿಡಿಸಿ, ಬೆಳದಿಂಗಳವ ಕುಡಿದ ಮಧು-
ಮತ್ತ ಚಿತ್ತ - ಚಕೋರ ಕೇಳುತಿದೆ, ಹೇಳುತಿದೆ-
ಬೇರೆ ದರುಶನವೇಕೆ? ಮಾತೆ ಜ್ಯೋತಿರ್ಲಿಂಗ![೧೦೪]

ಬಸವಣ್ಣನ ಕರ್ಮಭೂಮಿಯಾಗಿದ್ದ ಕಲ್ಯಾಣ ಅಲ್ಲಮಪ್ರಭುವಿನ ಇರುವಿಕೆಯಿಂದ ಹೆಚ್ಚಿನ ಮಹತ್ವ ಪಡೆದುಕೊಂಡಿತ್ತು. ಸಾಮಾಜಿಕ ಕ್ರಾಂತಿಯ ಹರಿಕಾರನಾಗಿದ್ದ ಬಸವಣ್ಣ ಸಮಾಜದಲ್ಲಿ ಮನುಷ್ಯರೆಲ್ಲರೂ ಒಂದು ಎನ್ನುವ ಜಾಗೃತಿಯನ್ನು; ಮರ್ತ್ಯಲೋಕ ಗೆದ್ದವರು ದೇವಲೋಕ ಗೆಲ್ಲಬಹುದೆಂಬ ಅರಿವನ್ನು; ಲೌಕಿಕ-ಅಲೌಕಿಕವನ್ನು ಬೆಸೆಯುವ ಹವಣಿಕೆಯನ್ನು ಕೈಗೊಂಡಿದ್ದರೆ ಕಲ್ಯಾಣದ ರಂಗಸ್ಥಲಕ್ಕೆ ಆಧ್ಯಾತ್ಮ ಕೇಂದ್ರಿತ ಬೆಳಕನ್ನು ನೀಡುವುದರ ಮೂಲಕ ಅಲ್ಲಮನು ಅನುಭಾವದ ಮಹತ್ವವನ್ನು ಶರಣರಲ್ಲಿ ಬಿತ್ತಿದ. ಮಾತುಗಳಿಗೆ ಜ್ಯೋತಿಯ ಸ್ವರೂಪವನ್ನು ನೀಡಿದ. ಭಕ್ತರ ಹೃದಯಗಳನ್ನು ಹಸನು ಮಾಡುವ, ಉತ್ತುವ, ಬಿತ್ತುವ ಪರತತ್ವದ

ನೀರು ಹಣಿಸುವ ನಿಷ್ಕಾಮ ಕಾಯಕವನ್ನು ಅಲ್ಲಮಪ್ರಭು ಕೈಗೊಂಡ. ಮಾತು ಜ್ಯೋತಿಯೆಂಬ ವಿಚಾರವನ್ನು ಬೇಂದ್ರೆಯವರು ಕೂಡ ಸಂಪೂರ್ಣವಾಗಿ ಒಪ್ಪಿಕೊಂಡಿದ್ದರು. ಸ್ವತಃ ಅಲ್ಲಮನೇ ಪ್ರಕಾಶದ ರೂಪವೆಂದು ಬೇಂದ್ರೆಯವರು ಹೇಳುವಲ್ಲಿ ಅಲ್ಲಮನ ಅನುಭಾವದ ನೆಲೆಗಳು ಸ್ಪಷ್ಟಗೊಳ್ಳುತ್ತವೆ. 'ಅಲ್ಲಮಪ್ರಭೂರಾಯ ಆಕಾಶ, ಪ್ರಕಾಶ ಶರೀರಧಾರಿ, ಅವನ ಮಾತು ಜ್ಯೋತಿರ್ಲಿಂಗ, ಅವನು ನಡೆದಾಡಿದರೆ ಹೆಜ್ಜೆ ಮೂಡದ ದಾರಿ, ಅವನು ಭೂಲೋಕಕ್ಕೆ ಅವತರಿಸಿದ ಗುರು, ಎಂಬ ಮಾತು ಸತ್ಯ.'[೧೦೫]

ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ ಮುಂತಾದ ಎಲ್ಲ ಶರಣರಲ್ಲಿ ಶಿವತತ್ವವನ್ನು ಬೇಂದ್ರೆಯವರು ಕಂಡರು. ತಿಳಿವು, ಅರಿವು, ಪರತತ್ವದೆಡೆಗಿನ ಹಂಬಲ ಅವರನ್ನು ಭಿನ್ನರಾಗಿಸಿತು. ಲೆಕ್ಕಕ್ಕೆ ಸಿಗದಿರುವ, ಅಪ್ರಮಾಣ ರೂಪದಲ್ಲಿರುವ ಗುಹೇಶ್ವರನ ಹಾದಿಯನ್ನು ಅರಸುತ್ತ ಹೋದ ಅಲ್ಲಮನಂಥವರು ಲೋಕಕ್ಕೆ ಕಲ್ಯಾಣ ಬಯಸಿದರು. ಭಕ್ತಿಯ ಹಾದಿಯಲ್ಲಿ ಸಾಗುವವರ ಶ್ರೇಷ್ಠತೆಯನ್ನು ಅಳೆಯುವುದು ತಪ್ಪು ಎಂದು ಬೇಂದ್ರೆ ವಾದಿಸಿದರು. 'ಪ್ರಭುದೇವರು ಶ್ರೇಷ್ಠನೋ ಬಸವಣ್ಣನವರು ಶ್ರೇಷ್ಠನೋ ಎಂಬ ವಾದ ಅಪ್ರಸ್ತುತ.'[೧೦೬] ಬಸವಣ್ಣ ಸಮನ್ವಯದ ಸೂತ್ರಧಾರನಾಗಿದ್ದರೆ ಪ್ರಭು ವೈರಾಗ್ಯದ ಮೂರ್ತಿಯಾಗಿದ್ದ.

'ಕಲ್ಯಾಣ ಪಟ್ಟಣದಲ್ಲಿರುವವರೆಲ್ಲರೂ ಬಸವಣ್ಣ ಮತ್ತು ಶುಭವೆಲ್ಲ ಮಾಡುವವರೆಲ್ಲ ಪ್ರಭುಗಳು; ಪ್ರಭುಗಳು ಬಸವಣ್ಣನ ಆರಾಧಕರು, ಬಸವಣ್ಣನವರು ಪ್ರಭುಗಳನ್ನು ಗೌರವದಿಂದ ಕಾಣುವವರು. ಇಬ್ಬರಲ್ಲಿಯೂ ಒಂದೇ ತತ್ವ. ಅದು ಶಿವತತ್ವ'[೧೦೭] ಎಂಬ ಚೆನ್ನವೀರನ ವಚನವೊಂದನ್ನು ಬೇಂದ್ರೆಯವರು ಉದಾಹರಿಸಿ ಹೇಳುವದರ ಮೂಲಕ ಅವರಿಬ್ಬರಲ್ಲಿ ತುಡಿಯುತ್ತಿರುವ ಹಂಬಲ ಒಂದೆಯಾಗಿತ್ತು ಎನ್ನುತ್ತಾರೆ. ದೇವನಲ್ಲಿ ಮತ್ತೆ ಸೇರಿಕೊಳ್ಳಬೇಕೆನ್ನುವ ಮತ್ತು ಲೌಕಿಕದಲ್ಲಿ ಸಾಮರಸ್ಯ ಇರಬೇಕೆನ್ನುವ ವಿಚಾರದಲ್ಲಿ ಅವರು ಒಂದಾಗುತ್ತಾರೆ. 'ಭರತನ ಭಾರತ, ಕೃಷ್ಣನ ಭಾರತ, ಮದ್ದಳೆಗಾರ- ನವೋನವ - ಅನುಭಾವ - ಸಂವಾದ ಚತುರ ಅಲ್ಲಮಪ್ರಭುವಿನ ಭಾರತ ಇವು ಮೂರು ಒಮ್ಮುಖವಾದ ಕನ್ನಡ ನಡತೆ ಸಾಂಸ್ಕೃತಿಕ ಚಾತುರ್ಯದ ರಂಗಭೂಮಿಯಾದೀತು.'[೧೦೮] ಮಲಗಿಕೊಂಡವರು ಏಳದಿದ್ದರೆ ಕೋಳಿ ಕೂಗಿ ಮಾಡುವದೇನೆಂದು ಪ್ರಶ್ನಿಸುವ ಬೇಂದ್ರೆಯವರು ಭಕ್ತಿಯ ಜಲ ಎದೆಯಲ್ಲಿ ಹರಿಯದಿದ್ದರೆ ಸನ್ನಡತೆ, ಸಂಸ್ಕಾರ ಬರುವದಿಲ್ಲವೆನ್ನುವ ಅಭಿಪ್ರಾಯ ತಾಳುತ್ತಾರೆ. ಹಾಗಾಗಿ ಲೌಕಿಕವಾದ ಜೀವನವು ಆಗಮಿಕದ ಕಡೆಗೂ ವಾಲಬೇಕು. ಅಲ್ಲಮಪ್ರಭು ಕೂಡ ಅವರ ಮನಸ್ಸಿನಲ್ಲಿ ಯಾವಾಗಲೂ ನಿಂತಿದ್ದ ವ್ಯಕ್ತಿಯಾಗಿದ್ದ. ಚಾಮರಸನ 'ಪ್ರಭುಲಿಂಗ ಲೀಲೆ'ಯಲ್ಲಿ ಚಿತ್ರಿತವಾದ ಅಲ್ಲಮನನ್ನು ಬೇಂದ್ರೆ ಸತತ ಧ್ಯಾನಿಸುತ್ತಾರೆ. ಭರತ, ಅಲ್ಲಮ, ರತ್ನಾಕರವರ್ಣಿ, ಬಸವಣ್ಣ, ಹರಿಹರ ಮುಂತಾದವರ ಭಕ್ತಿರಸ ಕಾವ್ಯವನ್ನು ಅರಿತುಕೊಳ್ಳುವ, ಆ ಕವಿಗಳು ಚಿತ್ರಿಸಿದ ಭೋಗ- ಯೋಗಗಳನ್ನು ತಿಳಿದುಕೊಳ್ಳುವ ಜಿಜ್ಞಾಸೆಗೆ ಬೇಂದ್ರೆ ಅಪೇಕ್ಷಿಸುತ್ತಾರೆ. 'ಅಲ್ಲಮನು ಪ್ರಭುವಾಗಿ ಶೂನ್ಯ ಸಿಂಹಾಸನವನ್ನೇರಿ ಅನುಭಾವಿಗಳಿಗೆ ಮಾರ್ಗದರ್ಶಕನಾಗಿದ್ದಾನೆ. ತನ್ನ ದಿಗ್ವಿಜಯದಲ್ಲಿ ಅನೇಕ ಭಕ್ತರನ್ನು ಮಾತೆಂಬ ಜ್ಯೋತಿಯಿಂದ ಗೆದ್ದಿದ್ದಾನೆ'[೧೦೯]

ಎಂದು ಹೇಳಿ ಪ್ರಭುವಿನ ಪರಂಪರೆ ಕನ್ನಡದ ಭಕ್ತಿ ಹಾಗೂ ಅನುಭಾವದ ಕಾವ್ಯವನ್ನು ದಟ್ಟವಾಗಿ ಪ್ರಭಾವಗೊಳಿಸಿರುವುದನ್ನು ಸ್ಪಷ್ಟಪಡಿಸುತ್ತಾರೆ. ಸ್ವತಃ ಅವರ ಮೇಲೂ ಅಲ್ಲಮಪ್ರಭುವಿನ ಗಾಢಪ್ರಭಾವ ಇದ್ದುದನ್ನು ಈಗಾಗಲೇ ಹೇಳಲಾಗಿದೆ. 'ನಾನು', 'ನೀನು', 'ಆನು', 'ತಾನು' ಎಂಬ ಬೇಂದ್ರೆಯವರ ನಾಕುತಂತಿಗೆ ಅಲ್ಲಮಪ್ರಭುವಿನ ಪ್ರೇರಣೆಯೂ ದೊರೆತಿರುವ ಸುಳಿವನ್ನು ಡಾ. ಜಿ.ಎಸ್.ಆಮೂರರು ನೀಡಿರುವುದನ್ನು ಗಮನಿಸಬಹುದು. 'ಬೇಂದ್ರೆಯವರ 'ನಾಕುತಂತಿ'ಯ ದರ್ಶನದ ಮೂಲ ಸೋಽಯಮಾತ್ಮಾ ಚತುಷ್ಪಾತ್ ಎಂಬ ಶೃತಿಯಲ್ಲಿಯೇ ಇದೆ. ಇದಲ್ಲದೆ ಅಲ್ಲಮನ ವಚನವೊಂದರಿಂದಲೂ ಅವರು ಪ್ರಭಾವಿತರಾದಂತಿದೆ. 'ನಾನೆಂಬುದು ಪ್ರಮಾಣು, ನೀನೆಂಬುದು ಪ್ರಮಾಣು, ಸ್ವಯಂ ಎಂಬುದು ಪ್ರಮಾಣು, ಪರಂ ಎಂಬುದು ಪ್ರಮಾಣು, ಪ್ರಮಾಣು ಎಂಬುದು ಪ್ರಮಾಣು. ಗುಹೇಶ್ವರನೆಂಬುದು ಅಪ್ರಮಾಣು.' ಈ ವಚನವನ್ನು ಬೇಂದ್ರೆಯವರು ನನಗೆ ತಿಳಿದಂತೆ ನಾಲ್ಕು ಸಂದರ್ಭಗಳಲ್ಲಿ ನೆನೆಸಿಕೊಂಡಿದ್ದಾರೆ. 'ಪರಂ' ಎಂಬುದೇ ಬೇಂದ್ರೆಯವರಲ್ಲಿ 'ಆನು' ಆದಂತಿದೆ.'[೧೧೦] ಜೀವನದಲ್ಲಿ ಸಾಮರಸ್ಯ ತುಂಬ ಮಹತ್ವದ್ದು ಎನ್ನುವ ಮಾತನ್ನು ನಾಕುತಂತಿಗಳು ಸಿದ್ಧಮಾಡುತ್ತವೆ. ಭೋಗ-ಯೋಗಗಳನ್ನು ಹೊಂದಿಸುವುದು; ಲೋಕಾಭಿಮುಖ ಹಾಗೂ ದೈವಾಭಿಮುಖಿಗಳ ಜೊತೆ ಅನುಸಂಧಾನ ನಡೆಸುವುದು; ಜಗಳದ ನಂತರ ಶಾಂತಿಯನ್ನು ಪ್ರತಿಷ್ಠಾಪಿಸುವುದು ಅಷ್ಟೇನೂ ಸರಳವಾದ ಸಂಗತಿಯಲ್ಲ. "Beauty is Truth, Truth Beauty - that is all ye know on earth and all ye need to know" ಎಂದು ಕವಿ ಕೀಟ್ಸ್ ಹೇಳಿದಂತೆ, ಬೇಂದ್ರೆಯವರು 'ನಾನು', 'ನೀನು', 'ಆನು', 'ತಾನು' ಇವುಗಳ ಸಾಮರಸ್ಯವೇ ಅಸ್ಮಿತೆಯ ಏಕೈಕ ಸೂತ್ರ ಎಂದು ಇಲ್ಲಿ ಸಾರುತ್ತಿದ್ದಾರೆ. ಅಂತರವೆಂದರೆ ಕೀಟ್ಸ್ ಮಾತುಗಳು ಅವನವೇ ಆದರೆ, ಬೇಂದ್ರೆಯವರ ಮಾತುಗಳು ಅವರವವಾಗಿರದೆ ಅವರ ಶ್ರುತಿ ಸಂಪತ್ತಿನ ಅಧಿಪತಿಯಾದ ಗಣನಾಯಕನವು.''[೧೧೧]

ಬೇಂದ್ರೆ ಸಾಧಿಸುವ ಮೈತ್ರಿ ಈ ನೆಲದ ನೀರಿನಿಂದ ಬಲವನ್ನೂ, ಸಂಪತ್ತನ್ನೂ ಪಡೆದಿರುವಂಥದ್ದು. ಜೀವನದಲ್ಲಿ ಲೌಕಿಕ ವ್ಯವಸ್ಥೆಗಳನ್ನು ಕ್ರಮಬದ್ಧವಾಗಿ ಹೊಂದಿಸಿಕೊಂಡಂತೆ ಅರಿಯಬೇಕೆನ್ನುವ ವಿಸ್ತಾರದ ಅರ್ಥ ಹಾಗೂ ಮೇರೆಗಳನ್ನು ಹೊಂದಿಸಿಕೊಳ್ಳುವುದು ಕೂಡ ಮುಖ್ಯವಾದುದು. ಅಲ್ಲಮನ ಬೆಡಗಿನಂತೆ ಬೇಂದ್ರೆಯವರ ಪ್ರತಿಮೆಗಳು ಕೂಡ ಒಮ್ಮೊಮ್ಮೆ ಗ್ರಾಹ್ಯವಾಗದೆ ಹೋಗುವ ಸಂಭವವೂ ಉಂಟು. ಕವಿ ತಾನು ತಿಳಿದುಕೊಂಡ ಅರ್ಥಗಳಲ್ಲಿ ಕ್ರಮಬದ್ಧತೆಯನ್ನು ರೂಢಿಸಿಕೊಂಡಾಗ ಉಂಟಾಗುವ ಅನುಭವ ನಾಕುತಂತಿಯ ನಾದವಾಗಿ ಹೊರಹೊಮ್ಮಿದೆಯೆಂಬ ಸಂಕೇತ ಅದರಲ್ಲಿದೆ ಎಂದು ಕೀರ್ತಿನಾಥ ಕುರ್ತಕೋಟಿ ಅಭಿಪ್ರಾಯ ತಾಳುತ್ತಾರೆ. 'ಅಂತರಂಗದ ಅನುಭವಗಳೇ ಆಗಲಿ, ಪ್ರಜ್ಞೆಯೇ ಆಗಲಿ ಅವುಗಳಿಗೆ ತಮ್ಮಷ್ಟಕ್ಕೆ ತಾವೇ ಏನೂ ಅರ್ಥವಿರುವುದಿಲ್ಲ. ಅವುಗಳನ್ನೆಲ್ಲ ಕವಿ ತನ್ನ ಪ್ರತಿಭೆಯ ನೆರವಿನಿಂದ ಒಂದು ಕ್ರಮದಲ್ಲಿ ಹೊಂದಿಸಿಕೊಂಡು ಹೊಂದಿಸಿಕೊಂಡು ತನ್ನ ಪ್ರಪಂಚವನ್ನು ಪುನಃ ಸೃಷ್ಟಿಸಿಕೊಂಡಾಗ ಮಾತ್ರ ಅದಕ್ಕೆ ಅರ್ಥ ಮೌಲ್ಯ. ಇವೇ ಕವಿಯ ಅಂತರಂಗದಲ್ಲಿಯ ನಾಕು ತಂತಿಗಳು.'[೧೧೨] ಸಂಕೇತ, ಪ್ರತೀಕಗಳ ಮೂಲಕ ತಾವು ನಂಬಿದ ಆಸ್ತಿಕತೆಯನ್ನು, ತಾವು ಹಂಬಲಿಸುವ 'ಪರ'ದ

ಸೆಳೆತವನ್ನು, ತಾವು ಸಾಧಿಸಲಿಚ್ಛಿಸುವ ಸಾಮರಸ್ಯವನ್ನು ಬೇಂದ್ರೆಯವರು ತಮ್ಮ ಉತ್ತರಾರ್ಧ ಕಾವ್ಯದ ಮೂಲಕ ಪ್ರಕಟಿಸಲು ಯತ್ನಿಸಿದಂತೆ ಕಾಣುತ್ತದೆ. ಆನಂದ-ಆಶ್ಚರ್ಯಗಳ ಅನುಭವ, ನಾದದಲ್ಲಿ ತೇಲಿಸುವ ಗುಣ, ಪ್ರಾಣದ ಕೆಚ್ಚನ್ನು ನೀಡಿ ಕವಿತೆ ನಿರ್ಮಿಸುವ ಪ್ರತಿಭೆಗಳಿಂದಾಗಿ ಬೇಂದ್ರೆಯವರು ಭಕ್ತಿಕಾವ್ಯದ ಅನುಭೂತಿಯನ್ನು ನೀಡುತ್ತಲೆ ಲೌಕಿಕ ಕಾವ್ಯವನ್ನು ಇನ್ನಿಲ್ಲದಂತೆ ಮೆರೆಸಿದರು. ಕಾವ್ಯದ ಮದ್ದಳೆಯನ್ನು ಹೇಗೆ ನುಡಿಸಬೇಕೆಂಬುದನ್ನು ಶರಣರಿಗೆ ಹೇಳಿಕೊಟ್ಟ ಅಲ್ಲಮನಿಂದ ಬೇಂದ್ರೆಯವರೂ ಭೋಗ-ಯೋಗಗಳನ್ನು ಹೊಂದಿಸಲು ಕಲಿತರು.

ಆಧುನಿಕ ಮನುಷ್ಯ ಆಧ್ಯಾತ್ಮವನ್ನು ಅಷ್ಟು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ನಂಬದೆ, ಪ್ರಮಾಣೀಕರಿಸದೆ ಒಪ್ಪಬೇಕಾಗಿಲ್ಲವೆಂಬ ಮಾತನ್ನು ಬೇಂದ್ರೆಯವರೂ ಹೇಳುತ್ತಾರೆ. ''ಆಧುನಿಕ ಮಾನವ ಈ ಕಲಿಯುಗದಲ್ಲಿ ಎದುರಿಸಬೇಕಾದ ಅನೇಕ ಪ್ರಶ್ನೆಗಳಿವೆ. ಅವನು ಯಾವ ಮಾತನ್ನೂ ಮೂಢಮತಿಯಾಗಿ ನಂಬಲು ಒಪ್ಪನು. ವಾದ ಮಾಡುವ ಪ್ರವೃತ್ತಿ ಅವನಲ್ಲಿದೆ. ಅವನಿಗೆ ಯಾರಾದರೂ ಒಬ್ಬರು 'ನೀರು ಕಡೆದರೆ ಬೆಣ್ಣೆ ಬರುವುದಿಲ್ಲ; ಆದರೆ ಹಾಲು ಕಡೆದರೆ ಬೆಣ್ಣೆ ತೇಲುತ್ತದೆ', 'ಕಟ್ಟಿಗೆಯಲ್ಲಿ ಬೆಂಕಿ ಇರುತ್ತದೆ' ಎಂದು ಹೇಳಿದರೆ ಈ ಎರಡೂ ವಿಧಾನಗಳನ್ನು ಆಧುನಿಕ ಮಾನವ ಪ್ರಶ್ನಿಸಬಹುದು. ''ಅಳ್ಳಕಿನ ಪದಾರ್ಥದೊಳಗಿಂದ ಗಟ್ಟಿ ಪದಾರ್ಥ ಬರುವುದು ಹೇಗೆ ಸಾಧ್ಯ? ಕಟ್ಟಿಗೆಯಲ್ಲಿ ಬೆಂಕಿ ಇದ್ದರೆ ಅದು ಇಷ್ಟು ದಿವಸ ಹೇಗೆ ಉಳಿಯಿತು? ಸುಟ್ಟಗೊಂಡು ಹೋಗಲಿಲ್ಲವೇಕೆ?'' ಎಂದು. ಪ್ರಯೋಗವೆ ಇದಕ್ಕೆ ಪರಿಹಾರ. ಹಾಲಿಗೆ ಹೆಪ್ಪು ಹಾಕಿ, ಮೊಸರು ಮಾಡಿ, ಅದ್ದನು ಕಡೆದು ನೋಡಿದರೆ ಬೆಣ್ಣೆ ತೇಲಿಯೇ ತೇಲುತ್ತದೆ. ಇದು ಪ್ರತ್ಯಕ್ಷ ಪ್ರಮಾಣ. ಕಟ್ಟಿಗೆ ಉಜ್ಜಿದಾಗ ಬೆಂಕಿಯ ಕಿಡಿ ಏಳುತ್ತವೆ. ಇವು ಎರಡೂ ಸೃಷ್ಟಿಸತ್ಯಗಳು. ಇವುಗಳನ್ನು ಬದಲಿಸಲು ಎಂಥ ಆಧುನಿಕ ಮಾನವನಿಗೂ ಅಸಾಧ್ಯ. ಬೆಣ್ಣೆ ಹಾಲಿನಲ್ಲಿ ಅಡಗಿರುವಂತೆ, ಅಗ್ನಿ ಕಟ್ಟಿಗೆಯಲ್ಲಿ ಅಡಗಿರುವಂತೆ ಪ್ರತಿಯೊಬ್ಬನ 'ಸ್ವರೂಪ' ಅವನವನಲ್ಲಿ ಅಡಗಿ ಇರುತ್ತದೆ.''[೧೧೩]

ಮನುಷ್ಯನಲ್ಲಿರುವ ಇಂತಹ 'ಸ್ವರೂಪ' ಅಭಿವ್ಯಕ್ತಗೊಂಡ ಪರಂಪರೆಯಲ್ಲಿ ಬೇಂದ್ರೆಯವರು ಹಾದು ಬಂದದ್ದರಿಂದ ಅವರಲ್ಲಿಯೂ ಅಂತಹ ಹಂಬಲ ಮೊಳಕೆಯೊಡೆಯಿತು. ಲೌಕಿಕದಲ್ಲಿ ಅಡಗಿದ ಅಲೌಕಿಕವನ್ನು ಕಾಣುವ ಆಸೆ; ಅದೃಷ್ಟದ ಕೈ ಹಿಡಿಯುವ ಆಸೆ; ಸೂತಕವನ್ನು ದಾಟುವ ಆಸೆ; ಅರಿವಿನಲ್ಲಿಯೆ ಪರಬ್ರಹ್ಮನನ್ನು ಕಾಣುವ ಆಸೆ ಹೆಚ್ಚಾಗುತ್ತ ಹೋಯಿತು. ನಿಸರ್ಗದ ಮಾಯೆಯಲ್ಲಿ ಅದನ್ನು ಕಾಣತೊಡಗಿದರು.

೩.೧೩. ಅಕ್ಕಮಹಾದೇವಿ :

ಶರಣರು, ತತ್ವಪದಕಾರರು, ದಾಸರು ಒಂದೊಂದು ಸಲ ತಮ್ಮ ಭಕ್ತಿಯನ್ನು 'ಶರಣಸತಿ-ಲಿಂಗಪತಿ', 'ಮಧುರ ಭಾವ' ಎಂದು ತೋಡಿಕೊಂಡ ಉದಾಹರಣೆಗಳು ಸಿಗುತ್ತವೆ. ಅಕ್ಕಮಹಾದೇವಿ, ಮೀರಾ ಮುಂತಾದ ಕವಯತ್ರಿಯರಿಗೆ ಅದು ಅವರ ಅನುಭಾವದ ಸಹಜ ಅಭಿವ್ಯಕ್ತಿಯಂತೆ ತೋರಿದರೆ, ಗಂಡಿನ ವಿಚಾರದಲ್ಲಿ ಅದು ಅಷ್ಟು ಸರಳವಾಗಿ ಹೊಂದಿಕೆಯಾಗಲಾರದು. ಆದರೂ ಭಗವಂತನನ್ನು ಹೊಂದಿ ನಡೆಯುವುದು; ಭಗವಂತನಿಗೆ

ಸರ್ವಸ್ವವನ್ನೂ ಸಮರ್ಪಿಸುವುದು; ಭಗವಂತ ಹೇಳಿದಂತೆ ನಡೆಯುವುದು ಮುಂತಾದ ಆಶಯದಲ್ಲಿ ಬಂದಿರಬಹುದಾದ ಈ ಮನಸ್ಥಿತಿಗೆ ಅನುಗುಣವಾದ ಕೆಲವು ವಚನ ಹಾಡುಗಳು ಭಕ್ತಕವಿಗಳಲ್ಲಿ ಸಿಗುತ್ತವೆ.

ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು
ಪುರುಷನ ಒಲವಿಲ್ಲದ ಲಲನೆಯಂತಾಗಿರ್ದೆನಯ್ಯ!
ವಿಭೂತಿಯನೆ ಹೂಸಿ, ರುದ್ರಾಕ್ಷಿಯನೆ ಕಟ್ಟಿ,
ಶಿವ, ನಿಮ್ಮೊಲವಿಲ್ಲದಂತೆ ಆಗಿರ್ದೆನಯ್ಯಾ!
ಕೆಟ್ಟು ಬಾಳುವರಿಲ್ಲಾ ಎಮ್ಮವರ ಕುಲದಲ್ಲಿ
ನೀನೊಲಿದಂತೆ ಸಲಹಯ್ಯಾ, ಕೂಡಲಸಂಗಮದೇವಾ[೧೧೪]

ಅಕ್ಕಮಹಾದೇವಿಯನ್ನು ಕುರಿತ ಲೇಖನವೊಂದರಲ್ಲಿ ಜಿ.ಎಸ್.ಶಿವರುದ್ರಪ್ಪ ಅವರು ಅಕ್ಕನಿಗೆ ಉಚಿತವಾದ ಅನುಭಾವದ ನಿಲುವು ಅದಾಗಿತ್ತು ಎನ್ನುವ ಅಭಿಪ್ರಾಯವು ಸೂಕ್ತವಾದುದಾಗಿದೆ. 'ಪ್ರಾಸಂಗಿಕವಾಗಿ ಭಕ್ತನಾದವನು ಸತಿ ಭಾವವನ್ನು ಆರೋಪಿಸಿಕೊಂಡು ಸಾಧನೆಯಲ್ಲಿ ತೊಡಗಿದ ನಿದರ್ಶನಗಳು ಉಂಟು. ಬಸವಣ್ಣನವರಲ್ಲಿಯೂ ಅವರು ಈ ಭಾವದಲ್ಲಿ ನಿಂದ ಮನಸ್ಥಿತಿಯನ್ನು ಉಲ್ಲೇಖಿಸುವ ವಚನಗಳುಂಟು. ಉರಿಲಿಂಗದೇವ, ಗಜೇಶ ಮಸಣಯ್ಯ ಇಂಥ ಕೆಲವರೂ, 'ಶರಣಸತಿ ಲಿಂಗಪತಿ' ಭಾವದಲ್ಲಿಯೆ ತಮ್ಮ ವ್ಯಕ್ತಿತ್ವವನ್ನು ನಿಲ್ಲಿಸಿಕೊಂಡು ಬರೆದ ವಚನಗಳೂ ಇವೆ. ಆದರೆ ವಾಸ್ತವವಾಗಿ 'ಶರಣಸತಿ ಲಿಂಗಪತಿ' ಎಂಬ ನಿಲುವು ಹೆಣ್ಣಿನ ವ್ಯಕ್ತಿತ್ವ ಹಾಗೂ ಮನಸ್ಥಿತಿಗೆ ಹೆಚ್ಚು ಅನುಕೂಲಕರವಾದದ್ದು. ಈ ದೃಷ್ಟಿಯಿಂದ ಅಕ್ಕಮಹಾದೇವಿಗೆ ಈ ನಿಲುವು ಸಹಜವಾಗಿದೆ. ಅನೇಕ ಶಿವಶರಣೆಯರ ನಡುವೆ ಈಕೆಯೊಬ್ಬಳೆ ತಾನು ಸತಿ, ಲಿಂಗವೆ ಪತಿ ಎಂಬ ಭಾವದಲ್ಲಿ ನಿಂದವಳು. ಇದು ಅವಳ ಅನುಭಾವಕ್ಕೆ ಉಚಿತವಾಗಿದೆ. ಯಾಕೆಂದರೆ ಲೌಕಿಕ ದಾಂಪತ್ಯದ ಕಲ್ಪನೆಯನ್ನು ನಿರಾಕರಿಸಿ ತನ್ನ ಅನುಭಾವದ ಗಮ್ಯವಾದ 'ಗಂಡನ' ಅನ್ವೇಷಣೆಯಲ್ಲಿ ಹೊರಟವಳು ಅವಳು. ಇದರಿಂದಾಗಿ ತನ್ನ ಹಾಗೂ ಚೆನ್ನಮಲ್ಲಿಕಾರ್ಜುನನ ಸಂಬಂಧವೇ ಅವಳ ಅನುಭಾವದ ಮೂಲ ನೆಲೆಯಾಗಿದೆ. ಈ ಸಂಬಂಧ ಈ ಹೊತ್ತಿನದಲ್ಲ, ನಿನ್ನೆಯದಲ್ಲ, ಅನಂತ ಕಾಲದ್ದು. ಇದು 'ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತ ಕಾಲ ತಪಸಿದ್ದೆ ನೋಡಾ' ಎಂಬ ಅವಳ ಉಕ್ತಿಯಲ್ಲಿ ಸೂಚಿತವಾಗಿದೆ.'[೧೧೫]

ತನಗೆ ಸ್ವಾತಂತ್ರ್ಯವಿಲ್ಲದ ಲೌಕಿಕ ಮದುವೆಯನ್ನು ನಿರಾಕರಿಸಿ, ಕಾಮ ಕ್ರೋಧಗಳೆಂಬ ವಿಷದ ಹಾವಿನ ಹಲ್ಲು ಕಿತ್ತು, ತನ್ನ ಕಣ್ಣಿಗೆ ಸರ್ವಾಂಗ ಸುಂದರನಾಗಿದ್ದರೂ ರೂಪಿಲ್ಲದ ಚೆಲುವನನ್ನು ಆಕೆ ಆತ್ಮಸಂಗಾತಿಯನ್ನಾಗಿ ಮಾಡಿಕೊಳ್ಳುತ್ತಾಳೆ. 'ಒಡಲನೂ, ಪ್ರಾಣವನೂ ನಿಮಗೊಪ್ಪಿಸಿ ಶುದ್ಧಳಹೆನು'[೧೧೬] ಎಂದು ಆತ್ಮಚೈತನ್ಯನಲ್ಲಿ ತನ್ನ ಭಕ್ತಿಯನ್ನು ಹೇಳಿಕೊಳ್ಳುತ್ತಾಳೆ. ಚೆನ್ನಮಲ್ಲಿಕಾರ್ಜುನನ ಒಲುಮೆಗೆ ಹಾತೊರೆಯುತ್ತಾಳೆ. ಜನ್ಮ ಜನ್ಮಾಂತರಕ್ಕೂ

ಆತನೆ ಗಂಡನಾಗಿರಬೇಕೆಂದು ಅಪೇಕ್ಷೆಪಡುತ್ತಾಳೆ. ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನ ಸುಂದರ ಸ್ವರೂಪವನ್ನು ಬಣ್ಣಿಸುವುದು ತನ್ನ ಭಾವನೆಗಳನ್ನು ಹೇಳಿಕೊಳ್ಳುವುದು ಉತ್ಕಟ ಶೃಂಗಾರಕಾವ್ಯದಷ್ಟೆ ಮನೋಹರವಾಗಿದೆ.

ಹೊಳೆವ ಕೆಂಜೆಡೆಗಳ ಮಣಿಮುಕುಟದ
ಒಪ್ಪುವ ಸುಲಿಪಲ್ಲ ನಗೆಮೊಗದ
ಕಂಗಳ ಕಾಂತಿಯಿಂ ಈರೇಳು ಭುವನವುಂ ಬೆಳಗುವ
ದಿವ್ಯ ಸ್ವರೂಪನಂ ಕಂಡೆ ನಾನು![೧೧೭]

* * *

ಒವ್ಮೆ ಕಾಮನ ಕಾಲ ಹಿಡಿವೆ
'ಒವ್ಮೆ' ಚಂದ್ರಮಗೆ ಸೆರೆಗೊಡ್ಡಿ ಬೇಡುವೆ!
ಸುಡು ವಿರಹವನು । ಆರಿಗೆ ಧೃತಿಗೆಡುವೆ ।
ಚೆನ್ನಮಲ್ಲಿಕಾರ್ಜುನ ದೇವನೆನ್ನನೊಲ್ಲದ ಕಾರಣ
ಎಲ್ಲರಿಗೆ 'ಹಂಗಿತಿ' ಯಾದೆನವ್ವ![೧೧೮]

* * *

ಹಗಲಿರುಳು ನಿಮ್ಮ ಹಂಬಲದಲ್ಲಿ ಮೈ ಮರೆದೊರಗಿದನು.[೧೧೯]

* * *

ಚೆನ್ನಮಲ್ಲಿಕಾರ್ಜುನಯ್ಯನೇ ಗಂಡನೆನಗೆ
ಆನು ಚೆನ್ನಮಲ್ಲಿಕಾರ್ಜುನಂಗೆ ಮದುವಳಿಗೆ
ಎನಗೆ ಬೇರೆ ಶೃಂಗಾರವೇಕೆ ಹೇಳಿರವ್ವ![೧೨೦]

* * *

ಅಯ್ಯಾ, ನೀ ಮೆಚ್ಚಿದರೆ ಮೆಚ್ಚು, ಮೆಚ್ಚದಿದ್ದರೆ ಮಾಣು
ನಾ ನಿನ್ನನಪ್ಪದಲ್ಲದೆ ಸೈರಿಸಲಾರೆನಯ್ಯ[೧೨೧]

ಅದಮ್ಯ ಪ್ರೀತಿ, ಉತ್ಕಟ ಪ್ರಣಯದ ಕಥೆಯನ್ನು ಇವು ಹೇಳುತ್ತಿರುವಂತೆ ಭಾಸವಾದರೂ, ಆತ್ಮಸಂಗಾತನನ್ನು ಅರಸುವಲ್ಲಿ, ಆಧ್ಯಾತ್ಮವನ್ನು ಅನ್ವೇಷಿಸುವಲ್ಲಿ ಅಕ್ಕಮಹಾದೇವಿಯು ತಳಮಳಿಸಿದ ಅಭಿವ್ಯಕ್ತಿಯ ರೂಪಗಳಾಗಿ ಅವು ಬಂದಿವೆ. ಇಂತಹದೆ ತಳಮಳ, ಹುಡುಕಾಟ, ಬೇಯುವ ಅನುಭವ ಬೇಂದ್ರೆಯವರ 'ಇನ್ನೂ ಯಾಕ ಬರಲಿಲ್ಲವ್ವಾ ಹುಬ್ಬಳ್ಳಿಯಾಂವಾ। ವಾರದಾಗ ಮೂರು ಸರತಿ ಬಂದು ಹೋದಾಂವಾ'[೧೨೨] ಎಂದು ಆರಂಭವಾಗುವ 'ಹುಬ್ಬಳ್ಳಿಯಾಂವಾ' ಪದ್ಯದಲ್ಲಿ ಕಾಣಿಸಿಕೊಳ್ಳುತ್ತದೆ. ಡಾ. ಗಿರಡ್ಡಿ ಗೋವಿಂದರಾಜ ಅವರು ಅನುಭಾವ ಪರಂಪರೆಯ ಇಂಥ ಹಲವು ನಿದರ್ಶನಗಳನ್ನು ಕೊಡುತ್ತ ಬೇಂದ್ರೆಯವರ 'ಜೋಗತಿ' ಯ ಹಂಬಲ ಹಾಗೂ ಅಕ್ಕನ ಕನಸುಗಳಲ್ಲಿ

ಸಾಮ್ಯತೆಯನ್ನು ಕಾಣುತ್ತಾರೆ. ಶಿಶುನಾಳ ಶರೀಫರ ಹುಲಗೂರ ಸಂತೆ, ಹುಬ್ಬಳ್ಳಿ ಮಾಟದ ಕೊಡ, ಅಂಗಡಿಯನ್ನು ತೆರೆದು ಕುಳಿತಿರುವ ಬಸವಣ್ಣನವರ ಮಹದೇವಸೆಟ್ಟಿ ಮುಂತಾದ ಪ್ರತಿಮೆಗಳು ಅನುಭಾವವೆಂಬ ಅಮೂರ್ತವನ್ನು ಈ ಪ್ರಾಪಂಚಿಕ ಚಿತ್ರಗಳ ಮೂಲಕ ಕೊಡುವ ಅಭಿವ್ಯಕ್ತಿಯೆಂದು ಹೇಳುತ್ತಾರೆ.

'ಇವೆಲ್ಲ ಅಮೂರ್ತಗಳಿಗೆ ನಾಮ-ರೂಪಗಳನ್ನು ಕೊಡುವ, ಅನುಭಾವವನ್ನು ಲೌಕಿಕದ ಸ್ಥಳೀಯ ಬದುಕಿಗೆ ಎಳೆದುಕೊಳ್ಳುವ ವಿಧಾನಗಳು; ಸಾಮಾನ್ಯ ದೈನಿಕಗಳಲ್ಲೇ ಅನುಭಾವದ ದರ್ಶನ ಮಾಡಿಸುವ ಪರಿಗಳು'[೧೨೩]

ಬಸವಣ್ಣ ಸಂಘರ್ಷದಲ್ಲಿ ನಲುಗಿದಂತೆ, ಅಕ್ಕಮಹಾದೇವಿ ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದಂತೆ ಬೇಂದ್ರೆಯವರು ಕೂಡ ಅಂತಹ ತಳಮಳ, ಹುಡುಕಾಟದಲ್ಲಿ ಹಾದುಬರುತ್ತಾರೆ. 'ನೀನೆನಗೆ ಗಂಡನಾಗಬೇಕೆಂದು ಅನಂತ ಕಾಲ ತಪಸಿದ್ದೆ ನೋಡಾ'[೧೨೪] ಎಂದು ಅಕ್ಕ ಹೇಳುವ ರೀತಿಯಲ್ಲಿ ಬೇಂದ್ರೆಯವರ ನಾಯಕಿ 'ಜಲ್ಮ ಜಲ್ಮಕ ಗೆಣ್ಯಾ ಆಗಿ ಬರತೇನಂದಾಂವಾ'[೧೨೫] ಎನ್ನುತ್ತಾಳೆ. ಅನುಭಾವವನ್ನು ಪ್ರಕಟಿಸುವ ಸಾದೃಶ್ಯದ ರೀತಿಗಳನ್ನು ಇಲ್ಲಿ ನೋಡಬಹುದು. ಅದೇ ತರಹ ಚೆನ್ನಮಲ್ಲಿಕಾರ್ಜುನನ ಇರವನ್ನು ಪ್ರತಿಕ್ಷಣವೂ ಅವಳು ಬಯಸುತ್ತಾಳೆ. ತನ್ನ ಚೆಲುವ ಇಷ್ಟದೈವನನ್ನು ಪ್ರಕೃತಿ ಕಂಡಿದೆಯೆ ಎಂದು ಕೇಳುತ್ತಾಳೆ :

ಚಿಲಿಮಿಲಿ ಎಂದೋದುವ ಗಿಳಿಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
ಸರವರದೊಳಗಾಡುವ ಹಂಸೆಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
ಸರವೆತ್ತಿ ಪಾಡುವ ಕೋಗಿಲೆಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
ಎರಗಿ ಬಂದಾಡುವ ತುಂಬಿಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
ಗಿರಿಗಹ್ವರದೊಳಗಾಡುವ ನವಿಲುಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
ಚೆನ್ನಮಲ್ಲಿಕಾರ್ಜುನದೇವನೆಲ್ಲಿದ್ದಾನೆಂಬದಂ ಬಲ್ಲಡೆ
ನೀವು ಹೇಳಿರೆ![೧೨೬]

* * *

ಅಳಿಸಂಕುಳವೇ ಮಾಮರನೇ, ಬೆಳದಿಂಗಳೇ, ಕೋಗಿಲೆಯೇ
'ನಿಮ್ಮೆಲ್ಲರನು' ಒಂದ ಬೇಡುವೆನು
ಎನ್ನೊಡೆಯ ಚೆನ್ನಮಲ್ಲಿಕಾರ್ಜುನದೇವರ ಕಂಡರೆ ಕರೆದು ತೋರಿರೆ![೧೨೭]

ವನವೆಲ್ಲ ನೀವೆ

ವನದೊಳಗಣ ದೇವತರುವೆಲ್ಲ ನೀವೆ[೧೨೮]

ಚೆನ್ನಮಲ್ಲಿಕಾರ್ಜುನನನ್ನು ಎಲ್ಲೆಂದರಲ್ಲಿ ಹುಡುಕುವ, ಆತ ಪ್ರಕಟಗೊಳ್ಳುವ ಕ್ಷಣಕ್ಕಾಗಿ ಕಾತರದಿಂದ ಕಾಯುವ, ಸ್ವರವೆತ್ತಿ ಹಾಡುವ, ಕಿಚ್ಚಿನಲ್ಲಿ ಬೇಯುವ ಉತ್ಕಟ ಅನುಭವ ಈ ವಚನಗಳಲ್ಲಿ ಮೂಡಿದೆ. ಗಿಳಿ, ಹಂಸ, ಕೋಗಿಲೆ, ತುಂಬಿ,' ನವಿಲು, ಮೋಡ,ಮುಗಿಲು, ಮಾಮರ, ಬೆಳದಿಂಗಳು ಹೀಗೆ ಇಡೀ ನಿಸರ್ಗ ಅವಳ ದನಿಯನ್ನು ಕೇಳುತ್ತಿದೆ. ಸೃಷ್ಟಿಯಲ್ಲಿ ತನ್ನ ಚೆಲುವನ್ನು ಹುಡುಕುತ್ತಿದ್ದಾಳೆ. ಅವನಿಂದಲೆ ಭೂಮಿ ಹಾಗೂ ಚರಾಚರ ವಸ್ತುಗಳು ಚೈತನ್ಯದಿಂದ ನಳನಳಿಸುತ್ತಿವೆಯೆಂದು ಅಕ್ಕ ನಂಬುತ್ತಾಳೆ. ತನ್ನ ಜೀವವೇ ಆಗಿರುವ ಚೆನ್ನಮಲ್ಲಿಕಾರ್ಜುನ ಎಲ್ಲಿದ್ದಾನೆಂದು ನಿಸರ್ಗದಲ್ಲಿ ಆಕೆ ದುಃಖ ತೋಡಿಕೊಳ್ಳುತ್ತಿದ್ದಾಳೆ. ಅವನಿಂದ ಅವಳ ಕಣ್ಣುಗಳ ಬರ ಹಿಂಗಿದ ಸಂತೋಷವನ್ನು, ಕಾಮವನ್ನು ಗೆದ್ದ ಕೃಪೆಯನ್ನು ಅರಹುತ್ತಿದ್ದಾಳೆ. ಇಂತಹ ತೀವ್ರ ಅನುಭೂತಿ ಬೇಂದ್ರೆಯವರ 'ಹುಬ್ಬಳ್ಳಿಯಾಂವಾ' ಕವಿತೆಯ ನಾಯಕಿಯಲ್ಲಿಯೂ ಇದೆ. ತನ್ನ ಗೆಣೆಯ ಎಂದು ಬರುತ್ತಾನೆ, ಯಾವಾಗ ರಮಿಸುತ್ತಾನೆ ಎಂದೆಲ್ಲ ಆಕೆ ವಿಹ್ವಲಗೊಂಡಿದ್ದಾಳೆ:

ಚಹಾದ ಜೋಡಿ ಚೂಡಾಧಾಂಗ ನೀ ನನಗಂದಾಂವಾ
ಚೌಡಿಯಲ್ಲ ನೀ ಚೂಡಾಮಣಿಯಂತ ರಮಿಸಬಂದಾವಾ
ಬೆರಳಿಗುಂಗರಾ ಮೂಗಿನಾಗ ಮೂಗಬಟ್ಟಿಟ್ಟಾಂವಾ
ಕಣ್ಣಿನಾಗಿನ ಗೊಂಬೀ ಹಾಂಗ ಎದ್ಯಾಗ ನಟ್ಟಾಂವಾ॥ ಇನ್ನೂ ಯಾಕ॥[೧೨೯]

ಆಕೆಯ ಕಣ್ಣು, ಹೃದಯ, ಮನಸುಗಳನ್ನು ಸೂರೆಗೊಂಡಿರುವ ಅವನು ಜನ್ಮ ಜನ್ಮಾಂತರಕ್ಕೂ ತನ್ನ ಗೆಳೆಯನಾಗಿ, ಆತ್ಮಸಂಗಾತನಾಗಿ ಇರಬೇಕೆಂದು ಆಕೆ ಬಯಸುತ್ತಾಳೆ. ಅಕ್ಕ ಕಾಡಿನಲ್ಲಿ ಚೆನ್ನಮಲ್ಲಿಕಾರ್ಜುನನನ್ನು ಹುಡುಕಿದಂತೆ, ಈಕೆ ಪಟ್ಟಣದ ಬೀದಿಯಲ್ಲಿ ತನ್ನ ಪ್ರಿಯಕರನಾದ ಶೆಟ್ಟರ ಹುಡುಗನನ್ನು ತನ್ನ ಅಭಿಮಾನವನ್ನು ಬಿಟ್ಟು ಹುಡುಕುತ್ತಿದ್ದಾಳೆ.

ಯಲ್ಲೀ! ಮಲ್ಲಿ! ಪಾರೀ! ತಾರೀ! ನೋಡೀರೇನ್ರವ್ವಾ?
ನಿಂಗೀ! ಸಂಗಿ! ಸಾವಂತರೀ! ಎಲ್ಲಾನ್ಹ ನನ್ನಾಂವಾ?
ಸೆಟ್ಟರ ಹುಡುಗ ಸೆಟಗೊಂಡ್ಹೋದಾ ಅಂತ ನನ್ನ ಜೀವಾ
ಹಾದೀ ಬೀದಿ ಹುಡುಕತ್ತೈತ್ರೆ ಬಿಟ್ಟ ಎಲ್ಲ ಹ್ಯಾಂವಾ॥ ಇನ್ನೂ ಯಾಕ॥[೧೩೦]

ಅಪ್ಪಟ ದೇಸಿ ಕಾವ್ಯ ಪರಿಕರಗಳ ಮೂಲಕ ಉತ್ಕಟ ಪ್ರೇಮಕವಿತೆಯೂ, ದೈವಿಕ ಅರ್ಥವನ್ನು ಆತ್ಮಸಂಗಾತನನ್ನು ಹುಡುಕುವ ಕವಿತೆಯೂ ಆಗಿ ಪರಿಣಮಿಸುವುದು. 'ಹುಬ್ಬಳ್ಳಿಯಾಂವಾ' ಕವಿತೆಯ ವಿಶೇಷವಾಗಿದೆ.

ಬೇಂದ್ರೆಯವರು ವಚನಕಾರರ ಅರ್ಥಸಾಧ್ಯತೆಗಳಿಗೆ ಮಾರುಹೋಗಿದ್ದರೆಂಬುದು, ಆ ಪರಂಪರೆಗೆ ತಮ್ಮನ್ನು ಒಪ್ಪಿಸಿಕೊಂಡಿದ್ದರೆಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ.

'ಮಲ್ಲಿಕಾರ್ಜುನನ ಸಂಬಂಧವನ್ನು ಆಶಿಸುವ ಅಕ್ಕಮಹಾದೇವಿಯ ವಚನಗಳಲ್ಲಿ ಪ್ರೇಮದ ಅನುಭೂತಿಯೆಲ್ಲ ಬಹಳ ಪರಿಣಾಮಕಾರಿಯಾಗಿ ವ್ಯಕ್ತವಾಗುವುದು ಲೈಂಗಿಕ ಪ್ರತಿಮೆಗಳ ಮೂಲಕ ಹೇಳುವ ಸಂದರ್ಭಗಳಲ್ಲಿಯೇ. ಮಲ್ಲಿಕಾರ್ಜುನನೊಡನೆ ತನ್ನ ಅಸ್ತಿತ್ವದ ನೆಲೆಗಳನ್ನು ರೂಪಿಸಿಕೊಳ್ಳುವ ಸ್ವರೂಪಗಳು ಮುಖ್ಯವಾಗಿ ಇವಳಲ್ಲಿ ನಲ್ಲೆ-ನಲ್ಲನ, ಹೆಂಡತಿ-ಗಂಡನ, ರೀತಿಯದ್ದೇ ಆಗಿವೆ'[೧೩೧] ಎಂದು ಹೇಳುವ ಡಾ. ಬಸವರಾಜ ಕಲ್ಗುಡಿ ಅವರು ಲೌಕಿಕದಲ್ಲಿ ಸಾಧ್ಯವಾಗದೆ ಹೋದುದನ್ನು, ಅರ್ಥಪೂರ್ಣವಾಗದೆ ಹೋದ ಸಂಬಂಧವನ್ನು ಅನುಭಾವದ ಹಂಬಲದ ಮೂಲಕ ಅಲೌಕಿಕ ಪ್ರೀತಿಯನ್ನು ಸಾಧಿಸುತ್ತಾಳೆಂದು ಗುರುತಿಸುತ್ತಾರೆ.

ಬಂದೆಹೆನೆಂದು ಬಟ್ಟೆಯ ನೋಡಿ
ಬಾರದಿದ್ದರೆ ಕರಗಿ ಕರಗಿ ಕೊರಗಿದೆನವ್ವಾ
ತಡವಾದರೆ ಬಡವಾದೆ ತಾಯೆ!
ಚೆನ್ನಮಲ್ಲಿಕಾರ್ಜುನ ಒಂದಿರುಳಗಲಿದರೆ
ತೆಕ್ಕೆ ಸಡಿಲಿದ ಜಕ್ಕವಕ್ಕಿಯಂತಾದೆನವ್ವ![೧೩೨]

ಅಕ್ಕಮಹಾದೇವಿಯ ಈ ವಚನ ಅವಳ ಪ್ರೇಮದ ತೀವ್ರತೆಯನ್ನು ಮತ್ತು ಒಂಟಿತನವನ್ನು ಸಹಿಸಲಾಗದ ಸ್ಥಿತಿಯನ್ನು ಹೇಳುತ್ತದೆ. ಕಾಯಾ, ವಾಚಾ, ಮನಸಾ ತನ್ನನ್ನು ಭಗವಂತನಿಗೆ ಅರ್ಪಿಸಿಕೊಳ್ಳುವ; ಆರ್ತವಾದ ಬಯಕೆಯ ಮೂಲಕ ಲೌಕಿಕವನ್ನು ಮೀರುವ; ಪ್ರಪಂಚದ ತಿಳುವಳಿಕೆಯನ್ನು ಅನುಭಾವದ ಅರ್ಥದಲ್ಲಿ ಹುಡುಕುವ ಅಕ್ಕನ ಅಪೇಕ್ಷೆಯನ್ನು ಇಲ್ಲಿ ಗಮನಿಸಬಹುದು.

ತನ್ನನ್ನು ಸುತ್ತುವರೆದಿರುವ ಭೌತಿಕ ಪ್ರಪಂಚದಲ್ಲಿ ರೂಹಿಲ್ಲದ, ಸಾವಿಲ್ಲದ, ಕೇಡಿಲ್ಲದ ಚೆನ್ನಮಲ್ಲಿಕಾರ್ಜುನನನ್ನೇ ಕಾಣುವ ಅಕ್ಕಮಹಾದೇವಿ ಪ್ರಾಕೃತಿಕ ಪ್ರತಿಮೆಗಳ ಮೂಲಕ 'ಹೊಳೆವ ಕೆಂಜೆಡೆಗಳ', 'ಮಣಿಮುಕುಟದ', 'ನಗೆಮೊಗದ', 'ದಿವ್ಯ ಸ್ವರೂಪನ' ಕಂಡು ಆ 'ಸುಲಿಪಲ್ಲ ಗೊರವ'ನ ಕೈ ಹಿಡಿಯುತ್ತಾಳೆ. ಕೈ ಹಿಡಿದು ಕಣ್ಣು ತೆರೆಯುತ್ತಾಳೆ. ಆ 'ಪರಮಗುರು ಚೆನ್ನಮಲ್ಲಿಕಾರ್ಜುನ' ಮರೆಯಾದಾಗ ನೀವು ಕಾಣಿರೇ ನೀವು ಕಾಣಿರೇ ಎಂದು ಗಿಳಿ, ಕೋಗಿಲೆ, ತುಂಬಿ, ಹಂಸ, ನವಿಲುಗಳನ್ನು, ಅಳಿಸಂಕುಲ-ಮಾಮರ-ಬೆಳಗಿಂಗಳನ್ನು ಕೇಳುತ್ತಾಳೆ. ಅವಳ ಪಾಲಿನ ದೈವವನ್ನು ಹುಡುಕುವಲ್ಲಿ ನಿಸರ್ಗ ಅವಳಿಗೆ ಸಹಾಯಹಸ್ತ ಚಾಚುತ್ತದೆ. ತನಗೆ ಪ್ರಿಯವಾಗಿರುವ ಪ್ರಕೃತಿ ಆ ಚೆನ್ನಮಲ್ಲಿಕಾರ್ಜುನನಿಗೂ ಪ್ರಿಯವಾಗಿದೆಯೆಂಬುದು ಅವಳ ನಂಬುಗೆ. ಲೋಕದ ಸಂಬಂಧವಿರಿಸಿಕೊಂಡ ಮೇಲೆ ಲೋಕ ಹೇರುವ ಸ್ತುತಿ-ನಿಂದೆಗಳಿಗೆ ಕೋಪವ ತಾಳದೆ ಸಮಾಧಾನಿಯಾಗಿರಬೇಕು ಎಂಬ ಸತ್ಯವೂ ಮಹಾದೇವಿಯಕ್ಕನಿಗೆ ಗೊತ್ತಿದೆ. ಹಾಗಾಗಿಯೇ ನಿಸರ್ಗದ ಶಬ್ದಗಳನ್ನು ಉಪಯೋಗಿಸಿಕೊಂಡು

ಮನುಷ್ಯನ ಭೀಷಣ ಪ್ರವೃತ್ತಿಗಳನ್ನು ಎದುರಿಸುತ್ತಾಳೆ. ಗುಡ್ಡ-ಬೆಟ್ಟದಲ್ಲಿ ಮನೆಯನ್ನು ಮಾಡಿದ ಮೇಲೆ ಆಕೆಯನ್ನು ಅಂಜಿಸಲು ಬರುವ ಮೃಗಗಳನ್ನು, ಕಡಲ ದಂಡೆಯಲ್ಲಿ ವಾಸಿಸಲು ತೊಡಗಿದಾಗ ತನ್ನೊಳಗೆ ಎಳೆದುಕೊಳ್ಳಲು ಬರುವ ಕಡಲ ತೆರೆಗಳನ್ನು, ಆಕೆಯ ಸ್ಥೈರ್ಯವನ್ನು ಕುಗ್ಗಿಸಲು ನೋಡುವ ಶಬ್ದಗಳನ್ನು ಅಕ್ಕಮಹಾದೇವಿ ಗೆದ್ದು ಬದುಕುತ್ತಾಳೆ.

ತನ್ನ ಗುಹೇಶ್ವರನ ಪೂಜೆಯಲ್ಲಿ ನಿಸರ್ಗ ಹೇಗೆ ಪಾಲ್ಗೊಳ್ಳುತ್ತದೆಯೆಂಬುದನ್ನು ಅಲ್ಲಮಪ್ರಭು 'ಗಗನವೇ ಗುಂಡಿಗೆ, ಆಕಾಶವೇ ಅಗ್ಘವಣಿ, ಚಂದ್ರಸೂರ್ಯರಿಬ್ಬರು ಪುಷ್ಪನೋಡಾ!'[೧೩೩] ಎಂದು ವರ್ಣಿಸಿದಂತೆ ಅಕ್ಕಮಹಾದೇವಿ ಕೂಡ ಚೆನ್ನಮಲ್ಲಿಕಾರ್ಜುನನ ಆರಾಧನೆಗೆ ನಿಸರ್ಗವನ್ನು ಕರೆದು ತರುತ್ತಾಳೆ. ನಿಸರ್ಗಕ್ಕೆ ಅವಳ ಮನಸ್ಸು ಗೊತ್ತಿದೆ. ಅವಳು ಕೂಡ ಚೈತನ್ಯದ ಪೂಜೆಗೆ ಪ್ರಕೃತಿಯನ್ನು ಅಣಿಗೊಳಿಸುತ್ತಾಳೆ.

ದೃಶ್ಯವಾದ ರವಿಯ ಬೆಳಗು, ಆಕಾಶದ ವಿಸ್ತೀರ್ಣ,
ವಾಯುವಿನ ಚಲನೆ, ತರುಗುಲ್ಮ ಲತಾದಿಗಳಲ್ಲಿಯ ತಳಿರುಪುಷ್ಪ
ಪಡುವಣಗಲೆಲ್ಲ ಹಗಲಿನ ಪೂಜೆ!
ಚಂದ್ರಪ್ರಕಾಶ, ನಕ್ಷತ್ರ, ಅಗ್ನಿ,
ವಿದ್ಯುತ್ ಆದಿಗಳು ದೀಪ್ತಿಮಯವೆನಿಸಿಪ್ಪವುಗಳೆಲ್ಲ
ಇರುಳಿನ ಪೂಜೆ;
ಹಗಲಿರುಳು ನಿನ್ನ ಪೂಜೆಯಲ್ಲಿ ಎನ್ನ ಮರೆದಿಪ್ಪೆನಯ್ಯ,
ಚೆನ್ನಮಲ್ಲಿಕಾರ್ಜುನ'[೧೩೪]

ಚಂದ್ರನ ಹಾಲಿನಂತಹ ಪ್ರಕಾಶ, ವಜ್ರದಂತೆ ಮಿನುಗುತ್ತಿರುವ ನಕ್ಷತ್ರದ ಬೆಳಕು, ದಿವ್ಯವೆನಿಸಿರುವ ಅಗ್ನಿ, ಇಂತಹ ಸಂಗತಿಗಳಿಂದ ಇರುಳಿನಲ್ಲಿ ನಡೆಯುತ್ತಿರುವ ಚೈತನ್ಯ ಪ್ರಕಾಶನ ಪೂಜೆ ಅನುಪಮವಾಗಿದೆಯೆಂದು ಅಕ್ಕಮಹಾದೇವಿ ಭಾವಿಸುತ್ತಾಳೆ. ಮುಂಜಾನೆಯ ಸೊಬಗು, ನೀಲಿ ಆಕಾಶದ ವಿಸ್ತಾರ, ಅರಳಿ ನಿಂತ ಹೂಗಳ ವೈವಿಧ್ಯದಿಂದ ಹಗಲು ಒಂದು ರೀತಿಯೆನಿಸಿದರೆ, ರಾತ್ರಿ ಮತ್ತೊಂದು ರೀತಿಯಾಗಿದೆ.

'ಉದಯರವಿಯ ಬೆಳಗು, ಆಕಾಶದ ವಿಸ್ತಾರ, ವಾಯುಗಮನ, ಬನದ ಪುಷ್ಪಗಳು, ಷಡ್ವರ್ಣಗಳು ದೇವರಿಗೆ ಪ್ರಕೃತಿಗೈಯುತ್ತಿರುವ ಹಗಲಿನ ಪೂಜೆ (ಹಗಲು ಮಾಡುತ್ತಿರುವ ಪೂಜೆ). ಹಾಗೆಯೇ ಇರುಳಿನ ಪೂಜೆಯೂ ಇದೆ... ಹೀಗೆ ದೀಪ್ತಿಮಯಗೊಳ್ಳುವುದೇ ಪೂಜೆಯ ಫಲವೆಂದು ನಂಬಿಕೆಯನ್ನು ನೆನಪಿಗೆ ತಂದುಕೊಂಡಾಗ ಪ್ರಕೃತಿ ನಡೆಸುತ್ತಿರುವ ಪೂಜೆ ಕತ್ತಲೆಯ ವಿರುದ್ಧದ ನಿರಂತರ ಪರಿಶ್ರಮವಾದಂತೆಯೂ, ಭಕ್ತರ ಪೂಜೆಗೊಂದು ತೇಜೋಮಯ ಆದರ್ಶದಂತೆಯೂ ಕಾಣುತ್ತದೆ.'[೧೩೫]

ಅಕ್ಕನದು ನೆಲದಿಂದ ನಡೆಯುತ್ತ ಹೋಗುವ ಮುಗಿಲಿನ ಹಾದಿ. ಮುಗಿಲಿನ ಹಾದಿ ಅವಳಿಗೆ ಗೊತ್ತಿದೆ. ಅಲ್ಲಮ ಅದನ್ನು ಅವಳಿಗೆ ತೋರಿಸಿಕೊಟ್ಟಿದ್ದಾರೆ. ಶ್ರೀಶೈಲದ ದಟ್ಟ ಕದಳಿಯೊಳಗಿನ ಬೆಳಕ ಮುಟ್ಟಲು ಅವಳು ತಹತಹಿಸುತ್ತಾಳೆ. ಚೆನ್ನಮಲ್ಲಿಕಾರ್ಜುನನ ಕೈ ಹಿಡಿಯಲು ಪ್ರಕೃತಿಯ ಪ್ರೀತಿಯ ಆಸರೆಯಂತೂ ಅವಳಿಗೆ ಇದ್ದೇ ಇದೆ.

೩.೧೪ ಪುರಂದರದಾಸರು :

ವಚನಸಾಹಿತ್ಯ ಹಾಗೂ ದಾಸ ಸಾಹಿತ್ಯದ ಬಗ್ಗೆ ಬೇಂದ್ರೆಯವರು ವಿಶೇಷವಾದ ಒಲವನ್ನಿರಿಸಿಕೊಂಡಿದ್ದರ ಕುರಿತು ಅವರ ಬರಹಗಳಿಂದಲೆ ತಿಳಿದುಬರುತ್ತದೆ. ವಚನಕಾರರಿಂದ ಹಾಗೂ ಪುರಂದರ -ಕನಕರಿಂದ ಆಗಮಿಕ-ಲೌಕಿಕಗಳನ್ನು ಸಮನ್ವಯಗೊಳಿಸಲು ಅವರು ಪ್ರೇರಣೆಗಳನ್ನು ಪಡೆದರು. ಲೌಕಿಕದ ಸುಖ-ದುಃಖಗಳನ್ನು ಮೀರುವುದಕ್ಕೆ, ಸುತ್ತ ಸುತ್ತಿಕೊಂಡಿರುವ ಮಾಯೆಯನ್ನು ಗೆಲ್ಲುವುದಕ್ಕೆ ಶರಣರು- ದಾಸರು- ಅನುಭಾವಿಕರು ಭಗವಂತನೊಡನೆ ನಡೆಸಿದ ಅನುಸಂಧಾನದ ಬಗ್ಗೆ ಬೇಂದ್ರೆಯವರಿಗೆ ಅಪಾರವಾದ ಆಸಕ್ತಿಯಿತ್ತು. ಅಂತಹ ಹೊಳಹುಗಳನ್ನು ಪಡೆದು ಅವರು ತಮ್ಮ ಕಾವ್ಯಕ್ಕೆ ಆಗಮಿಕದ ಲೇಪ ಕೊಟ್ಟರು. ಭಕ್ತಿ, ಅವಧೂತಪ್ರಜ್ಞೆ, ಆಧ್ಯಾತ್ಮಿಕತೆ, ಅನುಭಾವಗಳ ಶರಣಭಾವದ ಪರಂಪರೆ ವರಕವಿಗೆ ಪಡೆದಷ್ಟೂ ಹೆಚ್ಚಾಗುವ ಕುತೂಹಲದ ತಾಣವಾಗಿತ್ತು.

ಅವರೊಳಗಿನ ಅನುಭೂತಿಯ ಹಸಿವನ್ನು ಅದು ಹಿಂಗಿಸಿತು. ಕನ್ನಡದ ಭಕ್ತಿಕಾವ್ಯ ಪರಂಪರೆಯ ಕರುಣಾಪ್ರಸಾದವನ್ನು ಬೇಂದ್ರೆಯವರು ಪಡೆದುದರ ಪರಿಣಾಮವಾಗಿ ಅವರ ಅನುಭಾವ ಗೀತೆ, ವಾತ್ಸಲ್ಯಗೀತೆ, ಶೋಕಗೀತೆ, ನಿಸರ್ಗಗೀತೆಗಳು ಹೊಚ್ಚ ಹೊಸ ರೀತಿಯಲ್ಲಿ ಪ್ರಪಂಚ -ಪಾರಮಾರ್ಥಗಳನ್ನು ಉಸಿರಾಡುತ್ತ ಪ್ರಕಾಶಿಸಿದವು. ಲೌಕಿಕದ ಕಿಚ್ಚನ್ನು ನುಂಗಿಕೊಂಡು ಚೆನ್ನಮಲ್ಲಿಕಾರ್ಜುನನ್ನು ಆತ್ಮಸಂಗಾತಕ್ಕೆ ಪಡೆಯುವಲ್ಲಿ ತನಗೆ ಕರುಣೆ ತೋರಿದ, ನೆರವಿಗೆ ನಿಂತ ಸಂಗತಿಗಳನ್ನು ಅಕ್ಕಮಹಾದೇವಿ ಒಂದು ವಚನದಲ್ಲಿ ಹೀಗೆ ನೆನೆಯುತ್ತಾಳೆ.:

ಬಸವಣ್ಣನ ಭಕ್ತಿ, ಚೆನ್ನಬಸವಣ್ಣನ ಜ್ಞಾನ
ಮಡಿವಾಳಯ್ಯನ ನಿಷ್ಠೆ, ಪ್ರಭುದೇವರ ಜಂಗಮಸ್ಥಲ
ಅಜಗಣ್ಣನ ಐಕ್ಯಸ್ಥಲ, ನಿಜಗುಣದ ಆರೂಢಸ್ಥಲ,
ಸಿದ್ಧರಾಮಯ್ಯನ ಸಮಾಧಿಸ್ಥಲ-
ಇಂತಿವರ ಕರುಣಪ್ರಸಾದ ಎನಗಾಯಿತ್ತು ಚೆನ್ನಮಲ್ಲಿಕಾರ್ಜುನಯ್ಯ![೫೩]

ಇಂತಹ ಹಲವು ಸಿದ್ಧಿ-ರಸಗಳ ಸಂಗದಿಂದ ಬೇಂದ್ರೆಯವರು ತಮ್ಮ ಕಾವ್ಯಯೋಗದ ಸೋಪಾನಗಳನ್ನು ಕಟ್ಟಿಕೊಂಡರು : 'ಈ ಕಾವ್ಯಯೋಗದಲ್ಲಿ ಅಂತರಂಗ ಸೋಪಾನವನ್ನು ಆನಂದ, ಸ್ಫೂರ್ತಿ, ಪ್ರೀತಿ, ರಸ,

ಸೌಂದರ್ಯವೆಂದೂ; ಬಹಿರಂಗವನ್ನು ದರ್ಶನ, ವರ್ಣನ, ಶಬ್ದ, ಛಂದಸ್ಸು, ಅಲಂಕಾರವೆಂದೂ ರಚಿಸಬೇಕಾಗುವುದು. ಸೌಂದರ್ಯಾನುಭವವೇ ಆನಂದರೂಪವಾಗುವುದು ಒಳಗೆ. ದರ್ಶನವೇ ಅಲಂಕಾರದಲ್ಲಿ ಆಕಾರವನ್ನು ತಳಯುವುದು ಹೊರಗೆ'[೧೩೭] ಲೋಕವ್ಯಾಪಾರ, ಸೃಷ್ಟಿಸೌಂದರ್ಯ, ಅನುಭವಗಳನ್ನು ಕರಗಿಸಿ ಎದೆಯಲ್ಲಿ ಅನುಭೂತಿಯ ಭಂಡಾರವನ್ನು ಬೇಂದ್ರೆಯವರು ತುಂಬಿಕೊಂಡರು. ತಮ್ಮ ದರ್ಶನವನ್ನು, ತಾವು ಹೇಳಬೇಕೆಂದಿರುವುದನ್ನು ಆ ವಸ್ತು ಪಡೆದುಕೊಂಡ ಛಂದೋಪ್ರಕಾರದಲ್ಲಿ ಅಭಿವ್ಯಕ್ತಿಗೊಳಿಸಿದರು.

ಬೇರೆ ಕವಿಗಳ ಕೆಲವು ಸಾಲುಗಳನ್ನು ತಮ್ಮ ಕವಿತೆಯ ಆರಂಭಕ್ಕೆ ಅವತರಣಿಕೆಯಾಗಿ ಬಳಸಿಕೊಂಡು ಬೇಂದ್ರೆಯವರು ತಮ್ಮ ಕವಿತೆಯ ಅರ್ಥ-ವಿಸ್ತಾರಗಳನ್ನು ಹಿಗ್ಗಿಸುವ ಕೆಲವು ಉದಾಹರಣೆಗಳನ್ನು ನಾವು ನೋಡಬಹುದು. ತಮ್ಮ ಮಗ ಭಾಸ್ಕರ ತೀರಿಕೊಂಡಾಗ ಆ ದುಃಖದ ಅನುಭೂತಿಯಲ್ಲಿ ಬರೆದ ಪದ್ಯದ ಹೆಸರು 'ಗಿಳಿಯು ಪಂಜರದೊಳಿಲ್ಲಾ'

ಏನೆಂದು ಕೂಗಲಿ ನಿನ್ನಾ, ಎನ್ನಾ, ಚೆನ್ನಾ ॥ಪ॥
ಮಲಗಿಸಿದೆ ಮೊಲೆಯೂಡೀ, ಜೋಡೀ-
ನಿದ್ದೆ ಹೋದೆನದೇಕೊ ಪಾಪಿಯು
ಎದ್ದು ಕಣ್ದೆರೆವನಿತರೊಳು ನಾ
ಮುದ್ದು ಕಂದಾ । ಮುಚ್ಚಿಬಿಟ್ಟೆಯೊ ಕಣ್ಣಾ -ಏನೆಂದು..[೧೩೮]

ಎಂದು ಆರಂಭವಾಗುವ ಕವಿತೆಯ ಮೊದಲಿಗೆ ಸಂದರ್ಭವನ್ನು ಸೂಚಿಸಿದ್ದಾರೆ. 'ಬೇನೆಯಿಂದ ಬಳಲಿದ ಮಗುವನ್ನು ಮಗ್ಗುಲಲ್ಲಿರಿಸಿ ಒಬ್ಬ ತಾಯಿ ನಿದ್ದೆ ಹೋದಳು. ನಿದ್ದೆ ತಿಳಿದೆದ್ದು ನೋಡುತ್ತಾಳೆ 'ಗಿಳಿಯು ಪಂಜರದೊಳಿಲ್ಲಾ'[೧೩೯] 'ಗಿಳಿಯು ಪಂಜರದೊಳಿಲ್ಲಾ' ಎನ್ನುವ ಪುರಂದರದಾಸರ ಒಂದು ಹಾಡು ಬೇಂದ್ರೆಯವರಿಗೆ ಪ್ರೇರಣೆ ನೀಡಿದೆ.

ಗಿಳಿಯು ಪಂಜರದೊಳಿಲ್ಲಾ ಹರಿಹರಿಯೆ
ಬರಿ ಪಂಜರವಾಯಿತಲ್ಲ।
ಅಕ್ಕ ಕೇಳೆ ಎನ್ನ ಮಾತು
ಚಿಕ್ಕದೊಂದು ಗಿಳಿಯ ಸಾಕಿದೆ
ಅಕ್ಕ ನಾನಿಲ್ಲದ ವೇಳೆ
ಬೆಕ್ಕು ಕೊಂಡು ಹೋಯಿತಯ್ಯೊ ॥ಪ॥[೧೪೦]

ಎಂದು ಪ್ರಾರಂಭವಾಗುವ ಪುರಂದರರ ಪದ್ಯ ಸದ್ದಿಲ್ಲದಂತೆ ಸಾವು ಮನುಷ್ಯನನ್ನು ಆಕ್ರಮಿಸುವ; ಕ್ಷಣದ ಹಿಂದೆ ಇದ್ದ ಜೀವ ಮರುಕ್ಷಣದಲ್ಲಿ ದೇಹವೆಂಬ ಪಂಜರದಿಂದ ಹೊರಟುಹೋಗಿರುವ ಭಯಾನಕ ಹಾಗೂ ವಾಸ್ತವದ ಚಿತ್ರಣ ನೀಡುತ್ತದೆ.

ಸಿಟ್ಟು, ಮದ, ಮತ್ಸರ, ಕಾಮ, ಕ್ರೋಧಗಳನ್ನು ತುಂಬಿಕೊಂಡಿರುವ ದೇಹ ಬಿಟ್ಟು ಹೋಗುವಾಗ ಜೀವವೆಂಬ ಗಿಳಿ ಮುಗಿಲಿಗೆ ಹಾರಿ ಹೋಗುತ್ತದೆ.

ಒಂಬತ್ತು ಬಾಗಿಲ ಮನೆಯೊಳು
ತುಂಬಿದ ಸಂದಣಿ ಇರಲು
ಕಂಬ ಮುರಿದು ಡಿಂಬ ಬಿದ್ದು
ಅಂಬರಕ್ಕೆ ಹಾರಿ ಹೋಯಿತು[೧೪೧]

ಪ್ರೀತಿಯಿಂದ ಸಾಕಿಕೊಂಡಿದ್ದ ಗಿಳಿ ಮರಳಿ ದೇವನ ಮನೆಯ ಅಂಗಳದಲ್ಲಿ ಆಡುತ್ತಿದೆ. ಜೀವಾತ್ಮನ ಅಂಶ ಮತ್ತೆ ಅವನಲ್ಲಿ ಸೇರಿಕೊಳ್ಳುತ್ತದೆ. ಚೈತನ್ಯಸ್ವರೂಪನ ಹತ್ತಿರ ಶಾಂತಿಯಿಂದ ನೆಲೆಸಿದೆ.

ಅಂಗೈಯಲಾಡುವ ಗಿಳಿ
ಮುಂಗೈ ಮೇಲಣ ಗಿಳಿ
ರಂಗಪುರಂದರ ವಿಠಲನ್ನ
ಅಂಗಣದೊಳಾಡುವ ಗಿಳಿ[೧೪೨]

ಪುರಂದರದಾಸರ ಹಾಗೂ ಬೇಂದ್ರೆಯವರ ಪದ್ಯದ ಭಾವ ಒಂದೆ ಎನಿಸುವಂತಿದ್ದರೂ ಬೇಂದ್ರೆಯವರಲ್ಲಿ ಲೌಕಿಕದ ದಟ್ಟ ಛಾಯೆಯಿದೆ. ಮಗುವನ್ನು ಕಳೆದುಕೊಂಡ ತಾಯಿಯ ದುಃಖ ಕರುಳು ಹಿಂಡುತ್ತದೆ. ಆಕೆಯದು ಬರಿ ಕರುಳಲ್ಲ-ಕರುಳಮಲ್ಲಿಗೆ. ಹಾಲಗಂಗೆಗೆ ಕಣ್ಣೀರು ಕೂಡಿ ನೋವಿನ ಮಡುವು ಆಳವಾಗುತ್ತದೆ. ಕೊನೆಗೆ ಕರುಣಾಸಂಪನ್ನನ ನಾಟಕಕ್ಕೆ ಸುಮ್ಮನಾಗುತ್ತಾಳೆ.

ಪುರಂದರದಾಸರ ಪಲ್ಲವಿಯನ್ನು ಬಳಸಿಕೊಂಡು ಮನುಷ್ಯ ಅಮರವೆಂದು ಭಾವಿಸುವ ಬದುಕು ಕ್ಷಣ ಮಾತ್ರದಲ್ಲಿ ಹೊರಟುಹೋಗುತ್ತದೆಯೆಂದು ಬೇಂದ್ರೆ ತಿಳಿಸುತ್ತಾರೆ. 'ಸಾವು ಒಂದು ಪವಾಡದಂತೆ. ಇದ್ದದ್ದು ಇಲ್ಲವಾಗುತ್ತದೆ. ಬೆಲ್ಲ ಬೇವಾಗುತ್ತದೆ. ಸಕ್ಕರೆ ವಿಷವಾಗುತ್ತದೆ. ಜೀವ ದೇಹಕ್ಕೆ ಹೇಳುವುದು ಸಾವಿನ ಈ ಸತ್ಯವನ್ನು. ಅಂದಣದ ಐಶ್ವರ್ಯ, ಬಂಧುಬಳಗ, ಮಂದಗಮನೆಯರು ಇವೆಲ್ಲ ಇದ್ದು ಇಲ್ಲದಂತಾಗುವುದು ಸಾವಿನಿಂದ'[೧೪೩]. ಇದರ ಅರ್ಥವನ್ನು ತಿಳಿಯುವುದು ಭಕ್ತಿಯಿಂದ ಪುರಂದರ ವಿಠ್ಠಲನನ್ನು ನೆನೆದಾಗ ಅಥವಾ ಅನುಭಾವಿಗಳ ಸಂಗದಿಂದ ತನು-ಮನಗಳನ್ನು ಶುದ್ಧ ಮಾಡಿಕೊಂಡಾಗ ಇಲ್ಲವೆ ಚೆನ್ನಮಲ್ಲಿಕಾರ್ಜುನನ ಪೂಜೆಯಲ್ಲಿ ಮೈಮರೆತಾಗ ಇಲ್ಲವೆ ಮದ ಅಳಿದು ನಿಜ ಉಳಿಯಲೆಂದು ಕೂಡಲಸಂಗಮದೇವನ ಕರುಣೆ ಬೇಡಿದಾಗಯೆಂದು ಹಿಂದಿನ ಕವಿಗಳು ಹೇಳಿದರು. ಅಂತಹ ಅರ್ಥ ಈ ಕವಿತೆಗೂ ಬರುತ್ತದೆ. ಅಂದರೆ ಪರಂಪರೆಯನ್ನು ಜೋಡಿಸುವ, ಅರ್ಥೈಸುವ, ಸಾದೃಶ್ಯ-ವೈದೃಶ್ಯ ಬಿಂಬಿಸುವ ರೀತಿ ಇದಾಗಿದೆ. ಅಮೃತದ ತುತ್ತಾಗಿದ್ದ ಮಗ ಈಗ ಹೆಣವಾಗಿ ಮಲಗಿದ್ದಾನೆ. ಬೇಂದ್ರೆ ಹೇಳುತ್ತಾರೆ;

ನನ್ನ ಅಮೃತದ ತುತ್ತೂ, ಬಿತ್ತೂ
ಎಷ್ಟು ಸಲ ಮುದ್ದಿಟ್ಟರೂ ಅ-
ಷ್ಟಷ್ಟು ಸಲ ಇನ್ನಿಷ್ಟು ಎನಿಸಿತು
ಕಷ್ಟವಯ್ಯೋ! ಅದೆ ಹುಳುಗಳ ಅನ್ನಾ - ಏನೆಂದು...[೧೪೪]

ಕೃಷ್ಣನ ಲೀಲೆಗಳನ್ನು, ತಾಯಿಯ ವಾತ್ಸಲ್ಯವನ್ನು ಪುರಂದರದಾಸರಂತೆ ವರ್ಣಿಸಿದವರು ವಿರಳ. ಬಾಲಕೃಷ್ಣನ ಚೇಷ್ಟೆ, ತುಂಟಾಟ ಜಗತ್ತನ್ನು ಬೆರಗುಗೊಳಿಸುತ್ತವೆ. ಬೆಳೆಯುತ್ತಿರುವ ಹುಡುಗ ಕೃಷ್ಣ ತಾಯಿಗೆ ಮಗನಾಗಿದ್ದರೂ ಧೈರ್ಯವಂತ ಹುಡುಗಿಯರು ಅವನ ಪ್ರೀತಿಗೆ ಮರುಳಾಗಿ ಅವನ ಹಿಂದೆ ತಿರುಗುತ್ತಿದ್ದಾರೆ. ಕೆಲವರು ದೊರಕದ ವಸ್ತು ದೊರಕುವದೆಂಬಂತೆ ಕೃಷ್ಣ ಮನೆಯಿಂದ ಹೊರಗೆ ಬರುವುದನ್ನೇ ಕಾಯುತ್ತಿದ್ದಾರೆ.

ಪೋಗದಿರಲೊ ರಂಗ ಬಾಗಿಲಿಂದಾಚೆಗೆ ॥ಪ॥
ಭಾಗವತರು ಕಂಡರೆತ್ತಿಕೊಂಡೊಯ್ವರೊ॥ ಅ॥
ಸುರಮುನಿಗಳು ತಮ್ಮ ಹೃದಯಗಹ್ವರದಲ್ಲಿ ।
ಪರಮಾತ್ಮನ ಕಾಣದರಸುವರೊ ॥
ದೊರಕದ ವಸ್ತುವಿಂದು ದೊರಕಿತು ತಮಗೆಂದು ।
ಹರುಷದಿಂದಲಿ ನಿನ್ನ ಕರದೆತ್ತಿಕೊಂಬರು ।।[೧೪೫]
ಮುಂಗಯ್ಯ ವಾಕು ಬೆರಳೊಳಿನ್ನುಂಗುರ ॥
ರಳುಂಗಿಪ ಉಡಿಗೆಜ್ಜೆ ಉಡಿದಾರವ ಕಂಡು ।
ಅಂಗನೆಯರು ನಿನ್ನನೊಯ್ವರೊ।।[೧೪೬]

ಬೇಂದ್ರೆಯವರ 'ಚೆಲುವ' ಎನ್ನುವ ಪದ್ಯ ಮುದ್ದಾದ ಕೃಷ್ಣನನ್ನು ಹೊಗಳುತ್ತಿರುವ ತಾಯಿಯ ವಾತ್ಸಲ್ಯಗೀತವಾಗಿದ್ದರೂ ಕಾಮಣ್ಣನಂತೆ ಚೆಲುವಿನಿಂದ ಕಂಗೊಳಿಸುತ್ತಿರುವ ಕೃಷ್ಣ ನಲ್ಲೆಯರ ಕಣ್ಣನ್ನು ಸೆರೆಹಿಡಿದು ತನ್ನ ಹರವಾದ ಎದೆಯಲ್ಲಿ ಇಡುವ ತರುಣಾವಸ್ಥೆಯಲ್ಲಿ ತಿರುಗುತ್ತಿದ್ದಾನೆ.

ಕಂಡವರ ಕಣ್ಣನ್ನ
ಸೋತಾಗ ಸೆರೆಹಿಡಿದು
ಇಡುವಂಥ ಎದೆ ಹರವಾ
ನೋಡವ್ವಾ
ನೋಡವ್ವಾ ನನ್ನ ಗೆಣತಿ
ಮೂಲೆಗೂಸು ಇರುವಾಗಿನ

ಕಾಮಣ್ಣನೊಲು ಕಾಣುವಾ

ಯಾರವ್ವಾ ಇವ ಚೆಲುವಾ

ತನ್ನ ಷ್ಪಕ್ಕs

ತಾನs ನೋಡಿ ನಲಿವಾ[೧೪೭]

ತನ್ನನ್ನು ವಿಷಯರಹಿತನನ್ನಾಗಿ ಮಾಡೆಂದು ಭಗವಂತನಲ್ಲಿ ಬಸವಣ್ಣ ಕೇಳಿಕೊಳ್ಳುವಂತೆ ಪುರಂದರದಾಸರಲ್ಲಿಯೂ ಆ ಭಾವದ ಪದ್ಯಗಳಿವೆ.

ವಿಷಯ ರಹಿತನ ಮಾಡಿ, ಭಕ್ತಿರಸವ ದಣಿಯೆ ಮೇಯಿಸಿ,

ಸುಬುದ್ಧಿಯೆಂಬುದಕವನೆರೆದು, ನೋಡಿ ಸಲಹಯ್ಯ

ಕೂಡಲಸಂಗಮದೇವಾ[೧೪೮]

ಎಂದು ಬಸವಣ್ಣನವರು ವಿಷಯದ ಹಸುರಿನಿಂದ ದೂರವಿಡದಂತೆ ಭಗವಂತನನ್ನು ಕೇಳಿಕೊಳ್ಳುವ ರೀತಿಯಲ್ಲಿಯೆ ಪುರಂದರದಾಸರು ಕಾಮಕ್ರೋಧಗಳನ್ನು ತ್ಯಜಿಸಿ ವಿನಯವೆಂಬ ಸದ್ಗುಣವನ್ನು ಬಿತ್ತಿ ಬೆಳೆಯಲು ಇಚ್ಛಿಸುತ್ತಾರೆ.

ವಿಷಯದ ವಿಚಾರ ಬಿಡು ವಿಹಿತಕರ್ಮವ ಮಾಡು ।

ವೈರಾಗ್ಯಭಾಗ್ಯ ಬೇಡು ॥

ವಿಷವೆಂದು ಕಾಮಕ್ರೋಧಗಳೆಲ್ಲ ನೀಡಾಡು ।

ಮಸಣ ಮನವೇ ಮಾಧವನ್ನ ಕೊಂಡಾಡು ॥[೧೪೯]

ಭಗವಂತನನ್ನು ತಲುಪಲು ಭಕ್ತಿ ಮುಖ್ಯವಾಗಿದ್ದರೂ ಡಂಭಾಚಾರದ ಭಕ್ತಿಯನ್ನು ಪುರಂದರದಾಸರು ಹೀಗಳೆಯುತ್ತಾರೆ. ವಂಚನೆಯ ಪೂಜೆಯಿಂದ ಮನುಷ್ಯ ತನಗೆ ತಾನೆ ಮೋಸ ಮಾಡಿಕೊಂಡಂತೆಂದು ಅವರ ಅಭಿಪ್ರಾಯವಾಗಿದೆ.

ಉದಯ ಕಾಲದಲೆದ್ದು ಗದಗದ ನಡುಗತ ।

ನದಿಯಲಿ ಮಿಂದೆನೆಂದು ಹಿಗ್ಗುತಲಿ ॥

ಮದ ಮತ್ಸರ ಕ್ರೋಧ ಒಳಗೆ ತುಂಬಿಟ್ಟುಕೊಂಡು ।

ಬದಿಯಲ್ಲಿದ್ದವರಿಗಾಶ್ಚರ್ಯದ ತೋರುವು-ದುದರ ॥[೧೫೦]

ಲೌಕಿಕದ ತೊಳಲಾಟವಿಲ್ಲದೆ ಅನುಭಾವವಿಲ್ಲ ಎಂಬುದು ಶರಣರ, ದಾಸರ, ಸಂತರ ವಿಷಯದಲ್ಲಿಯೂ ನಿಜವಾಗಿರುವುದನ್ನು ಬೇಂದ್ರೆಯವರು ಹೇಳುತ್ತಾರೆ. ಪುರಂದರದಾಸರ ಉದಾಹರಣೆಯನ್ನೇ ಅವರು ನೀಡುತ್ತಾರೆ.

'ಶ್ರೀನಿವಾಸ ನಾಯಕರೂ ಮುಕ್ತಿ ಮುಹೂರ್ತ ಬರುವವರೆಗೆ ಸಾಕಷ್ಟು ತೊಳಲಾಡಿದ್ದರು, ಬಳಲಾಡಿದ್ದರು. ನಾರದನಿಗೇ ಬವಣೆ ತಪ್ಪಿರಲಿಲ್ಲ ಎಂದು ಪುರಾಣಾಂತರಗಳಲ್ಲಿ ಹೇಳಿರುವಾಗ ನಾರದಾಂಶರಿಗೆ ಈ ಗತಿ ಬರಬೇಕೇ ಎಂದು ಕೇಳಲೇಬೇಕಾಗಿಲ್ಲ. ಹೊನ್ನು-ಹಣ್ಣು-ಮಣ್ಣುಗಳ ಕೊಕ್ಕಿಗೆ ಸಿಕ್ಕ ಈ ಲೋಭಿಯ ತ್ರಿಪುರಗಳನ್ನು ದಾರಣ ಮಾಡಿದನು ವಿಠ್ಠಲ. ವ್ಯಾಸರಾಯರು ಮಾಡಿದ ಕಾರ್ಯಕ್ಕಿಂತ ದಾಸರಾಯರು ಮಾಡಿದ ಕಾರ್ಯ ವ್ಯಾಪಕವೆಂಬುದು ಅಪಂಡಿತರಿಗೂ ತಿಳಿದೀತು; ಪಂಡಿತರಿಗಂತೂ ತಿಳಿದಿದ್ದಿದೆ.. ವ್ಯಾಸರಾಯರು ಉಪನಿಷತ್ತುಗಳಿಗೆ ಭಾಷ್ಯ ಬರೆದರು; ಪುರಂದರದಾಸರ ಕೃತಿ-ಉಪನಿಷತ್ತುಗಳೆ ಸೈ, ಎಂಬ ಬಣ್ಣನೆ ವ್ಯಾಸರಾಯರದು.'[೧೫೧]

ಗುರುಗಳಾದ ವ್ಯಾಸರಾಯರಿಗಿಂತ ಪುರಂದರ-ಕನಕರ ಸೃಷ್ಟಿ-ದೃಷ್ಟಿ ವ್ಯಾಪಕವಾದದ್ದು ಎಂಬ ಅಭಿಪ್ರಾಯ ಬೇಂದ್ರೆಯವರದ್ದು. ಹರಿಭಕ್ತಿ ಚಳವಳಿಯಿಂದ ಸಮಾಜಕ್ಕೆ ಚಿಕಿತ್ಸೆ ಹಾಗೂ ವ್ಯಕ್ತಿಯ ಮೌಲ್ಯಗಳ ವಿಕಾಸವನ್ನು ಅವರು ಸಾಧಿಸಲು ಯತ್ನಿಸಿದರು. ಭಾರತೀಯ ಪುರಾಣ -ಇತಿಹಾಸ-ಸ್ಮೃತಿಗಳಿಗೆ ಸಂಬಂಧ ಸ್ಥಾಪಿಸಿಕೊಳ್ಳುವ ಬಗೆಯನ್ನು ಕಲಿತುಕೊಳ್ಳಲು ಪುರಂದರದಾಸರ ಕೃತಿಗಳು ಬೇಂದ್ರೆಯವರಿಗೆ ಪ್ರೇರಣೆ ನೀಡಿರುವ ಉದಾಹರಣೆಗಳಿವೆ. ಕೀರ್ತನೆಗಳ ನಾದಮಯತೆ ಹಾಗೂ ಸಂಗೀತ ಕ್ಷೇತ್ರಕ್ಕೆ ಅವು ನೀಡಿರುವ ಕೊಡುಗೆಯು ಸಹ ಮಹತ್ವದ್ದಾಗಿದೆ. ಪುರಂದರರು ಬರೆದಿರುವ ಸುಳಾದಿಗಳು, ಉಗಾಭೋಗಗಳು ಕೂಡ ಅವರ ಕೀರ್ತನೆಗಳಂತೆ ಭಕ್ತಿಯ ರಸದಿಂದ ತುಂಬಿತುಳುಕುತ್ತಿವೆ. 'ದಾಸಭಾವ-ದಾಸ್ಯಭಾವ ಇಲ್ಲದೆ ಗತಿ ಇಲ್ಲ. ಇದರ ಅರಿವು ಅವರ ದಯದಿಂದ ನಮ್ಮ ಹೃದಯದಲ್ಲಿ ಉದಯವಾಗಲಿ'[೧೫೨] ಬೇಂದ್ರೆಯವರ ಈ ಮಾತು ಮನುಷ್ಯನಲ್ಲಿನ ಅಭಾವವನ್ನು ನೀಗಿಸಿಕೊಂಡು ವಿನಯವಂತಿಕೆ ಹಾಗೂ ಶರಣ ಭಾವವನ್ನು ಪ್ರಕಟಿಸುವದಾಗಿದೆ. ಕನಕದಾಸರ ಇಂತಹ ದಟ್ಟ ಪ್ರಭಾವಕ್ಕೂ ಕೂಡ ಬೇಂದ್ರೆಯವರು ಒಳಗಾದರು.

೩.೧೫ ಕನಕದಾಸರು :

ಹರಿದಾಸ ಆಂದೋಲನದ ಒಬ್ಬ ಪ್ರಮುಖ ಹಾಗೂ ವಿಶಿಷ್ಟ ಕವಿಯಾಗಿ ಕನಕದಾಸರು ಭಕ್ತಿಕಾವ್ಯಕ್ಕೆ ಸಮೃದ್ಧಿಯನ್ನು ತಂದುಕೊಟ್ಟಿದ್ದಾರೆ. ತಮ್ಮ ಕಾವ್ಯ ಹಾಗೂ ಕೀರ್ತನೆಗಳ ಮೂಲಕ ದಾಸಪಂಥ ಕಾವ್ಯದಲ್ಲಿ ಉದಾರತೆ, ಸಮಾನತೆ ಹಾಗೂ ವ್ಯಕ್ತಿ ವಿಶಿಷ್ಟ ಮೌಲ್ಯಗಳನ್ನು ಬಿಂಬಿಸುವ ಮೂಲಕ ಸಾಮಾಜಿಕ ಸಾಮರಸ್ಯ ಹಾಗೂ ನ್ಯಾಯವನ್ನು ಪ್ರತಿಪಾದಿಸಿದ್ದಾರೆ. ಮನುಷ್ಯನು ಸೃಷ್ಟಿಸಿರುವ ಕುಲಗಳ ನಡುವೆ ಅಂತರಗಳಿಲ್ಲ; ಮೇಲು-ಕೀಳು ಎಂಬ ಭೇದ-ಭಾವವಿಲ್ಲ; ವ್ಯಕ್ತಿ-ವ್ಯಕ್ತಿಗಳ ನಡುವೆ ತಾರತಮ್ಯವಿಲ್ಲ ಎಂದು ಬೋಧಿಸುತ್ತಲೆ ಕೃಷ್ಣನ ಭಕ್ತಿಯಲ್ಲಿ ಮುಳುಗಿಸುವ ಆನಂದದಿಂದ ಲೌಕಿಕವನ್ನು ಮರೆತುಬಿಡುವ ಅನುಭಾವವು ಕೂಡ ಕನಕದಾಸರಲ್ಲಿ ಕಾಣಿಸಿಕೊಳ್ಳುತ್ತದೆ.

'ಕನಕ' ಎಂಬ ಹೆಸರು ಬಂದಿರುವುದರ ಹಿಂದೆ ಸ್ವಾರಸ್ಯಕರವಾದ ಕಥೆಯಿದೆ. ಕೊಪ್ಪರಿಗೆಯ ತುಂಬ ಬಂಗಾರ ಸಿಕ್ಕು, ಕೇಶವನ ಗುಡಿಯೊಂದನ್ನು ಕಟ್ಟಿಸಿ, ನಾಯಕನಾಗಿ ಊರನ್ನು ಆಳಿ ಕೊನೆಗೆ ಒಂದು ಯುದ್ಧದಲ್ಲಿ

ಗಾಯಗೊಂಡು ಭಗವಂತನ ದಯೆ ಮತ್ತು ಅನುಗ್ರಹವನ್ನು ಅರಸಿ ವಿಜಯನಗರದ ವ್ಯಾಸರಾಯ ಸ್ವಾಮಿಗಳ ಶಿಷ್ಯರಾದರೆಂಬ ಐತಿಹ್ಯವಿದೆ. ಅವರು ವ್ಯಾಸರಾಯರ ಹತ್ತಿರ ಪಾರಮಾರ್ಥಿಕದ ವಿದ್ಯಾಭ್ಯಾಸ ಮಾಡುತ್ತಿರುವಾಗ ಸಂಭವಿಸಿದವೆನ್ನಲಾಗುವ ಕೆಲವು ದಂತಕಥೆಗಳು ಕೂಡ ಅವರು ಪಡೆದುಕೊಂಡ ದೈವಿಕ ಅನುಭೂತಿಯನ್ನು ವಿವರಿಸುತ್ತದೆ. ಒಂದು ಸಲ ಗುರುಗಳು ಶಿಷ್ಯರಿಗೆ ಬಾಳೆಹಣ್ಣು ಕೊಟ್ಟು ಯಾರೂ ಇರದ ಜಾಗೆಯಲ್ಲಿ ತಿಂದು ಬನ್ನಿ ಎಂದು ಹೇಳಿದಾಗ ಕನಕದಾಸರು ಜಗತ್ತಿನ ಎಲ್ಲ ಕಡೆಯೂ ದೇವರು ಹಾಜರಿರುವಾಗ, ದೇವರು ಸರ್ವಾಂತರ್ಯಾಮಿ ಇರುವಾಗ ಅವನನ್ನು ತಪ್ಪಿಸಿ ಬಾಳೆಹಣ್ಣು ತಿನ್ನುವುದು ಅಸಾಧ್ಯವೆಂದು ಮರಳಿ ಗುರುಗಳಿಗೆ ಹಣ್ಣು ಕೊಟ್ಟರು. ಇದನ್ನು ಮೆಚ್ಚಿಕೊಂಡ ವ್ಯಾಸರಾಯರು ಈ ಶಿಷ್ಯರಲ್ಲಿ ಅಪಾರ ವಾತ್ಸಲ್ಯ ಪ್ರಕಟಿಸಿದರು. ಅದೂ ಅಲ್ಲದೆ ಗುರುಗಳೊಮ್ಮೆ ಸ್ವರ್ಗಕ್ಕೆ ಯಾರು ಮೊದಲು ಹೋಗಬಲ್ಲರು ಎಂದಿದ್ದಕ್ಕೆ ಕನಕರು ನಾನು ಹೋದರೆ ಹೋದೇನು ಎನ್ನುವ ಚಮತ್ಕಾರ ಉತ್ತರದಿಂದ ಸಂತುಷ್ಟರಾದ ಕಥೆಯೂ ಪ್ರಚಲಿತವಾಗಿದೆ. ಈ ಕಥೆಗಳು ಸತ್ಯವೋ, ಮಿಥ್ಯವೋ ಎನ್ನುವುದಕ್ಕಿಂತ ಇವು ಹೇಳುವ ತತ್ವಗಳು ಮುಖ್ಯವಾಗಿ ತೋರುತ್ತವೆ. ಸತ್ಯವೋ, ಮಿಥ್ಯವೋ ಎನ್ನುವದಕ್ಕಿಂತ ಇವು ಹೇಳುವ ತತ್ವಗಳು ಮುಖ್ಯವಾಗಿ ತೋರುತ್ತವೆ.

ಮಾಯೆಯನ್ನು ಗೆಲ್ಲುವುದು ಸರಳ ಸಂಗತಿಯಲ್ಲ, ಅದರ ಅರಿವು ಕನಕದಾಸರಿಗಿದೆ. 'ಜಗವ ಸುತ್ತಿರುವುದು ನಿನ್ನ ಮಾಯೆ'[೧೫೩] ಎಂದ ಬಸವಣ್ಣ; 'ನೀನೊಡ್ಡಿದ ಮಾಯೆಯನಾರೂ ಗೆಲಲಾರರು'[೧೫೪] ಎಂದ ಅಕ್ಕಮಹಾದೇವಿ ಮಾಯೆಯ ಅನಂತ ರೂಪಗಳನ್ನು ಹೇಳಿದ್ದಾರೆ. ಲೌಕಿಕವೂ ಕೂಡ ಶಿವನು ಒಡ್ಡುವ ಮಾಯೆಯಾದುದರಿಂದ ;

ನೀ ಮಾಯೆಯೊಳಗೋ ನಿನ್ನೊಳು ಮಾಯೆಯೊ
ಬಯಲೊಳಗೆ ಆಲಯವೊ ಆಲಯದೊಳಗೆ ಬಯಲೋ
ಬಯಲು ಆಲಯವೆರಡು ನಯನದೊಳಗೊ
ನಯನ ಬುದ್ಧಿಯ ಒಳಗೊ ಬುದ್ಧಿ ನಯನದ ಒಳಗೊ
ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೆ[೧೫೫]

ಎಂದು ಕನಕದಾಸರು ಕೇಳುವಲ್ಲಿ ಲೌಕಿಕ-ಅಲೌಕಿಕ ಪ್ರಪಂಚಗಳು ಸೇರಿಕೊಂಡಿರುವ ವಿಸ್ಮಯವಿದೆ. ಬಯಲು ಆಲಯದಲ್ಲಿ, ಆಲಯವು ಬಯಲಿನಲ್ಲಿ ನಿಂತಿರುವುದನ್ನು ನಮಗೆ ತೋರಿಸುತ್ತ ಬಯಲಲ್ಲಿ ರೂಪ ನಿರ್ಮಿಸುವ ಕಲೆಗಾರಿಕೆ ಮತ್ತು ರೂಪದಲ್ಲಿ ಪರಮಾತ್ಮನ ಸ್ವರೂಪ ಕಾಣುವ ಅರಿವನ್ನು ಅವರು ದೊರಕಿಸಿದರು.

ಭಕ್ತಿಸಾರ ಕನಕದಾಸರ ಕೃತಿಗಳ ಮೂಲವಾಗಿದೆ. ಸಮಾಜವನ್ನು ತಿದ್ದುವ ಅಭಿಲಾಷೆ, ದೇಸಿಯತೆಯ ಒಲವು ಹಾಗೂ ಅಭಿವ್ಯಕ್ತಿಯ ಹೊಸತನಗಳಿಂದ ಭಕ್ತಿಕಾವ್ಯದ ಹೊಸ ಅಡಿಪಾಯಕ್ಕೆ ಅವರು ಕಾರಣರಾದರು. 'ಅವರಲ್ಲಿ ಕೇವಲ ಸುಶಿಕ್ಷಿತ ಸಮಾಜದ ಭಾಷೆ ಮಾತ್ರವಲ್ಲ, ಅವರು ಹುಟ್ಟಿ ಬೆಳೆದು ಬಂದ ಅಶಿಕ್ಷಿತ ಸಮಾಜದ ಭಾಷೆಯೂ ಯಥಾವತ್ತಾಗಿ ಬಂದಿದೆ. 'ದೇವೀ ನಮ್ಮ ದ್ಯಾವರು ಬಂದರು. ಬನ್ನಿರೇ ನೋಡ ಬನ್ನಿರೆ', 'ಆತನೊಲಿದ ಮ್ಯಾಲೆ ಯಾತರ ಕುಲವಯ್ಯ' ಎನ್ನುವಂಥ ಅಭಿವ್ಯಕ್ತಿಗಳು ಇದಕ್ಕೆ ನಿದರ್ಶನ.'[೧೫೬]

ಭಾಷೆಯ ಸರಳತೆ, ಲಾಲಿತ್ಯ, ದೇಶೀ ಪ್ರತಿಮೆ-ರೂಪಕಗಳು ಕನಕದಾಸರ ಕಾವ್ಯವನ್ನು ವಿಶಿಷ್ಟವಾಗಿರಿಸಿದವು. ಕೀರ್ತನೆ, ಷಟ್ಪದಿ, ಸಾಂಗತ್ಯಗಳನ್ನು ಬರೆಯುವ ಮೂಲಕ ವಿವಿಧ ಛಂದೋಪ್ರಕಾರಗಳನ್ನು ತಮ್ಮ ಅಭಿವ್ಯಕ್ತಿಗೆ ದುಡಿಕೊಂಡರು. 'ರಾಮಧಾನ್ಯ ಚರಿತ್ರೆ', 'ನಳಚರಿತ್ರೆ', 'ಮೋಹನ ತರಂಗಿಣಿ' ಮುಂತಾದ ಕೃತಿಗಳು ಲೋಕದ ಸಂಗತಿ ಹಾಗೂ ಅಲ್ಲಲ್ಲಿ ಭಕ್ತಿಯು ತುಡಿತಕ್ಕೆ ಧ್ವನಿಯಾಗುತ್ತವೆ. ಕನಕರನ್ನು ಹರಿದಾಸರ ಸಾಲಿನಲ್ಲಿ ನಿಲ್ಲಿಸುವ ಕೃತಿಯೆಂದರೆ 'ಹರಿಭಕ್ತಿಸಾರ'. ದೇವರಿಗೆ ಶರಣಾದರೆ ಪ್ರತಿಯೊಂದು ಘಳಿಗೆಯಲ್ಲಿಯೂ ನಮ್ಮನ್ನು ರಕ್ಷಿಸುತ್ತಾನೆ ಎನ್ನುವ ಭಾವದಿಂದ ಅದು ತುಂಬಿಕೊಂಡಿದೆ. ''ದೇವ ರಕ್ಷಿಸು ನಮ್ಮನನವರತ' ಎಂದು ಕಡೆಯಾಗುವ ಒಂದೊಂದು ಪದ್ಯದಲ್ಲೂ ಕನಕದಾಸರ ಭಕ್ತಹೃದಯದ ಮೊರೆ ಅತ್ಯಂತ ಸಹಜವಾಗಿ, ಕರುಣಾಪೂರ್ಣವಾಗಿ ಕಿವಿಗೆ ಬೀಳುತ್ತದೆ. ಅದು ತನ್ನ ಕಳಕಳಿಯಿಂದ ಹರಿಹರನ ಪಂಪಾಶತಕ, ರಕ್ಷಾಶತಕಗಳ ನೆನಪನ್ನು ತರುತ್ತದೆ. ಹರಿಭಕ್ತಿಸಾರದ ನಿರರ್ಗಳವಾದ ಓಟ, ಅದರಲ್ಲಿ ವ್ಯಕ್ತವಾಗಿರುವ ಜೀವದ ಅನಿತ್ಯತಾಭಾವ, ಅನನ್ಯ ಶರಣಾಗತಿ ಅತ್ಯಂತ ಹೃದಯಸ್ಪರ್ಶಿಯಾಗಿದೆ.''[೧೫೭]

ಭಕ್ತಿಪಂಥದ ಲಕ್ಷಣವಾದ ದೈವಕ್ಕೆ ದಾಸನಾಗುವ, ಶರಣಾಗುವ, ಸಮರ್ಪಿಸಿಕೊಳ್ಳುವ ಗುಣಲಕ್ಷಣ ಹಾಗೂ ಆ ಪಾರಮಾರ್ಥಿಕ ಹಾದಿಯಲ್ಲಿ ಇರುವ ಅಡೆ-ತಡೆಗಳನ್ನು ಮೀರುವ ದಿಟ್ಟತನ ಕನಕದಾಸರಲ್ಲಿಯೂ ಕಂಡುಬರುತ್ತವೆ. ಕೇಶವನನ್ನು ಮನಮುಟ್ಟಿ ಅನುಭಾವಿಸಬೇಕು ಎಂಬ ತೀವ್ರ ಹಂಬಲದ ನಡುವೆಯೂ ಬದುಕಿನ ಲೋಕ ವ್ಯಾಪಾರವನ್ನು ಅವರು ಕಡೆಗಣಿಸುವದಿಲ್ಲ. ಲೌಕಿಕದ ಮೆಟ್ಟಿಲಿಂದಲೆ ದೇವಸ್ಥಾನಕ್ಕೆ ಹತ್ತಿ ಹೋಗಬೇಕೆಂಬುವರ ಅರಿವು ಅವರಿಗಿರುವದರಿಂದ ಎರಡೂ ಭಾವಪ್ರಪಂಚ ಸಮ್ಮಿಲನವಾಗಲು ಸಾಧ್ಯವಾಗುತ್ತದೆ.

ಎಲ್ಲಾರು ಮಾಡುವುದು ಹೊಟ್ಟೆಗಾಗಿ
ಗೇಣು ಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ ॥ಪ॥
ವೇದಶಾಸ್ತ್ರ ಪಂಚಾಂಗ ಓದಿಕೊಂಡು ಪರರಿಗೆ
ಬೋಧನೆಯ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ॥[೧೫೮]

ಹೊಟ್ಟೆಬಟ್ಟೆಯ-ಸಂತೆಯ ನಂತರ ಮುಕ್ತ, ಆನಂದ, ಅಂತರಾತ್ಮನ ಕಡೆ ಮನಸ್ಸು ಚಲಿಸುತ್ತದೆ.

ಉನ್ನತ ಕಾಗಿಲನೆಲೆಯಾದಿ ಕೇಶವನ ಧ್ಯಾನವನ್ನು
ಮನಮುಟ್ಟಿ ಮಾಡುವುದು ಮುಕ್ತಿಗಾಗಿ ಆನಂದಕ್ಕಾಗಿ[೧೫೯]

ಪುರಂದರದಾಸರ ಪ್ರಭಾವ ಅವರ ಕೀರ್ತನೆಗಳಲ್ಲಿ ಕಾಣಿಸಿಕೊಂಡರೆ ಕುಮಾರವ್ಯಾಸನು ಷಟ್ಪದಿ ರಚನೆಗಳಿಗೆ ಪ್ರೇರಕನಾಗಿದ್ದ. 'ಪುರಂದರದಾಸನಿಗೆ ಸಮತೂಕನಾದವನೂ ಸ್ವತಂತ್ರ ಕಾಂತಿಯುಳ್ಳವನೂ ಆಗಿ ಕನಕದಾಸನು ಅದೇ ಕಾಲದಲ್ಲಿ ಜೀವಿಸಿದನು'[೧೬೦] ಎಂದು ರಂ. ಶ್ರೀ. ಮುಗಳಿ ಕನಕದಾಸರ ವಿದ್ವತ್ತು ಪ್ರತಿಭೆಗಳನ್ನು ಕೊಂಡಾಡುತ್ತಾರೆ. ಕನಕದಾಸರಲ್ಲಿ ಕಂಡುಬರುವ ದಿಟ್ಟತನ, ಪ್ರತಿಭೆ, ಜಿಜ್ಞಾಸೆ, ಕಲ್ಪಕತೆಗಳು ಅವರನ್ನು ಒಬ್ಬ

ವಿಶಿಷ್ಟ ಭಕ್ತಿಕವಿಯನ್ನಾಗಿ ಮಾಡಿವೆಯೆಂದು ಜಿ.ಎಸ್.ಶಿವರುದ್ರಪ್ಪ ಅವರು ಗುರುತಿಸಿರುವುದು ಅನನ್ಯವಾಗಿದೆ: 'ಪುರಂದರದಾಸರ ಕೀರ್ತನೆಗಳ ಸಂಖ್ಯೆಗೆ ಹೋಲಿಸಿದರೆ ಕನಕದಾಸರ ಕೀರ್ತನೆಗಳು ಹೆಚ್ಚೇನೂ ಇಲ್ಲ; ಆದರೆ ಕನಕದಾಸರ ಕೀರ್ತನೆಗಳ ಸತ್ವವನ್ನು ಗಮನಿಸಿದರೆ, ಅವು ಪುರಂದರದಾಸರ ಕೀರ್ತನೆಗಳ ಸತ್ವದೊಂದಿಗೆ ಸಮಸ್ಪರ್ಧಿಯಾಗಬಲ್ಲವು. ಹಾಗೆ ನೋಡಿದರೆ ಪುರಂದರದಾಸರ ಕೀರ್ತನೆಗಳಿಗಿಂತ ಕನಕದಾಸರ ಕೀರ್ತನೆಗಳಲ್ಲಿ ಕಾವ್ಯಗುಣ ಒಂದು ಕೈ ಮಿಗಿಲಾಗಿಯೇ ಇರುವಂತೆ ತೋರುತ್ತದೆ. ಅದಕ್ಕೆ ಕಾರಣ ಕನಕದಾಸರು ಪ್ರಧಾನತಃ ಕವಿಗಳು ಎನ್ನುವುದೇ ಆಗಿದೆ.'[೧೬೧] ಶಿವರುದ್ರಪ್ಪನವರ ಮಾತುಗಳನ್ನು ಇಲ್ಲಿ ಉಲ್ಲೇಖಿಸುವ ಉದ್ದೇಶವೇನೆಂದರೆ ಶ್ರೇಷ್ಠ ಕವಿಯೊಬ್ಬನ ಭಕ್ತಿಯು ಅನುಪಮ ಕಾವ್ಯ ಹಾಗೂ ಚಿಂತನೆಗಳಿಂದ ಅಮರಕಾವ್ಯದ ಗುಣ ಹೊಂದಿರುತ್ತದೆ ಎಂಬುದನ್ನು ಹೇಳುವದಾಗಿದೆ.

'ಕನಕದಾಸರು ದಾಸಪಂಥದ ಕೀರ್ತನಕಾರರು ಮಾತ್ರವಲ್ಲ' ಎಲ್ಲ ಮತೀಯ ಬಂಧನಗಳಿಂದ ಪಾರಾಗಿ, ಸಾಮಾಜಿಕ ಕಟ್ಟುನಿಟ್ಟುಗಳಿಂದ ಮುಕ್ತರಾಗಿ ಆಧ್ಯಾತ್ಮ ಸಿದ್ಧಿಯ ಶಿಖರವನ್ನೇರಿದ ವಿಶ್ವಬಂಧು, ಸಂತಕವಿಗಳು'[೧೬೨] ಎಂದು ದೇ.ಜ.ಗೌ. ಅವರು ಕನಕದಾಸರ ಕವಿತ್ವ ಹಾಗೂ ಅನುಭಾವದ ಸಿದ್ಧಿಯನ್ನು ಗುರುತಿಸುತ್ತಾರೆ.

ಕನಕದಾಸರು ಭಕ್ತಕವಿಯಾಗಿ ಆಧ್ಯಾತ್ಮದಲ್ಲಿ ಅಪಾರ ಸಾಧನೆಯನ್ನು ಮಾಡಿದುದರಿಂದ ಸಹಜವಾಗಿಯೇ ಬೇಂದ್ರೆಯವರಿಗೆ ಅವರು ಅಚ್ಚುಮೆಚ್ಚಿನವರಾದರು. ಬೇಂದ್ರೆಯವರಿಗೆ ಬಸವಣ್ಣ, ಅಲ್ಲಮ, ಅಕ್ಕರಂತೆ, ಲಕ್ಷೀಶ-ಸರ್ವಜ್ಞರಂತೆ ಕನಕದಾಸರು ಕೂಡ ಭಕ್ತಿ ಕಾವ್ಯ ಪರಂಪರೆಯ ಒಬ್ಬ ಮುಖ್ಯ ಪ್ರೇರಕವಾಗಿ ಪರಿಣಮಿಸಿದರು. ಬೇಂದ್ರೆಯವರು ಅವರ ಛಂದೋ ರೂಪಗಳನ್ನು ಮೆಚ್ಚಿಕೊಂಡರು. ಬರೀ ಭಕ್ತಿಗಾಗಿ ಕಾವ್ಯ ರಚಿಸಲಿಲ್ಲ ಎಂಬುದು ಅವರಿಗೆ ಗೊತ್ತಿತ್ತು: 'ಮೋಹನತರಂಗಿಣಿ'ಯಲ್ಲಿ ಸಾಂಗತ್ಯದ ನುಡಿಗೆ ಹೊಸ ಛಂದವನ್ನು ತಂದವರು. 'ರಾಮಧಾನ್ಯ ಚರಿತೆ'ಯ ವಾದ-ವಿವಾದಕ್ಕೆ ಚೋದ್ಯದ ಒಪ್ಪ ಹಾಕಿದವರು. ತಮ್ಮ ಪದ್ಯಗಳು ಕೀರ್ತನೆ ಎಂಬ ಮಾಮೂಲಿನ ಪಡಿಯಚ್ಚಿಗೆ ಸೇರಿಸಿಬಿಟ್ಟಿಲ್ಲ. ಕನಕದಾಸರು ವಿಷಯ ಆರಿಸುವಲ್ಲಿ, ವಿಚಾರ ಹೇಳುವಲ್ಲಿ ವಹಿಸಿದ ಸ್ವಾತಂತ್ರ್ಯವೇ ಅವರ ಛಂದೋಜಾತಿಯಲ್ಲಿಯೂ ತನ್ನದೇ ಮಾರ್ಗವನ್ನು ಮಾಡಿಕೊಂಡಿದೆ.'[೧೬೩] ಬೌದ್ಧಿಕ ಬೆಳವಣಿಗೆ ಕನಕದಾಸರಿಗೆ ಮುಖ್ಯವಾಗಿತ್ತು ಎನ್ನುವುದನ್ನು ಬೇಂದ್ರೆಯವರು ಹೇಳುತ್ತಾರೆ. ಅಂತಹ ಬೌದ್ಧಿಕತೆ ಹಾಗೂ ಆಧ್ಯಾತ್ಮಿಕತೆಗಳನ್ನು ಸರಳವಾದ ಭಾಷೆಯಲ್ಲಿ ಹೊರಹೊಮ್ಮಿಸುವ ಮೂಲಕ ಕಾವ್ಯ ಸರಳವೂ, ಲಾಲಿತ್ಯಪೂರ್ಣವೂ ಆಗಿರುವಂತೆ ನೋಡಿಕೊಂಡರು.

ದೇವರು ನಮ್ಮ ದ್ಯಾವರು ಬಂದರು ಬನ್ನಿರೆ ನೋಡಬನ್ನಿರೆ ॥ಪ॥
ದೊಡ್ಡ ಮಡುವಿನೊಳಗೆ । ನಮರಂಗ
ಗುಡ್ಡವ ಹೊತ್ತುಕೊಂಡು ನಿಂತಾನ್ಯಾ
ಗುಡ್ಡವ ಹೊತ್ತುಕೊಂಡು ನಿಂತು ಸುರರನು
ದೊಡ್ಡವರನ್ನು ಮಾಡ್ಯಾನ್ಯಾ[೧೬೪]

ಭಗವಂತನ ಕರುಣೆಯನ್ನು ಕೊಂಡಾಡುವ 'ಹರಿಭಕ್ತಸಾರ' ಕೃತಿ ಜ್ಞಾನದ ದೀಪದಿಂದ ಹೃದಯವನ್ನು ಬೆಳಗಿಸಿಕೊಳ್ಳಬೇಕು ಎನ್ನುವ ಸಂದೇಶ ನೀಡುತ್ತದೆ. ಬೀಜ ಮೊದಲೋ, ಮರ ಮೊದಲೋ ಎಂಬ ಪ್ರಶ್ನೆಗೆ ಯಾರೂ ಉತ್ತರ ನೀಡಲಾಗುವುದಿಲ್ಲ. ದೇವನ ಲೀಲೆ ನಮ್ಮಲ್ಲಿ ಬೆರಗು ಹುಟ್ಟಿಸುತ್ತದೆ ಎಂದು ಹೇಳುತ್ತಾರೆ.

ಬೀಜವೃಕ್ಷದೊಳಾಯ್ತು ವೃಕ್ಷಕೆ
ಬೀಜವ್ಯಾರಿಂದಾಯ್ತು ಲೋಕದಿ
ಬೀಜವೃಕ್ಷನ್ಯಾಯವಿದ ಭೇದಿಸುವರ್‍ಯಾರಿನ್ನು
ಸೋಜಿಗವ ನೀ ಬಲ್ಲೆ ನಿನ್ನೊಳು
ರಾಜಿಸುತ ಮೊಳೆದೋರುವುದು ಸುರ
ರಾಜನಂದನನಮಿತ ರಕ್ಷಿಸು ನಮ್ಮನನವರತ[೧೬೫]

ಸೃಷ್ಟಿಯ ವಿಸ್ಮಯವನ್ನು ಹೇಳುತ್ತ ದೈವಿಕ ಅನುಭವದ ಪರಿಚಯವನ್ನು ಮಾಡುವ ಇಂತಹ ಕಾವ್ಯ ಕನ್ನಡದ ಭಕ್ತಿ ಪರಂಪರೆಯ ಕಾವ್ಯವನ್ನು ಮತ್ತಷ್ಟು ಸಮೃದ್ಧಗೊಳಿಸಿತು. ಸಾಮಾನ್ಯವೆನಿಸುವ ಲೋಕದ ಸಂಗತಿಗಳಲ್ಲಿ ಅಸಾಮಾನ್ಯವಾದದ್ದನ್ನು ಅವರು ಎತ್ತಿ ತೋರಿಸಿದರು. ಸಹೃದಯರ ಕಣ್ಣು ತೆರೆಸುವ ಕೆಲಸವನ್ನು ದಾಸರು ಮಾಡಿದರು. 'ಅಂದಂದಿನ ಅನುಭವಕ್ಕೆ ಮಾತು ಸಲೀಸಾಗಿ ಒದಗಿ ಬಂದಿದೆ. ಸುತ್ತಣ ಜನದ ಆಡುಮಾತನ್ನು ಎತ್ತಿ ತಮ್ಮ ಹಾಡಿಗೆ ಜೋಡಿಸಿದರು. ಶಿವಶರಣರ ವಚನಕಾರರು ಮಾಡಿದ್ದು ಹೀಗೆಯೇ, ದಾಸರು ಮಾಡಿದ್ದು ಹಾಗೆಯೇ. ಶರಣರ ವಚನಗಳು ಮಾತನ್ನು ಆಡಿದ ಹಾಗಿದ್ದರೆ, ದಾಸರ ಪದಗಳು ಮಾತನ್ನು ಹಾಡಿದ ಹಾಗಿವೆ. ಈ ಮಾತಗಳಲ್ಲಿ ಚಿತ್ರಕ ಶಕ್ತಿಯಿದೆ;ಜೀವಂತವಾದ, ಪ್ರಾಮಾಣಿಕವಾದ ಅನುಭವವಿದೆ. ಈ ಸಾಹಿತ್ಯದ ಇನ್ನೊಂದು ಮುಖ ವ್ಯಕ್ತಿನಿಷ್ಠ ಅನುಭವಗಳ ಅನುಭಾವ ದರ್ಶನಗಳ ಆತ್ಮಕಥನವನ್ನು ಕುರಿತದ್ದು.'[೧೬೬]

ಆಧ್ಯಾತ್ಮದ ಹಾದಿಯಲ್ಲಿ ಅವರು ಕಂಡುಕೊಂಡ ಅನುಭವಗಳ ಕಥನಗಳಾಗಿ ಪರಿಣಮಿಸಿ ಓದುಗರ, ಶ್ರೋತೃಗಳ ದೃಷ್ಟಿಕೋನವನ್ನು ಬದಲಾಯಿಸುವ ಕಾವ್ಯಶಕ್ತಿ ಇವುಗಳಿಗಿದೆ. ಶರಣರ- ದಾಸರ ಆಡುಮಾತು, ವೈಚಾರಿಕ ಮನೋಭಾವ, ಛಂದೋಪ್ರಕಾರದ ವೈವಿಧ್ಯತೆಗಳಿಂದ ಬೇಂದ್ರೆಯವರು ಸಾಕಷ್ಟು ಪ್ರಭಾವಗೊಂಡರು. ಸಂಪೂರ್ಣವೆನಿಸುವಂಥ ಒಂದು ದರ್ಶನ, ಉತ್ಕಟವಾದ ಅಭಿವ್ಯಕ್ತಿ ಎರಡೂ ಶರಣರಲ್ಲಿ- ದಾಸರಲ್ಲಿ- ಅವಧೂತರಲ್ಲಿ ಕಂಡುಕೊಳ್ಳಲು ಸಾಧ್ಯವೆಂದು ಬೇಂದ್ರೆಯವರು ನಂಬಿದ್ದರು. 'ವಿಶಾಲತರವಾದ, ಉನ್ನತವಾದ, ಆಳವಾದ, ಪ್ರಪೂರ್ಣವಾದ ದರ್ಶನವು ಮತ್ತೆ ಬೇಕಾಗಿದೆ. ಸೂಕ್ಷ್ಮವಾದ, ಹೃದಯಂಗಮವಾದ, ಬಲದಾಯಕವಾದ, ಪ್ರಾಣಪೂರಿತವಾದ ವರ್ಣನಾಪದ್ಧತಿಯು ಅಳವಡಬೇಕಾಗಿದೆ. ತನ್ನರಿವು ತನದಾಗಬೇಕಾಗಿದೆ. ಕರ್ಣಾಟಕರಿಗೆ, ಭೂವೈಕುಂಠ, ಭೂಕೈಲಾಸ ಎಂದು ಹಾಡಿ ಹರಸಿದ ದಾಸರ, ಶರಣರ ಮಾತೇ ದಿಟವಾಗಬೇಕು.'[೧೬೭] 'ಕನ್ನಡ ಕಾವ್ಯಕ್ಕೆ ಏನು ಬೇಕು, ಎಂಥ ಅನುಭೂತಿಯನ್ನು ಅದು ಓದುಗರಿಗೆ ದೊರಕಿಸಬೇಕು? ಪ್ರಾಣವನ್ನೇ ಕೊಡುತ್ತಿದ್ದೇನೆಂಬ

ಉತ್ಕಟ ಅಭಿವ್ಯಕ್ತಿ ಸಾಧ್ಯವೇ? ಎಂಬೆಲ್ಲ ಪ್ರಶ್ನೆಗಳಿಗೆ ತಾವೆ ಉತ್ತರ ಕೊಡುವಂತೆ ಬೇಂದ್ರೆಯವರು ಕಾವ್ಯ ನಿರ್ಮಿತಿಗೈದರು. ಅಂತಹ ಕೆಚ್ಚು, ರೋಷ, ಹುರುಪು, ಉಮೇದು, ಶಕ್ತಿ, ಸ್ಫೂರ್ತಿಗಳನ್ನು ಅವರು ಹಿಂದಿನ ಕನ್ನಡ ಕಾವ್ಯ ಪರಂಪರೆಯಿಂದ ಪಡೆದರು. ಕನಕದಾಸರ ಹಾಗೂ ಭಕ್ತಿ ಸಾಹಿತ್ಯದ ಪ್ರೇರಣೆಯ ಕುರಿತು ಕೀರ್ತಿನಾಥ ಕುರ್ತಕೋಟಿಯವರು ಹೇಳಿದ ಮಾತೊಂದನ್ನು ಇಲ್ಲಿ ಉದಾಹರಿಸುವುದು ಉಪಯುಕ್ತವೆನಿಸುತ್ತದೆ: 'ಕನ್ನಡ ಕಾವ್ಯ ಪರಂಪರೆಯೊಂದಿಗೆ ಬೇಂದ್ರೆಯವರ ಸಂಬಧದ ಮಾತು ಬಂದಾಗಲೆಲ್ಲ ಅವರ 'ಕನಕ' ಎಂಬ ಕವಿತೆ ನೆನಪಾಗುತ್ತದೆ. ... ಕನಕದಾಸರ ಭಕ್ತಿಪಂಥ, ದೇವರ ಜೊತೆಗೆ ಅವರ ಸಂಬಂಧ ಇವುಗಳ ಬಗ್ಗೆ ಬರೆದ ಈ ಕವಿತೆ ಒಂದು ದೃಷ್ಟಿಯಿಂದ ಕನಕದಾಸರ ಸ್ಮಾರಕ ಕಾವ್ಯವಾಗಿದೆ. ಒಬ್ಬ ಆಧುನಿಕ ಕವಿಯ ಶ್ರದ್ಧಾಂಜಲಿಯೂ ಆಗಿದೆ. ಕವಿತೆಯ ಕೊನೆಯಲ್ಲಿಯ ಒಂದು ಮಾತು ಕವಿತೆಯ ವಸ್ತುವಿಗೆ ಹೊಸ ತಿರುವನ್ನು ಕೊಟ್ಟಿದೆ. ''ಲಕ್ಷ್ಮೀಶ ಸರ್ವಜ್ಞರೊಡನೆ ನಿನ್ನ ಭಣಿತಿ ಭಂಗಿ । ಅಂಬಿಕಾತನಯ ತೊಟ್ಟಿರುವ ಅಂಗಿ.'' ಈ ಹೇಳಿಕೆಯ ಅರ್ಥ ಸ್ಪಷ್ಟವಾಗಿದೆ. ಬೇಂದ್ರೆಯವರು ಮನಸಾರೆ ಒಪ್ಪಿರುವ, ಸಾಧ್ಯವಿದ್ದರೆ ಅನುಸರಿಸುವ ಕವಿ ಎಂದರೆ ಕನಕ. ಬೇಂದ್ರೆಯವರು ಲಕ್ಷ್ಮೀಶ, ಸರ್ವಜ್ಞ ಮತ್ತು ಕನಕದಾಸರ ಪರಂಪರೆಗೆ ಸೇರಿದ ಕವಿ.'[೧೬೮]

ಲೋಕದ ಮತ್ತು ಲೋಕವನ್ನು ಮೀರಿದ ಅನುಭೂತಿ ಹಾಗೂ ಪ್ರಾಣದ ಕೆಚ್ಚು ತುಂಬಿರುವ ಅಭಿವ್ಯಕ್ತಿ ಬೇಂದ್ರೆಯವರಿಗೆ ಇಷ್ಟವಾಗಿದ್ದವು. ಅದನ್ನವರು ಬಸವಣ್ಣನಲ್ಲಿ, ಪ್ರಭುವಿನಲ್ಲಿ, ಮಹಾದೇವಿಯಕ್ಕನಲ್ಲಿ, ಕುಮಾರವ್ಯಾಸನಲ್ಲಿ, ಲಕ್ಷ್ಮೀಶ-ಸರ್ವಜ್ಞರಲ್ಲಿ, ಕನಕ-ಶರೀಫರಲ್ಲಿ, ನಿಜಗುಣ ಶಿವಯೋಗಿಗಳಲ್ಲಿ ಕಂಡರು. ಅಂತಹ ಪರಂಪರೆಗೆ ಸೇರಬೇಕೆಂದು ಅವರು ಮನಸ್ಸು ಮಾಡಿದ್ದರಿಂದಲೇ ಜನಪದದ ಆಡುಮಾತು, ಲಾಲಿತ್ಯಪೂರ್ಣ ಭಾಷೆ, ಮಾರ್ಗದೇಸಿಗಳ ಸಮನ್ವಯ, ಭಕ್ತಿಮಾರ್ಗದ ಎಳೆ, ಅನುಭಾವದ ಛಾಯೆ ಅವರಲ್ಲಿ ಸೇರಿಕೊಂಡವು. ಪಂಪನಿಂದ ಪ್ರಾರಂಭ ಮಾಡಿ ಆಧುನಿಕ ಕಾಲದ ಎಲ್ಲ ಪ್ರಭಾವಗಳನ್ನು ಅರಗಿಸಿಕೊಂಡು ತಮ್ಮದೆ ವಿಶಿಷ್ಟ ಕಾಣ್ಕೆಯನ್ನು ಅವರು ಕನ್ನಡ ಕಾವ್ಯಕ್ಕೆ ಸಲ್ಲಿಸಲಿಕ್ಕೆ ಇದರಿಂದ ಸಾಧ್ಯವಾಯಿತು.

೩.೧೬ ನಿಜಗುಣ ಶಿವಯೋಗಿಗಳು :

ಬೇಂದ್ರೆಯವರನ್ನು ಕಾಡಿದ, ಅವರ ಮೇಲೆ ಪ್ರಭಾವ ಬೀರಿದ ಹಾಗೂ ತನ್ನ ಅನುಭಾವದ ಸೆಳಕುಗಳಿಂದ ಅವರನ್ನು ತೋಯಿಸಿದ ಕನ್ನಡದ ಭಕ್ತಿ ಪರಂಪರೆಯ ಮತ್ತೊಬ್ಬ ಪ್ರಮುಖ ಕವಿಯೆಂದರೆ ೧೫ನೇ ಶತಮಾನದ ನಿಜಗುಣ ಶಿವಯೋಗಿಗಳು. ಪುರಂದರದಾಸರ, ಕನಕದಾಸರ ಕೀರ್ತನೆಗಳಂತೆ ನಿಜಗುಣ ಶಿವಯೋಗಿಗಳ ಗೀತೆಗಳು ಕೂಡ ಸಹೃದಯನಿಗೆ ಅಲೌಕಿಕ ಜಗತ್ತಿನ ಅನುಭವವನ್ನು ನೀಡುತ್ತವೆ. ವಿಜಯನಗರದ ಉತ್ಕರ್ಷ ಕಾಲದಲ್ಲಿ ದಾಸಸಾಹಿತ್ಯದಂತೆ ಶರಣ ಸಾಹಿತ್ಯ ಕೂಡ ವೈವಿಧ್ಯಪೂರ್ಣವಾಗಿ ಬೆಳೆದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿತು. ಹನ್ನೆರಡನೆಯ ಶತಮಾನದಲ್ಲಿ ಕ್ರಾಂತಿಕಾರಿ ವಚನ ಚಳುವಳಿ ಸಮಾಜವನ್ನು ಹಾಗೂ ಸಮಾಜದ ಆತ್ಮವನ್ನು ಬದಲಾಯಿಸಿತು. ಅಲ್ಲಮ, ಬಸವಣ್ಣ, ದೇವರ ದಾಸಿಮಯ್ಯ, ಸಿದ್ಧರಾಮ, ಅಕ್ಕಮಹಾದೇವಿ, ಮಾದಾರ ಚೆನ್ನಯ್ಯ

ಮುಂತಾದ ಶರಣರ ದಾರ್ಶನಿಕತೆಯ-ಅನುಭಾವದ ಫಲವಾಗಿ ದಕ್ಕಿದ್ದ ಸಮೃದ್ಧ ವಚನ ಸಾಹಿತ್ಯವು ಕಾಲದ ಪ್ರವಾಹದಲ್ಲಿ ಅಲ್ಲಲ್ಲಿ ಹಂಚಿಹೋಗಿತ್ತು. ಅದನ್ನು ಸಂಗ್ರಹಿಸಿ ಅನುಪಮವಾಗಿದ್ದ ವಚನ ಸಾಹಿತ್ಯ ಕೃಷಿಯನ್ನು ಮತ್ತೆ ಹೊಂದಿಸುವುದು, ಸಂರಕ್ಷಿಸುವುದು ಒಂದು ಸವಾಲಿನ ಕೆಲಸವಾಗಿತ್ತು. ವಿಜಯನಗರ ಅರಸರ ಪ್ರೌಢದೇವರಾಯನ ಆಳ್ವಿಕೆಯ ಕಾಲದಲ್ಲಿ ನೂರೊಂದು ವಿರಕ್ತರು ಆಗಿಹೋದರೆಂದು ಹಾಗೂ ಅವರೆ ಈ ವಚನ ಸಾಹಿತ್ಯದ ಸಂರಕ್ಷಣೆಯ ಕಾರ್ಯ ಮಾಡಿದರೆಂದು ತಿಳಿದುಬಂದಿದೆ. ಜಕ್ಕಣಾರ್ಯ, ಮಹಾಲಿಂಗದೇವ, ಕಲ್ಮಠದ ಪ್ರಭುದೇವ, ಗುಬ್ಬಿಯ ಮಲ್ಲಣ್ಣ, ಗೂಳೂರು ಸಿದ್ಧವೀರಣ್ಣಾಚಾರ್ಯ ಮುಂತಾದವರು ಅಂತಹವರಲ್ಲಿ ಪ್ರಮುಖರಾಗಿದ್ದಾರೆ. ಕಲ್ಮಠದ ಪ್ರಭುದೇವ 'ಲಿಂಗಲೀಲಾವಿಲಾಸ ಚಾರಿತ್ರ', ಗುಬ್ಬಿ ಮಲ್ಲಣ್ಣನ 'ಗಣಭಾಷ್ಯರತ್ನಮಾಲೆ', ಗೂಳೂರು ಸಿದ್ಧವೀರಣ್ಣಾಚಾರ್ಯನ 'ಶೂನ್ಯಸಂಪಾದನೆ' ಶ್ರೇಷ್ಠ ಸಂಕಲನ ಗ್ರಂಥಗಳಾಗಿ ಸಾರ್ವಕಾಲಿಕ ಮಹತ್ವ ಪಡೆದಿವೆ.

ನಿಜಗುಣ ಶಿವಯೋಗಿಗಳು ಈ ನೂರೊಂದು ವಿರಕ್ತರ ಕಾಲಕ್ಕೆ ಇದ್ದವರೆಂದು ಸಾಹಿತ್ಯ ಚರಿತ್ರೆಯ ಗ್ರಂಥಗಳಲ್ಲಿ ದಾಖಲಾಗಿದೆ. ಪುರಂದರ-ಕನಕರು ಲೌಕಿಕ ಜೀವನದ ಮೇಲು ಸ್ತರದಲ್ಲಿ ಸುಖ ಅನುಭವಿಸುತ್ತ ಇದ್ದವರು ವೈರಾಗ್ಯ ತಾಳಿ ಪಾರಮಾರ್ಥಿಕ ದಾರಿಗೆ ಬಂದಂತೆ ನಿಜಗುಣ ಶಿವಯೋಗಿಗಳು ಕೂಡ ರಾಜನ ಪದವಿಯನ್ನು ಬಿಟ್ಟು ಸಾಮಾನ್ಯನ ಜೀವನ ನಡೆಸಿ ಅಸಾಮಾನ್ಯನಾದವರು. ಕೊಳ್ಳೆಗಾಲ ಪಟ್ಟಣದ ಅರಸೊತ್ತಿಗೆಯನ್ನು ತ್ಯಜಿಸಿ ಮೋಕ್ಷವನ್ನು ಬಯಸುವವರಾಗಿ ಅನುಭಾವದಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡರೆಂದು ತಿಳಿದುಬರುತ್ತದೆ. ಕರ್ನಾಟಕದ ಪೂರ್ವದ ಅಂಚಿನಲ್ಲಿರುವ ಶಂಭುಲಿಂಗನ ಗುಡ್ಡದಲ್ಲಿ ಗವಿಯನ್ನು ಸೇರಿ ಹಲವಾರು ವರ್ಷ ತಪಸ್ಸು ಮಾಡುತ್ತ ಆತ್ಮಸಾಧನೆಯನ್ನು ಸಾಧಿಸಿದರು ಎಂಬುದಾಗಿ ಅವರನ್ನು ಕುರಿತ ಹಲವು ಕಥೆಗಳು ಪ್ರಚಲಿತದಲ್ಲಿವೆ. ಆದರೆ ಮುಖ್ಯವಾಗಿ ದೊಡ್ಡ ಪದವಿಯಲ್ಲಿದ್ದ ಅವರು ಅದನ್ನು ಯಕಶ್ಚಿತ್‌ವೆಂದು ಭಾವಿಸಿ ಶರಣಾಗತಿಯ, ದೇವರ ದಾಸನಾಗುವ ಕಾಯಕ ಆರಿಸಿಕೊಂಡದ್ದು ಮಾತ್ರ ಐತಿಹಾಸಿಕ ಸತ್ಯವಾಗಿದೆ. ನಿಜಗುಣರ 'ವಿವೇಕ ಚಿಂತಾಮಣಿ', 'ಕೈವಲ್ಯ ಪದ್ಧತಿ' ಮುಂತಾದ ಗ್ರಂಥಗಳು ವೀರಶೈವ ಧರ್ಮದ ತಾತ್ವಿಕ ತಳಹದಿಯನ್ನು ಮತ್ತಷ್ಟು ಗಟ್ಟಿಗೊಳಿಸಿದರು. ಮತಧರ್ಮಗಳಲ್ಲಿ ಭೇದವೆಣಿಸದೆ ವೈಶಾಲ್ಯತೆಯ ಸ್ವರೂಪ ಕೊಟ್ಟರು.

ನಿಜಗುಣರು ಬರೀ ತಾತ್ವಿಕತೆಯಲ್ಲಿ ನಂಬಿಕೆಯಿಡಲಿಲ್ಲ. ಅನುಭಾವದಂತಹ ಧರ್ಮದ ರೀತಿ-ರಿವಾಜು ತಿಳಿಸುವಂತಹ ವಸ್ತು ಕಾವ್ಯವಾಗಿ ಆಕರ್ಷಿಸುವುದು ಬಹಳ ಕಷ್ಟದ ಮಾತು. ಆದರೆ ನಿಜಗುಣ ಶಿವಯೋಗಿಗಳು ಅದನ್ನು ಸಾಧಿಸಿದರು. ಅವರ ವೈಚಾರಿಕತೆ ಶ್ರೇಷ್ಠ ಕಾವ್ಯವಾಗಿ ಹೊರಹೊಮ್ಮುತ್ತದೆ. ಹಾಗಾಗಿಯೆ ಬೇಂದ್ರೆಯವರು ನಿಜಗುಣರ ಕಾವ್ಯಕ್ಕೆ ಬಲುಬೇಗನೆ ಆಕರ್ಷಿತರಾದರು. 'ಶ್ರೀ ನಿಜಗುಣ ಶಿವಯೋಗಿಗಳು ಅನೇಕ ಕೃತಿಗಳನ್ನು ಪ್ರಕಟಿಸಿದ್ದರೂ, ಅವರಲ್ಲಿ ಗ್ರಂಥ ಕರ್ತೃತ್ವದ ಅಹಂಭಾವವಿಲ್ಲ. ವಿವೇಕ ಚಿಂತಾಮಣಿಯನ್ನು ರಚಿಸುವ ಉದಾತ್ತ ಸಂಗ್ರಾಹಕ ದೃಷ್ಟಿ ಅವರದು. ಅವರ ಮತವು ಅವರ ಹಾಡಿನ ಶ್ರುತಿಯಾದರೂ, ಅವರ ಜೀವನವೇ ಅವರ ನಿಜವಾದ

ಹಾಡು. ತ್ರಿಗುಣಗಳನ್ನು ಮೀರಿರಬಲ್ಲುದೆ ನಿಜಗುಣ. ಇದು ಮೊದಲ ಮಾತು. ಈ ನಿಜಗುಣವು ಶಿವಯೋಗ ಸಹಿತವಾಗಿ ಅವತರಿಸಿದರೆ ತ್ರಿಗುಣಗಳನ್ನು ಶುದ್ಧೀಕರಿಸಿ ಜೀವನದಲ್ಲಿಯೂ ಉನ್ನತಿಯನ್ನು ಕಲ್ಪಿಸುವುದು ಸಾಧ್ಯ. ತ್ರಿಗುಣ ಪರಿಪಾಕ ಮಾಡಿ ನಿಜಗುಣದೊಡನೆ ಹೊಂದಿಕೊಳ್ಳುವ ಪರಿಣತಿಯಾಗುವಂತೆ ಜೀವನದಲ್ಲಿ ಶಿವಯೋಗವಾಗಬೇಕು. ನಿಜ, ಗುಣ, ಶಿವ, ಶಕ್ತಿಗಳ ಚತುರ್ಮುಖ ಯೋಗವು ನಾಳಿನ ಪ್ರಪಂಚ ರಚನೆಯ ಕ್ರೀಡಾರಂಗವಾಗಬೇಕಾಗಿದೆ. ಶ್ರೀ ನಿಜಗುಣ ಶಿವಯೋಗಿಗಳ ಯುಕ್ತಿಗಳು ನಮಗೆ ಮಾರ್ಗದರ್ಶಕ.'[೧೯]

ಲೋಕಕಲ್ಯಾಣ ದೃಷ್ಟಿ ನಿಜಗುಣರಿಗೆ ಇದೆಯೆಂದು ಬೇಂದ್ರೆಯವರು ನಂಬಿದ್ದರು. ಕಾವ್ಯ ಮತ್ತು ಸಂಗೀತಗಳ ಬಲದಿಂದ ತತ್ವಜ್ಞಾನವನ್ನು ಸಹೃದಯರಿಗೆ ಮುಟ್ಟಿಸುವ ಹಾಗೂ ಅದನ್ನು ಲೋಕಪ್ರಿಯವಾಗಿಸುವ ಉದ್ದೇಶ ನಿಜಗುಣರ 'ಕೈವಲ್ಯಪದ್ಧತಿ' ಕೃತಿಯಲ್ಲಿ ಅಡಗಿದೆಯೆಂದು ಕುರ್ತಕೋಟಿಯವರು ಹೇಳುವುದು ಸಮಂಜಸವಾಗಿದೆ. 'ನಿಜಗುಣ ಶಿವಯೋಗಿಗೆ ಕಾವ್ಯ ಮತ್ತು ಸಂಗೀತಗಳಲ್ಲಿ ಒಳ್ಳೆಯ ಗತಿ ಇತ್ತು. ಕಾವ್ಯ ಈ ದೃಷ್ಟಿಯಿಂದ ಕೆಲವು ಗೀತೆಗಳಲ್ಲಿಯ ತಾತ್ವಿಕತೆಯನ್ನು ಹೃದ್ಯವಾಗಿಸುವ ಪ್ರಯತ್ನದಲ್ಲಿ ಯಶಸ್ವಿಯೂ ಆಗಿದೆ. ತತ್ವಜ್ಞಾನದ ಪಾರಿಭಾಷಿಕ ಪದಗಳ ಬದಲಾಗಿ ಕಾವ್ಯ ಪ್ರತಿಮೆಗಳು ಬಂದು ತಾತ್ವಿಕತೆಯನ್ನು ಜೀವಂತವಾಗಿಸಿದ ಉದಾಹರಣೆಗಳು ಬೇಕಾದಷ್ಟು ದೊರೆಯುತ್ತವೆ. 'ದನಿದೋರು ಕರ್ಮವೆನಿಸುವ ಮಾಗಿ ಪೋದುದಿನ್ನನು ನಯದಿ ಗುರುಕರುಣವೆಂಬ । ಕೋಗಿಲೆ । ಘನವಸಂತವಿದೆನಗೆ ಸೊಗಸು ಮಿಗೆ ಪ್ರಣವರೂಪಿನ ಚಿತ್ರತರವಾದ ಕೋಗಿಲೆ'- ಯೋಗಿಯಾದವನು ನಿಜಾನಂದದಲ್ಲಿ ನುಡಿಸುವ ವೀಣೆ ಇಲ್ಲಿ ಅತ್ಯಂತ ಪರಿಣಾಮಕಾರಿಯಾದ ರೂಪಕವೆಂಬ ಮಾತಿನಲ್ಲಿ ಸಂಶಯವೇ ಇಲ್ಲ.'[೧೭೦]

ಬಹಳ ಜನ ಆಧ್ಯಾತ್ಮಿಗಳು ಮನಸ್ಸನ್ನು ಮರ್ಕಟ, 'ಮುಳ್ಳಿನ ಬೆಟ್ಟ', 'ಬಿಡಾಡಿದನ' ಎಂದು ಕರೆದದ್ದುಂಟು. ಆದರೆ ನಿಜಗುಣ ಶಿವಯೋಗಿಗಳು ಆ ಮನಸ್ಸನ್ನು ದಂಡಿಸದೆ, ದೂಷಿಸದೆ ಅನುನಯದಿಂದ ಅದಕ್ಕೆ 'ಕೋಗಿಲೆ', 'ಗಿಳಿ' ಎಂದು ರಮಿಸುತ್ತಾರೆ. ಚಿಕ್ಕ ಮಗುವಿನಂತೆ ಪ್ರೀತಿ ತೋರಿಸುತ್ತಾರೆ. ಅದರ ಮುಗ್ಧತೆಯನ್ನು ಹೊಗಳಿ ಅನನ್ಯತೆಯನ್ನು ಸಾಧಿಸುತ್ತಾರೆ' ಎಂದು ಡಾ. ವೀರೇಶ ಬಡಿಗೇರ ಅವರು ನಯ-ವಿನಯದಿಂದ ಸಾಧಕನು ಮನಸ್ಸನ್ನು ತಿದ್ದುತ್ತಾನೆ ಎಂಬ ನಿಜಗುಣರ ಪ್ರತಿಪಾದನೆಯನ್ನು ಗುರುತಿಸಬಲ್ಲವರಾಗುತ್ತಾರೆ. ಕಿರಿದರಲ್ಲಿ ಹಿರಿಯ ಅರ್ಥವನ್ನು ಹುದುಗಿಸಿಡುವ ದೇಶಿ ಹಾಡುಗಬ್ಬಗಳ, ತತ್ವಪದಗಳ ವೈಶಿಷ್ಟ್ಯವನ್ನು ಅವರು ವಿವರಿಸುತ್ತಾರೆ: 'ಕಾಮನ ವಿವಿಧ ಪ್ರವೃತ್ತಿಗಳನ್ನು ಪರಿಚಯಿಸುತ್ತಾ, ಸಹ್ಯ, ಸಹ್ಯವಲ್ಲದ ನಿದರ್ಶನಗಳನ್ನು ಕೊಡುವ ಮೂಲಕ ಜೀವ ಕೋಗಿಲೆಗೆ ಮುಕ್ತ ವಾತಾವರಣವನ್ನು ಕವಿ ಕಲ್ಪಿಸಿಕೊಡುತ್ತಾನೆ. ಸಾಧನೆಗೆ ಒಂದೇ ಮಾರ್ಗ, ಅನ್ಯ ಮಾರ್ಗಗಳಿಲ್ಲ ಎನ್ನುವ ಕಲ್ಪನೆಯನ್ನು ಹೊಡೆದು ಹಾಕಿ ಅದರ ಅನೇಕ ಸಾಧ್ಯತೆಗಳನ್ನು ಪದ್ಯ ಸ್ಪಷ್ಟವಾಗಿ ಕಟ್ಟಿಕೊಡುತ್ತದೆ.'[೧೭೧]

ನಿಜಗುಣರು ಹೇಳುವ ತತ್ವ, ಭಾವ ಅಜರಾಮರವಾಗಿರುವಂತಹದು ಎಂದು ಬೇಂದ್ರೆಯವರು ತಿಳಿದುಕೊಂಡು ಅಂತಹ ಪರಂಪರೆಯನ್ನು ಅಭ್ಯಾಸ ಮಾಡಿದರು. ಮನನ ಮಾಡಿಕೊಂಡರು. ತತ್ವಪದಕಾರರ

ಹಾಡುಗಳು ಕಿವಿಯ ಮೇಲೆ ಬೀಳುತ್ತಿದ್ದವು. ಭಕ್ತಿ, ಶರಣತತ್ವ, ಆಧ್ಯಾತ್ಮದ ಅಂಶಗಳು ಆ ಗೀತೆಗಳಲ್ಲಿ ಪ್ರಧಾನವಾಗಿರುತ್ತಿದ್ದವು. ಇಂತಹ ಹಾಡುಗಳನ್ನು ಉಲ್ಲೇಖ ಮಾಡಿ ಕೆಲವು ತಮ್ಮ ಸ್ವತಂತ್ರ ಕವಿತೆಗಳನ್ನು ಬೇಂದ್ರೆಯವರು ಬರೆದರು. ಬದುಕು ಮತ್ತು ಆಧ್ಯಾತ್ಮದ ಸುಳುಹುಗಳನ್ನು ನೀಡುತ್ತ ಆ ಪರಂಪರೆಗೆ ಜೋಡಿಸಿಕೊಂಡರು. ಅವರ 'ಗರಿ' ಸಂಕಲನದ 'ಕೋಗಿಲೆ' ಪದ್ಯದ ಪ್ರಾರಂಭದಲ್ಲಿ 'ನಿಜಗುಣ ಶಿವಯೋಗಿಗಳ ಅಜರಾಮರ ಪದದಂತೆ' ಎಂಬ ಉಲ್ಲೇಖವಿದೆ. ಗೀತೆಯ ಪಲ್ಲವಿಯು ಕೂಡ ನಿಜಗುಣರದೆ.

ಕೋಗಿಲೆ ಚೆಲ್ವs ಕೋಗಿಲೇ
ಮುದ್ದು ಕೋಗಿಲೇ ಜಾಣ, ಕೋಗಿಲೇ ॥ಪ॥
ತನುವೆಂಬ ವನದಲ್ಲಿ ಮನದ ಮಾಮರದಲ್ಲಿ
ಕೊನೆರೆಲೆಯಲ್ಲಿ ಕುಳಿತು ಕೋಗಿಲೆ!
ದಿನವಿಲ್ಲ ನಿಶೆಯಿಲ್ಲ ದನಿಗೈಯ್ಯುತಿರುವಿ ನೀ-
ನಾವ ಬಸಂತನ ಕೋಗಿಲೆ?[೧೮]

ಎಂದು ದೇಹವನ್ನು ಕಾಡಿಗೆ ಹೊಂದಿಸಿಕೊಂಡು ಮನಸ್ಸೆಂಬ ಮಾಮರದಲ್ಲಿ ಕುಳಿತು ಕರೆಯುತ್ತಿರುವ ಕೋಗಿಲೆ ವಸಂತನನ್ನು ಕರೆಯುವುದರ ಜೊತೆಗೆ ನವೋದಯದ ಉತ್ಕರ್ಷದ ಆಶಯವನ್ನು ಬಿಂಬಿಸುತ್ತದೆ. 'ಶರಣರ, ದಾಸರ ಕರುಣೆ ಕಿರಣಿಸುವಂತೆ ಕೂಗುವಿಯಾ ಹೇಳು ಕೋಗಿಲೆ' ಎನ್ನುವ ಬೇಂದ್ರೆಯವರು ಕವಿತೆಯ ಕೊನೆಗೆ 'ಅಂಬಿಕಾತನಯನ ನಂಬಿಗೆಗಿಂಬಾದ ನಿಜಗುಣದಲಿ ಬೆರೆತ ಕೋಗಿಲೆ' ಎಂದು ನಿಜಗುಣರಲ್ಲಿ ತಮ್ಮ ನಂಬಿಕೆಯನ್ನು ದೃಢಪಡಿಸುತ್ತಾರೆ. ಬದುಕಿನ ಸಾಮಾನ್ಯ ಸಂಗತಿಯಿಂದ ಹೊರಟು ಅಸಾಮಾನ್ಯವಾದ ಸಂಗತಿಯನ್ನು ಕವಿತೆಯನ್ನು ನಿರ್ವಹಿಸುವ ವಿಧಾನದಲ್ಲಿ ತೋರಿಸುವ ಕಲೆಗಾರಿಕೆಯನ್ನು ನಿಜಗುಣರಂತೆ ಬೇಂದ್ರೆಯವರು ಸಾಧಿಸುತ್ತಾರೆ. ವ್ಯತ್ಯಾಸವೆಂದರೆ ನಿಜಗುಣರು ಅನುಭಾವದ ಸ್ತರವನ್ನು ಬಿಟ್ಟು ಬೇರೆ ವಿಚಾರ ಮಾಡಲಾರರು:

''ದುರುಳ ಕಂತುವಿನೊಡನಿರೆ ಲೋಕದೊಳು ನಿನ್ನ । ಪರಪುಟ್ಟನೆಂಬರು ಕೋಗಿಲೆ॥
ಧರಗೆ ಜನಕನಾದ ಗುರುಶಂಭುಲಿಂಗದ । ಚರಣ ಪಲ್ಲವ ಪಿಡಿ ಕೋಗಿಲೆ॥

ಮನಸ್ಸಿನ ನಿಜವಾದ ತವರು ಪರಮಾತ್ಮ. ಅದನ್ನು ಬಿಟ್ಟು ಕಾಕಸದೃಶವಾದ ಮನ್ಮಥನನ್ನು ಆಶ್ರಯಿಸಿದರೆ ಅದನ್ನು ಸಹಜವಾಗಿಯೇ ಪರಪುಟ್ಟ ಎಂದು ಕರೆಯುತ್ತಾರೆ. ಆ ನಿಂದೆಯನ್ನು ಕಳೆದುಕೊಳ್ಳುವದಕ್ಕಾಗಿಯಾದರೂ ಅದು ಅವನನ್ನು ಬಿಟ್ಟು ಭಗವಂತನ ಪಾದಪಲ್ಲಟದಲ್ಲಿ ಅನುರಕ್ತವಾಗಬೇಕು. ಶ್ರೇಯಸ್ಸಿನಂತೆಯೇ ಅದರಿಂದ ಪ್ರೇಯಸ್ಸು ಕೂಡ ದೊರಕುತ್ತದೆ. ಏಕೆಂದರೆ ಕೋಗಿಲೆ ಬಯಸುವ ಚಿಗುರು ಅಲ್ಲಿದೆ. ಕವಿಸಮಯವನ್ನು ಕೂಡ ಕೌಶಲದಿಂದ ತನ್ನ ಆಧ್ಯಾತ್ಮದ ರಾಗಕ್ಕೆ ಶ್ರುತಿಗೂಡಿಸಿಕೊಂಡಿದ್ದಾನೆ.'[೧೨೩] ಪ್ರಭುಶಂಕರ ಅವರು ಹೇಳುವಂತೆ

ಮಂಗಳವಾದ ಧ್ವನಿಯನ್ನು ಹೊಂದಿರುವ ಕೋಗಿಲೆ ವಿನಾಶಕ್ಕೆ ಮೂಲವಾಗಿರುವ ಕಾಮನನ್ನು ಕುರಿತು ಹಾಡುವದರಲ್ಲಿ ಅರ್ಥವಿಲ್ಲ. ಪರಮಾತ್ಮನನ್ನು ಸ್ತುತಿಸಿದರೆ ಶ್ರೇಯಸ್ಸಾದರೂ ಲಭಿಸುತ್ತದೆಯೆಂಬುದು ನಿಜಗುಣರ ಆಶಯವಾಗಿದೆ. ಕಾಮ ಹಾಗೂ ಶಿವ ಇವರಿಬ್ಬರಲ್ಲಿ ಶಿವ ಮಾತ್ರ ಅವರಿಗೆ ಕಾಣುತ್ತಿದ್ದಾನೆ. ಬೇಂದ್ರೆಯವರಿಗೆ ಮಾಯೆ ಬೀಸುವ ಜಾಲದ ಕುರಿತು ಅರಿವು ಇದೆ. ಮಾಯೆಯನ್ನು ಅಷ್ಟು ಸುಲಭವಾಗಿ ಗೆಲ್ಲಲಾಗದೆಂದು ಎರಡೂ ಲೋಕಗಳನ್ನು ಸಮೀಕರಿಸುತ್ತ ಕೊನೆಗೆ ಆಧ್ಯಾತ್ಮವನ್ನು ಗೆಲ್ಲಿಸುತ್ತಾರೆ. ನಿಜಗುಣ ಶಿವಯೋಗಿಗಳ ನಾದಮಾಧುರ್ಯದಿಂದ ಕೂಡ ಬೇಂದ್ರೆಯವರು ಪರವಶರಾಗಿದ್ದರು. ನಿಜಗುಣರ ಅನುಭಾವ, ಭಕ್ತಿಯ ತೊಳಲಾಟ ಮತ್ತು ಸಾಧನೆಯ ತಾಪಗಳನ್ನು ಬೇಂದ್ರೆಯವರು ಅನುಭವಿಸಬಲ್ಲವರಾಗಿದ್ದರು.

೩.೧೭ ಮುಪ್ಪಿನ ಷಡಕ್ಷರಿಗಳು :

ನಿಜಗುಣ ಶಿವಯೋಗಿಗಳ ಸಮಕಾಲೀನರೆಂದು ಹೇಳಲಾಗುವ ಮುಪ್ಪಿನ ಷಡಕ್ಷರಿಗಳ ತತ್ವಪದಗಳು ವಚನಕಾರರ ಸಾಹಿತ್ಯದಿಂದ ಪ್ರಭಾವಗೊಂಡಿರುವುದನ್ನು ಕಾಣಬಹುದಾಗಿದೆ. ಬಿದ್ದುಹೋಗುವ ಕಾಯವನ್ನು ಪ್ರೀತಿಸಿ, ಮೋಹಿಸಿ, ಅದರ ಸುಖಕ್ಕಾಗಿ ಪರದಾಡುವದಕ್ಕಿಂತ ಎಂದೂ ಬತ್ತದ ತವನಿಧಿಯಾಗಿರುವ ಭಗವಂತನ ಶಾಶ್ವತ ಪ್ರೀತಿಯನ್ನು ಅರಸಬೇಕೆಂದು ಮುಪ್ಪಿನ ಷಡಕ್ಷರಿಗಳು ಕೇಳಿಕೊಳ್ಳುತ್ತಾರೆ. ಮಧುರಭಾವದಿಂದ ಶಿವನನ್ನು ಒಲಿಸಿಕೊಳ್ಳಲು ಅವರು ಕೇಳಿಕೊಳ್ಳುತ್ತಾರೆ. ಅವರು ಹೇಳುವ ಆನಂದದ ಅನುಭೂತಿ ಅಂತರಂಗವನ್ನು ಸದ್ಗುಣಗಳ ಖಣಿಯನ್ನಾಗಿ ಮಾಡಿಕೊಳ್ಳುವದರಲ್ಲಿದೆ. ದೇವನು ಒಬ್ಬನು. ಅವನನ್ನು ಸ್ತುತಿಸುವ ರೀತಿ ಬೇರೆ ಬೇರೆ ಎಂದು ಅವರು ನಂಬಿದವರಾಗಿದ್ದರು. ಬೇಂದ್ರೆಯವರ ಮೇಲೂ ಮುಪ್ಪಿನ ಷಡಕ್ಷರಿಗಳ ಗೀತೆಗಳ ಪ್ರೇರಣೆ ಆದದ್ದಿದೆ.

ಮುಪ್ಪಿನ ಷಡಕ್ಷರಿಗಳ ಜೀವನದ ವಿವರಗಳು ಕೃತಿಗಳಲ್ಲಾಗಲಿ, ಚರಿತ್ರೆಗಳಲ್ಲಾಗಲೀ ಕಂಡುಬರದೆ ಇರುವುದರಿಂದ 'ನೀನೇ ಅಕಳಂಕ ಗುರು' ಎನ್ನುವ ಅವರ ಪ್ರಸಿದ್ಧ ಅನುಭಾವ ಗೀತೆಯಲ್ಲಿ ಸುಳಿವು ಸಿಗುವ ನುಡಿಯೊಂದರಿಂದ ಅವರು ಎರಗಂಬಳ್ಳಿ ಊರಿನ ಸಿದ್ಧಲಿಂಗರ ಶಿಷ್ಯರೆಂದು ತಿಳಿಯುತ್ತದೆ. ಆ ಊರು ಮೈಸೂರಿನ ಸಮೀಪ ಯಳಂದರು ತಾಲೂಕಿನಲ್ಲಿ ಬರುತ್ತದೆ. ಅದರ ಸಮೀಪವಿರುವ ಕೊಳ್ಳೆಗಾಲ ತಾಲೂಕಿನಲ್ಲಿರುವ ಚಿಲಕವಾಡಿ ಎಂಬ ಹಳ್ಳಿಯಲ್ಲಿ ನಿಜಗುಣ ಶಿವಯೋಗಿಗಳು ತಪಸ್ಸು ಮಾಡಿದ ಶಂಭುಲಿಂಗನ ಬೆಟ್ಟ ಅಥವಾ ನಿಜಗುಣರ ಬೆಟ್ಟ ಎಂದು ಕರೆಯಲಾಗುವ ಬೆಟ್ಟವಿದೆ. ಅದೇ ರೀತಿಯಲ್ಲಿ ಅಲ್ಲಿ 'ಮುಪ್ಪಿನ ಷಡಕ್ಷರಿ ಗವಿ' ಎಂದು ಹೆಸರಾದ ಗವಿ, ಸಾಧನೆ ಮಾಡುವವರಿಗೆ ಸ್ಫೂರ್ತಿಯ ಸೆಲೆಯಾಗಿದೆ. ಅವರ ಬೋಧದಿಂದ ಪ್ರಭಾವಿಸಲ್ಪಟ್ಟು ಅವರ ಹಾಡುಗಳನ್ನು ಸಂಗ್ರಹಿಸಿದವರು ಅದಕ್ಕೆ 'ಸುಬೋಧಸಾರ'ವೆಂದು ಹೆಸರಿಟ್ಟು ಕರೆದರು. ತಾಳೆಯೋಲೆಯ ಪ್ರತಿಗಳಲ್ಲಿ 'ಮುಪ್ಪಿನ ಷಡಕ್ಷರಿಗಳ ಕೈವಲ್ಯ ಪದಗಳು' ಎಂದಿದೆ. ಮೋಕ್ಷಕ್ಕೆ ದಾರಿ ತೋರುವ ಪದಗಳಾಗಿ, ನಿರ್ಗುಣ, ನಿರ್ವಿಕಾರ ಮನೋಭಾವ ಬೆಳೆಸಿಕೊಳ್ಳುವ ಮೆಟ್ಟಿಲುಗಳಾಗಿ ಷಡಕ್ಷರಿಗಳಿಗೆ ಅವು ಕಂಡಿರಬೇಕು. ೧೯೪೦ ರಲ್ಲಿ 'ಶ್ರೀ ಮುಪ್ಪಿನ ಷಡಕ್ಷರಿದೇವ ಕೃತಿ ಸುಬೋಧಸಾರ' ಎಂಬ ಹೆಸರಿನಿಂದ ಹರ್ಡೇಕರ ಮಂಜಪ್ಪನವರು ಸಂಪಾದನೆ ಮಾಡಿದರು.

ಇತ್ತೀಚೆಗೆ ೧೯೯೮ ರಲ್ಲಿ ಮೈಸೂರಿನ ಸುತ್ತೂರು ಮಠದ ಶಿವರಾತ್ರೀಶ್ವರ ಗ್ರಂಥಮಾಲೆಯಲ್ಲಿ ಪರಿಷ್ಕೃತ ದ್ವಿತೀಯ ಆವೃತ್ತಿ ಪ್ರಕಟವಾಗಿದ್ದು ೮೭ ಕೈವಲ್ಯ ಪದಗಳನ್ನು ಸಂಕಲನ ಮಾಡುವ ಮೂಲಕ ಅನುಭಾವದ ಪರಂಪರೆಯ ಹಾಡುಗಳಿಗೆ ಮತ್ತೆ ಜೀವ ತುಂಬಿದ್ದಾರೆ. 'ಮನಸ್ಸನ್ನು ಲಯಗೊಳಿಸಿ ಅಂಗನು ಲಿಂಗದೊಡನೆ ಸಮರಸಗೊಳ್ಳುವುದೆ ಶಿವಯೋಗ. ಅದು ಎಲ್ಲ ಸಾಧನೆಗಳ ಕೊನೆಯ ಗುರಿ. ಸಾಧನೆಯಲ್ಲಿ ತೊಡಗಿದ ಜೀವನಿಗೆ ಇಹದ ಭೋಗೋಪಭೋಗಗಳು ಆಕರ್ಷಣೆಯನ್ನೊಡ್ಡಿ ಸಂಸಾರಬಂಧನಕ್ಕೆ ಸಿಲುಕಿಸುವುದು ಸಹಜವಾಗಿದೆ. ಅವುಗಳಿಗೆ ಬಲಿಬೀಳದೆ ಮೇಲೆದ್ದು ನಿಂತವನೆ ನಿಷ್ಠಾವಂತ ಸಾಧಕನಾಗಿ ನಿಜದ ನೆಲೆಯನ್ನು ಕಾಣುತ್ತಾನೆ.'[೧೭೪] ದೇಹವನ್ನು ದೇವನ ನೆಲೆ ಎಂದು ಗುರುತಿಸಿ ಭಕ್ತಿಯಿಂದ ತಮ್ಮನ್ನು ಸಮರ್ಪಿಸಿಕೊಳ್ಳುತ್ತಾರೆ. ಪರಮಗುರುವಿನ ಬೋಧೆಯನ್ನು ಕೇಳಲು ಮನಸ್ಸನ್ನು ಹದಗೊಳಿಸುತ್ತ ವಿರಕ್ತಿಯ ದಾರಿಯೆ ಭಾಗ್ಯದ ಬಾಗಿಲು ಎಂದು ಧೃಡಪಡಿಸಿಕೊಳ್ಳುತ್ತಾರೆ.

ಎನ್ನ ಚಿಂತಾಮಣಿಯೆ
ಎನ್ನ ಪರುಷದ ಕಣಿಯೆ
ಎನ್ನ ಬೇಡಿದುದೀವ ಸುರಭೂಜವೆ
ಎನ್ನ ಸಂಜೀವನವೆ
ಎನ್ನ ಪರಮಾಯುಷವೆ
ಎನ್ನ ಕರದೊಳಗಿರ್ದು ಏಕೆ ನುಡಿಯೆ[೧೭೫]

ಭಗವಂತನನ್ನು ಕಾಣಬೇಕೆಂದು ಸಾಧನೆ ಮಾಡುತ್ತಿರುವಾಗ ಹೆಣ್ಣಿನ ರೂಪದಲ್ಲಿರುವ ಮಾಯೆ ತನ್ನ ಹಟ ಕೆಡಿಸುತ್ತಿದ್ದಾಳೆಂದು ಪುರುಷ ಅಂದುಕೊಳ್ಳುತ್ತಾನೆ. ಮಾಯೆಯ ಪಾಶಕ್ಕೆ ಸೋಲುತ್ತಾನೆ.

ನಿನ್ನ ಮುಖ ಚಂದ್ರನೊಲು
ನಿನ್ನಕ್ಷಿ ಕಮಲದಳ
ನಿನ್ನ ಕುಚ ಪೊಂಗಳಸದಂತೆ ಮಾಯೆ
ನಿನ್ನಂಗ ಕನಕಲತೆ
ನಿನ್ನಧರ ಬಿಂಬಫಲ
ನಿನ್ನ ನೀಕ್ಷಿಸಿ ಸೋಲದವರಾರೆಲೆ[೧೭೬]

ಮಾಯೆಯನ್ನು ಗೆಲ್ಲುವ ಬಗೆ ಹೇಗೆಂದು ತಾಕಲಾಟದಲ್ಲಿರುವಾಗ, ಮನಸ್ಸು ಸೋಲುತ್ತಿರುವಾಗ ಶಿವನ ನಾಮವೆಂಬ ಭೀಮಶಕ್ತಿ ಇರುವುದು ಹೊಳೆಯುತ್ತದೆ. ಆಧ್ಯಾತ್ಮದ ಹಾದಿಯನ್ನು ತುಳಿದಾಗ ಮಾತ್ರ ವಿರಕ್ತನಾಗವುದು ಸಾಧ್ಯವೆಂಬ ಮಾತು ಗೋಚರವಾಗುತ್ತದೆ.

ಕಾಮ ಕಾಲಗಳಿಂ ನಿ
ರ್ನಾಮ ಮಾಡುವ ಮಾಯೆ
ಭೀಮನೆನಿಸುವ ಷಡಕ್ಷರಿಲಿಂಗವ
ನಾ ಮರೆಯಹೊಕ್ಕನೆಲೆ
ಭೀ ಮಾರಿ ಹೋಗತ್ತ
ನೀ ಮುನ್ನ ದುಶ್ಚರಿತಗಳೆಂದರಿದೆನು[೧೭೭]

ಕಣ್ಣಿಗೆ ಚೆಲುವಾಗಿರುವ ಸಂಗತಿಗೆ, ಹೊನ್ನಿಗೆ, ಮಣ್ಣಿಗೆ ಮನಸೋಲದೆ ಮನದ ಮುಂದಿರುವ ಆಸೆಯನ್ನು ಮೀರಿದಾಗ ಒಳಗಣ್ಣು ತೆರೆಯುತ್ತದೆ. ದೇಹದ ಒಳಗಿರುವ ಸ್ವರೂಪ ತಿಳಿಯುತ್ತದೆ. ಇಂತಹ ಸ್ವರೂಪ ನೋಡುವಂತೆ ಮುಪ್ಪಿನ ಷಡಕ್ಷರಿ ಆಗ್ರಹಿಸುತ್ತಾರೆ. ಆಗ ಅವರವರು ನೋಡುವಂತೆ ಸ್ವರೂಪನ ರೂಪ ಗೋಚರವಾಗುತ್ತದೆ.

ಅವರವರ ದರುಶನಕೆ
ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ
ಅವರವರ ಭಾವಕ್ಕೆ
ಅವರವರ ಪೂಜೆಗಂ
ಅವರವರಿಗೆಲ್ಲ ಶಿವ ನೀನೊಬ್ಬನೆ[೧೭೮]

ಈ ಪದ್ಯ ಬೇಂದ್ರೆಯವರನ್ನು ಕಲಕಿತ್ತು ಎನ್ನುವುದಕ್ಕೆ ಚೆನ್ನವೀರ ಕಣವಿಯವರು ನೆನಪು ಮಾಡಿಕೊಂಡಿರುವ ಸಂದರ್ಭವೊಂದನ್ನು ಇಲ್ಲಿ ಉಲ್ಲೇಖಿಸುವುದು ಉಚಿತವೆನಿಸುತ್ತದೆ : 'ನಾಕುತಂತಿ' ಕವನ ಸಂಗ್ರಹಕ್ಕೆ ಜ್ಞಾನಪೀಠ ಪ್ರಶಸ್ತಿ ಬಂದ ಸಂದರ್ಭದಲ್ಲಿ ಒಮ್ಮೆ ಮಾಸ್ತಿಯವರು ಧಾರವಾಡಕ್ಕೆ ಬಂದಿದ್ದರು. ಬೇಂದ್ರೆಯವರ ಮನೆ 'ಶ್ರೀಮಾತಾ'ದಲ್ಲಿಯೇ ಮಾಸ್ತಿಯವರ ಹಿರಿತನದಲ್ಲಿ ಸಹೃದಯರ ಸಂತೋಷಕೂಟವೊಂದನ್ನು ವಾಮನ ಏರ್ಪಡಿಸಿದ್ದರು. ಅಂದು ಅಲ್ಲಿ ಸೇರಿದವರೆಲ್ಲರೂ ತಮತಮಗೆ ಇಷ್ಟವಾದ ಯಾವುದಾದರೂ ಒಂದು ಪದ್ಯದ ನುಡಿ ಹೇಳಬೇಕೆಂಬ ಸೂಚನೆ ಬಂದಿತು. ನನ್ನ ಸರದಿ ಬಂದಾಗ ನಾನು ಮುಪ್ಪಿನ ಷಡಕ್ಷರಿಯ 'ಅವರವರ ದರುಶನಕೆ' ಪದ್ಯದ ಕೊನೆಯ ನುಡಿ 'ಹೋರಾಟವಿಕ್ಕಿಸಲು ಬೇರಾದೆಯಲ್ಲದೆ ಬೇರುಂಟೆ ಜಗದೊಳಗೆ ಎಲೆದೇವನೆ' ಎಂಬುದನ್ನು ಹೇಳಿದೆ. ಅದರ ವಿಚಾರವನ್ನೆತ್ತಿಕೊಂಡು ಮಾಸ್ತಿಯವರು ಒಂದೆರಡು ಮಾತು ಹೇಳಿದರು. 'ಬೇರಾದ' ಪದಕ್ಕೆ ಬೇರೆ ಬೇರೆ ಹೆಸರಿನಿಂದ ದೇವನನ್ನು ಕರೆಯಲಾಯಿತು ಎಂಬ ಸಾಮಾನ್ಯವಾದ ಅರ್ಥವೇ ನಮ್ಮೆಲ್ಲರ ಮನಸ್ಸಿನಲ್ಲಿತ್ತು. ಬೇಂದ್ರೆಯವರು ಮಾತ್ರ ಯಥಾಪ್ರಕಾರ ಶ್ಲೇಷಾರ್ಥವನ್ನು ಉಪಯೋಗಿಸಿ 'ಬೇರಾದೆ' ಎಂಬ

ಪದವನ್ನು ಬೇರು+ಆದೆ, ಹೋರಾಟಕ್ಕೆ ಮೂಲ ಕಾರಣವಾದೆ ಎಂದು ಅರ್ಥೈಸಿದಾಗ ಮಾಸ್ತಿಯವರೂ ಗೋಣು ಹಾಕಿದರು.'[೧೭೯]

ಮುಪ್ಪಿನ ಷಡಕ್ಷರಿಗಳು ಪಡೆದಂತಹ ಶಿವಶಾಸ್ತ್ರದ ಅನುಭವವನ್ನು ಪಡೆಯಲಿಕ್ಕೆ ಹಾಗೂ ಅನುಭಾವದ ಮಾರ್ಗದಲ್ಲಿ ನಡೆಯಲಿಕ್ಕೆ ಬೇಂದ್ರೆಯವರು ಸಹ ಮೊದಲಿನಿಂದ ಕುತೂಹಲಿಗಳಾಗಿದ್ದುದರಿಂದ ಈ ತೆರನಾದ ಆಲೋಚನೆಗಳು ಅವರ ಕಾವ್ಯದಲ್ಲಿಪ್ರವೇಶ ಮಾಡಿದವು. ಗುರು ಕಾರುಣ್ಯದಿಂದ ಆತ್ಮಸ್ವರೂಪನ ಲೋಕ ಪ್ರತ್ಯಕ್ಷ ಅನುಭವಕ್ಕೆ ಸಿಗಬಲ್ಲುದೆಂದು 'ಎನಗೆ ನಿಮ್ಮನೆ ನೆನೆವ। ಮನವನೇ ಬಯಸುವೆನು'[೧೮೦] ಎಂದು ಮುಪ್ಪಿನಾರ್ಯರು ಹೇಳಿದಂತೆ ಬೇಂದ್ರೆಯವರು ಗುರುಗಳನ್ನು ನೆನೆದರು. ಗುರು ಚತುರ್ಮುಖರನ್ನು ಸೃಷ್ಟಿಸಿಕೊಂಡರು. ಶ್ರೀಮಾತೆಯ ನೆರಳಲ್ಲಿ ಬದುಕಿರಲೆಂದು ತಮ್ಮ ಮನೆಗೆ 'ಶ್ರೀಮಾತಾ' ಎಂಬ ಹೆಸರಿಟ್ಟರೆಂದು ತೋರುತ್ತದೆ. ಮುಪ್ಪಿನ ಷಡಕ್ಷರಿಗಳ ತತ್ವಪದಗಳಲ್ಲಿ ಕಂಡುಬರುವ ರೂಪಕ, ಪ್ರತಿಮೆ, ಕಲ್ಪನೆ, ಬೆಡಗು ಮುಂತಾದ ಕಾವ್ಯಗುಣಗಳು ಕೂಡ ಓದುಗರನ್ನು ಆಕರ್ಷಿಸುತ್ತವೆ. 'ಅವರವರ ದರುಶನಕೆ'ಪದ್ಯದಂತೆ ಆಧ್ಯಾತ್ಮಿಕ ಹೊಳಹುಗಳನ್ನುಳ್ಳ 'ತಿರುಕನ ಕನಸು' ಕವಿತೆಯು ಲೌಕಿಕ ಐಸಿರಿಯೆಂಬುದು ಕ್ಷಣದಲ್ಲಿ ಕರಗಿ ಹೋಗುವಂತಹದು ಎಂದು ಹೇಳುತ್ತದೆ.

ತಿರುಕನೋರ್ವನೂರ ಮುಂದೆ
ಮುರುಕು ಧರ್ಮಶಾಲೆಯಲ್ಲಿ
ಯೊರಗಿರುತ್ತಲೊಂದು ಕನಸ ಕಂಡನೆಂತೆನೆ[೧೮೧]

ಲೌಕಿಕ ಸುಖದ ಕನಸಿಗಿಂತ ಪರಲೋಕದ ಕನಸು ನೆಮ್ಮದಿ ತರುವಂಥದ್ದೆಂದೆ ದಾರ್ಶನಿಕರು ನಂಬಿದರು.

೩.೧೮ ಸರ್ವಜ್ಞ :

ಸರ್ವಜ್ಞನ ರಸಮಯವಾದ ಮಾತು, ಪಕ್ವತೆಯಿಂದ ಕೂಡಿರುವ ಅನುಭವ, ವಿಸ್ಮಯವೆನ್ನಿಸುವ ಜ್ಞಾನದ ಅಗಾಧತೆಗಳನ್ನು ಬೇಂದ್ರೆಯವರು ಮೆಚ್ಚಿಕೊಂಡಿದ್ದರು. ಸರ್ವಜ್ಞ ಕೂಡ ತಾವು ಅನುಸರಿಸಬೇಕಾದ ಕನ್ನಡ ಕಾವ್ಯ ಪರಂಪರೆಯ ಕವಿಗಳಲ್ಲಿ ಒಬ್ಬನೆಂದು ಸೇರಿಸಿಕೊಂಡಿದ್ದರೆಂದು ಕಾಣುತ್ತದೆ. ಆತನ ವಚನಗಳು ಸೃಷ್ಟಿಸುವ ಪ್ರಭಾವಲಯದ ಬಗ್ಗೆ ಬೇಂದ್ರೆಯವರಿಗೆ ಆದರವಿದ್ದಿತು. ಕಣ್ಣು, ಮನಸ್ಸು, ನಾಲಿಗೆಗಳನ್ನು ದೇವನು ಕೊಟ್ಟದ್ದೆಂದು ತಿಳಿದು ದೇವಕಾರ್ಯದತ್ತ ಅವುಗಳ ವಿನಿಯೋಗವಾಗಬೇಕು ಎಂದು ಬೇಂದ್ರೆಯವರು ಸರ್ವಜ್ಞನ ವಚನಗಳಲ್ಲಿ ಅಡಕವಾಗಿರುವ ಜೀವನಾನುಭವದ ಅನುಭೂತಿಯನ್ನು ಹೇಳುತ್ತಾರೆ. ೧೯೪೧ ರಲ್ಲಿ ಚೆನ್ನಪ್ಪ ಉತ್ತಂಗಿ ಅವರು ಸಂಪಾದಿಸಿದ 'ಸರ್ವಜ್ಞನ ವಚನಗಳು' ಕೃತಿಗೆ ಅವರು ಬರೆದ ಮಾತುಗಳಿಂದ ಇದನ್ನು ತಿಳಿಯಬಹುದು. ಬೇಂದ್ರೆಯವರು ಆಗ ಗದಗನಲ್ಲಿ ನೌಕರಿ ಮಾಡುತ್ತಿದ್ದರು. ದರ್ಶಕ ಗುಣದ ಸರ್ವಜ್ಞನ ಕವಿತೆಯ ಬಗೆಗೆ ಅವರ ಒಲವಿದ್ದಿತು. 'ಕವಿಗಳಲ್ಲಿ ಎರಡು ಜಾತಿ: ವರ್ಣಕ, ದರ್ಶಕ- ಎಂದು ವರ್ಣಕರು ಎಲ್ಲರೂ ಕಂಡಿದುದನ್ನೆ ಸರಸವಾಗಿ

ಬಣ್ಣಿಸುವರು. ದರ್ಶಕರು ಸಾಮಾನ್ಯವಾಗಿ ಕಣ್ಣಿಗೆ ಮರೆಯಾದುದನ್ನು ಕಂಡುಕೊಂಡು ಅನ್ಯರೂ ಅದನ್ನು ಕಾಣುವಂತೆ ಮಾಡುವರು. ಸರ್ವಜ್ಞ ಅಂಥ ದರ್ಶಕ ಕವಿ. ಎಲ್ಲ ಕವಿಗಳಲ್ಲಿಯೂ ದರ್ಶಕ ಶಕ್ತಿ ಇರುವದಾದರೂ ದರ್ಶಕ ಜಾತಿಯವರು ವರ್ಣನಾ ವಿಸ್ತಾರಕ್ಕೆ ಕೈ ಚಾಚದೆ, ತಾವಾಯಿತು ತಮ್ಮ ದರ್ಶನವಾಯಿತು ಎಂದು ಕಿರುಮಾತುಗಳಲ್ಲಿ ತಮ್ಮ ಕಾವ್ಯ ಮುಗಿಸುವರು. ಅಂತೆಯೆ ಇಂಥವರ ಮಾತಿಗೆ ಮಿಂಚಿನ ಹೊರಗು, ಖಡ್ಗದ ಹರಿತ... ಬೀಜದಲ್ಲಿ ಮರ ಹುದುಗಿಕೊಂಡಿರುವಂತೆ, ಸರ್ವಜ್ಞನ ಬೀಜ-ಮಾತುಗಳು ಯಾರಾರ ಮನದ ಹೊಲದಲ್ಲಿ ನಾಟುವವೊ, ಅವರವರಲ್ಲಿ ಅವು ಮರವಾಗಿ ಬೆಳೆದು ಬೆರಗುಗೊಳಿಸುವವು. ಇಂಥವರ ನುಡಿಯೇ ನಾಡಿನ ನುಡಿಯಾಗಿ ನಾಣ್ಣುಡಿಯಾಗುವುದು.'[೧೮೨]

ತನ್ನ ಮಾತಿನಿಂದ ಅವನು ಸರ್ವಜ್ಞನಾದನು. ಪ್ರಪಂಚವನ್ನು ಸುತ್ತಿ ಒಳಿತು, ಕೆಡುಕು, ನಗೆ, ಹೊಗೆ, ಹುಟ್ಟು, ಸಾವು, ಮನುಷ್ಯ, ದೈವಗಳನ್ನು ಕಂಡನು. ಎಲ್ಲರಿಂದ ತನಗೆ ಬೇಕಾದುದನ್ನು ಆಯ್ದುಕೊಂಡು ಅನುಭವದ ಸಂಪತ್ತನ್ನು ವೃದ್ಧಿಸಿಕೊಂಡನು. ನಮ್ಮ ದೇಹದಲ್ಲಿ ಆತ್ಮನಿದ್ದಾನೆಂದು, ಚೈತನ್ಯ ಸ್ವರೂಪನಾದ ದೇವನಿದ್ದಾನೆಂದು ತಿಳಿಯದಿದ್ದರೆ ಅದು ಜೀವನವೆ ಅಲ್ಲವೆಂದು ಸರ್ವಜ್ಞ ತಿಳಿದಿದ್ದನು.

ಆತ್ಮದ ನೆಲೆಯನ್ನು ಚೇತನದ ಬೊಮ್ಮವನು
ಜ್ಯೋತಿಯಿದ್ದಡೆಯ ನೀತಿಯಲಿ ನೆರೆಬಲ್ಲ।
ದಾತನೇ ಯೋಗಿ ಸರ್ವಜ್ಞ।[೧೮೩]

ನಂಬಿಕೆಯೆ ಬದುಕಿನ ಮೂಲಾಧಾರ. ಭಕ್ತನ ಮನೆಯ ಹತ್ತಿರವೆ ಮನೆ ಮಾಡಿ ದೇವರಿಗೆ ಸಮೀಪವಾಗಿರುವ ಭಕ್ತನ ನೆಲೆಯಾಗಿರುವುದು ಶ್ರೇಷ್ಠವಾದದ್ದೆಂದು ಸರ್ವಜ್ಞ ನಂಬಿದ್ದನು.

ಅಂಬುಜದ ನವರಸವ । ನಿಂಬಿನಲಿ ತಾನರಿದು ।
ನಂಬುಗೆಯ ಕೂಡಿ ಶಂಭುವಿನ ನೆರೆ ಸವಿದು ।
ಉಂಬುವನೆ ಯೋಗಿ ಸರ್ವಜ್ಞ[೧೮೪]

ಸತ್ಪಾತ್ರ, ಸತ್ಕ್ರಿಯಾಚರಣೆ ಮತ್ತು ನಂಬಿಕೆಗಳಂತಹ ಮೌಲ್ಯಗಳನ್ನು ಬೆಳೆಸುವಲ್ಲಿ ಸರ್ವಜ್ಞ ತನ್ನ ಅಭಿವ್ಯಕ್ತಿಯ ಉದ್ದೇಶವಾಗಿರಿಸಿಕೊಂಡನು. ಇಂದ್ರಿಯ ಚಪಲವನ್ನು ತಡೆದುಕೊಳ್ಳಬೇಕು, ಸಾಧಿಸಿ ಉಣ್ಣಬೇಕು ಎಂದು ಆತ ಹೇಳುತ್ತಾನೆ. ಪರಿಶುದ್ಧ ಆತ್ಮ, ಶಿವಯೋಗಿಯ ಜ್ಞಾನ ಮಹತ್ವವಾದವು ಎನ್ನುತ್ತಾನೆ.

ಆತ್ಮ ಗಂಗೆಯ ಮಿಂದು । ಜ್ಯೋತಿಲಿಂಗವನರಿಯೆ
ಪಾತಕವು ಕೋಟಿ ಪರಿಯಲ್ಕೆ ಪರಿಶುದ್ಧ
ಆತುಮನೆ ಅಕ್ಕು ಸರ್ವಜ್ಞ[೧೮೫]

ಆಧ್ಯಾತ್ಮ, ಭಕ್ತಿ, ಸಾಧನೆಗಳು ಕಪಟತನದಿಂದ ಬರಲು ಸಾಧ್ಯವಿಲ್ಲವೆನ್ನುವ ಮಾತನ್ನು ಸರ್ವಜ್ಞ ಹೇಳುತ್ತಾನೆ. ವಿನಯ, ಸಜ್ಜನಿಕೆ ಸಕಲರಿಗೆ ಲೇಸ ಬಯಸುವ ಗುಣಗಳು ಮನುಷ್ಯನಲ್ಲಿ ಈಶತ್ವವನ್ನು ಬೆಳೆಸಬಲ್ಲವು ಎಂದು ಆತ ನಂಬಿದಂತಿದೆ.

ಈಶತ್ವವುಳ್ಳನಕ । ಈಶ್ವರನು ತಾನಕ್ಕು ।
ಈಶತ್ವ ಹೋಗೆ ದಾರವದು ಹರಿದು ಮಣಿ
ಸೂಸಿದಂತಕ್ಕು ಸರ್ವಜ್ಞ[೧೮೬]

ಗುಡಿ ಗುಂಡಾರದಲ್ಲಿ ಹಾಳು ಮಾತುಗಳನ್ನು ಆಡುತ್ತ ಕುಳಿತರೆ ಶಿವಯೋಗವು ಸಾಧ್ಯವಿಲ್ಲ. ತನ್ನನ್ನು ಕಾಡುವ ಮೇಳಗಳನ್ನು ಬಿಡದೆ ಮುಕ್ತಿಯಿಲ್ಲ. ಆಸೆಗಳನ್ನು ತ್ಯಜಿಸುತ್ತ ಬಂದರೆ ಕೈಲಾಸ ಇಲ್ಲಿಯೆ ನಿರ್ಮಾಣವಾಗಬಲ್ಲುದೆಂದು ಸರ್ವಜ್ಞನ ಅಭಿಪ್ರಾಯವಾಗಿದೆ. ದೈಹಿಕ ದಂಡನೆಯಿಂದ ಮಾತ್ರ ಅಲೌಕಿಕತೆ ಪ್ರಕಟಗೊಳ್ಳುವುದು ಅಸಾಧ್ಯವೆಂದು ಆತ ಹೇಳಿದ.

ಒಡಲ ದಂಡಿಸಿ ಮುಕ್ತಿ । ಪಡೆವೆನೆಂಬುವ ನೆಗ್ಗ ।
ಬಡಿಗೆಯಲಿ ಹುತ್ತ ಹೊಡೆಯಲಡಗಿಹ ಸರ್ಪ।
ಮಡಿದಿಹುದೆ ಹೇಳು ಸರ್ವಜ್ಞ[೧೮೭]

ಮನಸ್ಸಿನ ಸರ್ಪವನ್ನು ಬಡಿಗೆಯಿಂದ ಹೊಡೆದು ಸಾಯಿಸಲು ಸಾಧ್ಯವಿಲ್ಲವೆನ್ನುವ ಮಹತ್ವದ ವಿಚಾರವನ್ನು ಸರ್ವಜ್ಞ ಹೇಳುತ್ತಾನೆ. ಆತ್ಮಸಾಧನೆಯಿಂದಲ್ಲದೆ, ಕಾರುಣ್ಯದಿಂದಲ್ಲದೆ ಅದನ್ನು ಮೆಟ್ಟುವುದು ಕಷ್ಟಸಾಧ್ಯವೆನ್ನುವ ಮಾತಿನಲ್ಲಿ ಭೋಗ- ಯೋಗಗಳ ಸಾಮರಸ್ಯ ಅಡಕವಾಗಿದೆ. ದಾರ್ಶನಿಕರು, ಕವಿಗಳು ಹೇಳಿದ ಸಮನ್ವಯದ ಮಾತೂ ಅದಾಗಿದೆ. ಇದ್ದಲ್ಲಿಯೂ ಸಲ್ಲಬೇಕು, ಹೋಗಿದ್ದಲ್ಲಿಯೂ ಸಲ್ಲಬೇಕು, ಗಿರಿಯ ಮೇಲಿದ್ದರೂ ಸಲ್ಲಬೇಕು ಎಂದು ಹೇಳುವ ಮೂಲಕ ಬೇಂದ್ರೆಯವರಿಗೆ ಸರ್ವಜ್ಞ ಪ್ರಿಯನಾದನು.

ಜೀವದ ಅನುಭವಗಳಿಂದ ಸಾಧಿಸುವ ಅನುಭೂತಿಯು ಸರ್ವಶ್ರೇಷ್ಠವಾದುದಾಗಿದೆ. ಮನಸ್ಸು ಮಾಗಿದಾಗ ಸಂತೃಪ್ತಿ ಉಂಟಾಗುತ್ತದೆ. ಅಂತಹ ಸಂತೃಪ್ತಿ ಎಲ್ಲ ಐಶ್ವರ್ಯಕ್ಕಿಂತಲೂ ದೊಡ್ಡದೆನ್ನುವ ಮಾತನ್ನು ಆತ ಆಡುತ್ತಾನೆ.

ಜನಕೆ ರಂಜನೆ ಲೇಸು । ವನಕೆ ಪುಷ್ಪವು ಲೇಸು ।
ಧನಕಿಂದ ಬುದ್ಧಿನೆರೆ ಲೇಸು । ಬುದ್ಧಿಯಿಂ ।
ಅನುಭಾವ ಲೇಸು ಸರ್ವಜ್ಞ[೧೮೮]

ಸ್ವಾನುಭವ ಮತ್ತು ಲೋಕದ ಅನುಭವಗಳಿಂದ ಆತನ ಉಕ್ತಿಗಳು ಸಾಧನೆಯ ಒಂದು ಹಂತವನ್ನು ಪ್ರಕಟಿಸಲು ಹವಣಿಸುತ್ತವೆ. ಸ್ವಾರಸ್ಯಕರ ನಿರೂಪಣೆಯಿಂದ ಆತನ ವಚನಗಳು ಜನರ ಬಾಯಲ್ಲಿ ಉಳಿಯುವಂತಹವು. 'ಅವನದು ಮುಖ್ಯವಾಗಿ ಜೀವನ ಪ್ರೀತಿಯಿಂದ ಹುಟ್ಟಿದ ಮಾನವಧರ್ಮ. ಸುತ್ತಣ ಬದುಕನ್ನು ಹಸನು ಮಾಡುವ

ಸುಧಾರಕತನ ಅವನ ಅಭಿವ್ಯಕ್ತಿಯ ಮೂಲ ಪ್ರೇರಣೆ'[೧೯] ಎಂದು ಜಿ.ಎಸ್.ಶಿವರುದ್ರಪ್ಪನವರು ಅವನ ವ್ಯಂಗ್ಯ, ವಿನೋದದ ಮಾತು, ವಿನಯ, ಮನುಷ್ಯ ಪ್ರೇಮಗಳನ್ನು ಕೊಂಡಾಡುತ್ತಾರೆ. ಉಪಮೆ, ರೂಪಕಗಳನ್ನು ಸಮರ್ಥವಾಗಿ ಬಳಸುವ ಸರ್ವಜ್ಞನ ಅಭಿವ್ಯಕ್ತಿಯನ್ನು ಬೇಂದ್ರೆಯವರೂ ಸಹ ಮೆಚ್ಚಿಕೊಳ್ಳುತ್ತಾರೆ. 'ಮಾತಿನ ಔಚಿತ್ಯ, ಉಪಮೆಯ ಸಮರ್ಪಕತೆ, ದೃಷ್ಟಾಂತದ ಸಮೀಪತೆ, ಅನುಭವದ ವಿಶಾಲತೆ, ಅವಲೋಕನದ ಸೂಕ್ಷ್ಮತೆ ಇವುಗಳನ್ನು ಸಮನಾಗಿ ಅಭ್ಯಾಸ ಮಾಡಬೇಕಾದರೆ ಸರ್ವಜ್ಞನ ವಚನಗಳಂಥ ಬೇರೆ ಪುಸ್ತಕವಿಲ್ಲ. ಅವನ ಜಾತಿ ಮಾನವ ಜಾತಿ, ಅವನ ಮತ ದೇವ ಮತ, ಅವನ ಕಾಲ ಸರ್ವಕಾಲ.'[೨೦] ಮಾತು ಹಾಗೂ ಅನುಭವಗಳ ಎರಕ ಹೊಯ್ದಂತಿರುವ ಸರ್ವಜ್ಞನ ತ್ರಿಪದಿಗಳನ್ನು ಬೇಂದ್ರೆಯವರು ಪ್ರೀತಿ-ವಿಸ್ಮಯಗಳಿಂದ ಕಂಡಿದ್ದಾರೆ.

೩.೧೯ ಶಿಶುನಾಳ ಶರೀಫರು :

ಬಸವಣ್ಣ, ಅಲ್ಲಮಪ್ರಭು, ಮಹಾದೇವಿಯಕ್ಕ, ಸರ್ವಜ್ಞ, ಕನಕದಾಸ ಮುಂತಾದ ಪರಮಾತ್ಮನ ಭಕ್ತರು ತುಳಿದ ಹಾದಿಯನ್ನೆ ಶರೀಫ ಸಾಹೇಬರು ತುಳಿದರು. ಶರೀಫರು ಪಡೆದುಕೊಂಡ ಅನುಭವ ತುಂಬ ವಿಶಿಷ್ಟವಾದುದಾಗಿದೆ. ಸಂಸಾರಿಯೂ, ಸನ್ಯಾಸಿಯೂ ಆಗಿ ಎಲ್ಲ ಮತಗಳನ್ನು ಗೌರವಿಸುವ ಸಂತನಾಗಿ ಶರೀಫರು ಭಕ್ತಿಮಾರ್ಗದ ಮಹತ್ವವನ್ನು ತಮ್ಮ ಕಾವ್ಯದ ಮೂಲಕ ವಿವರಿಸುತ್ತಾರೆ. ಅವರ ಅನುಭವ ವೈವಿಧ್ಯಮಯವಾಗಿರುವಂತೆ ಅವರ ಕಾವ್ಯರಚನೆ ಕೂಡ ತತ್ವಪದ, ದಂಡಕ, ಕಾಲಜ್ಞಾನ ಪದ್ಯ, ಲಾವಣಿ ಹಾಡು, ರಿವಾಯತ್ ಪದಗಳಂತಹ ಹಲವು ರೂಪಗಳಿಂದ ಗಮನ ಸೆಳೆಯುತ್ತದೆ. ಜೀವನದ ತಿರುಳನ್ನು ಕಂಡುಂಡು ಅಲೌಕಿಕ ಬದುಕಿನ ಎಳೆಗಳನ್ನು ಈ ಜಗತ್ತಿಗೆ ಜೋಡಿಸಿಕೊಂಡು ಆಧ್ಯಾತ್ಮಿಕ ಜ್ಞಾನವನ್ನು ಉಣಬಡಿಸಿದರು.

ಜೀವನದ ಗುರಿಯೇನು ಎಂದು ಜ್ಞಾನಿಯು ಆಲೋಚಿಸತೊಡಗಿದಾಗಲೆ 'ಪರ'ದ ಹಾದಿಯ ಬಗ್ಗೆ ಚಿಂತನೆ ಆರಂಭವಾಗುತ್ತದೆ. ಈ ಲೋಕದ ನಿಗೂಢತೆಯನ್ನು ತಿಳಿಯುವ, ಬರಿಗಣ್ಣಿಗೆ ಕಾಣದ ವಸ್ತುವನ್ನು ಮನಸ್ಸಿನ ಕಣ್ಣಿನಿಂದ ಕಾಣುವ, ಅಂತರಂಗದಲ್ಲಿರುವ ರತ್ನವನ್ನು ಅರಿಯುವ ಪ್ರಯತ್ನವನ್ನು ಶರಣರು-ದಾಸರು ಮಾಡಿದಂತೆ ನಿಜಗುಣರು, ಮುಪ್ಪಿನಾರ್ಯರು, ಬಾಲಲೀಲಾ ಮಹಾಂತ ಶಿವಯೋಗಿ, ಕಡಕೋಳ ಮಡಿವಾಳಪ್ಪ, ಶಿಶುನಾಳ ಶರೀಫರು ಮಾಡಿದರು. ಹಾಗಾಗಿ ಶರೀಫರು ಕೂಡ ಆ ಪರಂಪರೆಗೆ ಸೇರಿದವರು. ಆಧುನಿಕ ನಾಗರಿಕತೆಯು ಒಡ್ಡಿದ ತಲ್ಲಣಗಳನ್ನು ಅವರು ಅನುಭವಿಸಿದರೂ ಹಿಂದಿನ ಭಕ್ತಿ ಹಾಗೂ ಅನುಭಾವ ಪರಂಪರೆಗೆ ತಮ್ಮನ್ನು ಸಮರ್ಪಿಸಿಕೊಂಡರು. ಅಂತಹ ಅನುಭಾವ ಸಂಪ್ರದಾಯಕ್ಕೆ ಸೇರಿದ್ದರೂ ಅವರ ಅನುಭಾವದ ಅಭಿವ್ಯಕ್ತಿ ಇತರರಿಗಿಂತ ಭಿನ್ನವಾಗಿದೆ. ಮುಸ್ಲಿಂ ಮತದಲ್ಲಿ ಶರೀಫರು ಹುಟ್ಟಿದರೂ ಕೂಡ ವೀರಶೈವ ಶರಣರ ಸಂಪ್ರದಾಯ ಅವರನ್ನು ಹಿಡಿದಿಟ್ಟಿತ್ತು. 'ಅವರು ಧರ್ಮದ ದೃಷ್ಟಿಯಿಂದ ಮುಸಲ್ಮಾನರು; ಆದರೆ ನಂಬಿಕೆಯ ದೃಷ್ಟಿಯಿಂದ ವೀರಶೈವರು. ವೃತ್ತಿಯ ದೃಷ್ಟಿಯಿಂದ ಒಕ್ಕಲಿಗರು. ಆದರೆ ಕೊನೆಯಲ್ಲಿ ಈ ಎಲ್ಲ ಅನುಭವ ಮತ್ತು ತಿಳುವಳಿಕೆಯನ್ನು ಅನುಭಾವದ ಅಭಿವ್ಯಕ್ತಿಗಾಗಿ ಉಪಯೋಗಿಸಿಕೊಂಡ ಕವಿ.'[೨೧] ಸಮಾನತೆ, ಇಷ್ಟಲಿಂಗ, ಮಹಿಳಾ

ಸ್ವಾತಂತ್ರ್ಯ ಮುಂತಾದ ಅದರ ಸಮಭಾವ ದೃಷ್ಟಿ ಹಾಗೂ ಭಕ್ತಿಯಿಂದಲೆ ನಿಜವಾದ ಸೌಖ್ಯವನ್ನು ಅರಿಯಬಹುದಾಗಿದೆಯೆಂಬ ತಿಳುವಳಿಕೆ ಅವರಿಗೆ ಇಷ್ಟವಾಗಿದ್ದವು. ''ಶರೀಫರು ಚಿಕ್ಕಂದಿನಲ್ಲಿ ಸ್ಥಳೀಯ ಹಿರೇಮಠದ ಸಿದ್ಧರಾಮಯ್ಯನವರ ಸಹಾಯ ಸಹಕಾರಗಳಿಂದ ವೀರಶೈವ ಧರ್ಮ ಕುರಿತು ಅಧ್ಯಯನ ಮಾಡಿ ಕಲ್ಯಾಣದ ಬಸವಣ್ಣನವರ ಭಕ್ತಿಯ ಒಲ್ಮೆಗೆ, ಪ್ರಭುದೇವರ ಆತ್ಮಾನುಸಂಧಾನಕ್ಕೆ ಮಾರುಹೋಗಿ 'ಬಸವಣ್ಣನಂಥ ಭಕ್ತನಿಲ್ಲ; ಪ್ರಭುದೇವರಂಥ ಪರಮಾತ್ಮನಿಲ್ಲ' ಎಂಬ ಉದ್ಗಾರ ತೆಗೆದರು... ಮಠ, ಮಸೀದಿಗಳಲ್ಲಿ ಮಾತ್ರ ದೇವರಿರುವನೆಂದು ಪುರೋಹಿತ ವರ್ಗದವರು ಪ್ರಚಾರ ಮಾಡಿ ಭಾವುಕರ ಶೋಷಣೆ ಮಾಡುವುದನ್ನು ಶರೀಫರು ಅಣಕವಾಡಿದರು. 'ಮಣ್ಣ ಬಿಟ್ಟು ಮಡಕೆ ಇಲ್ಲ; ತನ್ನ ಬಿಟ್ಟು ದೇವರಿಲ್ಲ'ವೆಂಬ ಅದ್ವೈತ ಸಿದ್ಧಾಂತದಂತೆ ದೇವರನ್ನು ಬಾಹ್ಯದಲ್ಲರಸದೇ ಪ್ರತಿಯೊಬ್ಬರು ತಮ್ಮ ಅಂತರಂಗದಲ್ಲಿಯೇ ಕಾಣಬೇಕೆಂದು ಬೋಧಿಸಿದರು''[೯೨] ಎಂದು ಶಿವಾನಂದ ಗುಬ್ಬಣ್ಣವರ ಅವರು ಬಸವಣ್ಣನಂತಹ ಇಹ-ಪರದ ಮಾರ್ಗವನ್ನು ಶರೀಫರು ತುಳಿದರೆಂಬುದನ್ನು ಹೇಳುತ್ತಾರೆ. ತನ್ನ ಮತ, ಅನ್ಯಮತವೆನ್ನದೆ ಕರ್ಮಠವಾದ ವಿಚಾರಗಳನ್ನು, ನಂಬಿಕೆಗಳನ್ನು ಅವರು ಖಂಡಿಸಿದರು.

ಗುಡಿಯ ನೋಡಿರಣ್ಣಾ ದೇಹದ
ಗುಡಿಯ ನೋಡಿರಣ್ಣ
ಗುಡಿಯ ನೋಡಿರಿದು
ಪೊಡವಿಗೆ ಒಡೆಯನು
ಅಡಗಿಕೊಂಡು ಕಡುಬೆಡಗಿನೊಳಿರುತಿಹ
ಗುಡಿಯ ನೋಡಿರಣ್ಣಾ[೯೩]

ಎಂದು ಆರಂಭವಾಗುವ ಗುಡಿಯ ನೋಡಿರಣ್ಣಾ ಎನ್ನುವ ಶರೀಫರ ಪದ್ಯ ಮನುಷ್ಯನ ದೇಹದೊಳಗೆ ಚೈತನ್ಯದಾಯಕನು ವಾಸಿಸುತ್ತಿದ್ದಾನೆ ಎಂದು ಹೇಳುತ್ತದೆ. ಬಸವಣ್ಣನವರೂ ಅದನ್ನೆ ಹೇಳುತ್ತಾರೆ :

ಉಳ್ಳವರು ಶಿವಾಲಯ ಮಾಡುವರು
ನಾನೇನ ಮಾಡಲಿ ಬಡವನಯ್ಯಾ
ಎನ್ನ ಕಾಲೇ ಕಂಭ, ದೇಹವೇ ದೇಗುಲ
ಶಿರವೆ ಹೊನ್ನ ಕಳಸವಯ್ಯಾ?[೯೪]

ಬಸವಣ್ಣನವರು ತಮ್ಮ ವಚನದಲ್ಲಿ ಮನುಷ್ಯನ ದೇಹಕ್ಕಿಂತ ದೊಡ್ಡ ದೇಗುಲವಿಲ್ಲ ಎಂದು ಪರಮಾತ್ಮನನ್ನು ಕಾಣಬೇಕಾಗಿರುವುದು ಅನುಭಾವವನ್ನು ಸಾಧಿಸುವದರ ಮೂಲಕವೆಂದು ಸ್ಪಷ್ಟೋಕ್ತಿಯಲ್ಲಿ ಹೇಳಿದ್ದಾರೆ. ಅದ್ವೈತ ಪರಂಪರೆಯನ್ನು ಪಾಲಿಸುವುದರ ಮೂಲಕ ಶರೀಫರು ಕೂಡ ಶಿವಯೋಗವೆನ್ನುವುದು ಮಂದಿರದಲ್ಲಿರದೆ ಮನಸ್ಸನ್ನು ಗೆಲ್ಲುವುದರಲ್ಲಿದೆಯೆನ್ನುತ್ತಾರೆ. ಆಸೆಯೆಂಬ ಮಾಯೆಯನ್ನು ಗೆದ್ದವನೆ ಶಿವಯೋಗಿಯಾಗುತ್ತಾನೆ.

ಸಂಸಾರದಿಂದ ಸದ್ಗತಿ ಹೊಂದಿ
ಹವಣವರಿತು ಮಾಯೆಯ ಜಯಿಸಿ
ಮರಣ ಗೆಲಿದವನೆ ಶಿವಯೋಗಿ
ಸಕಲ ವಿಷಯುಗಳನ್ನು ನಿರಾಕರಿಸಿ
ಜವದ ಕೈಯೊಳು ಸಿಗದೆ ನಡೆದವನೇ ಶಿವಯೋಗಿ[೧೯೫]

ಅರಿವಿನ ಹಾದಿಗೆ ಬರುತ್ತಿದ್ದರೆ, ಪ್ರಭು ಬಂದು ವಾಲುತ್ತಿರುವ ನಮ್ಮ ಜೋಲಿ ಹಿಡಿದು ಸಂಭಾಳಿಸುತ್ತನೆಂಬ ನಂಬಿಕೆ ಅವರಲ್ಲಿದೆ. ಕುಂಬಾರನಿದ್ದವನು ಮಣ್ಣಿನಿಂದ ಮೂರ್ತಿಯನ್ನು ಮಾಡಿದಂತೆ ಮನಸ್ಸೆಂಬ ಅರಲನ್ನು ನಮಗೆ ಬೇಕಾದ ರೂಪಕ್ಕೆ ತಿರುಗಿಸಬೇಕೆಂದು ಶರೀಫರು ಹೇಳುತ್ತಾರೆ.

ಕಾಲಕರ್ಮವೆಂಬ ಅರಲನು ತುಳಿದು
ಮಳಲಿನ ಮಧ್ಯದೊಳಿದು ತಾನಿಳಿದು
ಮೂಲ ಬ್ರಹ್ಮದಾಕಾರದ್ದೊಳವಿಕೆಯ
ಜೋಲಿಯೊಳಗ ಪ್ರಭು ಕೋಲನ್ನಿಡಿವಾ[೧೯೬]

ಸದ್ಗುಣ, ಭಕ್ತಿಗಳೆಂಬ ಅರಲು ನೀರು ಕಲಸಿಕೊಂಡು ನಾನಾ ಆಮಿಷಗಳ ಕೆಸರಿನಲ್ಲಿ ಅನುಭಾವವೆಂಬ ಕುಂಭವನ್ನು ತಿರುಗುತ್ತಿರುವ ತಿಗರಿಯ ಮೇಲಿಂದ ಕೊರೆಯಬೇಕೆಂದು ಶರೀಫರು ಹೇಳುತ್ತಾರೆ. ಆಧ್ಯಾತ್ಮದ ಹಾದಿ ಎಷ್ಟು ಕಷ್ಟದ್ದೆನ್ನುವ ಅರಿವನ್ನು ಅವರು ಮೂಡಿಸುತ್ತಾರೆ. ಕುಂಬಾರಿಕೆ ವೃತ್ತಿಯಲ್ಲಿನ ನಿಪುಣತೆಯನ್ನು ಅನುಭಾವ ಗಳಿಕೆಯ ಪ್ರಯತ್ನಕ್ಕೆ ಹೋಲಿಸಿ-

ಪೊಳ್ಳ ಗಡಗಿ ಬಡಿದಿಟ್ಟು ಶಿಶುವಿನಾಳ
ಆಳುವ ದೊರಿ ಆವಿಗಿ ಹಾಕಿದ[೧೯೭]

ಮಣ್ಣಿನ ಪಾತ್ರೆಗಳನ್ನು ತಯಾರಿಸಿ ಪೊಳ್ಳಾಗಿರುವಂತೆ ರೂಪುಕೊಟ್ಟು ಕಾಳು, ಕಡಿ, ನೀರು, ಅಡಿಗೆ ಹಿಡಿಸುವಂತೆ ನೋಡಿಕೊಂಡಿರುವ ಕುಂಬಾರನು ಹಸಿ ಗಡಿಗೆಗಳು ಒಣಗಿದ ಮೇಲೆ ಅವುಗಳನ್ನು ಆವಿಗಿಯಲ್ಲಿ ಸುಟ್ಟು ಜನೋಪಯೋಗಿ ವಸ್ತುಗಳನ್ನು ಮಾಡುತ್ತಾನೆ. ಒಲೆಯ ಮೇಲೆ ಗಡಿಗೆ ಇಟ್ಟು ಆಹಾರವನ್ನು ಕುದಿಸಿಕೊಳ್ಳುವಂತೆ ಮಣ್ಣಿನ ಮಡಕೆಗಳು ತಯಾರಾಗುತ್ತವೆ. ಆಧ್ಯಾತ್ಮದ ಸಂಪತ್ತು ಕೂಡ ಹಾಗೆಯೆ ಶೇಖರಣೆಯಾಗಬೇಕು. ಅರಲು-ನೀರು ಕಲಸಿ, ಹದವಾಗಿ ತುಳಿದು, ಉಳಿಯ ಪೆಟ್ಟು ತಿಂದು, ಆವಿಗೆಯಲ್ಲಿ ಸುಟ್ಟು ಹೊರಬರಬೇಕು. ಮಡಕೆ ತಯಾರಾಗುವ ರೀತಿಯಲ್ಲಿಯೆ ಮನಸ್ಸಿನ ಏಳ್ಗೆಯೂ ಸಾಧ್ಯವಾಗಬೇಕು. ಕಾಮ-ಕ್ರೋಧಗಳನ್ನು ಮೀರುವಂತಾಗಬೇಕು. ಶಿಶುವಿನಾಳವನ್ನು ಆಳುತ್ತಿರುವ ಕುಂಬಾರ ದೊರೆ (ದೇವರು) ಹಾಕಿರುವ ಆವಿಗೆಯಲ್ಲಿ ಭಕ್ತನಾದವನು ಬೆಂದು ಬರಬೇಕು ಎಂದು ಶರೀಫರು ಸೂಚ್ಯವಾಗಿ ತಿಳಿಸುತ್ತಾರೆ.

'ಕುಂಬಾರಗ ಪದ ಬರಕೊಟ್ಟೆನು' ಎನ್ನುವ ಶೀರ್ಷಿಕೆಯ ಈ ಪದ್ಯ ಇನ್ನೊಂದು ರೀತಿಯಲ್ಲಿ ಲೌಕಿಕದ ಸಂಗತಿಗಳ ಮಣ್ಣುರಾಡಿಯಲ್ಲಿ ಅಲೌಕಿಕದ ಕುಂಭವನ್ನು ನಿರ್ಮಿಸುತ್ತಿರುವ ಕಲಾಕಾರನು ತನ್ನ ಪದ್ಯವನ್ನು ಬರೆದುಕೊಂಡನೆಂದು ಹೇಳುವ ಬಗೆಯಾಗಿರಬಹುದು.

ಕುಂಬಾರಗ ಪದ ಬರಕೊಟ್ಟೆನು ಸದ್ಗುರು
ಸಾಂಬಾ ವಿದುಧೃತ ಬಿಂಬಾ[೧೯೮]

ಪ್ರಳಯಕ್ಕೆ ಸಿಲುಕದ ಪದವು, ಜಗತ್ತಿನಲ್ಲಿ ಸತ್ಯವನ್ನು ಮನಗಾಣಿಸುವ ಪದವು ಶಿಶುನಾಳಧೀಶನನ್ನು ಒಲಿಸಿಕೊಂಡಾಗ ಸುಲಭವಾಗಿ ದಕ್ಕುತ್ತದೆ.

ಲಯ ಪ್ರಳಯಕೆ ಒಳಗಾಗದ ಪದವು
ನಿಲಯದೊಳು ನಿಜ ನಿಲಿಸುವ ಪದವು
ಒಲಿಸಿಕೊಂಡು ಶಿಶುನಾಳೇಶನು
ಸುಲಭದಿಂದ ಎನಗ್ಹೇಳಿದ ಪದವು[೧೯೯]

ಒಂಭತ್ತು ಬಾಗಿಲುಗಳಿರುವ ಮನೆಯಿಂದ ಊರ ಹೊರಗಿರುವ ಮಠಕ್ಕೆ ದಾರಿಯನ್ನು ಕಂಡುಕೊಳ್ಳುವದರಲ್ಲಿ ಆಧ್ಯಾತ್ಮಿಕ ಅನುಭೂತಿ ಅಡಗಿದೆ ಎಂಬುದನ್ನು ಶರೀಫರು ಹೇಳಿದರು. ಮಠದ ಬಾಗಿಲಿನಲ್ಲಿ ಶಿವಲೋಕದಿಂದ ಬಂದಿರುವ ಸಾಧುವೊಬ್ಬ ಮಠದ ಒಳಗೆ ಬರುವ ಭಕ್ತನಿಗಾಗಿ ಕಾಯ್ದು ನಿಂತಿದ್ದಾನೆ. ಊರ ಹೊರಗೆ ಎಂದರೆ ಲೌಕಿಕ ಸಂಗತಿಗಳನ್ನು ಬಿಡುವದಾಗಿದೆ. 'ವಿಷಯರಹಿತನ ಮಾಡಿ, ಭಕ್ತಿರಸವ ದಣಿಯೆ ಮೇಯಿಸಿ ಸುಬುದ್ಧಿ ಎಂಬುದಕವನೆರೆದು, ನೋಡಿ ಸಲಹಯ್ಯಾ'[೨೦೦] ಎಂದು ಬಸವಣ್ಣನವರು ಹೇಳುವಂತೆ ಶರೀಫರು 'ವಿಷಯದೊಳಗೆ ಮನಸನಿಟ್ಟು ಹುಸಿಯ ಬೀಳುವರೇನೋ ಮರುಳೆ'[೨೦೧] ಎಂದು ಕೇಳುವುದು ತುಂಬ ಸಂಗತವಾಗಿದೆ. ಭಕ್ತಿ ಹುಸಿಯಾಗಬಾರದೆನ್ನುವ ಎಚ್ಚರಿಕೆ ಶರೀಫರನ್ನು ಉದ್ದಕ್ಕೂ ಕಾಡಿದೆ. ಎಂದೆಂದೂ ಮರೆಯದಂತಹ ಶಾಂತ ಅನುಭವವನ್ನು ನೀಡುವ, ಎದೆಯ ತಳಮಳವನ್ನು ದೂರ ಮಾಡುವ, ಸೃಷ್ಟಿಯು ಲೀಲೆಯೆಂಬ ವಿಸ್ಮಯ ತೋರುವ, ಅಂಬರಕ್ಕೆ ಹಾರುವ, ನಿಜದ ಪದದಲ್ಲಿ ಆನಂದ ಹುಡುಕುವ ದೈವಾನುಭೂತಿಯ ಮಾರ್ಗವನ್ನು ಶರೀಫರು ಕಂಡುಕೊಂಡಿದ್ದಾರೆ:

ಎಂತು ಮರಿಯಲವ್ವಾ ಇವನಾ
ಶಾಂತ ಶರೀಫನಾ
ಅಂತರಂಗದಲ್ಲೇ ಬಂದು
ಚಿಂತೆ ದೂರ ಮಾಡಿದನವ್ವಾ
ಕಾಲ ಕರ್ಮವ ಗೆದ್ದು

ಲೀಲೆಯಾಡಿದನೆ

ಮೇಲುಗಿರಿಯ ಮೇಲಕ್ಕೆ ಹತ್ತಿ

ಅಲಕ್ಕನೆ ಹಾರಿದನೆ

ಜನನ ಮರಣವ ಗೆದ್ದು ತಾನು

ಶಿವನ ಲೋಕ ಕಂಡನೆ

ಭುವನದೊಳು ಶಿಶುನಾಳ-

ಧೀಶನನ್ನು ಹಾಡಿದನೆ[೨೦೨]

ತಾನು ಬಾಳಿ ಬದುಕುತ್ತಿರುವ ಭೂಮಿಯ ಪ್ರತಿಮೆಗಳಿಂದಲೆ, ಗಿರಿ ವನಗಳಿಂದಲೆ ದೈವಿಕ ಅನುಭೂತಿಯನ್ನು ಶರೀಫರು ವ್ಯಕ್ತಪಡಿಸುತ್ತಿದ್ದಾರೆ. ಒಮ್ಮೆಂದೊಮ್ಮೆಗೆ ಹೊಳೆಯುವುದು, ಬೆಳಕು ಪ್ರಕಾಶಿಸುವುದು, ಅಲಕ್ಕನೆ ಹಾರುವುದು ಅದೃಷ್ಟದ ರೂಪದಲ್ಲಿ ಆಧ್ಯಾತ್ಮಿಕ ಒಲವು ಪ್ರಕಟಗೊಳ್ಳುವ ರೀತಿಯಾಗಿದೆ. ಬೇಂದ್ರೆಯವರ 'ಕುದರಿಯವರ ಕಿವಿಮಾತು' ಪದ್ಯದಲ್ಲಿರುವ ಇಂತಹ ಅಲಕ್ಕೆನೆ ದೊರಕುವಂತಹ ಅನುಭಾವದ ಕಲ್ಪನೆಯನ್ನು ಒಂದು ಸಾದೃಶ್ಯದ ಉದಾಹರಣೆಯನ್ನಾಗಿ ನೋಡಬಹುದು.

ಸಂಜೀ ಮುಂಜಾನೆ ನಾವು

ಎಂದಾರೆ ಒಂದ ದಿನ

ಅಲಕ್ಕ್ಂತ ನಿಮ ಮುಂದ

ಬರತೇವಿ ಆವಾಗ

ಬೊಗಸಿ ತುಂಬಾ ಭಕ್ತೀ ಹಿಡಿದು

ಅಗಸಿ ಬಾಗಿಲ್ಗೆ ನಿಂದ್ರು

ಕುದುರಿಯುವರು ಅಂದ್ರು[೨೦೩]

ಬೇಂದ್ರೆಯವರ 'ಸ್ವರೂಪದೀಪ' ಎನ್ನುವ ಕವಿತೆಯಲ್ಲಿ ಜೀವಾತ್ಮನ, ಚೈತನ್ಯದಾಯಕನ ಸ್ವರೂಪವನ್ನು ಅರಸುತ್ತ ಹೋಗುವ ಅನುಭವ ಅಭಿವ್ಯಕ್ತಗೊಂಡಿದೆ. ಬೆರಳಿಗೆ ಬೆರಳು ಸೇರಿಸಿ, ಕರುಳನ್ನು ಕರುಳು ಗುರುತು ಹಿಡಿದು ತನ್ನ ಜೀವವನ್ನು ಸಮೀಪಿಸುವ ಪರಮಾತ್ಮನು ಅನುಭಾವದ ಗಾಳಿಯಲ್ಲಿ ಭಕ್ತನನ್ನು ತೇಲಿಸುತ್ತಿದ್ದಾನೆ. ಭಕ್ತನಿಗೆ ಮಾತ್ರ ಅದು ಸಂಪೂರ್ಣ ಗೊತ್ತಾಗುವ ಮೊದಲೆ ಕನಸು ಮುಗಿದಂತೆ ಆ ಅನುಭವ ಮುಗಿಯುತ್ತದೆ. ಆಂತರ್ಯವನ್ನು ಅರಿಯುವ ಆಳಕ್ಕೆ ಹೋಗಿ ಕವಿ ಮತ್ತೆ ಲೌಕಿಕಕ್ಕೆ ಮರಳುತ್ತಾರೆ. ಈ ಪದ್ಯವನ್ನು 'ಬೇಂದ್ರೆ ಕಾವ್ಯದಲ್ಲಿ ನಿಸರ್ಗದ ಅನುಭೂತಿ' ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಚಕಮಕಿ ಹಾದಿ, ಕಂಡೀತೋ ಮಾರಿ
ಎಂದಿನದೀ ನೋಟಾ
ಮೈಯೊಳಗ ಮೈಯ್ಯು ಕೈಯಲ್ಲಿ ಕೈಯ್ಯು
ಕರುಳಾಟಾ ಬೆರಳಾಟಾ
ಅಂಗುಲಿಯ ಉಂಗುರ ಕಳಚಿತ್ತು ಜಾರಿ
ಬಳ್ಳಿಗೋ ಹೂ ಭಾರಾ!
ಗುರುತಿದ್ದರಿರಲಿ, ಕುರುಹ್ಯಾಕ ಬ್ಯಾರೆ?
ಒಲವಲ್ಲಾ ವ್ಯಾಪಾರಾ[೨೦೪]

ಭಗವಂತನು ಭಕ್ತನನ್ನು ನೋಡಿದ ಕೂಡಲೆ ಗುರುತು ಹಿಡಿಯುವ, ಸಾಮೀಪ್ಯ ಕಲ್ಪಿಸುವ ಅಲೌಕಿಕ ಅನುಭವದ ಪರಂಪರೆಯನ್ನು ಕನ್ನಡ ಭಕ್ತಕವಿಗಳಲ್ಲಿ ಕಾಣಬಹುದಾಗಿದೆ.

ಶರೀಫರು ಕೆಲವು ಪದ್ಯಗಳಲ್ಲಿ ಭೂಮಿಗೆ ಒಡೆಯನಾಗಿರುವ ಈಶನು ತನ್ನ ಭಕ್ತನ ಗುರುತು (ಕೂನು) ಹಿಡಿದು ಹತ್ತಿರ ಕರೆಯುವ ನಿದರ್ಶನಗಳನ್ನು ನೋಡಬಹುದು.

ಧರಿಯೊಳು ಮರೆಯುವ ಶಿಶುನಾಳಧೀಶನು
ಶಿಷ್ಯ ಶರೀಫನ ಕೂನ ಹಿಡಿದಾನು[೨೦೫]

* * *

.... ಪರಮಾನಂದ ವನದೊಳಗಿರ್ಪ
ಚೆಂದದಿಂದ ಮಾತನಾಡುವ[೨೦೬]

ಶರೀಫರು ಲೌಕಿಕದಿಂದ ಅಲೌಕಿಕವನ್ನು ಬೆಳಗುವುದು, ಸಾಮಾಜಿಕತೆ ಹಾಗೂ ಭಕ್ತಿ ಪರಂಪರೆ ಎರಡನ್ನೂ ತಮ್ಮ ಅಭಿವ್ಯಕ್ತಿಯ ಕೇಂದ್ರವನ್ನಾಗಿ ಮಾಡಿಕೊಂಡಿರುವುದು, ಗ್ರಾಮೀಣ ಬದುಕಿನ ಸಂಗತಿ ಹಾಗೂ ಭಾಷೆಯಲ್ಲಿಯೆ ತಮ್ಮ ಪದಗಳನ್ನು ಕಟ್ಟಿರುವುದು ನವೋದಯದ ಹಲವು ಕವಿಗಳಿಗೆ ಪ್ರೇರಕ ಸಂಗತಿಯಾಗಿರುವ ಸಾಧ್ಯತೆಯನ್ನು ವಿಮರ್ಶಕರು ಗುರುತಿಸಿದ್ದಾರೆ. 'ಶರೀಫ ಸಾಹೇಬರ ದೃಷ್ಟಿಯಲ್ಲಿ ಲೌಕಿಕದ ಗುರಿ ಪಾರಲೌಕಿಕವೇ ಆಗಿದ್ದರೂ ಲೌಕಿಕ ತ್ಯಾಜ್ಯವೇನಲ್ಲ. ಅದು ತ್ಯಾಜ್ಯನಾಗುವುದು ಅನಿವಾರ್ಯವಾಗಿರಬಹುದಾದರೂ ಅದು ಪ್ರಿಯವೇನೂ ಅಲ್ಲ. ಲೌಕಿಕದ ಬಗ್ಗೆ ಅವರ ಪ್ರೀತಿ ಉಳಿದ ಹಾಡುಗಳಲ್ಲಿಯೂ ಸಾಕಷ್ಟಿದೆ. ನವೋದಯದ ಕೆಲವು ಕವಿಗಳಿಗೆ ಈ ಹಾಡುಗಳು ಭಾಷೆಯ ಬಗ್ಗೆ ದಿಕ್ಸೂಚಿಯಾಗಿವೆ'[೨೦೭] ಎಂದು ಕೀರ್ತಿನಾಥ ಕುರ್ತಕೋಟಿ ಅವರು ಹೇಳಿರುವುದು ಶರೀಫರ ತತ್ವ ಹಾಗೂ ಚೆಲುವಿಕೆಗೆ ಸಾಕ್ಷಿಯಾಗಿದೆ. ಬೇಂದ್ರೆಯವರ ಜೀವನಪ್ರೀತಿಯೂ ಕೂಡ ಇಂತಹ ತೀವ್ರ

ಹಂಬಲ ಹಾಗೂ ಅಭಿಲಾಷೆ ಉಳ್ಳದ್ದು, ಅನುಭಾವಕ್ಕೆ ಮಿಡಿಯುವವರಾಗಿಯೂ ಅವರು ಲೌಕಿಕದ ಸಂಗತಿಗಳನ್ನು ದೂರ ಮಾಡಲಿಲ್ಲ. 'ಶಿಶುನಾಳ ಶರೀಫ ಸಾಹೇಬರ ಆತ್ಮವೇಧಕವಾಣಿ, ಹಳ್ಳಿಪಳ್ಳಿಯ ಓಣಿಓಣಿಗಳೊಳಗಿನ ಮಾತು-ಕಥೆಗಳನ್ನು ರೂಪಕದ ಅವಯವಗಳನ್ನಾಗಿ ಮಾಡಿ, ಆತ್ಮದ ರಂಗುರೂಪನ್ನು ನಿರೂಪಿಸುವ ಯೋಗಕುಶಲವಾಣಿಬೇಕು'[೨೦೮] ಎಂದು ಬೇಂದ್ರೆಯವರು ಹೇಳಿದ್ದಾರೆ. ದೇಶೀಯತೆಯ ಗುಣಗಳಿಂದ ಶಿಶುನಾಳ ಶರೀಫರು ಆಧುನಿಕ ಸಂವೇದನೆ ಕಟ್ಟಿಕೊಟ್ಟಿರುವುದನ್ನು ಪ್ರಶಂಸಿಸುತ್ತಾರೆ. ಶರೀಫರು ಕೂಡ ಭಾಷೆಯಲ್ಲಿ ದೇಶಿ ಹಾಗೂ ಮಾರ್ಗದ ಸಮರ್ಥ ಸಮನ್ವಯಕಾರರಾದರು. ಶರೀಫರು ಸೇರಿದಂತೆ ಕನ್ನಡ ಪರಂಪರೆಯ ಭಕ್ತಿಯ ಸಂವೇದನೆಗಳಿಗೆ ಬೇಂದ್ರೆಯವರು ಮನಸೋತರು. ಯಾವುದೇ ಪ್ರಭಾವ ಅವರ ಮೇಲೆ ಆಗಿದ್ದರೂ ಕೂಡ ಅದನ್ನು ಮೀರುವಷ್ಟು ಸೃಜನಶೀಲ ಪ್ರತಿಭೆಯ ಕಾಣಿಕೆಯನ್ನು ಬೇಂದ್ರೆಯವರು ಕನ್ನಡಕ್ಕೆ ಕೊಡಬಲ್ಲವರಾದರು.

ಅಡಿಟಿಪ್ಪಣಿಗಳು :

೧. ದ.ರಾ. ಬೇಂದ್ರೆ : 'ಸಾಹಿತ್ಯದ ವಿರಾಟ ಸ್ವರೂಪ', ಪು. ೧೧೯, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೨. ಡಾ. ಯು.ಆರ್.ಅನಂತಮೂರ್ತಿ : 'ಯುಗದ ಕವಿ ಬೇಂದ್ರೆ', (ಬೇಂದ್ರೆ ಕಾವ್ಯ:ಜಿ.ಎಸ್.ಆಮೂರ (ಸಂ.)) ಪು. ೫೬, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೩.

೩. ಪ್ರೊ. ಎಸ್.ವಿ.ಪರಮೇಶ್ವರಭಟ್ಟ : ಕುವೆಂಪು ಅವರ ಸೂರ್ಯೋದಯ ಗೀತೆಗಳು, ಲೇಖನ, ಪು. ೮೨೫ ('ಗಂಗೋತ್ರಿ', ಕುವೆಂಪು ಅಭಿನಂದನ ಗ್ರಂಥ), ಗೀತಾ ಬುಕ್ ಹೌಸ್, ಮೈಸೂರು, ೧೯೯೮.

೪. ದ.ರಾ. ಬೇಂದ್ರೆ : 'ಗರಿ', ಪು. ೧., ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಮೂ. ಆ, ೧೯೫೧.

೫. Keats : The Poems of John Keats, p. 120, Ed. Mirian Allott, Longman Norton, 1964.

೬. ಜನಪದ ಗೀತಾಂಜಲಿ : ಸಂ. ದೇಜಗೌ, ಪು. ೨೮, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೯.

೭. ಹಲಸಂಗಿ ಹಾಡು : ಸಂ. ಹಲಸಂಗಿ ಗೆಳೆಯರು, ಪು. ೧೭, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೮. ಅದೇ, ಪು. ೧೮,

೯. ಅದೇ, ಪು. ೧೯.

೧೦. ಅದೇ, ಪು. ೨೦.

೧೧. ಡಾ. ದೇ.ಜ.ಗೌ.: 'ಜನಪದ ಗೀತಾಂಜಲಿ', ಪು. ೧೮-೧೯, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೯.

೧೨. ದ.ರಾ.ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೧೬೭, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೧೩. ದ.ರಾ.ಬೇಂದ್ರೆ: 'ಮುಕ್ತಕಂಠ', ಪು. ೪೮, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೧೪. ದ.ರಾ.ಬೇಂದ್ರೆ: 'ಗರಿ', ಪು. ೧೦೧, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಮೂ.ಆ., ೧೯೫೧.

೧೫. ಅದೇ, ಪು. ೧೦೩.

೧೬. ಅದೇ, ಪು. ೧೧೯.

೧೭. ಡಾ. ಗಿರಡ್ಡಿ ಗೋವಿಂದರಾಜ: 'ಪ್ರಮಾಣು', ಪು. ೬೯, ಕ.ವಿ.ವಿ.ಹಂಪಿ, ೨೦೦೭.

೧೮. ಅದೇ.

೧೯. ದೇಜಗೌ (ಸಂ.) : 'ಜನಪದ ಗೀತಾಂಜಲಿ', ಪು. ೯೦, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೯.

೨೦. ದ.ರಾ.ಬೇಂದ್ರೆ: 'ನಾದಲೀಲೆ', ಪು. ೪೬, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು. ೧೯೫೫.

೨೧. ಅದೇ, ಪು. ೪೭.

೨೨. ಅದೇ, ಪು. ೪೮.

೨೩. ಅದೇ, ಪು. ೯೩.

೨೪. ಅದೇ, ಪು. ೪೮.

೨೫. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ಬಾರೋ ಸಾಧನಕೇರಿಗೆ', ಪು. ೨೪೫, ಮನೋಹರ ಗ್ರಂಥಮಾಲಾ, ಧಾರವಾಡ, ೧೯೯೩.

೨೬. ದ.ರಾ.ಬೇಂದ್ರೆ: 'ನಾದಲೀಲೆ', ಪು. ೭೬, ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೫೫.

೨೭. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ಬಾರೋ ಸಾಧನಕೇರಿಗೆ', ಪು. ೨೪೫, ಮನೋಹರ ಗ್ರಂಥಮಾಲಾ, ಧಾರವಾಡ, ೧೯೯೩.

೨೮. ದೇ.ಜ.ಗೌ. (ಸಂ.) : 'ಜನಪದ ಗೀತಾಂಜಲಿ', ಪು. ೧೮೮, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೯.

೨೯. ಅದೇ.

೩೦. ಅದೇ.

೩೧. ಅದೇ.

೩೨. ಟಿ.ಎಸ್. ಇಲಿಯೆಟ್: Editor's Foot note -Selected Prose, ಪು. ೨೯೯, 'ಪಂಪ : ಪರಂಪರೆಯ ನಿರ್ಮಾಪಕ', ಲೇಖನ - ಪ್ರೊ. ಜಿ.ಎಸ್.ಸಿದ್ಧಲಿಂಗಯ್ಯ ('ಪಂಪ: ಒಂದು ಅಧ್ಯಯನ', ಬೆಂ.ವಿ.ವಿ. ಬೆಂಗಳೂರು, ೧೯೭೩).

೩೩. ಅಲ್ಲಮಪ್ರಭು: 'ಅಲ್ಲಮಪ್ರಭು ಚಿಂತನ', ಪು. ೨೯೧, (ವ.ಸಂ. ೧೧೫೨) ಕ.ಸಾ.ಅ. ಬೆಂಗಳೂರು, ೨೦೦೪.

೩೪. 'ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ ಪ್ರವೇಶ' : ಸಂ. ಡಾ. ಜಿ.ಎಸ್.ಭಟ್, ಪು. ೧೨, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೬.

೩೫. ಡಾ. ಓ.ಎಲ್. ನಾಗಭೂಷಣಸ್ವಾಮಿ, 'ವಿಮರ್ಶೆಯ ಪರಿಭಾಷೆ', ಪು. ೩೨, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ, ೧೯೮೩.

೩೬. ಪಂಪ ಮಹಾಕವಿ ವಿರಚಿತ 'ಆದಿಪುರಾಣ' : ಗದ್ಯಾನುವಾದ ಕೆ.ಎಲ್.ನರಸಿಂಹಶಾಸ್ತ್ರಿ, ಪು. ೫೭, ಕ.ಸಾ.ಪ. ಬೆಂಗಳೂರು, ೧೯೯೯.

೩೭. ಅದೇ, ಪು. ೫೮.

೩೮. ಹು.ಕಾ. ಜಯದೇವ್ : 'ಪಂಪನ ಜೀವನಚಿತ್ರ', ಲೇ. ಪು. ೪೧, 'ಪಂಪ : ಒಂದು ಅಧ್ಯಯನ', ಸಂ: ಜಿ.ಎಸ್.ಶಿವರುದ್ರಪ್ಪ, ಬೆಂ.ವಿ.ವಿ., ಬೆಂಗಳೂರು, ೧೯೮೩.

೩೯. ಅದೇ.

೪೦. ಅದೇ.

೪೧. ಹಂಪ ನಾಗರಾಜಯ್ಯ : ಪು. ೨೫೩, 'ಪಂಪನ ಜೀವನದೃಷ್ಟಿ' ಲೇಖನ ('ಪಂಪ : ಒಂದು ಅಧ್ಯಯನ', ಸಂ. ಜಿ.ಎಸ್.ಎಸ್. ಬೆಂ.ವಿ.ವಿ. ಬೆಂಗಳೂರು, ೧೯೮೩)

೪೨. ದ.ರಾ.ಬೇಂದ್ರೆ; 'ಸಾಹಿತ್ಯದ ವಿರಾಟ ಸ್ವರೂಪ', ಪು. ೩೬೯, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೪.

೪೩. ಡಾ. ಕೆ.ಆರ್.ಸಿದ್ಧಗಂಗಮ್ಮ : 'ಕನ್ನಡ ಭಾವಗೀತೆಗಳಲ್ಲಿ ಪ್ರಕೃತಿ-ಒಂದು ಅಧ್ಯಯನ', ಪು. ೩೩, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಧಾರವಾಡ, ೧೯೯೩.

೪೪. ಅದೇ, ಪು. ೩೨.

೪೫. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ಅಜಿತ ತೀರ್ಥಂಕರ ಪುರಾಣ', ಪು. ೫೦, ಕನ್ನಡ ಸಾಹಿತ್ಯ ಸಂಗಾತಿ, ಪ್ರಸಾರಾಂಗ, ಕ.ವಿ.ವಿ. ಹಂಪಿ, ೧೯೯೭.

೪೬. ದ.ರಾ.ಬೇಂದ್ರೆ; 'ಸಾಹಿತ್ಯದ ವಿರಾಟ ಸ್ವರೂಪ', ಪು. ೨೯೫, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೪.

೪೭. ಹರಿಹರನ ರಗಳೆಗಳು : ಸಂ. ಫ.ಗು.ಹಳಕಟ್ಟಿ, ಪು. ೮೩, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೮.

೪೮. ಜಿ.ಎಸ್.ಶಿವರುದ್ರಪ್ಪ : 'ಸಮಗ್ರ ಗದ್ಯ', ಪು. ೨೮೮, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೯.

೪೯. ಅದೇ.

೫೦. ಡಾ. ಎಂ.ಎಂ. ಕಲಬುರ್ಗಿ : ಪೀಠಿಕೆ 'ಹರಿಹರನ ರಗಳೆಗಳು', ಪು. xi, ಡಾ. ಎಂ.ಎಂ.ಕಲಬುರ್ಗಿ(ಸಂ.), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೫೧. ಅದೇ, ಪು. xi.

೫೨. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ಕನ್ನಡ ಸಾಹಿತ್ಯ ಸಂಗಾತಿ', ಪು. ೧೫೪, ಕ.ವಿ.ವಿ. ಹಂಪಿ, ೧೯೯೭.

೫೩. ಡಾ. ಕೆ.ಆರ್.ಸಿದ್ಧಗಂಗಮ್ಮ : 'ಕನ್ನಡ ಭಾವಗೀತೆಗಳಲ್ಲಿ ಪ್ರಕೃತಿ-ಒಂದು ಅಧ್ಯಯನ', ಪು. ೩೪, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಧಾರವಾಡ, ೧೯೯೩.

೫೪. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ಕನ್ನಡ ಸಾಹಿತ್ಯ ಸಂಗಾತಿ', ಪು. ೧೫೮, ಕ.ವಿ.ವಿ. ಹಂಪಿ, ೧೯೯೭.

೫೫. ಹರಿಹರನ ಪುಷ್ಪರಗಳೆ : 'ಹರಿಹರನ ರಗಳೆಗಳು', ಪು. ೫೦೪, ಡಾ. ಎಂ.ಎಂ.ಕಲಬುರ್ಗಿ (ಸಂ.), ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೧೯೯೯.

೫೬. ವಿ. ಚಂದ್ರಶೇಖರ ನಂಗಲಿ: 'ತಿಟ್ಹತ್ತಿ ತಿರುಗಿ', ಪು. ೨೨, ಸಿವಿಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೨.

೫೭. ಅದೇ, ಪು. ೨೨.

೫೮. ಹರಿಹರನ ಪುಷ್ಪರಗಳೆ : 'ಹರಿಹರನ ರಗಳೆಗಳು', ಪು. ೫೦೨, ಡಾ. ಎಂ.ಎಂ.ಕಲಬುರ್ಗಿ (ಸಂ.), ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೧೯೯೯.

೫೯. ಡಾ. ರಹಮತ್ ತರೀಕೆರೆ : 'ಪುಷ್ಪರಗಳೆ', ಲೇ. ('ನಮ್ಮ ಕನ್ನಡ ಕಾವ್ಯ', ಸಂ: ಓ.ಎಲ್.ನಾಗಭೂಷಣಸ್ವಾಮಿ), ಪು. ೪೭, ಕನ್ನಡ ವಿ.ವಿ. ಹಂಪಿ, ೧೯೯೭.

೬೦. ದ.ರಾ.ಬೇಂದ್ರೆ : 'ಸಾಹಿತ್ಯದ ವಿರಾಟ ಸ್ವರೂಪ', ಪು. ೪೫೨, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೬೧. ಅದೇ, ಪು. ೪೫೧.

೬೨. ದ.ರಾ.ಬೇಂದ್ರೆ : 'ಮರ್ಯಾದೆ', ಪು. ೪೧, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೬.

೬೩. ದ.ರಾ.ಬೇಂದ್ರೆ : 'ನಾಕುತಂತಿ', ಪು. ೭೭-೭೮, ಸಮಾಜ ಪುಸ್ತಕಾಲಯ' ಧಾರವಾಡ, ೧೯೭೪, ದ್ವಿ.ಮು.

೬೪. ಡಾ. ಚಂದ್ರಶೇಖರ ಕಂಬಾರ : 'ಬೇಂದ್ರೆ ಮತ್ತು ಕನ್ನಡ ಕಾವ್ಯ', ಲೇ. (ಕವಿ ಬೇಂದ್ರೆ: ಜಿ.ಎಸ್.ಶಿವರುದ್ರಪ್ಪ (ಸಂ.), ಪು.೮, ಬೆಂಗಳೂರು ವಿ.ವಿ., ಬೆಂಗಳೂರು, ೧೯೭೫.

೬೫. ಅದೇ.

೬೬. ಡಾ. ಗಿರಡ್ಡಿ ಗೋವಿಂದರಾಜ : 'ಪ್ರಮಾಣು', ಪು. ೩೯, ಕ.ವಿ.ವಿ. ಹಂಪಿ, ೨೦೦೭.

೬೭. ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ : ಕುವೆಂಪು, ಮಾಸ್ತಿ (ಸಂ.), ಪು. ೧, ಮೈಸೂರು ವಿ.ವಿ., ಮೈಸೂರು, (ಮೂ.ಮು.) ೧೯೮೮.

೬೮. ಅದೇ, ಪು. ೩೩೪.

೬೯. ಕೀರ್ತಿನಾಥ ಕುರ್ತಕೋಟಿ : ಉದ್ಘಾಟನಾ ಭಾಷಣ, 'ಕುಮಾರವ್ಯಾಸ ಭಾರತ- ಸಾಂಸ್ಕೃತಿಕ ಮುಖಾಮುಖಿ', ಪು. ೯,೧೦, ಕ.ವಿ.ವಿ. ಹಂಪಿ, ೨೦೦೪.

೭೦. ಡಾ. ಎಂ.ಎಂ. ಕಲಬುರ್ಗಿ : 'ದೇಶಿಪರಂಪರೆಯ ಕಾವ್ಯ', ಲೇ. 'ಕುಮಾರವ್ಯಾಸ ಭಾರತ- ಸಾಂಸ್ಕೃತಿಕ ಮುಖಾಮುಖಿ', ಪು. ೨೧೮-೨೧೯, ಕ.ವಿ.ವಿ., ಹಂಪಿ, ೨೦೦೪.

೭೧. ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ : ಕುವೆಂಪು, ಮಾಸ್ತಿ (ಸಂ.), ಪು. ೨, ಮೈಸೂರು ವಿ.ವಿ., ಮೈಸೂರು, (ಮೂ.ಮು.) ೧೯೮೮.

೭೨. ಡಾ. ಜಿ.ಎಸ್.ಶಿವರುದ್ರಪ್ಪ : 'ಸಮಗ್ರ ಗದ್ಯ', ಪು. ೩೪೭, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೯.

೭೩. ದ.ರಾ.ಬೇಂದ್ರೆ : 'ಸಾಹಿತ್ಯದ ವಿರಾಟ ಸ್ವರೂಪ', ಪು. ೪೮೦, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೭೪. ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ : ಕುವೆಂಪು, ಮಾಸ್ತಿ (ಸಂ.), ಪು. ix, ಮೈಸೂರು ವಿ.ವಿ., ಮೈಸೂರು, (ಮೂ.ಮು.) ೧೯೮೮.

೭೫. ಅದೇ, ಪು. ೩೯೧.

೭೬. ಅದೇ, ಪು. xi.

೭೭. ಪ್ರೊ.ಕೀರ್ತಿನಾಥ ಕುರ್ತಕೋಟಿ: ಉದ್ಘಾಟನಾ ಭಾಷಣ, ಪು. ೧೬,೧೭, 'ಕುಮಾರವ್ಯಾಸ ಭಾರತ- ಸಾಂಸ್ಕೃತಿಕ ಮುಖಾಮುಖಿ', ಕ.ವಿ.ವಿ. ಹಂಪಿ, ೨೦೦೪.

೭೮. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ಕನ್ನಡ ಸಾಹಿತ್ಯ ಸಂಗಾತಿ', ಪು. ೧೬, ಕ.ವಿ.ವಿ. ಹಂಪಿ, ೧೯೯೭.

೭೯. ದ.ರಾ.ಬೇಂದ್ರೆ : 'ಸಾಹಿತ್ಯದ ವಿರಾಟ ಸ್ವರೂಪ', ಪು. ೫೮೦, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೮೦. ಅದೇ.

೮೧. ದ.ರಾ.ಬೇಂದ್ರೆ : 'ಮಾತೆಲ್ಲ ಜ್ಯೋತಿ', ಪು.೮, ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್, ಮಣಿಪಾಲ, ೧೯೭೯.

೮೨. ದ.ರಾ.ಬೇಂದ್ರೆ : 'ಸಾಹಿತ್ಯದ ವಿರಾಟ ಸ್ವರೂಪ', ಪು. ೬೧೧-೬೧೨, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೮೩. ಡಾ. ಸಿ.ಎನ್.ರಾಮಚಂದ್ರನ್ : 'ಪರಿಭ್ರಮಣ ಮತ್ತು ಶೋಧ - ಕನ್ನಡ ಜೈಮಿನಿ ಭಾರತದ ಒಂದು ಅಧ್ಯಯನ', ಲೇ., ಪು. ೫೬೭, 'ಶತಮಾನದ ಸಾಹಿತ್ಯ ವಿಮರ್ಶೆ', ಸಂ. ಎಚ್.ಎಸ್.ಆರ್. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧.

೮೪. ಡಾ. ಕೆ.ಆರ್. ಸಿದ್ದಗಂಗಮ್ಮ : 'ಕನ್ನಡ ಭಾವಗೀತೆಗಳಲ್ಲಿ ಪ್ರಕೃತಿ-ಒಂದು ಅಧ್ಯಯನ', ಪು. ೩೮, ಮಹಾಪ್ರಬಂಧ, ಕ.ವಿ.ವಿ. ಧಾರವಾಡ, ೧೯೯೩.

೮೫. ಡಾ. ರಂ.ಶ್ರೀ.ಮುಗಳಿ : 'ಕನ್ನಡ ಸಾಹಿತ್ಯ ಚರಿತ್ರೆ', ಪು. ೮೪, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೬.

೮೬. ಡಾ. ಜಿ.ಎಸ್.ಶಿವರುದ್ರಪ್ಪ : 'ಸಮಗ್ರ ಗದ್ಯ-೧', ಪು. ೧೬೪, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೯.

೮೭. ಅದೇ, ಪು. ೧೯೫.

೮೮. ದ.ರಾ.ಬೇಂದ್ರೆ : 'ಸಾಹಿತ್ಯದ ವಿರಾಟ ಸ್ವರೂಪ', ಪು. ೧೯೬, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೮೯. ಡಾ. ವಿ.ಕೆ.ಗೋಕಾಕ : 'ಅರಳು-ಮರಳು', ಮುನ್ನುಡಿ, ಪು. ೧೭, ಶ್ರೀ ಮಾತಾ ಪ್ರಕಾಶನ, ಧಾರವಾಡ, ಮೂರನೇ ಆವೃತ್ತಿ, ೧೯೯೫.

೯೦. ದ.ರಾ.ಬೇಂದ್ರೆ : 'ಸಾಹಿತ್ಯದ ವಿರಾಟ ಸ್ವರೂಪ', ಪು. ೪೬೧, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೯೧. ಡಾ. ಜಿ.ಎಸ್.ಶಿವರುದ್ರಪ್ಪ : 'ಸಮಗ್ರ ಗದ್ಯ', ಪು. ೧೬೫, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೯.

೯೨. ಬಸವಣ್ಣನವರ ವಚನಗಳು : ಸಂ. ಸ.ಸ.ಮಾಳವಾಡ, ಪು. ೬೮, ಸಾಹಿತ್ಯ ಅಕಾಡೆಮಿ, ಹೊಸದೆಹಲಿ, ೧೯೯೬.

೯೩. ಅದೇ, ಪು. ೧೫೮.

೯೪. ಪ್ರೊ. ಕೀರ್ತಿನಾಥ ಕುರ್ತಕೋಟಿ : 'ಕನ್ನಡ ಸಾಹಿತ್ಯ ಸಂಗಾತಿ', ಪು. ೮೭, ಕ.ವಿ.ವಿ. ಹಂಪಿ, ೧೯೯೭.

೯೫. ಬಸವಣ್ಣನವರ ವಚನಗಳು: ಸಂ. ಸ.ಸ.ಮಾಳವಾಡ, ಪು. ೧೪೧, ಸಾಹಿತ್ಯ ಅಕಾಡೆಮಿ, ಹೊಸದೆಹಲಿ, ೧೯೯೬.

೯೬. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ಕನ್ನಡ ಸಾಹಿತ್ಯ ಸಂಗಾತಿ', ಪು. ೯೧, ಕ.ವಿ.ವಿ. ಹಂಪಿ, ೧೯೯೭.

೯೭. ದ.ರಾ.ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೧೯೬, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೯೮. ಬಸವಣ್ಣನವರ ವಚನಗಳು: ಸಂ. ಸ.ಸ.ಮಾಳವಾಡ, ಪು. ೧೭೬, ಸಾಹಿತ್ಯ ಅಕಾಡೆಮಿ, ಹೊಸದೆಹಲಿ, ೧೯೯೬.

೯೯. ಅಲ್ಲಮನ ವಚನಗಳು: ಸಂ. ಎಲ್. ಬಸವರಾಜು, ಪು. ೫೭, ಗೀತಾ ಬುಕ್ ಹೌಸ್, ಮೈಸೂರು, ೧೯೯೭.

೧೦೦. ಅದೇ, ಪು. ೧೦೧.

೧೦೧. ಡಾ. ಚಿಂತಾಮಣಿ ಕೊಡ್ಲೆಕೆರೆ: 'ಅಂತರಂಗದ ಆಕಾಶ', ಪು. ೫೫, ಚಿತ್ರಮೂಲ ಪ್ರಕಾಶನ, ಅಘನಾಶಿನಿ, ೨೦೦೬.

೧೦೨. ದ.ರಾ.ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೪೫೭, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೧೦೩. ಅದೇ, ಪು. ೪೪೨.

೧೦೪. ಅದೇ.

೧೦೫. ಅದೇ, ಪು. ೪೫೬.

೧೦೬. ಅದೇ, ಪು. ೪೪೩.

೧೦೭. ಅದೇ..

೧೦೮. ಅದೇ, ಪು. ೭೦.

೧೦೯. ಅದೇ, ಪು. ೪೪೪.

೧೧೦. ಡಾ. ಜಿ.ಎಸ್.ಆಮೂರ: 'ಭುವನದ ಭಾಗ್ಯ', ಪು. ೨೫೮-೨೫೯, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೭.

೧೧೧. ಅದೇ, ಪು. ೨೬೨.

೧೧೨. ಕೀರ್ತಿನಾಥ ಕುರ್ತಕೋಟಿ: 'ಬಾರೋ ಸಾಧನಕೇರಿಗೆ', ಪು. ೩೦೭, ಮನೋಹರ ಗ್ರಂಥಮಾಲೆ, ಧಾರವಾಡ, ೧೯೯೩.

೧೧೩. ದ.ರಾ.ಬೇಂದ್ರೆ: 'ಮತಧರ್ಮ ಮತ್ತು ಆಧುನಿಕ ಮಾನವ', ಪು. ೪೮, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೮.

೧೧೪. ಬಸವಣ್ಣನವರ ವಚನಗಳು: ಸಂ. ಸ.ಸ. ಮಾಳವಾಡ, ಪು. ೨೪, ಸಾಹಿತ್ಯ ಅಕಾಡೆಮಿ, ದಿಲ್ಲಿ, (ಮೂ.ಮು.) ೧೯೯೬.

೧೧೫. ಡಾ. ಜಿ.ಎಸ್.ಶಿವರುದ್ರಪ್ಪ: 'ಸಮಗ್ರ ಗದ್ಯ', ಪು. ೧೫೪, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೯.

೧೧೬. ಅಕ್ಕನ ವಚನಗಳು: ಪು. ೬೬, ಸಂ. ಎಲ್.ಬಸವರಾಜು, ಗೀತಾ ಬುಕ್ ಹೌಸ್, ೧೯೯೦.

೧೧೭. ಅದೇ, ಪು. ೬೮.

೧೧೮. ಅದೇ, ಪು. ೬೯.

೧೧೯. ಅದೇ, ಪು. ೭೩.

೧೨೦. ಅದೇ, ಪು. ೭೨.

೧೨೧. ಅದೇ, ಪು. ೭೪.

೧೨೨. ದ.ರಾ.ಬೇಂದ್ರೆ : 'ಸಖಿಗೀತ', ಪು. ೪೭, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೪೦.

೧೨೩. ಡಾ. ಗಿರಡ್ಡಿ ಗೋವಿಂದರಾಜ : 'ಪ್ರಮಾಣು', ಪು. ೮೫, ಕ.ವಿ.ವಿ. ಹಂಪಿ, ೨೦೦೭.

೧೨೪. ಅಕ್ಕನ ವಚನಗಳು : ಸಂ. ಎಲ್.ಬಸವರಾಜು, ಪು. ೬೨, ಗೀತಾ ಬುಕ್ ಹೌಸ್, ೧೯೯೦.

೧೨೫. ದ.ರಾ.ಬೇಂದ್ರೆ : 'ಸಖಿಗೀತ', ಪು. ೪೭, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೪೦.

೧೨೬. ಅದೇ, ಪು. ೭೦.

೧೨೭. ಅದೇ.

೧೨೮. ಅದೇ, ಪು. ೭೧.

೧೨೯. ದ.ರಾ. ಬೇಂದ್ರೆ : 'ಸಖಿಗೀತ', ಪು. ೪೭, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೪೦.

೧೩೦. ಅದೇ, ಪು. ೪೮.

೧೩೧. ಡಾ. ಬಸವರಾಜ ಕಲ್ಗುಡಿ : 'ಅನುಭಾವ : ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ', ಪು. ೧೪೪, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೧೩೨. ಅಕ್ಕನ ವಚನಗಳು : ಸಂ. ಎಲ್.ಬಸವರಾಜು, ಪು. ೧೭೯, ಗೀತಾ ಬುಕ್ ಹೌಸ್, ೧೯೯೦.

೧೩೩. ಅಲ್ಲಮನ ವಚನಗಳು : ಸಂ. ಎಲ್. ಬಸವರಾಜು, ಪು. ೧೦೧, ಗೀತಾ ಬುಕ್ ಹೌಸ್, ಮೈಸೂರು, ೧೯೯೭.

೧೩೪. ಅಕ್ಕನ ವಚನಗಳು : ಸಂ. ಎಲ್.ಬಸವರಾಜು, ಪು. ೮೭, ಗೀತಾ ಬುಕ್ ಹೌಸ್, ೧೯೯೦.

೧೩೫. ಡಾ. ಚಿಂತಾಮಣಿ ಕೊಡ್ಲೆಕೆರೆ : 'ಅಂತರಂಗದ ಆಕಾಶ', ಪು. ೫೫, ಚಿತ್ರಮೂಲ ಪ್ರಕಾಶನ, ಅಘನಾಶಿನಿ, ೨೦೦೬.

೧೩೬. ಅಕ್ಕನ ವಚನಗಳು : ಸಂ. ಎಲ್.ಬಸವರಾಜು, ಪು. ೧೧೦, ಗೀತಾ ಬುಕ್ ಹೌಸ್, ೧೯೯೦.

೧೩೭. ದ.ರಾ.ಬೇಂದ್ರೆ : 'ಸಾಹಿತ್ಯದ ವಿರಾಟ ಸ್ವರೂಪ', ಪು. ೧೮೫, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೧೩೮. ದ.ರಾ.ಬೇಂದ್ರೆ : 'ಗರಿ', ಪು. ೪೫, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೫೧, (ಮೂ. ಆ.)

೧೩೯. ಅದೇ.

೧೪೦. ಸಾವಿರಾರು ಕೀರ್ತನೆಗಳು : ಸಂ. ಎ.ವಿ.ನಾವಡ, ಗಾಯತ್ರಿ ನಾವಡ, ಪು. ೨೫೭-೫೮, ಅಂಕಿತ ಪುಸ್ತಕ, ಬೆಂಗಳೂರು, ೨೦೦೨.

೧೪೧. ಅದೇ, ಪು. ೧೪೨.

೧೪೨. ಅದೇ.

೧೪೩. ಕೀರ್ತಿನಾಥ ಕುರ್ತಕೋಟಿ : 'ಕನ್ನಡ ಸಾಹಿತ್ಯ ಸಂಗಾತಿ', ಪು. ೨೧೮-೨೧೯, ಕನ್ನಡ ವಿ.ವಿ. ಹಂಪಿ, ೧೯೯೭(ಎ.ಮು.)

೧೪೪. ದ.ರಾ.ಬೇಂದ್ರೆ. : 'ಗರಿ', ಪು. ೪೭, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೫೧, (ಮೂ. ಆ.)

೧೪೫. ಪುರಂದರದಾಸರ ಕೀರ್ತನೆ : ಪು. ೪೯, ೯ನೆಯ ಮುದ್ರಣ, ಶ್ರೀಕೃಷ್ಣ ಮುದ್ರಣಾಲಯ, ಉಡುಪಿ, ೧೯೪೮.

೧೪೬. ಅದೇ, ಪು. ೪೪.

೧೪೭. ದ.ರಾ.ಬೇಂದ್ರೆ. : 'ಗರಿ', ಪು. ೮೯, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೫೧, (ಮೂ. ಆ.)

೧೪೮. ಬಸವಣ್ಣನವರ ವಚನಗಳು : ಸಂ. ಸ.ಸ. ಮಾಳವಾಡ, ಪು. ೯೯, ಸಾಹಿತ್ಯ ಅಕಾಡೆಮಿ, ದಿಲ್ಲಿ, ೧೯೯೬.

೧೪೯. ಪುರಂದರದಾಸರ ಕೀರ್ತನೆ : ಶ್ರೀ ಕೃಷ್ಣ ಮುದ್ರಣಾಲಯ, ಪು. ೨, ಉಡುಪಿ, ೧೯೪೮.

೧೫೦. ಅದೇ, ಪು. ೧೧.

೧೫೧. ದ.ರಾ.ಬೇಂದ್ರೆ : 'ಸಾಹಿತ್ಯದ ವಿರಾಟ ಸ್ವರೂಪ', ಪು. ೫೦೯-೫೧೦, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೧೫೨. ಅದೇ, ಪು. ೫೧೦.

೧೫೩. ಬಸವಣ್ಣನವರ ವಚನ ಸಂಗ್ರಹ : ಸಂ. ಸ.ಸ. ಮಾಳವಾಡ, ಪು. ೧೦೨, ಸಾಹಿತ್ಯ ಅಕಾಡೆಮಿ, ದಿಲ್ಲಿ, ೧೯೯೯ (ಮೂ.ಮು.).

೧೫೪. ಅಕ್ಕನ ವಚನಗಳು : ಸಂ. ಎಲ್. ಬಸವರಾಜು, ಪು. ೫೫, ಗೀತಾ, ಬುಕ್ ಹೌಸ್, ಮೈಸೂರು, ೧೯೯೦.

೧೫೫. ಜನಪ್ರಿಯ ಕನಕ ಸಂಪುಟ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪು. ೨೪, ಬೆಂಗಳೂರು, ೧೯೮೯.

೧೫೬. ಜಿ.ಎಸ್. ಶಿವರುದ್ರಪ್ಪ : 'ಸಮಗ್ರ ಗದ್ಯ', ಪು. ೩೮೦, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೧೫೭. ಅದೇ, ಪು. ೩೭೫.

೧೫೮. ಜನಪ್ರಿಯ ಕನಕ ಸಂಪುಟ: ಪು. ೧೭, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೮೯.

೧೫೯. ಅದೇ, ಪು. ೧೮.

೧೬೦. ಡಾ. ರಂ.ಶ್ರೀ.ಮುಗಳಿ : 'ಕನ್ನಡ ಸಾಹಿತ್ಯ ಚರಿತ್ರೆ', ಪು. ೧೬೭, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೭.

೧೬೧. ಡಾ. ಜಿ.ಎಸ್.ಶಿವರುದ್ರಪ್ಪ : 'ಸಮಗ್ರ ಗದ್ಯ', ಪು. ೩೭೪, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೯.

೧೬೨. ಜನಪ್ರಿಯ ಕನಕ ಸಂಪುಟ : ಸಂ. ೧೪, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೯ (ಎ.ಆ.)

೧೬೩. ದ.ರಾ.ಬೇಂದ್ರೆ : 'ಸಾಹಿತ್ಯದ ವಿರಾಟ ಸ್ವರೂಪ', ಪು. ೫೧೫, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೧೬೪. ಜನಪ್ರಿಯ ಕನಕ ಸಂಪುಟ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಪು. ೨೭, ಬೆಂಗಳೂರು, ೧೯೮೯ (ಎ.ಆ.)

೧೬೫. ಅದೇ, ಪು. ೧೨೩.

೧೬೬. ಜಿ.ಎಸ್.ಶಿವರುದ್ರಪ್ಪ : 'ಸಮಗ್ರ ಗದ್ಯ-೧', ಪು. ೩೫೮-೩೫೯, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೯.

೧೬೭. ದ.ರಾ.ಬೇಂದ್ರೆ : 'ಸಾಹಿತ್ಯದ ವಿರಾಟ ಸ್ವರೂಪ', ಪು. ೧೮೭, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೧೬೮. ಕೀರ್ತಿನಾಥ ಕುರ್ತಕೋಟಿ : 'ನೂರು ಮರ ನೂರು ಸ್ವರ', ಪು. ೧೪೯-೧೫೦, ಕನ್ನಡ ವಿ.ವಿ. ಹಂಪಿ, ೧೯೯೮.

೧೬೯. ದ.ರಾ.ಬೇಂದ್ರೆ : 'ಸಾಹಿತ್ಯದ ವಿರಾಟ ಸ್ವರೂಪ', ಪು. ೫೦೪-೫೦೫, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೧೭೦. ಕೀರ್ತಿನಾಥ ಕುರ್ತಕೋಟಿ : 'ಕನ್ನಡ ಸಾಹಿತ್ಯ ಸಂಗಾತಿ', ಪು. ೨೪೭, ಕನ್ನಡ ವಿ.ವಿ. ಹಂಪಿ, ೧೯೯೭, ದ್ವಿ.ಮು.

೧೭೧. ಡಾ. ವೀರೇಶ ಬಡಿಗೇರ : 'ಕೋಗಿಲೆ ಚೆಲ್ವ ಕೋಗಿಲೆ', ಲೇ: ಪು. ೮೦, (ನಮ್ಮ ಕನ್ನಡ ಕಾವ್ಯ, ಸಂ. ಓ.ಎಲ್.ನಾಗಭೂಷಣಸ್ವಾಮಿ) ಕ.ವಿ.ವಿ. ಹಂಪಿ, ೧೯೯೭.

೧೭೨. ದ.ರಾ.ಬೇಂದ್ರೆ : 'ಗರಿ', ಪು. ೨೭, ಮನೋಹರ ಗ್ರಂಥ ಪ್ರಕಾಶನ ಸಮಿತಿ, ೧೯೫೧.

೧೭೩. ಡಾ. ಪ್ರಭುಶಂಕರ : 'ಕನ್ನಡದಲ್ಲಿ ಭಾವಗೀತೆ', ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೨೦೦೦.

೧೭೪. ಮುಪ್ಪಿನ ಷಡಕ್ಷರಿಗಳ ಕೈವಲ್ಯ ಪದಗಳು : ಪು. ೨೫, ಸಂ. ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ, ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೮.

೧೭೫. ಅದೇ, ಪು. ೯.

೧೭೬. ಅದೇ, ಪು. ೧೮.

೧೭೭. ಅದೇ.

೧೭೮. ಅದೇ, ಪು. ೧.

೧೭೯. ಚೆನ್ನವೀರ ಕಣವಿ : 'ಸಾಹಿತ್ಯ ಸಮಾಹಿತ', ಪು. ೧೭, ಕ.ವಿ.ವಿ. ಹಂಪಿ, ೨೦೦೭.

೧೮೦. ಮುಪ್ಪಿನ ಷಡಕ್ಷರಿಯ ಕೈವಲ್ಯ ಗೀತೆಗಳು : ಸಂ. ದೇಶಿಕೇಂದ್ರ ಸ್ವಾಮಿಗಳು, ಪು. ೭, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೮.

೧೮೧. ಅದೇ, ಪು. ೨೯.

೧೮೨. ದ.ರಾ.ಬೇಂದ್ರೆ : 'ಸರ್ವಜ್ಞ ಕವಿ', ಪು. ೨೮, ಸರ್ವಜ್ಞನ ವಚನಗಳು, ಸಂ. ಚೆನ್ನಪ್ಪ ಉತ್ತಂಗಿ, ಪ್ರಕಾಶ ಸಾಹಿತ್ಯ, ಬೆಂಗಳೂರು, ೧೯೯೯.

೧೮೩. ಸರ್ವಜ್ಞನ ವಚನಗಳು : ಸಂ. ಉತ್ತಪ್ಪ ಚೆನ್ನಂಗಿ, ಪು. ೬೫, ಪ್ರಕಾಶ ಸಾಹಿತ್ಯ, ಬೆಂಗಳೂರು, ೧೯೯೯.

೧೮೪. ಅದೇ.

೧೮೫. ಅದೇ, ಪು. ೬೦.

೧೮೬. ಅದೇ, ಪು. ೭೬.

೧೮೭. ಅದೇ.

೧೮೮. ಅದೇ, ಪು. ೧೭೧.

೧೮೯. ಡಾ. ಜಿ.ಎಸ್.ಶಿವರುದ್ರಪ್ಪ : 'ಸಮಗ್ರ ಗದ್ಯ', ಪು. ೪೩೬, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೯.

೧೯೦. ದ.ರಾ.ಬೇಂದ್ರೆ : 'ಸಾಹಿತ್ಯದ ವಿರಾಟ ಸ್ವರೂಪ', ಪು. ೬೩೧, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೧೯೧. ಕೀರ್ತಿನಾಥ ಕುರ್ತಕೋಟಿ : 'ಕನ್ನಡ ಸಾಹಿತ್ಯ ಸಂಗಾತಿ', ಪು. ೨೯೧, ಕನ್ನಡ ವಿ.ವಿ. ಹಂಪಿ, ೧೯೯೭.

೧೯೨. ಶಿವಾನಂದ ಗುಬ್ಬಣ್ಣವರ : 'ಬರಕೋ ಪದಾ ಬರಕೋ', ಪು. ೧೦, ೧೧, ಕ.ಸಾ.ಪ. ಬೆಂಗಳೂರು, ಎ.ಮು., ೧೯೯೯.

೧೯೩. ಅದೇ, ಪು. ೪೧.

೧೯೪. ಬಸವಣ್ಣನವರ ವಚನ ಸಂಗ್ರಹ : ಸಂ. ಸ.ಸ. ಮಾಳವಾಡ, ಸಾಹಿತ್ಯ ಅಕಾಡೆಮಿ, ಪು. ೨೨, ದಿಲ್ಲಿ, ಮೂ.ಮು. ೧೯೯೬.

೧೯೫. ಬರಕೋ ಪದ ಬರಕೋ: ಸಂ. ಶಿವಾನಂದ ಗುಬ್ಬಣ್ಣವರ, ಪು. ೫೬, ಕ.ಸಾ.ಪ. ಬೆಂಗಳೂರು, ೧೯೯೯.

೧೯೬. ಅದೇ, ಪು. ೧೨೦.

೧೯೭. ಅದೇ, ಪು. ೧೨೦.

೧೯೮. ಅದೇ, ಪು. ೧೨೦.

೧೯೯. ಅದೇ, ಪು. ೧೨೧.

೨೦೦. ಬಸವಣ್ಣನವರ ವಚನಗಳು : ಪು. ೯೮, ಸಂ.: ಸ.ಸ.ಮಾಳವಾಡ, ಸಾಹಿತ್ಯ ಅಕಾಡೆಮಿ, ಹೊಸದಿಲ್ಲಿ, ೧೯೯೬.

೨೦೧. ಬರಕೋ ಪದ ಬರಕೋ: ಪು. ೫೭, ಸಂ. ಶಿವಾನಂದ ಗುಬ್ಬಣ್ಣನವರ, ಕ.ಸಾ.ಪ. ಬೆಂಗಳೂರು, ೧೯೯೬.

೨೦೨. ಅದೇ, ಪು. ೫೯.

೨೦೩. ದ.ರಾ.ಬೇಂದ್ರೆ: 'ಯಕ್ಷ-ಯಕ್ಷಿ', ಪು. ೩೧, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೨.

೨೦೪. ದ.ರಾ.ಬೇಂದ್ರೆ: 'ಮುಗಿಲ ಮಲ್ಲಿಗೆ'

೨೦೫. ಶಿಶುನಾಳ ಶರೀಫರ ಪದ್ಯಗಳು : 'ಬರಕೋ ಪದಾ ಬರಕೋ', ಪು. ೫೪, ಸಂ: ಶಿವಾನಂದ ಗುಬ್ಬಣ್ಣವರ, ಕ.ಸಾ.ಪ. ಬೆಂಗಳೂರು, ೧೯೯೯.

೨೦೬. ಅದೇ, ಪು. ೫೦.

೨೦೭. ಕೀರ್ತಿನಾಥ ಕುರ್ತಕೋಟಿ: 'ಕನ್ನಡ ಸಾಹಿತ್ಯ ಸಂಗಾತಿ', ಪು. ೨೯೦, ಕನ್ನಡ ವಿ.ವಿ. ಹಂಪಿ, ೧೯೯೭.

೨೦೮. ದ.ರಾ.ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೨೩೮, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

ಅಧ್ಯಾಯ – ನಾಲ್ಕು

ಬೇಂದ್ರೆ ನಿಸರ್ಗಕಾವ್ಯ : ಪ್ರೇರಣೆಗಳು

ಅಧ್ಯಾಯ - ೪

ಬೇಂದ್ರೆ ನಿಸರ್ಗ ಕಾವ್ಯ : ಪ್ರೇರಣೆಗಳು

೪.೧ ಪೀಠಿಕೆ :

ಕಾಲ ಹಾಗೂ ಸಾಂಸ್ಕೃತಿಕ ಪಲ್ಲಟಗಳು ತರುವ ಬದಲಾವಣೆಗಳು ಸಾಹಿತ್ಯದಲ್ಲಿಯೂ ಪ್ರತಿಬಿಂಬವಾಗಿ ನವೋದಯ ರೂಪುಗೊಂಡಿದ್ದನ್ನು ನಾವು ಕಂಡಿದ್ದೇವೆ. ಇಂಗ್ಲೀಷ್ ವಿದ್ಯಾಭ್ಯಾಸದ ಗಾಳಿ ಪ್ರಬಲವಾಗಿ ಬೀಸಿದ ಪರಿಣಾಮವಾಗಿ ಕಳೆದ ಶತಮಾನದ ಆರಂಭದಲ್ಲಿ ಹೊಸ ಆಲೋಚನಾ ಕ್ರಮಗಳು ಹುಟ್ಟಿಕೊಂಡು ಹಳೆಯ ನಂಬಿಕೆ-ಸಂಪ್ರದಾಯಗಳನ್ನು ಒರೆಗಲ್ಲಿಗೆ ಹಚ್ಚುವ, ಬದುಕಿನ ಬಗ್ಗೆ ಹೊಸ ದೃಷ್ಟಿಕೋನ ತಳೆಯುವ ಉಪಕ್ರಮಗಳು ಶುರುವಾದವು. ಹೊಸ ನೀರಿನ ಹರಿವಿನಿಂದ ಭಾರತೀಯ ಭಾಷೆಗಳ ಬೇರು-ಕಾಂಡಗಳು ಮತ್ತಷ್ಟು ಶಕ್ತಗೊಂಡು ಚಿಗುರು ಮೈದುಂಬಿಸಿಕೊಂಡಿತು. ಕನ್ನಡವೂ ಕೂಡ, ಪುನರುಜ್ಜೀವನದ ಈ ಪ್ರಕ್ರಿಯೆಯಿಂದ ಹೊರತಾಗಿರಲಿಲ್ಲ. ಪಾಶ್ಚಾತ್ಯ ಸಾಹಿತ್ಯದ ಪರಿಮಳಕ್ಕೆ ಸಮ್ಮೋಹಿತಗೊಂಡ ಕನ್ನಡವು ಆಧುನಿಕತೆಯ ಗಾಳಿ ಬೆಳಕಿಗೆ ತನ್ನ ಕಿಟಕಿಗಳನ್ನು ತೆರೆದಿಟ್ಟಿತು. ಕಲ್ಪನೆ ಗರಿಗೆದರುವ ಭಾವಲಹರಿಗೆ ತನ್ನ ಮನಸ್ಸನ್ನು ಕೊಟ್ಟಿತು. ಪಶ್ಚಿಮ ಪರಿಸರದ ಗಂಧಸ್ಪರ್ಶಕ್ಕೆ ಏಕತಾನತೆಯ ತನ್ನ ದಣಿವನ್ನು ಆರಿಸಿಕೊಂಡಿತು.

ಇಂಗ್ಲೀಷ ಭಾಷೆಯ ಸಂಪರ್ಕದಿಂದ ಕನ್ನಡದ ನೋಟ ಹೊಸದಾಯಿತು. ಭಿನ್ನ ವಿಭಿನ್ನ ಸಂಸ್ಕೃತಿಗಳ ಅರಿವಿನಿಂದ ಜ್ಞಾನದ ಕ್ಷಿತಿಜಗಳು ವಿಸ್ತಾರಗೊಂಡು ಸಮಾನತೆ, ವ್ಯಕ್ತಿಸ್ವಾತಂತ್ರ್ಯ, ಮಾನವತಾವಾದದಂತಹ ಅಂಶಗಳು ಪ್ರಾಮುಖ್ಯತೆ ಪಡೆದುಕೊಳ್ಳತೊಡಗಿದವು. ಹೊಸ ಬೆಳಕಿನ ದೀಪ್ತಿಯಲ್ಲಿ ಹಳೆಯ ಆಚಾರ-ವಿಚಾರಗಳಿಗೆ ಆಧುನಿಕತೆಯ ಸಾಣೆ ಹಿಡಿದಂತಾಯಿತು. ವ್ಯಷ್ಟಿ-ಸಮಷ್ಟಿಯ ಅಂತರ್‌ಸಂಬಂಧದ ಚರ್ಚೆಯಾಯಿತು. ಕನ್ನಡ ಕಾವ್ಯದಲ್ಲಿ ಅದುವರೆಗೂ ವಿರಳವಾಗಿದ್ದ ಭಾವಪ್ರಧಾನ ವಿಚಾರಧಾರೆ ಈಗ ಕಸುವು ತುಂಬಿಕೊಂಡು ಪ್ರವಹಿಸತೊಡಗಿತು.

ವಿಧಿಯೆದುರು ಸೋಲುವ, ತನ್ನ ವೈಫಲ್ಯದಿಂದಲೂ ಬಳಲುವ ಗ್ರೀಕ್ ದುರಂತ ನಾಟಕಗಳೇ ಆಗಲಿ; ನಿಸರ್ಗದ ಕಾರುಣ್ಯದಲ್ಲಿ ನೆಮ್ಮದಿಯ ನೆಲೆ ಕಂಡುಕೊಂಡ ಇಂಗ್ಲೀಷ್ ರೋಮ್ಯಾಂಟಿಕ್ ಕಾವ್ಯವೇ ಆಗಲಿ; ಭಾವ ಸೌಂದರ್ಯದಲ್ಲಿ ಅರಳುವ ಗೀತೆಯೇ ಆಗಲಿ; ಕಥಾ ಜಗತ್ತಿನ ವ್ಯಾಪ್ತಿ ವಿಸ್ತರಿಸಿದ ರಶಿಯನ್ ಬರವಣಿಗೆಯೇ ಆಗಲಿ ಎಲ್ಲವೂ ಕನ್ನಡದ ಅಕ್ಷರ ಲೋಕಕ್ಕೆ ಹೊಸ ಭಾವ ಪ್ರಪಂಚದ ಸಂವೇದನೆಗಳನ್ನು ಹರಿಸಿದವು. ಅದರ ಪರಿಣಾಮವೆಂಬಂತೆ ಕನ್ನಡ ಸಾಹಿತ್ಯದ ಮನೋಧರ್ಮ ಹಾಗೂ ಅಭಿವ್ಯಕ್ತಿಯಲ್ಲಿ ಬದಲಾವಣೆಗಳು ಕಾಣಿಸಿಕೊಳ್ಳತೊಡಗಿದವು. ಶೇಕ್ಸ್‌ಪಿಯರ್‌ನಿಂದ ಹಿಡಿದು ಷೆಲ್ಲಿಯವರೆಗಿನ ಇಂಗ್ಲೀಷ್ ಸಾಹಿತ್ಯಲೋಕ ಒಮ್ಮಿಂದೊಮ್ಮೆಲೆ ಪ್ರಿಯವಾಗಿ ಆ ಸಾಹಿತ್ಯದ ನೆಲೆಯಲ್ಲಿ ಕನ್ನಡದ ಒಲವು ಪ್ರಕಟಗೊಳ್ಳತೊಡಗಿತು. ವರ್ಡ್ಸ್‌ವರ್ತ್,

ಬೈರನ್, ಕೀಟ್ಸ್ ಅವರ ಕಾವ್ಯದಿಂದ ಪ್ರೇರಣೆಗೊಂಡ ಆ ಸಂಧಿಕಾಲದ ಸಾಹಿತ್ಯವು, ಸಾಮಾನ್ಯವಾಗಿ ಕಾವ್ಯವನ್ನು ಆಕ್ರಮಿಸುತ್ತಿದ್ದ ರಾಜ-ಮಹಾರಾಜರನ್ನು, ದೇವಾನುದೇವತೆಗಳನ್ನು, ಪುರಾಣ ಇತಿಹಾಸಗಳ ನಾಯಕರನ್ನು, ಧರ್ಮಶ್ರದ್ಧೆಯನ್ನು ಬದಲಿಸಿಕೊಂಡು ಅಲ್ಲಿ ಮನುಷ್ಯನ ದಿನನಿತ್ಯದ ಬದುಕನ್ನು ತಂದಿಟ್ಟಿತು. ಕವಿಯ ಆಂತರಿಕ ಪ್ರಪಂಚಕ್ಕೆ ಆದ್ಯತೆ ಕೊಟ್ಟಿತು. ನಿಸರ್ಗದಲ್ಲಿ ಅವನ ಮನಸ್ಸು ತೇಲಿಹೋದುದನ್ನು ಬಣ್ಣಿಸಿತು. ಕಾವ್ಯದ ಒಂದು ಭಾಗವಾಗಿರುತ್ತಿದ್ದ ನಿಸರ್ಗ ಈಗ ಸಂಪೂರ್ಣ ಕಾವ್ಯವನ್ನು ಆವರಿಸಿಕೊಳ್ಳುವಷ್ಟು ಸಶಕ್ತವಾಗತೊಡಗಿತು. ಪಂಪ, ಹರಿಹರ, ಕುಮಾರವ್ಯಾಸ, ವಚನಕಾರರನ್ನು ಬಿಟ್ಟರೆ ಉಳಿದ ಕವಿಗಳಲ್ಲಿ ಪ್ರಕೃತಿ ಅಷ್ಟಾಗಿ ಜೀವ ತುಂಬಿಕೊಂಡಿರಲಿಲ್ಲ. ಆದರೆ ಹೊಸಗನ್ನಡದ ನವೋದಯ ಕಾವ್ಯ ಪ್ರಕೃತಿಯ ಚೆಲುವಿನಿಂದ ನಳನಳಿಸತೊಡಗಿತು. ಕವಿಯ ಅಂತರಾಳಕ್ಕೆ ಅರ್ಥ ಜೋಡಿಸತೊಡಗಿತು. ಹೊಸದನ್ನು ಸೃಷ್ಟಿಸತೊಡಗಿತು. ಆಗ ಪ್ರಚಂಡ ಗಾಳಿಯ ಜೊತೆ ಮಳೆಯೂ ಸುರಿಯತೊಡಗಿತು.

೪.೨ ಆಧುನಿಕ ಕನ್ನಡ ಕಾವ್ಯದ ಅರುಣೋದಯ :

ಕಾವ್ಯವಸ್ತು ಹಾಗೂ ಅಭಿವ್ಯಕ್ತಿಯ ನಾವೀನ್ಯಕ್ಕೆ ನಾಂದಿ ಹಾಡಿದ ಗುಂಪಿನಲ್ಲಿ ಪಂಜೆ ಮಂಗೇಶರಾಯರು, ಎಂ. ಗೋವಿಂದ ಪೈ, ಕಡೆಂಗೋಡ್ಲು ಶಂಕರಭಟ್ಟ, ಬಿ.ಎಂ. ಶ್ರೀಕಂಠಯ್ಯ, ಶಾಂತಕವಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಹಾಗೂ ಇನ್ನೂ ಹಲವು ಗೆಳೆಯರಿದ್ದರು. ಹಟ್ಟಿಯಂಗಡಿ ನಾರಾಯಣರಾವ್, ಎಸ್.ಜಿ. ನರಸಿಂಹಾಚಾರ್ಯ, ಪಂಜೆ ಮಂಗೇಶರಾಯ ಹಾಗೂ ಬಿ.ಎಂ.ಶ್ರೀಯವರು ಥಾಮಸನ್, ಥಾಮಸ್ ಗ್ರೇ, ಕಾರ್ಡಿನಲ್ ನ್ಯೂಮನ್, ವರ್ಡ್ಸ್‌ವರ್ತ್, ಕೀಟ್ಸ್, ಷೆಲ್ಲಿ, ಬೈರನ್, ಮಿಲ್ಟನ್, ಶೇಕ್ಸ್‌ಪಿಯರ್ ಮುಂತಾದವರ ಇಂಗ್ಲೀಷ ಕವಿತೆಗಳ ಅನುವಾದಗಳನ್ನು ಕೈಗೊಳ್ಳುವ ಮೂಲಕ ಕಾಲ ಪರಿಸ್ಥಿತಿಗಳೊಂದಿಗೆ ಬಿಕ್ಕಟ್ಟು ಎದುರಿಸುತ್ತಿದ್ದ ಕನ್ನಡ ಕಾವ್ಯವು ಹೊಸ ಸ್ವರೂಪ ಪಡೆಯಲು ಕಾರಣರಾದರು. ಬೇಂದ್ರೆಯಂಥ ಕವಿಯ ವರ್ಷಾಧಾರೆಗೆ ಭೂಮಿ ಕಾಯುತ್ತಿತ್ತು. ಆದರೆ ಮುಸಲಧಾರೆಗೆ ಮೊದಲು ನೆಲ ತೊಯ್ಯುವಷ್ಟು ಮಳೆ ಬೇಕಾಗಿತ್ತು. ಅದರ ಜೊತೆಗೆ ಭಯಂಕರ ಮಳೆಯ ಮುನ್ಸೂಚನೆ ಎಂಬಂತೆ ಬಿರುಗಾಳಿ, ಗುಡುಗು-ಸಿಡಿಲುಗಳ ಅಬ್ಬರವೂ ತುಸು ಬೇಕಾಗಿತ್ತು. ಈ ರೀತಿಯಲ್ಲಿ ಮಳೆಗಾಳಿಯ ಕೆಲಸವನ್ನೂ ಪಂಜೆ, ಶ್ರೀ, ಗೋವಿಂದ ಪೈಗಳು ಪರಿಣಾಮಕಾರಿಯಾಗಿಯೇ ನಿರ್ವಹಿಸಿದರು. ನವೋದಯ ಪ್ರಾರಂಭದ ಈ ಕವಿಗಳು ಕನ್ನಡ ಕಾವ್ಯ ಮುಗಿಲಿನಲ್ಲಿ ದಟ್ಟ ಮೋಡ ಆವರಿಸಿಕೊಳ್ಳುವಂತೆ ನೋಡಿಕೊಂಡರು. ಮಳೆ ಹನಿ ಒಡೆದ ಮೇಲೆ ಬೇಂದ್ರೆ, ಕುವೆಂಪುರವರು ಕಾವ್ಯದ ಆಗಸವನ್ನು ಆಕ್ರಮಿಸಿ ಕಾಯ್ದಿದ್ದ ಕವಿತೆಯ ಮನಸ್ಸುಗಳಿಗೆ ತಂಪು ನೀಡಿದರು. ಮುಂದೆ ನೆಲಕ್ಕೆಲ್ಲ ಶ್ರಾವಣವೇ ಶ್ರಾವಣ.

'Frolic in the wind' ಕವಿತೆಯ ರೂಪಾಂತರವಾದ 'ತೆಂಕಣಗಾಳಿಯಾಟ' ಎಂಬ ಪಂಜೆ ಮಂಗೇಶರಾಯರ ಪದ್ಯ ಬಿರುಗಾಳಿಯ ವೇಗದಲ್ಲಿಯೇ ನಮ್ಮನ್ನು ಹಿಡಿದುಕೊಳ್ಳುತ್ತದೆ. ಕವಿತೆಯೊಳಗಿನ ಉದ್ವೇಗದ ಉಸಿರು ನಮ್ಮ ಉದ್ವೇಗದೊಡನೆ ಬೆರೆಯುತ್ತದೆ. ಅದನ್ನು ಓದಿದಾಗ ರುದ್ರಶಕ್ತಿಯ ಅನುಭವವಾಗುತ್ತದೆಯೆಂದು ಪ್ರೊ. ಎಲ್.ಎಸ್.ಶೇಷಗಿರಿರಾವ್ ಅವರು ಅಭಿಪ್ರಾಯಪಡುತ್ತಾರೆ :

ಬರಲಿದೆ! ಆಹಹಾ! ದೂರದಿ ಬರಲಿದೆ
ಬುಸುಗುಟ್ಟುವ ಪಾತಾಳದ ಹಾವೋ?
ಹಸಿವಿನ ಭೂತವು ಕೂಯುವ ಕೂವೋ?
ಹೊಸತಿದು ಕಾಲನ ಕೋಣನ-ಜವೋ?

ದೂರದ ಗಾಳಿ ಹತ್ತಿರವಾಗುವ ಅನುಭವ, ಮುಂದೆ ಸಮುದ್ರದ ಮೇಲೆ ಅದರ ಹಾವಳಿ, ಅನಂತರ ಕಾಡಿನಲ್ಲಿ, ಅನಂತರ ಮನುಷ್ಯರ ಜಗತ್ತಿನಲ್ಲಿ, ಅಲ್ಲಿಂದ ಸುತ್ತಲಿನ ನಿಸರ್ಗದಲ್ಲಿ - ಹೀಗೇ ಇಡೀ ವಿಶ್ವವನ್ನೇ ವ್ಯಾಪಿಸಿ ಜಡ-ಜೀವಂತ ವಸ್ತುಗಳೆಲ್ಲವನ್ನೂ ತನ್ನ ಮುಷ್ಟಿಯಲ್ಲಿ ಹಿಡಿಯುವ ತೆಂಕಣಗಾಳಿ ಒಂದು ಜೀವಂತ, ಅದ್ಭುತ ಶಕ್ತಿಯಾಗಿ ಕವನದಲ್ಲಿ ಮೈತಾಳುತ್ತದೆ."[೧] ರಭಸದ ಗಾಳಿಯ ದೈತ್ಯ ಶಕ್ತಿಯನ್ನು, ಅದರ ಪ್ರಚಂಡ ನರ್ತನವನ್ನು ವರ್ಣಿಸುವ 'ತೆಂಕಣಗಾಳಿಯಾಟ' ಪ್ರಕೃತಿಗಿರುವ ಅಪಾರ ಶಕ್ತಿಯನ್ನು; ನಾಡು-ಕಾಡು ಆಕ್ರಮಿಸಿಕೊಳ್ಳುವ ಅದರ ಹರವನ್ನು ಸೂಚಿಸುವಂತಿದೆ. ಚಿಮ್ಮುತ್ತ ಬರುವ ಕಾಲನ ಕೋಣ ಪ್ರಳಯವೂ ಹೌದು. ಸೃಷ್ಟಿಯೂ ಹೌದು.

ವ್ಯಕ್ತಿ ಸ್ವಾತಂತ್ರ್ಯ, ದೇಶಾಭಿಮಾನ, ನಿಸರ್ಗದ ಜೊತೆಯ ಒಡನಾಟ ಮುಂತಾದ ಭಾವಲಹರಿಗಳನ್ನು ಅನುಸರಿಸಿ ಆಗಿನ ಕಾವ್ಯ ಹೆಜ್ಜೆ ಹಾಕತೊಡಗಿತು. ಪಂಜೆಯವರ 'ತೆಂಕಣ ಗಾಳಿಯಾಟ' ಪದ್ಯ ರಮ್ಯವೂ, ರೌದ್ರವೂ ಆಗಿರುವ ನಮ್ಮ ಪ್ರಕೃತಿಯನ್ನು ವರ್ಣಿಸುವ ಕೆಲಸ ಮಾಡುತ್ತದೆ. ಸೃಷ್ಟಿಯನ್ನು, ಪ್ರಳಯವನ್ನು ಅದು ಒಳಗೊಂಡಿರುವ ರೀತಿ ಆಶ್ಚರ್ಯ ಹುಟ್ಟಿಸುತ್ತದೆ. ನಿಸರ್ಗದ ಒಳ-ಹೊರಗನ್ನು ಬಿಡಿಸಿಡುವ; ಅದರ ಆಳ-ವಿಸ್ತಾರವನ್ನು ತಿಳಿಸುವ; ಅದರ ಚಲನಶೀಲತೆಯ ತೀವ್ರತೆ-ವೇಗೋತ್ಕರ್ಷಗಳನ್ನು ಮನದಟ್ಟು ಮಾಡಿಸುವ ಕೆಲಸವನ್ನು ನವೋದಯದ ಆರಂಭಿಕ ಕಾವ್ಯ ಮಾಡಿತು. ಪಾಶ್ಚಾತ್ಯ ರಮ್ಯ ಕವಿತೆಯ ವೇಗ ಹಾಗೂ ತೀವ್ರತೆಯ ಗುಣಗಳಿಗೆ ಕನ್ನಡ ಕವಿತೆ ಮಾರುಹೋಯಿತು. ಕೀರ್ತಿನಾಥ ಕುರ್ತಕೋಟಿಯವರು ವೇಗವೆನ್ನುವುದು ಹೇಗೆ ನವೋದಯದ ಕಾವ್ಯದ ಒಂದು ಮುಖ್ಯ ಲಕ್ಷಣವಾಯಿತೆಂಬುದನ್ನು ಹೀಗೆ ವಿವರಿಸುತ್ತಾರೆ. "ಶ್ರೀಯವರ 'ಕನ್ನಡದ ಬಾವುಟ', ಪಂಜೆಯವರ 'ತೆಂಕಣಗಾಳಿಯಾಟ', ಬೇಂದ್ರೆಯವರ 'ಕುಣಿಯೋಣು ಬಾರ', 'ಮೂವತ್ತು ಮೂರುಕೋಟಿ', ಕುವೆಂಪುರವರ 'ಪಾಂಚಜನ್ಯ', ವೀಸಿಯವರ 'ಅಭೀ' ಮೊದಲಾದ ಕವನಗಳಲ್ಲಿ ಸ್ಫೂರ್ತಿಯ ನಿರರ್ಗಳತೆಯನ್ನೂ, ವೇಗವನ್ನೂ ಕಾಣಬಹುದಾಗಿದೆ. ಹೊಸ ಜಗತ್ತೊಂದನ್ನು ಹುಡುಕಿದ ಉದ್ರೇಕ ಈ ಕಾವ್ಯದಲ್ಲಿ ಹರಿದಾಡುತ್ತದೆ. ಹೊಸ ಕವಿಗಳ ಕೈಯಲ್ಲಿ ಭಾಷೆ ಮಿಂಚಿನ ವೇಗದಿಂದ ಹರಿದಾಡಲಾರಂಭಿಸಿತು. ದುಃಖವೋ, ಸುಖವೋ, ಶೃಂಗಾರವೋ, ಕರುಣವೋ, ಬಂದ ಭಾವನೆಯೆಲ್ಲ ಉತ್ಕಟವಾಗಿ ಪುಟಿಯಹತ್ತಿತು. ಕಾವ್ಯಕ್ರಿಯೆಗೆ ವೇಗ ಬಂದಿತು."[೨]

ಕವಿತೆಯಲ್ಲಿನ ಉತ್ಸಾಹ ಅದನ್ನು ಆಸ್ವಾದಿಸುವ ಸಹೃದಯನಲ್ಲೂ ಇರಬೇಕಾದುದು ಸಾಹಿತ್ಯ ಬೆಳವಣಿಗೆಯ ಕಾಳಜಿಯಾಗಿದೆ. ಆ ಪರಿಸರವನ್ನು ನಿರ್ಮಾಣ ಮಾಡುವ ಕೆಲಸವೂ ಸಾಹಿತ್ಯಕೃಷಿಯ ಜೊತೆಗೆ ನಡೆಯಬೇಕಾಗುತ್ತದೆ.

ಅಂದು ಅನ್ಯಪ್ರಾಂತೀಯ ಭಾಷೆಗಳ ಪ್ರಭಾವದಲ್ಲಿ ಕನ್ನಡ ನಲುಗಿ ಹೋಗಿತ್ತು. ಅದಕ್ಕಾಗಿ ಹೊಸ ಸೃಷ್ಟಿಗೆ ಉತ್ಸಾಹದಿಂದ ತುಂಬಿ ತುಳುಕುತ್ತಿರುವ ಸಹೃದಯನನ್ನು ಬೆಳೆಸಬೇಕಾಗಿತ್ತು. ಕನ್ನಡದ ಬೆಳೆಯಲ್ಲಿ ಕಾಣಿಸಿಕೊಂಡಿದ್ದ ಕಳೆಯನ್ನು ಕಿತ್ತೊಗೆದು, ಬೆಳೆದು ನಿಂತಿದ್ದ ಬೆಳೆಯ ಜೊತೆಗೆ ಹೊಸ ಸಸಿ ಕಾಣುವಂತೆ ಮಾಡುವ ಜರೂರು ಆಗ ಕಾಣಿಸಿಕೊಂಡಿತು. ಆ ಅಗತ್ಯವನ್ನು ಶಾಂತಕವಿ, ಧೋಂಡೋ ನರಸಿಂಹ ಮುಳಬಾಗಲ, ವೆಂಕಟರಂಗೋ ಕಟ್ಟಿ ಮುಂತಾದ ಮಹನೀಯರು ಶ್ರದ್ಧೆಯಿಂದ ಮಾಡಿದರು. ಪುಸ್ತಕ ಓದುವ ಸಂಸ್ಕೃತಿಯನ್ನು ಬೆಳೆಸಿದರು. ಕನ್ನಡದ ಪುನರುಜ್ಜೀವನವನ್ನು ಕೈಗೊಂಡರು.

ಈ ಆರಂಭಿಕ ಕೆಲಸದ ನಂತರ ಕಾಣಿಸಿಕೊಂಡವರು ಬಿ.ಎಂ.ಶ್ರೀಕಂಠಯ್ಯನವರು. ಒಂದು ರೀತಿಯಲ್ಲಿ ಅವರು ಕನ್ನಡದ ಕಣ್ವರೇ ಆದರು. ಕನ್ನಡದ ಸಂವೇದನೆಯನ್ನು ಹೊಸ ಕಾಲಕ್ಕೆ ತಕ್ಕಂತೆ ಬೆಳೆಸಿ ಸಿದ್ಧಗೊಳಿಸಿದರು. ಕನ್ನಡ ಕಾವ್ಯದಲ್ಲಿ ಹೊಸ ಬೆಳಕು ಮೂಡುತ್ತಿದ್ದ ಆಗಿನ ಸಂದರ್ಭದಲ್ಲಿ ನವೋದಯ ಕಾವ್ಯ ಎದುರಿಸಬೇಕಾಗಿ ಬಂದ ಜಿಕ್ಕಟ್ಟುಗಳನ್ನು; ಅದು ತನ್ನೊಡಲಲ್ಲಿ ಇರಿಸಿಕೊಂಡಿದ್ದ ಕನಸುಗಳನ್ನು ಕುರಿತು ಬಿ.ಎಂ.ಶ್ರೀಯವರು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ೧೯೧೧ ರಲ್ಲಿ ಕನ್ನಡ ಮಾತು ಹೇಗೆ ತಲೆಯೆತ್ತಬೇಕೆಂದು ಕಳಕಳಿಯ ಭಾಷಣ ಮಾಡಿದರು. ಅದರಲ್ಲಿ ಕಾವ್ಯ ಎಲ್ಲರನ್ನೂ ಮುಟ್ಟಲೆನ್ನುವ ಹಾಗೂ ಹೊಸ ವಿಚಾರಗಳು ಹರಿದು ಬರಲೆನ್ನುವ ಆಶಯಗಳಿದ್ದವು. ನವೋದಯದ ಹೊಲ ಹಸನು ಮಾಡುತ್ತಿದ್ದ ಲೇಖಕರೆಲ್ಲರಿಗೂ ಅವರು ಬರೆಯುವ ಸಂದರ್ಭ, ಲೇಖಕರ ಮುಂದೆ ಇದ್ದ ಆದರ್ಶ ಹಾಗೂ ಅವರು ಎದುರಿಸಬೇಕಾಗಿದ್ದ ಸವಾಲುಗಳ ಅರಿವಿತ್ತು. ಅಷ್ಟಾದ ಮೇಲೂ ಹಳೆಯದನ್ನು ಸಂಪೂರ್ಣ ತಿರಸ್ಕರಿಸಬೇಕು ಎಂದೇನೂ ಅವರು ಹೇಳಲಿಲ್ಲ. ಆಧುನಿಕ ಮನೋಭಾವಕ್ಕೆ ತಕ್ಕಂತೆ ಆಧುನಿಕ ಕನ್ನಡದಲ್ಲಿ ಕವಿತೆ ಬದುಕಿಗೆ ಒದಗಬೇಕೆಂದು ಅವರು ಅಪೇಕ್ಷೆಪಟ್ಟರು. ಬಾಲ್ಯದಲ್ಲಿ ತೊದಲಿ ನುಡಿದ ನುಡಿ, ಗೆಳೆಯರ ಜೊತೆ ಆಡಿದ ನುಡಿ, ಕೆಳದಿಗೆ ಒಲವು ಪ್ರಕಟಿಸುವ ನುಡಿ ಕವಿತೆಗಳ ನುಡಿಗಳಾಗಬೇಕೆಂದು ಬಿ.ಎಂ.ಶ್ರೀ ಆಸೆಪಟ್ಟರು.

ಮೊದಲ ತಾಯ ಹಾಲ ಕುಡಿದು
ಲಲ್ಲೆಯಿಂದ ತೊದಲಿ ನುಡಿದು
ಕೆಳೆಯರೊಡನೆ ಬೆಳೆದು ಬಂದ
ಮಾತದಾವುದು?
ನಲ್ಲೆಯೊಲವ ತೆರೆದು ತಂದ
ಮಾತದಾವುದು?[೩]

೪.೩ 'ಇಂಗ್ಲೀಷ್ ಗೀತಗಳು' ಮೂಡಿಸಿದ ಸಂಚಲನ :

ಹೊಸ ಸಂವೇದನೆಗಳು ರೂಪುಗೊಳ್ಳುತ್ತಿದ್ದ ಆ ಸಂಧಿಕಾಲದಲ್ಲಿ ನವ ಮನ್ವಂತರ ಉದಯಿಸುವ ಸೂಚನೆ ಕಾಣತೊಡಗಿತು. ದಟ್ಟ ಕತ್ತಲಲ್ಲಿ ಬೆಳಕಿನ ಕಿರಣವೊಂದು ಗೋಚರಿಸುವಂತೆ ಮುಸುಕಿರುವ ಮಬ್ಬು ಸೀಳಿಕೊಂಡು ಬೆಳಗಿನ ಅರುಣೋದಯ ಕಾಣಿಸಿಕೊಂಡಿತು.

ಕರುಣಾಳು ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ
ಕೈ ಹಿಡಿದು ನಡೆಸೆನ್ನನು.
ಇರುಳು ಕತ್ತಲೆಯ ಗವಿ; ಮನೆದೂರ; ಕನಿಕರಿಸಿ,
ಕೈ ಹಿಡಿದು ನಡೆಸೆನ್ನನು
ಹೇಳಿ ನನ್ನಡಿಯಿಡಿಸು; ಬಲುದೂರ ನೋಟವನು
ಕೇಳಿನೊಡನೆಯೆ - ಸಾಕು ನನಗೊಂದು ನೋಟವನು ಹೆಜ್ಜೆ[೪]

ಯಾವ ಅಂಧಕಾರವನ್ನು ನೀಗಿ ಕವಿ ನಾಡಿಗೆ ಬೆಳಕು ಹರಿಸಬೇಕೆಂದು ಅಂದುಕೊಂಡಿದ್ದನೊ; ಸಾಹಿತ್ಯ ಮತ್ತು ಜನತೆಯ ನಡುವಿದ್ದ ಯಾವ ಪರದೆಯನ್ನು ಸರಿಸಿ ನೈಜತೆಯತ್ತ ಕವಿ ಮುಖ ಮಾಡಬೇಕೆಂದು ಅಂದುಕೊಂಡಿದ್ದನೋ; ಯಾವ ಮನಸ್ಸಿನ ಭಾವದಿಂದ ಸಹೃದಯನನ್ನು ತಣಿಸಬೇಕೆಂದಿದ್ದನೊ ಅದು ೧೯೨೧ ರಲ್ಲಿ ಬಿ.ಎಂ.ಶ್ರೀಯವರ 'ಇಂಗ್ಲೀಷ್ ಗೀತಗಳು' ಕೃತಿಯ ಪ್ರಕಟಣೆಯೊಂದಿಗೆ ಸಾಧ್ಯವಾಯಿತೆನ್ನಬೇಕು. ಷೆಲ್ಲಿ, ಕೀಟ್ಸ್, ವರ್ಡ್ಸ್‌ವರ್ತ್, ಬ್ರೌನಿಂಗ್, ಟೆನಿಸನ್, ಸ್ಕಾಟ್, ಷೇಕ್ಸ್‌ಪೀಯರ್ ಮುಂತಾದ ಇಂಗ್ಲೀಷ ರೋಮ್ಯಾಂಟಿಕ್ ಕವಿಗಳ ಭಾವಾನುವಾದವಾಗಿದ್ದ 'ಇಂಗ್ಲೀಷ್ ಗೀತಗಳು' ಕನ್ನಡದಲ್ಲಿ ಒಂದು ಸಂಚಲನವನ್ನೇ ಸೃಷ್ಟಿ ಮಾಡಿತೆನ್ನಬೇಕು. ''ಮೂಲಕ್ಕೆ ಅನುಗುಣವಾದ ಹೊಸ ಛಂದೋರೂಪಗಳನ್ನು ನುಡಿಗಡಣವನ್ನೂ ನಿರ್ಮಿಸಿ 'ಇಂಗ್ಲೀಷ್ ಗೀತಗಳು' ಕೃತಿ ಕನ್ನಡದಲ್ಲಿ ಸ್ವತಂತ್ರ ಭಾವಗೀತೆಗಳ ಪರಂಪರೆಗೆ ಭದ್ರವಾದ ತಳಹದಿಯನ್ನು ಹಾಕಿಕೊಟ್ಟಿತು. ಹೀಗೆ ಮಾಡುವಾಗ ಶ್ರೀಯವರು ಹಳೆಯ ಪರಂಪರೆಯ ಸಾರವನ್ನು ಗ್ರಹಣ ಮಾಡಿದ ಕಾರಣ ಅವರ ಕೃತಿಗೆ ಇನ್ನೂ ಹೆಚ್ಚಾದ ಮಹತ್ವವು ಪ್ರಾಪ್ತವಾಯಿತು. ಅದರಿಂದ ತರುಣ ಕವಿಗಳಲ್ಲಿ ಅವರು ಹೊಸ ಕಾವ್ಯ ನಿರ್ಮಾಣದ ಕನಸನ್ನು ಕಾಣಲು ಪ್ರೇರೇಪಿಸಿದರು.''[೫]

ಕನ್ನಡ ನವೋದಯದ ಪ್ರಾರಂಭದಲ್ಲಿ ಆದರ್ಶ, ಕನಸು, ಕಲ್ಪನೆ ಪ್ರಧಾನವಾಗಿದ್ದವೆಂಬ ಮಾತ್ರಕ್ಕೆ ಅವು ತಳಬುಡವಿಲ್ಲದ, ವಿವೇಚನಾರಹಿತ, ಅವ್ಯವಹಾರಿಕ, ಕಾರ್ಯಗತಗೊಳಿಸಲಾರದ ಅಂಶಗಳಾಗಿದ್ದವು ಎಂದಲ್ಲ. ವೈಚಾರಿಕ ಹಾಗೂ ವಾಸ್ತವನೆಲೆಯಿಂದ ದೂರ ಸರಿಯುವ ಪ್ರಶ್ನೆ ಆಗಿನ ಕವಿಗಳಿರಲಿಲ್ಲವೆಂಬುದು ಸ್ಪಷ್ಟ. ಅವರ ಕವಿತೆಗಳು ಪ್ರಸ್ತುತತೆಯನ್ನು ಪ್ರತಿಬಿಂಬಿಸಿಲ್ಲವೆನ್ನುವ ಹಾಗಿದ್ದರೆ, 'ಬಾಣಂತಿಯೆಲುಬ ಸಾಬಾಣದ ಬಿಳುಪಿನ ಕಾಣದ ಕಿರುಗೆಜ್ಜೆ ಕಾಲಾಗ ಇತ್ತೊ' ಎಂದು ಬೇಂದ್ರೆಯವರು; 'ನೂರು ದೇವರನ್ನೆಲ್ಲ ನೂಕಾಚೆ ದೂರ/ ಭಾರತಾಂಬೆಯೆ

ದೇವಿ ನಮಗಿಂದು ಪೂಜಿಸುವ ಬಾರ' ಎಂದು ಕುವೆಂಪುರವರು ಬರೆಯಲು ಆಗುತ್ತಿರಲಿಲ್ಲ. ಸಾಮಾನ್ಯ ಜನತೆಯ ಜೊತೆ ಬೆರೆಯುವ ಉತ್ಕಟ ಇಚ್ಛೆ, ನಾಡು-ನುಡಿ ಬೆಳಗುವ ಆಸೆ, ವ್ಯಕ್ತಿ ಸ್ವಾತಂತ್ರ್ಯದ ಹಂಬಲ, ಹೆಣ್ಣಿನ ಸಮಾನತೆ ಮುಂತಾದ ಮೌಲ್ಯಗಳನ್ನು ಬಿತ್ತಿ ಬೆಳೆಯುವ ಕೆಲಸದಲ್ಲಿ ನವೋದಯದ ಕವಿಗಳು ತೊಡಗಿಕೊಂಡರು.

ಬಿ.ಎಂ.ಶ್ರೀಯವರ 'ಇಂಗ್ಲೀಷ್ ಗೀತಗಳು' ಆಧುನಿಕ ಕನ್ನಡ ಸಾಹಿತ್ಯವನ್ನು ನಿರ್ಮಿಸುವಲ್ಲಿ ಪ್ರೇರಕ ಕೆಲಸ ಮಾಡಿದೆಯೆಂಬುದನ್ನು ಯಾರೂ ಅಲ್ಲಗಳೆಯಲಿಕ್ಕಾಗುವುದಿಲ್ಲ. ಅದರ ಪ್ರಭಾವದಿಂದಾಗಿಯೇ ನಿಸರ್ಗ, ಭೂಮಿತತ್ವ, ಹೆಣ್ಣಿನ ಆತ್ಮಗೌರವದಂತಹ ಅಂಶಗಳು ಸಾಹಿತ್ಯದಲ್ಲಿ ಅರ್ಥಪೂರ್ಣವಾಗಿ ಮೂಡಿಬರುವಂತಾಯಿತು. ಪರಂಪರಾಗತ ಕಾವ್ಯದಲ್ಲಿ ಬಹುಶಃ ವಚನಕಾರರನ್ನು ಬಿಟ್ಟರೆ ಹೆಣ್ಣನ್ನು ಬರೀ ಸೌಂದರ್ಯದ ಹಾಗೂ ಭೋಗದ ದೃಷ್ಟಿಯಿಂದ ನೋಡಿಕೊಂಡು ಬರಲಾಗಿತ್ತು. ಆಕೆಯ ಅಂಗಾಂಗಗಳನ್ನು ವರ್ಣಿಸುವುದಷ್ಟಕ್ಕೆ ತಮ್ಮ ಪ್ರತಿಭೆಯನ್ನು ಸೀಮಿತಗೊಳಿಸಿ ಅವಳ ವ್ಯಕ್ತಿತ್ವವನ್ನು ಮರೆಮಾಚಿದ್ದರು. ಆದರೆ ಈಗ ಪ್ರೇಮವೆಂಬುದು ಆರಾಧನೆಯಾಗಿ ಕಾಣತೊಡಗಿತು. ಅದು ಒಂದು ತಪಸ್ಸಾಗಿ, ಜೀವನದ ಮೌಲ್ಯವಾಗಿ ಉಸಿರಾಡುವಂತಾಯಿತು. ಸ್ತ್ರೀ ಈಗ ಪುರುಷನ ಅಡಿಯಾಳಾಗದೆ ಅವನ ಸಂಗಾತಿಯಂತೆ ಕಾಣಿಸಿಕೊಳ್ಳತೊಡಗಿದಳು. ಭಾರತೀಯ ಪರಂಪರೆಗೆ ಹೊಂದಿಕೊಳ್ಳುವಂತಹ, ಅದನ್ನು ಮತ್ತಷ್ಟು ಗಟ್ಟಿಗೊಳಿಸುವಂತಹ ಮಾನವೀಯ ಗುಣಗಳು ಬೆಳೆದು ಬಂದವು. 'ಇಂಗ್ಲೀಷ್ ಗೀತಗಳು' ಕೃತಿಯಲ್ಲಿ, 'ಹೆಣ್ಣು ಸೆಂಟರ್ ಸ್ಟೇಜ್‌ಗೆ ಬಂದುಬಿಡುತ್ತಾಳೆ. ಆಕೆಗೂ ಹೊಸ ರೀತಿಯ ಸ್ವಾತಂತ್ರ್ಯ ದೊರಕಿದೆ (ಕಾರಿ ಹೆಗ್ಗಡೆಯ ಮಗಳು, ಕನಕಾಂಗಿ, ಬಿಂಕದ ಸಿಂಗಾರಿ). ಆಕೆಯ ಬಗೆಗಿನ ಧೋರಣೆಯಲ್ಲಿ, ಪರಂಪರೆಯ ಶರತ್ವಕ್ಕಿಂತ ಭಿನ್ನವಾದ ಮೃದುತ್ವ ವ್ಯಕ್ತವಾಗುತ್ತದೆ. (ದುಃಖಸೇತು, ಮುದಿಯ ರಾಮೇಗೌಡ). ಆದ್ದರಿಂದ ಹೆಣ್ಣಿನ ಚಿತ್ರಣ, ಶರೀರದ ಅಂಗೋಪಾಂಗಗಳನ್ನು ರಸವತ್ತಾಗಿ ವರ್ಣಿಸುವ ಕೇವಲ ಶೃಂಗಾರದ ನೆಲೆಯಿಂದ ಪ್ರೇಮದ, ಆರಾಧನೆಯ ನೆಲೆಗೆ ಏರಿತು. ಆಕೆ ಪುರುಷನನ್ನು ಆಡಿಸಬಲ್ಲಳು ಕೂಡ (ಮಾದ ಮಾದಿ). ಈ ಎಲ್ಲ ಕಾರಣಗಳಿಂದ 'ಇಂಗ್ಲೀಷ್ ಗೀತಗಳು' ಪ್ರೇಮ, ಯೌವ್ವನ, ಸಾಮರ್ಥ್ಯ, ಹೊಸಶಕ್ತಿ, ಸ್ವಾತಂತ್ರ್ಯ ಈ ಎಲ್ಲದಕ್ಕೂ ಸಂಕೇತವಾಗುತ್ತದೆ. ಈ ವಿಚಾರಗಳನ್ನು ಅಧಿಕೃತಗೊಳಿಸುವದಕ್ಕಾಗಿ ಶ್ರೀಯವರು ಹೊಸ ಕಾವ್ಯಕೃತಿ ಮತ್ತು ಕಾವ್ಯತತ್ವಗಳನ್ನು ರೂಪಿಸಬೇಕಾಯಿತು. ಸಾಹಿತ್ಯ ಇಂಥ ಗಂಭೀರವಾದ ಸಮಾಜೋ ರಾಜಕೀಯ ಸವಾಲನ್ನು ನಿಭಾಯಿಸಬಲ್ಲದು ಎಂಬ ನಂಬಿಕೆ ಕೂಡ ಶ್ರೀಯವರಿಗೆ ಪಾಶ್ಚಾತ್ಯ ಕಾವ್ಯತತ್ವದಿಂದಲೇ ಬಂದದ್ದು.'[1] ಸ್ವಾತಂತ್ರ್ಯಕ್ಕೆ ತುಡಿಯುವ ಮನಸ್ಸು ಮನುಷ್ಯನ ಜೊತೆ ಭೂಮಿಯ ಸಂಬಂಧವನ್ನು ಒಳಗೊಂಡಂತೆ ಅವನ ಕನಸು-ವಾಸ್ತವಗಳ ಇರುವಿಕೆಯನ್ನು ಸೂಚಿಸುತ್ತಿತ್ತು. 'ಇಂಗ್ಲೀಷ್ ಗೀತಗಳ'ಲ್ಲಿ ಪ್ರಕೃತಿಗೆ ಅನೇಕ ಅರ್ಥದ ಆಯಾಮಗಳು ಪ್ರಾಪ್ತವಾಗುತ್ತವೆ. ಅದು ಮನುಷ್ಯನನ್ನು ಈ ಭೂಮಿಗೆ ರಿಲೇಟ್ ಮಾಡುವುದರ ಮೂಲಕ ರಿಜುವೆನೆಟ್ ಮಾಡುವ ಚೈತನ್ಯ ಸ್ವರೂಪಿಯಾದುದು. ಭಾರತೀಯ ತತ್ವಜ್ಞಾನದಲ್ಲಿನ ದ್ರವ್ಯದ ಪಾಠಾಂತರವಾಗಿ ಭೂಮಿ ವ್ಯಕ್ತವಾದಾಗ ಅದಕ್ಕೆ ಆಧ್ಯಾತ್ಮಿಕ ಆಯಾಮ ದಕ್ಕುತ್ತದೆ.'[2]

೪.೪ ನವೋದಯವು ತಂದ ನವದೃಷ್ಟಿಕೋನ :

ಕನ್ನಡ ನವೋದಯಕ್ಕೆ ಚೈತನ್ಯ ಒದಗಿಬಂದದ್ದು ಕರ್ನಾಟಕದ ಮೂರು ಮುಖ್ಯ ಪ್ರದೇಶಗಳಿಂದ (ಪಂಜೆ ಮಂಗೇಶರಾಯರ ಮಂಗಳೂರು, ಬಿ.ಎಂ.ಶ್ರೀಯವರ ಮೈಸೂರು, ದ.ರಾ.ಬೇಂದ್ರೆಯವರ ಧಾರವಾಡ) ಎಂದು ಹೇಳಬಹುದು. ಮೂರೂ ಪ್ರದೇಶಗಳಲ್ಲಿ ಹೊಸ ಧ್ವನಿಗಳು ಕಾಣಿಸಿಕೊಂಡು ಅವು ಕನ್ನಡದ ಅಭಿವ್ಯಕ್ತಿಗೆ ನವೀನತೆಯನ್ನು ತಂದವೆಂಬುದು; ವಸ್ತು, ಭಾಷೆ, ಶೈಲಿಯಲ್ಲಿ ಸಹೃದಯನನ್ನು ಒಮ್ಮೆಗೆ ಹಿಡಿದಿಡುವ ಆಪ್ತತೆಯನ್ನು ಹೊಂದಿದ್ದವೆಂಬುದು ಭಾಷೆ ಹಾಗೂ ಸಾಹಿತ್ಯ ಬೆಳವಣಿಗೆಯ ದೃಷ್ಟಿಯಿಂದ ಬಹು ಮುಖ್ಯವಾದುದು. ಚಾರಿತ್ರಿಕವಾಗಿಯೂ ಅದು ಮುಖ್ಯವಾದದ್ದು. ಇಂಗ್ಲೀಷ್ ಹಾಗೂ ಅನ್ಯ ಸಾಹಿತ್ಯದ ಪ್ರಭಾವ ಕನ್ನಡದ ಮೇಲೆ ಆಗದಿದ್ದ ಪಕ್ಷದಲ್ಲಿ ಕನ್ನಡಕ್ಕೆ ತಿರುವು ಸಿಗುತ್ತಿರಲಿಲ್ಲವೆ ಎಂಬ ಪ್ರಶ್ನೆ ಹುಟ್ಟುವುದು ಸಹಜವಾಗಿದೆ. ವಚನಕಾರರು, ದಾಸರು, ಭಕ್ತಿಪಂಥದ ಕವಿಗಳು ನೀಡಿದ ಪ್ರೇರಣೆಗಳಿಂದ ದೇಶಿ ನವೋದಯ ಸಾಧ್ಯವೆಂಬುದನ್ನು ಬೇಂದ್ರೆ, ಮಧುರಚೆನ್ನ ಮತ್ತಿತರ ಕವಿಗಳು ಮಾಡಿ ತೋರಿಸಿದ್ದರು. ಆಚಾರ್ಯ ಬಿ.ಎಂ.ಶ್ರೀಯವರು ಕೂಡ ತಮ ಗೀತೆಗಳಲ್ಲಿ ಈ ನೆಲದ ನೀರನ್ನೇ ಹಣಿಸಿದ್ದರು. ಕನ್ನಡದ ಸಂವೇದನೆಗಳಲ್ಲಿ ಇಂಗ್ಲೀಷ್ ಗೀತಗಳನ್ನು ಎರಕ ಹೊಯ್ದು ತೆಗೆದಿದ್ದರು. ಡಾ. ಗಿರಡ್ಡಿ ಗೋವಿಂದರಾಜ ಅವರು ನವೋದಯ ಸಂದರ್ಭವನ್ನು ವಿಶ್ಲೇಷಿಸುತ್ತ ನವೋದಯದ ಕೊಂಡಿ ತನ್ನನ್ನು ಕನ್ನಡದ ಪರಂಪರೆಗೆ ಜೋಡಿಸಿಕೊಂಡಿದ್ದರೂ ಕೂಡ ಸಾಹಿತ್ಯ ಈಗಿನ ರೂಪಗಳನ್ನು, ತಿಳುವಳಿಕೆಗಳನ್ನು ಪಡೆಯಲು ಪಾಶ್ಚಾತ್ಯ ಪ್ರೇರಣೆಗಳು ಅನುಕೂಲ ಒದಗಿಸಿದವು ಎಂದು ಹೇಳುತ್ತಾರೆ: 'ನಮ್ಮಲ್ಲಿಯ ಅನೇಕ ಜನ ನವೋದಯ ವಿಮರ್ಶಕರು, ನವೋದಯ ಸಾಹಿತ್ಯ ಹೊರಗಿನ ಪ್ರಭಾವಗಳನ್ನು ಸ್ವೀಕರಿಸಿದ್ದರೂ, ಅದನ್ನು ನಮ್ಮದೇ ಪರಂಪರೆಗೆ ಸಮನ್ವಯಿಸಿಗೊಳಿಸಿಕೊಂಡಿತೆಂದು ಹೇಳುತ್ತಾರೆ. ಆದರೂ ನವೋದಯ ಸಾಹಿತ್ಯಕ್ಕೆ ಆರಂಭದಲ್ಲಿ ಸಮರ್ಥನೆ ಮಾಡಿಕೊಳ್ಳುವ ಅಗತ್ಯ ಬಾರದೇ ಇರಲಿಲ್ಲ. ನಮ್ಮಲ್ಲೂ ವಚನಗಳಲ್ಲಿ ದಾಸರ ಹಾಡುಗಳಲ್ಲಿ, ದೊಡ್ಡ ಕಾವ್ಯಗಳ ಬಿಡಿಭಾಗಗಳಲ್ಲಿ ಇದ್ದವೆಂದು ತೋರಿಸಬೇಕಾಯಿತು. ಕಾದಂಬರಿ ಪ್ರಕಾರಕ್ಕೂ ಬಾಣನ 'ಕಾದಂಬರಿ' ಕೃತಿಗೂ ಇರುವ ಸಂಬಂಧವನ್ನು ಸಾಧಿಸಬೇಕಾಯಿತು. ಆದರೆ ಈ ಎಲ್ಲ ಸಂದರ್ಭಗಳಲ್ಲಿ ಮರೆಯಲಿಕ್ಕಾಗದ ಒಂದು ಸಂಗತಿ ಎಂದರೆ, ನವೋದಯ ಸಾಹಿತ್ಯದ ಭಾವಗೀತೆ, ಸಣ್ಣಕತೆ, ಕಾದಂಬರಿಗಳು ನಮ್ಮದೇ ಪರಂಪರೆಯಲ್ಲಿಯ ಅಂಥವೇ ರೂಪಗಳ ಸಹಜ ಬೆಳವಣಿಗೆಯ ಫಲಗಳಾಗಿರಲಿಲ್ಲ. ಒಂದು ವೇಳೆ ನಮ್ಮ ಸಾಹಿತ್ಯ ಪಾಶ್ಚಾತ್ಯ ಸಾಹಿತ್ಯದ ಪ್ರಭಾವಕ್ಕೆ ಒಳಗಾಗದಿದ್ದರೆ ಈ ರೂಪಗಳು ಇಂದಿನಂತೆ ಬೆಳೆಯುತ್ತಿರಲಿಲ್ಲ.'[೮] ಆದ್ದರಿಂದ ಅನ್ಯ ಸಂಸ್ಕೃತಿ, ಸಂವೇದನೆಗಳು ನಮ್ಮ ಸಾಂಸ್ಕೃತಿಕ ನಿರ್ಮಾಣವನ್ನು ಪ್ರೇರೇಪಿಸಿರುವುದರಲ್ಲಿ ಅನುಮಾನಗಳಿಲ್ಲ. ಶ್ರೀಯವರು ಹಾಕಿಕೊಟ್ಟ ಅಡಿಪಾಯದ ಮೇಲೆಯೇ ಅವರ ಪ್ರೀತಿಯ ಶಿಷ್ಯರಲ್ಲೊಬ್ಬರಾದ ಕುವೆಂಪು ಕನ್ನಡವನ್ನು ಅದ್ಭುತವಾಗಿ ಕಟ್ಟಿದರು. ನವೋದಯದ ಸಂಕ್ರಮಣ ಸ್ಥಿತಿಯನ್ನು ವಿಕಾಸದ ಹಂತಕ್ಕೆ ಕರೆದೊಯ್ದರು. ಶ್ರೀಯವರಲ್ಲಿ ಹಾಗೂ ನವೋದಯದ ಆಗಿನ ಪ್ರಮುಖರಲ್ಲಿ ಕಂಡುಬರದೇ ಇದ್ದ ತೀವ್ರ

ಸಾಮಾಜಿಕ ಕಳಕಳಿ ಕುವೆಂಪು ಅವರಲ್ಲಿ ಕಂಡುಬಂದು ವಿಶಾಲ ತಳಹದಿಯನ್ನು, ಮಾನವೀಯ ಅಂಶವನ್ನು ಅವರ ಕಾವ್ಯ ಕನ್ನಡಕ್ಕೆ ಒದಗಿಸಿಕೊಟ್ಟಿತು. ರಾಷ್ಟ್ರೀಯತೆ, ದೇಶಪ್ರೇಮದಂತಹ ಶ್ರೀಯವರ ಭಾವ ಕುವೆಂಪು ಅವರಲ್ಲಿ ಅದಷ್ಟೆ ಆಗಿರದೆ ಸಾಮಾಜಿಕ ಸಮಾನತೆ, ಮಾನವತಾವಾದ, ಅಂಧಶ್ರದ್ಧೆಯ ವಿರುದ್ಧದ ಹೋರಾಟವೂ ಆಗಿತ್ತು.

ಹೊಸ ಆಶಯ, ಹೊಸ ದೃಷ್ಟಿಕೋನಗಳಿಗಷ್ಟೆ ನವೋದಯ ಸೀಮಿತವಾಗಿರದೆ ಕನ್ನಡ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವ, ಭಾಷೆಯಲ್ಲಿ ಅದನ್ನು ಹಿಡಿದಿಡುವ ಕೆಲಸದಲ್ಲಿ ನಿರತವಾಗಿತ್ತು. ಗ್ರೀಕ್, ಐರಿಶ್, ಇಂಗ್ಲೀಷ್, ಜರ್ಮನ್ ಮುಂತಾದ ಪ್ರತ್ಯಕ್ಷ ಹಾಗೂ ಪರೋಕ್ಷ ಪ್ರಭಾವದಿಂದ ರೂಪುಗೊಂಡ ಹೊಸ ಕಾಲದ ಧೋರಣೆಗಳು ಒಂದು ಕಡೆಯಾದರೆ, ಜನಪದ ಸಂಸ್ಕೃತಿಯ ಬೇರುಗಳನ್ನು ಹುಡುಕುತ್ತ ಹೋಗಿ ಅವುಗಳ ಸತ್ವದಿಂದ ಹೊಸ ಚಿಗುರು ಕಾಣುವ ಕನಸುಗಾರಿಕೆ, ಮತ್ತೊಂದು ಕಡೆ ಕಣ್ಣುಬಿಡುತ್ತಿತ್ತು. ಅಂದರೆ ನವೋದಯ ಕಾವ್ಯದ ಮೇಲೆ ಪಾಶ್ಚಿಮಾತ್ಯರ ಪ್ರಭಾವ ತುಂಬಾ ಸಂಕೀರ್ಣವಾದುದು. ಸಂಕ್ರಮಣ ಕಾಲದ ಕನ್ನಡ ಕಾವ್ಯವನ್ನು ರೋಮ್ಯಾಂಟಿಕ್ ಕಾವ್ಯ ಪ್ರಭಾವಿಸಿದ್ದರೂ ವಸ್ತು, ಧಾಟಿಗಳು ಕನ್ನಡ ಸತ್ವದಿಂದಲೆ ಹುಟ್ಟಿ ಬಂದವುಗಳಾಗಿದ್ದವು. ಹಾಗಾಗಿ ಪಶ್ಚಿಮದ ಮನೋಧರ್ಮ ನಮ್ಮ ಮನೋಧರ್ಮವಾಗುವುದು ಸಾಧ್ಯವಿರಲಿಲ್ಲ. ಆಶಯ, ಆಕೃತಿ, ಅಭಿವ್ಯಕ್ತಿಯ ಪರಿಣಾಮ ಮುಂತಾದವುಗಳಲ್ಲಿ ಮೊದಮೊದಲು ಇಂಗ್ಲೀಷ್ ಕಾವ್ಯದ ದಟ್ಟ ಪ್ರೇರಣೆಗಳನ್ನು ಗುರುತಿಸಬಹುದಾಗಿದ್ದರೂ ನಂತರದ ಕನ್ನಡ ಕಾವ್ಯ ತನ್ನದೆ ನೆಲ, ನೀರು, ಗೊಬ್ಬರದ ಮೂಲಕ ಟಿಸಿಲೊಡೆಯುತ್ತ ಸಾಗಿತು. ಅನುಕರಣೆಯ ಮಾದರಿಗಳು ಮೊದಲಿಗೆ ಸ್ವಲ್ಪ ಕಾಣಿಸಿಕೊಂಡರೂ ಸೃಷ್ಟಿಕ್ರಿಯೆಯ ವಿಕಾಸದಲ್ಲಿ ಅವು ಬದಿಗೆ ಸರಿದು ನಾಡು ನುಡಿಯು ವಿಜೃಂಭಿಸತೊಡಗಿತು. ಬೇಂದ್ರೆ ಹಾಗೂ ಕುವೆಂಪು ಅದರ ಶ್ರೇಷ್ಠ ಮಾದರಿಗಳಾದರು.

ಕುವೆಂಪು ಅವರಲ್ಲಿ ಪಾಶ್ಚಿಮಾತ್ಯದ ಪ್ರೇರಣೆಗಳು ಜನಪರವಾದ ಭಾರತೀಯ ಮೌಲ್ಯಗಳೊಂದಿಗೆ ಎರಕವಾಗುವ ರೀತಿ ಅಚ್ಚರಿ ಹುಟ್ಟಿಸುತ್ತದೆ. ವ್ಯಷ್ಟಿ-ಸಮಷ್ಟಿಯ ಅಭ್ಯುದಯ ಸಾಧಿಸುವ ಸಾಮಾಜಿಕ ತತ್ವ ಅವರ ಕಾವ್ಯದ ಕಲಾತ್ಮಕ ತತ್ವದ ಜೊತೆ ಸಂಗಮವಾಗಿ ಹರಿಯುವುದು ಕುವೆಂಪು ಸಾಧಿಸಿ ತೋರಿಸಿದ ಸಿದ್ಧಿ ಎನ್ನಬಹುದು. ದೇಶಪ್ರೇಮವನ್ನು, ರಾಷ್ಟ್ರೀಯತೆಯನ್ನು ಕುವೆಂಪು ನೋಡುವ ದೃಷ್ಟಿ ಬಿ.ಎಂ.ಶ್ರೀಯವರಿಗಿಂತ ತುಂಬ ಭಿನ್ನವಾದುದು. ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಕಂದಾಚಾರ ಹಾಗೂ ಅಸಮಾನತೆಗಳಿಂದ ಬಿಡುಗಡೆಯೂ ಕುವೆಂಪು ಅವರಿಗೆ ಬೇಕಾಗಿತ್ತು. ಬೇಂದ್ರೆಯವರ ಹಲವು ಕವಿತೆಗಳಲ್ಲಿ ಭಾರತೀಯ ಸಮಾಜದಲ್ಲಿ ಪ್ರಚಲಿತವಿರುವ ಕಂದಾಚಾರ, ಮೂಢನಂಬಿಕೆಗಳು ಪ್ರಸ್ತಾಪಗೊಂಡು ವ್ಯಂಗ್ಯದಿಂದ ಶೋಷಣೆ-ಅಸಮಾನತೆಗಳನ್ನು ಅಣಕಿಸುತ್ತಾರೆ. ಪಶ್ಚಿಮದ ಪ್ರಭಾವದಿಂದ ಬೇಂದ್ರೆ ಹಾಗೂ ಕುವೆಂಪು ಅದನ್ನು ರೂಢಿಸಿಕೊಂಡರು. ನವೋದಯ ಕಾಲದ ಸಾಹಿತಿಗಳು ಎದುರಿಸಬೇಕಾಗಿದ್ದ ಮತ್ತೊಂದು ಸಂಕಷ್ಟವೆಂದರೆ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಸಂಸ್ಕೃತಿಗಳ

ನಡುವಿನ ಭಿನ್ನತೆಗಳನ್ನು ತೊಡಕಾಗದಂತೆ ನಿರ್ವಹಿಸುವುದು. ಈಗಿನಂತೆ ಆಗ ಸಂಕಟಗಳಿಲ್ಲದ ಪರಿಸ್ಥಿತಿಯಿರಲಿಲ್ಲ. ಅರಸೊತ್ತಿಗೆ, ಬ್ರಿಟಿಷ ಸಾಮ್ರಾಜ್ಯಶಾಹಿ, ರಾಷ್ಟ್ರೀಯ ವಿಚಾರಧಾರೆ ಹಾಗೂ ಕನ್ನಡ ನಾಡು-ನುಡಿಯ ನಿಷ್ಠೆ ಇವುಗಳ ನಡುವೆ ಸಮತೋಲನ ಸಾಧಿಸಿಕೊಂಡು ಹೋಗುವುದರ ಜೊತೆಗೆ ರಾಷ್ಟ್ರವು ಬ್ರಿಟಿಷರ ದಾಸ್ಯದಿಂದ ಮುಕ್ತವಾಗುವ ಆಶಯಕ್ಕೆ ಅಭಿವ್ಯಕ್ತಿ ನೀಡುವ ಹಾಗೂ ಕನ್ನಡದ ಸಂಸ್ಕೃತಿ ಕಟ್ಟುವುದಕ್ಕೆ ಶಬ್ದ ಒದಗಿಸುವ ಕೆಲಸವನ್ನು ಗೊತ್ತಾಗುವಂತೆಯೋ ಅಥವಾ ಗೊತ್ತಾಗದಂತೆಯೋ ನಿರ್ವಹಿಸಬೇಕಿತ್ತು.

ರಾಷ್ಟ್ರೀಯತೆಯ ಪರವಾಗಿ ನಿಂತಾಗ ಪ್ರಾದೇಶಿಕ ಭಾಷೆ, ಸಂಸ್ಕೃತಿಗಳು ಉದಾಸೀನಗೊಳ್ಳುವ ಪ್ರಾದೇಶಿಕತೆಗೆ ಅಂಟಿಕೊಂಡಾಗ ಸಂಕುಚಿತ ದೃಷ್ಟಿ ತಳೆಯುವ ಸನ್ನಿವೇಶಗಳು ಉಂಟಾಗುತ್ತಿದ್ದವು. ಆದರೆ ನವೋದಯದ ಪ್ರಮುಖರು ಆ ಬಿಕ್ಕಟ್ಟನ್ನು ಅತ್ಯಂತ ಸೂಕ್ಷ್ಮವಾಗಿ ಬಗೆಹರಿಸಿಕೊಂಡರು. ರಾಷ್ಟ್ರೀಯತೆಗೆ ಧಕ್ಕೆ ಬಾರದಂತೆ ಪ್ರಾದೇಶಿಕತೆಯನ್ನು ಹಿಡಿದೆತ್ತಿದರು. ಆದರೆ ಎಲ್ಲಿಯೂ ಅವರು ನೇರವಾದ ಚಳುವಳಿಗಳಲ್ಲಿ, ಸ್ವಾತಂತ್ರ್ಯದ ಹೋರಾಟಗಳಲ್ಲಿ ಭಾಗವಹಿಸಲಿಲ್ಲ. ಆದರೂ ತಮ್ಮ 'ನರಬಲಿ' ಕವಿತೆಗಾಗಿ ಬೇಂದ್ರೆಯವರು ಕೆಲಕಾಲ ಜೈಲಿಗೆ ಹೋಗಬೇಕಾಯಿತು. ನವೋದಯ ಕಾಲದಲ್ಲಿ ನಾಡು-ನುಡಿಯನ್ನು ಕಟ್ಟುವ ಹಾಗೂ ಸ್ವಾತಂತ್ರ್ಯದ ಗೀತೆ ಹಾಡುವ ಸಮನ್ವಯ ಕಾರ್ಯವನ್ನು ಅವರು ಸಮರ್ಥವಾಗಿ ಮಾಡಿದರೆಂದು ಪ್ರೊ. ಎಚ್.ಎಸ್.ರಾಘವೇಂದ್ರರಾವ್ ವಿವರಿಸುತ್ತಾರೆ. ''ನವೋದಯ ಕಾವ್ಯವು, ಭಾಷೆ ಮತ್ತು ರಾಷ್ಟ್ರಗಳನ್ನು ಒಂದೇ ನಾಣ್ಯದ ಎರಡು ಮುಖಗಳಾಗಿ ಪರಿಗಣಿಸಿ, ಎರಡರ ನಡುವೆ ಸಮತೋಲನವನ್ನು ಸಾಧಿಸುವ ಕೆಲಸವನ್ನು ಬಹಳ ಸಹಿಷ್ಣುತೆಯಿಂದಲೇ ನಿರ್ವಹಿಸಿತೆಂದು ಹೇಳಬೇಕು. ಕುವೆಂಪುರವರು, ಕರ್ನಾಟಕ ಮಾತೆಯನ್ನು 'ಭಾರತ ಜನನಿಯ ತನುಜಾತೆ' ಎಂದು ಕರೆಯುವುದರಲ್ಲಿ ಅಥವಾ ದ.ರಾ.ಬೇಂದ್ರೆಯವರು ಭಾರತಮಾತೆಯಿಂದ 'ಕನ್ನಡ ಕಂದವ್ವನ ಲಾಲಿ' ಯನ್ನು ಹಾಡಿಸುವುದರಲ್ಲಿ ಈ ಸಮನ್ವಯದ ಧೋರಣೆಯನ್ನು ಸ್ಪಷ್ಟವಾಗಿ ಗುರುತಿಸಬಹುದು.''[೯] ಹೀಗೆ ರಾಷ್ಟ್ರೀಯತೆ ಹಾಗೂ ಪ್ರಾದೇಶಿಕತೆ, ಪರಂಪರಾಗತ ನಂಬಿಕೆ ಹಾಗೂ ಆಧುನಿಕ ವಿಚಾರಧಾರೆ, ವ್ಯಕ್ತಿನಿಷ್ಠ ಹಾಗೂ ವಸ್ತುನಿಷ್ಠ ಕಾವ್ಯ ಮನೋಧರ್ಮ ಮುಂತಾದ ಹತ್ತು ಹಲವು ಸಂದಿಗ್ಧತೆಗಳನ್ನು ನವೋದಯ ಕಾವ್ಯ ಹಾದು ಬರಬೇಕಾಗಿ ಬಂತು. ಅಲ್ಲದೆ ಸಂದಿಗ್ಧತೆ, ಸವಾಲುಗಳನ್ನು ಸಾಹಿತ್ಯದ ವೈವಿಧ್ಯತೆಗಳನ್ನಾಗಿ ಪರಿವರ್ತಿಸುವಲ್ಲಿ ನವೋದಯ ಯಶಸ್ವಿಯಾಯಿತು. ತಮ್ಮ ಕಾಲದ ದ್ವಂದ್ವ ಹಾಗೂ ವೈರುಧ್ಯಗಳನ್ನು ಅತ್ಯಂತ ಜಾಣ್ಮೆ ಹಾಗೂ ಕೌಶಲ್ಯದಿಂದ ಸ್ವೀಕರಿಸಿದ ನವೋದಯದ ಅಧ್ವೈರ್ಯರು ಆಧುನಿಕ ವಿಷಮತೆಗಳ ನಡುವೆ ಪ್ರಕೃತಿಯ ಶಾಂತಿ-ಸಮಾಧಾನವನ್ನು; ಕಂದಾಚಾರ-ಅಸಮಾನತೆಗಳ ನಡುವೆ ಸಾಮಾಜಿಕ ವಿಕಾಸವನ್ನು ಸಾಧಿಸಿದರು. ರಂಜನೆ-ಉಪದೇಶಗಳಿಂದಾವೃತವಾದ ಕಥನಮಾರ್ಗವನ್ನು ತೊರೆದು ಆತ್ಮತೃಪ್ತಿ, ಪ್ರೀತಿ, ಸತ್ಯದಂತಹ ಮೌಲ್ಯಗಳನ್ನು ಅರಸಿದರು. ಅಂತಹ ಮೌಲ್ಯಗಳ ಆವಿಷ್ಕಾರವನ್ನು ಸಾಧಿಸುವಲ್ಲಿ ನಿರತರಾದರು. ಹೀಗಾಗಿಯೇ ಕುವೆಂಪು ಅವರ ಕಥನಮಾರ್ಗ ಸಾಮಾಜಿಕ ಹಾಗೂ ವೈಯಕ್ತಿಕ ವಿಕಾಸದ ಹಾದಿಯಾಗಿಯೂ; ಬೇಂದ್ರೆಯವರ ಭಾವಗೀತೆಯ, ಯಾಣ, ಪ್ರೇಮ-ಪ್ರೀತಿ-ಸತ್ಯಗಳನ್ನು

ವರ್ಧಿಸುವ ಮೌಲ್ಯವಾಗಿಯೂ ಕಾಣಿಸಿಕೊಂಡು ನವೋದಯದ ಉತ್ಕೃಷ್ಟ ಮಾದರಿಗಳಾದರು. ಆದರೆ ಆ ಸಾಧನೆಗಳ ಹಿಂದೆ ಅವರು ಕಷ್ಟಪಟ್ಟು ರೂಢಿಸಿಕೊಂಡ; ಪರಂಪರೆಗೆ ಹೋಗಿ ತಮಗೆ ಬೇಕಾದುದನ್ನು ಹೆಕ್ಕಿ ತಂದ; ಪಾಶ್ಚಿಮಾತ್ಯ ಪ್ರೇರಣೆಗಳಲ್ಲಿ ತಮಗೆ ಅವಶ್ಯಕವಾದುದನ್ನು ಆರಿಸಿಕೊಂಡ ಪರಿಶ್ರಮವಿದೆ.

'ಇಂಗ್ಲೀಷ್ ಗೀತಗಳು' ಹರಡುತ್ತಿರುವ ಪ್ರಭಾವದ ಅರಿವಿದ್ದರೂ, ನವೋದಯದ ಚಳುವಳಿ ಆದರ್ಶ ರಾಜ್ಯವೊಂದರ ನಿರ್ಮಾಣಕ್ಕೆ ಕನಸು ಕಾಣುತ್ತಿದ್ದರೂ ನವಸಮಾಜ ನಿರ್ಮಾಣದ ಯಾವ ತೀವ್ರ ಹಂಬಲವನ್ನೂ ಇಟ್ಟುಕೊಳ್ಳದೆ ಬೇಂದ್ರೆಯವರು ತಮ್ಮ ಕಾವ್ಯದ ತುತ್ತೂರಿ ಊದಿದರು. ಅದನ್ನು ಅವರು ಸಾಕಷ್ಟು ಪ್ರಜ್ಞಾಪೂರ್ವಕವಾಗಿಯೆ ಮಾಡಿದರು. ತಾವು ತುಳಿಯುತ್ತಿರುವ ಹಾದಿ ಇತರರಿಗೆ ಅಷ್ಟೇನೂ ಆಕರ್ಷಕವಲ್ಲವೆಂಬ ಅರಿವು ಅವರಿಗೆ ಇತ್ತೆಂದು ತೋರುತ್ತದೆ. ಆದರೆ ಅವರು ಹಾಯ್ದುಬಂದ ಪರಿಸರ, ರಾಶಿರಾಶಿಯಾಗಿ ಬಿದ್ದಿದ್ದ ಅನುಭವ ಸಂಪತ್ತು, ಪರಂಪರೆಯಿಂದಲೆ ಹೊಸದನ್ನು ಕಟ್ಟುವ ಉತ್ಸಾಹ ಅವರನ್ನು ಅವರಾಯ್ದುಕೊಂಡ ದಾರಿಯಿಂದ ತಿರುಗಿ ನೋಡುವ ಪ್ರಮೇಯ ಒದಗಿಸಲಿಲ್ಲ. ಅವರ ಸ್ವಂತದ ಹಾಗೂ ಅವರ ಸುತ್ತಮುತ್ತಲಿನ ಬದುಕಿನ ತೀವ್ರತೆಯೆ ಅವರನ್ನು ಬಾಧಿಸಿ, ಕಾಡಿಸಿ ಅಕ್ಷರಗಳಲ್ಲಿ ಅಭಿವ್ಯಕ್ತಿ ಪಡೆದುಕೊಂಡಿತು. ಇದರ ಅರ್ಥ ಪಾಶ್ಚಾತ್ಯ ಪ್ರಭಾವಗಳು ಬೇಂದ್ರೆಯವರನ್ನು ಕಾಡಲಿಲ್ಲವೆಂದಲ್ಲ. ಆ ಪ್ರಭಾವಗಳು ಅವರಿಗೆ ಧಾರವಾಡದ ಮಣ್ಣಿನಲ್ಲಿ ಮರುಹುಟ್ಟು ಪಡೆದು ಬಂದವು. ಪ್ರಭಾವವು ಈ ನೆಲದ ನೀರು, ಮಣ್ಣು ಆಗಿ ಒದಗಿತು. ಆದ್ದರಿಂದ ಬೇಂದ್ರೆಯವರಲ್ಲಿ 'ದೇಶೀಯತೆ'ಯೆನ್ನುವುದು ರಾಷ್ಟ್ರೀಯತೆಯ ಕಲ್ಪನೆಯಲ್ಲಿ ಪಶ್ಚಿಮದ ಆಧುನಿಕ ಜ್ಞಾನಗಳ ಪ್ರಭಾವಕ್ಕಿಂತ, ಪೂರ್ವದ ಅಪೂರ್ವ ದ್ರವ್ಯವನ್ನು ಧಾರಣೆ ಮಾಡುತ್ತಲೇ, ಜನಸಮುದಾಯದ ಜನಜನಿತವಾದ ಕಾಣ್ಕೆಗಳನ್ನು ಬ್ಲೆಂಡ್ ಮಾಡುವ ಒಂದು ಸೌಹಾರ್ದ ತತ್ವ ವ್ಯಕ್ತವಾಗುತ್ತದೆ'[೧೧] ಎಂದು ಜಿ.ಯು.ಸುಮಾ ಅವರು ಹೇಳುತ್ತಾರೆ. ಬೇಂದ್ರೆಯವರಲ್ಲಿ ರಾಷ್ಟ್ರೀಯತೆ, ಸಾಮಾಜಿಕ ಸಾಮರಸ್ಯ ವ್ಯಷ್ಟಿ-ಸಮಷ್ಟಿಯ ಉನ್ನತಿ ಮತ್ತು ಬದುಕಿನ ಒಲವು ಒಟ್ಟಾಗಿ ಕೂಡಿಕೊಂಡು ಬರುತ್ತವೆ. ಅವುಗಳನ್ನು ಬಿಡಿಸಲು ಆಗುವುದಿಲ್ಲ. 'ಅವರ ರಚನೆಗಳಲ್ಲಿ ಕಾವ್ಯತತ್ವ, ಭೂಮಿತತ್ವ, ಪ್ರೇಮತತ್ವ, ಸ್ವಾತಂತ್ರ್ಯದ ಆಶಯ ಎಲ್ಲವೂ ಒಟ್ಟಾಗಿ ಹೆಣೆದುಕೊಂಡು ಬಿಡುತ್ತವೆ. ಬೇಂದ್ರೆಯವರ ಕವಿತೆಗಳಲ್ಲಿ ಭೂಮಿ ಅಥವಾ ಪ್ರಕೃತಿ ಎಂದರೆ ಮನುಷ್ಯನನ್ನು ಶೋಧನೆಗೆ ಪ್ರೇರೇಪಿಸುವ, ಆ ಮೂಲಕ ಅವನ ಅರಿವನ್ನು ವಿಕಾಸಗೊಳಿಸುವ, ತನ್ನನ್ನು ತಾನೇ ಪರಿಪೂರ್ಣಗೊಳಿಸಿಕೊಳ್ಳಲು ನೆರವಾಗುವ ಒಂದು ನಿಕಷ. ಆದರೆ ಇದು, ಅತ್ಯಂತ ನಿಗೂಢವಾದುದು. ಆದರೂ ಅಸೀಮವಾದ ಶಕ್ತಿ ಸ್ವರೂಪಿಯಾದುದು. ಅದಕ್ಕೆ ಪಾಲನೆಯ ಪೋಷಣೆಯ ಗುಣಗಳಿರುವ ಹಾಗೆಯೇ ಕರಾಳವಾದ ರುದ್ರಮುಖವೂ ಇದೆ.''[೧೨] ಪ್ರಕೃತಿ ದಯಪಾಲಿಸುವ ಸಾಂತ್ವನವನ್ನು, ಪ್ರೇಮವನ್ನು, ಒಲವನ್ನು ಹಿಡಿದಿಡುವಂತೆಯೇ ಪ್ರಕೃತಿಯ ಭೀಷಣ ಪ್ರವೃತ್ತಿಯನ್ನು ಮನುಷ್ಯನ ಮೇಲೆ ಸುರಿಸುವ ನೋವಿನ ಜಲಪಾತವನ್ನು, ಅವನ ಮೇಲೆ ಹಾಯಿಸುವ ದುಃಖದ ಬಂಡೆಗಳನ್ನು ಬೇಂದ್ರೆ ಹಿಡಿದಿಡುತ್ತಾರೆ. ಆ ವ್ಯಷ್ಟಿಯಲ್ಲಿಯೆ ಸಮಷ್ಟಿ ಅಡಗಿದೆ. ಅವನ ಬದುಕಿನ ಜಗತ್ತು ಅಡಗಿದೆ. ಬೇಂದ್ರೆಯವರು

ನವೋದಯದ ಹೊತ್ತಿನ ಪ್ರೇರಣೆಗಳನ್ನು ತಮಗೆ ಬೇಕಾದಂತೆ ಮುರಿದು ಕಟ್ಟಿದರು. ಪಾಶ್ಚಾತ್ಯ ಕಲ್ಪನೆಯ ಒಲವು, ಪ್ರೇಮ, ಕಾಮ, ಲೈಂಗಿಕತೆ ನಿಸರ್ಗ ಪ್ರೀತಿಗಳನ್ನು ಪ್ರಾದೇಶಿಕ ಹಾಗೂ ಪೌರಾಣಿಕ ಪ್ರತಿಮೆಗಳಲ್ಲಿ ತಂದರು. ಅವುಗಳನ್ನು ಭಾರತೀಯ ಕುಟುಂಬದ ಮೌಲ್ಯಗಳಲ್ಲಿ ಸೋಸಿದರು. ಹಾಗಿದ್ದಾಗಲೂ ಕೂಡ ಅವರು ಬಿ.ಎಂ.ಶ್ರೀಯವರಿಗಿಂತ, ಕೆ.ಎಸ್.ನರಸಿಂಹಸ್ವಾಮಿ ಅವರಿಗಿಂತ ಭಿನ್ನರಾದರು. ಬೇಂದ್ರೆಯವರ ಪ್ರೇಮ-ಒಲವುಗಳಲ್ಲಿ ಸ್ತ್ರೀ ಪುರುಷನ ಅಧೀನಳಲ್ಲ. ಅವಳು ಸಿಂಗಾರದ ಬೊಂಬೆಯಲ್ಲ. ಬದಲಾಗಿ ಶಕ್ತಿಸ್ವರೂಪಿಣಿ, ಪುರುಷನ ಸಹಭಾಗಿ. ಅವನನ್ನು ರೂಪಿಸುವವಳು. ಅವನು-ಅವಳು ಕೂಡಿಯೆ ದೀಪ ತೇಲಿ ಬಿಡುವವರು.

ನಾನು ನೀನು ಜೊತೆಗೆ ಬಂದು
ಈ ನದಿಗಳ ತಡಿಗೆ ನಿಂದು
ಸಾನುರಾಗದಿಂದ ಇಂದು
ದೀಪ ತೇಲಿಬಿಟ್ಟೆವೇ
ದೀಪ ತೇಲಿಬಿಟ್ಟೆವು[೧೨]

ಬದುಕಿನ ಒಲವನ್ನು ತೀರದಂತೆ ಹಂಚಿಕೊಳ್ಳುವವರು. ಹೀಗೆ ನವೋದಯದ ಆರಂಭಿಕ ಹಂತದ ಪ್ರೇಮದ ಮೌಲ್ಯಗಳನ್ನು, ಹೊಸ ಕನಸುಗಳನ್ನು ಬೇಂದ್ರೆ, ಕುವೆಂಪು, ಪು.ತಿ.ನ., ಮಾಸ್ತಿ ಅವರಂತಹ ಪ್ರಮುಖರು ಹೊಸ ಎತ್ತರಕ್ಕೆ ಒಯ್ದು ಕನ್ನಡ ಸಾಹಿತ್ಯವು ಹೊಸ ಬೆಳವಣಿಗೆಗಳ ಸಶಕ್ತ ಅಭಿವ್ಯಕ್ತಿಯನ್ನು ಸಾಧಿಸುವಲ್ಲಿ ಸಫಲರಾದರು. ಮನುಷ್ಯನ ಭಾವನೆಗಳಿಗಿರುವ ಚೇತನಾಶಕ್ತಿಯನ್ನು ಹಾಗೂ ಅವನ ಕಲ್ಪನಾಶಕ್ತಿಗಿರುವ ಪ್ರಾಧಾನ್ಯತೆಯನ್ನು ನವೋದಯ ಮನದಟ್ಟು ಮಾಡಿಸಿ ಹಿಂದಿನ ಕಾಲದ ಕಾವ್ಯ ಮನೋಧರ್ಮಕ್ಕೆ ಭಿನ್ನವಾದ ನೆಲೆಗಳನ್ನು ಸೃಷ್ಟಿ ಮಾಡಿಕೊಂಡಿತು. ನವೋದಯ ಸಾಹಿತ್ಯದಲ್ಲಿ ಆಧ್ಯಾತ್ಮಿಕತೆಯೆನ್ನುವುದು ಮಾನವೀಯತೆ ಹಾಗೂ ಮಾನವತಾವಾದದ ಅಂಶಗಳನ್ನೊಳಗೊಂಡ ನಂಬಿಕೆಯಾಗಿತ್ತು. ದೇವರ ಸೃಷ್ಟಿಗೆ ವಿಸ್ಮಯಪಡುತ್ತ, ಒಳ್ಳೆಯ ಕೆಲಸಕ್ಕೆಲ್ಲ ಆತ ಕಣ್ಣು ತೆರೆಯುತ್ತಾನೆ ಎಂಬ ಮಾನವೀಯ ಅಂಶಗಳನ್ನು ಪಸರಿಸುವ ಸಾಹಿತ್ಯ ಸೃಷ್ಟಿಯ ಕಡೆ ತಮ್ಮ ಗಮನ ಕೊಟ್ಟರು. 'ಈ ಕಾಲದ ಸಾಹಿತಿಗಳಲ್ಲಿ ಬಹುಮಂದಿ ದೇವರಲ್ಲಿ ನಂಬಿಕೆ ಇರುವವರು. ಜಗತ್ತನ್ನು ಆಳುವ ಶಕ್ತಿಯೊಂದಿದೆ. ಅದು ಸತ್ಯ-ಶಿವ-ಸೌಂದರ್ಯಗಳ ಪರಮಮೂರ್ತಿ ಎಂದು ನಂಬಿದವರು. ಆ ಶಕ್ತಿಗೆ ಸರ್ವಾರ್ಪಣೆ ಮಾಡಿಕೊಂಡರೆ ಅದು ವ್ಯಕ್ತಿಯನ್ನು ಉದ್ಧರಿಸಬಹುದು ಎಂದು ನಂಬಿದವರು... ಈ ಕಾಲದ ಸಾಹಿತ್ಯವನ್ನು ಓದುವಾಗ ಅದು ಸೃಷ್ಟಿಯಾದ ಪರಿಸರವನ್ನು ಗಮನದಲ್ಲಿ ಇಟ್ಟುಕೊಳ್ಳಲೇಬೇಕು. ಯಾವುದು ಪಲಾಯನವಾದ ಎಂದು ನಮಗೆ ತೋರಬಹುದೋ, ಟೊಳ್ಳು ಆದರ್ಶ ಎಂದು ತೋರಬಹುದೋ, ನಿಷ್ಪ್ರಯೋಜಕ ಆಧ್ಯಾತ್ಮಿಕತೆ ಎಂದು ನಮಗೆ ತೋರಬಹುದೋ ಅದು ಪ್ರಾಮಾಣಿಕವಾಗಿ ಆ ಸಾಹಿತಿಗಳಿಗೆ ಜೀವಂತವಾಗಿ, ಶಕ್ತಿಯುತವಾಗಿ ಕಾಣುವ ಪರಿಸರದಲ್ಲಿ ಅವರಿದ್ದರು ಎಂಬುದನ್ನು ಮರೆಯುವಂತಿಲ್ಲ.'[೧೩] ನವೋದಯ ಮಾರ್ಗ ಹುಸಿ ಆದರ್ಶವನ್ನು ಹಿಂಬಾಲಿಸಿತು ಎಂದು

ಅದನ್ನು ಟೀಕಿಸಿದ ನವ್ಯ ಮಾರ್ಗವು ನವೋದಯ ತಂದುಕೊಟ್ಟ ಕನಸುಗಾರಿಕೆ, ಆಧ್ಯಾತ್ಮಿಕ ಒಳನೋಟ, ಬದುಕಿನ ಸಮಗ್ರ ದೃಷ್ಟಿಕೋನವನ್ನು ಒಳಗೊಳ್ಳದೆ ಕುರುಡಾಯಿತು. ಹಾಗಾಗಿಯೆ ಸಾಹಿತ್ಯವು ನಂತರ 'ಹೊಸದಿಗಂತ'ದೆಡೆಗ ಹೊರಳಬೇಕಾಯಿತು. ನವೋದಯ ಮಾದರಿ ಬರಿ ಅನುಕರಣವಲ್ಲ. ಪಾಶ್ಚಿಮಾತ್ಯ ಪ್ರಭಾವಕ್ಕೆ ಒಳಗಾಗಿಯೂ, ಪ್ರಗತಿಶೀಲ ದೃಷ್ಟಿ ಇಟ್ಟುಕೊಂಡೂ ಅದು ತನ್ನತನವನ್ನು ಉಳಿಸಿಕೊಂಡಿತು.

೪.೫ ಬೇಂದ್ರೆಯವರಿಗೆ ಆರಂಭಿಕ ಪ್ರೇರಣೆಗಳು :

ಬೇಂದ್ರೆಯವರಿಗೆ ಜಿಬ್ರಾನ್, ಎಇ, ಎಮರ್ಸನ್ ಅವರ ಪ್ರೇರಣೆಗಳಿದ್ದರೂ ಭಾರತೀಯ ಅಂತಃಸತ್ವವೆ ಅವರ ಕಾವ್ಯವನ್ನು ರೂಪಿಸುತ್ತದೆ. ನಾಡನುಡಿಯ ಜೀವತಂತುಗಳಿಂದಲೆ ಅವರು ಕಾವ್ಯವನ್ನು ಕಟ್ಟಿದರು. 'ಪ್ರಭಾವ ಯಾವಾಗ ಮಹತ್ವದ್ದಾಗುತ್ತದೆಯೆನ್ನುವುದರ ಬಗ್ಗೆ ಬೇಂದ್ರೆಯವರಿಗೆ ಸ್ವಂತದ ವಿಚಾರಗಳಿದ್ದವು. ಶೈಲಿಯ ಅನುಕರಣೆ, ವಿಷಯಗಳ ಅನುಸರಣೆ ಕವಿಯನ್ನು ಎತ್ತುವುದಿಲ್ಲ. ಕಾವ್ಯವನ್ನೂ ಎತ್ತುವುದಿಲ್ಲ. ಬೇಕಾದುದು ಮಹಾನುಭಾವರ ಜೀವನದ ಅಖಂಡ ಸ್ಮರಣೆ. ಎ.ಇ., ಖಲೀಲ್ ಜಿಬ್ರಾನ್, ಟ್ಯಾಗೋರ್ ಮತ್ತು ಶ್ರೀ ಅರವಿಂದರು ಈ ನಾಲ್ವರನ್ನು ಅವರು ತಮ್ಮ 'ಗುರು ಚತುರ್ಮುಖ'ದಲ್ಲಿ ಹೆಸರಿಸಿದ್ದಾರೆ. ಅರವಿಂದರ ಪ್ರಭಾವಕ್ಕೆ ಹೋಲಿಸಿದರೆ ಉಳಿದ ಮೂವರದು ಸೀಮಿತವಾಗಿಯೋ, ಪೂರಕವಾಗಿಯೋ ತೋರುತ್ತದೆ.''[೧೫] ಸ್ಫೂರ್ತಿ, ಪ್ರೇರಣೆಗಳು ಯಾವ ರೀತಿಯಲ್ಲಿ ಕವಿಯನ್ನು ಪ್ರಭಾವಿಸಬಲ್ಲವು ಎಂದು ಬೇಂದ್ರೆಯವರು ತಿಳಿದುಕೊಂಡಿರುವುದರಲ್ಲಿ ಬಹಳಷ್ಟು ಅರ್ಥ ಅಡಗಿದೆ. ಇಡೀ ನವೋದಯ ಸಾಹಿತ್ಯದ ಸೃಷ್ಟಿಯನ್ನೇ ಕುರಿತು ಅವರು ಮಾತನಾಡಿದ್ದಾರೆಂದು ಅನಿಸುತ್ತದೆ. ಯಾಕೆಂದರೆ ನವೋದಯವು ಪಾಶ್ಚಿಮಾತ್ಯ ಶೈಲಿ, ವಿಷಯಗಳನ್ನು ಸೀದಾ ಅನುಕರಣೆ ಮಾಡದೆ ಅಲ್ಲಿಂದ ಕೇವಲ ಸ್ಫೂರ್ತಿಯ ಮಿಂಚು ಪಡೆದು ತಾನು ಬದುಕಿ ಬಾಳಿದ ಪರಿಸರದೊಂದಿಗೆ ಅನುಸಂಧಾನ ನಡೆಸಿತು. ತನ್ನ ಸುತ್ತಲಿನದನ್ನು ನೋಡಿ, ಕಲಿತು, ತನ್ನೊಳಗೂ ಅದನ್ನು ಹುಡುಕಿ ನೆಮ್ಮದಿಯ ತಾಣ ಅರಸಿತು.

ಸ್ಫೂರ್ತಿ, ಪ್ರೇರಣೆಗಳು ಬೇಂದ್ರೆಯವರಿಗೆ ಮೊದಲಿಗೆ ಮರಾಠಿ ಸಾಹಿತ್ಯದಿಂದ ಒದಗಿದರೂ ಬಲುಬೇಗನೆ ಅವರು ಅದರಿಂದ ಬಿಡಿಸಿಕೊಂಡರೆಂದು ತೋರುತ್ತದೆ. ೧೯೧೮ ರಲ್ಲಿ 'ಪ್ರಭಾತ' ಸಂಚಿಕೆಯಲ್ಲಿ ಪ್ರಕಟವಾದ ಅವರ ಪ್ರಥಮ ಪ್ರಕಟಿತ ಕವಿತೆ 'ತುತ್ತೂರಿ', ಮರಾಠಿ ಕವಿ ಕೇಶವಸುತರ ಕವನ 'ತುತಾರಿ'ಯ ಪ್ರೇರಣೆಯಿಂದ ಬಂದುದಾಗಿತ್ತು. ನಾಡಿನ ಅಭಿಮಾನವನ್ನು ಉಕ್ಕಿಸುವ ಉದ್ದೇಶ ಎರಡೂ 'ತುತ್ತೂರಿ'ಗಳಲ್ಲಿ ಕಾಣಸಿಗುವುದಾದರೂ ಬೇಂದ್ರೆಯವರು ತಮ್ಮದೆ ಧಾಟಿ ಹಾಗೂ ದನಿಗಳಲ್ಲಿ ಭಿನ್ನತೆ ಮೆರೆದರು. ಬೇಂದ್ರೆಯವರ ಮನೆಮಾತು ಮರಾಠಿಯಾಗಿದ್ದುದು; ಮಹಾರಾಷ್ಟ್ರದಲ್ಲಿ ಹಲವಾರು ವರ್ಷಗಳನ್ನು ಅವರು ಕಳೆಯಬೇಕಾಗಿ ಬಂದುದು ಮರಾಠಿ ಸಾಹಿತ್ಯದ ಪ್ರಭಾವ ಅವರ ಮೇಲೆ ಕಾಣಿಸಿಕೊಳ್ಳಲು ಕಾರಣವಾಯಿತು. ಎಡ್ಗರ್ ಅಲೆನ್ ಪೋ ಕವಿಯ 'ದಿ ರೇವನ್' ('The Raven'), ಕೇಶವ ಸುತರ 'ಘೂಬಡ' ಹಾಗೂ ಕೀಟ್ಸ್‌ನ 'Ode to Nightingale' ಕವಿತೆಗಳು ಬೇಂದ್ರೆಯವರ 'ಕೋಗಿಲೆಗೆ' ಕವಿತೆಗೆ ಪ್ರೇರಕವಾಗಿವೆ ಎಂದು ಡಾ. ಜಿ.ಎಸ್.ಆಮೂರ ಗುರುತಿಸುತ್ತಾರೆ.[೧೬] ಮರಾಠಿಯ ಜೊತೆ

ಜೊತೆಗೆ ಸಂಸ್ಕೃತ, ಇಂಗ್ಲೀಷ್, ಬಂಗಾಲಿ ಭಾಷೆಗಳ ಒಲವುಗಳಿಂದ ಪ್ರೇರಣಗೊಂಡ ಬೇಂದ್ರೆಯವರು ಆ ಪ್ರಭಾವವನ್ನು ಕೇವಲ ಪ್ರೇರಣೆಗಳ ಮಟ್ಟದಲ್ಲಿರಿಸಿಕೊಂಡು ಕನ್ನಡದ ಅಂತಃಸತ್ವದಿಂದ ರೂಪುಗೊಂಡಿದ್ದ ವಸ್ತು-ಭಾಷೆಗಳ ಬಲದಿಂದಲೆ ಕಾವ್ಯ ನಿರ್ಮಾಣಕ್ಕೆ ತೊಡಗಿದರು. ೧೯೧೪ ರಿಂದ ೧೯೧೮ ರವರೆಗೆ ಬೇಂದ್ರೆಯವರು ತಮ್ಮ ಚಿಕ್ಕಪ್ಪ ಬಂಡೋಪಂತ ಬೇಂದ್ರೆಯವರ ನೆರವಿನಿಂದ ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಬಿ.ಎ. ಓದಿದರು. ಕನ್ನಡ ಹಾಗೂ ಮರಾಠೀ ಎರಡೂ ಭಾಷೆಗಳಲ್ಲಿ ಬೇಂದ್ರೆಯವರಿಗೆ ಪ್ರಭುತ್ವವಿದ್ದುದರಿಂದ ಸ್ನೇಹಿತರೊಡನೆ ಕನ್ನಡ, ಮರಾಠಿ ಕಾವ್ಯವಾಚನ, ಚರ್ಚೆ, ಚಿಂತನೆಗಳನ್ನು ಮಾಡಿ ಸಾಹಿತ್ಯದ ಜ್ಞಾನವನ್ನು ವಿಸ್ತರಿಸಿಕೊಂಡರು. ಪುಣೆಯ ಕಾಲೇಜು ದಿನಗಳಲ್ಲಿಯೆ 'ಮೇಘದೂತ', 'ಶಾಕುಂತಲ'ಗಳು ಅವರನ್ನು ಆವರಿಸಿದವು. ಅಲ್ಲಿಯೆ ಎಮರ್ಸನ್, ಕೀಟ್ಸ್, ಶೆಲ್ಲಿ, ವರ್ಡ್ಸ್‌ವರ್ತ್, ಬೈರನ್‌ರ ಕಾವ್ಯವನ್ನು ಆಪೋಶನಗೈದರು. ಆ ದಿನಗಳಲ್ಲಿಯೆ ಶ್ರೀ ಅರವಿಂದರ 'ಆರ್ಯ' ಪತ್ರಿಕೆಯ ಪ್ರಭಾವಕ್ಕೆ ಬೇಂದ್ರೆ ಒಳಗಾದರು. ಬದುಕಿನ ಪ್ರೀತಿ, ಆದರ್ಶ, ರಾಷ್ಟ್ರೀಯತೆ, ಅಧ್ಯಾತ್ಮಗಳು ತುಂಬು ಯೌವ್ವನದಲ್ಲಿಯೆ ಬೇಂದ್ರೆಯವರನ್ನು ಕಾಡಿ ಕಾವ್ಯವಾಗಿ ಹೊರಹೊಮ್ಮಲು ತಹತಹಿಸಿದವು. ಹರೆಯದಲ್ಲಿ ಬೇಂದ್ರೆಯವರು ಹಾದುಬಂದ ಕನಸುಗಾರಿಕೆಯ ಹಾದಿ ಅವರ ಕಾವ್ಯದ ಹಾದಿಯನ್ನು ನಿಚ್ಚಳಗೊಳಿಸುವ ಒಂದು ಆಯಾಮವಾದರೆ ಅವರು ಬೆಳೆದು ಬಂದ ಧಾರವಾಡದ ಪರಿಸರ ಅವರ ಕಾವ್ಯ ಪಯಣದ ಪ್ರೇರಣೆಗೆ ಮತ್ತೊಂದು ಆಯಾಮವಾಯಿತು.

ತಮ್ಮ ತಾಯಿ ಅಂಬಿಕೆ ಹಾಗೂ ಅಜ್ಜಿ ಗೋದೂಬಾಯಿ ಅವರ ಆರೈಕೆ, ಆಶ್ರಯದಲ್ಲಿಯೆ ಬೆಳೆದ ಬೇಂದ್ರೆ ಸಹಜವಾಗಿ ಮಾತೃವಾತ್ಸಲ್ಯದ ಕಡಲಲ್ಲಿ ಮಿಂದು ಬಂದರು. ತಾಯ್ತನದ ಅಂಗಳದಲ್ಲಿ ಆಡಿದರು. ಈ ನಡುವೆ ಬೇಂದ್ರೆಯವರು ತಮ್ಮ ಹನ್ನೊಂದನೇ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡರು. ಹೀಗಾಗಿ ಇಡೀ ಕುಟುಂಬ ಅಜ್ಜಿ ಹಾಗೂ ತಾಯಿಯ ಕಷ್ಟದ ದುಡಿಮೆಯ ಮೇಲೆ ಅವಲಂಬಿತವಾಗಿತ್ತು. ತಮ್ಮ ತಾಯಿಯ ಪ್ರೀತಿಯನ್ನು ಆಕೆ ಅವರ ಮೇಲೆ ಹರಿಸಿದ ವಾತ್ಸಲ್ಯವನ್ನು ಎಷ್ಟು ನೆನೆದರೂ ಬೇಂದ್ರೆಯವರಿಗೆ ಕಡಿಮೆಯೆ. ಬೇಂದ್ರೆಯವರ ಬದುಕು ರೂಪುಗೊಳ್ಳುವುದಕ್ಕೆ ಅವರ ಕುಟುಂಬದ ಸುತ್ತಲೂ ಇದ್ದ ಪರಿಸರ, ಶಾಲೆ-ಕಾಲೇಜುಗಳು ಒಂದು ತೂಕವಾದರೆ ಇನ್ನೊಂದು ತೂಕ ತಾಯಿಯದಾಗಿತ್ತು. ಎಳೆತನದಲ್ಲಿ ಬೇಂದ್ರೆ ಹಾದುಬಂದ ಆಟನೋಟಗಳು, ಉತ್ಸವಗಳು, ಮೆರವಣಿಗೆಗಳು; ಅವರು ಮಗುವಾಗಿದ್ದಾಗ ಕೇಳಿಸಿಕೊಂಡ ಜನಪದ ಹಾಡು, ಭಜನೆ, ದಾಸರ ಪದಗಳು; ಬುಗುರಿ, ರವದಿ, ಕಡ್ಡಿ, ತಿಪ್ಪೆಯ ಮಾವಿನ ಸಸಿಯ ಪೀಪಿ ಮುಂತಾದ ಆಟಗಳು ಅವರ ಎದೆಯಲ್ಲಿ ಅನಂತವಾಗಿ ಉಳಿದುಕೊಂಡು ಬಿಟ್ಟವು. ಬೇಂದ್ರೆಯವರು ತಮ್ಮ ಜೀವಿತದ ಕೊನೆಯ ಘಳಿಗೆಯತನಕ ಧಾರವಾಡದ ನೆಲವನ್ನೇ ಉಸಿರಾಡಿದರು. ಪುಣೆ, ಸೊಲ್ಲಾಪುರಕ್ಕೆಂದು ಅವರು ಹೋದರೂ ಕೂಡ ಧಾರವಾಡದ ಕಾಮನಕಟ್ಟೆ ಅವರನ್ನು ಕಾಡುತ್ತಿತ್ತು. ಮಂಗಳವಾರಪೇಟೆ, ಶುಕ್ರವಾರ ಪೇಟೆ, ಕಾಮನಕಟ್ಟೆ, ಸಾಧನಕೇರಿ ಅವರ ಕಾವ್ಯವೃಕ್ಷಕ್ಕೆ ನೀರು ಹಣಿಸುವ ತಾಣಗಳಾದವು. ಶಾಲಾ ಹುಡುಗನಾಗಿದ್ದಾಗಲೇ ಬೇಂದ್ರೆಯವರು ಗೀತಗೋವಿಂದ, ಶಂಕರಾಚಾರ್ಯರ

ಸ್ತೋತ್ರಗಳು, ಜಗನ್ನಾಥ ಪಂಡಿತನ 'ಗಂಗಾಲಹರಿ', 'ಮೂಕ ಪಂಚಾರತಿ', ಬಳ್ಳಾರಿಯ ಕಲ್ಲಚ್ಚಿನಲ್ಲಿಯ 'ಶುಖಸಪ್ತತೀ', 'ಬೀರಬಲ್ಲನ ಕತೆಗಳು' ಮತ್ತು ಬರ್ಥೋಲ್ಡನ ಕತೆಗಳನ್ನು ಓದಿದರು. ಲಕ್ಷ್ಮೀಶ ಮತ್ತು ಸರ್ವಜ್ಞರನ್ನು ಅಭ್ಯಾಸ ಮಾಡಿದರು. ಕಥೆ, ಕವಿತೆಯೆಂದರೆ ಬೇಂದ್ರೆಗೆ ಎಲ್ಲಿಲ್ಲದ ಪ್ರೀತಿ, ಉತ್ಸಾಹ. ಗೆಳೆಯರ ಜೊತೆ ತಾವು ಓದಿದ ಕೃತಿಗಳನ್ನು ಹಂಚಿಕೊಳ್ಳುವುದೆಂದರೆ ಎಲ್ಲಿಲ್ಲದ ಉತ್ಸಾಹ. ಬೇಂದ್ರೆಯವರೆ ಅದನ್ನು ಹೇಳಿಕೊಂಡಿದ್ದಾರೆ. 'ಗಿಡದ ನೆರಳಿನಲ್ಲಿ; ಗುಡ್ಡದ ವಾರಿಗಳ ಮೇಲೆ; ಎತ್ತಿನ ಬಂಡಿಯಲ್ಲಿ; ಹಳ್ಳದ ದಂಡೆಯಲ್ಲಿ ಎಲ್ಲಿರಲಿ ಅಲ್ಲಿ ಯಾರಿಗಾದರೂ ಗಟ್ಟಿಸಿ ಓದಿ ಹೇಳುವುದು ನನಗೆ ಅಮಿತಾನಂದ.'[೨೬] ಬಡತನದ ಬವಣೆಯಲ್ಲಿ ಬೇಂದ್ರೆ ಬೆಂದರೂ ಬಾಲ್ಯವನ್ನು ಅವರಂತೆ ಕಂಡುಂಡವರಿಲ್ಲ. ಗೆಳೆತನದಿಂದ, ವಿವಿಧ ಬಗೆಯ ಆಟಗಳಿಂದ, ಗುಂಡು-ಗೋಲಿ ಬುಗರಿಗಳಿಂದ, ನೂರಾರು ಉತ್ಸವ-ಮೆರವಣಿಗೆಗಳಿಂದ, ಗುಡ್ಡದ ಇಳಿಜಾರುಗಳಿಂದ, ಮಾಮರದ ತೋಪುಗಳಿಂದ, ಕೋಗಿಲೆಯ ದನಿಗಳಿಂದ, ಬೇಂದ್ರೆಯವರ ಬಾಲ್ಯ, ಸಮೃದ್ಧಿಯನ್ನು ಉಂಡಿತು. ಆ ಸಮೃದ್ಧಿ ವ್ಯಕ್ತಿಯೊಬ್ಬನಿಗೆ ಸಿಗುವುದು ಮಹತ್ವವಲ್ಲ. ಮಹತ್ವವಿರುವುದು ಅದನ್ನು ಅಭಿವ್ಯಕ್ತಿಗೆ ಒದಗಿಸಿಕೊಳ್ಳುವುದರಲ್ಲಿ. ಬಾಳಿನ ಸುಖ ಹಾಗೂ ದುಃಖ ಎರಡನ್ನೂ ಬೇಂದ್ರೆ ತಮ್ಮ ಕಾವ್ಯದಲ್ಲಿ ಉತ್ಕಟವಾಗಿ ಹೊರಹೊಮ್ಮಿಸಿದರು. ತಮ್ಮ ಸ್ವಾನುಭವವನ್ನು ಹಿಗ್ಗಿಸಿಕೊಂಡು ಕಾವ್ಯವಾಗಿಸಿದರು.

೪.೬ 'ತಾಯಿ ಇತ್ತುದಿತ್ತನು' :

ಬೇಂದ್ರೆ ಕಾವ್ಯದ ವಿಕಾಸದಲ್ಲಿ ಅವರು ಬೆಳೆದು ಬಂದ ಸ್ತ್ರೀಕೇಂದ್ರಿತ ಮನೆಯ ವಾತಾವರಣ, ಧಾರವಾಡದ ದೇಸಿ ಪರಿಸರ, ಶರಣ-ಸಂತ-ಹರಿದಾಸ ಹಿನ್ನೆಲೆಯ ಆಧ್ಯಾತ್ಮಿಕ ವಾತಾವರಣ ತುಂಬ ಪ್ರಭಾವ ಬೀರಿದವು. ಸ್ತ್ರೀ ಎಂದರೆ ಬೇಂದ್ರೆಯವರಿಗೆ ಹೆಚ್ಚಾಗಿ ತಾಯಿಯ ರೂಪವಾಗಿಯೆ ಬರುತ್ತಾಳೆ. ತಾಯಿ ಎಂಬ ಸೂತ್ರದಲ್ಲಿ ತನ್ನ ಬದುಕು ಬಿಡಿಸಿಕೊಳ್ಳುತ್ತದೆ ಎಂದು ಬೇಂದ್ರೆ ನಂಬಿದ್ದರು. ತಮ್ಮ ತಾಯಿ ಪಡಬಾರದ ಕಷ್ಟಪಟ್ಟು ತಮ್ಮ ಸಂಸಾರನೌಕೆಯನ್ನು ಹೊಯ್ದಾಟದ ಹೊಳೆಯಲ್ಲಿ ಮುಳುಗದಂತೆ ದಾಟಿಸಿದಳೆಂದು ಬೇಂದ್ರೆ ಹೇಳುತ್ತಾರೆ. 'ಬೇಂದ್ರೆ ಲೋಕದಲ್ಲಿ-ಭಕ್ತನಲ್ಲಿ ಭವಿ ಮಡಗಿದ್ದಾನೆ; ಭವಿಯಲ್ಲಿ ಭಕ್ತ ಮೊಳೆಯತೊಡಗಿದ್ದಾನೆ. ೧. ದೇಹ ಕೊಟ್ಟ ತಾಯಿ; ೨. ಮಾತು ಕಲಿಸಿದ ತಾಯಿ; ೩. ಸಂಸ್ಕಾರ ಸಂಪನ್ನ ಮಾಡಿದ ತಾಯಿ; ೪. ಭೂಮಂಡಲದ ಮಾನವತೆಯಲ್ಲಿ ನೆಲೆಸಿದ ತಾಯಿ; ೫. ವಿಶ್ವೋದರದಲ್ಲಿ ಧರಿಸಿದ ತಾಯಿ. ಈ ಐದು ಐದೆಯರು ದತ್ತನ ತಾಯಂದಿರು. ಇದು ಪಂಚಕೋಶ ಗರ್ಭ. 'ಅಂಬಿಕೆ'ಯ ತೊಡೆ, ಹೊಟ್ಟೆ, ಎದೆ, ಕೊರಳು, ತುಟಿ, ಕಣ್ಣು-ಒಂದೊಂದರಲ್ಲಿಯೂ ಈ ಮಹಾಸ್ಪರ್ಶವಿತ್ತು. ಆದರೆ ಆಕೆಯ ದೀಕ್ಷೆಯಲ್ಲಿ ಅನಂತ ಸಹನೆ ಇತ್ತು; ಯುಗಯುಗದ ನೋಂಪಿಯ ಕಂಪಿತ್ತು. ತಂದೆಯ, ಅವನ ಬಳಗದ, ನಿಕಟ ಸಾನಿಧ್ಯದಿಂದ ದೈವವಂಚಿತನಾದ ನಾನು, ನನ್ನ ತಾಯಿ, ತಾಯಿಯ ತಾಯಿ, ಆಕೆಯ ತಾಯಿ ಇವರ ಪ್ರತ್ಯಕ್ಷ ಚಾರಿತ್ರ್ಯದಲ್ಲಿ ಪೌರುಷವನ್ನು ಕಂಡೆ.'[೨೭]

ತಮ್ಮ ತಾಯಿ ಮತ್ತು ಅಜ್ಜಿ ಬದುಕಿನ ಬೆಂಕಿಯಲ್ಲಿ ದಿನವೂ ಹಾಯುತ್ತ ಸಂಸಾರದ ಬಂಡಿಯನ್ನು ನೂಕುವುದನ್ನು ನೋಡಿದ ಬೇಂದ್ರೆಯವರಿಗೆ ಸ್ತ್ರೀಯರು ಪಡುವ ಬವಣೆ ಅಚ್ಚಳಿಯದೆ ಎದೆಯಲ್ಲಿ ಉಳಿದುಬಿಟ್ಟಿತು. ಅದೂ ಅಲ್ಲದೆ ಎಂತಹ ಕಷ್ಟ-ನಷ್ಟಗಳಲ್ಲಿಯೂ ತಾಯಿ ಅಂಜಿಕೆ ತನ್ನನ್ನು ಸಾಕಿ ಸಲಹುತ್ತಿರುವುದನ್ನು ನೋಡಿ ತಾಯಿಯ ಬಗ್ಗೆ ಎಣೆಯಿಲ್ಲದ ಮಾರ್ದವತೆ ತುಂಬಿಕೊಂಡತ್ತು. ಅವರನ್ನು ಕವಿಯಾಗಿಸಿದ ತಾಯಿತನದ ತತ್ವವೆ ಅವರ ನೈತಿಕತೆಯ ಕಲ್ಪನೆಗಳನ್ನು ರೂಪಿಸಿತೆಂದು ಎಚ್.ಎಸ್.ರಾಘವೇಂದ್ರರಾವ್ ಅವರು ಅಭಿಪ್ರಾಯಪಡುವುದು ಸೂಕ್ತವಾಗಿದೆ. 'ಶೋಷಿತರಲ್ಲಿ ಶೋಷಿತರಾದ ಮಹಿಳೆಯರ ಬವಣೆಯ ನಿಕಟವಾದ ಪರಿಚಯವು ಬೇಂದ್ರೆಯವರ ವ್ಯಕ್ತಿತ್ವದ ಮಾರ್ದವತೆಗೆ ಕಾರಣವಾಯಿತೆಂದು ತೋರುತ್ತದೆ. ಅವರ ಕಾವ್ಯದ ಕೇಂದ್ರ ಪ್ರತೀಕಗಳಲ್ಲಿ 'ತಾಯಿ' ಎಂಬ ಪರಿಕಲ್ಪನೆಯೂ ಒಂದಾಗಿ ನಿಲ್ಲುತ್ತದೆ. ಅಷ್ಟೇ ಅಲ್ಲ ಈ ತಾಯಿತನದ ತತ್ವವೇ ಅವರ ನೈತಿಕತೆಯ ಕಲ್ಪನೆಗಳನ್ನು ರೂಪಿಸಿತೆಂದರೂ ತಪ್ಪಾಗಲಾರದು.'[೨೮]

೧೯೨೪ ನೆ ಇಸ್ವಿಯಲ್ಲಿ ಬೇಂದ್ರಯವರ ತಾಯಿ ತೀರಿಕೊಂಡರು. ಸಾಯುವಾಗ ಅವರಿಗೆ ಇನ್ನೂ ಐವತ್ತು ಕೂಡ ಆಗಿರಲಿಲ್ಲ. ಆಗ ಬೇಂದ್ರೆಯವರು ಕವಿಯೆಂದು ಸ್ವಲ್ಪ ಹೆಸರು ಮಾಡಿದ್ದರು. ಮದುವೆಯಾಗಿತ್ತು. ಒಬ್ಬ ಮಗ ಹುಟ್ಟಿ ಸತ್ತಿದ್ದ. ಎರಡನೆಯ ಮಗ ಇನ್ನೇನು ಹುಟ್ಟುವುದರಲ್ಲಿದ್ದ. ತಮ್ಮ ಮಗ ಇಷ್ಟು ದೊಡ್ಡವನಾಗಿ ಮನೆಯನ್ನು ನಡೆಸುವುದಲ್ಲದೆ ಸಾಕಷ್ಟು ಹೆಸರುವಾಸಿಯಾಗಿರುವುದನ್ನು ನೋಡಿ ಅವರ ತಾಯಿಗೆ ತುಂಬ ಸಂತೋಷವಾಗಿರಬೇಕು. ತಾನು ಹಾಡಿ ತೋರಿಸಿದಾಗ ತನ್ನ ತಾಯಿ ಸಂತೋಷಪಟ್ಟ ಅನೇಕ ಸಂದರ್ಭಗಳನ್ನು ಬೇಂದ್ರೆಯವರು ನೆನಪಿಸಿಕೊಂಡಿದ್ದಾರೆ. ತಮ್ಮ ತಾಯಿಯಿಂದಲೇ ಹಾಡಿನ ರಚನೆ ಹೇಗಿರಬಹುದೆಂಬುದನ್ನು ಅವರು ಕಲಿತರು. ಓಣಿಯಲ್ಲಿ ಹೆಣ್ಣುಮಕ್ಕಳು ಹಾಡುವ ಬೀಸುವ ಪದಗಳು; ಮುಂಜಾನೆ ಹೆಣ್ಣುಮಕ್ಕಳನ್ನು ಎಬ್ಬಿಸಿ ಅವರನ್ನು ಬೀಸಲು ಅಣಿಮಾಡುತ್ತಿದ್ದ ದಾಸರ ಗೋವಿಂದಪ್ಪನ ಪದಗಳು; ತಾಯಿ ಮತ್ತು ಅಜ್ಜಿಯ ಬಾಯಿಯಿಂದ ಕೇಳಿ ಬರುತ್ತಿದ್ದ ನೂರಾರು ಹಾಡಿನ ಧಾಟಿಗಳು ಬೇಂದ್ರೆಯವರಿಗೆ ಸತ್ವಯುತ ಕಾವ್ಯದ ಆರಂಭಿಕ ಪಾಠಗಳನ್ನು ಹೇಳಿಕೊಟ್ಟವು. ಬೇಂದ್ರೆಯವರು ಬಹುತೇಕ ಸಕಲಕ್ಕೂ ಅನ್ವಯಿಸುವ ತಾಯಿ ಎಂಬ ಸೂತ್ರ ಅವರ ಸ್ವಂತ ತಾಯಿಯನ್ನು; ಧಾರವಾಡದ ನಗರದೇವತೆ ಧಾರವಾಡದ ತಾಯಿಯನ್ನು; ಕನ್ನಡ ತಾಯಿಯನ್ನೂ; ಭಾರತ ಮಾತೆಯನ್ನು ಹಾಗೂ ಅರವಿಂದಾಶ್ರಮದ 'ಮದರ್' ಅನ್ನು ಒಳಗೊಂಡು ವೈವಿಧ್ಯಮಯ ಮಾತೃಪ್ರೇಮವಾಗಿ ಸಾಕಾರಗೊಳ್ಳುತ್ತದೆ. ಇಂತಹ ತಾಯ್ತನ ಅವರಲ್ಲಿ ನೈತಿಕತೆಯನ್ನು ರೂಪಿಸಲು ಸಮರ್ಥವಾಯಿತು.

ತಾಯಿಯ ರೂಪವನ್ನು ಎಷ್ಟು ನೆನೆದರೂ ಕಡಿಮೆಯೇ ಅವರಿಗೆ. ದತ್ತಾತ್ರೇಯನೆಂಬ ತಾವು ಬೇರೆ, ಅಂಬಿಕಾತನಯದತ್ತನೆಂಬ ಕವಿ ಬೇರೆ; ಪ್ರೊಫೆಸರ್ ಬೇಂದ್ರೆ ಬೇರೆ ಎನ್ನುತ್ತಾರೆ. ಕಾವ್ಯಸ್ಫೂರ್ತಿಗೆ ತಾಯಿಯೇ ಕಾರಣ ಎಂದು ಹಲವು ಸಲ ಹೇಳಿದ್ದಾರೆ. ಅದನ್ನು ತಿಳಿಸಲೆಂಬಂತೆ ಹಲವಾರು ಕವಿತೆಗಳನ್ನು ಬರೆದಿದ್ದಾರೆ. ಆದರೆ ಅದನ್ನು ಅಕ್ಷರಶಃ ತೆಗೆದುಕೊಳ್ಳಬೇಕಾದ ಅಗತ್ಯವಿಲ್ಲ. ಒಟ್ಟಿನಲ್ಲಿ ಪ್ರೇರಣೆ ಮುಖ್ಯ ಎಂಬ ಡಾ. ಗಿರಡ್ಡಿ ಗೋವಿಂದರಾಜ

ಅವರ ಅಭಿಪ್ರಾಯ ಸಮರ್ಪಕವಾಗಿದೆ. 'ಲೌಕಿಕವಾಗಿ ಇಂಥ ಸಿದ್ಧಾಂತಗಳನ್ನು ಒಪ್ಪಿಕೊಳ್ಳುವುದು ಕಷ್ಟ. ಕವಿತೆ ವ್ಯಕ್ತಿಯೊಬ್ಬನನ್ನು ಮಾಧ್ಯಮವನ್ನಾಗಿ ಮಾಡಿಕೊಂಡು ತಾನಾಗಿ ಬಂದುಬಿಡುತ್ತದೆಯೆಂಬುದನ್ನಾಗಲಿ, ಕವಿ ಬೇರೆ-ವ್ಯಕ್ತಿ ಬೇರೆ ಎಂಬುದನ್ನಾಗಲಿ, ಕಾವ್ಯದ ದೈವಿಕ ಮೂಲ ತಾಯಿ ಎಂಬುದನ್ನಾಗಲಿ ಅಕ್ಷರಶಃ ತೆಗೆದುಕೊಳ್ಳಬೇಕಾದ ಅಗತ್ಯವಿಲ್ಲ. '...'ನಾಲ್ವರು ತಾಯಂದಿರು' (ಹೃದಯಸಮುದ್ರ) ಎಂಬ ಕವಿತೆಯಲ್ಲಿ ಮಹೇಶ್ವರಿ, ಮಹಾಕಾಳಿ, ಮಹಾಲಕ್ಷ್ಮಿ, ಮಹಾಸರಸ್ವತಿಯರನ್ನು ಜೀವದ ನೆಲೆ ಕಟ್ಟುತ್ತಿರುವ ನಾಲ್ಕು ಮಾತೃಶಕ್ತಿಗಳೆಂದು ಸ್ವಾಗತಿಸಿದ್ದಾರೆ. ಇವರೆಲ್ಲರ ಹಿಂದಿನ ಮಾತೃತತ್ವ ಒಂದೇ ಆಗಿದೆ. 'ಅಂಬಿಕೆ' ಎಂಬ ಶಬ್ದ ಈ ಎಲ್ಲ ತಾಯಂದಿರನ್ನು ಒಟ್ಟಿಗೆ ಹಿಡಿಯುತ್ತದೆ.''[19] ಹಾಗಾಗಿ ವಿಶಾಲ ಅರ್ಥದಲ್ಲಿ ವಿವರಿಸಿಕೊಳ್ಳುವ ಈ ತಾಯಿತನದ ತತ್ವ ಹಾಗೂ ಧಾರವಾಡದ ನೆಲದೊಂದಿಗೆ ಬೇಂದ್ರೆಯವರು ಕಟ್ಟಿಕೊಳ್ಳುವ ಕರುಳಿನ ಸಂಬಂಧಗಳು ಬೇಂದ್ರೆ ಕಾವ್ಯದ ಮಹತ್ವದ ನೆಲೆಗಳಾಗಿ ನಿಲ್ಲುತ್ತವೆ. ಹಳೆಯ ಮತ್ತು ಹೊಸ ಜೀವನಕ್ರಮಗಳು ಕೂಡಿಕೊಂಡ ಧಾರವಾಡದ ಪರಿಸರ ಬೇಂದ್ರೆ ಕಾವ್ಯಕ್ಕೆ ಒದಗಿದ ಮಹತ್ವದ ಪ್ರೇರಣೆ ಎನ್ನಬಹುದು. 'ಧಾರವಾಡದ ನೆಲದ ಒಂದೊಂದು ಚೂರೂ ಬೇಂದ್ರೆಯವರಿಗೆ ತಮ್ಮ ಇತಿಹಾಸವನ್ನು ಹೇಳಿವೆ. ಅಭಿಜಾತತೆಯೇ ಆಗಲಿ, ಆಧುನಿಕತೆಯೇ ಆಗಲಿ, ಅವರಿಗೆ ಧಾರವಾಡದ ನೆಲದಲ್ಲಿಯೇ ಪ್ರತ್ಯಕ್ಷವಾಗಬೇಕು. ಧಾರವಾಡದ ಮಣ್ಣು ನೀರುಗಳು, ಅಲ್ಲಿಯ ಜನತೆಯ ಜೀವನ ಪ್ರಕೃತಿಯಂತೆ ಚೇತನ ಸ್ಪರ್ಶಕ್ಕಾಗಿ ಕಾಯುವಂಥವು. ಬೇಂದ್ರೆಯವರ ಸೃಜನಶಕ್ತಿಯ ರಹಸ್ಯ ಇಲ್ಲಿದೆ.'[20]

ಬೇಂದ್ರೆಯವರು ಕವಿತೆ ಬರೆಯುವದನ್ನು ಪ್ರಾರಂಭಿಸುವದಷ್ಟೆ ಬೇಕಾಗಿತ್ತು. ಇಡೀ ನಿಸರ್ಗದ ಅಂದ ಚೆಂದ, ಬದುಕಿನ ತವಕ-ತಲ್ಲಣ, ಮನುಷ್ಯನ ಸಂಕಟ-ಸಂವೇದನೆ, ಆತನ ಅನುಭಾವದ ವಿಚಾರ, ಪ್ರಾಪಂಚಿಕ ನೋವು-ನಲಿವು ಅಭಿವ್ಯಕ್ತಿ ಪಡೆಯಲಿಕ್ಕಾಗಿ ನಾ ಮುಂದು ತಾ ಮುಂದು ಎಂದು ಬೇಂದ್ರೆಯವರ ಎದುರು ಬಂದು ಬೀಳತೊಡಗಿದಂತೆ ಭಾಸವಾಗತೊಡಗಿತ್ತು. ಬೇಂದ್ರೆಯವರು ಕೂಡ ವಸ್ತುವಿನ ಜೊತೆ ಯಾವ ತಾರತಮ್ಯವನ್ನು ಮಾಡದೆ ತಮಗೆದುರಾದ ಎಲ್ಲ ವಸ್ತುಗಳಿಗೂ ಕವಿತೆಯ ರೂಪಕೊಟ್ಟರು. ತಮ್ಮ ಕಾಲಕ್ಕೆ ಹೊಸ ರೀತಿಯಲ್ಲಿ ಅವರು ಹಾಡು ಹೇಳಬೇಕಾಗಿತ್ತು. ಪದ್ಯವನ್ನು ಕಟ್ಟಬೇಕಾಗಿತ್ತು. ಅಭಿವ್ಯಕ್ತಿಯ ಮಾರ್ಗವನ್ನು ಬದಲಿಸಬೇಕಾಗಿತ್ತು. ಹಾಗೆಂದೆ ಅವರು ಭಾಷೆಯನ್ನು ಮುರಿದು ಕಟ್ಟಿದರು. ರೂಪಕಗಳು ಕವಿತೆಯ ಅರ್ಥವನ್ನು ಹಿಗ್ಗಿಸುವಂತೆ ನೋಡಿಕೊಂಡರು. ಹೊಸ ಛಂದೋಪ್ರಕಾರಗಳನ್ನು ಹುಟ್ಟು ಹಾಕಿದರು. 'ಕವಿಗೆ ಭಾಷೆಯನ್ನು ಬಿಟ್ಟರೆ ಬೇರೆ ಸಾಧನೆಯೇ ಇಲ್ಲ. ಈ ವಿಷಯದಲ್ಲಿ ಬೇಂದ್ರೆಯವರು ಅನೇಕ ಕವಿಗಳಿಂದ ಅನೇಕ ಪಾಠಗಳನ್ನು ಕಲಿತಿದ್ದಾರೆ. ಆದರೆ ಜೀವನದ ಅನುಭವಗಳಂತೆಯೇ ಈ ರೀತಿಗಳನ್ನೂ ಅವರು ತಮ್ಮವನ್ನಾಗಿ ಮಾಡಿಕೊಂಡಿದ್ದಾರೆ. ಅವರ ಕಲ್ಪನಾಶಕ್ತಿಯ ಸ್ವೋಪಜ್ಞತೆಯ ಫಲ ಅದು. ಈ ವಿಷಯದಲ್ಲಿ ಲಕ್ಷ್ಮೀಶ ಹಾಗೂ ಸರ್ವಜ್ಞರು ಅವರಿಗೆ ಗುರುಗಳಾಗಿದ್ದಾರೆ. ಆದರೆ ಪಡೆದುಕೊಂಡ ಋಣವನ್ನು ಬಡ್ಡಿಸಹಿತ ತೀರಿಸಿದ್ದಾರೆ... ಬೇಂದ್ರೆಯವರು ಜೀವನದ ಅನುಭವವನ್ನು ಶಬ್ದಮಯವಾಗಿ ಮಾಡಿಕೊಂಡರು. ಒಂದು ಅರ್ಥದಲ್ಲಿ ಅವರ ಕಾವ್ಯವೆಲ್ಲ ಶಬ್ದಸ್ಮೃತಿಯಾಗಿದೆ. ಅವರ ಕವಿತೆಗಳ ವೈವಿಧ್ಯ ಪ್ರಕೃತಿಯ ವೈವಿಧ್ಯತೆಯಂತೆ ಕುತೂಹಲಕಾರಿಯಾಗುತ್ತದೆ.'[21]

೪.೭ ಕನ್ನಡ ಕಾವ್ಯ ಪರಂಪರೆಯ ನವವಧುವಾಗಿ ಬೇಂದ್ರೆ :

ಕನ್ನಡ ಕಾವ್ಯ ಪರಂಪರೆಯಿಂದ ತಾವು ಬಹಳಷ್ಟನ್ನು ಸ್ವೀಕರಿಸಿದ್ದರ ಕುರಿತು ಬೇಂದ್ರೆಯವರು ಹೇಳಿಕೊಂಡಿದ್ದನ್ನು ಹಲವಾರು ಕಡೆ ಗುರುತಿಸಬಹುದು. ತ್ರಿಪದಿ, ಜನಪದ ಹಾಡು, ಗೀಗಿಪದ, ಗೊಂದಲಿಗರ ಪದ ಮೊದಲುಗೊಂಡು ಮೌಖಿಕ ಕನ್ನಡ ಕಾವ್ಯದ ದೊಡ್ಡ ಸಂಪ್ರದಾಯವನ್ನು ಬೇಂದ್ರೆ ಉಪಯೋಗಿಸಿಕೊಂಡರು. ''ʻತ್ರಿಪದಿʼ ಎಂದರೆ ತ್ರಿವಿಕ್ರಮನ ಮೂರು ಹೆಜ್ಜೆ, ಮೂರಕ್ಕೆ ಮಾತನ್ನು ಮುಗಿಲು ದಾಟಿಸುವ ಓಂಕಾರದ ಶಂಖನಾದ ಅದು.''[೨೨] ಹಿಂದಿನ ತ್ರಿಪದಿಗಳ ಪ್ರೇರಣೆ ಪಡೆದು ಭಕ್ತಿ ಪದರಿನ ಏಳು ತ್ರಿಪದಿಗಳ ʻಹೃದಯ ಸುದ್ದಿʼ ಎನ್ನುವ ಸಪ್ತಪದಿಯ ಮೂಲಕ ಮನಸ್ಸನ್ನು ಮಾಗಿಸುತ್ತಾರೆ.

ʻಹೂವೇನು? ನಾವೇನು? ತಾವು ಅರಳಿದರುಂಟು
ಯಾವೇನು ಜೀವ? ಭಾವಕ್ಕ ಜೀವಕ್ಕ
ಸಾವಕ್ಕರಲ್ಲ - ಸವಿಜೇನು॥

ಹಿಗ್ಗಿಲ್ಲಾ ಹರವಿಲ್ಲಾ। ತಗ್ಗಿಲ್ಲಾ ತೆವರಿಲ್ಲಾ
ಸುಗ್ಗಿ ಯಾಕಿಲ್ಲಾ? ಬೇಕಿಲ್ಲಾ, ತಾಕಿಲ್ಲಾ
ಒಗ್ಗಿಲ್ಲಾ ಒಳಗೆ ನರನಾಡಿ ॥ʼ[೨೩]

ಪ್ರಕೃತಿಯೆನ್ನುವುದು ಬರೀ ಮಣ್ಣಲ್ಲವೆಂದು ಅವರು ಬಹುಮೊದಲಿನಿಂದಲೂ ಪ್ರತಿಪಾದಿಸಿಕೊಂಡು ಬಂದರು. ಸೃಷ್ಟಿಕರ್ತನ ಸ್ಪರ್ಶಕ್ಕೆ ಹೊರತಾಗಿ ಯಾವುದೆ ಜಡ-ದ್ರವ್ಯ ಇರಲು ಸಾಧ್ಯವಿಲ್ಲವೆಂದು ಅವರು ನಂಬಿ ಆ ನಂಬಿಕೆಯನ್ನು ಹಾಡಿನಲ್ಲಿ ಹಿಗ್ಗಿಸಿಕೊಳ್ಳುತ್ತ ಬಂದರು. ಹಳೆಯ ಚಂಪೂ ಕಾವ್ಯಪರಂಪರೆ, ಮಧ್ಯಕಾಲೀನ ಷಟ್ಪದಿ, ರಗಳೆ ಹಾಗೂ ವಚನ ಮಾಧ್ಯಮ, ದಾಸರಪದ, ಕೀರ್ತನೆ, ತತ್ವಪದ, ಭಕ್ತಿಯ ಮಾರ್ಗ, ಮೌಖಿಕ ಪರಂಪರೆಯ ಕಥನದ ಮಾರ್ಗ ಮುಂತಾದವುಗಳ ಸಾರವನ್ನು, ಅವುಗಳ ತಿರುಳನ್ನು ತಮಗೆ ಬೇಕಾದಂತೆ ಬೇಂದ್ರೆ ದುಡಿಸಿಕೊಂಡು ಕವಿತೆ ಕಟ್ಟಿದರು. ತಮ್ಮ ಮೇಲಾದ ಕನ್ನಡ ಕಾವ್ಯಪರಂಪರೆಯ ಪ್ರಭಾವವನ್ನು ʻಓ ಹಾಡೇʼ ಎಂಬ ಕವಿತೆಯೊಂದರಲ್ಲಿ ನೆನೆಯುವುದನ್ನು ಡಾ. ಗಿರಡ್ಡಿ ಗೋವಿಂದರಾಜ ತೋರಿಸಿಕೊಡುತ್ತಾರೆ. ಕನ್ನಡ ಕಾವ್ಯ ಪರಂಪರೆಯ ಮುಖ್ಯ ಧಾರೆಗಳು ತಮ್ಮ ಕಾವ್ಯ ಜೀವನದಲ್ಲಿ ಬೆರೆತು ತಮ್ಮ ಕವಿತೆಗೆ ಬಲಗೊಳ್ಳಬೇಕೆಂದು ಬೇಂದ್ರೆ ಅಪೇಕ್ಷಿಸಿದರು. ʻತಮ್ಮ ಕಾವ್ಯ ಜೀವನದ ಆರಂಭದಿಂದಲೂ ಕನ್ನಡ ಕಾವ್ಯ ಪರಂಪರೆಯ ಬಗ್ಗೆ ಅವರು ಆಲೋಚಿಸುತ್ತ ಬಂದಿದ್ದಾರೆ :

ಭೋಗ ಯೋಗದ ಪದವೆ! ಜೈನ ವಾಙ್ಮಯ ಮಧುವೆ!
ಯೋಗ ಭೋಗದ ಹದವೆ! ವಚನ ಬ್ರಹ್ಮನ ವಧುವೆ!
ಮುದ್ದು ವಿಠಲಗೆ ಮಾರಿಕೊಂಡ ದಾಸಿ!

ಮುದ್ದಣನ ಲಲ್ಲೆವಾತಿನ ಪ್ರೇಮರಾಶೀ!

ಜೀವ ಜೀವಾಳದಲಿ ಬೆರೆತು ಕೂಡೇ

ಓ ಹಾಡೆ, ಓ ಹಾಡೆ, ಓ ಹಾಡೇ!

ಇಲ್ಲಿ ಜೈನ ಕಾವ್ಯ, ವಚನ ಸಾಹಿತ್ಯ, ದಾಸರ ಕೀರ್ತನೆಗಳು ಮತ್ತು ಮುದ್ದಣರ ಪ್ರಸ್ತಾಪಗಳಿವೆ... ಪ್ರಜ್ಞಾಪೂರ್ವಕವಾಗಿ ಪ್ರಕಟಿಸುವ ಅಪೇಕ್ಷೆಗಳನ್ನು ಮೀರಿದ ಇನ್ನೆಷ್ಟೋ ಸಂಗತಿಗಳು ಕಾವ್ಯಸೃಷ್ಟಿಯಲ್ಲಿ ಸೇರಿಕೊಳ್ಳುತ್ತವೆ. ಕನ್ನಡ ಕಾವ್ಯ ಪರಂಪರೆಯ ವಿವಿಧ ಧಾರೆಗಳ ಸತ್ವ ತಮ್ಮ ಕಾವ್ಯದಲ್ಲಿ ಸಮನಿಸಿ ಬರಬೇಕೆಂಬ ಅವರ ಅಪೇಕ್ಷೆ ಸ್ಪಷ್ಟವಾಗಿಯೇ ಇದೆ. ಅಷ್ಟೇ ಅಲ್ಲ, ಬರಿಯ ಕಾವ್ಯದಲ್ಲಿ ಮಾತ್ರವಲ್ಲದೆ, ಕಾವ್ಯದ ಮೂಲ ಸೆಲೆಯಾದ 'ಜೀವ ಜೀವಾಳ' ದಲ್ಲಿಯೇ ಈ ಸತ್ವ ಬೆರೆತು ಬರಬೇಕೆನ್ನುವ ಮಾತು ಮಹತ್ವದ್ದಾಗಿದೆ.'[೨೪] ಪ್ರಭಾವಗಳನ್ನು ಜೀವಿಸುವ ರಕ್ತದಲ್ಲಿ ಬೆರೆಸಿಕೊಳ್ಳಬೇಕೆನ್ನುವ ಬೇಂದ್ರೆಯವರ ಆಕಾಂಕ್ಷೆ ಅವರಿಗೆ ದೊಡ್ಡ ವರವಾಗಿ ಪರಿಣಮಿಸಿತು. ಬರೀ ಕನ್ನಡ ಕಾವ್ಯ ಪರಂಪರೆಯಷ್ಟೆ ಅಲ್ಲದೆ ಮರಾಠಿ, ಸಂಸ್ಕೃತ, ವೈದಿಕ ಜ್ಞಾನ ಸಂಪತ್ತು, ವೇದ, ಉಪನಿಷತ್, ತತ್ವಜ್ಞಾನ, ಭಾರತೀಯ ಭಾಷೆ, ಇಂಗ್ಲೀಷ್ ಕಾವ್ಯ ಹೀಗೆ ಬಹುಮುಖ ಅಧ್ಯಯನದ ಫಲಶೃತಿಯಾಗಿ ಬೇಂದ್ರೆಯವರಲ್ಲಿ ಅಗಾಧ ಕಾವ್ಯಶಕ್ತಿಯ ಸೆಲೆ ಒಡೆಯಿತು. ಸಾಮಾಜಿಕ ಹಾಗೂ ರಾಜಕೀಯ ವಿಪ್ಲವದ ಸಂದರ್ಭದಲ್ಲಿ ಬೇಂದ್ರೆ ಚಳುವಳಿ, ಹರತಾಳ, ಪ್ರಗತಿಶೀಲ ಮನೋಭಾವ, ಸಾಮಾಜಿಕ ವಿಡಂಬನೆ ಮುಂತಾದ ಆದರ್ಶಗಳನ್ನು ಪರೋಕ್ಷವಾಗಿ ಹೇಳುತ್ತ ಮೌಲ್ಯಗಳ ಆವಿಷ್ಕಾರ ನಡೆಸುವ; ಹೃದಯಕ್ಕೆ ಆನಂದ ನೀಡುವ; ಭಕ್ತಿರಸ ಮಾರ್ಗದಲ್ಲಿ ಮುನ್ನಡೆಯುವ ಹಾದಿಗೆ ಮನಸೋತರು. ತಮ್ಮ ಹರಯದ ದಿನಗಳಲ್ಲಿ ಅವರು ರವೀಂದ್ರ, ಬಸವಣ್ಣ, ಅಲ್ಲಮಪ್ರಭು, ರತ್ನಾಕರವರ್ಣಿ, ಕನಕದಾಸ, ಪುರಂದರದಾಸ ಮತ್ತು ಸರ್ವಜ್ಞನ ಜ್ಞಾನಮಾರ್ಗಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ದಕ್ಷಿಣ ಕರ್ನಾಟಕದಿಂದ ಮತ್ತು ಕರಾವಳಿಯಿಂದ ಬೀಸುತ್ತಿದ್ದ ನವೋದಯದ ಸಾಹಿತ್ಯಿಕ ಗಾಳಿಯನ್ನು, ಅದರ ಸುಗಂಧವನ್ನು ಸೇವಿಸಿಯೂ ದೇಸಿ-ಮಾರ್ಗಗಳೆರಡೂ ಮೇಳೈಸಿದ, ಆಗಮಿಕ-ಲೌಕಿಕಗಳೆರಡೂ ಬೆರೆತ ಕಾವ್ಯಮಾರ್ಗವನ್ನು ರೂಢಿಸಿಕೊಂಡರು. ತಮ್ಮ ಕಾಲದ ಬದುಕಿನ ವಿಷಮತೆಗಳನ್ನು ವೈಯಕ್ತಿಕವಾಗಿಯೆ ಮಂಡಿಸಿ ಸಾರ್ವತ್ರಿಕ ರೂಪ ಕೊಡುತ್ತಾರೆ. ಭಕ್ತಿಯಿಂದ ತೊಯ್ದ ಕಾವ್ಯರಸದ ಸಿಂಚನವಾಗಬೇಕೆಂದು ಅವರು ಬಯಸಿ ಆ ಅನುಭೂತಿಯನ್ನು ನಿಸರ್ಗದಲ್ಲಿ, ಮನುಷ್ಯನ ಎದೆಯಲ್ಲಿ ಅರಸಿದರು. ಶಾಂತಿರಸಕ್ಕೆ ಹಿಂದಿನ ಕಾವ್ಯದ ಲಕ್ಷಣಕಾರರಲ್ಲಿ ಸಾಕಷ್ಟು ಇಂಬು ದೊರೆಯಲಿಲ್ಲವೆಂದು ಅವರು 'ಕಾವ್ಯಯೋಗ' ದಲ್ಲಿ ತಿಳಿಸುತ್ತಾರೆ: ''ಶಾಂತಿರಸಕ್ಕೆ ಒಳಕ್ಕೆ ಬರುವೆ, ಹಾದಿ ಕೊಡು ದಮ್ಮಯ್ಯ' ಎಂದು ಅಲಂಕಾರಶಾಸ್ತ್ರದ ಬಾಗಿಲಲ್ಲಿ ಕುಳಿತುಕೊಳ್ಳಬೇಕಾಯಿತು. ಭಕ್ತಿ ಮೊದಲಾದವು ಅಲೌಕಿಕ ಭಾವದಿಂದ ಕೂಡಿದವುಗಳಾದುದರಿಂದ ರಸವೆಂಬ ಹೆಸರಿಗೆ ಅಪಾತ್ರವಾಗಿ ರಸಿಕರಲ್ಲಿ ಅವುಗಳ ಚರ್ಚೆಗೆ ಎಡೆಯಿಲ್ಲದಾಯಿತು. ಈಗಲೂ ಕಂಡುಬರುವ ಅದರದೊಂದು ಪರಂಪರಾಗತ ಪರಿಣಾಮವೆಂದರೆ ಕವೀಂದ್ರ ರವೀಂದ್ರರ ಕಾವ್ಯವನ್ನು ಓದಿ, ಇವುಗಳಲ್ಲಿ ಜಿಗಿಕಟ್ಟು ಇಲ್ಲ, ಹೊಸತನವೂ ಇಲ್ಲ,

ನೀತಿಪಾಠವೂ ಇಲ್ಲ, ಅಂತೆಯೇ ಅವುಗಳ ಅಗತ್ಯವೂ ಇಲ್ಲ ಎಂದು ಹೇಳುವ ಪಂಡಿತರೆಂದು ಹೇಳಿಸಿಕೊಳ್ಳುವ ಪುಣ್ಯವಂತರು ಸಿಗುವುದು ದುರ್ಲಭವಲ್ಲ... ಕರ್ನಾಟಕದಲ್ಲಿ ಭಕ್ತರಾದ ಕವಿಗಳು ಆಗಿಹೋಗಿದ್ದಾರೆ. ದಾಸರು, ಶರಣರು, ಅವಧೂತರು, ಪುರಾಣ ಕವಿಗಳು ದರ್ಶನ ವಿಶುದ್ಧಿಯನ್ನು ವರ್ಣನಾ ನೈಪುಣ್ಯವನ್ನು ಸಮಸಮಾನವಾಗಿ ಪ್ರಕಟಿಸಿರುವರು. ವಿಶಾಲತರವಾದ, ಉನ್ನತವಾದ, ಆಳವಾದ, ಪ್ರಪೂರ್ಣವಾದ ದರ್ಶನವು ಮತ್ತೆ ಬೇಕಾಗಿದೆ... ಭೂವೈಕುಂಠ, ಭೂಕೈಲಾಸ ಎಂದು ಹಾಡಿ ಹರಸಿದ ದಾಸರ, ಶರಣರೇ ಮಾತೇ ದಿಟವಾಗಬೇಕು. ಕರ್ನಾಟಕವು ಹೊಸಬಾಳನ್ನು ಕನ್ನಡಿಸಬೇಕು.'[೨೫]

ಭಕ್ತಿಪರವಾದ, ಅನುಭಾವಕ್ಕೆ ತೆರೆದುಕೊಳ್ಳುವ ಕಾವ್ಯಮಾರ್ಗದ ಕುರಿತು ನವೋದಯದ ಸಂದರ್ಭದಲ್ಲಿ ಇದ್ದ ಅಸಡ್ಡೆ, ಅಲಕ್ಷ್ಯತೆಗಳನ್ನು ಬೇಂದ್ರೆಯವರು ಇಲ್ಲಿ ಟೀಕಿಸುತ್ತಿದ್ದಾರೆ. ನಿಸರ್ಗಪ್ರೇಮಿ ಹಾಗೂ ಅನುಭಾವಿ ಕವಿಯಾದ ಟ್ಯಾಗೋರರರೆ ಅಂತಹ ವಿಮರ್ಶೆಯನ್ನು ಎದುರಿಸಬೇಕಾಯಿತೆಂದು ಹೇಳುತ್ತಾರೆ. ಆದರೆ ಶರಣರ ವಚನಗಳಿಂದ ಪ್ರೇರಿತರಾಗಿದ್ದ, ಭಕ್ತಿ ಸಾಹಿತ್ಯದಿಂದ ಪ್ರಭಾವಿತರಾಗಿದ್ದ ಅವರು ಶಾಂತಿ ಹಾಗೂ ರಸಪೂರ್ಣ ರಚನೆಗಳಿಗೆ ಮನಸೋತರು. ಹೊಸಬಾಳನ್ನು ಕನ್ನಡಿಸಬೇಕೆನ್ನುವ ಕನಸನ್ನು ಇಟ್ಟುಕೊಂಡು ಬೇಂದ್ರೆ ತಮ್ಮ ಕಾವ್ಯೋದ್ಯೋಗವನ್ನು ಆರಂಭಿಸಿದರು. ಅಲೌಕಿಕವೆನ್ನುವ ವಿಚಾರ ಲೌಕಿಕದ ರೂಪದಲ್ಲಿ ಎರಕವಾಗಿ ಬರಬೇಕೆಂದು ಅವರು ಬಯಸಿದರು. ಮೊದಲಿನಿಂದಲೂ ಆಸ್ತಿಕ ಪರಂಪರೆಯ ಭಾಗವಾಗಿ ಅವರು ಬೆಳೆದರು. ಜೀವನದ ಆನಂದ, ಸುಖವನ್ನು ಅರಸುವ ದಾರಿ, ಭಕ್ತಿ ರಸ ಮುಂತಾದವುಗಳನ್ನು ಅವರು ಮೇಲು ಮೇಲಿನ ಲೌಕಿಕ ಸಂಗತಿಗಳಿಂದಲೆ ಸ್ಪಷ್ಟಗೊಳಿಸತೊಡಗಿದರು. ಮನುಷ್ಯನು ಸತ್ಯ, ಪ್ರೇಮ, ಕಾರುಣ್ಯಗಳ ಹೊಳೆಯಲ್ಲಿ ಮುಳುಗೇಳಬೇಕೆಂದು ಅವರು ಅಪೇಕ್ಷಿಸಿದರು. ಕವಿತೆಗಳಲ್ಲಿ ಸಾಮಾಜಿಕ ಸಂದರ್ಭದ ಅಂಶಗಳು ಕಾವ್ಯಗುಣವಾಗಿ ಬರಬೇಕೇ ಹೊರತು ಉಪದೇಶ, ವಾದ ಸರಣಿಗಳ ರೂಪದಲ್ಲಲ್ಲವೆಂದು ಅವರು ನಂಬಿದರು. ಮನುಷ್ಯನ ಸಂಬಂಧಗಳು ಸುಧಾರಿಸಿದರೆ ಸಾಮಾಜಿಕ ಸಂಗತಿಗಳು ಸುಧಾರಿಸಬಲ್ಲವೆಂಬ ನಂಬಿಕೆ ಅವರದಾಗಿತ್ತು. ಮನುಷ್ಯ ಸಂಬಂಧಗಳ ಅನಾವರಣ ಅವರ ಒಂದು ಮುಖ್ಯ ನೆಲೆಯಾಗಿದೆ. ಆಧ್ಯಾತ್ಮಿಕತೆ ಕೂಡ ಅವರು ಗುರುತಿಸುವ ಆನಂದ ಭಾಗವಾಗಿದೆ. ಶರಣರು-ದಾಸರು ಬೀಸಿಹೋದ ಆಧ್ಯಾತ್ಮ ಬದುಕಿನ ಸೆರಗಿನಿಂದ ಬೇಂದ್ರೆಯವರು ಉಳಿಸಿಕೊಂಡ ನಾಲ್ಕಾರು ಸಾಲುಗಳಲ್ಲಿ ನಿಸರ್ಗ ಹಣಿಕಿ ಹಾಕುವುದನ್ನು ನಾವು ಕಾಣಬಹುದು. ಬರಿಗಣ್ಣಿಗೆ ಕಾಣುವ ಬೆಳಕಿನ ಆಚೆ ಮತ್ತೇನನ್ನೋ ಅವರು ತಮ್ಮ ಒಳಗಣ್ಣಿನಿಂದ ನೋಡಿದರು. 'ಬೇಂದ್ರೆಯವರ ವ್ಯಕ್ತಿತ್ವದ ಅವಿಭಾಜ್ಯ ಅಂಗವಾಗಿ ಅವರ ಆಸ್ತಿಕತೆ, ಆಧ್ಯಾತ್ಮಿಕತೆ ಹಾಗೂ ಅನುಭಾವ ಪರತೆಗಳನ್ನು ಗುರುತಿಸಬೇಕಾಗುತ್ತದೆ. ಆಧ್ಯಾತ್ಮಿಕತೆಯು ಅವರ ಕಾವ್ಯ ಜೀವನದ ಕೊನೆಯ ಹಂತಗಳಲ್ಲಿ ಮಾತ್ರವಲ್ಲ, ಅವರ ಸಮಗ್ರ ಬದುಕಿನಲ್ಲೇ ಓತಪ್ರೋತವಾಗಿ ಬೆರೆತುಹೋಗಿದೆ. ಅದು ವಿಗ್ರಹ ಪೂಜೆಯನ್ನು ನಿರಾಕರಿಸಿ ಕೇವಲ ತಾತ್ವಿಕತೆಯಲ್ಲಿ ಆಸಕ್ತಿ ತೋರಿಸುವ ಬಗೆಯದಲ್ಲ. ಸಾಂಸ್ಥಿಕವಾದ ಶೋಷಣೆಯ ಉಪಕರಣವಾದ ಧರ್ಮದೊಂದಿಗೆ ತಗಾದೆ ತೆಗೆಯುವಂಥದ್ದೂ ಅಲ್ಲ. ಧರ್ಮದ ಮುಖವಾಡದಲ್ಲಿ ವಂಚನೆ

ಮಾಡುವ ಸಮಯ ಸಾಧಕರನ್ನು ಗುರುತಿಸಿದರೂ ಕೂಡ ಇನ್ನೆಷ್ಟೋ ಸಾಧುಸಂತರು ಅತಿಮಾನವ, ಪವಾಡಸದೃಶ ಶಕ್ತಿಗಳನ್ನು ಹೊಂದಿರಬಲ್ಲವೆಂದು ನಂಬಿದವರು ಬೇಂದ್ರೆಯವರು.'[೩೬]

ಜೀವಚೈತನ್ಯವು ಸೃಷ್ಟಿಸಿರುವ ಪ್ರಕೃತಿಯಲ್ಲಿ ಭವಿಯೆಂಬ ಬೇಂದ್ರೆ ಕರಗುವುದು; ಲೌಕಿಕ ದತ್ತಾತ್ರೇಯನಲ್ಲಿ ಭಕ್ತಿಯ ಪರಿ ಪೊಳಕೆಯೊಡೆಯುವುದು ಬೇಂದ್ರೆ ಬೆಳೆದ ರೀತಿಯೆಂದು ಕಾಣುತ್ತದೆ. ತಮ್ಮ 'ಕವಿ ಚತುರ್ಮುಖ'ದಲ್ಲಿ ಅವರು ಹೇಳುತ್ತಾರೆ: 'ಬೇಂದ್ರೆ ಲೋಕದಲ್ಲಿ -ಭಕ್ತನಲ್ಲಿ ಭವಿ ಮಡಗಿದ್ದಾನೆ; ಭವಿಯಲ್ಲಿ ಭಕ್ತ ಮೊಳೆಯತೊಡಗಿದ್ದಾನೆ'[೩೭] ಒಂದು ತರಹದ ನಿಗೂಢತೆ, ಕನಸು, ಅನುಭೂತಿ ದೊರಕಿಸುವ ಹಂಬಲ- ಇವು ಬೇಂದ್ರೆಯಲ್ಲಿ ಬಾಲ್ಯದಿಂದಲೆ ಬೆಳೆದು ಬಂದವು.

ಕಾವ್ಯ ಕಾಂತಾಸಂಮಿತಿಯೆಂದು ನಂಬಿದ್ದ ಬೇಂದ್ರೆಯವರು ಎಲ್ಲ ಚೈತನ್ಯದಲ್ಲಿ ಸ್ತ್ರೀ ಜೀವವನ್ನೇ ಕಂಡರು. ಅವರು ಅಂಬಿಕಾತನಯದತ್ತನೆಂದು ಹೆಸರಿಸಿಕೊಂಡದ್ದು ಕೆಲವರಿಗೆ ಇಷ್ಟವಾಗಿರಲಿಲ್ಲ. ಅಂತಹ ಸಂಪ್ರದಾಯವಾದಿಗಳನ್ನು ಬೇಂದ್ರೆ ದೂರವಿಟ್ಟರಲ್ಲದೆ ಮಾನವತೆ ಬದುಕಿರಬೇಕಾದರೆ ತಾಯಿ ಮತ್ತು ಸತಿಯ ಕಾರುಣ್ಯವೆ ಕಾರಣವಾಗಿದೆಯೆಂದು ನಂಬಿದ್ದರು. ತಾನು ಕವಿತೆ ಕಲಿತಿದ್ದು ತಾಯಿ ಮುಂಜಾನೆಯಲ್ಲಿ ಹಾಡುವ ಹಾಡುಗಳಿಂದ, ಬಾಲಬಸವರ ಪದಗಳಿಂದ, ಗೊಲ್ಲರು, ದುರಗಿಮುರಗಿಗಳಂತಹ ಸಂಚಾರಿ ಕಲಾವಿದರಿಂದ ಎಂದು ಅವರು ಹೇಳಿದ್ದಾರೆ. ಹಾಗಾಗಿ ತಾಯಿಯ ಹೆಸರಿನಲ್ಲಿ ತಾವು ಅಡಗಿರುವುದು; ಪ್ರಕೃತಿಯಿಂದ ಪ್ರೇರಿತರಾಗುವುದು; ಕನ್ನಡ, ಮರಾಠಿ, ಇಂಗ್ಲೀಷ್, ಬಂಗಾಲಿ, ಸಂಸ್ಕೃತ ಮುಂತಾದ ಭಾಷೆಗಳ ಸಾಹಿತ್ಯದ ಓದಿನಲ್ಲಿ ಮುಳುಗೇಳುವುದು ಅವರಿಗೆ ಪ್ರಿಯವಾದ ಸಂಗತಿಗಳಾದವು. ಚಿಕ್ಕ ಬಾಲಕನಾಗಿದ್ದಾಗ ಬೆಳಗಿನ ಜಾವ ಅವರ ಕಿವಿಗೆ ಬೀಳುತ್ತಿದ್ದ ನಾನಾ ತರಹದ ಹಾಡುಗಳನ್ನು ಅವರು ಹೆಚ್ಚುಕಡಿಮೆ ನೆನಪಿನಲ್ಲಿಟ್ಟಿರುವುದು ಅಚ್ಚರಿ ಎನಿಸುತ್ತದೆ. 'ಮಾತೃನಾಮಖ್ಯಾತನಾಗುವುದು ಸಂಪ್ರದಾಯವಂತರಿಗೆ ಸರಿ ತೋರಲಿಲ್ಲ. ಸಾಹಿತ್ಯಕ್ಕೆ ತಾಯಿ ಸರಸ್ವತಿ; ವಾಣಿಗೆ ಮೂಲ ಭಾರತಿ; ಐತರೇಯ ಮಹೀದಾಸನಿಗೆ ತಾಯಿ ಗುರುಸ್ಥಾನೀಯ; ಶ್ರೀರಾಮ ಕೌಶಲ್ಯಾನಂದನ; ಅರ್ಜುನ ಕೌಂತೇಯ. ಆದರೂ ಕೆಲವು ಮೂಗುಗಳಿಗೆ ಈ ವಾಸನೆ ಸರಿ ಹೋಗಲಿಲ್ಲ. ಕಾವ್ಯ ಕಾಂತಾ ಸಂಮಿತಿ, ಜೀವ ಸತಿ ಪ್ರಕೃತಿಯದು. ಕನ್ನಡ ಜಾನಪದ ಪ್ರಕೃತಿಯ ಪ್ರವೇಶವೂ, ಆವೇಶವೂ ಎಂದು ನನ್ನಲ್ಲಿ ಗೂಡು ಮಾಡಿಕೊಂಡಿತೋ ನಾನು ಹೇಳಲಾರೆ. ತಾಯಿ, ಅಜ್ಜಿ ಬೀಸುವಾಗ ಹೇಳುವ ಪದಗಳಿಂದ ಬೆಳಗುಜಾವದಲ್ಲಿ ನನಗೆ ಎಚ್ಚರಿಕೆಗಿಂತ ನಿದ್ದೆ ಹೆಚ್ಚು.... ದಾಸರ ಗೋವಿಂದಪ್ಪ ಮೃದು ತಾಳ ಬಾಜನೆಯೊಡನೆ 'ಗರುಡಾss ನೇರಿ ಬರುವಾs। ಇವನ್ಯಾರಮ್ಮಯ್ಯಾs।' ಎಂದೋ, 'ಜಯಪಾಂಡುರಂಗಾss। ಏನು ಮಾಡಿದೀ ಮಾನಭಂಗಾ।।' ಎಂದೋ ರಾಗ ಎಳೆದಾಗ ನನಗೆ ಚುಕ್ಕು ಬಡೆದು ಮಲಗಿಸಿದಂತಾಗುತ್ತಿತ್ತು. 'ನಿಂಬಿಯ ಮರ ಹುಟ್ಟಿ ನಿಂಗಕ್ಕೆ ನೆರಳಾಗಿ ಬಂದ ಜಂಗಮಕs ಬಸsವಯ್ಯಾ ಸೂವಿ।' ಎಂದು ಬಾಲಬಸವರ ಹಾಡು ಕಿವಿಗೆ ಬೀಳುತ್ತಲೇ ನಮ್ಮ ಕಾಲು ಹೇಳದೇ ಕಿತ್ತಿ ಅವರಲ್ಲಿದ್ದಲ್ಲಿಗೆ ಹೋಗಿ ಅವರ ಸಾಕ್ಷಾತ್ಕಾರವಾದಾಗ ಈ ಕಣ್ಣಿಗೆ ತೃಪ್ತಿ.'[೩೮]

ನಿಂಬೆಯ ಗಿಡ ಲಿಂಗಕ್ಕೆ ನೆರಳಾಗಿ ನಿಂತ ಪ್ರತಿಮೆ ಬಾಲ್ಯದಿಂದಲೆ ಅವರ ಪ್ರಜ್ಞೆಯಲ್ಲಿ ಬೆರೆತು ಹೋಗಿರುವುದನ್ನು ಗಮನಿಸಿದಾಗ ನಿಸರ್ಗ ಅವರಿಗೆ ಅಲೌಕಿಕ ಅನುಭವವನ್ನು ತಂದುಕೊಟ್ಟಿರುವುದು ಸ್ಪಷ್ಟವಾಗುತ್ತದೆ. ಅಷ್ಟೆ ಅಲ್ಲದೆ ''ಕೋಳಿ ಕೂಗದ ಮುನ್ನ', 'ಅರಸು ಕೇಳ್ಳೆ ಸತ್ಯವಚನಕೆ', 'ಜಯ ಜಯ ಜನಾರ್ಧನ ಮುಕುಂದ ಮುರಮರ್ದನ ಪಕ್ಷಿವಾಹನ', 'ಗೋವಿಂದ ಎಂದರೆ ಗೋವಿಂದಾ ಹರಹರಾ ಎಂದರೆ ಮಹಾದೇವಾ', 'ಧನಿಗೆ ಧನಿ', ಕೋಲು ಮುತ್ತಿನ ಕೋಲು ಚಿನ್ನದ ಕೋಲು ಹವಳದ ಪವಳದಾ''[೨೯] ಎನ್ನುವ ನೂರಾರು ಹಾಡುಗಳು, ಸ್ತೋತ್ರಗಳು ದತ್ತಾತ್ರೇಯ ಹೆಸರಿನ ಸಾಮಾನ್ಯ ವ್ಯಕ್ತಿಯಲ್ಲಿ ಅಂಬಿಕಾತನಯನೆಂಬ ಕವಿಯ ಮೂಲಕ ಸಂಕೀರ್ಣ ರೂಪ ಪಡೆದುಕೊಳ್ಳತೊಡಗಿದವು. ಬರಿ ಭಕ್ತಿಪರವಾದ ಹಾಡುಗಳಷ್ಟೆ ಅಲ್ಲದೆ ಹೋಳಿ ಹುಣ್ಣಿವೆಯ ಸಂದರ್ಭದಲ್ಲಿನ 'ನಿಮ್ಮೋಣಿ ಕಾಮಣ್ಣ ಕೆಮ್ಮಣ್ಣ ಮುಕ್ಕ್ಯಾನ । ತಮಣ್ಣಾ ಬಾರೋ ಹಂದಿರಕss', ಸ್ವಾತಂತ್ರ್ಯ ಹೋರಾಟದಲ್ಲಿನ 'ಧನ್ಯ ಶಿವಾಜೀ । ತೋರಣಗಾಜೀ। ಧನ್ಯಚಿ ತಾನಾಚಿ । ಪ್ರೇಮೋ ಆಜೀ ಸಿಂಹಗಡಾಚಾ । ಪೋವಾಡಾ ಗಾಜೀ', 'ಬನ್ನಿರಿ ಬನ್ನಿರಿ ಭರದಿಂದ । ಸ್ವದೇಶಿ ಚಳುವಳಿ ನೆವದಿಂದ'[೩೦] ಮುಂತಾದ ಹಾಡುಗಳು, ಲಾವಣಿಗಳು ಅವರ ಮನಸ್ಸನ್ನು ಹೊಕ್ಕವು.

ಅದೇ ಸಮಯಕ್ಕೆ 'ಮೇಘದೂತ', 'ಶಾಕುಂತಲ', 'ಉತ್ತರರಾಮಚರಿತೆ' ಅವರ ಮನಸ್ಸನ್ನು ಆವರಿಸಿದವು. ಕೀಟ್ಸ್, ಶೆಲ್ಲಿಯರ ಪಾಶ್ಚಾತ್ಯ ಪ್ರಭಾವವೂ ತನ್ನ ಪರಿಣಾಮ ಬೀರಿತು. ಪುಣೆಯಲ್ಲಿ ಕನ್ನಡ-ಮರಾಠಿ ಗೆಳೆಯರು ಕೂಡಿ 'ಶಾರದಾ ಮಂಡಲ'ವನ್ನು ಸ್ಥಾಪಿಸಿ ಅದರ ಮೂಲಕ ವಾಗ್ದೇವಿಯ ಸೇವೆ ಸಲ್ಲಿಸುತ್ತಿದ್ದರು. 'ಮುರಲಿ' ಎಂಬ ಕೈಬರಹದ ಮಾಸಪತ್ರಿಕೆ ಹೊರಡಿಸುತ್ತಿದ್ದರು. ಶ್ರೀಧರ ಖಾನೋಳಕರ, ರಾಮರಾವ್ ವಾಡೇದ, ಲಕ್ಷ್ಮಣರಾವ್ ಜಮಖಂಡಿ, ಶ್ಯಾಮಸುಂದರ ಪುಣೇಕರರಂತಹ ಸ್ನೇಹಿತರು ಬೇಂದ್ರೆಯವರ ಪ್ರಾರಂಭಿಕ ಕಾವ್ಯಜೀವನದಲ್ಲಿ ಮಹತ್ತರ ಪಾತ್ರ ವಹಿಸಿದ್ದರು. ಜೊತೆಗೆ ವಾಗ್ಭೂಷಣ, ಸ್ವಧರ್ಮ, ಜಯಕರ್ನಾಟಕ ಪತ್ರಿಕೆಗಳು; ನಾಡಹಬ್ಬ, ಪಂಪ, ವಿದ್ಯಾರಣ್ಯ ಉತ್ಸವಗಳು, ಸಾಹಿತ್ಯಗೋಷ್ಠಿ, ಸಮ್ಮೇಳನಗಳು ದೇಶಭಕ್ತನಾಗಬೇಕೋ, ಶಿಕ್ಷಕನಾಗಬೇಕೋ, ಕವಿಯಾಗಬೇಕೋ ಇಲ್ಲವೆ ಇತರರಿಗೆ ಬರೀ ಗೆಳೆಯನಾಗಿರಬೇಕೋ ಎಂದೆಲ್ಲ ದ್ವಂದ್ವದಲ್ಲಿ ಬೇಯುತ್ತಿದ್ದ ಬೇಂದ್ರೆಯನ್ನು ಕವಿತ್ವದ ಹಾದಿಗೆ ದೂಡಿದವು. ಆ ಸಂದರ್ಭವನ್ನು ಬೇಂದ್ರೆ ಹೀಗೆ ವಿವರಿಸುತ್ತಾರೆ : 'ಗೆಳೆಯ-ಶಿಕ್ಷಕ-ಕವಿ-ದೇಶಭಕ್ತಿ ಈ ಚತುರ್ಮುಖ ತಿಳಿಯದೆ ಹೊಳವು ಹಾಕಿತ್ತು. ಇದರಲ್ಲಿ ಕವಿ ಪ್ರಬಲನಾದ. ತಾಯಿಯ ಋಣ ತೀರಿಸಲು ಇದು ಸಹಜ ಹಾದಿಯಾಯಿತು. ಹಾರನಹಳ್ಳಿ, ಖಾನೋಳಕರ, ಸಾಲಿ ಇವರೂ ಕವಿತ್ವದ ದಾರಿಯಲ್ಲಿದ್ದರು. ೧೯೧೮ ರಲ್ಲಿ 'ಶಾಂತಕವಿ', 'ಕಾವ್ಯಾನಂದ ಪುಣೇಕರ', 'ವಲ್ಲಭ ಮಹಾಲಿಂಗ ತಟ್ಟಿ', 'ಶ್ರೀನಿವಾಸ ವೆಂಕಟೇಶ ಕಟ್ಟಿ', ಕೆರೂರ ಈ ಹಿರಿಯರ ಮಧ್ಯ ಕೋಡು ಮೂಡದ ನಾನು ಸೇರಿಕೊಂಡು ಪ್ರಭಾತ ಕಂಡೆ.'[೩೧]

೧೯೧೮ ರ ಸಮಯಕ್ಕೆ ಧಾರವಾಡದಿಂದ ಬಳವಂತರಾವ ಜಠಾರ ನೇತೃತ್ವದಲ್ಲಿ ಪ್ರಕಟವಾದ ಸಾಹಿತ್ಯ ಮಾಸಿಕ 'ಪ್ರಭಾತ'ದಲ್ಲಿ ಬೇಂದ್ರೆಯವರ ಕವಿತೆ ಪ್ರಕಟವಾಗುವುದೇ ತಡ ಬೇಂದ್ರೆ ಸುತ್ತಮುತ್ತಲೆಲ್ಲ ಹಾಗೂ ಗೆಳೆಯರ

ಬಳಗದಲ್ಲಿ ಪ್ರಸಿದ್ಧಿಯಾಗಿಬಿಟ್ಟರು. ಸಪ್ಟಂಬರ್ ೧೯೧೮ ರ 'ವಾಗ್ಭೂಷಣ'ದ ಸಂಚಿಕೆಯಲ್ಲಿ 'ಪ್ರಭಾತ'ವನ್ನು ಸ್ವಾಗತಿಸುತ್ತ ಸಂಪಾದಕರು ಹೀಗೆ ಬರೆದಿದ್ದಾರೆ. 'ಪ್ರಭಾತ'ದ ಮೊದಲ ಸಂಚಿಕೆಯು ಕಾವ್ಯಾನಂದ, ಶಾಂತಕವಿ ಇವರೇ ಮೊದಲಾದ ಕವಿಗಳ ೧೧ ಕೃತಿಗಳನ್ನು ಒಳಗೊಂಡಿದೆ. 'ಪ್ರಭಾತ'ವು ಕರ್ನಾಟಕ ನೂತನ ಕವಿತಾ ಸೂರ್ಯನ ಉದಯವನ್ನು ಯಥಾರ್ಥವಾಗಿ ಸೂಚಿಸುತ್ತದೆ ಎಂದು ಹೇಳಬಹುದು. ಈಗ ಪ್ರಸಿದ್ಧಿಸಿದ ಪದ್ಯಗಳಲ್ಲಿ ಕಾವ್ಯಾನಂದರ ಸ್ವಭಾವೋಕ್ತಿಯೂ, 'ಒಬ್ಬ ವೀರಶೈವ'ನ ಪದಚಾರಿತ್ಯವೂ, 'ಅಂಬಿಕಾತನಯ'ನ ಸ್ಫೂರ್ತಿಯೂ ಒಡೆದು ಕಾಣಿಸುತ್ತವೆ.'[೩೨]

ಅರಳುವುದು, ಎಚ್ಚರಗೊಳ್ಳುವುದು, ತಿಳಿಯುವುದು, ರಾತ್ರಿ ತೀರುವುದು, ಬೆಳಗಾಗುವುದು, ಮುಗಿಲಿನಲ್ಲಿ ಕೆಂಪೇರುವುದು ಮುಂತಾದ ಅರ್ಥಗಳುಳ್ಳ ಪದಗಳು ಮತ್ತು ಆ ತರಹದ ಸಂದರ್ಭಗಳು ಬೇಂದ್ರೆಯವರಲ್ಲಿ ಪದೇ ಪದೇ ಕಾಣಿಸಿಕೊಳ್ಳುವುದರ ಹಿಂದೆ ತಳಿ ಬೆಳೆಯುವ, ಕರಕಿ ಹಬ್ಬುವ, ಹೊಳೆ ಹರಿಯುವ, ಬಳ್ಳಿ ಹೂ ಬಿಡುವ, ಹಕ್ಕಿ ಹಾಡುವ, ಬುದ್ಧಿ-ಭಾವಗಳು ಬೆಸೆಯುವ, ಚೈತನ್ಯಕ್ಕೆ ತುಡಿಯುವ ಕವಿಯ ಅಪೇಕ್ಷೆಗಳನ್ನು ಕಾಣಬಹುದಾಗಿದೆ. ರಸಾನುಭೂತಿ, ಸೌಂದರ್ಯ ಮೀಮಾಂಸೆ, ಆಧ್ಯಾತ್ಮಿಕ ಒಲವುಗಳ ಜೊತೆಗೆ ನಾಡು-ನುಡಿಗಳ ಅರುಣೋದಯದ ಸಂಕೇತವನ್ನೂ ಕಾಣಬಹುದು. 'ಕಾವ್ಯ ಕೇವಲ ಕವಿಯ ಕುಶಲಕರ್ಮವಾಗಿರದೆ ಅವನ ಭಾವ ಪ್ರಪಂಚದ ಅಭಿವ್ಯಕ್ತಿಯಾಗಿರಬೇಕು ಎಂದು ಬೇಂದ್ರೆಯವರು ನಂಬಿದ್ದರು. ಈ ತಿಳಿವು ಅವರಿಗೆ ಅವರ ಪ್ರೀತಿಯ ಎಮರ್ಸನ್ ಮತ್ತು ಗುರುಸ್ಥಾನದಲ್ಲಿದ್ದ ಶ್ರೀ ಅರವಿಂದರ ಮುಖಾಂತರ ಬಂದಂತೆ ತೋರುತ್ತದೆ.'[೩೩]

ಅರವಿಂದರು, ಲಕ್ಷ್ಮೀಶ, ಸರ್ವಜ್ಞರನ್ನು ಎಷ್ಟು ನೆನೆದರೂ ಕಡಮೆಯೆ ಅವರಿಗೆ. 'ಗುರುವಿನ ಹತ್ತಿರಿರು ಎಂದ ಸರ್ವಜ್ಞ'[೩೪] ಎಂದು ಅವರು ಹೇಳಿಕೊಂಡಿದ್ದಾರೆ. 'ಜಗನ್ನಾಥ ಪಂಡಿತ, ಲಕ್ಷ್ಮೀಶ, ಸರ್ವಜ್ಞರ ಸೇವೆಯಿಂದ ವಾಣಿ ನೇಪಥ್ಯ ಪ್ರಸಾದನ ಮುಗಿಸಿತ್ತು. ರವೀಂದ್ರ, ಗೋವಿಂದಾಗ್ರಜ, ಕೀಟ್ಸ್, ಶೆಲ್ಲಿ ಕಾವ್ಯಗಳ ರಸಾನುಭೂತಿಯಿಂದ ಅದು ಅಡಿಮನೆ ಕಂಡಿತ್ತು. ನಾನಾಖಾಡಿಲ್ಕರ, ಬಾಬೂರಾವ್ ಭಿಡೆ ಇವರೊಡನಾಗುತ್ತಲಿದ್ದ ಸಂವಾದ ಸಾತತ್ಯದಿಂದ ಅದಕ್ಕೆ ಹರಿತ ಬಂದಿತ್ತು... ಧಾರವಾಡದ ಪ್ರೀತಿ, ಶ್ರೀಧರನ (ಖಾನೋಳಕರ) ಸ್ನೇಹ, ಚಿಕ್ಕಪ್ಪನ ಗೌರವದ ಮೇಲ್ಮೆ, ಅನೇಕ ಆಪ್ತಮಿತ್ರರ ಸೌಹಾರ್ದ, ದತ್ತೋಪಂತ ಪೋದ್ದಾರರ ಚತುರ ಪ್ರದರ್ಶನ, ಕನ್ನಡ ಮರಾಠಿಯ ಹತ್ತುಗಡೆ, ಇಂಗ್ಲೀಷು ಸಂಸ್ಕೃತದ ಸಂಮಿಶ್ರ ಪ್ರಭಾವ, ಶ್ರೀ ಅರವಿಂದ ಸ್ಪರ್ಶ, ಸ್ಕಾಟ್ ಜೇಮ್ಸ್, ಎಮರ್ಸನ್... ಎಲ್ಲಕ್ಕೂ ಹೆಚ್ಚಾಗಿ ತಾಯಿ ನಡೆಸಿದ್ದ ನೋಂಪಿ, ತಾಪ-ತಪ, ಗೆಳೆತನದ ಹೃದ್ಗತ, ಆದರ್ಶ, ದೈವಕೃಪೆ - ಹದಿನೆಂಟು ಔಷಧಿಗಳ ಕಷಾಯ ನನ್ನ ಪ್ರಕೃತಿಯನ್ನು ವಿಕೃತಿಗೆ ತುತ್ತಾಗದಂತೆ ಸಂಸ್ಕೃತಿಯ ಕ್ಷೇತ್ರವಾಗುವಂತೆ ಹದಗೊಳಿಸುತ್ತಿತ್ತು.'[೩೫]

ತಮಗೊದಗಿದ ಕೆಲವು ಪ್ರಮುಖ ಪ್ರೇರಣೆಗಳನ್ನು ಬೇಂದ್ರೆ ಒಂದೂ ಬಿಡದಂತೆ ನೆನೆಯುವುದು ಗುರುಪಿನ ಮೇರುಸದೃಶ ಪ್ರತಿಭೆಯನ್ನು ನೆನೆಯುವುದೇ ಆಗಿದೆ. ಗೆಳೆಯ, ಶಿಕ್ಷಕ, ತಾಯಿ, ಪುಸ್ತಕ, ಹಾಡು ಹಾಗೂ ಪ್ರಕೃತಿ ಹೀಗೆ ವಿವಿಧ ರೂಪಗಳಲ್ಲಿ ಚೈತನ್ಯವೆನ್ನುವುದು ಕವಿಯ ಕೈ ಹಿಡಿದಿದೆ. ಹಾಲಗೇರಿಯಲ್ಲಿ ಮುಳುಗುತ್ತಿರುವಾಗ

ಸಣ್ಣ ಬಾಲಕನಿದ್ದ ಬೇಂದ್ರೆಯನ್ನು ಬದುಕಿಸಿದ ತಾಯಿ, ಸಣ್ಣ ಸೋಮವಾರದ ಸೋಮೇಶ್ವರ ಆ ಚೈತನ್ಯ ಸ್ವರೂಪದ ರೂಪಗಳೆ ಆಗಿದ್ದಾರೆ.

'ತುತ್ತೂರಿ' ಹಾಗೂ 'ಸರಸ್ವತಿ' ಎಂಬ ಬೇಂದ್ರೆಯವರ ಎರಡು ಕವಿತೆಗಳು ೧೯೧೮ ರಲ್ಲಿ 'ಪ್ರಭಾತ'ದ ಮೊದಲ ಸಂಚಿಕೆಯಲ್ಲಿ ಪ್ರಕಟವಾಗುವ ಮೂಲಕ ಬೇಂದ್ರೆ ಬಾನಂಗಳದಲ್ಲಿ ಉದಯಿಸಿದ ಹೊಸ ಕವಿಯೆಂದು ಸುದ್ದಿ ಮಾಡಿದರು. ಅವರು ಅದೇ ಆಗ ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಬಿ.ಎ. ಪರೀಕ್ಷೆ ಕೊಟ್ಟು ಧಾರವಾಡಕ್ಕೆ ಬಂದಿದ್ದರು. ಧಾರವಾಡದಲ್ಲಿ ನಡೆಯಲಿದ್ದ ೪ನೆಯ ಸಾಹಿತ್ಯ ಸಮ್ಮೇಳನದ ನೆಪದಲ್ಲಿ ಬೇಸಿಗೆಯ ರಜೆಯನ್ನು ಕಳೆಯುವುದು ಅವರಿಗೆ ಸಂತೋಷದ ಸಂಗತಿಯಾಗಿತ್ತು. ತಾವು ವಾಸಿಸುತ್ತಿದ್ದ ಕಾಮನಕಟ್ಟೆಯ ಹತ್ತಿರವೆ ಕೂಟಗಿದ್ದ ಗೋಖಲೆಯವರ ಮನೆ ಅವರ ತಾಯಿಗೆ ತವರು ಮನೆಯಾಗಿ ಪರಿವರ್ತನೆಗೊಂಡಿತ್ತೆಂದು ಬೇಂದ್ರೆ ಹೇಳುತ್ತಾರೆ : 'ಗೋಖಲೆ ಚಿದಂಬರಬಾಯಿಯು ನನ್ನ ತಾಯಿಯ ತಾಯಿ, ಗೋದುಬಾಯಿಯನ್ನು ಅಕ್ಕನಂತೆ ಗೌರವದಿಂದ ನಡೆಸಿಕೊಳ್ಳುತ್ತಿದ್ದಳು. ಈಕೆ ಬಡವಿ, ಆಕೆ ಭಾಗ್ಯವಂತಿ. ಆದರೂ ಯಾವುದೋ ಹೃದಯ ಸಂಬಂಧ ಅವರನ್ನು ಕೂಡಿಸಿತ್ತು. ಈ ಗೋಖಲೆಯವರ ಮನೆಯಲ್ಲಿಯೇ ನನ್ನ ಪ್ರಾರಂಭದ ಕೆಲವು ಕನ್ನಡ ಕವಿತೆ ಬರೆದೆ. ವಿಶೇಷವಾಗಿ 'ಕೋಗಿಲೇ, ಕೋಗಿಲೇ,ಎಂದು ಬಂದೆ ನೀ' ಎಂಬ ನೀಳ್ಗವನ ಬರೆದದ್ದು ಇಲ್ಲಿಯೇ. ಅವರ ಮನೆಗೆ ಹತ್ತಿದ ನವಲಿ ಅವರ ಹಿತ್ತಲಲ್ಲಿ ದೊಡ್ಡದೊಂದು ಹುಣಿಸೆಮರ; ವರ್ಷ ವರ್ಷವೂ ಒಂದು ಕೋಗಿಲೆ ಅಲ್ಲಿ ತನ್ನ ಆಸ್ಥಾನ ನಡೆಸುತ್ತಿತ್ತು. 'ಕೋಗಿಲೆ' ಕವನಕ್ಕೆ ಅದು ನಿಮಿತ್ತ. ಈ ನೀಳ್ಗವನ, ಕೆಲವು ಬಿಡಿಗವನ, ಕೆಲವು ಭಾಷಾಂತರ, ಕೆಲವು ಪ್ರಾಯೋಗಿಕ ನುಡಿಗಳು, ಸಾಲುಗಳು ಇಷ್ಟು ಬಂಡವಲಿನಿಂದ ನಾನು ಕವಿಯಾಗಿಬಿಟ್ಟಿದ್ದೆ. ನಾನು ಕವಿಯಾಗುವದಿರಲಿ, ನನ್ನ ಸಮಕಾಲದ ಗೆಳೆಯರು -ವಯಸ್ಸಿನಿಂದ ಸ್ವಲ್ಪ ಹಿರಿಯರು- ನನ್ನನ್ನು 'ನವಕರ್ನಾಟಕದ ನವಕವಿ' ಎಂದು ಹಿಗ್ಗಿಸಿದ್ದರು.'[೩೬]

ಅವರ ಆರಂಭಿಕ ಕವಿತೆಗಳಿಂದ ಹಿಡಿದು ಉತ್ಕರ್ಷದ ಕಾವ್ಯಜೀವನದುದ್ದಕ್ಕೂ ಬೇಂದ್ರೆ ಹಿತ್ತಲು, ಹುಣಸೆಮರ, ಮಾವು, ಮಾವಿನ ಪೀಪಿ, ರವದಿ, ರೊಂಇಬಿಲ್ಲಪಟ, ಪತಂಗ, ಪಾತರಗಿತ್ತಿ, ಕೋಗಿಲೆ, ಗರುಡ, ನೆಲ, ನದಿ, ಮುಗಿಲು, ಮಳೆ, ಬೆಳಕು, ಬೆಳದಿಂಗಳು ಹೀಗೆ ನಿಸರ್ಗದೊಡನೆ ನಾನಾ ಸಂಬಂಧಗಳನ್ನು ಬೆಳೆಸಿಕೊಂಡು ಅವುಗಳನ್ನು ತಮ್ಮ ಅನುಭವಗಳ ಅನುಭೂತಿಗೆ ಪ್ರೇರಕವಾಗಿರಿಸಿದರು. ಬದುಕಿನ ಅವಸ್ಥೆಗಳನ್ನು ಪ್ರಕೃತಿಯಲ್ಲಿ ಕಂಡರು. ಬರಿ ಕಂಡರಷ್ಟೆ ಅಲ್ಲ, ಅವುಗಳನ್ನು ಆಳವಾಗಿ ಅನುಭವಿಸಿದರು. ನಿಸರ್ಗದ ಅನಾಹತ ನಾದವನ್ನು ಹೊರಹೊಮ್ಮಿಸಿದರು.

ತಾನು ಬರೆದದ್ದು ತನ್ನ ಕವನಗಳನ್ನಲ್ಲ, ಕನ್ನಡದ ಕವನಗಳನ್ನೆಂದು ಬೇಂದ್ರೆ ತಮ್ಮ ಮೊದಲ ಕವನ ಸಂಕಲನ 'ಗರಿ'ಯ ಮುನ್ನುಡಿಯಲ್ಲಿ ಹೇಳುತ್ತಾರೆ. 'ಇವು ನನ್ನವಲ್ಲ; ಕನ್ನಡದ ಕವನಗಳು. ಕನ್ನಡದ ಅಶರೀರವಾಣಿಯು ಸಾವಿರ ಬಾಯಿಗಳಿಂದ ತನ್ನ ಕನಸನ್ನು ಕನ್ನಡಿಸುತ್ತಿದೆ. ಆ ಸಾವಿರ ಬಾಯಿಗಳಲ್ಲಿ ನನ್ನದೊಂದು; ಅದೆ ನನ್ನ ಧನ್ಯತೆ...

ಒಂದೆ ಕನಸನ್ನು ಹಲವು ಕಣ್ಣು ಕಾಣುತ್ತಿವೆ. ಒಂದೆ ಕಣಿಯನ್ನು ಹಲವು ಬಾಯಿ ಹಾಡುತ್ತಿವೆ.... ಇದರಲ್ಲಿ ಆಪ್ಪಿ ತಪ್ಪಿ ಬಂದ 'ನನ್ನ'ದೆಂಬ ಕಿಟ್ಟವು ಸಹೃದಯರ ಸಾರಸ್ವತ ಯಜ್ಞದಲ್ಲಿ ಸುಟ್ಟು ಕನ್ನಡದ ಚಿನ್ನವಷ್ಟೆ ಉಳಿಯುವುದು. ಈ 'ಗರಿ'ಗಳನ್ನು ಅದಕ್ಕಾಗಿ ನೀಡಿದ್ದೇನೆ.'[೩೨] ಪ್ರತಿಯೊಬ್ಬ ಕವಿಯೂ ಪರಂಪರೆಯ ಕೂಸು. ವಿವಿಧ ಕವಿಗಳು ಕನ್ನಡವೆಂಬ ಗುಡಿಯನ್ನು ಕಟ್ಟಬೇಕಾದಾಗ ದುಡಿಯುವ ಶಿಲ್ಪಿಗಳು ದೀಪ ಉರಿಯಲು ಸದಾ ಎಣ್ಣೆಯನ್ನು ಸುಡುತ್ತಿರಬೇಕು ಎನ್ನುವುದು ಬೇಂದ್ರೆಯವರ ಭಾವವಾಗಿದೆ. ನವೋದಯ ಕಾಲದ ಸಂದರ್ಭವನ್ನು ಭಾಷೆ ಹಾಗೂ ಸಂಸ್ಕೃತಿಯ ಪುನರುಜ್ಜೀವನಕ್ಕೆ ಅವರು ಬಳಸಿಕೊಂಡರು. ನಿಂತ ನೀರಾಗಿದ್ದ ಸಾಂಸ್ಕೃತಿಕ ಬದುಕಿನಲ್ಲಿ ಬಿ.ಎಂ.ಶ್ರೀ., ಪಂಜೆ, ಕುವೆಂಪು, ಬೇಂದ್ರೆ ಮುಂತಾದವರು ಹೊಸ ಜೀವಸೆಲೆಗಳನ್ನು ತೆರೆದರು. ಹೊಸ ಸಾಹಿತ್ಯದ ಉತ್ಸಾಹ ಎಲ್ಲೆಡೆಯೂ ಹರಿಯತೊಡಗಿತು. ನೂರು ಮರಗಳು ನೂರು ಸ್ವರಗಳನ್ನು ಹೊರಡಿಸತೊಡಗಿದವು. ಆಧುನಿಕ ಕನ್ನಡದ ಚೆಲವು ಒಲವು ಪ್ರಕಟಗೊಳ್ಳತೊಡಗಿತು. ವೈವಿಧ್ಯಮಯವಾದ ಅಭಿವ್ಯಕ್ತಿಗೆ ನೆಲ ಪುಳಕಗೊಂಡಿತು.

೪.೮ ಇಂಗ್ಲೀಷ್ ರೋಮ್ಯಾಂಟಿಕ್ (ರಮ್ಯ)ಕಾವ್ಯದ ಪ್ರೇರಣೆಗಳು :

ಇಂಗ್ಲೀಷ್‌ನ ರೋಮ್ಯಾಂಟಿಕ್ ಕಾವ್ಯದ ಪ್ರೇರಣೆಗಳು ಬೇಂದ್ರೆಯನ್ನು ಒಳಗೊಂಡಂತೆ ನವೋದಯದ ಪ್ರಮುಖ ಕವಿಗಳಲ್ಲಿ ನಿಸರ್ಗಪ್ರೇಮ, ಸ್ವಾತಂತ್ರ್ಯದ ಅಭೀಪ್ಸೆ, ಬೆರಗು, ವಿಸ್ಮಯ, ಮುಗ್ಧಭಾವ, ಕನಸು, ಕಲ್ಪಕತೆ, ವೈಯಕ್ತಿಕತೆಗಳನ್ನು ಬೆಳೆಸಿದವು. ೧೭೯೮ ರಲ್ಲಿ 'The Lyrical Ballads' ಎನ್ನುವ ಕೃತಿಯನ್ನು ಪ್ರಕಟ ಮಾಡುವ ಮೂಲಕ ವಿಲಿಯಮ್ ವರ್ಡ್ಸ್‌ವರ್ಥ್ ಹಾಗೂ ಕೋಲ್‌ರಿಜ್ ಇಂಗ್ಲೀಷ್ ಸಾಹಿತ್ಯದಲ್ಲಿ ರೋಮ್ಯಾಂಟಿಕ್ ಯುಗಕ್ಕೆ ನಾಂದಿ ಹಾಡಿದರು. 'Lyrical Ballads' ಕೃತಿ ಅದುವರೆಗೂ ಪ್ರಚಲಿತವಾಗಿದ್ದ ಅತಿಯಾದ ನೀತಿ ನಿಯಮ, ಶಿಸ್ತು, ಕಟ್ಟುಪಾಡುಗಳಿಂದ ರಸಹೀನವಾಗಿದ್ದ ನವ ಅಭಿಜಾತ ಯುಗಕ್ಕೆ ('Neo Classical Age') ವಿದಾಯ ಹೇಳಿತು. ನಿರ್ದಿಷ್ಟ ವಿಷಯ, ನಿರ್ದಿಷ್ಟ ಛಂದೋರೂಪವಿರಬೇಕೆಂಬ ಕಾವ್ಯಮಾರ್ಗವನ್ನು ತೊರೆದು ವ್ಯಕ್ತಿಯ ಭಾವನೆಗಳಿಗೆ, ಪ್ರಾಕೃತಿಕ ನೆಲೆಗಳಿಗೆ ಇಂಗ್ಲೀಷ ರೋಮ್ಯಾಂಟಿಕ್ ಕಾವ್ಯ ಒತ್ತು ನೀಡಿತು. ನಿಸರ್ಗಪ್ರೇಮ, ವ್ಯಕ್ತಿಸ್ವಾತಂತ್ರ್ಯ, ಮುಗ್ಧತೆ, ಅತಿಮಾನುಷ ವಿಷಯ, ಮಾನವೀಯತೆ, ಆದರ್ಶದ ಪರಿಪಾಲನೆ, ಶಾಂತಿ, ಸಹೋದರತ್ವ ಮುಂತಾದ ನೆಲೆಗಳಿಂದ ಕಾವ್ಯರಚನೆಗೆ ತೊಡಗಿಕೊಳ್ಳಲು ರೋಮ್ಯಾಂಟಿಕ್ ಚಳವಳಿ ಆಸ್ಪದ ಕೊಟ್ಟು ಕವಿಗಳಲ್ಲಿ ಕನಸುಗಳನ್ನು ಬಿತ್ತಿತು. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳನ್ನು ಸಾಧಿಸುವ ಜನಹಿತ ಉದ್ದೇಶದ ಫ್ರಾನ್ಸಿನ ರಾಜ್ಯಕ್ರಾಂತಿ, ನಿಸರ್ಗದಲ್ಲಿ ನೆಮ್ಮದಿ ಅರಸಬೇಕೆಂಬ ಅರಿವು ರೋಮ್ಯಾಂಟಿಕ್ ಕಾವ್ಯದ ಹುಟ್ಟು ಹಾಗೂ ಬೆಳವಣಿಗೆಗೆ ಸಹಾಯಕವಾದವು. ಕವಿಯಾದವನು ಮತ್ತೊಬ್ಬರ ವಿಚಾರಧಾರೆಗೆ ಅಭಿವ್ಯಕ್ತಿ ಒದಗಿಸುವ ಬದಲಿಗೆ ತನ್ನ ಸ್ವಂತ ಭಾವನೆಗಳಿಗೆ ಬಣ್ಣ ಕೊಡಬೇಕೆಂದು ರೋಮ್ಯಾಂಟಿಕ್ ವಿಚಾರಧಾರೆ ಹೇಳಿತು. ಕಲ್ಪನೆಯ ನೆರಳಲ್ಲಿ, ನಿಸರ್ಗದ ನಡುವಲ್ಲಿ, ಜನಸಾಮಾನ್ಯರ ಜೀವನದ ಘಟನೆಗಳಲ್ಲಿ ಹಾಗೂ ಜನರಾಡುವ ಭಾಷೆಯಲ್ಲಿ ಇಂಗ್ಲೀಷ್ ರೋಮ್ಯಾಂಟಿಕ್ ಕಾವ್ಯ ಜನ್ಮ ತಾಳಿತು. ಅದಕ್ಕೂ ಮೊದಲು ಸಾಂಪ್ರದಾಯಿಕ ಶೈಲಿ, ವಿಷಯ, ರೂಢಿಗತ ನಂಬಿಕೆ, ನಗರ ಜೀವನವನ್ನಾಧರಿಸಿದ

ವಸ್ತು ವೈವಿಧ್ಯಗಳಿಂದ ನವ ಅಭಿಜಾತಯುಗ ತನ್ನ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿ ಕೆಳಗಿಳಿಯತೊಡಗಿತ್ತು. ಹಾಗಾಗಿ ಅದು ಹೊಸ ಕಾವ್ಯಮಾರ್ಗಕ್ಕೆ ಜಾಗೆ ಬಿಟ್ಟುಕೊಟ್ಟಿತು.

ನವ ಅಭಿಜಾತ ಯುಗವೆಂದು (Neo-Classical Age) ಹೆಸರಾದ ೧೮ನೆಯ ಶತಮಾನದ ಇಂಗ್ಲೀಷ್ ಸಾಹಿತ್ಯವು ಕಲ್ಪನೆ, ಬೆರಗು, ಭಾವೋದ್ವೇಗಗಳಿಲ್ಲದೆ ಬಡವಾಗಿತ್ತು, ನೀರಸವಾಗಿತ್ತು. ಬರೀ ಕಟ್ಟಾಚಾರಗಳಿಗೆ ಜೋತುಬಿದ್ದು, ಪ್ರವಚನ-ಉಪದೇಶ-ನೀತಿಪಾಠಗಳಂತಹ ಮೌಲ್ಯಗಳಿಗೆ ಅಂಟಿಕೊಂಡು ಬರಬರುತ್ತ ಜನಸಾಮಾನ್ಯರಿಂದ, ಸಾಹಿತ್ಯದ ಓದುಗರಿಂದ ದೂರಾಗತೊಡಗಿತ್ತು. ಶೇಕ್ಸಪೀಯರ್ ಯುಗ ಅಂತ್ಯವಾದ ನಂತರ ಅಂತಹ ವೈಭವ, ಹುಚ್ಚುಹೊಳೆ ಅಲ್ಲಿ ಬಂದಿರಲಿಲ್ಲ. ನವ ಅಭಿಜಾತ ಕಾಲದಲ್ಲಿದ್ದೂ ಪ್ರವಾಹಕ್ಕೆ ವಿರುದ್ಧವಾಗಿ ಈಜಿದ ಜೇಮ್ಸ್ ಥಾಮಸನ್ (James Thomson 1700-1800), ವಿಲಿಯಮ್ ಕೌಪರ್ (William Cowper, 1731-1800), ವಿಲಿಯಮ್ ಬ್ಲೇಕ್ (William Blake 1757-1827), ರಾಬರ್ಟ್ ಬರ್ನ್ಸ್ (Robert Burns 1759-1796) ಮುಂತಾದವರು ಆಗ ಚಾಲ್ತಿಯಲ್ಲಿದ್ದ ಛಂದೋರೂಪಗಳನ್ನು ಮುರಿಯುವ ಮೂಲಕ; ಸ್ವಾತಂತ್ರ್ಯ, ಕಲ್ಪಕತೆಗಳಂತಹ ಅಂಶಗಳಿಗೆ ಗಮನ ಕೊಡುವುದರ ಮೂಲಕ ವರ್ಡ್ಸ್‌ವರ್ಥ ಹಾಗೂ ಕಾಲ್‌ರಿಜ್ ಕಟ್ಟಲಿದ್ದ ಇಂಗ್ಲೀಷ್ ರೋಮ್ಯಾಂಟಿಕ್ ಕಾವ್ಯಸೌಧಕ್ಕೆ ಅಡಿಗಲ್ಲು ಹಾಕಿದ್ದರು. ಕನ್ನಡ ನವೋದಯ ನಿಜಕ್ಕೂ ಆರಂಭವಾಗುವ ಮುನ್ನ ಪಂಜೆ ಮಂಗೇಶರಾಯರು, ಡೆಪ್ಯೂಟಿ ಚೆನ್ನಬಸಪ್ಪ, ಶಾಂತಕವಿ, ಎಂ.ಎಸ್.ಪುಟ್ಟಣ್ಣ, ಮುದ್ದಣ ಮುಂತಾದವರು ನವೋದಯದ ರಂಗಸಜ್ಜಿಕೆಗೆ ದುಡಿದಂತೆ ಗ್ರೇ, ಕಾಲಿನ್ಸ್, ಕೌಪರ್, ಬ್ಲೇಕ್, ಬರ್ನ್ಸ್ ಮುಂತಾದ ರಮ್ಯ ಮನೋಧರ್ಮದ ಕವಿಗಳು ಇಂಗ್ಲೆಂಡಿನಲ್ಲಿ ರೋಮ್ಯಾಂಟಿಕ್ ಕಾವ್ಯದ ಹಾದಿ ತುಳಿದರು. ಇದು ಕಾಲಕ್ಕನುಗುಣವಾಗಿ ಪ್ರತಿ ಕಾವ್ಯಮನೋಧರ್ಮದಲ್ಲಿ ಮೂಡಿ ಬರುವ ಸ್ಥಿತಿಯಾಗಿದೆ. ಹಿಂದಿನ ಕಾವ್ಯ ಉದ್ದೇಶಗಳು ಕೆಟ್ಟೆಂದೂ, ಈಗಿನ ಕಾವ್ಯ ಉತ್ಕೃಷ್ಟವೆಂದು ಹೇಳುವುದು ಅಷ್ಟು ಸರಿಯಾಗಲಾರದು. ಸಾಹಿತ್ಯ ತನ್ನ ಮನೋಧರ್ಮ ಹಾಗೂ ಅಭಿವ್ಯಕ್ತಿ ಕ್ರಮಗಳನ್ನು ತಾನೆ ಆಯ್ದುಕೊಳ್ಳುತ್ತದೆ. ಅವುಗಳನ್ನು ಗುರುತಿಸುವ, ಕಾಲದ ಮನೋಧರ್ಮವನ್ನು ಪ್ರತಿಬಿಂಬಿಸುವ ಪ್ರತಿಭಾವಂತ ಸಾಹಿತಿಗಳು ಆ ಕೆಲಸವನ್ನು ಮಾಡಬೇಕಾಗುತ್ತದೆ. ಅಭಿಜಾತಯುಗ ಮುಗಿದ ಮೇಲೆ ರೋಮ್ಯಾಂಟಿಕ್, ರೋಮ್ಯಾಂಟಿಕ್ ಮುಗಿದ ಮೇಲೆ ಪ್ರಗತಿಶೀಲವೆನ್ನಬಹುದಾದ ಯಾವುದೋ ಮನೋಧರ್ಮ- ಹೀಗೆ ಪ್ರತಿಯೊಂದು ಕಾಲಕ್ಕೆ, ಸಮಾಜ ಹಾಗೂ ಸಂದರ್ಭಗಳು ಅಲ್ಲಿಯ ಕಾವ್ಯ ಕಟ್ಟುವ ಕೆಲಸ ಮಾಡುತ್ತವೆಯೆಂದು ಹೇಳಬಹುದು. ಅದನ್ನೇ ಡಾ. ಗಿರಡ್ಡಿ ಗೋವಿಂದರಾಜ ಅವರು ಹೀಗೆ ಹೇಳುತ್ತಾರೆ: 'ಯಾವುದೇ ಸಾಹಿತ್ಯ ಮಾರ್ಗದಲ್ಲೂ ಜೀವನದೃಷ್ಟಿ ಹಾಗೂ ಅಭಿವ್ಯಕ್ತಿ ಮಾರ್ಗಗಳು ಪರಸ್ಪರಾವಲಂಬಿಯಾದ ಎರಡು ಮಹತ್ವದ ಸಂಗತಿಗಳಾಗಿರುತ್ತವೆ. ಜೀವನದೃಷ್ಟಿ ಬದಲಾದರೆ ಅಭಿವ್ಯಕ್ತಿ ಮಾರ್ಗವೂ ಕೂಡ ಅನಿವಾರ್ಯವಾಗಿ ಬದಲಾಗಬೇಕಾಗುತ್ತದೆ. ....ಆ ಜೀವನ ದೃಷ್ಟಿಯ ಒಳಗೇ ಹುಟ್ಟಿಕೊಳ್ಳುವ ಸೂಕ್ಷ್ಮ ಭೇದಗಳನ್ನೂ, ಸಂಕೀರ್ಣತೆಯನ್ನೂ ಒಳಗೊಳ್ಳುವಂತೆ ಆ ಅಭಿವ್ಯಕ್ತಿಯ ಮಾರ್ಗ ಸಮರ್ಥ ಲೇಖಕರ

ಕೈಯಲ್ಲಿ ಪಳಗುತ್ತ, ಹಿಗ್ಗುತ್ತ ಸಾಕಷ್ಟು ವಿಕಸನಶೀಲತೆಯನ್ನು ಗಳಿಸಿಕೊಳ್ಳುತ್ತದೆ. ಆದರೆ ಅದೇ ಕಾಲಕ್ಕೆ ಅದಕ್ಕೆ ತೀರ ವಿರುದ್ಧವಾದ ವಸ್ತು ಧೋರಣೆಗಳಿಗೆ ಒಗ್ಗದ ಸಂಕೋಚಗಳನ್ನು ಕೂಡ ಬೆಳೆಸಿಕೊಳ್ಳುತ್ತದೆ. ಅಂತೆಯೇ ಹೊಸ ಸಂವೇದನೆಯು ಹಳೆಯ ಕಾವ್ಯಮಾರ್ಗದಲ್ಲಿ ತನ್ನೆಲ್ಲ ಸೂಕ್ಷ್ಮತೆ, ತೀವ್ರತೆ, ಸಂಕೀರ್ಣತೆಗಳೊಂದಿಗೆ ಅಭಿವ್ಯಕ್ತಿ ಪಡೆಯಲು ಸಾಧ್ಯವಾಗುವುದಿಲ್ಲ. ಇದೇ ಕಾರಣಕ್ಕಾಗಿಯೇ, ನಿಜವಾಗಿಯೂ ಹೊಸದಾದ ಜೀವನದೃಷ್ಟಿ ಹೊಸ ಅಭಿವ್ಯಕ್ತಿ ಮಾರ್ಗವನ್ನು ಹುಡುಕಿಕೊಳ್ಳುವುದು ಅನಿವಾರ್ಯವಾಗುತ್ತದೆ.'[೩೮]

ಹೀಗೆ ಪ್ರತಿಯೊಂದು ಚಳವಳಿ ಅಥವಾ ಮನೋಧರ್ಮವನ್ನು ಅದರಷ್ಟಕ್ಕೆ ನೋಡದೆ ಅಥವಾ ಆ ಸಾಹಿತ್ಯ ಕಾಲವನ್ನು ಆ ಮನೋಧರ್ಮದ ದೃಷ್ಟಿಕೋನದಿಂದ ಮಾತ್ರ ನೋಡದೆ ಅದರ ಮೊದಲಿಗೆ ಹಾಗೂ ಕೊನೆಗೆ ಇತರ ಮನೋಧರ್ಮಗಳು ಪ್ರಭಾವಿಸಿರಬಹುದಾದ ಸಾಧ್ಯತೆಗಳನ್ನು ಅವಲೋಕಿಸಬೇಕು. ನವೋದಯ, ನವ್ಯ, ನವ್ಯೋತ್ತರವೆನ್ನುವುದನ್ನು ಒಂದು ಇಸವಿಯಿಂದ ಮತ್ತೊಂದು ಇಸವಿಯ ತನಕ ಕೊರೆದಿಟ್ಟು ನೋಡಬಾರದು. ಆಯಾ ಕಾಲದ ಮನೋಧರ್ಮಕ್ಕೆ ತಕ್ಕಂತಹ ಬೆಳವಣಿಗೆಗಳು ಸಣ್ಣದಾಗಿ ಬಹು ಹಿಂದಿನಿಂದಲೆ ನಡೆದುಕೊಂಡು ಬಂದಿರುತ್ತವೆ. ಪ್ರತಿಭಾವಂತ ಲೇಖಕರು ಆ ಮನೋಧರ್ಮವನ್ನು ಮುಂಚೂಣಿಗೆ ತರುತ್ತಾರೆ. ಇದು ಎಲ್ಲ ದೇಶ ಕಾಲಗಳಿಗೂ ಅನ್ವಯವಾಗುವಂತಹದು. ಹಾಗಾಗಿ ಕನ್ನಡ ನವೋದಯ ಅಥವಾ ಇಂಗ್ಲೀಷ್ ರೋಮ್ಯಾಂಟಿಕ್ ಕಾವ್ಯವನ್ನು ಪರಿಶೀಲಿಸುವಾಗ ಹಿಂದಿನ ಕಾಲಕ್ಕೆ ಹೊಂದಿಕೊಂಡ ಅಲ್ಲಿ ಇಲ್ಲಿ ಕಾಣುವ ಎಳೆಗಳನ್ನು ಕೂಡ ಗುರುತಿಸಬೇಕಾಗುತ್ತದೆ. ಹಾಗಾಗಿ ೧೭೮೯ ರ ಫ್ರಾನ್ಸ್ ರಾಜ್ಯಕ್ರಾಂತಿಗಿಂತ ಬಲು ಮುಂಚೆಯೆ ಜೇಮ್ಸ್ ಥಾಮ್ಸನ್ ಹೊಸ ಮನೋಧರ್ಮದ 'Seasons' ಎನ್ನುವ ಪ್ರಕೃತಿ ಕೇಂದ್ರಿತ ಕಾವ್ಯ ಬರೆದು ಇಂಗ್ಲೀಷ್ ರೋಮ್ಯಾಂಟಿಕ್ ಕಾವ್ಯದ ಉದಯಕ್ಕೆ ಅರುಣೋದಯ ಮೂಡಿಸಿದ್ದ. ನಂತರ ಕೌಪರ್, ಬ್ಲೇಕ್, ಗ್ರೇ ಮುಂತಾದವರೂ ತಮ್ಮ ಕೊಡುಗೆ ಸಲ್ಲಿಸಿದರು. ಆದರೆ ನವ ಅಭಿಜಾತಯುಗದ ಮನೋಧರ್ಮವನ್ನು ಸಂಪೂರ್ಣವಾಗಿ ಧಿಕ್ಕರಿಸಿ ಹೊಸ ಹಾದಿ ತುಳಿದ ವರ್ಡ್ಸ್‌ವರ್ಥ್ ಹಾಗೂ ಕೋಲ್‌ರಿಜ್ ಇಂಗ್ಲೀಷ್ ಸಾಹಿತ್ಯದಲ್ಲಿ ಹೊಸಗಾಳಿಗೆ ಕಾರಣರಾದರು.

ಇಂಗ್ಲೀಷ್ ರೋಮ್ಯಾಂಟಿಕ್ ಕವಿಗಳ ಪೈಕಿ ವರ್ಡ್ಸ್‌ವರ್ಥ್, ಕೀಟ್ಸ್, ಶೆಲ್ಲಿ, ಬೈರನ್ ಕನ್ನಡ ನವೋದಯದ ಪ್ರಮುಖರನ್ನು ಬಹುವಾಗಿ ಕಾಡಿದ ಕವಿಗಳಾಗಿದ್ದರು. ಅವರನ್ನು ಹೊರತುಪಡಿಸಿ ಇತರ ಕವಿಗಳ ಪ್ರಭಾವಶನ್ನು 'ಇಂಗ್ಲೀಷ್ ಗೀತಗಳು' ಮತ್ತು ಇತರ ಹಲವು ಕೃತಿಗಳಲ್ಲಿ ಗುರುತಿಸಬಹುದು. ಆದರೆ ವರ್ಡ್ಸ್‌ವರ್ಥ್, ಕೀಟ್ಸ್, ಶೆಲ್ಲಿ ಮುಂತಾದ ಪ್ರಮುಖರು ಕನ್ನಡ ಕಾವ್ಯ ನಿಸರ್ಗಕ್ಕೆ ಮರಳಲು; ದೇಶಿ ನೆಲೆಯತ್ತ ಹಿಂದಿರುಗಿ ನೋಡಲು ಸ್ಫೂರ್ತಿಯಾದರೆನ್ನುವುದರಲ್ಲಿ ಸಂಶಯವಿರಲಾರದು. ಪಾಶ್ಚಾತ್ಯ ಕಾವ್ಯದ ಪ್ರೇರಣೆಗಳನ್ನು ಕನ್ನಡ ನವೋದಯದ ಹೊಸ್ತಿಲಲ್ಲಿದ್ದ ಪ್ರಮುಖ ಕವಿಗಳು ದುಡಿಸಿಕೊಂಡರೆಂಬುದು ಮಹತ್ವದ ಮಾತಾಗುತ್ತದೆ.

ತನ್ನ ಕಾವ್ಯದಲ್ಲಿ ಜನಸಾಮಾನ್ಯರ ಭಾಷೆ, ಮಾನವೀಯತೆ ಹಾಗೂ ನಿಸರ್ಗ ಪ್ರೇಮದಂತಹ ಅಂಶಗಳನ್ನು ಬೆರೆಸಿದ ವರ್ಡ್ಸ್‌ವರ್ಥ್ (೧೭೭೦-೧೮೫೦) ಇಂಗ್ಲೀಷ ಸಾಹಿತ್ಯ ಕಂಡ ಒಬ್ಬ ಶ್ರೇಷ್ಠ ನಿಸರ್ಗ ಕವಿಯೆನ್ನುವುದರಲ್ಲಿ

ಎರಡು ಮಾತಿಲ್ಲ. ಪ್ರಕೃತಿ ಅವನಿಗೆ ಕೇವಲ ಭೌತಿಕ ಪರಿಸರವಾಗಿರದೆ ದೇವನ ಇರುವಿಕೆಯ ತಾಣವಾಗಿತ್ತು. ನಿಸರ್ಗದ ಪ್ರತಿಯೊಂದು ವಸ್ತುವಿನಲ್ಲಿ ಆತ ಚೈತನ್ಯವನ್ನು ಕಂಡ. ಆಧ್ಯಾತ್ಮಿಕ ನೆಲೆಗಳನ್ನು ಅವನು ಅದರಲ್ಲಿ ಹುಡುಕಿದ. ಗಡಿಬಿಡಿಯ ಮನೋಭಾವ, ಯಾಂತ್ರೀಕೃತ ಬದುಕು, ಉಸಿರುಗಟ್ಟಿಸುವ ನೀತಿನಿಯಮಗಳಿಂದ ರೋಸಿಹೋದ ವರ್ಡ್ಸ್‌ವರ್ಥ್ ನಿಸರ್ಗದಲ್ಲಿ ನೆಮ್ಮದಿ ಅರಸುತ್ತಾನೆ. ಮನುಷ್ಯ ಮನುಷ್ಯನನ್ನು ಪ್ರೀತಿಸುವುದಕ್ಕೆ ಪ್ರಕೃತಿ ಪಾಠ ಹೇಳಿಕೊಡುತ್ತದೆಯೆಂದು ಅವನು ನಂಬಿದ್ದ. ಶೇಕ್ಸ್‌ಪೀಯರ್‌ನಲ್ಲಿ ಸಾಂದರ್ಭಿಕವಾಗಿ ಒಮ್ಮೊಮ್ಮೆ ಬರುವಂತೆ and this our life, exempt from public haunt finds tongues in trees, books in the running brooks, sermons in stones, and good in everything.'[೩೯]

ನಿಸರ್ಗ ಕೆಡುಕನ್ನು ದೂರ ಮಾಡಿ ಒಳ್ಳೆಯದನ್ನು ದಯಪಾಲಿಸುವ ಶಕ್ತಿ ಹೊಂದಿದೆಯೆಂದು ವರ್ಡ್ಸ್‌ವರ್ಥ್ ಭಾವಿಸಿದ್ದ. ಹಾಗಾಗಿ ಆತ ಹೇಳುತ್ತಾನೆ; Nature never did it betray the heart that loved her.'[೪೦] ಮನುಷ್ಯರೆ ನಿಸರ್ಗಕ್ಕೆ ಕೇಡನ್ನು ಉಂಟು ಮಾಡಿದ್ದಾರೆಯೆ ಹೊರತು ನಿಸರ್ಗ ಮನುಷ್ಯನಿಗೆ ಎಂದಿಗೂ ಕೇಡು ಬಯಸಿಲ್ಲ. ಅದರ ಪೋಷಕ ಗುಣಕ್ಕೆ ಮನುಷ್ಯ ಕೃತಘ್ನನಾದ ಉದಾಹರಣೆಗಳು ಇವೆಯೆ ಹೊರತು ಪ್ರೀತಿಸಿದ ಹೃದಯಗಳನ್ನು ಪ್ರಕೃತಿ ಪ್ರೀತಿಯಿಂದ ಪೋಷಿಸಿದೆ. ಪ್ರಕೃತಿಯಿಂದ ಕಲಿತ ಮೇಲೆ ಬದುಕಿನ ಬೇರೆ ಪಾಠ ಬೇಕಾಗಿಲ್ಲ.

'One impulse from a vernal wood
may teach you more of man;
of moral evil and of good,
than all the sages can'[೪೧]

ಆತನ ಕವಿತೆಯ ಸಾಲುಗಳ ಸಾರವನ್ನು ಹೀಗೆ ಕೊಡಬಹುದೆಂದು ತೋರುತ್ತದೆ :

ಮನುಷ್ಯ ಜೀವನವನ್ನರಿಯಲು
ವಸಂತ ಮಾಸದ ಚಿಗುರು ಸಾಕು
ಒಳಿತು ಕೆಡುಕಿನ ಕನ್ನಡಿ
ನಿಸರ್ಗದಲ್ಲಿರುವಾಗ
ಮುನಿಸಂತರ ಉಪದೇಶವೇಕೆ ಬೇಕು

ಮನುಷ್ಯ, ಪ್ರಕೃತಿ ಹಾಗೂ ಜಗವನ್ನು ನಿರ್ಮಿಸಿದ ಚೈತನ್ಯದ ನಡುವೆ ಅವಿನಾಭಾವ ಸಂಬಂಧವಿದೆಯೆಂದು ವರ್ಡ್ಸ್‌ವರ್ಥ್ ಭಾವಿಸಿದ್ದ:

'Whose dwelling is the light of setting suns,
And the round ocean and the living air

And the blue sky, and in themind of man:

A motion and a spirit, that implies

All thinking things, all objectis of all thought,

And rolls through all things"[೪೨]

ವರ್ಡ್ಸ್‌ವರ್ಥ್ ಪ್ರಕೃತಿಯನ್ನು ಗುರುವಿನಂತೆ ತಿಳಿದ. ಮಾನವನನ್ನು ಸೆಳೆಯುವ, ಅವನನ್ನು ಸಂತೈಸುವ, ಅವನಲ್ಲಿ ಆರ್ದ್ರ ಪ್ರೀತಿ ಹುಟ್ಟಿಸುವ, ವ್ಯಾಕುಲಗೊಂಡ ಮನಸ್ಸಿನ ಸಂತಾಪವನ್ನು ಶಮನ ಮಾಡುವ, ಮನುಷ್ಯತ್ವವನ್ನು ಬೋಧಿಸುವ ಶಕ್ತಿ ನಿಸರ್ಗದಲ್ಲಿದೆಯೆಂದು ವರ್ಡ್ಸ್‌ವರ್ಥ್ ಹೇಳಿದ. ಪ್ರಕೃತಿ ದೇವರ ತಾಣವಾಗಿದೆಯೆಂದ :

My heart leaps up when I behold

A rainbow in the sky;

So was it when my life began;

So it is now I am a man;

So be it when I shall grow old,

Or let me die!"[೪೩]

ವರ್ಡ್ಸ್‌ವರ್ಥ್ ಮತ್ತಿತರರು ಪ್ರತಿಪಾದಿಸಿದ ರೋಮ್ಯಾಂಟಿಕ್ ಚಿಂತನೆಗಳು ಬೇಂದ್ರೆ ಮತ್ತು ಸಮಕಾಲೀನ ಕವಿಗಳನ್ನು ಪ್ರಭಾವಿಸಿರುವುದರಲ್ಲಿ, ಪ್ರೇರಕವಾಗಿ ಕೆಲಸ ಮಾಡಿರುವಲ್ಲಿ ಎರಡು ಮಾತಿಲ್ಲ.

ಆದರೆ ಪ್ರಭಾವ ಹಾಗೂ ಪ್ರೇರಣೆಗಳನ್ನು ಯಾವ ರೀತಿ ಉಪಯೋಗಿಸಿಕೊಳ್ಳಲಾಯಿತೆಂಬುದು ಮುಖ್ಯ. ಬೇಂದ್ರೆಯವರಿಗೆ ವರ್ಡ್ಸ್‌ವರ್ಥ್‌ನಿಗಿಂತಲೂ ಕೀಟ್ಸ್, ಬೈರನ್, ಶೆಲ್ಲಿ, ಬ್ರೌನಿಂಗ್ ಮುಂತಾದ ಕವಿಗಳು ಹೆಚ್ಚು ಪ್ರಿಯರಾಗಿದ್ದರೆಂಬುದು ತಿಳಿದುಬರುತ್ತದೆ.

'Heard Melodies are sweet, but those unheard,

Are sweeter : therefore, ye soft pipers play on'[೪೪]

ಕೀಟ್ಸ್‌ನ ಕವಿತೆಯ ಈ ಸಾಲುಗಳು - ಬೇಂದ್ರೆಯವರಲ್ಲಿ ಈ ರೀತಿ ಕಾಣಿಸಿಕೊಳ್ಳುತ್ತವೆ :

ಅಂದ ಹಾಡಿನಿಂದಲೂ ಬಂದ ಹಾಡಿನ ಸೊಗಸು

ಬಂದ ಗಂಧಕ್ಕಿಂತ ಬರಲಿರುವ ಹೂಗಂಪು

ಅಂದವದು, ಚೆಂದವದು ಆನಂದ ಕಂದವದು

ಕಂದದದು ಕುಂದದೆಂದೂ[೪೫]

'ಚಂದ್ರ' ಕವಿತೆಗೆ ಸ್ಫೂರ್ತಿ ಕೀಟ್ಸ್‌ನ Endymion ಕವಿತೆಯಿಂದ ದೊರೆತಿರುವ ಸಾಧ್ಯತೆಯಿದೆ... 'ನಿದ್ರೆ' ಕವಿತೆಗೆ ಕೀಟ್ಸ್‌ನ 'Sleep and Poetry' ಸ್ಫೂರ್ತಿಯಿತ್ತಿರಬಹುದು.[೪೬]

Lyrical Ballads ಕಾವ್ಯಕೃತಿಯಲ್ಲಿನ ಮುನ್ನುಡಿಯಲ್ಲಿ ವರ್ಡ್ಸ್‌ವರ್ಥ್ ರೋಮ್ಯಾಂಟಿಕ್ ಕಾವ್ಯದ ಗೊತ್ತು-ಗುರಿಗಳನ್ನು ಹೇಳುತ್ತ ಈ ರೀತಿ ನುಡಿಯುತ್ತಾನೆ: "The principal object, then, proposed in these poems was to choose incidents and situations from common life, and to relate or describe them throughout, as far as possible, in a selection of language actually used by men, and at the same time, to throw over them a certain of colouring of imagination whereby ordinary things should be presented to the mind in an unusual aspect"[೪೭]

ಜನರಾಡುವ ಭಾಷೆಯಲ್ಲಿ ಸಾಮಾನ್ಯವೆನಿಸುವ ಘಟನೆಗಳನ್ನು ತುಸು ಕಲ್ಪನೆಯ ಲೇಪದೊಂದಿಗೆ ಕಾವ್ಯದಲ್ಲಿ ಅದ್ದಬೇಕೆಂಬ ವರ್ಡ್ಸ್‌ವರ್ಥ್‌ನ ಮಾತುಗಳು ರೋಮ್ಯಾಂಟಿಕ್ ಕಾವ್ಯಮಾರ್ಗದ ಅಭಿವ್ಯಕ್ತಿಗೆ ಹೊಸ ಹೊಸ ದಾರಿಗಳನ್ನು ಹುಡುಕಿತು. ಹಲವರಿಗೆ ಆ ಮಾತುಗಳು ಸ್ಫೂರ್ತಿಯಾದವು. ಇಂತಹ ಕಾವ್ಯತತ್ವ ಬೇಂದ್ರೆಯವರ ಮುಂದಿದ್ದ ಸಾಧ್ಯತೆಗಳನ್ನು ಕಾರ್ಯರೂಪಕ್ಕಿಳಿಸುವಲ್ಲಿ ಸಣ್ಣ ಎಳೆಯಾಗಿ ಪ್ರೇರಣೆ ಕೊಟ್ಟಿರಬಹುದು. ಉತ್ತರ ಕರ್ನಾಟಕದ ದೇಸಿ ಲಯಗಳನ್ನು ಹಿಂಜರಿಕೆಯಿಲ್ಲದೆ ಅಳವಡಿಸಿಕೊಳ್ಳಲು ಕನ್ನಡ ಪರಂಪರೆ ಮತ್ತು ಪಾಶ್ಚಾತ್ಯ ಓದಿನ ಪ್ರಭಾವಗಳು ಕೆಲಸ ಮಾಡಿರಬೇಕು. 'ಬೇಂದ್ರೆಯವರ ಕಾವ್ಯಶೈಲಿ ಜಾನಪದ ಕಾವ್ಯದಿಂದ, ಅನುಭವದ ಪದಗಳಿಂದ, ಪ್ರಾಚೀನರ ಕಾವ್ಯಗಳಿಂದ, ರವೀಂದ್ರರು, ಅರವಿಂದರು, ಅಲ್ಲದೆ ಅನೇಕ ಇಂಗ್ಲೀಷ್ ಕವಿಗಳಿಂದ ಶಕ್ತಿಗಳನ್ನು ಪಡೆದುಕೊಂಡು ಅವುಗಳನ್ನೆಲ್ಲ ಆಶ್ಚರ್ಯಕರವಾದ ರೀತಿಯಲ್ಲಿ ತನ್ನದನ್ನಾಗಿ ಮಾಡಿಕೊಂಡಿದೆ.'[೪೮]

ಇಂಗ್ಲೀಷ್ ಕಾವ್ಯದ ಪ್ರಭಾವದಿಂದಾಗಿಯೇ ಕುವೆಂಪು ಹಾಗೂ ಬೇಂದ್ರೆ ಅವರು ನಿಸರ್ಗವನ್ನು ಹೊಸ ದೃಷ್ಟಿಕೋನದಿಂದ ನೋಡುವುದು ಸಾಧ್ಯವಾಯಿತು. ಕೀಟ್ಸ್, ಬೈರನ್ ಕವಿತೆಗಳ ಸ್ಫೂರ್ತಿಯಿಂದ ಬೇಂದ್ರೆಯವರು ತಮ್ಮ ಕಾವ್ಯದಲ್ಲಿ ತೀಕ್ಷ್ಣತೆಯನ್ನು, ರೂಪಕ ಹುಟ್ಟು ಹಾಕುವ ಪ್ರತಿಭೆಯನ್ನು, ಸಂಪ್ರದಾಯಕ್ಕೆ ಆಧುನಿಕತೆ ಬೆಸೆಯುವ ಕಲೆಗಾರಿಕೆಯನ್ನು ತಂದುಕೊಂಡರು. ಕಾವ್ಯದಲ್ಲಿ ಅಲಂಕರವಾಗಿ ಬರುತ್ತಿದ್ದ ನಿಸರ್ಗ ಈ ಕಾವ್ಯವಸ್ತುವಿನಿಂದ ಸಮೃದ್ಧಗೊಳ್ಳತೊಡಗಿತು. ತನ್ನ ಕರುಣ, ರುದ್ರ ರಸಗಳನ್ನು ತೆರೆದಿಡತೊಡಗಿತು. ಬೇಂದ್ರೆಯಲ್ಲಿ ಪ್ರಕೃತಿ ಕಾಲಾನುಕ್ರಮದಲ್ಲಿ ಬೆಳೆಯುತ್ತ ಹೋಗುವುದಕ್ಕೆ, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪ್ರಕೃತಿ ಕಾವ್ಯವಸ್ತುವಿನಲ್ಲಿ ಸೇರಿಕೊಳ್ಳುತ್ತ ಹೋಗುವುದಕ್ಕೆ ಪಾಶ್ಚಾತ್ಯ ಕಾವ್ಯದ ಅಭ್ಯಾಸ ನೆರವಾಗಿದೆ. ಪ್ರೇಮ, ಮಾರ್ದವತೆ, ನಿಗೂಢತೆಯಂತಹ ಅಂಶಗಳು ಬೆಳೆದು ಬರಲಿಕ್ಕೆ ಕಾರಣವಾಗಿವೆ.

ಸುಖದ ಹಿಂದೆ ದುಃಖವು ಬೆನ್ನಾಗಿರುವ, ನಲಿವಿನ ಒಂದು ಕಿರಣಕ್ಕೆ ನೋವಿನ ದಟ್ಟ ಕಾರ್ಮೋಡ ದೂರ ಸರಿಯುವ ಅಚ್ಚರಿಗಳನ್ನು ಬೇಂದ್ರೆಯವರು ಜಾನ್ ಕೀಟ್ಸ್‌ನ ಕಾವ್ಯದಲ್ಲಿ ಕಂಡುಕೊಂಡರೆದು ಕಾಣುತ್ತದೆ. ಲೌಕಿಕ

ಸುಖವನ್ನು ಕೀಟ್ಸ್ ತನ್ನ ಕಾವ್ಯದಲ್ಲಿ ಇನ್ನಿಲ್ಲದಂತೆ ಮೆರೆಸುತ್ತಾನೆ. ಬದುಕಿನ ಯಾತನೆ, ವಿಷಾದಗಳು ಕೂಡ ಅವನಲ್ಲಿ ಮಡುಗಟ್ಟಿ ನಿಲ್ಲುತ್ತವೆ. ಮನುಷ್ಯನ ಅಮರತ್ವದ ಹಂಬಲವನ್ನು, ಜೀವನದ ಸತ್ಯ-ಮಿಥ್ಯೆಗಳನ್ನು ಕೀಟ್ಸ್‌ನ 'Ode to a Nightingale', 'Ode on a Gracian Urn', 'To Autumn', 'To Psyche' ಮುಂತಾದ ಪ್ರಗಾಥ(Ode) ಗಳು ಸಮರ್ಥವಾಗಿ ಹೇಳಬಲ್ಲವಾಗಿವೆ. ಅವನ 'Ode to a Nightingale' ಕವಿತೆಯಂತೂ ಲೋಕಪ್ರಸಿದ್ಧವಾದುದು. ತಾರುಣ್ಯದಲ್ಲಿಯೆ ಅಂತಹ ಪ್ರಬುದ್ಧ ಕಾವ್ಯವನ್ನು ಬರೆದ ಕೀಟ್ಸ್ ಇಂಗ್ಲೀಷ್ ಕಾವ್ಯಕ್ಕೆ ತನ್ನದೆ ಆದ ಸಂವೇದನಾಶೀಲತೆಯನ್ನು, ರಮ್ಯ ಹಾಗೂ ಗಾಢ ವಿಷಾದದ ನೆಲೆಯನ್ನು ಸೇರಿಸಿದ.

'My heart aches, and a drowsy numbness pains
My sense, as though of hemlock I had drunk'[೪೯]

ಕಷ್ಟಗಳ ಸುರಿಮಳೆ ಕೀಟ್ಸ್‌ನನ್ನು ಕಹಿ ಕಡಲಿನಲ್ಲಿ ಮುಳುಗುವಂತೆ ಮಾಡುವುದಿಲ್ಲ. ಅದನ್ನು ಆತ ತುಂಬ ಶಾಂತಚಿತ್ತನಾಗಿಯೆ ನುಂಗುತ್ತಾನೆ. ವಿಷದ ಬಟ್ಟಲು ಘೋರವಾಗಿಲ್ಲ. ಬದಲಾಗಿ ಮೈಯಿಗೆ ಶೀತಲವಾಗಿದೆ. ಮನಸ್ಸಿಗೆ ಶಾಂತಿಪ್ರದವಾಗಿದೆ.

'Where youth grows pale, and spectre-thin, and dies
Where but to think is to be full of sorrow
And leaden-eyed despairs;
Where Beauty cannot keep her lustrous eyes,
Or new Love pine at them beyond tommorrow'[೫೦]

ನಾಶವಾಗಬಹುದಾದ ಸಂಗತಿಗಳನ್ನು ಹೇಳುತ್ತಲೆ ಕೋಗಿಲೆಯ ಅಮರವಾದ ಹಾಡಿನತ್ತ ಕೀಟ್ಸ್ ಲಕ್ಷ್ಯ ಹರಿಸುತ್ತಾನೆ. ಕೆಡುಕು ಅರಿಯದ, ಸಾವು ಇರದ, ಯಾವಾಗಲೂ ಮುದ ನೀಡುವ, ಮನುಷ್ಯನಿಗೆ ಮಾನವೀಯತೆಯ ಪಾಠ ಕಲಿಸುವ ಕನಸಿನ ಕಡೆಗೆ ಕೀಟ್ಸ್ ಮುಖ ಮಾಡಿದ್ದರೂ ಮಾನವೀಯತೆ ಅನುಭವಿಸಬೇಕಾಗಿ ಬಂದ ದುಃಖದ ಕಡೆಗೆಯೇ ಆತ ಸಹಜವಾಗಿ ವಾಲುತ್ತಾನೆ. ಬಾನಿನತ್ತ ಮುಖ ಮಾಡಿಯೂ ನೆಲದ ಬೇರುಗಳಿಗೆ ಗಟ್ಟಿಯಾಗಿ ಅಂಟಿಕೊಂಡಿರುವ ಕವಿಯಾಗಿ ಕೀಟ್ಸ್ ಪ್ರಾಮುಖ್ಯತೆ ಪಡೆಯುತ್ತಾನೆ. ಜೊತೆಯಿರುವವರು ಒಮ್ಮಿಂದೊಮ್ಮೆಲೆ ಸತ್ತು ಹೋದಾಗ; ದುಃಖದ ಬಂಡಿಯಲ್ಲಿಯೆ ಸದಾ ಪ್ರಯಾಣಿಸಬೇಕಾದಾಗ ಮನುಷ್ಯ ಪಡೆಯುವ ನೋವುಗಳು ಕೀಟ್ಸ್‌ನ ಕಾವ್ಯದಲ್ಲಿ ಶಕ್ತ ಅಭಿವ್ಯಕ್ತಿ ಪಡೆಯುತ್ತವೆ. ಬದುಕಿನ ಸಂಘರ್ಷಗಳು ಅನಾವರಣಗೊಳ್ಳುತ್ತವೆ. ಗ್ರೀಕ್ ಪುರಾಣ ಮತ್ತು ದಂತಕತೆಗಳನ್ನು ಉಪಯೋಗಿಸಿಯೂ ಆತ ನೆಲದ ಕವಿಯಾಗಿ ಉಳಿದುಕೊಳ್ಳುತ್ತಾನೆ. ಕೀಟ್ಸ್‌ನ ಸಹೋದರ ೧೯ ವರ್ಷದ ಟಾಮ್ ಕೀಟ್ಸ್ ಟಿ.ಬಿ. ರೋಗದಿಂದ ಬಳಲಿ ಸತ್ತುದು 'Where youth grows pale, and spectrethin and dies'[೫೧] ಎನ್ನುವಲ್ಲಿ ದುಃಖವಾಗಿ ನಿಂತಿದೆ. ವಾಸ್ತವಕ್ಕೂ, ಕನಸಿಗೂ ಇರುವ ಅಂತರ ಕವಿಯನ್ನು ಬೆಚ್ಚಿ ಬೀಳಿಸಿದೆ.

ಅಮರಗೀತೆ ಹಾಡುತ್ತಿರುವ ಹಕ್ಕಿಗೆ ಆತ ವಿದಾಯ ಹೇಳುತ್ತಿದ್ದಾನೆ. ಆದರೆ ಕೊನೆಗೆ ಹಕ್ಕಿ ಮರೆಯಾದರೂ ಅದು ಹಾಡಿದ ಹಾಡು ಮರೆಯಾಗಿಲ್ಲ. ಹಕ್ಕಿ ಹಾಡುವ ಲೋಕ ಕವಿಯ ಕನಸೂ ಆಗಿರಬಹುದು. ಆ ಕನಸಿನಿಂದ ಕವಿ ಈಗ ಎಚ್ಚೆತ್ತುಕೊಂಡಿದ್ದಾನೆ :

> 'Was it a vision, or a waking dream?
>
> Fled is that music... Do I wake or sleep?'[೫೧]

ರಮ್ಯವಾದ, ಅಮರವಾದ, ಶಾಶ್ವತ ಸುಖ ನೀಡುವಂತೆ ಕೇಳಿ ಬರುವ ಹಕ್ಕಿಯ ಹಾಡಿನಂದಾವೃತವಾದ ಕನಸು ಸತ್ಯವೊ ಅಥವಾ ಮುಖಕ್ಕೆ ರಾಚುತ್ತಿರುವ ದಿನನಿತ್ಯದ ನೋವಿನ ಬದುಕು ಸತ್ಯವೊ ಎಂಬ ದಿಗಿಲಿನಲ್ಲಿ ಕೀಟ್ಸ್ ಕನಸು-ವಾಸ್ತವಗಳೆರಡನ್ನೂ ಬೆಸೆಯುತ್ತಾನೆ. ಹೊಸ ಸತ್ಯದ ಕಡೆಗೆ ಮುಖ ಮಾಡುತ್ತಾನೆ. ರೋಮ್ಯಾಂಟಿಕ್ ಕಾವ್ಯ ಕಂಡ ಕನಸುಗಳು ದುಃಸ್ವಪ್ನಗಳಾಗಿ ಹೋದ ದುರಂತವನ್ನು ಕೂಡ ಆತ ಚಿತ್ರಿಸುತ್ತಾನೆ.

ಕೀಟ್ಸ್‌ನ 'Ode to a Nightingale' ಕವಿತೆಯನ್ನು ಸ್ವಲ್ಪ ದೀರ್ಘವಾಗಿ ಚರ್ಚಿಸಿರುವ ಉದ್ದೇಶವೆಂದರೆ ಅದು ಬೇಂದ್ರೆಯವರಿಗೆ ಬಹಳಷ್ಟು ಪ್ರೇರಣೆಗಳನ್ನು ನೀಡಿರುವ ಕಾರಣದಿಂದಲೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಬೇಂದ್ರೆಯವರ ಮೊಟ್ಟಮೊದಲ ದೀರ್ಘ ಕವಿತೆ 'ಕೋಗಿಲೆಗೆ' ಕೀಟ್ಸ್‌ನ ನೈಟಿಂಗೇಲ್ ಪ್ರಭಾವ ಬೀರಿರುವುದನ್ನು ಹಲವು ವಿಮರ್ಶಕರು ಈಗಾಗಲೆ ಗುರುತಿಸಿದ್ದಾರೆ. "Eadgar Allen Poe'ನ 'The Raven' ಕೇಶವಸುತರ 'ಘೂಬಡ' ಹಾಗೂ ಕೀಟ್ಸ್‌ನ 'Ode to a Nightingale' ಕವಿತೆಗಳ ಪ್ರಭಾವ 'ಕೋಗಿಲೆಗೆ' ಕವಿತೆಯಲ್ಲಿ ಕಂಡುಬರುವುದಾದರೂ ಇದೊಂದು ಪ್ರೇಮಗೀತೆ ಎಂದು ಜಿ.ಎಸ್. ಆಮೂರ ವಿವರಿಸುತ್ತಾರೆ.''[೫೨] ಇಂಗ್ಲೀಷ್ ರೋಮ್ಯಾಂಟಿಕ್ ಕಾವ್ಯ ಬೇಂದ್ರೆಯವರಿಗೆ ಹೊಸ ಹೊಳಹುಗಳನ್ನು ಕೊಟ್ಟಿರುವುದರಲ್ಲಿ ಅನುಮಾನಗಳಿಲ್ಲ. ಕೀಟ್ಸ್‌ನ ವೈಯಕ್ತಿಕ ದುಃಖ ವಿಷಾದಗಳು ಅವನ ಕಾವ್ಯದಲ್ಲಿ ಬೆರೆತುಕೊಂಡಿವೆ. ಹಾಗೆಯೇ ಬೇಂದ್ರೆಯವರು ಕೂಡ ತಾವು ಅನುಭವಿಸಿದ ದುಃಖವನ್ನು ಅಪ್ಪಟ ಕಾವ್ಯವಾಗಿಸಿದರು. ಪುರಾಣ, ದಂತಕಥೆಗಳನ್ನು ಕೀಟ್ಸ್ ಕಾವ್ಯದಲ್ಲಿ ಹೆಣೆಯುವ ರೀತಿ, ಆತನ ಭಾಷಾ ಪ್ರೌಢಿಮೆ, ಅಭಿವ್ಯಕ್ತಿಯ ಕ್ರಮ ಬೇಂದ್ರೆಯವರಿಗೆ ಇಷ್ಟವಾದ ಸಂಗತಿಗಳಾಗಿದ್ದವು. ಅವರು ಕಾಲೇಜು ಕಟ್ಟೆ ಹತ್ತಿದಾಗ ಪಾಶ್ಚಾತ್ಯ ಸಾಹಿತ್ಯ ಅವರಿಗೆ ಬಲು ಪ್ರಿಯವಾಗಿತ್ತು. 'ಕೀಟ್ಸ್, ಶೆಲ್ಲಿಗಳು ಹೃದಯ ಹೊಕ್ಕದ್ದು ಅಲ್ಲಿ. ಅವರ ಚಿತ್ರಗಳನ್ನು ನನ್ನ ಡಾಯರಿಯಲ್ಲಿಟ್ಟು, ಡಾಯರಿಯನ್ನು ಒಳಜೇಬಿನಲ್ಲಿಟ್ಟು, ಕೀಟ್ಸ್‌ನನ್ನು ಹೃದಯಗತ ಮಾಡಿಕೊಳ್ಳುವ ತಂತ್ರ ಮಾಡಿದೆ.'[೫೩] ಮರಾಠಿಯ ಕೀಟ್ಸ್ ಎಂದೇ ಹೆಸರಾದ ಕೇಶವಸುತರು ಕೂಡ ಬೇಂದ್ರೆಯವರ ಮೇಲೆ ಮೊದಮೊದಲು ಪ್ರಭಾವ ಬೀರಿದರು. ಕೇಶವಸುತರ ಪರಮ ಶಿಷ್ಯರಾಗಿದ್ದ ಗೋವಿಂದಾಗ್ರಜರು ಕೂಡ ಬೇಂದ್ರೆಯವರಿಗೆ ಹತ್ತಿರದವರಾಗಿ ಸಾಹಿತ್ಯಿಕ ಓದಿನ ಪ್ರಭಾವ ಬೀರುತ್ತಿದ್ದರು. ಅಂದರೆ ಬೇಂದ್ರೆಯವರಿಗೆ ಕೀಟ್ಸ್ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಪ್ರಭಾವ ಬೀರಬಲ್ಲ ಕವಿಯಾಗಿದ್ದ. 'To Autumn', 'Endymion', 'Ode on a Gracian Urn', 'Sleep and Poetry' ಮುಂತಾದ ಕವಿತೆಗಳು ಬೇಂದ್ರೆಯವರಲ್ಲಿ

ಅಚ್ಚಳಿಯದೆ ನಿಂತವು. ಕೀಟ್ಸ್ ನ ೮೦ ಸಾಲುಗಳ 'Ode to a Nightingale' ಕವಿತೆ ಬೇಂದ್ರೆಯವರನ್ನು ಬಹುವಾಗಿ ಕಾಡಿದ ಕವಿತೆಯೆಂದು ಹೇಳಬಹುದು. ಅವರ 'ಕೋಗಿಲೆಗೆ' ಕವನಕ್ಕೆ ಪ್ರೇರಕವಾದಂತೆ ಭಯಾನಕತೆ, ಪ್ರೇಮ ಮತ್ತು ಗಾಢ ವಿಷಾದಗಳನ್ನು ಅಭಿವ್ಯಕ್ತಿಸುವ ಹಲವು ಕವಿತೆಗಳಿಗೆ ಭೂಮಿಕೆಯನ್ನು ನಿರ್ಮಿಸಲು ಅದು ಪ್ರೇರಣೆ ಕೊಟ್ಟಿರುವ ಸಾಧ್ಯತೆಯಿದೆ.

ಬೇಂದ್ರೆಯವರಿಗೆ ಬರೀ ಕೀಟ್ಸ್ ಅಷ್ಟೆ ಅಲ್ಲ ಶೆಲ್ಲಿ, ಬೈರನ್, ವರ್ಡ್ಸ್‌ವರ್ಥ್, ಎಮರ್ಸನ್, ವಾಲ್ಟ್ ವಿಟಮಿನ್ ಮುಂತಾದ ಕವಿಗಳೂ ಪ್ರೇರಣೆ ನೀಡಿದರು. 'ಇಂಗ್ಲೀಷ್-ಸಂಸ್ಕೃತದ ಸಂಮಿಶ್ರ ಪ್ರಭಾವ, ಶ್ರೀ ಅರವಿಂದರ ಸ್ಪರ್ಶ, ಓಟೋವೆನಿಂಗಾರ್ (ಜರ್ಮನ್ ಪ್ರತಿಭಾವಂತ) ಸ್ಕಾಟ್ ಜೇಮ್ಸ್'[೫೫] ಮುಂತಾದವರ ಪ್ರಭಾವ ತಮ್ಮ ಮೇಲೆ ಆಯಿತೆಂದು ಬೇಂದ್ರೆಯವರೇ ಬರೆದಿದ್ದಾರೆ. ಕೀಟ್ಸ್‌ನ ಪರಂಪರೆ ಬೇರೆ, ಬೇಂದ್ರೆಯವರ ಪರಂಪರೆ ಬೇರೆ. ಆದರೆ ಕೀಟ್ಸ್‌ನ ಪ್ರತಿಭೆಯ ಮಿಂಚೊಂದನ್ನು ದೇಸಿಯ ಹಿನ್ನೆಲೆಯಲ್ಲಿ ಅಳವಡಿಸಿಕೊಳ್ಳುವ ಪ್ರತಿಭೆ ಬೇಂದ್ರೆಯವರಿಗೆ ಇತ್ತು. ಕೀಟ್ಸ್‌ನ ನೈಟಿಂಗಲ್ ಜೊತೆಗೆ ನಿಜಗುಣ ಶಿವಯೋಗಿಗಳ ಚೆಲ್ವ ಕೋಗಿಲೆಯನ್ನು ಬೆರೆಸುವ ಕಲೆಗಾರಿಕೆಯನ್ನು ಅವರು ಸಾಧಿಸಿಕೊಂಡರು. ಕೀಟ್ಸ್‌ನ 'ನೈಟಿಂಗೇಲ್' ತನ್ನ ಹಾಡಿನಿಂದ ನೆಮ್ಮದಿಯನ್ನೂ, ಭಯವನ್ನೂ ಉಂಟು ಮಾಡುತ್ತದೆ. ಅಮರತೆಯನ್ನು ಹುಟ್ಟಿಸುತ್ತದೆ. ಸುಖ -ಗೊಂದಲಗಳನ್ನು ಸೃಷ್ಟಿಸುತ್ತದೆ. ಬೇಂದ್ರೆಯವರ 'ಜೋಗಿ'ಯಲ್ಲಿ ಲೌಕಿಕದ ಭಯಾನಕತೆ ಹಾಗೂ ಅಲೌಕಿಕತೆಯ ವರ್ಣಿಸಲಾಗದ ನೆಮ್ಮದಿಗಳ ವಿಸ್ಮಯಕಾರಕ ಬೆಸುಗೆಯಿದೆ.

೪.೯ 'ಹೃದಯಾರವಿಂದವು ಅರಳುತಿದೆ' :

ಬೇಂದ್ರೆಯವರು ಭಾರತದ ಹಾಗೂ ಪಾಶ್ಚಾತ್ಯ ಕವಿಗಳಿಂದ ಚಿಂತನೆಗಳಿಂದ ಪ್ರೇರಣೆಗಳನ್ನು ಪಡೆದುಕೊಂಡು ಅವುಗಳನ್ನು ಕನ್ನಡದ ಮಣ್ಣಿನಲ್ಲಿ ಸೋಸಿದರು. ಕವಿಯಾದವನು ವಿಶ್ವರೂಪದ ದಾರ್ಶನಿಕತೆಯನ್ನು ಮೈಗೂಡಿಸಿಕೊಳ್ಳಬೇಕೆಂಬುದು ಅವರ ನಿಲುವಾಗಿತ್ತು. ಅವರ ನಿಸರ್ಗ ಕವಿತೆಯೆ ಇರಲಿ ಅಥವಾ ಗಹನ ತಾತ್ವಿಕತೆಯನ್ನು ಹೊತ್ತ ಲೋಕಸಂಗತಿಯೆ ಇರಲಿ ಅದು ಆನಂದವನ್ನು ಒಳಗೊಂಡಿರಬೇಕೆಂದು ಬೇಂದ್ರೆ ನಂಬಿದ್ದರು. ಬಾಳಿನ ಅನುಭವವನ್ನು ಹೇಳುತ್ತಲೆ ಜ್ಯೋತಿಪಥದತ್ತ ಮುನ್ನಡೆಯಬೇಕೆಂದು ಆಶಿಸಿದರು. ಆಧ್ಯಾತ್ಮ ಚಿಂತನೆಯ ಭಾಗವಾಗಿ ಅಂತಹ ವಿಚಾರಗಳು ಅವರ ಕಾವ್ಯಕ್ಕೆ ದರ್ಶನದ ಮುಖ ಒದಗಿಸಿದವು. 'ಸ್ವಾಮಿ ರಾಮದಾಸರ 'ದಾಸಬೋಧ', ಇಮರ್ಸನ್‌ನ ಪ್ರಬಂಧಗಳು, ಶ್ರೀ ಅರವಿಂದರ ಉಕ್ತಿ ಸ್ಪರ್ಶ ಇವು ನನ್ನ ಬುದ್ಧಿಗೆ ಒಂದು ನೆಲೆಯನ್ನೂ ಭಾವಕ್ಕೆ ಒಂದು ಮಾರ್ಗವನ್ನೂ ಅದರದೇ ಆದ ದೇಸಿಯನ್ನು ಸೂಚಿಸಿದ್ದರೂ, ಈ ಬುದ್ಧಿ-ಭಾವಗಳ ಸಮರಸಯುಕ್ತಿಯ ಸಂಧಾನಕ್ಕೆ ನನ್ನ ಕಾವ್ಯದ ರಚನೆ ಪರಿಶೀಲನೆಯಷ್ಟೇ, ಆಯರಿಷ್ ಕವಿ 'ಎ.ಈ.', ಬೆಲ್ಜಿಯಮ್‌ನ ಫ್ರೆಂಚ್ ಪ್ರಬಂಧಕಾರ ಮಾರೀಸ್ ಮೆಟರ್‌ಲಿಂಕ್, ಅಮೆರಿಕೆಯ ನಾಗರಿಕನಾಗಿ ನೆಲೆಸಿದ ಪ್ರವಾದಿ ಖಲೀಲ್ ಜಿಬ್ರಾನ್, ಭರತ ಮಾತೆಯ ಸುಪುತ್ರರಾಗಿಯೂ ಭೂಮಂಡಲದಲ್ಲಲೆದಾಡುತ್ತಿರುವ ಸಂವಾದಿ ಸಖ ಜೆ. ಕೃಷ್ಣಮೂರ್ತಿ

ಮೊದಲಾದವರ ಗ್ರಂಥಾವಗಾಹನ ಮಾಡುತ್ತಿರುವುದು ನನ್ನ ವ್ಯಸನವಾಗಿ ಬಿಟ್ಟಿತು'[೫೬] ಎಂದು ಬೇಂದ್ರೆಯವರು ಹೇಳುವಲ್ಲಿ ಪೂರ್ವ-ಪಶ್ಚಿಮಗಳ ಸಾಹಿತ್ಯದ ಅದರಲ್ಲೂ ವಿಶ್ವಾತ್ಮಕತೆ ಹಾಗೂ ಅನುಭಾವದ ಗುಣಗಳಿದ್ದ ರಚನೆಗಳಿಗೆ ಅವರು ಮಾರು ಹೋಗಿದ್ದುದು ತಿಳಿಯುತ್ತದೆ. 'ಕನ್ನಡ ಸಾಹಿತ್ಯದೊಡನೆ ಆಂಗ್ಲ ಭಾಷೆಯಲ್ಲಿ ಬರುವ ನನ್ನ ರುಚಿಯ ಸಾಹಿತ್ಯ, ಸಂಸ್ಕೃತದ ಪೂರ್ವಾಪರ ಸಾಹಿತ್ಯ, ಇವು ಮುಪ್ಪುರಿಗೊಂಡವು.'[೫೭] ಅವರು ತಮ್ಮ 'ರುಚಿ' ಎನ್ನುವುದನ್ನು ಇಲ್ಲಿ ಗಮನಿಸಬೇಕು. ಅದು ಭಕ್ತಿ, ಅನುಭಾವದ ರುಚಿ. ಆಧ್ಯಾತ್ಮಿಕ ಸಂಗತಿಗಳಿಗೆ ಮನಸ್ಸು ಸೋಲುತ್ತಿದ್ದ ರುಚಿ. 'ಉಪನಿಷದ್ರಹಸ್ಯ' ನಿಮಿತ್ತದಿಂದಾದ ಮನನವು ಮಹಾರಾಷ್ಟ್ರೀಯ ಸಂತರ ಅನುಭಾವವಾದಕ್ಕೂ ಹಾದಿ ತೆರೆದು ಕನ್ನಡದ ಅನುಭಾವಿಗಳ ನೆಲೆಬಾಳನ್ನು ಅರಿತುಕೊಳ್ಳಲು ಅಣಿಯಾಯಿತು.'[೫೮] ರವೀಂದ್ರನಾಥ ಟ್ಯಾಗೋರ್, ಅರವಿಂದರು, ರಮಣ ಮಹರ್ಷಿ, ರಮಣರ ಶಿಷ್ಯರಾದ ಶ್ರೀ ಗುಳವಣಿ ಮಹಾರಾಜ, ಪ್ರಭಾಕರ ಮಹಾರಾಜ ಟೇಂಬೆ ಮುಂತಾದವರ ಮಾರ್ಗದೊಡನೆ ಕನ್ನಡದ ತತ್ವಪದಕಾರರ, ಭಕ್ತಿಕವಿಗಳ, ಜನಪದ ಮೂಲದ, ಶರೀಫರ ಮಾದರಿಗಳು ಬೇಂದ್ರೆಯವರನ್ನು ಆಕರ್ಷಿಸಿದವು. 'ಸೋsಹಂ; ದಾಸೋsಹಂಗಳ ಮಧ್ಯೆ ರಸೋsಹಂ- ಮಾರ್ಗ ಇದು. ಆಲಯವಾದ ಬಯಲವಾದ ಇವೆರಡೂ ದೃಷ್ಟಿವಾದದ ಕವಲು. ದೃಷ್ಟಿವಿಶೇಷಕ್ಕೆ ಬುದ್ಧಿವಿಶೇಷವು ಕಾರಣ. ಈ ದೃಷ್ಟಿ-ಬುದ್ಧಿಗಳನ್ನು ನಿನ್ನೊಳಗೂ ಹರಿಯೇ, ನಿನ್ನೊಳಗೊ ಹರನೇ ಎಂದು ಹರಿಹರರ ಸಂಗಮ ಸಾಮರಸ್ಯ ಕಾಣಬೇಕೆಂಬುದು 'ಅಂ-ದತ್ತ'ನ 'ಪುಂಡರೀಕ-ವಿಠ್ಠಲ' ನಿಲವು.'[೫೯]

ಇಂತಹ ಸಾಮರಸ್ಯವನ್ನು ಸ್ವತಃ ಕಾಣಲು ಮತ್ತು ಸಹೃದಯರಿಗೆ ಅದನ್ನು ದೊರಕಿಸಲು ಬೇಂದ್ರೆಯವರು ತಮ್ಮ ಕಾವ್ಯವನ್ನು ಮಾಧ್ಯಮವಾಗಿಸಿಕೊಂಡರು. ನಿಸರ್ಗದ ಭಾಷೆ ಅವರ ಅಭಿವ್ಯಕ್ತಿಯನ್ನು ಮತ್ತಷ್ಟು ಸಶಕ್ತವಾಗಿಸಿತು;

ಹರಹರಿ ಶ್ರಾವಣಕ ಬಂದೀs । ಶ್ರುತಿ ತಂದಿss
ಹರಿಹರಿ ಶ್ರಾವಣಕ ಬಂದಿs । ಕೃತಿ ತಂದಿss
ನೀವು ತಂದೀ-ತಾಯೀ ನಮಗs
ಕಂದನು ನಾ ನಿಮಗs[೬೦]

ಅಂಧಕಾರ ಕಳೆದು, ಹರಿ-ಹರರು ಒಂದಾಗಿ, ಮೈತ್ರಿಯ ಭಾವ ಮೂಡಿ, ಮಾರ್ಗ-ದೇಸಿಗಳು ಕೂಡಿಕೊಂಡು ಆನಂದದ ರಸೋತ್ಕರ್ಷ ತನ್ನ ಕಾವ್ಯದಲ್ಲಿ ಮೈತಾಳಿ ಬರಲೆಂದು ಕವಿ ಅಪೇಕ್ಷಿಸುತ್ತಾರೆ. ಶ್ರಾವಣದಲ್ಲಂತೂ ಅವರ ಆಸೆ ಉನ್ಮತ್ತತೆಯಿಂದ ಹೆಡೆ ಎತ್ತುತ್ತದೆ. ಗುಡ್ಡಗುಡ್ಡಕ್ಕೆ ನವಿಲು ಕೇಕೆ ಹಾಕುತ್ತದೆ.

ಭಕ್ತಿ-ಅನುಭಾವದ ಮೋಹವನ್ನು ಬೇಂದ್ರೆ ಹಾಗೂ ಅವರ ಗೆಳೆಯರ ಗುಂಪು ಗಾಢವಾಗಿ ಹಚ್ಚಿಕೊಂಡಿದ್ದರು. ಜೇಮ್ಸ್ ಕಝಿನ್ಸ್‌ರ 'New ways in English Literature', ಎ.ಇ.ಯವರ 'Candle of Vision'(ದೃಷ್ಟಾಂತ ದೀಪಿಕಾ) 'Avataras Interpreters, Voices of Stones, National Being' ಮುಂತಾದ ಕೃತಿಗಳು, ಖಲೀಲ್ ಜಿಬ್ರಾನ್‌ನ ವಚನ, ಅರವಿಂದರ 'Future Poetry', 'Savitri' (ಸಾವಿತ್ರಿ), ರವೀಂದ್ರರ ಕಾವ್ಯ,

ನಾಟಕಗಳು, ಸಂಸ್ಕೃತ ಸಾಹಿತ್ಯ, ವೇದ, ಉಪನಿಷತ್ ಮುಂತಾದ ಜ್ಯೋತಿಯ ಗಣಿಗಳಿಂದ ಬೇಂದ್ರೆ, ಮಧುರಚೆನ್ನ, ವಿ.ಕೃ.ಗೋಕಾಕ, ಚಿದಂಬರ ಸಗರ ಹೇಳಿದಂತೆ ಅನುಭಾವದ ಬಾನಿನಲ್ಲಿ ತಮ್ಮ ರೆಕ್ಕೆ ಹಾಸಲು ಸಿದ್ಧರಾಗುತ್ತಿದ್ದರು. ಭರತಮುನಿ, ಕಾಳಿದಾಸ, ಅಭಿನವಗುಪ್ತ, ಭರತೇಶ, ಶ್ರೀಕೃಷ್ಣ, ಅಲ್ಲಮಪ್ರಭು ಮುಂತಾದ ಭಾರತೀಯ ದಾರ್ಶನಿಕರು, ದೈವಾಂಶಸಂಭೂತರು ವಿಶ್ವರೂಪಕದ, ವಿಶ್ವಭಾತೃತ್ವದ, ಅಪಾರ ಕಾರುಣ್ಯದ, ಜ್ಯೋತಿಪಥದ ಮಾರ್ಗವನ್ನು ಬೇಂದ್ರೆ ಹಾಗೂ ಗೆಳೆಯರಿಗೆ ಕರುಣಿಸಿದರು. ಐರಿಷ್ ಕವಿ ಜಾರ್ಜ್ ರಸೆಲ್ (ಎ.ಇ.)ಅವರ 'Candle of Vision' (ದೃಷ್ಟಾಂತ ದೀಪಿಕೆ) ಬೇಂದ್ರೆ ಸೇರಿದಂತೆ ಹಲವರಿಗೆ ಸ್ಫೂರ್ತಿಯ ಸೆಲೆಯಾಗಿತ್ತು. 'ಗೆಳೆಯ' ಎಂಬ ಹೆಸರಿನ ಅನುಭಾವದ ಆಶಯದ ಕೈಬರಹದ ಪತ್ರಿಕೆಯನ್ನು ಈ ಗೆಳೆಯರು ಆರಂಭಿಸಿದ್ದರು. ಮೂರೇ ಮೂರು ಸಂಚಿಕೆ ಬಂದು ಅದು ನಿಂತುಹೋಯಿತು. ಆದರೆ ಅದು ತೋರಿಸಿದ ಬೆಳಕು ಬದುಕಿನುದ್ದಕ್ಕೂ ಪ್ರಕಾಶಮಾನವಾಗಿ ಬೆಳಗುತ್ತಿತ್ತು. ಆ ಪತ್ರಿಕೆಗೆ ಬೆಳಕಿನ ಮೂಲಕ ಭಾವನೆ ಬರುವಂತೆ ಒಂದು ಸಾಂಕೇತಿಕ ಕುರುಹನ್ನು ಚಿತ್ರಿಸಿದ್ದರು. ಬೇಂದ್ರೆಯವರು ಹೇಳಿದ ಸಂಕೇತ ಅವರ ಭಾವವನ್ನು ಸೂಚಿಸುತ್ತಿತ್ತು. 'ತೇಜೋಮೇಘದ ಪುಂಜದೊಳಗಿಂದ ತೂರಿ ಮೂಡುವ ನಕ್ಷತ್ರ.'[೬೧]

ಬೆಳಕಿನ ಅಪಾರರಾಶಿ, ಗುರಿಯ ತೋರುವ ನಕ್ಷತ್ರ, ಭಕ್ತಿಯ ರಸ ಹಾಗೂ ಒಲವು-ಬೇಂದ್ರೆಯವರಿಗೆ ಮುಖ್ಯವಾದ ಸಂಗತಿಗಳಾಗಿದ್ದವು. ಅವುಗಳನ್ನು ಪಡೆನುಡಿಯಲು ನಿಸರ್ಗ ಅವರಿಗೆ ಭಾಷೆ ಒದಗಿಸಿತು. ದೈವತ್ವದ ಬೆಳಕಿನಲ್ಲಿ ಒಲವು-ಚೆಲುವುಗಳನ್ನು ಗಳಿಸಿಕೊಳ್ಳುವುದರಲ್ಲಿಯೆ ಬದುಕಿನ ಆನಂದ ಅಡಗಿದೆಯೆಂದು ಬೇಂದ್ರೆಯವರು ಭಾವಿಸಿದರು.

ಬೇಂದ್ರೆಯವರ ಅನುಭಾವದ ತುಡಿತ ಅರವಿಂದನಾಭವನ ಪಾದಾರವಿಂದಗಳಲ್ಲಿ ಭಕ್ತಿಯಿಂದ ಕರಗುವುದೆ ಆಗಿತ್ತು. ಅವರ ಬಹುತೇಕ ಕವನಗಳಲ್ಲಿ ಅರವಿಂದರ ಇರುವಿಕೆಯನ್ನು ಗುರುತಿಸಬಹುದಾಗಿದೆ. ಅರವಿಂದರ ಅನುಭೂತಿಯಲ್ಲಿ ಬೇಂದ್ರೆಯವರು ಎಷ್ಟೊಂದು ತನ್ಮಯರಾಗಿರುತ್ತಿದ್ದರೆಂಬುದಕ್ಕೆ 'ಹೃದಯ ಸಮುದ್ರ' ಸಂಕಲನದ ಕವಿತೆಗಳು ಸಾಕ್ಷಿಯಾಗಿವೆ. ಅವರ ಆಧ್ಯಾತ್ಮದ ಗಂಟೆಯ ನಾದಕ್ಕೆ ಬೇಂದ್ರೆ ಹೃದಯದ ಬಾಗಿಲು ತೆರೆಯಿತು. 'ಅರವಿಂದನಾಭನ ಪಾದಾರವಿಂದಕ್ಕೆ' ಎನ್ನುವ ಕವಿತೆ ಬೇಂದ್ರೆಯವರ ಮಾನಸ ಸರೋವರದಲ್ಲಿ ಅರವಿಂದರೆಂಬ ಜೀವಹಂಸ ತೇಲುತ್ತಿದ್ದುದನ್ನು ಬಣ್ಣಿಸುತ್ತದೆ:

> ಅರವಿಂದನಾಭನ ಪಾದಾರವಿಂದಕೆ ಹಸ್ತಾರವಿಂದವು ಬಾಗುತಿರೆ
> ನಯನಾರವಿಂದವು ಮುಚ್ಚಿಕೊಂಡಿರುವಾಗ ಹೃದಯಾರವಿಂದವು ಅರಳಲಿರೆ
> ಅಸ್ಯಾರವಿಂದವು ನಲಿವನು ಸೂಸುವ ತೆರ ನಿನಗೆ ಸೂಸಲಿ ಮಂಗಲವು
> ಎಂದಿತು ಅರವಿಂದ ಪದಭೃಂಗ ಅರವಿಂದು! ಅರಪಿಂದಮಯವಾದ ಮಾನಸವು[೬೨]

'ಹೃದಯಸಮುದ್ರ', 'ಶ್ರೀ ಅರವಿಂದರಿಗೆ', 'ನಾನಲೆಯುತ್ತಿದ್ದೆ', 'ಗುರು ನೆನೆದರೆ', 'ಮಹಾಪ್ರಸ್ಥಾನ', 'ಶ್ರೀ ಮಾತೆಗೆ', 'ಪಾದಪದ್ಮಕೆ ಪ್ರಾರ್ಥನೆ' ಮುಂತಾದ ಕವಿತೆಗಳಲ್ಲಿ ಅರವಿಂದರು ಹಾಗೂ ಶ್ರೀ ಮಾತೆಯವರು ವರಕವಿಯನ್ನು ಗಾಢವಾಗಿ ಪ್ರಭಾವಿಸಿದ್ದ ಸುಳಿವು ದೊರೆಯುತ್ತದೆ. 'ಒಂದು-ಹಲವು' ಎನ್ನುವ ಹೆಸರಿನ ಕವಿತೆಯು ಕಲ್ಮಶವಿಲ್ಲದ ಹೃದಯ ವಿಶ್ವದ ಶಾಂತಿಗೆ ಮೂಲಮಂತ್ರವಾಗಿದೆಯೆನ್ನುತ್ತಾರೆ. 'To be or become something, to bring something into being is the whole labour of the force of nature'[೬೩] ಎಂಬ ಶ್ರೀ ಅರವಿಂದರ ಮಾತನ್ನು ಕವಿತೆಯ ಆರಂಭಕ್ಕೆ ಉಕ್ತಿಯಾಗಿಸಿ ಬರೆದ ಈ ಪದ್ಯ ದ್ವೇಷ, ಅಸೂಯೆ, ಅತೃಪ್ತಿ, ದುರುಳತನಗಳ ವಿರುದ್ಧದ ಮಂತ್ರವಾಗಿದೆ. ಅರಿವನ್ನು ಬೆಳೆಸಿಕೊಂಡಾಗ ಮರೆವು ಮಂಗಮಾಯವಾಗಿ ಪ್ರಾಣ-ಲಿಂಗ-ಶಕ್ತಿಗಳ ದರ್ಶನ ಲಭಿಸುತ್ತದೆ:

ಇರುವದೊಂದೆ ನೆರೆದು ಮುಂದೆ ಹಲವು ಫಲವು ಪಡೆವುದು
ಅರಿವುದೊಂದೆ ಬೆರೆತುಕೊಂಡೆ ಹಿಗ್ಗ ಪಡೆದು ನಡೆವುದು
ಬೀಜದಲ್ಲಿ ಮರಗಳಲ್ಲಿ ಜನನಿ ಪ್ರಕೃತಿ ಮೆರೆವಳು
ಅರಿವಿನಲ್ಲಿ ಇರವ ಬೆಳೆಸಿ ಜನಕ ಪುರುಷ ತೆರೆವನು[೬೪]

ಒಂದನ್ನು ಹಲವಾಗಿ, ಹಲವಾರು ಇದ್ದುದನ್ನು ಒಂದಾಗಿ ನೋಡುವ ಸಮುದ್ರತೀರ ಹಾಗೂ ದೂರದೃಷ್ಟಿ ಆ ಹಿರಿಯ ಕವಿಗೆ ಇತ್ತು ಎಂಬುದನ್ನು ಊಹಿಸಬಹುದಾಗಿದೆ. 'ಗೆಳೆಯ ಶಂಕರಗೌಡರಿಗೆ' ಎನ್ನುವ ಪದ್ಯದಲ್ಲಿ ಗೆಳೆಯರ ಗುಂಪಿನಲ್ಲಿ ಒಬ್ಬರಾಗಿದ್ದ ಶಂಕರಗೌಡರು ಪಾಂಡಿಚೇರಿಯಲ್ಲಿ ದೇಹ ಬಿಡುವ ಪುಣ್ಯ ಪುರುಷರಾದರೆಂದು ಬೇಂದ್ರೆಯವರು ಹೇಳುತ್ತಾರೆ. ಆಸಕ್ತಿಯ ವಿಷಯವೆಂದರೆ ಶಂಕರಗೌಡರು ಶ್ರಾವಣದಲ್ಲಿ ತೀರಿಕೊಂಡರು. ಆಗಸ್ಟ ೧೫ ರಂದು ದೇಹಬಿಟ್ಟ 'ಮಧುರಚೆನ್ನ'ರ ಸ್ನೇಹವನ್ನು ನೆನೆದು ಪದ್ಯ ಬರೆಯುತ್ತಾರೆ. ಅನುಭಾವದ ಗಾಳಿ ಸೋಕುವಲ್ಲಿ ಕಾರಣೀಭೂತರಾಗಿದ್ದ ಮಧುರಚೆನ್ನ ಹಾಗೂ ಶಂಕರಗೌಡರಿಗೆ 'ಹೃದಯಸಮುದ್ರ' ಕವನ ಸಂಕಲನವನ್ನು ಅರ್ಪಣೆ ಮಾಡಿದ್ದು ಕೂಡ ವಿಶೇಷವಾಗಿದೆ. ಬೇಂದ್ರೆಯವರ ಹೃದಯದಲ್ಲಿ ಅರವಿಂದರ ಕರುಣೆಯ ಕಡಲು ತುಂಬಿದೆ. ವಾತ್ಸಲ್ಯದ, ಸ್ನೇಹದ, ಪರಂಪರೆಯ, ಪ್ರೇರಣೆಯ ಹಲವು ನದಿಗಳು ಕೂಡ ಅವರ ಹೃದಯ ಸಮುದ್ರವನ್ನು ಸೇರುತ್ತವೆ. ಇಲ್ಲಿರುವ ನಿಸರ್ಗದ ಭಾಷೆ ದೈವಿಕ ಅನುಭೂತಿಯೇ ಆಗಿದೆ. ಇಷ್ಟದೈವದ ಚರಣಕಮಲಕ್ಕೆ ನಮನ ಸಲ್ಲಿಸುವುದೆ ಆಗಿದೆ :

ಚಂದ್ರನಲ್ಲಿ ತುಂಬುವದು ಅಮೃತ, ಆ ಚಂದ್ರ ಕುಡಿಯಲೆಂದೇ?
ಕಡಲು ಎರೆಯುವುದು ಮೋಡಗಳಿಗೆ, ನೀರಡಿಕೆ ಮೋಡಕೆಂದೇ?
ಹಣತಿ ಸೊಡರು ಹೊತ್ತುವುದು, ತನ್ನ ಮುಖವನ್ನು ಬೆಳಗಲೆಂದೇ?
ಬಯಲು ಹರಹಿಹುದು ಇಂಬುಗೊಂಡು, ಈ ನಿಖಿಲಲೋಕಕೆಂದೇ?[೬೫]

ಬೇಂದ್ರೆಯವರಲ್ಲಿ ಪ್ರೀತಿ-ಪ್ರೇಮದ ಭಾವ ತುಂಬಿ ಹರಿಯುತ್ತದೆ. ಮನಸ್ಸಿನ ವಿಕಾಸಕ್ಕೆ ಕಾರಣವಾಗುವ ಪ್ರಣಯ, ಪ್ರೇಮಿಗಳ ಸಲ್ಲಾಪ, ಬದುಕಿಗೆ ಅಗತ್ಯವಾಗಿ ಬೇಕಾಗಿರುವ ಒಲವು ಮುಂತಾದ ಗುಣಗಳ ಪ್ರೇಮ ಆವಿಷ್ಕಾರವನ್ನು ಸಾಧಿಸಲು ಭಾರತೀಯ ಕಾವ್ಯ ಪರಂಪರೆ ಹಾಗೂ ತಾತ್ವಿಕತೆ ಅವರಿಗೆ ಸಹಾಯ ಮಾಡಿದವು. ವೇದ-ಉಪನಿಷತ್ತು ಹಾಗೂ ಮರಾಠಿ ಕಾವ್ಯದ ಜೊತೆಗೆ ಕಾಳಿದಾಸ ಈ ವಿಷಯದಲ್ಲಿ ಬೇಂದ್ರೆಯವರಿಗೆ ಮುಖ್ಯ ಸ್ಫೂರ್ತಿಯ ಸೆಲೆಯಾಗಿದ್ದ. ಕಾಳಿದಾಸನಂತೆಯೆ ಬೇಂದ್ರೆಯವರೂ ಪ್ರಣಯ ಪ್ರಸಂಗಗಳನ್ನು ವರ್ಣಿಸುವದರಲ್ಲಿ ಅದ್ವಿತೀಯರು. ತಮ್ಮ ಬಿಡುವಿನ ವೇಳೆಯಲ್ಲಿ 'ರಮಣಗೀತೆ', 'ಸೌಂದರ್ಯಲಹರಿ', 'ಮೇಘದೂತ', 'ಓಮರ್ ಖಯ್ಯಾಮ್' ಮುಂತಾದ ತಮಗೆ ಇಷ್ಟವಾದ ಕೃತಿಗಳನ್ನು ಓದುತ್ತ ಸ್ವ ಸಂತೋಷಕ್ಕಾಗಿ ಹೆಂಡತಿಯ ರಸಗ್ರಹಣಕ್ಕಾಗಿ ಆಗಾಗ ಕನ್ನಡಕ್ಕೆ ಅನುವಾದಿಸುತ್ತಲೂ ಇದ್ದರು. ತಮ್ಮ ಬದುಕಿನ ವೈಯಕ್ತಿಕ ಪ್ರಣಯ ಸಾಧನೆಯನ್ನು, ಹೆಂಡತಿಯ ಮೇಲಿನ ಪ್ರೇಮವನ್ನು ಶಾಶ್ವತವಾಗಿರಿಸುವ ಸಲುವಾಗಿ ಕಾಳಿದಾಸನ ಮೇಘದೂತವನ್ನು ಕನ್ನಡಕ್ಕೆ ತರಬೇಕೆಂಬ ಆಸೆ ಹುಟ್ಟಿತು. ಸಖೀಗೀತ ಬರೆದಾಗಿತ್ತು. 'ಅದೊಂದು ಪ್ರಣಯ ಸಾಧನೆ. ಅದರಲ್ಲಿ ಸುಖ-ದುಃಖ ಸರಿಪಾಲಾಗಿ ಬೆರೆತುಕೊಂಡಿವೆ. ಈ ಉದ್ಯಮದ ಫಲವೆಂದೋ ಏನೋ, ಹೆಂಡತಿಗಾಗಿ ಮೇಘದೂತಕ್ಕೆ ಕನ್ನಡ ಟೀಕೆ ಬರೆಯಬೇಕೆಂಬ ಆಸೆ ಅಂಕುರಿಸಿತು. ಮೇಘದೂತದ ರಚನೆಯಾದೊಡನೆ ಅದನ್ನು ಹಲವು ಎಳೆಯರಿಗೆ, ಗೆಳೆಯರಿಗೆ ನಾನಾಗಿ ಓದಿ ತೋರಿಸಿದೆ. ಅದರಿಂದ ಅದು ಕಂಠಪಾಠವಾಗುವದಿರಲಿ, ಅದು ತನ್ನ ಗತಿಯ ಪಡಿಯಚ್ಚನ್ನೇ ತನ್ನ ಅಕ್ಷರಶಾಲೆಯಲ್ಲಿ ಪ್ರತಿಷ್ಠೆಗೊಳಿಸಿತು. ಅಂದಿನಿಂದ ಈ 'ಮೇಘದೂತ'ದ ಧಾಟಿಯಲ್ಲಿ ಹಲವು ಕವನ ಎರಕಗೊಂಡು ಬಂದಿವೆ.'[೬೬] ಕಾಳಿದಾಸನು ತಮ್ಮ ಮೇಲೆ ಪ್ರಭಾವ ಬೀರಿದ ಕವಿಯೆಂದು ಹೇಳಿಕೊಳ್ಳಲು ಬೇಂದ್ರೆಯವರು ಸಂತೋಷಪಡುತ್ತಾರೆ. ಅದೂ ಅಲ್ಲದೆ ಕಾಳಿದಾಸನು ಪುಲಿಕೇಶಿಯ ಕಾಲಸಂದರ್ಭದಲ್ಲಿ ದೊಡ್ಡ ಹೆಸರು ಮಾಡಿದ ಕವಿಯಾಗಿ ಪ್ರಸಿದ್ಧನಾಗಿದ್ದಾನೆಂಬುದನ್ನು; ಪಂಪ-ಪೊನ್ನ-ನೃಪತುಂಗನ ಆಶ್ರಿತ ಕವಿ ಜಿನಸೇನ, ಸೂಕ್ತಿ ಸುಧಾರ್ಣವಕಾರನಾದ ಮಲ್ಲಿಕಾರ್ಜುನ ಮುಂತಾದ ಕವಿಗಳಿಗೆ ಕಾಳಿದಾಸನು ಸ್ಫೂರ್ತಿಯಾದುದನ್ನು ಬೇಂದ್ರೆಯವರು ಹೇಳುತ್ತಾರೆ. ಕನ್ನಡಕ್ಕೆ ಶಾಕುಂತಲವನ್ನೂ ತಂದ ಚೂರಮುರಿ ಶೇಷಗಿರಿರಾಯರನ್ನು, ಬಸವಪ್ಪಶಾಸ್ತ್ರಿಗಳನ್ನು ಕೂಡ ಬೇಂದ್ರೆಯವರು ಸ್ಮರಿಸುತ್ತಾಸೆ. ಕಾಳಿದಾಸನ ಕೃತಿಗಳಿಗೆ ಸೂರ್ಯಚಂದ್ರರ ಅನುಗ್ರಹವಿದ್ದಂತೆ ತೋರುವುದೆಂದು ಹೇಳಿ ಅಂತಹ ಧ್ವನಿಸೌಂದರ್ಯ ದಕ್ಕುವುದು ಸುಲಭದ ಮಾತಲ್ಲವೆಂದು ಸ್ಪಷ್ಟಪಡಿಸುವ ಮೂಲಕ ಪ್ರತಿಭೆಗೆ ಸಾಣೆ ಹಿಡಿಯುವುದು ನಿರಂತರವಾಗಿರಬೇಕೆಂಬ ಭಾವವನ್ನು ಪ್ರಕಟಿಸುತ್ತಾರೆ. 'ನಮ್ಮ ರುಚಿಯ ಆರೋಗ್ಯವನ್ನು ಪುಷ್ಟಿಗೊಳಿಸುವ ಕ್ರಿಯೆ ಚಿರಂತನವಾಗಿ ನಡೆಯಬೇಕು. ಧ್ವನಿ ಸೌಂದರ್ಯವು ಸಿದ್ಧಾರ್ಥವನ್ನು ಬಚ್ಚಿಡುವ ವಿಧಾನವಲ್ಲ; ಭಾಗ್ಯವಂತರ ದೈವವಿದ್ದಂತೆ ಅವರವರ ದೃಷ್ಟಿಗೆ ತೆರೆಯುವ ನಿಧಾನ. ನಿಧಾನಗಳು ಕೆಲವರಿಗೆ ಕಲ್ಲಿದ್ದಲಾಗಿಯೂ, ಕರಿಚೇಳಾಗಿಯೂ, ನೀಲರತ್ನವಾಗಿಯೂ ಕಾಣುವಂತೆ, ನಮ್ಮ ನಮ್ಮ ಭಾಗ್ಯವನ್ನು ಪರೀಕ್ಷಿಸೋಣ. ಶ್ರೀಶೈಲದ ದಿವ್ಯಭೂಮಿಯಲ್ಲಿ, ಪದವಿಟ್ಟಲಲ್ಲಿ, ಕಾಣುವ ಕಣ್ಣಿಗೆ ಕಾಣಿಕೆ

ಇದೆಯಂತೆ'[೬೬] ಎಂದು ಹೇಳುವ ಬೇಂದ್ರೆಯವರು ಕಾಳಿದಾಸನ ಕೃತಿಗಳಲ್ಲಿ ಕಂಡುಬರುವ 'ಶಿವದ, ಸಂರಕ್ಷಕ ಸೌಂದರ್ಯದ, ಪ್ರತ್ಯಕ್ಷತೆಯ ವಿಭೂತಿಮತ್ತ್ವವನ್ನು ಅನುಮಿತಿಗೂ, ಅನುಭೂತಿಗೂ ತಂದುಕೊಳ್ಳಲು ಯತ್ನಿಸೋಣ'[೬೭]ವೆಂದು ತಮ್ಮ ಆಯ್ದುಕೊಂಡ ಕಾವ್ಯದ ಹಾದಿಯನ್ನು ಸ್ಪಷ್ಟಗೊಳಿಸುತ್ತಾರೆ. ಸತ್ಯದ ನಿಕಷ, ನಿಸರ್ಗದ ಸೌಂದರ್ಯ ಹಾಗೂ ಕಾವ್ಯದ ಚೆಲುವಿಕೆಯಿಂದ ಬೇಂದ್ರೆ ಕಾವ್ಯವು ಕಂಗೊಳಿಸುತ್ತಿರುವದಕ್ಕೆ ಇದು ಸಾಕ್ಷಿಯಾಗಿದೆ. ಕಾವ್ಯದ ಕಲ್ಪನಾ ಶಕ್ತಿ, ಛಂದೋಲಯಗಳಲ್ಲಿ ನಾವೀನ್ಯತೆ, ಆತ್ಮಾನುಭವದ ಅಭಿವ್ಯಕ್ತಿ ಮುಂತಾದ ಕೌಶಲ್ಯಗಳನ್ನು ಕಲಿಯಲು ರವೀಂದ್ರನಾಥ ಟ್ಯಾಗೋರರು ತಮಗೆ ಪ್ರೇರಕರಾದರೆಂದು ಬೇಂದ್ರೆಯವರು ತಿಳಿಸುತ್ತಾರೆ. 'ಕಲ್ಪನೆ, ಛಂದೋಲಯ, ಅಪೂರ್ವಾನುಭವ ಅವು ಸಿದ್ಧಿಯಿದ್ದಂತೆ. 'ವಾಚಮರ್ಥೋನುಭಾವತಿ' ಎಂಬ ಕವಿ-ಉಕ್ತಿಗೆ ಪ್ರಣಾಮವಾಗಿ, ರವೀಂದ್ರರ ನಿರರ್ಗಳ ವಾಣಿ ಹರಿದಿದೆ. ಅವರ ಆಂಗ್ಲಾನುವಾದಗಳನ್ನು ವಿದ್ಯಾರ್ಥಿಗಳಿಗಾಗಿ ಮಾಡುವುದು, ಅವರ ಉಕ್ತಿಗಳನ್ನು ಗುಣಗುಣು ಹೇಳಿಕೊಳ್ಳುವುದು ಕೆಲದಿನದ ಕ್ರೀಡೆಯಾಗಿತ್ತು ನನಗೆ. ಜಯದೇವನ ವಚೋಲಹರಿಯು ತೂಗುಯ್ಯಾಲೆಯಲ್ಲಿ ನನ್ನನ್ನು ಎತ್ತೋ ಒಯ್ದಿತು. ಅವರ ಕಥಾವಾಚನದಿಂದ ನನ್ನಲ್ಲಿ ರಸೋಮಯ ಪರಿಣಿತಿಯುಂಟಾಯಿತು. ಕಾಬೂಲಿವಾಲಾ, ಪೋಸ್ಟ್‌ಮಾಸ್ಟರ್, ಬಾಬುಜ್ ಆಫ್ ನಾಯಂಜೋರ್ ಏನು ಕಥೆಗಳವು?... ಕ್ರೆಸೆಂಟ್ ಮೂನ್ ತಾಯಿಗೆ ಓದಿ ಹೇಳಿದೆ. ಕತೆಗಳನ್ನು ಎಳೆ ಗೆಳೆಯರಿಗೆ ಹೇಳಿದೆ. ಪ್ರಬಂಧ ನಾನೇ ಓದಿಕೊಂಡೆ; ಅವರ ಗೀತಗಳನ್ನು ಪ್ರವಚನ ಮಾಡಿದೆ ಜನಸಮೂಹಕ್ಕೆ- ಇದೆಲ್ಲವೂ ರವೀಂದ್ರ ಕಾವ್ಯ ಪ್ರಕೃತಿಯ ಪೂಜೆಗಿಂತ ಅವರ ಸಾಧಕ ಪುರುಷನ ಧ್ಯಾನ-ಸಮಾಧಿಗಾಗಿ'[೬೮] ಎಂದು ಬೇಂದ್ರೆಯವರು ನಿಸರ್ಗದ ವರ್ಣನೆಯಲ್ಲಿ ದೈವಿಕ ಸಂಗತಿಯೆ ತಮಗೆ ಮುಖ್ಯವೆಂದು, ರಸಪೂಜೆಯ ಮುಂದೆ ಬೇರೆ ಪೂಜೆ ಅವಶ್ಯವಿಲ್ಲವೆಂದು ನಂಬುವವರಾಗುತ್ತಾರೆ.

ಅರಿವೆಂಬ ರವಿಯು ಮೂಡಲು
ಗುರುವೆಂಬಾತ್ಮಾರವಿಂದರಳಿತು ನನ್ನೊಳ್[೭೦]

ಎಂದು ಹೇಳುವ ಮೂಲಕ ರವೀಂದ್ರರು, ಅರವಿಂದರು ತಮ್ಮಲ್ಲಿ ಅಲೌಕಿಕ ಆಸ್ಥೆ ಪ್ರಕಟವಾಗಲು ಕಾರಣರಾದರೆಂದು ನೆನೆಯುತ್ತಾರೆ. ರವೀಂದ್ರನಾಥ ಟ್ಯಾಗೋರರ ಪ್ರಕೃತಿ ಪ್ರೇಮ ಅಸಾಧಾರಣವಾದದ್ದು. ಅದು ಬೇಂದ್ರೆಯವರಿಗೂ ಹಿಡಿಸಿತು.

'೧೯೪೧ ರಿಂದ ಗಾಂಧಿ-ಟಾಗೋರ್-ಅರವಿಂದ ಇವರ ಅಕ್ಕಸಾಲೆ ನನಗೆ ಪಕ್ಕಸಾಲೆಯಾಯಿತು. ಗಾಂಧಿಯವರ ಪಾದದ ಬಳಿ ನನಗೆ ತಾಟಸ್ಥ್ಯದ ಮೌನ; ರವೀಂದ್ರರ ಕೃತಿಗಳಿಗೆ ಶ್ರುತಿಮೌನ; ಅರವಿಂದ ವಾಣಿ ನನಗೆ ಸೂತ್ರ ಸ್ವರ'[೭೧] ಎಂದು ಬೇಂದ್ರೆಯವರು ಹೇಳುವ ಮೂಲಕ ಟ್ಯಾಗೋರರ ಕಲಾಪ್ರೌಢಿಮೆಯನ್ನು, ಅರವಿಂದರ ಜ್ಞಾನದ ಹಸಿವನ್ನು, ಗಾಂಧೀಜಿಯವರ ಮಾನವೀಯತೆಯನ್ನು ಸಮನ್ವಯಗೊಳಿಸಲು ಪ್ರಯತ್ನಿಸಿದರು. ಸ್ವಾತಂತ್ರ್ಯದ ಕೆಚ್ಚು, ದೇಶಪ್ರೇಮ, ನಾಡಪ್ರೇಮ ಮುಂತಾದ ಮೌಲ್ಯಗಳನ್ನು ಅವರು

ಪ್ರೀತಿಸಿದ್ದರಿಂದಲೇ 'ನರಬಲಿ', 'ಮಕ್ಕಳಿವರೇನವ್ವ' ಮುಂತಾದ ಪ್ರಸಿದ್ಧ ಕವಿತೆಗಳನ್ನು ಬರೆಯಲು ಬೇಂದ್ರೆಯವರಿಗೆ ಸಾಧ್ಯವಾಯಿತು. ಅವರ 'ಸಖಿಗೀತ'ವು ಮಹಾತ್ಮಾ ಮೋಹನದಾಸನ ಸತ್ಯಾಗ್ರಹದ ಹೋರಾಟ ಜಗತ್ತಿನೆಲ್ಲೆಡೆ ಸಂಚಲನ ಉಂಟು ಮಾಡಿದ್ದ ಕಾಲಸಂದರ್ಭಗಳನ್ನು ಸೂಕ್ತವಾಗಿ ದಾಖಲಿಸುತ್ತದೆ:

ಮೋಹನದಾಸನ ಉಸಿರಿಗೆ ಬೀಸಿದ
ಬಿರುಗಾಳಿಯಾಗ ಸುಟ್ಟುರೆ ತಂದವು
ಒಣ-ಎಲೆ ಹುಡಿ-ಮಣ್ಣು ಸೊಪ್ಪು-ಸವದಿಗಳೆಲ್ಲ
ಮೋಡಗಳಾಡುವ ಎಡೆ ಕಂಡವು
ಹುಡುಗರು ಹುಚ್ಚಾಗಿ ತರುಣರು ಮೆಚ್ಚಾಗಿ
ಮುದುವರು ಪೆಚ್ಚಾಗಿ ನೋಡಿದರು
ಹಲಕೆಲವರು ತಾವೆ ಪುಕ್ಕ - ಹಕ್ಕಿಗಳಂತೆ
ದಿಕ್ಕುಪಾಲಾಗುತ ಓಡಿದರು[೩]

'ಗಾಂಧಿ, ಟಾಗೋರ, ಅರವಿಂದ- ಇವರು ದೊಡ್ಡ ಮನಸ್ಸಿನ ಮಹಾತ್ಮರು. ಗಾಂಧೀ ಬಯಲು, ರವೀಂದ್ರ ನಾಟಕರಂಗ, ಅರವಿಂದ ಸಮಾಧಿ- ಇವು ಸಾಧನ ಸೋಪಾನದ ತಪ್ಪಲುಭೂಮಿ!'[೪]

ಗಾಂಧಿಯ ಕಳಕಳಿ, ಅಗಾಧ ಮಾನವ ಪ್ರೇಮ, ಬಂಧನಗಳಿಲ್ಲದ ವಿಶ್ವಾತ್ಮಕತೆ, ನಿಷ್ಕಲ್ಮಶ ಹೃದಯ ಬೇಂದ್ರೆಯವರನ್ನು ಆಳವಾಗಿ ಕಲಕಿದ್ದವು. ಅಂತಹ ಎದೆ ಕಲಕುವ ಭಾವವನ್ನು ತಮ್ಮ ಕವಿತೆ ಹೊಂದಲಿ ಎನ್ನುವ ಆಶಯ ಅವರಿಗಿತ್ತು. ಗಟ್ಟಿಯಾಗಿ ನೆಲಕ್ಕೆ ಅಂಟಿಕೊಂಡಿದ್ದ ಗಾಂಧಿಯ ಮಮತೆ ಹಾಗೂ ವಾತ್ಸಲ್ಯ, ಮುಗಿಲಿಗೆ ಹಾರುತ್ತಿದ್ದ ಅರವಿಂದರ ಆಧ್ಯಾತ್ಮಿಕತೆ ಇವೆರಡನ್ನೂ ಟ್ಯಾಗೋರರ ಕಲಾಪ್ರತಿಭೆಯಲ್ಲಿ ಎರಕ ಹೊಯ್ಯಲು ಬೇಂದ್ರೆ ಮನಸ್ಸು ಮಾಡಿದರು.

ಅಡಿಟಿಪ್ಪಣಿಗಳು :

೧. ಪ್ರೊ. ಎಲ್.ಎಸ್.ಶೇಷಗಿರಿರಾವ್: 'ಹೊಸಗನ್ನಡ ಸಾಹಿತ್ಯ ಚರಿತ್ರೆ', ಪು. ೨೨, ಅಂಕಿತ ಪುಸ್ತಕ, ಬೆಂಗಳೂರು, ೧೯೯೯.

೨. ಪ್ರೊ. ಕೀರ್ತಿನಾಥ ಕುರ್ತಕೋಟಿ : 'ಯುಗಧರ್ಮ ಹಾಗೂ ಸಾಹಿತ್ಯ ದರ್ಶನ', ಪು. ೪೨, ಮನೋಹರ ಗ್ರಂಥಮಾಲಾ, ಧಾರವಾಡ.

೩. ಬಿ.ಎಂ.ಶ್ರೀ. : 'ಇಂಗ್ಲೀಷ್ ಗೀತಗಳು', ಪು. ೧, ಕಾವ್ಯಾಲಯ, ಮೈಸೂರು, ಹ.ಮು. ೧೯೮೭.

೪. ಅದೇ, ಪು. ೬೭.

೫. ರಂ.ಶ್ರೀ ಮುಗಳಿ: ಪು. ೨೨೪, 'ಕನ್ನಡ ಸಾಹಿತ್ಯ ಚರಿತ್ರೆ', ಸಮಾಜ ಪುಸ್ತಕಾಲಯ, ೧೯೯೬.

೬. ಬಿ.ಯು.ಸುಮಾ: 'ಇಂಗ್ಲೀಷ್ ಗೀತಗಳು, ಸಾಂಸ್ಕೃತಿಕ ಮುಖಾಮುಖಿ', ಪು.೯೦, ಸಂ. ರಹಮತ್ ತರೀಕೆರೆ, ಕನ್ನಡ ವಿ.ವಿ. ಹಂಪಿ, ೨೦೦೭.

೭ ಅದೇ, ಪು.೯೦.

೮. ಗಿರಡ್ಡಿ ಗೋವಿಂದರಾಜ: 'ಸಮಗ್ರ ವಿಮರ್ಶೆ', ಪು. ೫೫-೫೬, ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೦೧.

೯. ಪ್ರೊ. ಎಚ್.ಎಸ್.ರಾಘವೇಂದ್ರರಾವ್: 'ಹಾಡೆ ಹಾದಿಯ ತೋರಿತು', ಪು. ೫೫, 'ಕನ್ನಡ ಸಂಘ ಕ್ರೈಸ್ಟ ಕಾಲೇಜು', ಬೆಂಗಳೂರು, ೧೯೯೫.

೧೦. ಬಿ.ಯು. ಸುಮಾ: 'ಇಂಗ್ಲೀಷ್ ಗೀತಗಳು, ಸಾಂಸ್ಕೃತಿಕ ಮುಖಾಮುಖಿ', ಪು.೯೩, ಸಂ. ರಹಮತ್ ತರೀಕೆರೆ, ಕನ್ನಡ ವಿ.ವಿ. ಹಂಪಿ, ೨೦೦೭.

೧೧. ಅದೇ, ಪು.೯೨.

೧೨. ದ.ರಾ. ಬೇಂದ್ರೆ: 'ಒಲವೆ ನಮ್ಮ ಬದುಕು', ಪು. ೧೦೨, ಗೀತಾ ಬುಕ್‌ಹೌಸ್, ಮೈಸೂರು, ದ್ವಿ.ಮು., ೧೯೮೦.

೧೩. ಪ್ರೊ. ಎಲ್.ಎಸ್.ಶೇಷಗಿರಿರಾವ್: 'ಹೊಸಗನ್ನಡ ಸಾಹಿತ್ಯ ಚರಿತ್ರೆ', ಪು. ೮೯, ಅಂಕಿತ ಪುಸ್ತಕ, ಬೆಂಗಳೂರು, ೧೯೯೯.

೧೪. ಡಾ. ಜಿ.ಎಸ್.ಆಮೂರ: 'ಭುವನದ ಭಾಗ್ಯ', ಪು. ೮, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ತೃತೀಯ ಮುದ್ರಣ, ೨೦೦೭.

೧೫. ಅದೇ, ಪು. ೨೭.

೧೬. ಡಾ. ದ.ರಾ. ಬೇಂದ್ರೆ: 'ಸಾಹಿತ್ಯದ ವಿರಾಟ್ ಸ್ವರೂಪ', ಪು. ೧೧೯, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೧೭. ಅದೇ, ಪು. ೫೦.

೧೮. ಪ್ರೊ. ಎಚ್.ಎಸ್.ರಾಘವೇಂದ್ರರಾವ್: 'ಹಾಡೆ ಹಾದಿಯ ತೋರಿತು', ಪು. ೮೭, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೯೫.

೧೯. ಡಾ. ಗಿರಡ್ಡಿ ಗೋವಿಂದರಾಜ: 'ಕನ್ನಡ ಕಾವ್ಯ ಪರಂಪರೆ ಮತ್ತು ಬೇಂದ್ರೆಯವರ ಕಾವ್ಯ', ಪು. ೧೨, ಪ್ರಸಾರಾಂಗ, ಕ.ವಿ.ವಿ. ಧಾರವಾಡ, ೨೦೦೪.

೨೦. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ಬಾರೋ ಸಾಧನಕೇರಿಗೆ', ಪು. ೨೬, ಮನೋಹರ ಗ್ರಂಥಮಾಲಾ, ಧಾರವಾಡ, ೧೯೯೩.

೨೧. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ಯುಗಧರ್ಮ ಮತ್ತು ಸಾಹಿತ್ಯ ವಿಕಾಸ', ಪು. ೫೩, ಮನೋಹರ ಗ್ರಂಥಮಾಲಾ, ಧಾರವಾಡ.

೨೨. ಡಾ. ದ.ರಾ. ಬೇಂದ್ರೆ: 'ಸಾಹಿತ್ಯದ ವಿರಾಟ್ ಸ್ವರೂಪ', ಪು. ೧೬೦, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೨೩. ಅದೇ, ಪು. ೧೭೦.

೨೪. ಡಾ. ಗಿರಡ್ಡಿ ಗೋವಿಂದರಾಜ: 'ಕನ್ನಡ ಕಾವ್ಯ ಪರಂಪರೆ ಮತ್ತು ಬೇಂದ್ರೆಯವರ ಕಾವ್ಯ', ಪು. ೫, ಪ್ರಸಾರಾಂಗ, ಕ.ವಿ.ವಿ. ಧಾರವಾಡ, ೨೦೦೪.

೨೫. ಡಾ. ದ.ರಾ. ಬೇಂದ್ರೆ: 'ಸಾಹಿತ್ಯದ ವಿರಾಟ್ ಸ್ವರೂಪ', ಪು. ೧೮೬, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೨೬. ಪ್ರೊ. ಎಚ್.ಎಸ್.ರಾಘವೇಂದ್ರರಾವ್: 'ಹಾಡೆ ಹಾದಿಯ ತೋರಿತು', ಪು.೯೦, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೯೫.

೨೭. ಡಾ. ದ.ರಾ.ಬೇಂದ್ರೆ: 'ಸಾಹಿತ್ಯದ ವಿರಾಟ್ ಸ್ವರೂಪ', ಪು. ೫೦, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೨೮. ಅದೇ, ಪು. ೫೨.

೨೯. ಅದೇ.

೩೦. ಅದೇ ಪು. ೫೩.

೩೧. ಅದೇ, ಪು. ೫೪.

೩೨. ಡಾ. ಜಿ.ಎಸ್.ಆಮೂರ: 'ಭುವನದ ಭಾಗ್ಯ', ಪು. ೨೩-೨೪, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ತೃ.ಮು. ೨೦೦೭.

೩೩. ಡಾ. ಜಿ.ಎಸ್.ಆಮೂರ: 'ಭುವನದ ಭಾಗ್ಯ', ಪು. ೩೪, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ತೃ.ಮು. ೨೦೦೭.

೩೪. ಡಾ. ದ.ರಾ.ಬೇಂದ್ರೆ: 'ಸಾಹಿತ್ಯದ ವಿರಾಟ್ ಸ್ವರೂಪ', ಪು. ೮೯, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೩೫. ಅದೇ, ಪು. ೬೦.

೩೬. ಅದೇ, ಪು. ೩೭.

೩೭. ದ.ರಾ.ಬೇಂದ್ರೆ: 'ಗರಿ', ಪು. ೧, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಮೂ.ಆ. ೧೯೫೧.

೩೮. ಡಾ. ಗಿರಡ್ಡಿ ಗೋವಿಂದರಾಜ: 'ಸಮಗ್ರ ವಿಮರ್ಶೆ', ಪು. ೪೩, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೧.

೩೯. Shakespeare : The Complete Works of Shakespeare, p. 852, Harcourt Brace Jovanovich Inc. 1972.

೪೦. William Wordsworth : The Complete Poetical Works, p. 93, Houghton Mifflin Company, Bostan, 1964.

೪೧. William Wordsworth : 'A Compendious History of English Literature', p. 333, Vikas Publishing House, New Delhi, 1974.

೪೨. Ibid, p. 334.

೪೩.. William Wordsworth : The Complete Poetical Works, P. 277, Houghton Mifflin Company, Bostan, 1964.

೪೪. Keats : Ode on a Gracian Urn. p. 385, 'A Compendious History of English Literature', Vikas Publishing House, New Delhi, 1974.

೪೫. ದ.ರಾ.ಬೇಂದ್ರೆ: 'ಗರಿ', ಪು. ೧೦, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಮೂ. ಆ., ೧೯೫೧.

೪೬. ಡಾ. ಜಿ.ಎಸ್.ಆಮೂರ: 'ಭುವನದ ಭಾಗ್ಯ', ಪು. ೨೨, ೨೩, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ತೃ.ಮು. ೨೦೦೭.

೪೭. The Complete Poetical Works of Wordsworth : p. 791, Houghton Mifflin Company Boston, 1964.

೪೮. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ಬಾರೋ ಸಾಧನಕೇರಿಗೆ', ಪು. ೮೩, ಮನೋಹರ ಗ್ರಂಥಮಾಲಾ, ಧಾರವಾಡ, ೧೯೬೩.

೪೯. Keats : The Poems of John Keats, p. 525, Ed. Mirian Allott, Longman, Norton, 1964.

೫೦. Ibid, p. 527.

೫೧. Ibid.

೫೨. Ibid.

೫೩. ಡಾ. ಜಿ.ಎಸ್.ಅಮೂರ: 'ಭುವನದ ಭಾಗ್ಯ', ಪು. ೨೭, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ತೃ.ಮು. ೨೦೦೭.

೫೪. ಡಾ. ದ.ರಾ.ಬೇಂದ್ರೆ: 'ಸಾಹಿತ್ಯದ ವಿರಾಟ್ ಸ್ವರೂಪ', ಪು. ೫೩, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೫೫. ಅದೇ, ಪು. ೬೦.

೫೬. ದ.ರಾ. ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೪೫, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೫೭. ಅದೇ, ಪು. ೪೬.

೫೮. ಅದೇ, ಪು. ೪೭.

೫೯. ಅದೇ, ಪು. ೫೯.

೬೦. ದ.ರಾ.ಬೇಂದ್ರೆ: 'ನಾಕು ತಂತಿ', ಪು.೧, ಸಮಾಜ ಪುಸ್ತಕಾಲಯ, ಧಾರವಾಡ, ದ್ವಿ.ಮು. ೧೯೭೪.

೬೧. ಅದೇ, ಪು. ೯೫.

೬೨. ದ.ರಾ.ಬೇಂದ್ರೆ: 'ಹೃದಯ ಸಮುದ್ರ', ಪು. ೬, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೬೩. ಅದೇ, ಪು. ೨೦.

೬೪. ಅದೇ, ಪು. ೬.

೬೫. ದ.ರಾ. ಬೇಂದ್ರೆ: ಮುಕ್ತಕಂಠ, ಪು. ೧೩, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೬೬. ದ.ರಾ.ಬೇಂದ್ರೆ: 'ಆತ್ಮ ಕಥನ', ಪು. ೪೨೪, ಶ್ರಾವಣ ಪ್ರತಿಭೆ, ಸಂಪುಟ-೫, ಮನೋಹರ ಗ್ರಂಥಮಾಲೆ, ಧಾರವಾಡ, ೧೯೮೭.

೬೭. ದ.ರಾ.ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೬೬೨, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೬೮. ಅದೇ, ಪು. ೬೬೩.

೬೯. ದ.ರಾ.ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೧೧೯, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೭೦. ಅದೇ, ಪು. ೧೨೦.

೭೧. ಅದೇ, ಪು. ೧೨೪.

೭೨. ದ.ರಾ.ಬೇಂದ್ರೆ: 'ಸಖಿಗೀತ', ಪು. ೮೮, ಮನೋಹರ ಗ್ರಂಥ ಪ್ರಕಾಶನ ಸಮಿತಿ, ೧೯೪೦.

೭೩. ದ.ರಾ.ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೧೨೧, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

ಅಧ್ಯಾಯ – ಐದು

ಬೇಂದ್ರೆ ಹಾಗೂ ಸಮಕಾಲೀನರಲ್ಲಿ ನಿಸರ್ಗ ಮನೋಧರ್ಮ

೫.೧ ಪೀಠಿಕೆ

೫.೨ ಆತ್ಮಯಾತ್ರಿಕ ಕವಿ ಮಧುರಚೆನ್ನ

೫.೩ ಆತ್ಮಶ್ರೀಯ ಹರಿಕಾರ ಕುವೆಂಪು

೫.೪ ನಿಸರ್ಗದ ಮಮತೆಯಿಂದ ಕೇಡ ಗೆಲ್ಲುವ ಪು.ತಿ.ನ.

೫.೫ ಮಾಸ್ತಿಯವರಲ್ಲಿ ನಿಸರ್ಗದ ಸಾತ್ವಿಕ ಮನೋಧರ್ಮ

೫.೬ ಕೆ.ಎಸ್.ನ. ಕವಿತೆಗಳಲ್ಲಿ ಪ್ರಕೃತಿಯ ಸುಕುಮಾರತೆ

೫.೭ ಪ್ರೇರಣಾದಾಯಕ ನಿಸರ್ಗ ಪರಂಪರೆಯಲ್ಲಿ ಕಿರಿಯ ಸಮಕಾಲೀನರು

೫.೮ ಕನ್ನಡದ ನಿಸರ್ಗಕಾವ್ಯ ಪರಂಪರೆ : ಹರಿಗಡಿಯದ ಹೊನಲು

ಅಧ್ಯಾಯ - ೫

ಬೇಂದ್ರೆ ಹಾಗೂ ಸಮಕಾಲೀನರಲ್ಲಿ ನಿಸರ್ಗ ಮನೋಧರ್ಮ

೫.೧ ಪೀಠಿಕೆ :

ಕನ್ನಡದಲ್ಲಿ ನವೋದಯ ಸಾಹಿತ್ಯ ತಂದ ಹೊಸತನದ ಪರಿಣಾಮವಾಗಿ ನಿಸರ್ಗ ಬಗೆಗಿನ ಪ್ರೀತಿ ಒಂದು ಮೌಲ್ಯವಾಗಿ, ಕಾವ್ಯದ ಜೀವಸತ್ವವಾಗಿ ಬೆಳೆದು ಬರತೊಡಗಿತು. ನೀರಸವಾಗಿದ್ದ ಪ್ರಕೃತಿಯ ವರ್ಣನೆ ಕವಿಯ ಭಾವಕೋಶವನ್ನು ಹೊಕ್ಕು ಅವನ ವಿಚಾರಗಳಿಗೆ ವಾಹಕವಾಗತೊಡಗಿತು. ಪ್ರಕೃತಿಯಲ್ಲಿ ಮಿಂದ ಅನುಭವ, ಪ್ರಕೃತಿಯ ರೂಪಕಗಳಲ್ಲಿ ಕಂಡುಬರುವ ಜೀವನತತ್ವ, ಪ್ರಾಮಾಣಿಕತೆಯ ಅಭಿವ್ಯಕ್ತಿಗಾಗಿ ಪ್ರಕೃತಿ ಮೂಡಿ ಬಂದ ಬಗೆ ಹೀಗೆ ಪ್ರಕೃತಿಯು ಜೀವ ತುಂಬಿಕೊಂಡು ಕಾವ್ಯದಲ್ಲಿ ನಳನಳಿಸುತ್ತಿರುವ ಚಿತ್ರಣ ನವೋದಯದ ಕವಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ.

ಈ ನಿಸರ್ಗದ ಅಭಿವ್ಯಕ್ತಿ ಒಂದೇ ತೆರನಾಗಿರದೆ ಕವಿಗಳ ಮನೋಭಾವಕ್ಕೆ ತಕ್ಕಂತೆ ಅವರಲ್ಲಿ ಪ್ರಕಟಗೊಂಡ ರೂಪಗಳು ವಿಸ್ಮಯಗೊಳಿಸುವಂತಿವೆ. ಅಷ್ಟೆ ಅಲ್ಲದೆ ಆಗಿನ ಕವಿಗಳು ನಿಸರ್ಗ ಪ್ರೇರಣೆಗಳನ್ನು ತಮ್ಮ ತಾತ್ವಿಕತೆಗೆ ದುಡಿಸಿಕೊಂಡಿದ್ದನ್ನು ಕಾಣಬಹುದಾಗಿದೆ. ಕೊಡುಕೊಳ್ಳುವಿಕೆ ಹಾಗೂ ಸ್ನೇಹದ ವಿನಿಮಯದಿಂದ; ಒಂದೆ ಕಾಲದಲ್ಲಿ ಕಾವ್ಯ ಬರೆಯುತ್ತಿರುವದರಿಂದ ಹಾಗೂ ಅನುಭಾವದ ಬಾಂಧವ್ಯದಿಂದ ಅವರ ನಿಸರ್ಗ ಮನೋಧರ್ಮ ಪರಸ್ಪರರನ್ನು ಪ್ರೇರೇಪಿಸಿರುವ ಅಂಶವೂ ಮಹತ್ವದ್ದಾಗಿದೆ. ಅವರ ಸಾದೃಶ್ಯ ಹಾಗೂ ವೈದೃಶ್ಯಗಳನ್ನು ತಿಳಿಯಲು ಕೂಡ ಈ ನಿಟ್ಟಿನ ಅಭ್ಯಾಸ ಸಹಾಯಕಾರಿಯಾದುದಾಗಿದೆ.

೫.೨ ಆತ್ಮಯಾತ್ರಿಕ ಕವಿ ಮಧುರಚೆನ್ನ :

ಬದುಕಿನ ಬೆಂಕಿಯಲ್ಲಿ ಬೇಯುತ್ತಲೆ ಮಹತ್ತನ್ನು ಸಾಧಿಸಿ ತೋರಿಸಿದವರು ಅನುಭಾವಿ ಕವಿ ಮಧುರಚೆನ್ನರು. ಅವರು ತಮ್ಮ ಅನನ್ಯ ಕಾವ್ಯ ಸೃಷ್ಟಿಯಾದ 'ದೇವತಾ ಪೃಥಿವಿ', 'ನನ್ನ ನಲ್ಲ' ಹಾಗೂ ಇತರ ಕೃತಿಗಳ ಮೂಲಕ ಕನ್ನಡದಲ್ಲಿ ಆಧ್ಯಾತ್ಮಿಕ ಒಲವಿನ ಹೊಳೆ ಹರಿಸಿದ್ದಾರೆ. ಜೀವನದ ಕೋಟಲೆಗಳನ್ನೆದುರಿಸುತ್ತಲೇ ಸುಲಭವಾಗಿ ದಕ್ಕದ ಅಂತರ್ಜ್ಞಾನವನ್ನು ಬಹು ಸಣ್ಣ ವಯಸ್ಸಿನಲ್ಲಿಯೇ ಗಳಿಸಿಕೊಂಡು ಬೇಂದ್ರೆಯವರಿಂದ ಪಡೆದಪ್ಪನೆನಿಸಿಕೊಂಡರು. ಅವರು ಬದುಕಿದ್ದು ಕೇವಲ ಐವತ್ತು ವರ್ಷ. ಆದರೆ ಇಪ್ಪತ್ತು ವಯಸ್ಸಿನ ಯುವಕರಿದ್ದಾಗಲೇ ಮಧುರಚೆನ್ನರು ಜ್ಯೋತಿಷ್ಯಶಾಸ್ತ್ರದ ಆಸಕ್ತಿಯಿಂದ ಜ್ಯೋತಿಯ ಕಡೆಗೆ ನಡೆಯತೊಡಗಿದ್ದರು. 'ಫಲಜ್ಯೋತಿಷ್ಯವನ್ನು ಕುರಿತು ಇಬ್ಬರೂ ಅಲೆದಾಡಿದೆವು. ಅವನು ಜ್ಯೋತಿಷ್ಯದಿಂದ ಜ್ಯೋತಿಗೆ ನುಗ್ಗಿದನು. ನಾನು ಜ್ಯೋತಿಷದಲ್ಲಿ 'ಜ್ಯೋತಿ' ಪಥ ಕಾಣಲು ಇನ್ನೂ ಜಿಜ್ಞಾಸಾಪರನಾಗಿದ್ದೇನೆ'[೧] ಎಂದು ಬೇಂದ್ರೆ ಮಧುರಚೆನ್ನರ ಮರಣಾನಂತರ ಬರೆದ ಲೇಖನದಲ್ಲಿ ಹೇಳಿದ್ದಾರೆ. ಬೇಂದ್ರೆಯವರಲ್ಲಿ ದೈವಿಕ ಅನುಭೂತಿ ಬೆಳೆದು ಬರಲು ಮಧುರಚೆನ್ನರ ಗೆಳೆತನ

ಪ್ರಮುಖ ಸ್ಫೂರ್ತಿಸೆಲೆಯಾಗಿತ್ತೆಂಬುದರಲ್ಲಿ ಸಂಶಯವಿರಲಾರದು. ೧೯ರ ಎಳೆ ಹರೆಯದಲ್ಲಿಯೇ ತಾವು ಸಾಗುವ ದಾರಿ ಯಾವುದೆಂದು ಮಧುರಚೆನ್ನರು ಗುರುತಿಸಿಕೊಂಡಿದ್ದರು. ಅಂತೆಯೇ ಸಮಾನ ಮನಸ್ಕ ಗೆಳೆಯರೊಡಗೂಡಿ ೧೯೨೨ ರಲ್ಲಿ ಶಾರದಾ ವಾಚನಾಲಯವನ್ನು ಸ್ಥಾಪಿಸುವುದರ ಮೂಲಕ ಕರ್ನಾಟಕದ ಕಗ್ಗಾಡಿನ ಹಳ್ಳಿಯೊಂದರಲ್ಲಿ ಅನುಭಾವದ ಅರುಣೋದಯವಾಗಲು ಕಾರಣರಾದರು. ಮಧುರಚೆನ್ನರು ಸ್ಥಾಪಿಸಿದ ಶಾರದಾ ವಾಚನಾಲಯ ಗುಂಪು, ಬೇಂದ್ರೆಯವರು ಪುಣೆಯಲ್ಲಿ ಶಾರದಾ ಹೆಸರಿನಲ್ಲಿ ಸ್ಥಾಪಿಸಿದ್ದ ಮಂಡಲ ಅವರಿಗರಿವಿಲ್ಲದಂತೆ ಒಂದೇ ಹೆಸರನ್ನು ಹೊತ್ತಿದ್ದು ಭಾವದೀಪಗಳು ಸಮಾನವಾಗಿ ಉರಿಯುತ್ತಿರುವುದೇ ಕಾರಣವಾಗಿರಬೇಕು.

ಬೇಂದ್ರೆಯವರು ತಮ್ಮ ಕಾವ್ಯೋದ್ಯೋಗದ ಆರಂಭದ ದಿನಗಳಲ್ಲಿಯೆ ಅರವಿಂದ ದರ್ಶನದ ಪ್ರಭಾವಕ್ಕೆ ಒಳಗಾಗಿದ್ದರು. ಅದಕ್ಕೂ ಮೊದಲು ಮರಾಠಿ, ಇಂಗ್ಲೀಷ್ ಹಾಗೂ ಅಮೇರಿಕನ್ ಸಾಹಿತ್ಯದಿಂದ ಸಾಕಷ್ಟು ಪ್ರೇರಣೆಗಳನ್ನು ಪಡೆದುಕೊಂಡಿದ್ದರು. ಕೀಟ್ಸ್, ಬೈರನ್, ವಡ್ಸ್‌ವರ್ತ್, ಶೆಲ್ಲಿ, ಬ್ರೌನಿಂಗ್, ಎಮರ್ಸನ್, ಟ್ಯಾಗೋರ್, ಕಾಳಿದಾಸ, ಲಕ್ಷ್ಮೀಶ, ಸರ್ವಜ್ಞ ಜೊತೆಗೆ ಈಗ ಅರವಿಂದ, ಖಲೀಲ್ ಜಿಬ್ರಾನ್, ಎಇ (ಜಾರ್ಜ್ ರಸೆಲ್) ಸೇರಿಕೊಂಡು ಬೇಂದ್ರೆಯವರಲ್ಲಿ ಉತ್ಕಟ ಕಾವ್ಯವನ್ನು ಹುಟ್ಟಿಸತೊಡಗಿದರು. ತೀವ್ರವಾದ ಹಾಗೂ ವೈಯಕ್ತಿಕವಾದ ಭಾವನಾತ್ಮಕ ಎಳೆಗಳ ಜೊತೆಗೆ ಅರಿವನ್ನು ಹಿಡಿಯಬೇಕೆನ್ನುವ ಹಂಬಲದ ಎಳೆಗಳು ಅಲ್ಲಲ್ಲಿ ಸೇರಿಕೊಂಡವು. ಬುದ್ಧಿಯ ಸಿದ್ಧಿಯನ್ನು ಸಾಧಿಸಬೇಕೆನ್ನುವ ಆಶಯ ಅರವಿಂದರಿಂದ ಪ್ರಭಾವಿತರಾದವರ ಸಂಗದಲ್ಲಿ ಸಾಕಾರಗೊಳ್ಳತೊಡಗಿತು. ಐರಿಶ್ ಕವಿ ಎ.ಈ.ಯವರು ಅರವಿಂದರಂತೆ ಧಾರವಾಡ ಹಾಗೂ ಹಲಸಂಗಿ ಗೆಳೆಯರ ಗುಂಪಿನ ಗುರುಗಳಲ್ಲೊಬ್ಬರಾಗಿ ನವಕವಿಗಳ ಕಾವ್ಯ ಪಥಗಳನ್ನು ಬೆಳಗತೊಡಗಿದರು. ಬೇಂದ್ರೆಯವರ ಮುಂದಾಳುತನದಲ್ಲಿದ್ದ ಗುಂಪಿನಲ್ಲಿ ಶ್ರೀಧರ ಖಾನೋಳಕರ, ಪ್ರಹ್ಲಾದ ನರೇಗಲ್, ವಿನೀತ ರಾಮಚಂದ್ರರಾವ್, ಶೇ.ಗೋ. ಕುಲಕರ್ಣಿ, ಜಿ.ಬಿ.ಜೋಶಿ, ನಾರಾಯಣ ಸಂಗಮ, ಬೆಟಗೇರಿ ಕೃಷ್ಣಶರ್ಮ ಮುಂತಾದವರಿದ್ದರು. ಹಲಸಂಗಿಯ ಗೆಳೆಯರ ಗುಂಪಿನಲ್ಲಿ ಮಧುರಚೆನ್ನ (ಹಲಸಂಗಿ ಚೆನ್ನಮಲ್ಲಪ್ಪ), ಸಿಂಪಿ ಲಿಂಗಣ್ಣ, ಪಿ. ಧೂಲಾ ಸಾಹೇಬ, ಕಾಪಸೆ ರೇವಪ್ಪ ಮತ್ತಿತರರು ನವೋನವವಾಗಿದ್ದ ಬದುಕಿನ ದೃಷ್ಟಿಕೋನಕ್ಕೆ ತೆರೆದುಕೊಂಡರು. ಮಧುರಚೆನ್ನರಂತೂ ತಾವು ಬಾಲಕರಾಗಿದ್ದಾಗಿನಿಂದಲೇ ಅನುಭಾವದ ಅಡಿಗೆಯನ್ನು ಸವಿಯಲಿಕ್ಕೆ ಹಾತೊರೆದಿದ್ದರು. ಅವರ ತಂದೆಯವರು ಓದುತ್ತಿದ್ದ 'ಶಿವಲೀಲಾಮೃತ' ಕೃತಿ ಮೊದಲಗೊಂಡು ಅನೇಕ ಪುಸ್ತಕಗಳನ್ನು, ದೈವಿಕ ಪೌರುಷದ ಜನಪದ ಬಯಲಾಟಗಳನ್ನು ಅರಗಿಸಿಕೊಂಡಿದ್ದರು. ಹತ್ತೊಂಭತ್ತರ ಹರೆಯದಲ್ಲಿ ಗೃಹಸ್ಥಾಶ್ರಮವನ್ನು ಪ್ರವೇಶಿಸಿದರೂ ಎಳೆತನದಲ್ಲಿ ಕೂಡಿದ್ದ ಆತ್ಮಜ್ಞಾನದ ಹಸಿವು ಅವರಿಂದ ದೂರ ಸರಿಯಲಿಲ್ಲ. ಸಂಸಾರದ ಬಂಡಿಯನ್ನು ನೂಕುತ್ತಲೆ ಆಧ್ಯಾತ್ಮಿಕ ನಿಚ್ಚಣಿಕೆಯನ್ನು ಕೂಡ ಹತ್ತುತ್ತಿದ್ದರು. ಊರನ್ನು ಬಿಡದೆ, ಅಡವಿಯನ್ನೂ ದೂರ ಮಾಡದೆ ತಾವು ಅಂದುಕೊಂಡಿದ್ದ ಗೆಳೆಯನ ಸಾಧನೆಯನ್ನು ಮಾಡಿ ತೋರಿಸಿದರು. ಬೇಂದ್ರೆ ತಮ್ಮ ಒಂದು ಪದ್ಯದಲ್ಲಿ ಕೆತ್ತಿದರು :

ಊರಿಗೂ ಅಡವಿಗೂ ನಡುವೆ ನೆಲೆ ಮಾಡಿದನು

ಎಡತಾಕಿ ಬೆವರಿಟ್ಟು ಬಯಲು ತೋಯಿಸಿ[೭]

ಮಧುರಚೆನ್ನರಿಗೆ ಆಧ್ಯಾತ್ಮಿಕ ಸಾಧನೆ ಸುಮ್ಮಸುಮ್ಮನೆ ಒಲಿದು ಬರಲಿಲ್ಲ. ಆ ಹಸಿವಿನಿಂದ ಅವರು ಹತ್ತು ಕಡೆ ಅಲೆದಾಡಿದರು. ಬಸವಣ್ಣನ ಕಲ್ಯಾಣ, ಬೈರಾಗಿಯ ಬೆಟ್ಟ, ಬಾಗಲಕೋಟೆಯ ಆರೋಗ್ಯಧಾಮ, ತುಂಗಭದ್ರೆಯ ಚಿಕಿತ್ಸಾ ಕೇಂದ್ರ, ಪಾಂಡಿಚೇರಿಯ ಅರವಿಂದಾಶ್ರಮ ಇವು ಅವರು ಜ್ಯೋತಿಯನ್ನರಸುತ್ತ ಅಲೆದಾಡಿದ ತಾಣಗಳು. ಚೈತನ್ಯದ ಹಿಂದೆ ಸತ್ತೂ ಬದುಕಿದರು. ಹೆಂಡತಿ ಬಸಮ್ಮನೊಡನೆ, ಜೀವದ ಗೆಳೆಯ ಹಲಸಂಗಿಯ ಮಾದಣ್ಣ (ಮಧು) ಅವರೊಡನೆ ಸಖ್ಯಯೋಗ ಸಾಧಿಸಿದರು. ಮಧುರಚೆನ್ನರ ಗೆಳೆತನದ ತಪಸ್ಸು ಸಾಮಾನ್ಯವಾಗಿ ಎಲ್ಲ ಗೆಳೆಯರಿಗೂ ತಟ್ಟಿತು. ಬೇಂದ್ರೆ-ಮಧುರಚೆನ್ನರಂತೂ ಹಲವು ಜನ್ಮಗಳ ಗೆಳೆಯರಂತೆ ಬದುಕಿದರು. ಚೆನ್ನಮಲ್ಲಪ್ಪ ಇಪ್ಪತ್ತರ ಹರಯದಲ್ಲಿಯೆ ಪಡೆದಪ್ಪನಾಗಿರುವುದನ್ನು ಬೇಂದ್ರೆ ಗುರುತಿಸಿದರು :

ಎರೆಯುವನು ಬಾ ನಿನ್ನ ನಮ್ಮ ಪಟ್ಟದ ಮರಿಯೆ

ಸಕಲ ತೀರ್ಥದ ಕ್ಷೀರ ನೀರ ತಂದು

ಬೆರಗಾಗಿ ಬೆರೆತು ಆ ಶಿವನಲ್ಲಿ ದೇವನಲಿ

ಪಡೆದಪ್ಪನಾಗು ಎಂದು[೮]

ಕಲ್ಯಾಣ, ಕೂಡಲ, ಕಾವೇರಿ, ಶಾಲ್ಮಲೆ ಮುಂತಾದ ಜೀವಚೇತನಗಳಿಂದ ಬೇಂದ್ರೆ ಹಾಗೂ ಮಧುರಚೆನ್ನರು ತಮ್ಮನ್ನು ತಾವು ಎರೆದುಕೊಂಡರು. ಫಲವತ್ತಾದ ಹೊಲದಲ್ಲಿ ಒಕ್ಕಲುತನ ಮಾಡುತ್ತಿರುವ ದೇವನೆಂಬ ಲೋಕದ ರೈತನಿಗೆ ರಂಟೆ ಕುಂಟೆಗಳಾದರು. ದೈವಿಕ ಅನುಭೂತಿಯ ನೆಲೆಗಳನ್ನು ನಿಸರ್ಗದ ಮೂಲಕ ಕಂಡುಕೊಂಡರು.

ಐರಿಶ್ ಕವಿ ಜಾರ್ಜ್ ರಸೆಲ್ (ಎ.ಈ.) ಮಧುರಚೆನ್ನರಿಗೂ ಬೇಂದ್ರೆಗೂ ಅನುಭಾವದಡಿಗೆಯ ರುಚಿ ಹೆಚ್ಚಿಸಿದರು. ಎ.ಈ. ಅವರ ಪುಸ್ತಕಗಳನ್ನು, ಲೇಖನಗಳನ್ನು ಹಗಲು ರಾತ್ರಿಯೆನ್ನದೆ ಗೆಳೆಯರ ಗುಂಪು ಓದಿತು. ಎಲ್ಲರಿಗಿಂತ ಮಧುರಚೆನ್ನ ಮಾತ್ರ ಆ ತಿರುಳನ್ನು ಅರೆದು ಕುಡಿದುಬಿಡುತ್ತಿದ್ದರು. ಅನುಭಾವದ ಕುರಿತು ಮಧುರಚೆನ್ನರಿಗಿದ್ದ ಆಗಿನ ಹಂಬಲದ ಬಗ್ಗೆ ಬೇಂದ್ರೆ ಹೀಗೆ ಬರೆಯುತ್ತಾರೆ: 'Candle of Vision' (ದೃಷ್ಟಾಂತ ದೀಪಿಕಾ) ಎಂಬ ಎ.ಈ. ಯವರ ಪುಸ್ತಕ 'ಥಿಯೋಸಫಿ'ಯವರ ಒಂದು ಮಾಸಪತ್ರಿಕೆಯಲ್ಲಿ ವಿಮರ್ಶಿತವಾಗಿತ್ತು. ಅದನ್ನು ಮೊದಲು ಪ್ರೀತಿಯಿಂದ ಓದಿದವರು ಸಗರ ರಾಮಚಂದ್ರ, ತಿವಾರಿ, ಹಬ್ಬೂ. ಅದನ್ನು ಅರಿತು ಕುಡಿದವ ಮಧುರಚೆನ್ನ.'[೯] ಮಧುರಚೆನ್ನರ ಎಂದೂ ಹಿಂಗದ ಆಧ್ಯಾತ್ಮಿಕ ಹಸಿವು ಅವರನ್ನು ಮತ್ತಷ್ಟು ಆಳಕ್ಕೆ ಎಳೆದುಕೊಂಡು ಹೋಯಿತು. ಅವರು ಏನು ಬರೆದರೂ ಅದು ಅನುಭಾವಕ್ಕೆ ಸಂಬಂಧಪಟ್ಟವೇ ಆಗಿತ್ತು. ಅದನ್ನು ಬಿಟ್ಟು ಬೇರೆ ಅಸ್ತಿತ್ವವಿರಲಿಲ್ಲ. "Che is a branch by himself'. ಕಡಿದ ಗೆಳೆಯರ ಗುಂಪಿನ ವೃಕ್ಷದ ಸ್ವತಂತ್ರ ಶಾಖೆ ಆತ''[೧೦] ಎಂದು ಬೇಂದ್ರೆ ಹೇಳುವಲ್ಲಿ ಮಧುರಚೆನ್ನರು ತಮ್ಮ ಸಾಧನೆಯಿಂದ ಗೆಳೆಯರ ಗುಂಪಿನ ಲೌಕಿಕ ಜಗತ್ತಿನಿಂದ

ಸಂಪೂರ್ಣವಾಗಿ ಬೇರೆ ನಿಂತರು ಎನ್ನುವ ಅರ್ಥವಿದೆ. ಲೌಕಿಕ ಕಷ್ಟ-ಕಾರ್ಪಣ್ಯಗಳ ನಡುವೆಯೂ ತಾವು ಕಂಡ ಅಲೌಕಿಕತೆಯನ್ನು ಕಾವ್ಯದಲ್ಲಿ ಹಿಡಿದಿಟ್ಟ ಮಧುರಚೆನ್ನರು ನವೋದಯ ಕಾವ್ಯಕ್ಕೆ ಅದರಲ್ಲೂ ಮುಖ್ಯವಾಗಿ ಬೇಂದ್ರೆಯವರಿಗೆ ದೈವಿಕ ಸೆಲೆಯ ನೀರು ಹಣಿಸಿದರು. ಮಧುರಚೆನ್ನರನ್ನು ಕುರಿತಂತೆ ತುಂಬ ಆಳವಾದ, ಅಭ್ಯಾಸಪೂರ್ಣವಾದ ಕೃತಿಗಳನ್ನು ಪ್ರಕಟಿಸಿರುವ ಡಾ. ಗುರುಲಿಂಗ ಕಾಪಸೆಯವರು ಮಧುರಚೆನ್ನರ ಕಾಣ್ಕೆಗಳನ್ನು ಹೀಗೆ ವಿವರಿಸುತ್ತಾರೆ. 'ಮಧುರಚೆನ್ನರು ದೇವರ ಹುಚ್ಚು ಹಿಡಿಸಿಕೊಂಡ ಕವಿ. ಅದಕ್ಕಾಗಿ ಅಮಿತಯಾತನೆಯನ್ನು ಅನುಭವಿಸಿದ ಕವಿ. ನಿರಂತರವಾಗಿ ಸಾಧನೆ ಮಾಡಿದ ಸಾಧಕ ಕವಿ. ತಮ್ಮ ಸಾಧನೆಯ ವಿವಿಧ ಘಟ್ಟಗಳನ್ನು, ಇಡೀ ಸಾಧನೆಯ ಕಥನವನ್ನು ಕಾವ್ಯವಾಗಿಸಿದ ಕವಿ. ಆದ್ದರಿಂದ ಅವರ ಕಾವ್ಯ ಕನ್ನಡ ನವೋದಯ ಕಾವ್ಯದಲ್ಲಿಯೇ ವಿಶಿಷ್ಟವಾದ ಸಂವೇದನೆಯಿಂದ ವಿಶಿಷ್ಟವಾದ ರುಚಿಯನ್ನು ನೀಡುತ್ತದೆ. ಅವರ ಕಾವ್ಯದಲ್ಲಿ ಶಾಶ್ವತವಾಗಿ ಉಳಿಯಬಲ್ಲ ಸೂಕ್ತಿಗಳು ಮೂಡಿಬಂದಿದ್ದುದು ಬರೀ ಕಲ್ಪಕತೆಯಿಂದಲ್ಲ. ಅನುಭವದ ಸಾಚಾತನದಿಂದ.'[೬]

ಗೆಳೆಯರ ಗುಂಪಿನ ಒಡನಾಟದಲ್ಲಿ ಪಾಶ್ಚಾತ್ಯ ಅನುಭಾವಿ ಕವಿಗಳು ಹಾಗೂ ಭಾರತೀಯ ಚಿಂತಕರು ಮೇಲಿಂದ ಮೇಲೆ ಅನುಭಾವದ ಮಳೆ ಸುರಿಸುತ್ತಿದ್ದರು. ಬೇಂದ್ರೆ ಹಾಗೂ ಮಧುರಚೆನ್ನರು ಕೊನೆಯವರೆಗೂ ಆ ಪ್ರಭಾವಗಳನ್ನು ಉಳಿಸಿಕೊಂಡರು. ಅಷ್ಟೆ ಅಲ್ಲ ತಮ್ಮದೆ ಆದ ಅಲೌಕಿಕತೆಯ ಪಥ ಕಂಡುಕೊಂಡರು. ಅಲೌಕಿಕತೆ ಬೇಂದ್ರೆ ಕಾವ್ಯದಲ್ಲಿ ಒಂದು ಭಾಗವಾಗಿ ಬಂದರೆ ಮಧುರಚೆನ್ನರು ಬರೀ ಅದನ್ನಷ್ಟೇ ಮೆರೆಸುತ್ತಾರೆ. ಆಧ್ಯಾತ್ಮಿಕ ಈ ಎಳೆಗಳ ತಂತುಗಳನ್ನು ಮಧುರಚೆನ್ನರೊಂದಿಗೆ ಜೋಡಿಸಿಕೊಂಡಂತೆ ನವೋದಯದ ಇತರ ಕವಿಗಳ ಜೊತೆಗೆ ಬೇಂದ್ರೆ ಬೆಳೆಸಿಕೊಂಡಿರಲಿಲ್ಲವೆಂಬುದು ಒಂದು ಮಹತ್ವದ ಸಂಗತಿ. 'ಗೆಳೆಯರಾದ ವಿನಾಯಕ ಗೋಕಾಕ, ಶಂಕರಗೌಡ ಪಾಟೀಲ, ಅಣ್ಣ ಮಾಸ್ತಿ ತಮ್ಮ ಪರಿಯಿಂದ ನನಗೆ ಬೆಂಬಲವಾಗಿದ್ದರೆ, ಚೆನ್ನಮಲ್ಲಪ್ಪನ ಒಡನಾಟವು ಆಧ್ಯಾತ್ಮಿಕ ತಾತ್ವಿಕದಲ್ಲಿ ಬೇರೆ ಬಲವನ್ನು ನೀಡಿತು. ನಾನು ಪೂನಾದಲ್ಲಿದ್ದರೆ ಅಲ್ಲಿ ಬಂದ, ಸೊಲ್ಲಾಪುರಕ್ಕೆ ಬಂದ, ಧಾರವಾಡಕ್ಕೆ ಬಂದೇ ಬಂದ! ನಮ್ಮ ಶಿರಹಟ್ಟಿಗೆ ಕೂಡಿ ಹೋಗಿದ್ದೆವು. ಆಶ್ರಮಕ್ಕಂತೂ ಚೆನ್ನಮಲ್ಲಪ್ಪ-ಶಂಕರಗೌಡ ಇವರ ಸ್ನೇಹದ ಜೋಡೆಳೆ ಎಳೆಯಿತು. 'ಅಲ್ಲಿಗೆ ಹೋಗಿರಿ' ಎಂದವ ನಾನು; 'ಅಲ್ಲಿಗೆ ಬರ್‍ರಿ' ಎಂದವರು ಅವರು. ಎರಡೂ ಶ್ರೀ ಗುರು ಅರವಿಂದ ಪ್ರಸಾದವೇ'[೭] ಬೇಂದ್ರೆ ಹಾಗೂ ಮಧುರಚೆನ್ನರ ಮೈತ್ರಿಯನ್ನು ಅರವಿಂದರ ನಂಟು ಗಾಢವಾಗಿ ಬೆಸೆದಿತ್ತು. ಮಧುರಚೆನ್ನರ ತಾಯಿಯ ಹೆಸರು ಕೂಡ ಅಂಬವ್ವ ಆಗಿರುವುದು ಆಕಸ್ಮಿಕವಾಗಿದ್ದರೂ, ವಾತ್ಸಲ್ಯದ ಧಾರೆಯೊಂದು ಎಳೆಗಳನ್ನು ದೂರದಿಂದಲೆ ಜೋಡಿಸಿರಬೇಕೆಂದು ಬೇಂದ್ರೆಯವರಿಗೆ ಅನಿಸುತ್ತಿರಬೇಕು. ಮಧುರಚೆನ್ನರು ತಮ್ಮ ಇಡೀ ಬದುಕನ್ನು ಅರಿವಿನ ಜ್ಯೋತಿಗೆ, ಅರವಿಂದರ ಹಂಬಲಕ್ಕೆ ಅರ್ಪಿಸಿಕೊಂಡಿದ್ದರ ಬಗ್ಗೆ ಬೇಂದ್ರೆಯವರಿಗೆ ತುಂಬ ಅಭಿಮಾನವಿತ್ತು. ಚೆನ್ನನ ಜೊತೆಯ ಗೆಳೆತನ ಜನ್ಮ-ಜನ್ಮಾಂತರದ್ದೆಂದು ಅವರು ಹಾಡಿದರು:

ಇಂದಿನೀ ಗೆಳೆತನವು ಹಿಂದಿನಿಂದಲೆ ಬಂತು
ಮುಂದೆ ಜನ್ಮಾಂತರದಿ ಸಾಗಿ ಸಾಗಿ

ಹೊಂದಿರುವ ಪಕಳೆಗಳ ಹಿಂದೆ ಕೇಸರದಿಂದ-

ನೇಕ ಬೀಜದ ಏಕಫಲವು ಆಗಿ[೯]

ತಮಗೆ ದೇವರ ಅಸ್ತಿತ್ವದ ಗುರುತು ಸಿಕ್ಕಿದ್ದನ್ನು ಮಧುರಚೆನ್ನರು ಭಾಷೆಯಲ್ಲಿ ಪಡಿಮೂಡಿಸಿದರು. ಮಧುರಚೆನ್ನ, ಶಂಕರಗೌಡ ಮುಂತಾದ ಗೆಳೆಯರು ಬೇಂದ್ರೆಯವರನ್ನು ತಮ್ಮ ಕಡೆಗೆ ಕೊನೆಯವರೆಗೆ ಜಗ್ಗುತ್ತಲೆ ಇದ್ದರು. 'ಬೇಂದ್ರೆ ಹಾಗೂ ಮಧುರಚೆನ್ನರ ಸಂಬಂಧ ಕೊನೆಯವರೆಗೂ ನಡೆದುಬಂದಿತ್ತು. ಇವರಿಬ್ಬರೂ ಶ್ರೀ ಅರವಿಂದರ ಪ್ರಭಾವದಿಂದ ಸ್ವಂತದ ಆಧ್ಯಾತ್ಮಿಕತೆಯನ್ನು ರೂಪಿಸಿಕೊಂಡವರು. ಆದರೆ ಅನುಭಾವ, ಬೇಂದ್ರೆ ಕಾವ್ಯದ ಒಂದು ಸತ್ವವಾಗಿದ್ದರೆ ಮಧುರಚೆನ್ನರ ಕಾವ್ಯದಲ್ಲಿ ಅನುಭಾವವನ್ನು ಬಿಟ್ಟರೆ ಬೇರೇನೂ ಇರಲಿಲ್ಲ.... ಅವರು ತಮ್ಮ ಬದುಕನ್ನೇ ಅಷ್ಟೇ ಏಕೆ, ತಮ್ಮ ಸಾವನ್ನು ಕೂಡ - ಅನುಭವದ ಅನುಭವಕ್ಕಾಗಿ ಶ್ರುತಿಗಳಿಸಿಕೊಂಡವರು.'[೯] ಪ್ರಕೃತಿಯ ಶ್ರಾವಣಮಾಸ ಪ್ರಾಯಶಃ ಎಲ್ಲ ಕವಿ -ಅನುಭಾವಿಗಳಿಗೂ ತುಂಬ ಮಹತ್ವದ್ದೆಂದು ತೋರುತ್ತದೆ. ಶ್ರಾವಣದಲ್ಲಿಯೆ ಸುಖ, ದುಃಖಗಳೆರಡೂ ಮಳೆಯಾಗಿ ಸುರಿದು ಹೊಳೆಯಾಗಿ ಹರಿದ ನಿದರ್ಶನಗಳನ್ನು ನೋಡಬಹುದು. ಅರವಿಂದರು, ಬೇಂದ್ರೆ, ಮಧುರಚೆನ್ನರನ್ನು ಶ್ರಾವಣ ಪ್ರೀತಿಯಿಂದ ಅಪ್ಪಿಕೊಂಡಂತೆಯೆ ಜೀವನದ ಕಠೋರತೆಗಳಿಂದ ಕೂಡ ಕಂಗೆಡಿಸಿದೆ. ಮಧುರಚೆನ್ನರಿಗೆ ಅರವಿಂದರ ಹಾಗೂ ಶ್ರೀಮಾತೆಯವರ ದರ್ಶನ ಭಾಗ್ಯ ಸಿಕ್ಕಿದ್ದು ೧೯೩೮ ರ ಆಗಸ್ಟ ೧೫ ರಂದು. ಆಗಸ್ಟ ೧೫ ಅರವಿಂದರ ಜನ್ಮದಿನ. ಮಧುರಚೆನ್ನರಿಗೆ ಮೊದಲು ಆಧ್ಯಾತ್ಮಿಕ ಬುತ್ತಿ ಉಣಬಡಿಸಿದ ರಾಮಕೃಷ್ಣ ಪರಮಹಂಸರ ಪುಣ್ಯತಿಥಿಯ ದಿನಾಂಕ ಕೂಡ ಆಗಸ್ಟ ೧೫. ಯೋಗಾಯೋಗವಿರಲಿ ಅಥವಾ ಆಕಸ್ಮಿಕವಿರಲಿ ಮಧುರಚೆನ್ನರು ಅಗಲಿದ ತಾರೀಖು ಕೂಡ ೧೯೫೩ರ ಆಗಸ್ಟ ೧೫. 'ಮಧುರಚೆನ್ನರು ಜನಿಸಿದ್ದು ೧೯೦೩ ಜುಲೈ ೩೧ ರಂದು. ಭಾರತೀಯ ಪಂಚಾಂಗದಂತೆ ಅಂದು ಶ್ರಾವಣದ ಸಿರಿಯಾಳಷಷ್ಠಿ. ಈ ತಿಥಿ ಮಧುರಚೆನ್ನರ ಭಕ್ತಿಯ ಸಾಧನೆಯ ದೃಷ್ಟಿಯಿಂದಲೂ ಮಹತ್ವದ್ದು. ಅವರು ಇಹಲೋಕ ಯಾತ್ರೆ ಮುಗಿಸಿದ ದೃಷ್ಟಿಯಿಂದಲೂ ಮಹತ್ವದ್ದು. ಸರಿಯಾಗಿ ಐವತ್ತು ಸಂವತ್ಸರ ಬಾಳಿದ ಅವರು ಸಿರಿಯಾಳ ಷಷ್ಠಿಯ ದಿನದಂದೇ ನಮ್ಮನ್ನಗಲಿದರು.'[೧೦] ಮಧುರಚೆನ್ನರು ಇನ್ನಿಲ್ಲವಾದ ಆ ಪ್ರಸಂಗದಲ್ಲಿ ಅವರ ಭೌತಿಕ ದೇಹಕ್ಕೆ ಮಣ್ಣು ಕೊಟ್ಟ ಕ್ಷಣಗಳನ್ನು ಬೇಂದ್ರೆಯವರು ತಮ್ಮ ಚಿತ್ತದಲ್ಲಿ ಕೆತ್ತಿಬಿಟ್ಟರು: 'ನನ್ನ ಗೆಳೆಯನ ಕುಣಿಯಲ್ಲಿಳಿದು, ಅವರ ಧರ್ಮಪತ್ನಿ ಬಸವ್ವನವರ ಇಚ್ಛೆಯಂತೆ ಮೊದಲ ಹಿಡಿ ಮಣ್ಣುಕೊಟ್ಟೆ. ಗೌರವದ ಮಾಲೆ ಹಾಕಿದೆ. ನನ್ನ ಜೀವನದಲ್ಲಿ ಕಠೋರ ಪ್ರಸಂಗಗಳು ಅನೇಕ ಬಂದು ಹೋಗಿವೆ. ನನ್ನ ಮಗನಿಗೆ, ಮಿತ್ರರಿಗೆ, ವಿದ್ಯಾರ್ಥಿಗಳಿಗೆ ಚಿತೆಗೇರಿಸಿದ್ದೇನೆ. ನನ್ನ ಪಾಲಿನ ಸುಖ, ದುಃಖ ಕಂಡಿದ್ದೇನೆ, ಉಂಡಿದ್ದೇನೆ, ಅರ್ಪಿಸಿದ್ದೇನೆ. ನೆನಪಿಗೆ ಮರಣವಿಲ್ಲ. ಅದು ಅನುಭೂತಿಯ ಅಖಂಡ ಸಮಾಧಿ.'[೧೧] ಲೌಕಿಕ ಹಾಗೂ ಅಲೌಕಿಕ ಬದುಕಿನ ನೆನಪುಗಳನ್ನು ಶ್ರಾವಣ ಬೇಂದ್ರೆಯವರಲ್ಲಿ ಉಕ್ಕಿಸುತ್ತದೆ. ತೀರಿಹೋದರೂ ಹೊಸ ಹರೆಯದೊಂದಿಗೆ ಮನಸ್ಸಿನೆದುರು ಮೆರವಣಿಗೆ ನಡೆಸುವುದು. ಅದರಿಂದ ಕಳೆದ ಬದುಕು ಮತ್ತು ಎದುರಿಗೆ ಬಿದ್ದಿರುವ ಬದುಕಿನ ನಡುವೆ ಹೋಲಿಕೆ ನಡೆಯುವುದು. ನೆನಪೆ ಜೀವಕ್ಕೆ ಆಸರೆಯಾಗಿ ನಿಲ್ಲುವುದು.

ತವರು ಮನೀಗಿ ಹೊರಡೋ
ಸಡಗರವೆ ಸಡಗರ
ಮಲ್ಲಿಗೀ ಮಾಲಿ ತುರುಬಿಗೆ
ಅರಿಶಿಣಾ ಕುಂಕುಮಾ ಗಲ್ಲಾ । ಹಣೀ
ಹೊಸಾ ಸೀರಿ, ತುಂಬಿದ ಉಡಿ
ಉರಿಯೋ ಹಸೆಮಣಿಗೆ ಹೊರಟಿತ್ತು ಸವಾರಿ
ಶ್ರಾವಣಕ್ಕ ಹೊಸಾ ಹರೆ[೧೨]

ಸುಖ-ದುಃಖದ ನಿರಂತರ ಸೆಲೆ ಶ್ರಾವಣದಿಂದ ಹರಿಯುತ್ತಲೆ ಇದೆ. ಅದು ಧಾರವಾಡದ ಸಾಧನಕೇರಿಗೆ ಮಳೆ ಎಳೆಯುವ ತೇರೂ ಆಗಿರಬಹುದು. 'ವೃಂದೆಯ ಚಿತೆ ಉರಿಯುವಲ್ಲಿ, ತುಲಸಿಯು ಒಡಮುರಿಯುವಲ್ಲಿ'[೧೩] ಬರುವ ಶ್ರಾವಣವೂ ಆಗಿರಬಹುದು. ಕೂಡಲಸಂಗಮದೇವನ ಸಾಂಗತ್ಯ ಅನುಭವಿಸುವ ಪ್ರತಿಯೊಬ್ಬ ಭಕ್ತನಿಗೂ ಕೈಲಾಸ ದಕ್ಕಬೇಕೆಂದು ಬಸವಣ್ಣನವರು ಬಯಸಿದ ಹಾಗೆ ಮಧುರಚೆನ್ನರು ತಮ್ಮ ಗೆಳೆಯರಿಗೆ ಆಧ್ಯಾತ್ಮ ಜೀವನದ ಸಂಸ್ಪರ್ಶ ಕಲ್ಪಿಸಿದರು. ಅಣ್ಣಯ್ಯನಂತೆ ಭಾವಿಸಿದ್ದ ಬೇಂದ್ರೆಯನ್ನು ಮಧುರಚೆನ್ನರು ಅನುಭಾವದ ಸೆರಗಿನಲ್ಲಿ ಹಿಡಿದರು.

ನನ್ನ ನಿನ್ನ ಚೆನ್ನ ಬಳಿ ವಿಶಾಲವೃಕ್ಷ ಬೆಳೆದಿದೆ
ಮುಗಿಲ ತುಂಬಿ ಉಳಿದಿದೆ
ಗಾಳಿಯಂತೆ ಸುಳಿದಿದೆ[೧೪]

ಮಧುರಚೆನ್ನರ ನಿಸರ್ಗ ಗೀತೆಗಳಲ್ಲಿ ಕಂಡುಬರುವ ನಿಸರ್ಗ ನಮ್ಮ ಕಣ್ಣಿಗೆ ಕಾಣುವ ನಿಸರ್ಗವಲ್ಲ. ಅದರ ಭೌತಿಕ ವರ್ಣನೆಯಲ್ಲಿ ಅವರು ಮೈಮರೆಯುವುದಿಲ್ಲ. ಅವರಿಗೆ ಸೃಷ್ಟಿ ಶಿವನ ಸಾಕಾರ ರೂಪವಾಗಿದೆ. ಮಧುರಚೆನ್ನರಿಗೆ ಬೆಳಗಿನ ಉಷಾದೇವಿ ಆದಿಮಾತೆಯಾಗಿದ್ದಾಳೆ ಎನ್ನುತ್ತಾರೆ ಡಾ. ಗುರುಲಿಂಗ ಕಾಪಸೆ :

ಜರದಂಚಿನ ಸಿರಿ
ನೀಲಿಯ ವಸನಕ್ಕೆ
ಒಪ್ಪುವ ನಗೆ ಹೂ ಅಲ್ಲಲ್ಲಿ
ಚರಣವ ಸ್ಪರ್ಶಿಪ
ಹಸುರಿನ ಕುತನಿಯ
ಹಡದಿಯ ಸಂಭ್ರಮ ಧರೆಯಲಿ

ಕಣ್ಣಿಗೆ ಹಬ್ಬವನ್ನುಂಟುಮಾಡುವ ಉಷಃಕಾಲವು ಈ ಸಾಲುಗಳಲ್ಲಿ ತನ್ನ ನಯ-ನಾಜೂಕಿನಿಂದ, ಪ್ರತಿಮಾ ವಿನ್ಯಾಸದಿಂದ ಇನ್ನಷ್ಟು ಸುಂದರವಾಗಿ ಕಾಣುತ್ತದೆ. ಈ ಕವಿ ಕೇವಲ ಪ್ರಕೃತಿ ಸೌಂದರ್ಯವನ್ನು ಕಾಣುವುದಿಲ್ಲ. ಆದಿಮಾತೆಯನ್ನು ತನ್ನ ಯೋಗನೇತ್ರದಿಂದ ಗುರುತಿಸುತ್ತಾರೆ.

ಧರಣಿಗೆ ದಿವವನು

ದಿನದಿನ ಸುರಿಸುವ

ಆದಿಮಾತೆ ಶಿವಸಾಕಾರಂ।

ಆದಿಮಾತೆಯ ಸ್ವರೂಪದಲ್ಲಿ ಉಷಾದೇವಿಯನ್ನು ಕಾಣುವ ಮಧುರಚೆನ್ನರು ಕನ್ನಡಕ್ಕೆ ನವೀನವಾದ ಬೆಳಗಿನ ವರ್ಣನೆಯನ್ನು ನೀಡಿದ್ದಾರೆ. ಬೇಂದ್ರೆಯವರ 'ಬೆಳಗು' ಪದ್ಯದ ವರ್ಣನಾ ವೈಶಿಷ್ಟ್ಯವೂ ಅನನ್ಯವಾಗಿಯೇ ಕಾಣಿಸುತ್ತದೆ.''[೨೫] ಬೇಂದ್ರೆಯವರ 'ಬೆಳಗು', 'ಇದು ಬರೀ ಬೆಳಗಲ್ಲೊ ಅಣ್ಣಾ!' ಎಂದು ಕವಿ ಕಂಡ ದೈವಿಕ ಬೆರಗನ್ನು ಅಭಿವ್ಯಕ್ತಿಸಿದರೂ ಆ ಭಾವ ನೆಲದಿಂದ ಕಳಚಿಕೊಂಡಿಲ್ಲ. ನೆಲ ಮತ್ತು ಮುಗಿಲು ಪ್ರತ್ಯೇಕವಾಗಲಾರದಂತೆ ಬಿಗಿದುಕೊಂಡಿವೆ. ಬೇಂದ್ರೆಯವರಿಗೆ ಎರಡೂ ಬೇಕು. ಕಾವ್ಯಸೃಷ್ಟಿಯ ದೃಷ್ಟಿಯಿಂದ ಹೇಳಬಹುದಾದರೆ ಮಧುರಚೆನ್ನರದು ಅಲ್ಲಮನಂತಹ ಅಲೌಕಿಕ ದೃಷ್ಟಿಕೋನ, ಬೇಂದ್ರೆಯವರದು ಬಸವಣ್ಣನಂತಹ ದೈವಾಂಶ ಪ್ರೇರಿತ ಲೌಕಿಕ ದೃಷ್ಟಿಕೋನ. ಮಧುರಚೆನ್ನರಿಗೆ ಮುಗಿಲಿನ 'ಸಿಡಿಲು' ಇಂದ್ರಲೋಕದಿಂದ ಬಿದ್ದ ಇಂದ್ರವನದ ಹಣ್ಣಾಗುತ್ತದೆ. ಬೇಂದ್ರೆಗೆ ಪಾತರಗಿತ್ತಿಯ ಓಟ ನಂದನದ ತೋಟದ ಕಡೆಗಿದೆಯೆಂದು ಅನಿಸಿದರೂ ಅದು ಲೌಕಿಕ ಸೃಷ್ಟಿಯನ್ನು ಪ್ರೀತಿಯಿಂದ ಹೀರಿದ ಮೇಲೆಯೇ ಎಂದು ತೋರುತ್ತದೆ. ಹಾಗಾಗಿಯೇ ಅವರು ಮಧುರಚೆನ್ನ ಮತ್ತು ತಮ್ಮ ನಡುವೆ ಬಿಡಿಸಲಾರದಂತೆ ಬೆಸೆದುಕೊಂಡಿರುವ ಜೀವ ಜೀವದ ಸಂಬಂಧವನ್ನೂ, ವಿಶಾಲವೃಕ್ಷದ ನೆಳಲನ್ನು ಅನುಭವಿಸಿಯೂ 'ನನ್ನ ನಿನ್ನ ನೋಟ ಮಾತ್ರ ಎರಡು ದಿಕ್ಕಿಗೆಳೆದಿದೆ/ಬೇರೆ ಹಾದಿ ತುಳಿದಿದೆ'[೨೬] ಎಂದು ಮಧುರಚೆನ್ನರಿಗೆ ಹೇಳಬಲ್ಲವರಾಗುತ್ತಾರೆ.

೫.೩ ಆತ್ಮಶ್ರೀಯ ಹರಿಕಾರ ಕುವೆಂಪು :

ಬಹುತೇಕ ನವೋದಯ ಕಾಲದ ಎಲ್ಲ ಕವಿಗಳಲ್ಲಿ ಅನುಭಾವದ ಅಂಶಗಳು ಇರುವುದನ್ನು ಮೇಲುನೋಟಕ್ಕೆ ಗುರುತಿಸಬಹುದು. ಅಂತಹ ತಾತ್ವಿಕತೆ ಅವರನ್ನು ಬಿಗಿದು ಇಟ್ಟಿತ್ತು. ನವೋದಯ ಕಾವ್ಯದ ಅಧ್ವರ್ಯುಗಳಾದ ಕುವೆಂಪು ಹಾಗೂ ಬೇಂದ್ರೆ ಇದರಲ್ಲಿ ಉತ್ಕೃಷ್ಟತೆ ಸಾಧಿಸಿದರು. ಮಧುರಚೆನ್ನರಂತೆ ಅನುಭಾವ ಪಥವನ್ನಷ್ಟೇ ತುಳಿಯದೆ ಆಧ್ಯಾತ್ಮವು ಕಾವ್ಯಾಂಶವಾಗಿ ಅವರಲ್ಲಿ ಅಭಿವ್ಯಕ್ತಿ ಪಡೆಯಿತು. ದೊಡ್ಡ ಕವಿಗಳಾದವರು ಸಾಮಾನ್ಯವಾಗಿ ಅನುಭಾವಿಗಳಾಗಿರುತ್ತಾರೆ. ಆಧ್ಯಾತ್ಮಿಕ ಅಂಶಗಳಿಂದ ಪ್ರೇರಿತರಾಗಿರುತ್ತಾರೆ ಎನ್ನುವುದು ಅವರ ಕಾವ್ಯದ ಅಧ್ಯಯನದಿಂದ ತಿಳಿದು ಬರುವಂತಹದು. ಸಂಪೂರ್ಣ ಅನುಭಾವಿಗಳಾಗದಿದ್ದರೂ ಅನುಭಾವದ ಅಂಶಗಳು ಅವರ

ಕಾವ್ಯಕ್ಕೆ ಜೀವನ ದರ್ಶನದ ಮೂಲಧಾತುಗಳನ್ನು ಒದಗಿಸಿಕೊಡುತ್ತವೆ. ಕವಿ-ಅನುಭಾವಿ ಎಂಬ ಎರಡು ಮುಖಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಕೆಲವರು ಕವಿಗಳಾಗಿ ಅನುಭಾವವು ಅವರ ಕಾವ್ಯದಲ್ಲಿ ಸ್ವಲ್ಪ ಪ್ರಮಾಣದಲ್ಲಿರುತ್ತದೆ. ಮತ್ತೆ ಕೆಲವರು ಅನುಭಾವಿಗಳಾಗಿ ಸಾಹಿತ್ಯ-ಕಾವ್ಯ ಅವರ ಬರವಣಿಗೆಯಲ್ಲಿ ಅನುಭಾವದ ಪ್ರತೀಕವಾಗಿ ಕಾಣಸಿಕೊಳ್ಳುತ್ತದೆ.

ವಚನಕಾರರು, ತತ್ವಪದಕಾರರು ನಿಜಗುಣ ಶಿವಯೋಗಿ, ಶರೀಫ, ಮಧುರಚೆನ್ನ ಮುಂತಾದವರು ಅನುಭಾವಿ ಕವಿಗಳಾಗಿ ರೂಪಗೊಂಡರೆ ಸರ್ವಜ್ಞ, ಬೇಂದ್ರೆ, ಕುವೆಂಪುರಂತಹ ಪ್ರತಿಭಾಶಕ್ತಿಗಳು ಅನುಭಾವದ ಕಡೆಗೆ ತುಡಿದೂ ಕಾವ್ಯವನ್ನು ಜನಮಾನಸದಲ್ಲಿ ಸ್ಥಾಪಿಸಿದರು. ನೆಲದ ಹೂವಿಗೆ ಅಮೃತದ ನೀರು ಸಿಂಪಡಿಸಿ ಇಟ್ಟರು.

ಲೌಕಿಕ ಬದುಕಿನ ಸುಖ-ಸಂತೋಷಗಳಿಗೆ, ಭೌತಿಕ ಅಸ್ತಿತ್ವಕ್ಕೆ ಕಾರಣವಾದಂತೆಯೆ ವ್ಯಾಕುಲಗೊಂಡ ಮನಸ್ಸಿಗೆ ಸಾಂತ್ವನ ನೀಡುವ ಕಾರುಣ್ಯದ ಕೇಂದ್ರವಾಗಿ ಕುವೆಂಪು, ಬೇಂದ್ರೆಯಂತಹ ಕವಿಗಳಲ್ಲಿ ಪ್ರಕೃತಿ ಕಾಣಿಸಿಕೊಂಡಿತು. ಇಂಗ್ಲೀಷ ಕಾವ್ಯ ಕುವೆಂಪುರವರ ಮೇಲೆ ಬೇಂದ್ರೆಯವರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ತನ್ನ ಪ್ರಭಾವ ಬೀರಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಆದರ್ಶಗಳ ಹುಡುಕುವಿಕೆ, ಸ್ವಾತಂತ್ರ್ಯ ಗಳಿಸುವ ಉತ್ಸಾಹ, ಸಾಮಾಜಿಕ ನೆಲೆ, ಪ್ರಕೃತಿ ಸೌಂದರ್ಯ ಮುಂತಾದ ಅಂಶಗಳು ನಿಂತ ನೀರಾಗಿದ್ದ ಕಾವ್ಯ ಸಂದರ್ಭಕ್ಕೆ ಹೊಸ ಚೈತನ್ಯ ಒದಗಿಸಿದವು. ಜಾತಿಯಿಲ್ಲದ ಸಮಾಜ, ಅಸಮಾನ ಸಂಪತ್ತಿನ ಹಂಚಿಕೆಯ ವಿರುದ್ಧದ ಹೋರಾಟ, ಮೂಢನಂಬಿಕೆಗಳಿಂದ ಕುವೆಂಪು ವರ್ಣವ್ಯವಸ್ಥೆಯ ಹಿಡಿತದಲ್ಲಿದ್ದ ನಾಡಿಗೆ ನವ ಆಶಯಗಳನ್ನು ಕಾವ್ಯದ ಮೂಲಕ ಕೊಟ್ಟರು. ಬೇಂದ್ರೆಯವರಿಗೆ ಇಂತಹ ಆಶಯಗಳು ಇರಲಿಲ್ಲವೆಂದಲ್ಲ. ಆದರೆ ಅವರ ಕಾವ್ಯ ಬಹುತೇಕ ಕಡೆ ವೈಯಕ್ತಿಕ ಅನುಭವದ ಮಾರ್ಗದಲ್ಲಿಯೆ ಸಾಗುತ್ತದೆ. ಇಂಗ್ಲೀಷ್ ರೋಮ್ಯಾಂಟಿಕ್ ಕವಿಗಳ ಪ್ರಭಾವದಿಂದಲೆ ಕುವೆಂಪು ಅವರು ಪ್ರಕೃತಿಯನ್ನು ತಮ್ಮ ಸಾಹಿತ್ಯದ ಸ್ಪೂರ್ತಿಯಾಗಿಸಿಕೊಂಡರು. ನಿಸರ್ಗವನ್ನು ಕುವೆಂಪು ಹಾಸಿ ಹೊದ್ದುಕೊಳ್ಳುತ್ತಾರೆ. ಅವರ ಕವಿತೆಗಳಲ್ಲಿ ನಿಸರ್ಗ ತನ್ನ ಸೌಂದರ್ಯ-ಕಾರುಣ್ಯದಿಂದ ರಸಾನುಭೂತಿ, ಆತ್ಮಾನುಭೂತಿ ಸಾಧಿಸಿದರೆ ಅವರ ಕಾದಂಬರಿಗಳಲ್ಲಂತೂ ಅದು ಒಂದು ಜೀವಂತ ಪಾತ್ರವೆ ಆಗಿ ಉಳಿದ ಪಾತ್ರಗಳೊಡನೆ ಕರುಳಿನ ಸಂಬಂಧ ಬೆಸೆಯುತ್ತದೆ. ಬೇಂದ್ರೆಯವರು ಕೂಡ ಇಂಗ್ಲೀಷ ಕಾವ್ಯದ ಪ್ರಭಾವಕ್ಕೆ ಒಳಗಾಗಿದ್ದರು. ಸುತ್ತಲಿನ ಜಗತ್ತಿಗೆ ತೆರೆದುಕೊಂಡಿದ್ದರು. 'ಕಂಗೊಳಿಸುವ ಕೆಂಪು ಮುಂದೆ, ಕಂಗೆಡಿಸುವ ಮಂಜು ಹಿಂದೆ' ಎಂದು ಉದಯವಾಗುತ್ತಿದ್ದ ಸ್ವಾತಂತ್ರ್ಯದ ಸೂರ್ಯನನ್ನು, ರಾಷ್ಟ್ರೀಯತೆಯ ನವೋದಯವನ್ನು ಊಹಿಸಬಲ್ಲವರಾಗಿದ್ದರು. 'ಕುರುಡು ಕಾಂಚಾಣ' ಮುಗ್ಧರನ್ನು ತುಳಿಯುವ ಅಮಾನವೀಯತೆಗೆ ಮರುಗಬಲ್ಲವರಾಗಿದ್ದರು. ಅಷ್ಟಾಗಿಯೂ ಕೂಡ ಅವರ ಕಾವ್ಯ ಬಹುತೇಕ ವ್ಯಕ್ತಿಕೇಂದ್ರಿತ ನೆಲೆಗಳನ್ನು ಹಿಗ್ಗಿಸುವತ್ತ ಗಮನಹರಿಸತೊಡಗಿತು. ಆಸ್ತಿಕತೆ, ದೈವ ಪೌರುಷದಲ್ಲಿನ ನಂಬಿಕೆಗಳು ಕೂಡ ಬೇಂದ್ರೆಯವರನ್ನು ಸಾಮಾಜಿಕವೆನಿಸಬಹುದಾದ, ಬಂಡಾಯವೆನ್ನಬಹುದಾದ, ಚರಿತ್ರೆಯನ್ನು ಹೊಸ ರೀತಿಯಲ್ಲಿ

ವ್ಯಾಖ್ಯಾನಿಸಬಹುದಾದ 'ಕಾವ್ಯ ಸಂಗತಿ'ಗಳಿಂದ ದೂರ ಇಟ್ಟವು ಎಂದು ತೋರುತ್ತದೆ. ಇದರ ಅರ್ಥ ಅವರಿಗೆ ಸಾಮಾಜಿಕ ಕಾಳಜಿ ಇರಲಿಲ್ಲವೆಂದಲ್ಲ. ನಿಸರ್ಗದ ಸುಲಿಗೆ ಬಗ್ಗೆ ರೋಷವಿರಲಿಲ್ಲವೆಂದಲ್ಲ. 'ಭೂಮಿತಾಯಿಯ ಚೊಚ್ಚಲಮಗ', 'ಕುರುಡು-ಕಾಂಚಾಣಾ', 'ತುತ್ತಿನ ಚೀಲ' ಮುಂತಾದ ಕವಿತೆಗಳಲ್ಲಿ ಸಾಮಾಜಿಕ ಅಸಮಾನತೆಯ ವಿರುದ್ಧದ ಅವರ ಆಕ್ರೋಶವನ್ನು ಗುರುತಿಸಬಹುದು. ಆದರೆ ಕಾವ್ಯದ ಉತ್ಕಟತೆಯೆ ಅವರಿಗೆ ಮುಖ್ಯವಾಗಿದ್ದಿತು. ಕಾವ್ಯ ಮೂಡಿಸುವ ದರ್ಶನವೆ ಮಹತ್ವದಾಗಿದ್ದಿತು. ಕಾವ್ಯ ಪ್ರತಿಭೆಯ ಇಂದ್ರಜಾಲದಿಂದ ಕವಿತಾ ಜಗತ್ತನ್ನು ಕಟ್ಟಿ ನಿಲ್ಲಿಸುವ ಬೇಂದ್ರೆ ಕವಿತೆಯೊಳಗಿನ ಭಾವದಿಂದ, ಅಲ್ಲಿಯ ನಾದದಿಂದ ಅಪ್ರತಿಮ ರಸಾನುಭೂತಿ ಸೃಷ್ಟಿಸುತ್ತಾರೆ. ಕಾವ್ಯದೊಳಗಿನ ಪ್ರಕಾಶ ಓದುಗನ ಕಣ್ಣು ಕುಕ್ಕುತ್ತದೆ. ಮನಸ್ಸಿನ ಪರಿಶುದ್ಧತೆಯಿಂದ ವ್ಯಕ್ತಿ ಸುಖದ ತಾಣಗಳನ್ನು ತಲುಪಬಲ್ಲನೆಂದು ಬೇಂದ್ರೆಯವರು ನಂಬಿದರೆ ಕುವೆಂಪುರವರ ನೋಟದಲ್ಲಿ ಅಂತರಂಗ ಹಾಗೂ ಬಹಿರಂಗಗಳು ಬಂಡಾಯದಿಂದ, ನಿರಂಕುಶಮತಿಯಿಂದ ವಿಕಾಸಗೊಳ್ಳಬೇಕೆನ್ನುವ ತಾತ್ವಿಕತೆ ಇತ್ತು. ಪಾಶ್ಚಿಮಾತ್ಯ ಸಾಹಿತ್ಯದಿಂದ, ಹೋಮರ್‌ನಿಂದ ಕುವೆಂಪು ಸಾಕಷ್ಟು ಪಡೆದುಕೊಂಡಿದ್ದರೂ ಆ ಪ್ರೇರಣೆಗಳನ್ನು ತಮ್ಮ ನೆಲದ ಗುಣಕ್ಕೆ ತಕ್ಕಂತೆ ಅರಗಿಸಿಕೊಳ್ಳುವಷ್ಟು ಪ್ರವೀಣರಾಗಿದ್ದರು. ಬೇಂದ್ರೆ ಕೂಡ ಕೀಟ್ಸ್, ಬೈರನ್‌ರನ್ನು ಧಾರವಾಡದ ನೀರಿನಲ್ಲಿ ಆಪೋಶನಗೈದರು.

ಮನುಷ್ಯನ ಒಳಿತಿಗೆ, ಅವನ ಆತ್ಮಶ್ರೀಗೆ ಬೇಕಾದುದನ್ನು ಕುವೆಂಪು ವಿವೇಕಯುತವಾಗಿ ಪೂರ್ವ-ಪಶ್ಚಿಮದಿಂದ ಆಯ್ದುಕೊಂಡರೆಂದು ಡಾ. ಯು.ಆರ್.ಅನಂತಮೂರ್ತಿ ಅಭಿಪ್ರಾಯ ಪಡುತ್ತಾರೆ. 'ಕುವೆಂಪು ಅಪ್ಪಟ ಕಲೆಗಾರರೂ, ಅರವಿಂದ ಪ್ರೇರಿತ ತಾತ್ವಿಕ ಚಿಂತಕರೂ ಏಕಕಾಲದಲ್ಲಿ ಆದವರಾದ್ದರಿಂದ ಹಲವರಲ್ಲಿ ಒಡೆದು ತೋರುವುದು ಅವರಲ್ಲಿ ಒಟ್ಟಾಗಿ ಸಂಭವಿಸುತ್ತದೆ. ಭಾವಗೀತೆಯ ಅಂತರ್ಮುಖೀ ಒಳಸುಳಿಯನ್ನೂ, ಕಥನದ ಬಹಿರ್ಮುಖೀ ಹರಿಯುವಿಕೆಯನ್ನೂ ಒಟ್ಟಾಗಿ ಸಾಧಿಸುವ ಕುವೆಂಪು ಶೈಲಿ ಈ ಬಗೆಯ ಭವ್ಯ ನಿತ್ಯಗಳ ಸಂಗಮಕ್ಕೆ ಎಡೆಮಾಡಿಕೊಡುತ್ತದೆ. ಕಲ್ಲಿನಲ್ಲಿ ಅಹಲ್ಯೆಯ ಪ್ರಾಣ ಕಾದಿರುತ್ತದೆ.'[೨೭] ಪರಂಪರೆಯನ್ನು ಹೊಸ ರೀತಿಯಲ್ಲಿ ಕುವೆಂಪು ಅರ್ಥೈಸಿದರು. ಭಕ್ತರನ್ನು ಸುಲಿಯುವುದು ಆಧ್ಯಾತ್ಮಿಕತೆ ಎಂದಾದರೆ ಅಂತಹ ಆಧ್ಯಾತ್ಮ ಅವರಿಗೆ ಬೇಡವಾಗಿತ್ತು. ವರ್ಡ್ಸ್‌ವರ್ತ್‌ನ ಪ್ರೇರಣೆಗೆ ನೀಡಿದ ಮಹತ್ವವನ್ನು ರಾಮಕೃಷ್ಣ ಪರಮಹಂಸರ ಪ್ರೇರಣೆಗೂ ನೀಡಿದರು. ವರ್ಡ್ಸ್‌ವರ್ತನಂತೆ ನಿಸರ್ಗದ ಸೌಂದರ್ಯರಾಶಿಯಲ್ಲಿ ಮೈಮರೆತರೂ, ಅದು ನೀಡುವ ಸಾಂತ್ವನಕ್ಕೆ ಮರುಳಾದರೂ ದೇಶಿ ಪರಂಪರೆಯ ನಿಸರ್ಗದ ಆರಾಧನೆಯನ್ನೂ ಕುವೆಂಪು ಬಿಟ್ಟು ಹೋಗುವುದಿಲ್ಲ. ಡಾ. ಪ್ರಭುಶಂಕರ ಅವರು ಕುವೆಂಪುರವರ ಮನೋವಿಕಾಸದ, ಆಧ್ಯಾತ್ಮಿಕ ಅನುಭೂತಿಯ ನೆಲೆಗಳನ್ನು ಸರಿಯಾಗಿಯೆ ಗುರುತಿಸುತ್ತಾರೆ: 'ವರ್ಡ್ಸ್‌ವರ್ತ್‌ನಂತೆಯೇ ಪ್ರಕೃತಿಯಿಂದ ಉನ್ಮಾದವನ್ನು ಪಡೆದಿರುವ, ಪ್ರಕೃತಿಗಾಗಿ ಹುಚ್ಚಾಗುವ, ಆದರೆ ಅದರ ಆಸ್ವಾದನೆ ಆರಾಧನೆಗಳೆರಡರಲ್ಲಿಯೂ ಅವನನ್ನು ಬಹು ಹಿಂದೆ ಬಿಟ್ಟು ಮುಂದುವರೆದಿರುವ ಕುವೆಂಪು ತಮ್ಮ ಪ್ರಕೃತಿ ಆರಾಧನೆಯ ಹಿಂದಿರುವ ಮನೋಭಾವವನ್ನು ಹೀಗೆ ಚಿತ್ರಿಸಿದ್ದಾರೆ.-

ಈ ಬಿಳಿ ಮಳಲ ರಾಶಿ, ವನಪರ್ಣ ವಾರಾಶಿ

ನರ್ತಿಸುವ ಪ್ರವಹಿಸುವ ನೀಲಾಭ ಜಲರಾಶಿ

ನೀಲ ನೀರವ ಶಕುನದಂತಿರುವ ಆಕಾಶ

ಎಲ್ಲವೂ ನನ್ನ ದೃಷ್ಟಿಗೆ ಆತ್ಮದಾವೇಶ

....

ಪ್ರಕೃತಿಯಾರಾಧನೆಯೆ ಪರಮನಾರಾಧನೆ

ಪ್ರಕೃತಿಯೊಲ್ಮೆಯೆ ಮುಕ್ತಿಯಾನಂದ ಸಾಧನೆ

ಮನೋಹಾರಿಯಾದ ಪ್ರಕೃತಿಯ ವಿವಿಧ ಅಂಶಗಳು, ಬಿಳಿ ಮಳಲರಾಶಿ, ಕಾಡಿನ ಹಸುರೆಲೆಯ ಸಾಗರ ಈ ಮುಂತಾದವು ಅವರ ದೃಷ್ಟಿಗೆ ಆವೇಶ ಭಾವಗಳು ! ವಿಶ್ವರೂಪಿಯಾದ ಭಗವಂತನ ಶರೀರದ ಚಿನ್ಮಯವಾದ ಅಂಗಗಳು!'[೧೮]

ಪ್ರಕೃತಿ ನೀಡಿದ ಒಲವು ಹಾಗೂ ಅದು ಹೀರಿಕೊಂಡ ದಾರುಣ ತಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರುವುದನ್ನು ಕಂಡು ಕುವೆಂಪು ವಿಸ್ಮಯಪಡುತ್ತಾರೆ. ತಾವು ಹಾದುಬಂದ ಸುರಂಗಗಳೊಳಗೆ ಬೆಳಕು ಹಾಯಿಸು ನೋಡುತ್ತಾರೆ.

ನೆನಪುಗಳು ಕುವೆಂಪು ಎದೆಯಲ್ಲಿ ಮಡುಗಟ್ಟಿರುವುದನ್ನು ಅವರ 'ನನ್ನ ಮನೆ' ಎನ್ನುವ ಕವಿತೆ ಬಹಳ ಅರ್ಥವತ್ತಾಗಿ ವಿವರಿಸುತ್ತದೆ. ಅವರ ಬಾಲ್ಯದ ದಿನಗಳು ಸ್ವಲ್ಪವೂ ಮುಕ್ಕಾಗದೆ ಆ ಕವಿತೆಯಲ್ಲಿ ಕಾಲವನ್ನು ಗೆಲ್ಲುತ್ತ ಹೋಗುತ್ತವೆ. ಕವಿ ಅನುಭವಿಸಿದ ನೋವು-ಸಂಕಟಗಳು ಶಾಶ್ವತವಾಗಿ ಅಕ್ಷರ ರೂಪದಲ್ಲಿ ಕುಳಿತು ಬಿಟ್ಟಿವೆ. ಅವರ ಕಾದಂಬರಿಗಳಲ್ಲಿ ಕಾಣುವಂತಹ ಅನುಭೂತಿ ಈ ಪದ್ಯದಲ್ಲಿ ಕಾಣಿಸಿಕೊಳ್ಳುತ್ತದೆ.

ಮನೆ ಮನೇ ಮುದ್ದು ಮನೇ

ಮನೇ ಮನೇ ನನ್ನ ಮನೆ

....

ನನ್ನ ಗಿರಿಜೆಯಿದ್ದ ಮನೆ

ನನ್ನ ವಾಸವಿದ್ದ ಮನೆ;

ಮನೆಯ ಮುತ್ತಿ ಬರಲು ಚಳಿ

ಅಳು ಮಂಜು ಒಲೆಯ ಬಳಿ

ನಮ್ಮನ್ನೆಲ್ಲ ಕತೆಗಳಲ್ಲಿ

ಕರಗಿಸಿದ್ದ ನನ್ನ ಮನೆ!

ಹೆತ್ತ ತಾಯಿ ಸತ್ತ ಮನೆ
ಮತ್ತೆ ತಂದೆ ಹೋದ ಮನೆ,
ಗಿರಿಜೆ ನರಳಿ ಬಿಟ್ಟ ಮನೆ!
ವಾಸು ಬೆಂದು ಸಂದ ಮನೆ,
ಬಾಲ್ಯ ಬಾಡಿ ಬಿದ್ದ ಮನೆ,
ಆದರೆನಗೆ ನನ್ನ ಮನೆ![೧೯]

ತನ್ನ ಅಗಾಧ ಮಾನವೀಯತೆಯಿಂದ, ಬಾಲ್ಯದ ಸೆಳಕುಗಳಿಂದ ಹಲವು ವರ್ಷಗಳ ಕಥೆಯನ್ನು ಈ ಕವಿತೆ ಹೇಳುತ್ತದೆ. 'ಈ ಕವಿತೆ ನಮ್ಮ ಅರಿವಿನ ಕಣ್ಣು ತೆರೆಯುತ್ತಿರುವಾಗ, ಅವರ ಮಹಾಕಾದಂಬರಿಗಳ ಬಸಿರಿನಂತಿರುವ 'ಆದಿ ತಿಮಿರ'ದಲ್ಲಿ ನಡೆವ ಜೀವಕೋಲಾಹಲವೂ; ಕಾಡಿನ ಲಾಲಿ ಮತ್ತು ಘೋಷಗಳೆರಡೂ ಕೇಳಿಸುತ್ತಿರುವಂತೆ ಈ ಕವಿತೆ ಪೂರ್ವರಚಿತ ಸೃಜನಶೀಲ ಸನ್ನಾಹದಂತೆ ಕಂಡುಬರುತ್ತದೆ. ಇನ್ನೊಂದು ಮುಖದಿಂದ ಈ ಕವಿತೆ ಇಲ್ಲಿನ ದುಃಖದ ಸ್ಥಾಯಿಯ ಮೇಲೆ ತನ್ನ ತಾಯ್ತನದ ಸಾಂತ್ವನವನ್ನು ಸೂಸುತ್ತಿರುವುದು ನಮ್ಮ ಅರಿವಿಗೆ ಕಂಡುಬರುತ್ತದೆ.'[೨೦] ನೆನಪು ಸಾಯುವದಿಲ್ಲವೆಂದು ಹೇಳುವುದರೊಂದಿಗೆ ನೆನಪಿನ ಜೊತೆ ಬಂಧಿಯಾಗಿರುವ ಸಂಬಂಧಗಳು ಗುರುತು ಉಳಿಸಿರುವುದನ್ನು ಕಾಣಬಹುದು. ಬಾಲ್ಯ ಹಾಗೂ ಹದಿಹರಯದ ಸಮಯ 'ನನ್ನ ಮನೆ'ಯಲ್ಲಿ ಹೆಪ್ಪುಗಟ್ಟಿದೆ.

ಬೇಂದ್ರೆಯವರ 'ತುಂಬಿತ್ತು ಹಾಲಗೇರಿ' ಮತ್ತು 'ಸಣ್ಣ ಸೋಮವಾರ' ಕವಿತೆಗಳು ಕೂಡ ಒಂದು ರೀತಿಯಲ್ಲಿ ಬಾಲ್ಯದ ನೆನಪನ್ನು ಅಖಂಡ ಬದುಕಿಗೆ ಜೋಡಿಸುವ ಪ್ರಯತ್ನಗಳಾಗಿವೆಯೆಂದು ಹೇಳಬಹುದು. ಹಾಲಗೇರಿ ಕೆರೆಯಲ್ಲಿ ಮುಳುಗಿ ಇನ್ನೇನು ಸತ್ತುಹೋಗುವವನಿದ್ದ ಬಾಲಕ ಬೇಂದ್ರೆಯನ್ನು ತಾಯಿ ಅಂಬಿಕೆ ಉಳಿಸಿದ್ದು ಮೃತ್ಯುವನ್ನೆದುರಿಸಿ ಬದುಕಿ ಬಾಳುತ್ತಿರುವ ಜೀವನದ ಸೆಲೆಯನ್ನು ಸೂಚಿಸುತ್ತದೆ.

ಮರವಿನ ಮರಿವಿಗಿತ್ತು ನೆನವಿನ ಕೆರೀ
ಅಲ್ಲೇ ಇತ್ತು ಜೀವದ ಝರಿ
ನೆಲಾ ಅಲ್ಲಾ, ಕೆರೀ,
ನೀರಲ್ಲಾ ಜಲಹರಿ
ಅರವಿಂದ ಕಾವ್ಯಲಹರಿ[೨೧]

ಮುಳುಗಿಸಲು ನೋಡಿದ ಕಾಲ ಮತ್ತು ಕೈ ನೀಡಿದ ವಾತ್ಸಲ್ಯಗಳೆರಡನ್ನೂ ಬೇಂದ್ರೆಯವರು ಹಿಡಿದಿಡುತ್ತಾರೆ. ಕುವೆಂಪು ಕಳೆದ ಬಾಲ್ಯದ ಮನೆಯೊಳಗಿಂದ ಮುಂದಿನ ಕಥೆಗಳು ಹುಟ್ಟಿಕೊಂಡವು. ಕೊತಕೊತ ಕುದಿಯುತ್ತಿದ್ದ ಭಾವನೆಗಳ ಕೊಪ್ಪರಿಗೆಗೆ ಬಾಲ್ಯದ ದಿನಗಳು ಉರಿ ಹಾಕುತ್ತಲೆ ಇದ್ದವು. ಬಾಲ್ಯದಲ್ಲಿ ವಾಸಪಿದ್ದ ಮನೆ

ಈಗಿಲ್ಲದಿರಬಹುದು. ಆದರೆ ಆ ಮನೆ ಎಂದೆಂದೂ ಬಿದ್ದು ಹೋಗುವದಿಲ್ಲ. ಹಬ್ಬದೂಟ, ಕೆಳದಿ-ಕೆಳೆಯ, ಅಜ್ಜ-ಅಜ್ಜಿ, ತಂದೆ-ತಾಯಿ, ಸಾವು-ನೋವು ಏನೆಲ್ಲವನ್ನೂ ಮನೆಯ ಚಿತ್ರ ಹಿಡಿದಿಟ್ಟಿದೆ. ನಿಸರ್ಗದ ಸರ್ವಸಂಪತ್ತನ್ನೆಲ್ಲ ಧಾರೆ ಎರೆಯುವಂತೆ ತಮಗೆ ಕಾಣಿಕೆಯಾಗಿ ಬಂದ ಸಾಧನಕೇರಿಯ ಮನೆಯನ್ನು ಕುರಿತು ಬೇಂದ್ರೆಯವರು ಸಖಿಗೀತದಲ್ಲಿ ಹೀಗೆ ಹೇಳುತ್ತಾರೆ :

ಮಲೆನಾಡ ಸೆರಗಿನ ನೆರಗಿದ್ದ ಮನೆಯೊಂದು
ಮಮತೆಯ ಕುರುಹಾಗಿ ತಾ ದೊರಕಿತು
ಅಲ್ಲಿ ಸಂಪಿಗೆಯಿತ್ತು ಪಾರಿಜಾತಕವಿತ್ತು
ಮಾವು ಮಲ್ಲಿಗೆಯಿತ್ತು ಮನೆಯಿದಿರು

* * *

ಮುಗಿಲ ಮಲ್ಲಿಗೆಯಿತ್ತು, ತೆಂಗಿತ್ತು ಹಲಸಿತ್ತು
ನಿಂಬಿಯ ಇಂಬಿತ್ತು ಎಡೆ ಎಡೆಗೆ
ಹೊಂಗೆಯ ಸಾಲಿತ್ತು ಕಣ್ಮುಂದೆ ಕೆರೆಯಿತ್ತು
ಗುಡ್ಡದ ನೆರೆಯಿತ್ತು ಆದರಾಚೆಗೆ[೨೨]

ದೈವಪೌರುಷ ಮತ್ತು ಅಂತಃಕರಣದ ಮೂಲಕ ಜೀವನದಲ್ಲಿ ಆಗಾಗ ಹರಿಯುತ್ತಿದ್ದ ನಲಿವಿನ ಸ್ರೋತವು ಪಾಡುಗಳನ್ನು ಹಾಡುಗಳನ್ನಾಗಿ ಮಾಡುವ, ದುಃಖ ವಿಷಾದಗಳನ್ನು ಪ್ರಕೃತಿಯೊಂದಿಗೆ ಜೋಡಿಸುವ ಕಲೆಯನ್ನು ಬೇಂದ್ರೆಯವರಿಗೆ ಕಲಿಸಿಕೊಟ್ಟಿತು. ಬದುಕಿನ ದುಃಖಗಳನ್ನು ಬಹಳಷ್ಟು ನಿರ್ಲಿಪ್ತತೆಯಿಂದ ಅವರು ನಿಸರ್ಗದೊಂದಿಗೆ ಸಮೀಕರಿಸಿದರು. ಹಾಗಾಗಿಯೆ ವೈಯಕ್ತಿಕತೆಯನ್ನು ಸಾರ್ವತ್ರಿಕವಾಗಿಸುವ ಶಕ್ತಿ ಅವರಿಗೆ ಒದಗಿ ಬಂದಿತು. 'ಸಖಿಗೀತ' ಪ್ರತಿಯೊಬ್ಬ ಸಹೃದಯನ ಗೀತವೂ ಆಗಿರಬಹುದೆಂಬಂತೆ; ಗೆಳೆಯರ, ಆಪ್ತರ ಅಗಲಿಕೆಯಿಂದೊದಗಿದ ಎದೆಯ ಬಿಕ್ಕುಗಳನ್ನು 'ತುಟಿಯಲ್ಲಿ ಕಚ್ಚಿ ಹಿಡಿಯದೆ' ಅಭಿವ್ಯಕ್ತಗೊಳಿಸುವುದು ಬೇಂದ್ರೆ ಕಾವ್ಯದ ಪರಿಯಾಗಿದೆ.

ಇರುಳು-ತಾರೆಗಳಂತೆ ಬೆಳಕೊಂದು ಮಿನುಗುವದು
ಕಳೆದ ದುಃಖಗಳಲ್ಲಿ ನೆನೆದಂತೆಯೆ
ಪಟ್ಟ ಪಾಡೆಲ್ಲವು ಹುಟ್ಟು ಹಾಡಾಗುತ
ಹೊಸದಾಗಿ ರಸವಾಗಿ ಹರಿಯುತಿವೆ[೨೩]

ಮುಳುಗಿಸುವ ಸಾವಿರ ಸೆಳವುಗಳನ್ನು ದಾಟಿ ತೇಲಿಸುವ ನೌಕೆಯನ್ನು ಹತ್ತುವ ಕಷ್ಟ ಅವರ ಕಾವ್ಯದಲ್ಲಿ ಬದುಕಿನ ಪಾಡೆಂದು ಬಿದ್ದು ಹೋಗದೆ ಹಾಡಾಗಿ ಪರಿವರ್ತಿತವಾಗುತ್ತದೆ. ನಿಸರ್ಗ ಹಾಗೂ ಕೌಟುಂಬಿಕ ಒಲವಿನ ನೌಕೆಗಳು ಬೇಂದ್ರೆಯವರನ್ನು ಅನುಭೂತಿಯ ದಡಗಳಿಗೆ ಮುಟ್ಟಿಸುತ್ತಲೆ ಇದ್ದವು.

ಕುವೆಂಪು ಕೂಡ ನಿಸರ್ಗದ ಭೂಮಾನುಭೂತಿಗೆ ಆಗಾಗ ತಹತಪಿಸುತ್ತಲೆ ಇದ್ದರು ಎನ್ನುವುದಕ್ಕೆ 'ಬಾ ಫಾಲ್ಗುಣ ರವಿದರ್ಶನಕೆ', 'ಪ್ರಾರ್ಥನೆ', 'ನಿರೀಕ್ಷೆ', 'ದೇವರು ರುಜು ಮಾಡಿದನು', 'ಹೋಗುವೆನು ನಾ', 'ಕೋಗಿಲೆ', 'ಸತ್ಯ ಮತ್ತು ಸೌಂದರ್ಯ', 'ಅನಿರ್ವಚನೀಯ', 'ಸುಗ್ಗಿ ಹಾಡು', 'ತೇಲಿಬಿಡು ಜೀವನಾವೆಯನು', 'ಇಂತಹ ಸುಂದರ ಪ್ರಾತಃಕಾಲದಿ' ಮುಂತಾದ ಕವಿತೆಗಳನ್ನು ನಿದರ್ಶನಗಳನ್ನಾಗಿ ನೋಡಬಹುದು.

ತೇಲಿಬಿಡು ನನ್ನ ಜೀವನಾವೆಯನು ನಿನ್ನ ಪ್ರೇಮಸ್ರೋತ್ರದಲಿ
ಶಾಂತಿವಾರಿಧಿಯ ಸನ್ನಿಧಿಗೆ ಹೋದರದು ಹೋಗಲಿ; ಹೋಗದಿದ್ದರೆ ಬಿಡಲಿ"

ಎಂದು ತುಂಬಾ ವಿಶ್ವಾಸದಿಂದಲೆ ಜೀವಾತ್ಮನ ಎದೆಯ ಮೇಲೆ ಜೀವನಾವೆಯಾಗಿ ನಲಿದಾಡಬೇಕೆನ್ನುವ ಆಸೆಯನ್ನು ಹೊರಹಾಕುತ್ತಾರೆ. ಪ್ರಕೃತಿಯಲ್ಲಿ ಆಧ್ಯಾತ್ಮಿಕ ಅನುಭೂತಿಯನ್ನು ಅರಸುವಾಗಲೂ ಕುವೆಂಪು ಅವರಲ್ಲಿ ವೈಚಾರಿಕ ಪ್ರಜ್ಞೆ ಜಾಗೃತವಾಗಿರುವುದು ಮಹತ್ವದ ಸಂಗತಿಯಾಗುತ್ತದೆ: ಸ್ವರ್ಗದ ಬಾಗಿಲು ಗಂಗೆ- ಕಾಶಿಯಲ್ಲಿರದೆ ಹಕ್ಕಿಯ ಟುವ್ವಿಯಲ್ಲಿ ರೈತನ ನೇಗಿಲದಲ್ಲಿ, ಹೂವಿನ ಬಣ್ಣದಲ್ಲಿ ಅಡಕವಾಗಿದೆಯೆಂದು ಕುವೆಂಪು ಹೇಳುತ್ತಾರೆ. 'ಸಗ್ಗದ ಬಾಗಿಲು', 'ಸುಗ್ಗಿ ಹಾಡು', 'ಸತ್ಯ ಮತ್ತು ಸೌಂದರ್ಯ', 'ಆತ್ಮಶ್ರದ್ಧೆ', 'ಇಂದಿನ ದೇವರು' ಮುಂತಾದ ಕವಿತೆಗಳು ಅವರ ತಾತ್ವಿಕ ನಿಲುವುಗಳಿಗೆ ಸಾಕ್ಷಿಯಾಗಿವೆ. ಇಂತಹ ವೈಚಾರಿಕತೆ, ಸಾಮಾಜಿಕ ಕಳಕಳಿ, ವ್ಯಕ್ತಿ ನಿರಂಕುಶಮತಿಯಾಗಬೇಕೆನ್ನುವ ಹಂಬಲ ಅವರಿಂದ ತುಂಬ ಮಹತ್ವಾಕಾಂಕ್ಷೆಯ ಕೃತಿಗಳನ್ನು ಬರೆಯಲು ಹಚ್ಚಿತು. ಎಷ್ಟು ಬರೆದರೂ ಅವರ ದಾಹ ತೀರದು. ಪ್ರಕೃತಿಯನ್ನು ಎಷ್ಟು ಒಳಹೊಕ್ಕರೂ ಮನಸ್ಸು ತಣಿಯದು. ಕಾಡಿನಿಂದ ದೂರಾಗಿರುವ ನಾಡನ್ನು ಮತ್ತೆ ಕಾಡಿನ ಕಡೆ ಹೊರಳಿಸಲು ಅವರ ಪದ್ಯಗಳು ಪ್ರೇರೇಪಿಸುತ್ತವೆ. ೧೯೩೦ ರಲ್ಲಿ ಪ್ರಕಟವಾದ ಅವರ ಪ್ರಥಮ ಕವನ ಸಂಕಲನ 'ಕೊಳಲು' ಕೃತಿಯಲ್ಲಿಯೆ ಅವರು ನಿಗೂಢವಾಗಿರುವ, ಅಪಾರ ಸಂಪತ್ತಿನ, ಅನುಭೂತಿಯ ಆಗರವಾದ, ಭಾವ-ಜೀವದ ಕಾಡಿನ ಕವಿ ತಾವೆಂಬುದನ್ನು ಅವರು ರುಜುವಾತು ಪಡಿಸಿದರು. ಕಾಡಿಲ್ಲದೆ ನಾಡು ಇರಲಾರದೆಂಬ ಸತ್ಯವನ್ನು ಹೇಳುತ್ತಿರುವ ಮತ್ತು ಕಾಡಿನ ಸೌಂದರ್ಯ ಸಾರುತ್ತಿರುವ 'ಗೊಲ್ಲನ ಬಿನ್ನಹ'ವನ್ನು ಕೇಳಬೇಕೆಂದು ಕುವೆಂಪು ಅಪೇಕ್ಷಿಸಿದರು ;

ಕಾಡಿನ ಕೊಳಲಿದು, ಕಾಡ ಕವಿಯು ನಾ,
ನಾಡಿನ ಜನರೊಲಿದಾಲಿಪುದು
ಬೃಂದೆಯ ನಂತನ ಕಂದನೆ ಬಂದು
ಗೊಲ್ಲನ ಕೊಳಲಲಿ ನಿಂದಿಹನೆಂದು
ಭಾವಿಸಿ ಮನ್ನಿಸಿ ಲಾಲಿಪುದು
....
ಶಿರಿಬನದೇವಿಯ ಬೊಕ್ಕಸದಿಂದ

ಕದ್ದವು ಕೆಲವಿದು ಹಾಡುಗಳು ;
ಸುಂದರ ಋತುಗಳ ಸಿರಿಗೈಯಿಂದ
ಸುಲಿದವು ಕೆಲವಿವು ಹಾಡುಗಳು ;
ನೇಸರ ಚಂದಿರ ತಾರೆಗಳಿಂದ
ಕೆಲವನು ಭಿಕ್ಷೆಯ ಬೇಡಿದೆನು[೨೫]

ಪ್ರಕೃತಿಗೆ ಗಾಢವಾಗಿ ಒಲಿದು ಅದರ ನಿಗೂಢ ಹಾಗೂ ದಟ್ಟ ಅನುಭವಗಳಿಗೆ ಅಭಿವ್ಯಕ್ತಿ ನೀಡಿದ ಕುವೆಂಪು ನವೋದಯದ ಸಾಹಿತ್ಯ ಸಂದರ್ಭಕ್ಕೆ ಅಗತ್ಯವಾಗಿದ್ದ ಸಾಂತ್ವನ, ಕನಸುಗಾರಿಕೆ, ವೈಚಾರಿಕ ಪ್ರಜ್ಞೆಗಳನ್ನು ತುಂಬುವ ಕೆಲಸ ಮಾಡಿದರು. ಸಾಮರಸ್ಯದಿಂದಲೆ ವ್ಯಕ್ತಿಗತ ಸಾಂತ್ವನ ಮತ್ತು ಅದ್ವೈತವನ್ನು ಗಳಿಸಿಕೊಳ್ಳುವುದರತ್ತ, ವ್ಯಕ್ತಿ ಹಾಗೂ ಸಮಾಜದ ನಡುವೆ ನಂಟು ಬೆಸೆಯುವದರತ್ತ, ಮಳೆ ಬೆಳೆ ಹೊಳೆ, ಬದುಕಿಗೆ ಇಂಬು ನೀಡುತ್ತಿರುವ ನಿಸರ್ಗದ ಕಡೆ ಮನುಷ್ಯ ಹೊರಳುವಂತೆ ಮಾಡುವದರತ್ತ ಅವರ ವೈಚಾರಿಕ ದೃಷ್ಟಿ ಕೇಂದ್ರೀಕೃತವಾಗಿದ್ದಿತು. ಪ್ರಕೃತಿಯೊಂದಿಗೆ ತಾದಾತ್ಮ್ಯತೆ ಸಾಧಿಸಿ ಆ ಸುಂದರ ಸೃಷ್ಟಿಯನ್ನು ನಿರ್ಮಿಸಿರುವ ದೇವರ ಕಡೆಗೆ ಅವರು ಪರವಶರಾಗಿ ನೋಡುವರು. ತಾವೊಬ್ಬ ಕಾಡನ್ನು ಅಭಿವ್ಯಕ್ತಿಸುವ ಕಾಡಿನ ಕವಿಯೆಂದು ಹೇಳಿಕೊಳ್ಳುವುದು ಅವರಿಗೆ ತುಂಬ ಸಂತೋಷ ಕೊಡುವ ವಿಚಾರವೆ ಇರಬೇಕು. ಭಕ್ತಿಮಾರ್ಗದಲ್ಲಿದ್ದುಕೊಂಡೆ ಅವರು ಸಾಧಿಸುವ ಎತ್ತರಗಳು ಆಶ್ಚರ್ಯ ಹುಟ್ಟಿಸುತ್ತವೆ. ಡಾ. ಜಿ.ಎಸ್.ಶಿವರುದ್ರಪ್ಪ ಅವರು ಈ ಕಾಡಿನ ರಸಯಾತ್ರಿಕನನ್ನು ಕುರಿತು ಹೇಳುವ ಮಾತುಗಳು ತುಂಬ ಮೌಲಿಕವಾಗಿವೆ : 'ಕಾಡಿನ ಕೊಳಲನ್ನು ಹಿಡಿದು ತನ್ನ ನಾಡಿನ ಜನರ ಮುಂದೆ ಈ ಕವಿ, ತನ್ನನ್ನು 'ಕಾಡಿನ ಕವಿ' ಎಂದು ಘೋಷಿಸಿಕೊಳ್ಳುವ ದನಿಯಲ್ಲಿ, ತನ್ನ ನಿಜವಾದ ನೆಲೆಯನ್ನು ಕಂಡುಕೊಂಡ ಆತ್ಮವಿಶ್ವಾಸವೂ, ತನ್ನದೆ ಆದ ಭಾಷೆಯಲ್ಲಿ ಸಹಜಾಭಿವ್ಯಕ್ತಿಯನ್ನು ಕಂಡುಕೊಂಡ ಸಂಭ್ರಮವೂ ಏಕಕಾಲಕ್ಕೆ ಕಾಣಿಸಿಕೊಂಡಿವೆ. ಹಾಗೆಯೆ ತನ್ನ ಈ ಕೊಳಲಿನಲ್ಲಿ 'ಬೃಂದೆಯ ನಂದನ ಕಂದ'ನಾದ ಸಾಕ್ಷಾತ್ ಶ್ರೀಕೃಷ್ಣನೇ ನಿಂದು ವಿವಿಧ ರಾಗಗಳನ್ನು ನುಡಿಸುತ್ತಾನೆ ಎಂದು ಭಾವಿಸಿ, ಮನ್ನಿಸಿ ತನ್ನ ಕವಿತೆಯನ್ನು ಕೇಳಬೇಕೆಂದು ಕವಿ ಸಹೃದಯರಲ್ಲಿ ಬಿನ್ನವಿಸಿಕೊಳ್ಳುವ ಹಂಬಲವಿದೆ. ಈ ಒಂದು ನಿವೇದನೆಯ ಮೂಲಕ ಕವಿ ಕುವೆಂಪು ಈ ದೇಶದ ಭಕ್ತ ಹಾಗೂ ಅನುಭಾವಿ ಕವಿಗಳ ಅಹಂನಿರಸನದ ಕಾವ್ಯಶ್ರದ್ಧೆಯ ವ್ಯಕ್ತಿತ್ವದೊಂದಿಗೆ ತಮ್ಮನ್ನು ಸಮೀಕರಿಸಿಕೊಳ್ಳುತ್ತಾರೆ..... ನಿಸರ್ಗದ ಬಗೆಗಿದ್ದ ಅವರ ಅನುರಕ್ತಿ, ಸದಾ ಅವರ ಸ್ಮೃತಿಯ ಒಂದು ಭಾಗವಾಗಿ, ನಿರಂತರ ಕಾಡುವ ಹಸಿವಾಗಿ, ದಾಹವಾಗಿ, ತನ್ನ ವ್ಯಕ್ತಿತ್ವದ ಒಂದು ವಿಸ್ತರಣೆಯಂತೆ ಕಣ್ಣೆದುರು ಚಾಚಿಕೊಂಡ ನಿಸರ್ಗದಲ್ಲಿ ಅವರನ್ನು ಏಕಾಂಗಿಯಾದ ರಸಯಾತ್ರಿಕನನ್ನಾಗಿ ಪರಿವರ್ತಿಸಿತು.'[೨೬]

ಕುವೆಂಪು ಏಕಕಾಲಕ್ಕೆ ಹಲವು ನೆಲೆಗಳ ನಡುವೆ ಸಾಮರಸ್ಯ ಸಾಧಿಸುವುದು ಆಶ್ಚರ್ಯ ಹುಟ್ಟಿಸುತ್ತದೆ. ಲೌಕಿಕ ಹಾಗೂ ಅಲೌಕಿಕವನ್ನು ಬೆಸೆಯುವ ಮೂಲಕ ಅವರು ತಮ್ಮ ಸಾಹಿತ್ಯದಲ್ಲಿ ಮಾನವೀಯತೆಯ ಜೀವಧಾತುಗಳನ್ನು ತುಂಬುವ ಕೆಲಸ ಮಾಡಿದರು.

ಒಂದು ಮಣ್ಣಿನ ಹೆಂಟೆಯರೆದು
ಒಂದು ನೀರಿನ ಹನಿಯನೆರೆದು
ಒಂದು ಗೇಣಿನ ನೆಲವ ಮುತ್ತು
ಒಂದು ಬೀಜವನ್ನಲ್ಲಿ ಬಿತ್ತಿ
ಒಂದು ಹುಲ್ಲೆಸಳನ್ನು ಬೆಳೆಸುವ
ನಾವನಾತನಿಗೆ
ಎಲ್ಲ ಜಪತಪದಿಂದಲೊದಗುವ
ಎಲ್ಲ ಸಾಧನದಿಂದಲೊದಗುವ
ಯೋಗ ಜಾಗಗಳೆಲ್ಲ ತೋರುವ,
ವೇದ ಮಂತ್ರಗಳೆಲ್ಲ ಸಾರುವ
ನಿತ್ಯವಾಗಿಹ ಪರಮಪದದಾ-
ನಂದವಾಗುವುದು![೨೨]

ನಿಸರ್ಗವನ್ನು ಕಾಯ್ದುಕೊಳ್ಳುವಲ್ಲಿ, ಶ್ರಮನಿಷ್ಠೆಯನ್ನು ತೋರುವಲ್ಲಿ, ಜೀವನವನ್ನು ಆತ್ಯಂತಿಕವಾಗಿ ಪ್ರೀತಿಸುವಲ್ಲಿ ಸಿಗುವ ಆನಂದ ಯಾವ ಆಧ್ಯಾತ್ಮಿಕ ಅನುಭೂತಿಗೂ ಕಡಿಮೆಯದಲ್ಲವೆಂದು ಕುವೆಂಪು ಪ್ರತಿಪಾದಿಸಿದರು. ಅದೇ ಕಾಲಕ್ಕೆ ಸುಖೀ ಸಮಾಜಕ್ಕೆ ನಿರಂಕುಶವಾದ ವ್ಯಕ್ತಿ ಸ್ವಾತಂತ್ರ್ಯದ ಅಗತ್ಯತೆಯನ್ನು ಕೂಡ ಅವರು ಕಂಡುಕೊಂಡರು. ಮನುಷ್ಯನ ವಿಕಾಸಕ್ಕೆ ಅಗತ್ಯವಾಗಿರುವ ವಿಜ್ಞಾನದತ್ತ ಮುಖ ಮಾಡಿದಾಗಲೂ ದಯೆ-ಅನುಕಂಪ-ಮಾನವೀಯತೆಯಿರದ ವಿಜ್ಞಾನ ಅಂಧಶ್ರದ್ಧೆಯಷ್ಟೆ ಅನಾಗರಿಕವಾದುದು ಎಂದು ಕುವೆಂಪು ನಂಬಿಕೊಂಡು ಮಾನವೀಯ ಧರ್ಮ ಹಾಗೂ ವಿಜ್ಞಾನಗಳ ನಡುವೆ ಸೇತುವೆ ನಿರ್ಮಿಸಿದರು. ವಿಜ್ಞಾನದಲ್ಲಿ ಆಧ್ಯಾತ್ಮಿಕತೆಯ ಎಳೆಗಳನ್ನು ಅವರು ನೇಯುವ ರೀತಿ ಅಚ್ಚರಿ ಮೂಡಿಸುತ್ತದೆ.

ಸಾಯದಂದು ಕಲ್ಲನೊಡೆಯೆ
ನೋಯದಂದು ಮರವ ಕಡಿಯೆ
ಕಲ್ಲು 'ನಿದ್ದೆಗೆಡಿಸಬೇಡ'!
ಎಂದು ರೇಗಿತು !
ಮರವು 'ಕನಸನೊಡೆಯಬೇಡ'!
ಎಂದು ಕೂಗಿತು[೨೩]

ನಿಸರ್ಗ ನಾಶದ ಮೂಲಕ ಆತ್ಮವಿನಾಶವನ್ನು ಎಳೆದುಕೊಳ್ಳುತ್ತಿರುವ ಆಧುನಿಕ ಮತ್ತು ಅರ್ಥಹೀನ ಅಭಿವೃದ್ಧಿಯ ಮಾರ್ಗಗಳನ್ನು ಅವರು ಬಲವಾಗಿ ಖಂಡಿಸುತ್ತಾರೆ. ೧೯೪೬ ರಲ್ಲಿ ಬೆಳಕು ಕಂಡ 'ಪಕ್ಷಿಕಾಶಿ' ಕವನ ಸಂಗ್ರಹವನ್ನು ಕುವೆಂಪು ತಮ್ಮ ಗುರುಗಳಾದ ವೆಂಕಣ್ಣಯ್ಯನವರಿಗೆ ಅರ್ಪಿಸಿದ್ದಾರೆ. ಈ ಅರ್ಪಣೆಯೊಳಗೆ ಕುವೆಂಪುರವರ ಹೃದಯಸ್ಪರ್ಶಿ ಪ್ರಕೃತಿಯ ಕಾಳಜಿ ಅಡಗಿದೆಯೆಂದು ವಿ. ಚಂದ್ರಶೇಖರ ನಂಗಲಿ ಗುರುತಿಸುತ್ತಾರೆ. ''ಹುಟ್ಟಿನಿಂದ ನಿಸರ್ಗದ ಭಾಗವಾಗಿರುವ ಮಗು ಭಾಷೆಯನ್ನು ಕಲಿಯುತ್ತಾ, ಸಂಸ್ಕೃತಿಯನ್ನು ದಕ್ಕಿಸಿಕೊಳ್ಳುತ್ತಾ, ನಾಗರಿಕತೆಯಲ್ಲಿ ನೆಲೆ ನಿಂತು ಕ್ರಮೇಣ ನಿಸರ್ಗದಿಂದ ಬಹುದೂರ ಬಂದು, ನಿಸರ್ಗದ ನೆನಪುಗಳೇ ಇಲ್ಲದ 'ಮನುಷ್ಯ'ನಾಗಿ ಬಿಡುತ್ತಾನೆ. ಇಂಥವರು ಮತ್ತೆ ನಿಸರ್ಗಕ್ಕೆ ಮರಳುವುದು ಸಾವಿನ ಮೂಲಕ. ಹೀಗಾಗಿ 'ಸಾವು' ಎಂದರೆ 'ನಿಸರ್ಗ'ವೆಂದೇ ಅರ್ಥ. ಕುವೆಂಪು ಅವರ ಅರ್ಪಣೆ 'ಶ್ರೀ ವೆಂಕಣ್ಣಯ್ಯನವರಿಗೆ', ಬದಲು 'ನಿಸರ್ಗಕ್ಕೆ' ಎಂದು ಅರ್ಥಮಾಡಿಕೊಂಡರೆ ಈ ಅರ್ಪಣೆಯ ಧ್ವನಿಶಕ್ತಿ ಹೆಚ್ಚುತ್ತದೆ.

.... ನಿಮ್ಮ ನೆನೆದೊಡಮೆನ್ನ ಗಾನದ ಹಕ್ಕಿ ರೆಂಕೆಯಂ
ಮುದುರಿ, ಕಣ್ಣೆವೆ ಮುಚ್ಚಿ, ಕಾವು ಕೂರುವುದಳಲ
ಮೊಟ್ಟೆಯ ಮೇಲೆ, ಸುಯ್ದು ; ಸುಯ್ವುದೆ ಚರಮಗೀತೆ

ಈ ದೃಷ್ಟಿಯಿಂದ ನೋಡಿದರೆ 'ಸುಯ್ವುದು ಚರಮಗೀತೆ' ಎಂಬುದು ಭಾರತದ ಪರಿಸರ ಪ್ರೇಮಿಗಳೆಲ್ಲರ ನಿಟ್ಟುಸಿರಾಗಿದೆ.''[೨೯]

ಪ್ರಕೃತಿ ಸೌಂದರ್ಯವನ್ನು ಉಜ್ವಲ ಭಾವನೆಯಿಂದ ನೋಡದಿದ್ದರೆ ಕೇಡು ತಪ್ಪಿದ್ದಲ್ಲವೆಂದು ಅವರು ಭಾವಿಸಿದ್ದರು. ಸೃಷ್ಟಿಯ ಸೊಬಗಿನಲ್ಲಿ ಶಿವನಿದ್ದಾನೆಂದು, ಆ ಶಿವನಲ್ಲಿಯೇ ಸೊಬಗಿದೆಯೆಂದು ಅರಿತ ಕುವೆಂಪು ಉದಯಿಸುವ ಸೂರ್ಯನನ್ನು, ಗಿರಿಯ ನೆತ್ತಿಯನ್ನು, ಹೂ ಬಿಸಿಲನ್ನು, ಜಲಸುಂದರಿಯನ್ನು, ನೀಲಿ ಆಗಸವನ್ನು ನೋಡಿ ಕೊನೆಗೆ 'ದೇವರು ರುಜು ಮಾಡುವುದನ್ನು' ನೋಡಿದರು.

'ಸುಯ್ವುದೆ ಚರಮಗೀತೆ' ಎನ್ನುವ ಕುವೆಂಪುರವರ ಅಳಲು; 'ಒಡವ್ಯಲ್ಲೋ ಮಗನೆ ಉಸಿರಿದ್ದೊಡಲಂತಾಳೋ' ಎಂದು ನಿಸರ್ಗಮಾತೆ ತನ್ನ ಸಂಕಟವನ್ನು ಹೊರಗೆ ಹಾಕುವ ಬೇಂದ್ರೆಯವರ 'ಚಿಗರಿಗಂಗಳ ಚೆಲುವಿ' ಆಧುನಿಕತೆಯ ಹೆಸರಲ್ಲಿ ನಡೆದ ಪ್ರಕೃತಿ ದೌರ್ಜನ್ಯದ ವಿರುದ್ಧದ ಗಟ್ಟಿ ಧ್ವನಿಗಳು. ಯಾಕೆಂದರೆ ಈ ಕವಿ ಚೇತನಗಳಿಗೆ ನಿಸರ್ಗ ಚೈತನ್ಯದ ಅರಿವಿದೆ. 'ಚಿನ್ನದ ಚೆಂಡಿನಂತೆ ಮೂಡಿ ಹೊನ್ನವೆ ಹೊಯ್‌ನೀರ್ ನೀಡುವ' ಕುವೆಂಪು ಅವರ ರವಿ; 'ಮೂಡಲ ಮನೆಯ ಮುತ್ತಿನ ನೀರಿನ ಎರಕವ ಹೊಯ್ಯುವ' ಬೇಂದ್ರೆಯವರ ರವಿ ; 'ಕಡಲೊಡಲಿನ ಬಡಬಾಗ್ನಿಯ ರೌದ್ರವ'ವನ್ನು ನಮ್ಮಲ್ಲಿ ಕೆರಳಿಸುವ ಕುವೆಂಪು ಅವರ 'ಶ್ರಾವಣದ ಸಮೀರ'; 'ಬಂದಿಯೊಳಗಿದ್ದವರ ಬಂಧನವ ಬಿಡಿಸುವ' ಬೇಂದ್ರೆಯವರ 'ಬಂದಿಕಾರಾ ಶ್ರಾವಣ' ಮೂಲಭೂತವಾಗಿ ಒಂದೇ ಸ್ವಾತಂತ್ರ್ಯ ಆಶಯದ ಎರಡು ರೂಪಗಳು. ಒಂದೇ ಶ್ರಾವಣದ ತುಂಬಿ ಹರಿವ ಎರಡು

ಹೊಳೆಗಳು. ಹಾಗಾಗಿ ಕುವೆಂಪು ಮತ್ತು ಬೇಂದ್ರೆ ಕನ್ನಡದಲ್ಲಿ ಎಲ್ಲೆ ಮೀರಿ ಶ್ರಾವಣ ಸುರಿಸಿದ್ದಾರೆ. ಶಿವನಿಗೆ ಸಮೀಪವಾಗಿರುವ ಸೃಷ್ಟಿಯ ಸೊಬಗಿನಿಂದ ಆನಂದ ಹಾಗೂ ಅಂತಃಕರಣಗಳನ್ನು ಹರಿಸಿದ್ದಾರೆ. ಪುಟಿಯುವ 'ರತ್ನದ ರಸದ ಕಾರಂಜಿ'ಯಿಂದ ವಿಸ್ಮಯ ಅನುಭವಿಸಿ ಅದನ್ನು ಸಹೃದಯರಿಗೂ ಉಣಬಡಿಸಿದ್ದಾರೆ.

ನವೋದಯವೆನ್ನುವುದು ಬರೀ ಸಾಹಿತ್ಯಕ್ಕೆ ಸೀಮಿತವಾಗಿರದೆ ಸಂಸ್ಕೃತಿಗೂ ಅದು ನೆಲೆಯಾಗಬೇಕು ಎನ್ನುವ ಮನೋಭಾವವನ್ನು ಇಬ್ಬರೂ ಹೊಂದಿದ್ದರೆಂದು ಹೇಳಬಹುದು. ಬೇಂದ್ರೆಯವರು ತಮ್ಮ ಗೆಳೆಯರ ಗುಂಪಿನ ಮೂಲಕ ಉತ್ತರ ಕರ್ನಾಟಕದಲ್ಲಿ ಕನ್ನಡದ ಪುನರುತ್ಥಾನವನ್ನು ಕೈಗೊಂಡರೆ ಕುವೆಂಪು ಅವರು ದಮನಿತ ಸಮುದಾಯಗಳ ಆಶಯಗಳಿಗೆ ಅಕ್ಷರ ರೂಪ ಕೊಡುವ ಮೂಲಕ ಅದುವರೆಗೂ ಅಭಿವ್ಯಕ್ತವಾಗಿರದಿದ್ದ ಅಖಂಡ ಜೀವನಾನುಭವವನ್ನು ಓದುಗ ಲೋಕಕ್ಕೆ ತೆರೆದಿಟ್ಟರು. ವೈಯಕ್ತಿಕ ವಿಷಾದವನ್ನು, ಸಂಭ್ರಮವನ್ನು ಉತ್ಕಟ ಕಾವ್ಯವನ್ನಾಗಿಸಿದ ಬೇಂದ್ರೆ ವಿರಳವಾಗಿ ಸಾಮಾಜಿಕ ನೆಲೆಯತ್ತ ಕಣ್ಣು ಹಾಯಿಸುತ್ತಾರೆ. ಆದರೆ ಕುವೆಂಪು ಅವರಿಗೆ ನೋವು -ಅವಮಾನಗಳು, ಕಷ್ಟಗಳನ್ನು ನುಂಗುವ ಪ್ರತಿರೋಧದ ಶಕ್ತಿಯನ್ನು ಬೆಳೆಸಿದವು. ಇದು ಅವರಲ್ಲಿ ಕೌಟುಂಬಿಕ ವಿಷಾದವನ್ನು ಸಮಚಿತ್ತದಿಂದ ಸ್ವೀಕರಿಸುವಂತೆ ಮಾಡಿ ಕಾವ್ಯದಲ್ಲಿ ಹೆಚ್ಚಾಗಿ ಗೈರು ಹಾಜರಾಗಿ ಉಳಿಯಿತು. ಆದರೆ ಉತ್ಕೃಷ್ಟ ಕಾವ್ಯವೆನ್ನಬಹುದಾದ 'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡತಿ' ಕಾದಂಬರಿಗಳಲ್ಲಿ ನಿಸರ್ಗವು ವ್ಯಂಗ-ವಿಷಾದ-ನೋವುಗಳೊಂದಿಗೆ ಬಿಚ್ಚಿಕೊಳ್ಳುವುದನ್ನು ಕಾಣಬಹುದಾಗಿದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಮಲೆನಾಡಿನ ಪ್ರಕೃತಿ ಲೋಕದಲ್ಲಿ ಅಲ್ಲಿಯ ಕಾಡು, ಬೆಟ್ಟ, ಬಂಡೆಗಳಲ್ಲಿ ಅರಳಿಕೊಳ್ಳುತ್ತ ಮನುಷ್ಯ ಪಾತ್ರಗಳ ಜೊತೆಗಿನ ಅರ್ಥಪೂರ್ಣ ಸಂಬಂಧಗಳನ್ನು ಅನಾವರಣಗೊಳಿಸುತ್ತದೆ. 'ಇಡೀ ಭಾರತೀಯ ಸಾಹಿತ್ಯದಲ್ಲಿ ಇಷ್ಟು ವಿಸ್ತೃತವಾದ, ದಟ್ಟವಾದ ಮತ್ತು ಸಾಂದ್ರವಾದ ಪರಿಸರ ವ್ಯವಸ್ಥೆಯ ವಿವರಣೆ ಬೇರೊಬ್ಬ ಲೇಖಕರಲ್ಲಿ ಸಿಗಲಾರದು.'[೩೦] ರಾಮನನ್ನು ಒಬ್ಬ ಮನುಷ್ಯನನ್ನಾಗಿ, ಸೀತೆಯನ್ನು ಒಬ್ಬ ತಾಯಿಯನ್ನಾಗಿ ನೋಡಿದ ದರ್ಶನ 'ರಾಮಾಯಣ ದರ್ಶನಂ'ದಿಂದ ಹೊರಡುತ್ತದೆ. ರಾಮ 'ಅರಮನೆಯ ಎಲ್ಲ ವೈಭವವನ್ನು ತ್ಯಜಿಸಿ ಯಾವುದೋ ಸಾಧನೆಗೆ ನಡೆಯುವವನಂತೆ ಅರಣ್ಯಕ್ಕೆ ಹೊರಡುತ್ತಾನೆ. ಕುವೆಂಪು ರಾಮನ ಅರಣ್ಯ ಪ್ರಯಾಣವನ್ನು ಪ್ರತ್ಯೇಕ ಧಾಟಿಯಲ್ಲಿಯೇ ವಿವರಿಸುತ್ತಾರೆ.'[೩೧] ಮಾನವೀಯ ನೆಲೆಯಲ್ಲಿ, ಪ್ರಕೃತಿಯ ಸೋಸುವಿಕೆಯಲ್ಲಿ ಅಲ್ಲಿಯ ಪಾತ್ರಗಳು ಬೆಳೆದು ತಮ್ಮ ಆತ್ಮದ ಉನ್ನತಿಗಾಗಿ ಶ್ರಮಿಸುತ್ತವೆ.

ಮುಂಜಾನೆಯ ಹಕ್ಕಿಗಳ ಮಂಗಲ ನಿನಾದದೊಂದಿಗೆ, ದಿಗಂತದಲ್ಲಿ ವ್ಯಾಪಿಸಿರುವ ಕುಂಕುಮ ಧೂಳಿಯೊಂದಿಗೆ, ಬಂಗಾರದ ನೀರಿನಿಂದೆದ್ದು ಬರುತ್ತಿರುವ ಬಾಲ ರವಿಯೊಂದಿಗೆ ಮಾನಸದ ಪೂಜೆಯನ್ನು ಕುವೆಂಪು ನೆರವೇರಿಸುತ್ತಾರೆ. ಭೂಮಿಗೆ ಪ್ರಾಣಾಗ್ನಿಯನ್ನು ಹರಿಸುವಂತಹ, ಸರ್ವಾತ್ಮನ ದರ್ಶನ ಮೂಡಿಸುವಂತಹ ಕುವೆಂಪು ಅವರ 'ಬಾ ಫಾಲ್ಗುಣ ರವಿ ದರ್ಶನಕೆ', 'ಇಂತಹ ಸುಂದರ ಪ್ರಾತಃಕಾಲದಿ', 'ಶರತ್ಕಾಲದ ಸೂರ್ಯೋದಯದಲಿ', 'ಆನಂದಮಯ ಈ ಜಗಹೃದಯ' ಕವಿತೆಗಳಲ್ಲಿನ 'ಬೆಳಗು' ಹೆಚ್ಚು ಹೆಚ್ಚು ಚರ್ಚೆಗೆ

ಒಳಪಡಬೇಕಾದ, ಅಲ್ಲಿರುವ ದೈವಿಕ ಅನುಭೂತಿಯ ಮೇಲೆ ವಿಮರ್ಶೆ ಬೆಳಕು ಚೆಲ್ಲಬೇಕಾದ ಅಗತ್ಯತೆಯನ್ನು ಮನಗಾಣಬಹುದಾಗಿದೆ. ಯಾಕೆಂದರೆ ಅವರ ಕಥನ ಕವನಗಳ, ಮಹಾಕಾವ್ಯದ, ಮಹಾಕಾದಂಬರಿಗಳ ಮಹೋನ್ನತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರ ಭಾವಗೀತೆಗಳನ್ನು ಶೈಲಿ, ಭಾಷೆಯ ದೃಷ್ಟಿಯಿಂದ ಅವಜ್ಞೆ ಮಾಡಿರುವುದನ್ನು ನೋಡುತ್ತೇವೆ. ನಿಸರ್ಗದ ಅನುಭೂತಿ ದೊರಕಿಸುವಂತಹ ಅವರ ಹಲವು ಕವಿತೆಗಳನ್ನು ಬರೀ ರಮ್ಯ ಕವಿತೆಗಳೆಂದು, ಆದರ್ಶಗಳ ಲೇಪವೆಂದು, ಉತ್ಕಟವಾಗಿಲ್ಲವೆಂದು ಹಿಂದೆ ಸರಿಸಲಾಗಿದೆ. ಕುವೆಂಪು ಅವರ ನಿಸರ್ಗ ಕವಿತೆಗಳನ್ನು ವಿವೇಚಿಸುವಾಗ ಅವುಗಳ ಅನನ್ಯತೆಯನ್ನು ಹೇಳುವದರೊಂದಿಗೆ ಇತರ ಪ್ರಮುಖ ನವೋದಯ ಕವಿಗಳ ನಿಸರ್ಗ ಕಾವ್ಯದೊಂದಿಗೆ ಅವುಗಳನ್ನು ತುಲನೆ ಮಾಡಿರುವುದನ್ನು ಹಲವರ ವಿಮರ್ಶೆಯಲ್ಲಿ ನಾವು ಕಾಣಬಹುದು. ಆದರೆ ಅದೇ ಮಾನದಂಡಗಳನ್ನು ಇತರರ ಕಾವ್ಯ ಪರಿಶೀಲನೆಯ ಸಂದರ್ಭದಲ್ಲಿಯೂ ಅನುಸರಿಸುವುದು ವಿಮರ್ಶೆಯ ಜವಾಬ್ದಾರಿಯಾಗಿದೆಯೆಂದು ಹೇಳಬಹುದು. ಕುವೆಂಪು ಬರೆಯಲು ತೊಡಗಿದ ಸಂಕ್ರಮಣ ಕಾಲದ ಸ್ಥಿತ್ಯಂತರಗಳನ್ನು; ಸಾಹಿತ್ಯ ತಳೆಯಬೇಕಾದ ಹೊಸ ಅವಸ್ಥೆಗಳನ್ನು; ಅವರ ಬರವಣಿಗೆಯ ಪ್ರೇರಣೆಗಳನ್ನು ಅಂತಹ ವಿಮರ್ಶೆ ಗೌಣವಾಗಿ ಕಂಡಿದೆಯೆಂದು ತೋರುತ್ತದೆ. ಕುವೆಂಪು ನಂಬಿಕೊಂಡಿದ್ದ ಸಾಮಾಜಿಕ ನೆಲೆಗಳು ಕಾವ್ಯದಲ್ಲಿ ಎಚ್ಚರದ ಸ್ಥಿತಿಯನ್ನು ಕಾಯ್ದುಕೊಳ್ಳಲು ನೆರವಾದವು. ಕಥನದಲ್ಲಿ ಇರುವ ವಿಷಾದದ ನೆಲೆ ಕಾವ್ಯದಲ್ಲಿ ಗೈರು ಆದದ್ದರ ಬಗ್ಗೆ, ಭಾಷೆ ಸಂಸ್ಕೃತಭೂಯಿಷ್ಠವಾದ ಬಗ್ಗೆ, ಶೈಲಿ ಮಹೋನ್ನತವಾದ ಬಗ್ಗೆ ಕೆಲವು ವಿಮರ್ಶಕರು ವ್ಯಕ್ತಪಡಿಸಿದ ಆಕ್ಷೇಪಗಳು ಹಾಗೂ ನವ್ಯದ ಕಾಲದಲ್ಲಿ ಕುವೆಂಪು ಕಾವ್ಯದ ಬಗ್ಗೆ ಬಂದ ತೀವ್ರ ಟೀಕೆಗಳು ಕಾಲ ಸರಿದಂತೆ ಮರುವಿಮರ್ಶೆಗೆ ಒಳಪಟ್ಟಿರುವುದನ್ನು ನಾವಿಂದು ನೋಡಬಹುದು. ಜಿ.ಎಚ್.ನಾಯಕ್‌ರು ೧೯೭೧ ರಲ್ಲಿ ಬರೆದಂತಹ 'ಭಾಷಾ ಪ್ರಯೋಗ : ನವೋದಯ ಕಾಲದಲ್ಲಿ' ಎಂಬ ತಮ್ಮ ಲೇಖನವನ್ನು ಈಗ ಮರುಪರಿಶೀಲನೆಗೆ, ಹೊಸ ವ್ಯಾಖ್ಯಾನಗಳಿಗೆ ಒಳಪಡಿಸುವ ಸಂದರ್ಭ ಬಂದಿದೆಯೆಂದು ಸೂಚಿಸಬಯಸುತ್ತಾರೆ. 'ಕುವೆಂಪು ನವೋದಯ ಸಂದರ್ಭದಲ್ಲಿ ಬರೆದರೂ ಅದರ ಅಭಿವ್ಯಕ್ತಿ ವಿಧಾನ ಮಾದರಿಗಳನ್ನು ಅಳವಡಿಸಿಕೊಂಡರೂ ಆ ಕಾಲದ ಬ್ರಾಹ್ಮಣ ಸಾಹಿತಿಗಳಿಗಿಂತ ಭಿನ್ನವಾದ ಸಂಸ್ಕೃತಿ ಕಟ್ಟುವ ಕನಸಿಗೆ ಕಾವ್ಯ ಕೊಡುತ್ತಿದ್ದ ಪ್ರತಿಭಾಶಾಲಿ ಮತ್ತು ಸ್ವೋಪಜ್ಞ ಚಿಂತಕ ಸಾಹಿತಿಯಾಗಿದ್ದರು. ಅವರ ವಿಶ್ವಮಾನವ ತತ್ವವು ಈ ಮಹತ್ವಾಕಾಂಕ್ಷೆಯ ಫಲ, ಪರಿಣಾಮ.'[೨೨] ನವ್ಯರ ವಿಮರ್ಶೆಯನ್ನು ಒಪ್ಪುವುದೂ, ಬಿಡುವುದೂ ಮಹತ್ವದ್ದಾಗದೆ ಕುವೆಂಪು ಸಾಹಿತ್ಯಾಧ್ಯಯನಕ್ಕೆ ಹೊಸ ಚರ್ಚೆಗೆ ಅವಕಾಶ ಕೊಟ್ಟದ್ದು ಮುಖ್ಯವೆಂದು ಭಾವಿಸುವ ನಾಯಕ್ ಅವರು ನವೋದಯದ ಕವಿ-ವಿಮರ್ಶಕರು ಕುವೆಂಪು ಅವರ ಸಾಹಿತ್ಯದ ಬಗ್ಗೆ ಮೌನವಾಗಿದ್ದುದನ್ನು ಪ್ರಶ್ನಿಸುತ್ತಾರೆ. ಕುವೆಂಪುರವರ 'ಮಳೆಬಿಲ್ಲು', 'ತೇನೇ ಹಕ್ಕಿ', 'ಸುಗ್ಗಿ', 'ಕಾಜಾಣ', 'ಹೂವುಗಳು', 'ಮಾಗಿ' ಮುಂತಾದ ಕವಿತೆಗಳನ್ನು ಮುಕ್ತವಾಗಿ ಪ್ರಶಂಸಿಸುವ, ಅವುಗಳ ಹಿಂದೆ ಚೈತನ್ಯ ಸುಳಿಯುತ್ತಿರುವುದನ್ನು ಮನಗಾಣುವ ಕೀರ್ತಿನಾಥ ಕುರ್ತಕೋಟಿ ಅವರು ಪ್ರಕೃತಿಯ ಅಂತರಂಗ ಕುವೆಂಪುರವರಲ್ಲಿ ಅಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ ಎನ್ನುವ

ಮಾತುಗಳನ್ನಾಡುತ್ತಾರೆ. 'ಪ್ರಕೃತಿಯ ಚೆಲುವು ಕವಿಯ ಸ್ವಂತ ಅನುಭವವಾಗಿ ಇಳಿಯುವುದಿಲ್ಲ.... 'ನವಿಲು', 'ಕಲಾಸುಂದರಿ', 'ಕೇಶಿರಾಜ' ಮೊದಲಾದ ಕವಿತೆಗಳಲ್ಲಿಯ ಅತಿ ಸಂಸ್ಕೃತಮಯತೆ ರಸಾನುಭವಕ್ಕೆ ತಡೆಯನ್ನುಂಟು ಮಾಡುತ್ತದೆ'[೩೩] ಎನ್ನುತ್ತಾರೆ. ಅವರ ಕಥನ ಕವನಗಳನ್ನು ಮೆಚ್ಚುತ್ತ 'ಕುವೆಂಪುರವರ ಕಾವ್ಯದ ಶ್ರೇಷ್ಠತೆಯಿರುವುದು ಅದು ಸಮಕಾಲೀನ ಜೀವನದ ಎಲ್ಲ ಅಂಶಗಳಿಗೂ ಪ್ರತಿಸ್ಪಂದಿಯಾಯಿತೆಂಬುದೇ. ನಿಸರ್ಗದ ಚೆಲುವು, ದೇಶಪ್ರೇಮ, ಆದರ್ಶಪ್ರಿಯತೆ, ಕ್ರಾಂತಿಯ ವೀರಭಾವ, ಆಧ್ಯಾತ್ಮಿಕತೆ ಮೊದಲಾದ ಎಲ್ಲ ವಿಷಯಗಳಿಗೂ ಅವರ ಕಾವ್ಯ ಇಂಬು ಕೊಟ್ಟಿದೆ. ಹೀಗಾಗಿ ಹೊಸಗನ್ನಡ ಕಾವ್ಯದ ಇತಿಹಾಸದಲ್ಲಿ ಅವರ ಸ್ಥಾನ ಭದ್ರವಾಗಿದೆಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ'[೩೪] ಎಂದು ಅವರ ಪ್ರಾಮುಖ್ಯತೆಯನ್ನು ಒಪ್ಪುತ್ತಾರೆ. ಆದರೆ ಕುವೆಂಪು ಅವರ ಕವಿತೆಗಳನ್ನು ವಿಮರ್ಶಿಸುವಾಗಿನ ಕುರ್ತಕೋಟಿಯವರ ಹೊಯ್ದಾಟಗಳನ್ನು ಇಲ್ಲಿ ಗುರುತಿಸಬಹುದೆಂದು ತೋರುತ್ತದೆ. ವರ್ಡ್ಸ್‌ವರ್ತ್ ತನ್ನ ಪ್ರಕೃತಿ ಕಾವ್ಯದಿಂದ ಇಡೀ ಇಂಗ್ಲೀಷ್ ಸಾಹಿತ್ಯಕ್ಕೆ ಒಂದು ತಿರುವು ಕೊಟ್ಟಂತೆ, ಕುವೆಂಪು ಕೂಡ ತಮ್ಮ ನಿಸರ್ಗ ಕವಿತೆಗಳಿಂದ ಕನ್ನಡದ ನವೋದಯವನ್ನು ಇತರರೊಂದಿಗೆ ಸಶಕ್ತವಾಗಿಸಿದರು. ಅಲಂಕಾರವಾಗಿದ್ದ ಪ್ರಕೃತಿಗೆ ಪ್ರಾಣದ ಸಿದ್ಧಿ ದೊರಕಿಸಿದರು. ಕುವೆಂಪು ಅವರ ಮಿತಿಗಳನ್ನು ಗುರುತಿಸುವುದಕ್ಕೆ ವಿಮರ್ಶೆ, ಸಂಕೋಚಪಡಬೇಕಾಗಿಲ್ಲವೆನ್ನುವುದು ನಿಜವಾದರೂ ಆ ಮಿತಿಗಳ ಸರಿಯಾದ ಕಾರಣಗಳನ್ನು; ಕಾವ್ಯದಲ್ಲಿ ನಿಸರ್ಗದ ಚಿತ್ರಣದ ಮೂಲಕ ದೈವಿಕ ಅನುಭೂತಿ ಪಡೆಯುವ ವಿವರಗಳನ್ನು ತೆರೆದಿಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಮುದ್ದಣ ಆಧುನಿಕತೆಯಿಂದ ದೂರವಾಗಿರುವುದಕ್ಕೆ 'ಹೊಸ ಸಾಹಿತ್ಯಕ್ಕೆ ತಡೆಯನ್ನುಂಟು ಮಾಡುವದಕ್ಕಾಗಿರದೆ ಪ್ರಾಚೀನ ಸಾಹಿತ್ಯಕ್ಕೆ ನಮ್ಮೆಲ್ಲರ ವತಿಯಿಂದ ಕೊನೆಯ ನಮಸ್ಕಾರ ಹೇಳುವುದಕ್ಕೆ'[೩೫] ಎಂದು ಮುದ್ದಣನ ಸೃಷ್ಟಿಕಾರ್ಯದ ಬಗ್ಗೆ ಸಕಾರಣಗಳನ್ನು ಕೊಡುವ ಕುರ್ತಕೋಟಿಯವರು ಕುವೆಂಪು ಎದುರಿಸುತ್ತಿದ್ದ ಕಾಲಘಟ್ಟವನ್ನು, ಸಾಂಸ್ಕೃತಿಕ ಪ್ರಜ್ಞೆಯನ್ನು, ಕನ್ನಡಕ್ಕೆ 'ಭಾವಗೀತೆ'ಯ ಮಾದರಿ ಒದಗಿ ಬರಲು ಕುವೆಂಪು ಕೊಟ್ಟ ಕಾಣಿಕೆಯನ್ನು ಗಣನೆಗೆ ತೆಗೆದುಕೊಳ್ಳಲಾರದೆ ಹೋಗುತ್ತಾರೆ. ನವ್ಯ ಚಳುವಳಿಯ ಪ್ರಭಾವದಿಂದ ಕುವೆಂಪು ಅವರನ್ನು ತೀಕ್ಷ್ಣವಾಗಿ ವಿಮರ್ಶಿಸುವ ಜಾಯಮಾನಕ್ಕೆ ತಕ್ಕಂತೆ ಕುರ್ತಕೋಟಿಯವರು ಕುವೆಂಪು ಕವಿತೆಗಳನ್ನು ವಿಶ್ಲೇಷಿಸುತ್ತಾರೆಂದು ಎಚ್.ಎಸ್.ರಾಘವೇಂದ್ರರಾವ್ ಅಭಿಪ್ರಾಯಪಡುತ್ತಾರೆ. 'ಕುವೆಂಪು ಅವರ ಕವಿತೆಗಳನ್ನು ಒಪ್ಪದಿರುವುದು ಮತ್ತು ಹಾಗೆ ಹೇಳಲು 'ಹಿಂಜರಿಕೆ' ಈ ಮಾತುಗಳ ಹಿಂದೆ ಕೆಲಸ ಮಾಡಿರುವ ಶಕ್ತಿಗಳು. ಕುರ್ತಕೋಟಿಯವರ ವಿಮರ್ಶೆಯಲ್ಲಿ ಸಾಮಾನ್ಯವಾಗಿ ಆಗುವ ಹಾಗೆ, ಅವರು ಬೇಂದ್ರೆ ಕಾವ್ಯದ ಮಾನದಂಡಗಳೊಂದಿಗೆ ಕುವೆಂಪು ಕವಿತೆಯನ್ನು ಪ್ರವೇಶಿಸುತ್ತಾರೆ.'[೩೬] ಕುವೆಂಪು ಅವರಿಗೆ ಸ್ವಂತ ಅನುಭವದ ಅಭಾವವಿಲ್ಲ. ಆದರೆ ನಿರ್ದಿಷ್ಟ ಅನುಭವಗಳನ್ನು ನಿರ್ದಿಷ್ಟವಾದ ಉದ್ದೇಶಗಳಿಗೆ ಉಪಯೋಗಿಸುವುದು ಅವರ ಗುರಿಯಾಗಿತ್ತೆನ್ನುವ ಎಚ್.ಎಸ್.ಆರ್. ಅವರ ಮಾತುಗಳು ಸಮರ್ಥನೀಯವಾಗಿವೆ ಎನ್ನಬಹುದು. ಅವರ ಕಾವ್ಯ ಸಂಸ್ಕೃತ ಭೂಯಿಷ್ಠವಾಗಿದೆಯೆಂಬ ಮಾತು ಕೂಡ ಸಮರ್ಥನೆಯಿಲ್ಲದೆ ಮಾಡಿದ ಟೀಕೆಯೆಂದು ಡಾ. ಕೆ.ವಿ.ನಾರಾಯಣ

ವಿಶ್ಲೇಷಿಸಿರುವುದು ಇತ್ತೀಚೆಗೆ ಕುವೆಂಪು ಪುನರ್‌ವ್ಯಾಖ್ಯಾನಕ್ಕೆ ಪುನರ್‌ನ್ವೇಷಣೆಗೆ ಒಳಪಡುತ್ತಿದ್ದಾರೆಂಬುದರ ಸೂಚನೆಯಾಗಿದೆ. 'ಕುವೆಂಪು ರೂಪಿಸಿಕೊಂಡಿರುವ ನೂರಾರು ಸಂಸ್ಕೃತ ಕಾವ್ಯಗಳಿರುವ ಅಥವಾ ಪದಕೋಶದಿಂದ ನೇರವಾಗಿ ಎರವಗಲು ಪಡೆದವುಗಳಲ್ಲ. ಸಂಸ್ಕೃತ ಪದರಚನೆಯ ನಿಯಮಗಳನ್ನು ಬಳಸಿ ಕುವೆಂಪು ತಾವೇ ರೂಪಿಸಿಕೊಂಡ ರಚನೆಗಳು ಅವು... ಅವರ ಕವಿತೆಗಳಲ್ಲಿ ಈ ಮಾದರಿಗೆ ನೂರಾರು ನಿದರ್ಶನಗಳು ದೊರಕುತ್ತವೆ.'[೩೭]

ಕುವೆಂಪು ಅವರ ಪ್ರಕೃತಿ ಕಾವ್ಯವೇ ಇರಲಿ, ಕಥನ ಕವನಗಳೆ ಇರಲಿ, ಕಾದಂಬರಿಗಳೇ ಇರಲಿ ಅವು ಸಾಧಿಸಿದ ಮಹತ್ವ ಕಾಲ ದಾಟುತ್ತ ಬಂದಂತೆ ಹೆಚ್ಚಾಗಿರುವುದು ಕಂಡುಬರುತ್ತದೆ. ಸಮಯ ಸರಿದಂತೆ, ಸಾಂಸ್ಕೃತಿಕ ಮೌಲ್ಯಗಳ ಪಲ್ಲಟವಾದಂತೆ ಹೊಸ ಬರಹಗಾರರು ಹುಟ್ಟಿಕೊಂಡಂತೆ ಒಬ್ಬ ಕವಿಯ ಕೃತಿಗಳು ಸತ್ವಪರೀಕ್ಷೆಗೆ ಒಳಗಾಗುತ್ತ ಹೋಗುತ್ತವೆ. ಬೇಂದ್ರೆ ಹಾಗೂ ಕುವೆಂಪು ಇಬ್ಬರೂ ಅಂತಹ ಕಾಲವನ್ನು ಗೆದ್ದು ಬದುಕುತ್ತಿರುವವರೆಂದು ತೋರುತ್ತದೆ. ಅವರ ಕಾವ್ಯದ ಮಹತ್ವ ಮತ್ತಿಷ್ಟು ಹೆಚ್ಚಾಗಿದೆ. ಬೇಂದ್ರೆಯವರನ್ನು ವಿಮರ್ಶೆಗೆ ಒಳಪಡಿಸುತ್ತ ಕುರ್ತಕೋಟಿಯವರು ಹೇಳಿದ ಮಾತುಗಳು ಕುವೆಂಪು ಅವರಿಗೂ ಕೂಡ ಅನ್ವಯವಾಗುತ್ತವೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ. 'ಇಷ್ಟು ಸಮೀಪದ ವರ್ತಮಾನ ಕಾಲದಿಂದ ನೋಡುತ್ತ ಬೇಂದ್ರೆಯವರ ಕಾವ್ಯದ ಬೆಲೆ ಕಟ್ಟುವುದು ಅಸಾಧ್ಯವಾದ ಮಾತು. ಅವರ ಕಾವ್ಯದ ಕ್ರಮವಾದ ಹಾಗೂ ಸಾವಧಾನವಾದ ಅಭ್ಯಾಸ ಇನ್ನೂ ಹೆಚ್ಚು ಮಾತುಗಳನ್ನು ಹೇಳಬಹುದು. ಅವರ ಕವಿತೆಗಳು ಜನಮನದ ಮೇಲೆ ಆಳವಾದ ಪ್ರಭಾವವನ್ನು ಬೀರಲು ಇನ್ನೂ ಕಾಲ ಬೇಕಾದೀತು. ಆ ಸಂಸ್ಕಾರದ ಆವರಣದಲ್ಲಿ ಹುಟ್ಟಿದ ವಿಮರ್ಶೆ ಈಗಿನಕಿಂತ ಹೆಚ್ಚು ನಿಶ್ಚಿತವಾಗಬಹುದು.'[೩೮]

ಕುವೆಂಪು ಅವರ ಸಂಸ್ಕೃತಭೂಯಿಷ್ಠತೆ, ಮಹೋನ್ನತ ಶೈಲಿಗಳ ಬಗ್ಗೆ ಟೀಕೆಗಳು ಬಂದಂತೆ ಬೇಂದ್ರೆಯವರ 'ಅರಳು-ಮರಳು' ಹಾಗೂ ನಂತರದ ಕಾವ್ಯದಲ್ಲಿನ ಕ್ಲಿಷ್ಟತೆಗಳ ಬಗ್ಗೆಯೂ ಹಲವಾರು ಟೀಕೆಗಳು ಎದುರಾದವು. 'ನಾಕು-ತಂತಿ'ಗೆ ಜ್ಞಾನಪೀಠ ಪುರಸ್ಕಾರ ಬಂದರೂ ಕೆಲವರು 'ಇದು ಕವಿತೆಯೇ ಅಲ್ಲ. ಬೇಂದ್ರೆಯವರ ವಯೋದೋಷದ ಪರಿಣಾಮ ಎಂದು ಇನ್ನು ಕೆಲವರು ಇದು ತಮಗೆ ಅರ್ಥವಾಗದ್ದರಿಂದಲೆ ಇದರಲ್ಲಿ ಏನೋ ಮಹತ್ವದ ಅರ್ಥ ಇರಬೇಕು ಎಂದು' ಬಾಯಿ ತುಂಬಾ ಹೊಗಳಿದರು.'[೩೯] ಅರವಿಂದರ ಚತುರ್ಮುಖ ಸೌಂದರ್ಯದ ಅನುಭೂತಿಯನ್ನು ದೊರಕಿಸಿಕೊಳ್ಳಲು ಅಂದರೆ 'ಇಂದ್ರಿಯಗಮ್ಯ ಸೌಂದರ್ಯ, ಊಹಾಗಮ್ಯ ಸೌಂದರ್ಯ, ಬೌದ್ಧಿಕ ಸೌಂದರ್ಯ, ಆತ್ಮಿಕ ಪರಿಪೂರ್ಣ ಸೌಂದರ್ಯಗಳನ್ನು ದೊರಕಿಸಿಕೊಳ್ಳಲು ಬೇಂದ್ರೆ ಮಿಡಿದ ತಂತಿಗಳೆ ನಾಕುತಂತಿಗಳೆಂದು'[೪೦] ಬನ್ನಂಜೆ ವಿಶ್ಲೇಷಿಸುತ್ತಾರೆ. ಕ್ಲಿಷ್ಟತೆಯನ್ನು ದೂರ ಮಾಡಲು, ಪ್ರತಿಮೆ-ಉಲ್ಲೇಖಗಳನ್ನು ಅರ್ಥೈಸಿಕೊಳ್ಳಲು ಸಹಾಯಕ ಗ್ರಂಥಗಳ, ಬಹಳಷ್ಟು ಓದಿನ ಪೂರ್ವಸಿದ್ಧತೆಗಳ ಅವಶ್ಯಕತೆಯನ್ನು ಕಾಣಬಹುದಾಗಿದೆ. ಆ ಕಾರಣದಿಂದಲೆ ಪಠ್ಯದಲ್ಲಿರುವ ಹಿಂದಿನ ಸಾಹಿತ್ಯಿಕ ಉಲ್ಲೇಖಗಳನ್ನು ತಿಳಿಯುವ, ವೇದ ಪುರಾಣ, ಪ್ರತಿಮೆ-ರೂಪಕಗಳು ಹೊಸ ಅರ್ಥ-ರೂಪ ಪಡೆದು ನಿಲ್ಲುವ ಸಾಹಸಗಳನ್ನು ಎಚ್ಚರಿಕೆಯಿಂದ, ಸಹೃದಯತೆಯಿಂದ ತಿಳಿಯಬೇಕಾಗುತ್ತದೆ. ಕುವೆಂಪು, ಪು.ತಿ.ನ. ಬೇಂದ್ರೆ ಕಾವ್ಯದ ಯಾವುದೇ ದುರೂಹ್ಯತೆಗಳು

ಈ ರೀತಿಯಲ್ಲಿ ನಿವಾರಣೆಯಾಗಬಹುದೆಂದು ತಿಳಿಯಬಹುದು. ಬೇಂದ್ರೆಯವರ 'ನಾಕು ತಂತಿ' ಯಂತಹ ಕಾವ್ಯದಲ್ಲಿನ ಕ್ಲಿಷ್ಟತೆ ಕಡಿಮೆ ಮಾಡಲು ಹೆಚ್ಚಿನ ಪ್ರಯತ್ನಗಳು ಇನ್ನೂ ಆಗಬೇಕಾಗಿದೆಯೆಂದು ಡಾ. ಜಿ.ಎಸ್. ಅಮೂರ ಹೇಳುವುದು ಸಮಂಜಸವೆನಿಸುತ್ತದೆ. 'ಟಿ.ಎಸ್. ಎಲಿಯಟ್‌ನ 'The Waste Land' ನ ಬಗೆಗೂ ಕ್ಲಿಷ್ಟತೆಯ ಆಪಾದನೆಗಳಿದ್ದವು. ಆದರೆ ವಿದ್ವಾಂಸರ ಪ್ರಯತ್ನಗಳ ಫಲವಾಗಿ ಈ ಕ್ಲಿಷ್ಟತೆ ದೂರವಾಗಿದೆ. ಜೇಮ್ಸ್ ಜಾಯ್ಸ್‌ನ 'Ulysses' ನಲ್ಲಿ ಬರುವ 'allusions' ಬಗ್ಗೆಯೇ ಒಂದು ಉದ್ಗ್ರಂಥವಿದೆ. ಬೇಂದ್ರೆ ಕಾವ್ಯದ ಸಂದರ್ಭದಲ್ಲಿಯೂ ಇಂಥ ಸಹಾಯದ ಅವಶ್ಯಕತೆಯಿದೆ.'[೪೧] ಬರಬರುತ್ತ ಆಗಮಿಕದತ್ತ ಹಾಗೂ ದೈವಿಕತೆ ದರ್ಶನಗಳಿಗೆ ಹೆಚ್ಚು ವಾಲಿದ ಬೇಂದ್ರೆ ಉತ್ತರಕಾವ್ಯದ ಬಗ್ಗೆ ಆ ಮಾತು ಹೆಚ್ಚು ನಿಜವೆನಿಸುತ್ತದೆ. 'Literary allusions' ಗಳು ಕೊಡುವ ಮಹತ್ವವನ್ನು, ತಿರುವನ್ನು ಡಾ. ಗಿರಡ್ಡಿ ಗೋವಿಂದರಾಜ ಪ್ರಸ್ತಾಪಿಸುತ್ತ ಒಂದು ರೀತಿಯಲ್ಲಿ ಅದು ಪರಂಪರೆಯನ್ನು ಆಧುನಿಕ ಕಾಲಕ್ಕೆ ಹೊಂದಿಸಿಕೊಳ್ಳುವ ಕ್ರಿಯೆಯೆಂದು ಹೇಳುತ್ತಾರೆ. 'ಎಲಿಯಟ್‌ನಲ್ಲಿ ವೈದೃಶ್ಯದ ತತ್ವ ಪ್ರಧಾನವಾಗಿದ್ದರೆ, ಬೇಂದ್ರೆಯವರಲ್ಲಿ ಸಾದೃಶ್ಯದ ತತ್ವ ಪ್ರಧಾನವಾಗಿದೆ. ಇಬ್ಬರೂ ತಮ್ಮ ಟಿಪ್ಪಣಿಗಳಲ್ಲಿ ಹಿಂದಿನ ಪಠ್ಯಗಳನ್ನು ಅರ್ಥಪೂರ್ಣವಾಗಿ ಓದುಗರ ನೆನಪಿಗೆ ತರುತ್ತಾರೆ. ಮುಖ್ಯವಾದ ಸಂಗತಿಯೆಂದರೆ, ತನ್ನಷ್ಟಕ್ಕೆ ಪ್ರತ್ಯೇಕವಾಗಿ ಓದಿದಾಗ ಸಾಮಾನ್ಯವೆಂದು ಕಾಣುವ ಬೇಂದ್ರೆಯವರ 'ಶಿವದೃಷ್ಟಿ' ಎಂಬ ಕವಿತೆಗೆ ಹರಿಹರನ ಪದ್ಯದ ಹಿನ್ನೆಲೆಯಲ್ಲಿ ವಿಶೇಷ ಅರ್ಥ ಬರುತ್ತದೆ.'[೪೨] ತಪಸ್ಸಿನಲ್ಲಿ ಧ್ಯಾನಸ್ಥನಾಗಿರುವ ಶಿವನನ್ನು ಎಚ್ಚರಗೊಳಿಸುವ, ಲೋಕಕಲ್ಯಾಣಕ್ಕೆ ಆತ ಅವಳನ್ನು ವರಿಸುವಂತೆ ಮಾಡುವ' ಗಿರಿಜೆಯ ದೃಷ್ಟಿಯಲ್ಲಿ ಅಲೌಕಿಕ ಲೈಂಗಿಕತೆಯ ಚುಂಬಕವೊಂದು ಹರಿದಾಡಿದಂತೆ ಹರಿಹರನ ಬರವಣಿಗೆ ಇದೆ. ಹರಿಹರನ ಗಿರಿಜಾದೃಷ್ಟಿಯನ್ನು ಹಿನ್ನೆಲೆಯಾಗಿಟ್ಟುಕೊಂಡು ಶಿವದೃಷ್ಟಿಯಲ್ಲಿ ಲೌಕಿಕ ಪ್ರೀತಿ ಹರಿದಾಡುವಂತೆ ಮಾಡಿರುವುದು ಬೇಂದ್ರೆಯವರ ವಿಶೇಷತೆಯಾಗಿದೆ.

'ಗಂಗಾವತರಣ' ಸಂಕಲನದಲ್ಲಿರುವ 'ಶಿವದೃಷ್ಟಿ' ಪದ್ಯದಲ್ಲಿ ಲೌಕಿಕವಾಗಿರುವ ಪ್ರೇಮ ದೈವಿಕ ನೆಲೆಯಲ್ಲಿ ಕೊನೆಗೊಳ್ಳುತ್ತದೆ. ಅಲೌಕಿಕದ ಛಾಯೆ ಪದ್ಯದ ಮುಕ್ತಾಯಕ್ಕೆ ಬಂದು ಲೌಕಿಕದ ಪ್ರೇಮವನ್ನು, ಲೈಂಗಿಕ ಆಟವನ್ನು ಎತ್ತರಕ್ಕೊಯ್ಯುತ್ತದೆ.

ಅವನ ನೋಟ ಅವಳ ಕೂಟ ಏನೋ ಆಟವಾಡಿತು ।
ಏನೇನೋ ಮೂಡಿತು ॥
ಕೂದಲನ್ನು ಹಣಿಗೆಯಂತೆ ಹಿಕ್ಕಿ ಹಿಕ್ಕಿ ಬಾಚಿತು ।
ಕುರುಳಿಗೆ ಕುಡಿ ಚಾಚಿತು ॥[೪೩]

ಹರಿಹರನಲ್ಲಿ ಭವಾನಿಯಾದ ಗಿರಿಜೆಯು ಶಿವನನ್ನು ಪ್ರೀತಿಯಿಂದ ನೋಡಿ ಕಣ್ಣಿನಲ್ಲಿಯೇ ಶಿವನನ್ನು ಮುಟ್ಟಿ ಅನುಭವಿಸಿದ ಸುಖವನ್ನು ತೋರ್ಪಡಿಸಿದರೆ ಬೇಂದ್ರೆಯವರಲ್ಲಿ ಶಿವ ತನ್ನ ನೋಟದಿಂದಲೇ ಗಿರಿಜೆಯು

ಸೌಂದರ್ಯವನ್ನು ಹೀರುತ್ತಿದ್ದಾನೆ. 'ಶಿವ-ದೃಷ್ಟಿ' ಎಂಬ ಹೆಸರನ್ನು ಬಿಟ್ಟರೆ ಪದ್ಯದಲ್ಲಿ ಎಲ್ಲಿಯೂ ಶಿವ ಗಿರಿಜೆಯರ ಪ್ರಸ್ತಾಪವಿಲ್ಲ. ಅಂದರೆ ಇದು ಪ್ರೇಮಿಗಳಿಬ್ಬರ ಪ್ರೇಮವೂ ಆಗಿರಬಹುದು.

ಕೊರಳಿನಲ್ಲಿ ಜೋತು ಹೆಗಲಿನಲ್ಲಿ ಸೋತು ಬಿದ್ದಿತು ।
ಬಾಹುಲತೆಯ ತಿದ್ದಿತು ॥
ಕೈಕೈಯನು ಹಿಸುಕುವಂತೆ ಬೆರಳಿನೊಡನೆ ಆಡಿತು ।
ತಂಪು ಮೆಲುಪು ನೋಡಿತು ॥[೪೪]

ಪ್ರೇಮ ಮಂಗಳಕರವಾಗಿರಬೇಕು, ಕಲ್ಯಾಣಕರವಾಗಿರಬೇಕು, ಹಿತವಾಗಿರಬೇಕು, ಶಿವನಿಗೆ ಹಿಡಿಸುವಂತಿರಬೇಕು ಎನ್ನುವ ಆಶಯ ಕೊನೆಯ ಸಾಲಿನಲ್ಲಿ ಕಾಣಿಸಿಕೊಳ್ಳುತ್ತದೆ.

ಅಂತರಂಗದಲ್ಲಿ ತರತ್ತರಂಗವಾಗಿ ಮೂಡಿತು ।
ಅಂತರಾತ್ಮ ಗೂಡಿತು ॥[೪೫]

ಲೌಕಿಕ ಹಾಗೂ ಅಲೌಕಿಕ ಎರಡನ್ನೂ ಹೇಗೆ ಬೆರೆಸಬೇಕೆಂಬುದನ್ನು ಅವರ ಕಾವ್ಯಸಿದ್ಧಿ ಅರ್ಥ ಮಾಡಿಕೊಂಡಿತ್ತು. ನಿಸರ್ಗದ ಭಾವವನ್ನು ಆಧ್ಯಾತ್ಮಿಕ ಎಳೆಗಳಿಗೆ ಜೋಡಿಸುವ ಅವರ ಪರಿಯನ್ನು 'ದವನ ಹುಣ್ಣಿಮೆಯ ಜಾತ್ರೆಯ ರಾತ್ರಿ' ಎನ್ನುವ ಕವಿತೆಯಲ್ಲಿ ನೋಡಬಹುದು. ಇಡೀ ಪ್ರಕೃತಿ ದೇವರ ಗುಡಿಯಂತೆ ಶಿವಮಯವನ್ನು ಸಾರುತ್ತದೆ. ಅದು ಜಗತ್ತನ್ನು ನಡೆಸುವವನ ಪೂಜೆಗೆ ಅಣಿಗೊಂಡಿದೆ. ಜನಪದ ಸಂಸ್ಕೃತಿಯ ನುಡಿ ವಿವರಗಳಿಂದ ಕವಿತೆ ಜನಮಾನಸದ ಭಾವನೆಗಳನ್ನು ಕಟ್ಟಿಕೊಡುತ್ತದೆ.

'ಹಣ್ಣಾದ ಬಿಸಿಲು ಬಣ್ಣನಃ ಕಳತು ಬೆಳದಿಂಗಳಾತು ಏನೋ
ಹರದಾದ ಬಾನ ಜೇನೋ ॥
ಆಕಾಶ ಅನಸತದ ಗುಡಿಯ ಹಾಂಗ ಪ್ರಕಾಶ ಮಹಾಲಿಂಗ
ನೆಲ ಅಗಲ ಪೀಠದಂಗ' ॥[೪೬]

ಸೃಷ್ಟಿಯನ್ನು ಇಷ್ಟೊಂದು ಸುಂದರವಾಗಿರಿಸಿರುವ ಶಿವಮಯಗೊಳಿಸಿರುವ ಚೈತನ್ಯಕ್ಕೆ ಕವಿ ಬೆರಗಾಗಿ ಅದನ್ನು ಇನ್ನಿಲ್ಲದಂತೆ ವರ್ಣಿಸುತ್ತಾರೆ. ಅದೇ ರೀತಿ ಎದೆಯೊಳಗಿಂದ ಹುಟ್ಟುವ ಪ್ರೀತಿ ನೆಲದ ಗಿಡದೊಂದಿಗೆ, ಇಳೆಯ ಮೇಲಿನ ಬೆಳಕಿನೊಂದಿಗೆ ಐಕ್ಯತೆ ಸಾಧಿಸಿದಾಗಲೆ ಆನಂದ ಪರಿಪೂರ್ಣವಾಗುತ್ತದೆ ಎಂದು ಬೇಂದ್ರೆ ಭಾವಿಸುತ್ತಾರೆ. ಆಗ ಮಾತ್ರ ಸೃಷ್ಟಿಯ ಸೌಂದರ್ಯ ಅರಿವಿಗೆ ಬರುತ್ತದೆ. 'ಗಮಗಮಾ ಗಮಾಡಸ್ತಾವ ಮಲ್ಲಿಗಿ' ಕವಿತೆಯಲ್ಲಿ ಸಖಿ ತನ್ನ ಸಖನೊಂದಿಗೆ ಕಳೆಯುವ ಸಮಾಧಾನದ ಘಳಿಗೆಗಳು ಬನದಲ್ಲಿ ಬೆಳದಿಂಗಳನ್ನು ಸೃಷ್ಟಿಸಬಲ್ಲ ಶಕ್ತಿ ಹೊಂದಿರುವದಾಗಿ ಹೇಳುತ್ತಾರೆ :

ನಮ್ಮ ನಿಮ್ಮ ಒಂದತನದಾಗ
ಹಾಡು ಹುಟ್ಟಿ ಒಂದು ಮನದಾಗ
ಬೆಳದಿಂಗಳಾತು ಬನದಾಗ||[೪೭]

ಪ್ರಕೃತಿ ಪ್ರೀತಿ ಮತ್ತು ಬದುಕಿನ ರೀತಿಗಳನ್ನು ಸಂಗಮ ಮಾಡುವ ಕಾವ್ಯೋದ್ದೇಶ ಬೇಂದ್ರೆ ಹಾಗೂ ಕುವೆಂಪು ಅವರಲ್ಲಿ ಮಹತ್ವದ ಅಂಶವಾಗುತ್ತದೆ. ಸಮಗ್ರ ಸಹ್ಯಾದ್ರಿಯನ್ನೆ ಅನಾವರಣಗೊಳಿಸುತ್ತ ಸಾಮಾಜಿಕ ನೆಲೆಯ ಬದುಕಿಗೆ ಸಂಬಂಧಿಸಿದಂತೆ ಒಮ್ಮೊಮ್ಮೆ 'ಕೊಳಲಾಗಿ' ಒಮ್ಮೊಮ್ಮೆ 'ಪಾಂಚಜನ್ಯ'ವಾಗಿ ಕಾವ್ಯ ಕಟ್ಟಿದ ಕುವೆಂಪು ವೈಚಾರಿಕ ಹಾಗೂ ಆಧ್ಯಾತ್ಮಿಕ ಅಂಶಗಳೆರಡಕ್ಕೂ ಪ್ರಾಧಾನ್ಯತೆ ಕೊಟ್ಟರು. ಡಾ. ಎಂ.ಎಂ.ಕಲಬುರ್ಗಿ ಅವರು ಅದನ್ನು 'ಕೃತಕತೆ' ಬಿದ್ದು ಹೋಗುವ 'ಸಹಜತೆ' ಗೆದ್ದು ಬರುವ 'ಮನೋಪಾತಳಿಗಿಂತ ಆತ್ಮಪಾತಳಿಯಲ್ಲಿ ಬಿಚ್ಚಿಕೊಳ್ಳುವ' ಕಾವ್ಯಕರ್ಮವೆಂದು ಕರೆಯುವುದು ಸೂಕ್ತವಾಗಿದೆ: ''ಸೂರ್ಯೋದಯ ಚಂದ್ರೋದಯ ದೇವರ ದಯ ಕಾಣೋ'' ಎಂದು ನಿಸರ್ಗವನ್ನು ವರ್ಣಿಸುವಲ್ಲಿ ''ನಾ ನಿನಗೆ ನೀ ನನಗೆ ಜೇನಾಗುವಾ'' ಎನ್ನುತ್ತಲೇ ''ರಸರೂಪಿ ಭಗವತಿಗೆ ಮುಡಿಪಾಗುವಾ'' ಎಂದು ದಾಂಪತ್ಯ ಜೀವನವನ್ನು ಹಾರೈಸುವಲ್ಲಿ ಕುವೆಂಪು ಕಾವ್ಯ ಭೌತಿಕ ಸ್ತರಕ್ಕೆ ನಿಲ್ಲದೆ ಮುಂದೆ ಸಾಗಿ ದೈವಿಕ ಸ್ತರದಲ್ಲಿ ವಿರಮಿಸುತ್ತದೆ.''[೪೮] ಅಖಂಡ ಪ್ರತಿಭಾಶಕ್ತಿ ಹಾಗೂ ಅದ್ವೈತಗಳ ಎರಕ ಹೊಯ್ದಂತಿದ್ದ ಕುವೆಂಪು ತಾವು ನಡೆದ ಬಂದ ಜೀವನದ ಕಿಚ್ಚಿನಲ್ಲಿಯೆ ಅರಳಿದವರು. ಸಾಹಿತ್ಯೇತರ ಕುಟುಂಬ ಹಿನ್ನೆಲೆಯಲ್ಲಿ ಅವಮಾನಗಳನ್ನನುಭವಿಸಿ ಅವುಗಳನ್ನು ಸಾಧನೆಯ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಮಾನವೀಯತೆಯ ಬೀಜಗಳನ್ನು ಅಕ್ಷರಗಳ ಲೋಕದಲ್ಲಿ ಬಿತ್ತುತ್ತ ಹೋದವರು. ಎಲ್ಲಿ ಹೋದರೂ ಮಲೆನಾಡಿನ ನಿಸರ್ಗ ಅವರನ್ನು ಕೈ ಮಾಡಿ ಕರೆಯುತ್ತಿತ್ತು. ಸುಖ-ಸಂತೋಷಗಳನ್ನು ಧಾರೆ ಎರೆಯುತ್ತಿತ್ತು. ಅವರ ಎದೆಗೆ ಬೆಳದಿಂಗಳು ಹಾಲು ಸುರಿಸುತ್ತಿತ್ತು. ಸುಂದರ ಪ್ರಾತಃಕಾಲಕ್ಕೆ ಒಳಗಿನ ಕಣ್ಣು ತೆರೆದುಕೊಳ್ಳುತ್ತಿತ್ತು.

ನವೋದಯ ಕವಿಗಳ ನಿಸರ್ಗ ಪ್ರೀತಿಯನ್ನು ಅವರ ಕಾವ್ಯಕ್ಕೆ ಸೀಮಿತಗೊಳಿಸುವದಕ್ಕಿಂತ ನಿಸರ್ಗವನ್ನು ಅವರು ತಮ್ಮ 'ಮನೆ'ಯನ್ನಾಗಿ ಮಾಡಿಕೊಳ್ಳಲು ಯತ್ನಿಸಿದರೆಂದು ಹೇಳಬಹುದು. ಬೇಂದ್ರೆ ಹಾಗೂ ಕುವೆಂಪು ಅವರ ಬಹುಪಾಲು ಕವಿತೆಗಳಿಗೆ ನಿಸರ್ಗವೆ ಜೀವಾಳವಾಗಿದೆ. ಪ್ರಕೃತಿಯನ್ನು ಕಾವ್ಯದಲ್ಲಿ ತರುವ ಮೂಲಕ ಲೌಕಿಕತೆ ಹಾಗೂ ಅಲೌಕಿಕತೆಯನ್ನು ಮೆರೆಸಲು ಅವರಿಗೆ ಸಾಧ್ಯವಾಗಿದೆ.

೫.೪ ನಿಸರ್ಗದ ಮಮತೆಯಿಂದ ಕೇಡ ಗೆಲ್ಲುವ ಪು.ತಿ.ನ. :

ಕೇಡಿನ ಪ್ರಕೃತಿಯಲ್ಲಿ, ತಮಂಧದ ಭೌತಿಕ ಸ್ವರೂಪದಲ್ಲಿ ಒಳಿತನ್ನು ಪ್ರಚೋದಿಸುವಂತಹ, ಪರಿವರ್ತನೆಯನ್ನು ಕಾಣುವಂತಹ ಪು.ತಿ.ನ. ಅವರು ನವೋದಯ ಸಂದರ್ಭದ ಒಬ್ಬ ಪ್ರಮುಖ ಕವಿಯಾಗಿ ವಿಭಿನ್ನ ರೀತಿಯಲ್ಲಿ ತಮ್ಮ ಕಾವ್ಯಗುಣ ಮೆರೆದಿದ್ದಾರೆ. 'ಆಧ್ಯಾತ್ಮಿಕವಾಗಿ ಬಹಳ ದೂರ ಮುಂದುವರಿದ ಜೀವ ಯಾವುದೇ

ಸ್ವಭಾವದ ಇನ್ನೊಂದು ಜೀವದ ಸಂಪರ್ಕಕ್ಕೆ ಬಂದಾಗ ಆ ಜೀವವನ್ನು ಕೀಳುಗೊಳಿಸದೆ ಅದನ್ನು ಆಧ್ಯಾತ್ಮೀಕರಿಸುತ್ತದೆ'[೬೯] ಎಂದು 'ಹಸು ಪುಣ್ಯಕೋಟಿ ಮತ್ತು ಹುಲಿ ಅರ್ಭುತ' ಎಂಬ ತಮ್ಮ ವಿಮರ್ಶಾ ಲೇಖನದಲ್ಲಿ ಪು.ತಿ.ನ. ಅವರು ಹೇಳುತ್ತಾರೆ. ಈ ಮಾತು ಅವರ ಕಾವ್ಯತತ್ವಕ್ಕೆ ಕೂಡ ಅನ್ವಯವಾಗುವುದರಲ್ಲಿ ಯಾವುದೇ ಸಂದೇಹವಿರಲಾರದು. ಅವರ ನಿಸರ್ಗ ಕವಿತೆಗಳೂ ಸೇರಿದಂತೆ ಎಲ್ಲ ಕವಿತೆಗಳಲ್ಲಿ ಈ ಕೇಡನ್ನು ಗೆಲ್ಲುವ, ಭಯ-ದರ್ಪ -ಆಗಮ್ಯದಲ್ಲಿ ಒಳಿತನ್ನು ಪಸರಿಸುವ ಗುಣಲಕ್ಷಣಗಳನ್ನು ಕಾಣಬಹುದಾಗಿದೆ. ಪು.ತಿ.ನ. ಅವರು ನಂಜಿಕೊಂಡಂತೆ ಚೈತನ್ಯದ ಪವಾಡ ಕ್ರಿಯೆಯಿಂದ ಪಾಪ ಪುಣ್ಯವಾಗಿದೆ. ಭೀರುವಾದದ್ದು ಧೀರನಾಗಿದೆ. ಭಯಂಕರವಾದದ್ದು ಪ್ರೇಮಪಾತ್ರವಾಗಿದೆ. ಅನುಕಂಪಾರ್ಹವಾಗಿದೆ. ಆತ್ಮವಿಜಯವನ್ನು ಪಡೆದು ಪ್ರಕೃತಿ ನಿಯಮವನ್ನು ಅದಲು ಬದಲು ಮಾಡಿದೆ. ಆಕೆಯ (ನಿಸರ್ಗದ) ಅನುಲ್ಲಂಘನೀಯ ನಿಯಮದ ಪಲ್ಲಟ ನಡೆದಿದೆ.

ಹುಲಿಯನ್ನು ಸೃಷ್ಟಿಸಿರುವ ದೇವರು ಹಸುವನ್ನೂ, ಹುಲ್ಲೆಯನ್ನು ಸೃಷ್ಟಿಸಿದ್ದಾನೆ. ಹಾಗಾಗಿ ಹುಲ್ಲೆ-ಹಸುಗಳು ಪ್ರೀತಿಪಾತ್ರರಾದಂತೆ ಹುಲಿಯೂ ನಮ್ಮ ಒಲವಿಗೆ ಪಾತ್ರವಾಗಬೇಕು. ಅದರ ಭಯಂಕರತೆಗೆ ನಮ್ಮ ತ್ಯಾಗ ಮುದುಡಿಕೊಳ್ಳದೆ ಅರಳುವಂತಾಗಬೇಕು ಎಂಬುದು ಪು.ತಿ.ನ. ಹೇಳುವ ವಿಚಾರವಾಗಿದೆ. ಕೇಡಿನ ಮುಂದೆ ನಿಂತು ಅಹಿಂಸೆಯಿಂದ ಸಾಮ್ರಾಜ್ಯವೊಂದಕ್ಕೆ ಸ್ವಾತಂತ್ರ್ಯ ತಂದುಕೊಡುವುದು ಹಿಂಸೆಯ ಸ್ವರೂಪದಲ್ಲಿ ತೀವ್ರ ಬದಲಾವಣೆಯನ್ನು ಕಾಣುವ ಹೊಚ್ಚ ಹೊಸ ನೋಟವಾಗಿದೆ. ಪು.ತಿ.ನ. ಅಂತಹ ಕಾವ್ಯನೋಟ ಹೊಂದಿದ ಕವಿ. ಪ್ರೀತಿಯಿಂದಲೆ ಪ್ರತಿಯೊಂದನ್ನು ಗೆಲ್ಲಬೇಕೆಂಬ ಭಾವ ಅವರ ಕವಿತೆಯಲ್ಲಿ ಮನೆ ಮಾಡಿದೆ.

ಬಾಲ್ಯದಲ್ಲಿ ಪು.ತಿ.ನ. ಅವರನ್ನು ತುಂಬಿಕೊಂಡ ನಿಸರ್ಗದ ನೆನಪುಗಳು ಅವರ ಬದುಕಿನುದ್ದಕ್ಕೂ ಕಾವ್ಯವನ್ನು ಕಾಪಾಡುತ್ತಲೆ ಬಂದವು. ತಂದೆಯ ಊರು ಮೇಲುಕೋಟೆ ಹಾಗೂ ತಾಯಿಯ ಊರು ಗೊರೂರು. ಹೆಂಡತಿಯ ಊರು ಹೆಮ್ಮಿಗೆ, ಓದಿದ ಊರು ಮೈಸೂರು. ಆ ಊರುಗಳ ಪರಿಸರ ಅವಿಚ್ಛಿನ್ನವಾಗಿ ಅವರಲ್ಲಿ ಸೇರಿಕೊಂಡಿತು. ಆ ನೆನಪುಗಳು ಪು.ತಿ.ನ. ಅವರಲ್ಲಿ ಯಾವಾಗಲೂ ಹೃದ್ಯವಾಗುಳಿದವು. ರಸಾರ್ದ್ರ ಕ್ಷಣಗಳನ್ನು ಹುಟ್ಟಿಸುತ್ತ ಹೋದವು. ನೆನಪಿನ ಬುತ್ತಿ ಬಿಚ್ಚಿದಷ್ಟೂ ನಿಸರ್ಗ ತಾನು ಕಾಲಕ್ರಮದಲ್ಲಿ ಸಾಧಿಸುತ್ತ ಬಂದಿದ್ದ ಅನುಭೂತಿಯನ್ನು ಕವಿಯ ಪ್ರತಿಭೆಯ ಮೂಲಕ ಹೊರಸೂಸತೊಡಗಿತು. ಕಾವ್ಯದಿಂದ ದೊರಕುವ ಆನಂದದಿಂದ ಕವಿ ಹಾಗೂ ಸಹೃದಯನಿಗೆ 'ಸೌಹೃದ ಏರ್ಪಡುತ್ತದೆ. ಕಾವ್ಯಸೃಷ್ಟಿಯ ಸರಣಿ ಪೂರ್ಣವಾಗುತ್ತದೆ. ಒಳ್ಳೆಯ ಕವಿತೆಯನ್ನು ಕವಿ-ಸಹೃದಯರನ್ನು ಮಮತೆಯಿಂದ ಬಂಧಿಸುವ 'ಆನಂದಗ್ರಂಥಿ' ಎಂದು ಕರೆಯಬಹುದು.'[೭೦]

ತಮ್ಮ 'ಆನಂದ ಗ್ರಂಥಿ'ಗಳ ಉಗಮವನ್ನು ಪು.ತಿ.ನ. ಬಾಲ್ಯದ ಪ್ರಕೃತಿಯ ಒಡನಾಟಕ್ಕೆ ಜೋಡಿಸುವುದು ಸಹಜವಾಗಿದೆ. 'ನನ್ನ ಎಳೆತನದ ಗೊರೂರು ಚೆಲುವಾದ ಹಳ್ಳಿ. ಅಲ್ಲಿನ ಶ್ರೀವೈಷ್ಣವರು ಬಹು ರಸಿಕರು. ಅವರ ಅಪ್ಪಟ ಕನ್ನಡದ ಚಾವಡಿ ಹರಟೆಗಳು ಕೇಳುವುದಕ್ಕೆ ಬಹಳ ಇಂಪಾಗಿರುತ್ತದೆ. ಹಿತ್ತಲಿಗೆ ಒತ್ತಿಕೊಂಡು ಊರನ್ನು ಬಳಸಿರುವ ನಾಲೆ, ಹೇಮಾವತಿ ನದಿ, ದಡದ ತೋಪು ಗುಡಿ, ಜಾಲಾರಿ ಮರಗಳು, ಹಿತ್ತಲಿನ ಚಕ್ಕೋತ, ಸಂಪಿಗೆ,

ಮಲ್ಲಿಗೆ, ನೇರಳೆ, ಹುಣಿಸೆ, ಕಾಲುವೆ ದಂಡೆಯ ಸುರಗಿ ಮರ, ಶೃಂಗಾರ ತೋಟದ ಸಂಪಿಗೆ, ಬೆಳಗಿನ ಜಾವ ನಾನಲೆಯುತ್ತಿದ್ದ ಮುತ್ತುಗದ ಕಾಡು, ಯಗಚಿಯ ಸಂಗಮ, ಜಡಿಮಳೆ, ಮನೆಮನೆಗಳಲ್ಲಿ ಹೆಂಗಸರು ನೆರೆದು ಹಾಡುತ್ತಿದ್ದ ಚಂದ್ರಾವಳಿ ಕುಚೇಲ ಅಷ್ಟಪದಿ ಮುಂತಾದ ಹಾಡುಗಳು ನನ್ನ ಹೃದ್ಯಲೋಕದ ಒಂದು ಭಾಗವಾಗಿಬಿಟ್ಟಿವೆ.'[೫೧]

ಬೇಂದ್ರೆ, ಕುವೆಂಪು ಅವರು ನಿಸರ್ಗವನ್ನು ಅದರ ಲೌಕಿಕ ಹಾಗೂ ಆಗಮಿಕ ಸ್ವರೂಪಗಳೆರಡರಲ್ಲೂ ಬಣ್ಣಿಸಿದರೆ ಪು.ತಿ.ನ. ಬದುಕಿನ ಮಮತೆ ಹುಡುಕಲಿಕ್ಕೆ ಪ್ರಕೃತಿಯನ್ನು ನಿಮಿತ್ತಮಾತ್ರವಾಗಿ ಬಳಸಿಕೊಂಡರು. ಪ್ರಕೃತಿಯ ಚೆಲುವು ಅವರನ್ನು ಆಕರ್ಷಿಸಿದರೂ, ಪ್ರಕೃತಿಯ ನಿಯಮಗಳನ್ನು ತಮ್ಮ ನಂಬಿಕೆಯ ನೆಲೆಗಳಿಗೆ ಮಾರ್ಪಡಿಸಿಕೊಂಡರೂ ಆತ್ಮದ ಶೋಧಿಸುವಿಕೆ ಅವರಿಗೆ ಆನಂದದ ಹಾದಿಯಾಗಿತ್ತು. ನಿಸರ್ಗದ ಹುಡುಕುವಿಕೆಯಲ್ಲಿ ಮಂಗಳಮಯ ಜೀವನದ ರಹಸ್ಯ ಅಡಗಿದೆ ಎಂಬುದು ಅವರಿಗೆ ಗೊತ್ತಿತ್ತು. ಅದೂ ಅಲ್ಲದೆ ಅವರು ಅಭಿವ್ಯಕ್ತಿಸಿದ ನಿಸರ್ಗದ ವಿಭಿನ್ನ ಸ್ವರೂಪದಿಂದ ತಮಕ್ಕೆ ಒಳಿತನ್ನು ತುಂಬಿಕೊಟ್ಟರು. ಕುವೆಂಪು, ಬೇಂದ್ರೆಯವರಿಗೆ ಸೂರ್ಯೋದಯವನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ. ಬೆಳಗನ್ನು ಎಷ್ಟು ಆವಾಹಿಸಿದರೂ ಕಡಿಮೆಯೇ. ಆದರೆ ಪು.ತಿ.ನ. ಚಂದ್ರೋದಯಕ್ಕೆ ಪುಲಕಿತರಾದಷ್ಟು, ಇರುಳನ್ನು ಆವಾಹಿಸಿದಷ್ಟು ಬೇರೆ ಯಾವ ಸಂಗತಿಗೂ ಬೆರಗಾಗಿಲ್ಲವೆಂದರೆ ಸೋಜಿಗವಾಗಲಾರದು.

> ಇಂದು ನೀನು ಕೆಡೆದ ಇರುಳೆ
> ಸುಪ್ತವನದ ಉದಯವಾಯ್ತು;
> ಇಂದು ಬಿಗಿದ ನಿನ್ನ ಕೊರಳೆ
> ನವೋದಯದ ಕಹಳೆಯಾಯ್ತು[೫೨]

ಕತ್ತಲನ್ನು ಹಾದು ಬರುವುದು ಬೆಳಕನ್ನು ಹಿಡಿಯಲೆಂದೆ ಎನ್ನುವುದು ಕವಿಯ ನಂಬಿಕೆಯಾಗಿದೆ. ಕೊರಳಲ್ಲಿ ಕುಳಿತಿರುವ ವಿಷವೂ ಅಮೃತವಾಗಿ ಪರಿವರ್ತಿತವಾಗುವುದರಲ್ಲಿ ಅವರಿಗೆ ಸಂಶಯವಿಲ್ಲ. ಒಳಮನಸ್ಸಿನ ಸೃಜನಶೀಲತೆಗೆ ಇಂಬು ಕೊಡುವ ಕತ್ತಲು ಕವಿಯ ಚೈತನ್ಯಕ್ಕೆ ಸ್ಫೂರ್ತಿ ಕೊಡುತ್ತದೆ. ಐಂದ್ರಿಕ ಅನುಭವದಿಂದ ಒಮ್ಮೊಮ್ಮೆ ನಾವು ಮೋಸ ಹೋಗಬಹುದು. ಆದರೆ ಪ್ರಶಾಂತವಾಗಿರುವ ಕತ್ತಲು ಯಾವ ದ್ವಂದ್ವಗಳಿಲ್ಲದೆ ಕವಿಯನ್ನು ಕೈಹಿಡಿದು ನಡೆಸುತ್ತದೆ. 'ಕಾರಿರುಳ ಜಿಳಲನ್ನು ಹಿಡಿದು ಕೋರೈಸುವ ಬೆಳಗಿನ ಕಡೆಗೆ' ಪು.ತಿ.ನ. ಚಲಿಸುತ್ತಾರೆಂದು ಎಚ್.ಎಸ್.ರಾಘವೇಂದ್ರರಾವ್ ಹೇಳುವುದು ಸರಿ ಅನ್ನಿಸುತ್ತದೆ. 'ಶಾರದಯಾಮಿನಿಯಲ್ಲಿ ರಾತ್ರಿಯ ಶಕ್ತಿಯು ಹಗಲಿನಲ್ಲೂ ಪ್ರಯಾಣ ಮಾಡುವುದನ್ನು, ಜಗತ್ತಿನ ಚರಾಚರಗಳಲ್ಲಿ ಚೈತನ್ಯವಾಗಿ ನೆಲೆಸಿರುವುದನ್ನು, ಅಲ್ಲಿಂದ ಮತ್ತೆ ಕತ್ತಲೆಗೆ ಮರಳುವುದನ್ನು, ಅದನ್ನು ಆಮೂಲಾಗ್ರವಾಗಿ ಕಾಣುವ ಕಂಡರಿಸುವ

ಕವಿಯ ಪ್ರಯತ್ನಗಳೆಲ್ಲವೂ ವಿಫಲವಾಗುವುದನ್ನು ವಿವರವಾಗಿ ಹೇಳಲಾಗಿದೆ. ಶಾರದಯಾಮಿನಿಯನ್ನೇ ಹಗಲಿನ ಹೂಗಳಲ್ಲಿ ಕಾಣುವ ಈ ಬಗೆಯನ್ನು ನೋಡಿ ;

ಕುಳಿರುಗಾಳಿ, ಬೆಳ್ಳನೆ ದಳ ತೆರೆದು
ಸೇವಂತಿಗೆ ಹೊನ್ನೊಳಗದು ತೋರೆ
ನಿನ್ನ ನೆರಳು ಎನೆ ಬೆರಗನ್ನು ಪಡೆದು
ನಾನಾ ಹೂಗಳ ಸನಿಯಕಿ ಸಾರೆ
ಹಸುರೊಳು ಹನಿ ನನ್ನೂ ಹೆಗೆ ಹೂಂಗೊಡೆ
ಕಂಡನೆಂಬೆ ನಾ ನಿನ್ನನಾಯಡೆ
ಆದರಹಾ ನೀ ಮುರಉರಿದಿರುವೆ
ನನ್ನ ಮನಕೊ ನೀನೊಂದನುಮಾನ ನನ್ನೆದೆಗೋ ನಿನ್ನರಿತ ಸುಮಾನ

ಇಂಥ ಶಾರದಯಾಮಿನಿ ನಕ್ಷತ್ರೋದ್ದೀಪಿತೆ ಅಲ್ಲ, ನಕ್ಷತ್ರೋದ್ದೀಪಿಕೆ ಎಂದರೆ ಅವಳು ನಕ್ಷತ್ರಗಳಿಂದ ಬೆಳಗಿದವಳಲ್ಲ. ನಕ್ಷತ್ರಗಳಿಗೇ ಬೆಳಕನ್ನು ನೀಡಿದವಳು.'[೫೩]

ಅನಂತವನ್ನು ತನ್ನೊಳಗೆ ಹುದುಗಿಸಿಕೊಂಡಿರುವ ಇರುಳು ನಾಳೆಗೆಂದು ಏನೇನೋ ಕನಸುಗಳನ್ನು ಹೆಣೆಯುತ್ತಲಿದೆ. ಹೂಗಳು ಅರಳಲಿಕ್ಕೆ ದಿನವನ್ನು ಸಜ್ಜು ಮಾಡುತ್ತಿದೆ. ರಾತ್ರಿಯ ಸಮಯ ನಿಗೂಢತೆಯಿಂದ ತುಂಬಿಕೊಂಡು ಮನುಷ್ಯನಲ್ಲಿ ವಿಸ್ಮಯವನ್ನು ಹುಟ್ಟು ಹಾಕಿದೆ. ಅದರ ಗರ್ಭದಲ್ಲಿರುವ ಬೆಳಕು ಚಿಗುರುತ್ತಿದೆ. ಗಿಡ-ಮರಗಳು ಕತ್ತಲೆಯ ಲಯಕ್ಕೆ ತೂಗುತ್ತಿವೆ. ಪ್ರಕೃತಿಯನ್ನು ನೆವ ಮಾಡಿಕೊಂಡು ಪು.ತಿ.ನ. ತಮ್ಮ ಇತರ ಆಲೋಚನೆಗಳಿಗೆ ಸಹೃದಯನನ್ನು ಕರೆದೊಯ್ಯುತ್ತಾರೆ.

ಪು.ತಿ.ನ. ಅವರು ತಮ್ಮ ಗೀತ ನಾಟಕಗಳಲ್ಲಿ, ರೂಪಕಗಳಲ್ಲಿ ಕಟ್ಟಿಕೊಡುವ ಪ್ರಕೃತಿಯಲ್ಲಿಯೂ ಇರುಳಿನ ನಿಗೂಢತೆ ತನ್ನ ಮಹತ್ವವನ್ನು ಕಾಯ್ದುಕೊಂಡಿದೆ.

ಕತ್ತಲೆಯ ಲಯಕ್ಕೆ ಪು.ತಿ.ನ. ಮಿಡಿಯುತ್ತಾರೆ. ಆದರೆ ಬೇಂದ್ರೆಯವರಲ್ಲಿ ಇರುಳಿನ ಬಗ್ಗೆ ಅಂತಹ ಸಂತಸವೇನೂ ಇಲ್ಲ. ಬದಲಾಗಿ ನಿದ್ದೆ ಕತ್ತಲೆಯೆಂದರೆ ಮರಣವೆಂದೇ ಅವರು ತಿಳಿಯುತ್ತಾರೆ. 'ರಾತ್ರಿಗೆ' (ಸಖಿಗೀತ)ಎನ್ನುವ ಕವಿತೆಯಲ್ಲಿ ಮನಸ್ಸು ತೂಕಡಿಸುವ, ಚೈತನ್ಯ ಕಳೆದುಕೊಳ್ಳುವ ಭೀತಿ ವ್ಯಕ್ತವಾಗಿದೆ.

ನಾಲಿಗಿಲ್ಲದ ಗಂಟೆಯಂತಾಯಿತೀ ಬಾಯಿ
ಜಾಲದೊಳು ಸಿಕ್ಕು ಹಕ್ಕಿಯವೊಲಾಯಿತು ಮನವು,
ತಾಲವಿರಹಿತವಾಯಿತರ್ಥವೂ ಶಿವಶಿವಾ!

ಜೀವ ನಿರ್ಜೀವವಾಯ್ತು
ವಿವಿಧ ಬಣ್ಣಗಳಾಟ ಕಾಣಿಸದು ಕಂಗಳಿಗೆ
ನವರಸದ ಸಂಗೀತ ಕೇಳಿಸದು ಕಿವಿಗಳಿಗೆ
ಸವಿಯನರಿಯದು ಜಿಹ್ವೆ, ಪರಿಮಳಂಗಳ ತಾರ
ತಮ್ಯ ತಿಳಿಯದು ಮೂಗಿಗೆ[೫೪]

ಕತ್ತಲಿನಲ್ಲಿಯೂ ಶಿವಮಯವೆಂಬುದು ಇರಬಹುದು, ಅದನ್ನು ಹುಡುಕಬೇಕೆಂಬುದು ಪು.ತಿ.ನ. ಅವರ ಮಾರ್ಗವಾದರೆ ಬೇಂದ್ರೆಯವರು ಕತ್ತಲನ್ನು ಬರಿ ಬೆಳಕಿನ ಬೂದಿಯೆಂದು ತಿಳಿಯುತ್ತಾರೆ. ಸಂಜೀವಕನು ನಿರ್ಜೀವನಾಗುವ ನಿದ್ದೆಯನ್ನು ಕೇಡಿನ ಒಂದು ರೂಪವಾಗಿ ಬೇಂದ್ರೆ ಕಾಣುತ್ತಾರೆ.

ನಿದ್ದೆಯೆಂದರೆ ಕಣ್ಣು-ಕಟ್ಟು ಮಾಡುವ ಮೋಡಿ
ನಿದ್ದೆಯೆಂದರೆ ಕಲ್ಲು ಮಾಡ ಜಡೆದಿಹ ಬೇಡಿ
ನಿದ್ದೆಯೆಂದರೆ ಸಪ್ಪಗಿಹ ಸಾವು, ಮಾಗಿಯೊಳು
ಮಡಿಯೆ ಮಲಗಿದ್ದ ಹಾವು[೫೫]

ನಿಸರ್ಗದ ಕತ್ತಲು ತನ್ನಷ್ಟಕ್ಕೆ ತಾನು ಕೆಟ್ಟದಾಗಿರದಿದ್ದರೂ ಅದರಲ್ಲಿ ಮನುಷ್ಯ ನಿರ್ಮಿತ ಕೇಡಿನ ಅಂಶಗಳ ವಾಸನೆಯನ್ನು ಬೇಂದ್ರೆಯವರು ಗ್ರಹಿಸಬಲ್ಲವರಾಗಿದ್ದರು. ಹಾಗಾಗಿ ಹಗಲಿನ ಸೂರ್ಯ ಮುಗಿದ ಮೇಲೆ ಚಂದ್ರನ ಬೆಳಕಿಗೆ ತಹತಹಿಸುತ್ತಿದ್ದರು. ಅಂತಹ ಬೆಳಕು ಈಡಾಗಲಿ, ಕತ್ತಲನ್ನು ಬಿಡದಂತೆ ವ್ಯಾಪಿಸಲೆಂದು ಪ್ರಾರ್ಥಿಸುತ್ತಿದ್ದರು. ಮುಗಿಯದ ಬೆಳಕಿನಲ್ಲಿ ಕತ್ತಲೆಯ ಕಣಕ್ಕೂ ಜಾಗವಿರಬಾರದೆಂದು ಮನ ಬಯಸುತ್ತಿತ್ತು. ಕುವೆಂಪು ಕೂಡ ಕತ್ತಲಿಗೆ ವಿರೋಧಿಯೇ. ಬೆಳಕಿನ ಆರಾಧಕರಾದ, ನಿಸರ್ಗದ ಉಪಾಸನೆ ಮಾಡಿದ ಕುವೆಂಪು ಸೂರ್ಯಚಂದ್ರರ ತೇಜಸ್ಸಿನಿಂದ ಲೋಕ ಕಾಂತಿಯುತವಾಗಿರುವುದನ್ನು ಬಣ್ಣಿಸುತ್ತಾರೆ. ಚೈತನ್ಯಸ್ವರೂಪನಾದ ಜೀವಾತ್ಮನ ಕೃಪೆಯಿಂದ ಬೆಳಕು ತುಂಬಿಕೊಂಡು ತಮ ದೂರವಾಗಿರುವುದನ್ನು ವ್ಯಕ್ತಪಡಿಸಿದ್ದಾರೆ. ನಿಸರ್ಗದ ರೂಪಕಗಳಿಂದ ಕಾವ್ಯದ ಅರ್ಥವನ್ನು ಬದುಕಿನ ಇತರ ಸ್ತರಗಳಿಗೆ ಹೊಂದಿಸಲು ನವೋದಯದ ಕವಿಗಳು ಅದರಲ್ಲೂ ಪ್ರಮುಖವಾಗಿ ಬೇಂದ್ರೆ, ಕುವೆಂಪು, ಪು.ತಿ.ನ. ಯತ್ನಿಸಿರುವುದು ಹಾಗೂ ಅದರಲ್ಲಿ ಸಫಲತೆಯನ್ನು ಕಂಡಿರುವುದು ಮೇಲುನೋಟಕ್ಕೆ ಗೊತ್ತಾಗುತ್ತದೆ. ಬೇಂದ್ರೆಯವರಂತೂ ನಿಸರ್ಗವನ್ನು ತಮ್ಮ ಅಭಿವ್ಯಕ್ತಿಯ ವಾಹಕವನ್ನಾಗಿ ಮಾಡಿಕೊಂಡು ಮರ, ಗಿಡ, ಗಾಳಿ, ಬೆಳಕು, ನೀರು ಎಂಬ ಭಾಷೆಯಲ್ಲಿಯೆ ಮಾತನಾಡಿದರು. ಆಧ್ಯಾತ್ಮದ ಭಾಷೆಯನ್ನು ಅದಕ್ಕೆ ಹೊಂದಿಸಿಬಿಟ್ಟರು. ಕೊನೆಕೊನೆಗೆ ಅದನ್ನೂ ಮೀರಿ ಅನುಭಾವದ ಅರ್ಥಗಳಿಗೆ ಸಂಖ್ಯೆ, ಸಂಜ್ಞೆ, ಪುರಾಣ, ಐತಿಹ್ಯ ಬಳಸಿಕೊಂಡು ಸಹೃದಯನಿಂದ ಅಂತಹ ಅಭ್ಯಾಸದ ಸಿದ್ಧತೆಯನ್ನು ನಿರೀಕ್ಷಿಸಿದರು. ಪು.ತಿ.ನ. ಅವರಿಗೂ ಕೂಡ ಆಧ್ಯಾತ್ಮ ಹಾಗೂ ದೈವಿಕ

ಆಯಾಮಗಳು ಮುಖ್ಯವಾದುದರಿಂದ ಅವರ ಕಾವ್ಯ ಕೂಡ ಪಾರಮಾರ್ಥಿಕ ನೆಲೆಗಳಿಗೆ ತಲುಪಲು ಹವಣಿಸುತ್ತದೆ. ಬೆಳಕಿರಲಿ, ಕತ್ತಲಿರಲಿ ಕಾಯುವ ಶಿವನು ದೊಡ್ಡವನು ಎಂಬುವ ನಿರ್ಧಾರಕ್ಕೆ ಅವರು ತಲುಪುತ್ತಾರೆ.

ತೋರಿದಾ ಜಗದ ಮಾಯೆ ತೀರಿತು. ಹೊಸ ಮಾಯೆ
ತೋರಿತ್ತೆ - ಆ ಮಾಯೆಯನೆ ಮುಗುಚಿ ಈ ದೈತ್ಯ
ಹೊದೆದನೋ ತನ್ನ ದೊರೆತನವ ಮರೆಸಲೋಸುಗ!
ಹಗಲೊಳೆಡೆಗೆಟ್ಟಾಸೆ ಭಯಕೆಲ್ಲ ಎಡೆಯಿಲ್ಲಿ,
ಅಲ್ಲಿ ಗೆಲುವಾದದಿಲ್ಲಿ ಜಡ, ಅಲ್ಲಿನ ನನಸು
ಇಲ್ಲಿನ ಸ್ವಪ್ನ; ನಿರಂತವೀ ದೇವಾಸುರಂ,
ಜಗದಾಟ ಈ ಮಾಯೆ ಮುಗುಚಿ ಹೊದೆವಾಟ - ಎನೆ
ಎಂತು ವೈದೋರಿದಂ ಉಭಯರಿಗು ಶುಭವ ಕೋರಿ
ಶಂಕರ ಸುಧಾಕರಂ ಮತ್ತೊಂದು ಮಾಯೆ ತೋರಿ[೯೧]

ಕೆಟ್ಟದ್ದು ಕೆಟ್ಟ ರೂಪದಲ್ಲಿರುವಾಗ ಸುಲಭವಾಗಿ ನಮಗೆ ಕಾಣುತ್ತದೆ. ಆದರೆ ಅದು ಸಾಧು ವೇಷದಲ್ಲಿ ಬಂದು ನಮ್ಮನ್ನು ಮರುಳುಗೊಳಿಸಿದರೆ ಅಸಹಾಯಕತೆಯಿಂದ ನಾವು ಬೆಂದು ಹೋಗುತ್ತೇವೆಂದು ಕವಿ ಹೇಳುತ್ತಾರೆ. ಭ್ರಮೆಯನ್ನು ಬೆಳಕೆಂದು ಭಾವಿಸುವ ಮನಸ್ಸಿನ ದೌರ್ಬಲ್ಯಕ್ಕೆ ಅವರು ಒತ್ತು ಕೊಡುತ್ತಾರೆ. ದೇವರ ದೀಪ ಎದೆಯಲ್ಲಿ ಉರಿಯದಿದ್ದರೆ ಭೌತಿಕ ಬೆಳಕಿನ ಮೌಲ್ಯ ಹೆಚ್ಚುವದಿಲ್ಲವೆನ್ನುತ್ತಾರೆ :

ದೇವ ಹಣತೆಯ ಹೊತ್ತಿಸಿರುವೆನು
ನಿನಗೆ ನನ್ನೆದೆಮನೆಯೊಳ್
ಆಸೆ, ಕಂಬನಿ, ಭಯ, ಬಯಕೆಗಳ
ತೈಲ ತುಂಬಿದೆ ಸೊಡರೊಳ್
ನೆಲೆಯ ದೀಪವು ಮಿಣುಕುವನಕವೂ
ಮೊರೆಯನಿಡುವೆನು ಮಾನ್ಯ!
ತೈಲ ಬತ್ತಲು, ಸೊಡಲಿದಾರಲು,
ನೀನೆಲ್ಲಿಹೆ? - ಶೂನ್ಯ!?[೯೨]

ಕತ್ತಲೆ- ಬೆಳಕುಗಳೆನ್ನದೆ ಶಿವಮಯವಾವುದು, ಅಶಿವಮಯವಾವುದು ಎಂದು ಗುರುತಿಸುವ ಶಕ್ತಿ ತನಗೆ ದೊರೆಯಲೆಂಬುದು ಕವಿಯ ಪ್ರಾರ್ಥನೆ. ಶಾಂತಿ-ಸಮಾಧಾನ ಪಸರಿಸುವ, ಮೌನದ ಅನುಭೂತಿ ಸಾಧಿಸುವ 'ಯದುಗಿರಿಯ ಮೌನವಿಕಾಸ' ಎನ್ನುವ ಅವರ ಕವಿತೆ ನಿಸರ್ಗವನ್ನು ಹೊದ್ದುಕೊಂಡಿದೆ. ಪ್ರಕೃತಿಯ ದೇಗುಲದಿಂದ ಆನಂದದ ಗರ್ಭಗುಡಿಗೆ ಕವಿ ನಡೆಯುತ್ತಾರೆ.

ಮೂಡಣ ಕಣಿವೆಯ ಹಿಮದವಕುಂಠನ
ರವಿಕರ ಸ್ಪರ್ಶಕೆ ಜಾರುತಿದೆ
ನಾಡದೊ ಹಿಗ್ಗುತ ನಾಚುತ ಮೆಲ್ಲನೆ
ವೈ ಸಿರಿಯನು ತಾ ತೋರುತಿದೆ[೫೮]

ಹಕ್ಕಿಗಳ ಚಿಲಿಪಿಲಿ, ಜನಪದದ ಹಾಡು ಮೌನದಲ್ಲಿ ಮಂಜುಳ ನಿನಾದವಾಗಿ ಮೌನದ ಯೋಗಕ್ಕೆ ಬಹುಮಾನವನ್ನು ನೀಡುತ್ತಿದೆ. ಮಾಗಿಯ ಮೌನದಲ್ಲಿ ಹಕ್ಕಿಗಳಿಂಚರ ಮೆಲ್ಲಮೆಲ್ಲನೆ ಸಖ್ಯ ಸಾಧಿಸುವ ಪರಿ ಅನನ್ಯವಾಗಿದೆ. ಶರದ್‌ಋತುವಂತೂ ಪು.ತಿ.ನ. ಅವರನ್ನು ಬಹಳಷ್ಟು ಕಾಡಿರುವಂತಹದು. ಈ ಕಾಲದ ನೆಲ, ಮುಗಿಲು, ಬಯಲು, ಬೆಟ್ಟ, ಕಣಿವೆ, ಕಾಡು, ಸೃಷ್ಟಿಗೆ ಸೌಂದರ್ಯದ ಸೆರಗು ಹೊಚ್ಚಿದೆ. ದಿನದ ಚಿಂತೆಯಲ್ಲಿ ಬಸವಳಿದಿರುವ ಮನಸ್ಸು ಇರುಳಿನ ನಲ್ಮೆಗಾಗಿ ತಹತಹಿಸುತ್ತಿದೆ.

ಹಗಲೊಳಾಸೆ ಮನದೊಳು ತೀರಿಹುದು
ಸಂಜೆಯುತ್ಸವಕೆ ಎದೆ ಹಾರಿಹುದು
ಅಹ, ಇದಿಗೋ! ಚೆಂಬೊನ್ನಿನ ಬೆಳಕಾಯ್ತು
ನನ್ನಯ ಮನೆ ಸೆರೆಯಂಗಳದೊಳಗೆ
ಹಕ್ಕಿಯ ಕಲರವ ಕಲಕಲವಾಯ್ತು
ಸರಸಿಯ ಮುಂದಣ ತೋಪುಗಳೊಳಗೆ[೫೯]

ಶಾರದಯಾಮಿನಿಯ ಉತ್ಸವಕ್ಕೆ ದಿಗಂತ ಸಜ್ಜಾಗಿದೆ. ಅದನ್ನು ನೋಡಲು ಕಾತರಿಸುತ್ತಿರುವ ಮನಸ್ಸುಗಳ ನಿರೀಕ್ಷೆಗಳು ಮುಗಿಲು ಮಟ್ಟಿವೆ. ಅದೇ ರೀತಿ ಅವರ ಶ್ರಾವಣದ ಕವಿತೆಗಳು ನವೋದಯ ಕವಿಗಳ ಸಮಾನ ಮನಸ್ಕ ಆಶಯಗಳನ್ನು ಪ್ರತಿನಿಧಿಸುತ್ತವೆ. ಬೇಂದ್ರೆಯ ಬಂಧನದ ಜಿಡಿಸುವಂತಹ ಶ್ರಾವಣ, ಕುವೆಂಪು ಅವರ ರೌದ್ರ ಕೆರಳಿಸುವ ಶ್ರಾವಣ, ಪು.ತಿ.ನ. ಅವರ ನೆಲ ಬಿಡುಗಡೆಗೊಂಡು ನಲಿಯುವಂತಹ ಶ್ರಾವಣ ಕನ್ನಡದ ಕಾವ್ಯಕ್ಕೆ ಶೋಭನ ಮಾಡಿವೆ ಎಂದರೆ ಉತ್ಪ್ರೇಕ್ಷೆಯಾಗಲಾರದು. ಸಾಂಸ್ಕೃತಿಕ ನವೋದಯಕ್ಕೆ ಅವು ತೋರಣ ಕಟ್ಟಿವೆ. ನಿಸರ್ಗದಲ್ಲಿ ಕೇಡನ್ನು ಗೆಲ್ಲುವಂತಹ, ಸ್ವಾತಂತ್ರ್ಯ-ಸಮಾನತೆಗಳನ್ನು ತಂದುಕೊಡುವಂತಹ ಪ್ರಾಣಶಕ್ತಿಯ ಸ್ವರೂಪವನ್ನು ಅವರು ಕಾಣುತ್ತಾರೆ:

ಮಂಗಳಕೇಕೀ ವೇಷ
ಈ ತೆರ ವಿಷಮ ವಿಲಾಸ
ಶಿವಕೇಕೀ ದುಮ್ಮಾನ?
ಇದು ಯಾವ ಸುಮಾನ![೬೦]

ಪು.ತಿ.ನ. ಕತ್ತಲೆಯನ್ನು ಪ್ರೀತಿಸುವ ಕವಿ ಎಂದು ಹೇಳಿದರೂ ಆ ಕತ್ತಲು ಬೆಳಗಿನ ಬೆಳಕಿಗೆ ಮತ್ತಷ್ಟು ಮೆರಗನ್ನು ಕೊಡಲೆಂದೆ ಕಾಯುತ್ತಿರುವಂತಹ ಕತ್ತಲು. ಮಳೆಗೆ ಮೊದಲು ಅಪ್ಪಳಿಸುವ ಸಿಡಿಲಿನಲ್ಲಿ ಮಂಗಳಮಯವಾದದ್ದು ತನ್ನ ಹಿಂದೆಯೇ ಬರುತ್ತಿದೆಯೆಂಬಂತೆ ಸೂಚಿಸುವ ದನಿಯಿದೆಯೆಂದು ಹೇಳುವ ಮೂಲಕ ಪು.ತಿ.ನ. ನಿಸರ್ಗದ ಅನುಲ್ಲಂಘನೀಯ ನಿಯಮಗಳನ್ನು ಉಲ್ಲಂಘಿಸಿ ಭೀಕರತೆಯಲ್ಲಿರುವ ಒಳಿತನ್ನು ಒಳಗಣ್ಣಿನಿಂದ ನೋಡುವಂತೆ ಮಾಡುವಲ್ಲಿ ಯಶಸ್ವಿಯಾಗುತ್ತಾರೆ. ಆತ್ಮದ ಶೋಧನೆಗೆ ತೊಡಗಿರುವ ಮನಸ್ಸು ನಿಸರ್ಗವನ್ನು ಭೌತಿಕವಾಗಿ ರಸಸ್ವಾದನೆಗೆ ಆವಾಹಿಸಿಕೊಳ್ಳದೆ ಅಲೌಕಿಕವಾದುದನ್ನು ಹೇಳಲು ಪು.ತಿ.ನ. ಇಷ್ಟಪಡುತ್ತಾರೆ. ಅಲೌಕಿಕವು ಲೌಕಿಕದ ನೆಲೆಗಟ್ಟುಗಳನ್ನೆ ಅಭ್ಯಾಸ ಮಾಡಬೇಕು. 'ಲೌಕಿಕದ ಅನುಭವಗಳನ್ನೇ ಅಲೌಕಿಕದಲ್ಲಿ ಭಾಷಾಂತರಿಸಿ ಹೇಳುವ ಪರಿಪಾಠವಿದೆ. ನಮಗೆ ಗೊತ್ತಿರುವ ಭಕ್ತಿ ಕಾವ್ಯದಲ್ಲಿ ಬಹುಶಃ ಇದೇ ಪ್ರಕ್ರಿಯೆ ಮೇಲಿಂದ ಮೇಲೆ ನಡೆಯುತ್ತದೆ. ಪು.ತಿ.ನ. ಅವರ ಭಕ್ತಿ ಕಾವ್ಯವೂ ಈ ಮಾತಿಗೆ ಹೊರತಾಗಿಲ್ಲ. ಆದರೆ ಅದಕ್ಕಿಂತ ಭಿನ್ನವಾದ ಒಂದು ಅರಿವು ಇವರ ಕಾವ್ಯಕ್ಕಿದೆ. ಅದು ಭಕ್ತಕಾವ್ಯಕ್ಕೆ ಆಧುನಿಕ ಕಾಲ ಅನುಕೂಲವಾಗಿಲ್ಲವೆಂಬ ತೀವ್ರವಾದ ಅರಿವು.'[೬೧] ಇಂತಹ ಅರಿವು ಅವರ ಭಾಷೆಯಲ್ಲಿ ಅಭಿವ್ಯಕ್ತಿ ಪಡೆಯುತ್ತದೆಯೇ ಹೊರತು ಅವರ ಕಾವ್ಯವಸ್ತುವಿನಲ್ಲಿ ಅಲ್ಲವೆಂಬ ಕುರ್ತಕೋಟಿಯವರ ಮಾತು ಸರಿ ಎನಿಸುತ್ತದೆ. ಬೇಂದ್ರೆ, ಕುವೆಂಪು ಅವರಿಗಿಂತ ಭಿನ್ನರಾಗಿ ಪು.ತಿ.ನ. ತಳಮಳ ಅನುಭವಿಸುವುದು ಈ ದೃಷ್ಟಿಯಿಂದ. ತಾತ್ವಿಕತೆಯನ್ನು ಅವರು ತಮ್ಮ ಕಾವ್ಯದಲ್ಲಿ ಪೋಷಿಸುವುದರಿಂದ ಮನುಷ್ಯ ಸಂಬಂಧಗಳ ಕೊಂಡಿ ಬಂಧುರವಾಗಲಾರದೆ ಹೋಗುತ್ತದೆ. ಆದರೆ ಅವರ ಗೀತ ನಾಟಕಗಳಲ್ಲಿ ಪೌರಾಣಿಕ ಕಲ್ಪನೆಯ ಮನುಷ್ಯ ಜೀವನವೇ ಗೆಲ್ಲುತ್ತದೆ. ಕಾವ್ಯಕ್ಕೆ ಅಮರತ್ವವನ್ನು ಕೊಡಲು ಸದಾ ಹಂಬಲಿಸುತ್ತಾರೆ. ಆದರೆ ಆ ಭಕ್ತಿ ಚೈತನ್ಯ ಸ್ವರೂಪವನ್ನು ಕಾಣಿಸದೆ ಹೋದಾಗ ಕವಿ ವ್ಯಗ್ರರಾಗದೆ ಸಮಾಧಾನ ಉಳಿಸಿಕೊಳ್ಳುತ್ತಾರೆ. ಕೃಷ್ಣನ ಕೊಳಲಿನ ಕರೆ ಕೇಳಿ ಬರುತ್ತಲಿದೆ. ಅದನ್ನು ಹುಡುಕಿ ಹೋಗುತ್ತಾರೆ. ''ಕವಿಯ ಅನುಭವ ಕೂಗಿ ಹೇಳುವ ಮಾತೆಂದರೆ 'ನಿಲ್ಲಿಸದಿರು ವನಮಾಲೀ ಕೊಳಲಗಾನವ'. ಕೊಳಲಗಾನ ಒಂದಿಲ್ಲೊಂದು ದಿನ ಕೃಷ್ಣನನ್ನು ಕಾಣಿಸಬಹುದು; ಕಾಣಿಸದಿದ್ದರೂ ಕೊಳಲಿನ ದನಿಯ ರಸಮುಗ್ನತೆಯ ಬೆಲೆ ಕಡಿಮೆಯಾಗುವುದಿಲ್ಲ.''[೬೨] ಸೃಷ್ಟಿಯಲ್ಲಿ ಕೇಳಿ ಬರುತ್ತಿರುವ ಕೊಳಲಿನ ಹಾಡು ಕೃಷ್ಣನ ದಾರಿ ತೋರಿಸುವದೆಂದು ಅವರಿಗೆ ನಂಬಿಕೆಯಿದೆ. ಆ ವ್ಯಕ್ತಿಗತ ನಂಬಿಕೆ ಈಡೇರದಿದ್ದರೆ ನಿಸರ್ಗದಲ್ಲಿ ಕೇಳಿಬಂದ ಒಲುಮೆಯ ದನಿ ರಸಾನುಭೂತಿಯನ್ನಾದರೂ ತಂದೀತೆಂದು ಕವಿ ಭಾವಿಸಿದ್ದಾರೆ.

೫.೫ ಮಾಸ್ತಿಯವರಲ್ಲಿ ನಿಸರ್ಗದ ಸಾತ್ವಿಕ ಮನೋಧರ್ಮ :

ಸಾತ್ವಿಕ ಮನೋಧರ್ಮದಿಂದ ಕೆಡುಕನ್ನು ನಿಗ್ರಹಿಸಬಹುದೆಂಬ ವಿಚಾರ ಮಾಸ್ತಿಯವರ ಕವಿತೆಗಳಲ್ಲಿ ವ್ಯಕ್ತವಾಗಿದೆ. ಕನ್ನಡದ ಸಣ್ಣಕತೆಯ ಜನಕರೆಂದೇ ಪ್ರಖ್ಯಾತರಾಗಿರುವ ಮಾಸ್ತಿಯವರು ಕಾದಂಬರಿ, ನಾಟಕ ಹಾಗೂ ಕಾವ್ಯ ಪ್ರಕಾರದಲ್ಲಿಯೂ ಸಾಕಷ್ಟು ಕೃಷಿ ಮಾಡಿ ಸಮೃದ್ಧ ನವೋದಯದ ಹರಿಕಾರರಲ್ಲೊಬ್ಬರಾದರು.

ರೋಮ್ಯಾಂಟಿಕ್ ಕಾವ್ಯ ಲಕ್ಷಣಗಳನ್ನು ಹೊಂದಿಯೂ ಸಮಾಜ ಹಾಗೂ ಕಾಲದ ಮುಖವನ್ನು ಕಾವ್ಯದಲ್ಲಿ ಹಿಡಿದಿಡಬೇಕೆಂಬ ಅವರ ಆಶಯ ಅವರನ್ನು ಇತರ ನವೋದಯ ಕವಿಗಳಿಗಿಂತ ಸ್ವಲ್ಪ ಭಿನ್ನವಾಗಿಸಿತೆಂದು ಹೇಳಬಹುದು. ಭಕ್ತಿ ಪರಂಪರೆಯ ಕೋಮಲತೆಯನ್ನು ಮೈಗೂಡಿಸಿಕೊಂಡ ಕಾರಣಕ್ಕಾಗಿ ಅವರ ಕವಿತೆಗಳು ಸರಳವಾಗಿ ಸಹೃದಯನನ್ನು ತಟ್ಟಬಲ್ಲ ಶಕ್ತಿ ಹೊಂದಿವೆ. ರಮ್ಯತೆ, ಭಾವೋದ್ವೇಗಗಳನ್ನು ತಮ್ಮ ಅಭಿವ್ಯಕ್ತಿಯ ಜಾಯಮಾನಕ್ಕೆ ತಕ್ಕಂತೆ ನುರಿಸುವ ಕಲೆ ಮಾಸ್ತಿಯವರಿಗೆ ಗೊತ್ತಿರುವುದರಿಂದಲೆ ಅವರ ಕವಿತೆ ಕಥನ ಕಾವ್ಯದ ಮಾರ್ಗ ಹಿಡಿಯಿತೆಂದು ತೋರುತ್ತದೆ. ಅವರ ಪ್ರಕೃತಿ ಕವನಗಳಲ್ಲಿ ನಿಸರ್ಗಕ್ಕೆ ಮಿಡಿಯುವ ಸಂವೇದನಾಶೀಲ ಮನಸ್ಸೊಂದನ್ನು ಕಾಣಬಹುದಾಗಿದೆ. ನಿಸರ್ಗದ ಎಲ್ಲ ಚಿಕ್ಕಪುಟ್ಟ ವಿವರಗಳನ್ನು ಒಟ್ಟುಮಾಡಿಕೊಡುವ ಅವರ ಕವನಗಳು ಸಜ್ಜನಿಕೆ, ಹೃದಯ ನೈರ್ಮಲ್ಯಗಳಂತಹ ಬದುಕಿನ ಮೌಲ್ಯಗಳಿಂದ ಪ್ರಕಾಶಿಸುತ್ತವೆ. ದೇವನ ಸೃಷ್ಟಿಯಲ್ಲಿ ಹೆಚ್ಚು ಕಡಿಮೆಗಳಿಲ್ಲವೆಂದು, ಫಲದಾಯಕವಾಗಿರುವ ನಿಸರ್ಗದ ಮೂಲಕ ಮನುಷ್ಯ ಬಾಳಿನ ತಿರುಳನ್ನು ಅರಿಯಬೇಕೆಂದು ಮಾಸ್ತಿ ಪ್ರತಿಪಾದಿಸಿದರು. 'ಬೆದೆಯೋ ಕ್ಷಣಿಕ, ಒಲವೂ ಜೀವವಿರುವ ತನಕ' ಎಂದು ಒಲವಿನಲ್ಲಿರುವ ಜೀವತಂತುಗಳತ್ತ ದೃಷ್ಟಿ ಹರಿಸಿದರು. ಭೋಗ ದೃಷ್ಟಿಗಿಂತ ತ್ಯಾಗದೃಷ್ಟಿ ಎಷ್ಟು ಮಹತ್ವದ್ದು ಎಂಬುದನ್ನು ವಿವರಿಸಿದರು. ಸೃಷ್ಟಿಯ ಜೊತೆಗೆ ತಾದಾತ್ಮ್ಯ ಮನೋಭಾವ ಹಾಗೂ ಅರ್ಪಣಾ ಮನೋಭಾವ ಮನುಷ್ಯನ ಗುರಿಯಾಗಬೇಕೆಂಬ ಆ ಕಾಲದ ಹಾಗೂ ಎಲ್ಲ ಕಾಲದ ಸತ್ಯವೊಂದನ್ನು ತಮ್ಮ ಕವಿತೆಗಳಲ್ಲಿ ಕಟ್ಟಿಕೊಡಲು ಮಾಸ್ತಿ ಯತ್ನಿಸುತ್ತಾರೆ.

ಮಾನವ ಮತ್ತು ನಿಸರ್ಗದ ನಡುವೆ ಇರುವ ಮೈತ್ರಿಯ ಅಭಿವ್ಯಕ್ತಿ ಮಾಸ್ತಿಯವರಲ್ಲಿ ಪ್ರಕಟವಾಗುವ ಬಗೆಯನ್ನು ವಿ.ಚಂದ್ರಶೇಖರ ನಂಗಲಿ ತುಂಬ ಸಮರ್ಪಕವಾಗಿ ಗುರುತಿಸುತ್ತಾರೆ: 'ಮಾಸ್ತಿಯವರ ಮೊದಲ ಕವನ ಸಂಕಲನಗಳಲ್ಲಿ ಸರ್ವಾರ್ಪಣ ಮನೋಭಾವ ಎದ್ದು ಕಾಣುತ್ತದೆ. ಈ ಸರ್ವಾರ್ಪಣಾ ಮನೋಭಾವದಲ್ಲಿ ಮಾನವನ ಸಂಕಲ್ಪ ಬಲವು ನೀರಿನಲ್ಲಿ ಬಿದ್ದ ಅಡಕೆಯಂತೆ ಮುಳುಗಿ ಹೋಗುತ್ತದೆ. ಅದೇ ಮಾನವ ಜೀವನವನ್ನು ಸಫಲತೆಯ ಪ್ರಕ್ರಿಯೆಯನ್ನಾಗಿ ಕಂಡಾಗ ಸಂಕಲ್ಪ ಬಲವು ತಾನೆತಾನಾಗಿ ಮೇಲೇರಿ ಬಿಡುತ್ತದೆ. ಈ ಅಂಶವನ್ನು 'ಮೂಕನ ಮಕ್ಕಳು' ಕಥನ ಕವನದಲ್ಲಿ ಮನಗಾಣಬಹುದು... ಮದುವೆಯಾಗಿ ಮಕ್ಕಳನ್ನು ಪಡೆಯದಿದ್ದರೂ ಗುರುವೊಬ್ಬನ ಮಾತಿನಂತೆ ಗಿಡಮರಗಳನ್ನು ಬೆಳೆಸುತ್ತಾ ತನ್ನ ಬಾಳಿನ ಕೊರತೆಗಳನ್ನು ನೀಗಿಕೊಳ್ಳುವ ಮೂಕನ ಕಥೆಯಲ್ಲಿ ಹಸುರಿಗೂ ಮನುಷ್ಯನಿಗೂ ಇರುವ ನಿಕಟ ಮೈತ್ರಿಯ ಅಭಿವ್ಯಕ್ತಿಯಿದೆ. ಕೂರಿಗೆಯಲ್ಲಿ ಪೌರುಷವನ್ನೂ, ಮಣ್ಣಿನಲ್ಲಿ ಹೆಣ್ತನವನ್ನೂ ಕಾಣುವ ಈ ಕವನ ಉಳುಮೆಯ ಪ್ರಕ್ರಿಯೆಯನ್ನು ಮನುಕುಲದ ಸೃಷ್ಟಿಶೀಲ ಪ್ರಕ್ರಿಯೆಯನ್ನಾಗಿ ಪರಿಭಾವಿಸಿದೆ.'[೬೩]

ಮಾಸ್ತಿಯವರದು ಕಥನ ಪ್ರತಿಭೆಯಾದುದರಿಂದ ಕಥನದ ಅಂಶಗಳೆ ಅವರಲ್ಲಿ ಮೇಲುಗೈ ಪಡೆಯುತ್ತವೆ. ಅವರ ಕಾವ್ಯದ 'ಗದ್ಯತನ' ಒಮ್ಮೊಮ್ಮೆ ಮಿತಿಮೀರಿ ಕಾವ್ಯದ ಅಂಶಗಳಿಗೆ ಪೆಟ್ಟಾಗುವ ಸಂದರ್ಭಗಳನ್ನು ಕೂಡ

ಕಾಣಬಹುದು. ಕಥೆಯ ಅಂಶಗಳು ಲೀಲಾಜಾಲವಾಗಿ ಬಂದಂತೆ ಪ್ರತಿಮೆ-ರೂಪಕಗಳು ಕಾಣಿಸಿಕೊಳ್ಳದೆ, ಕಲ್ಪನಾವಿಲಾಸ ಕಾಣಿಸಿಕೊಳ್ಳದೆ ಕಾವ್ಯ ಒಂದು ಮಜಲಿನ ನಂತರ ಮೇಲೇರುವುದಿಲ್ಲ. ಆದರೆ ಕಲ್ಪಕತೆಯ ಅಭಾವವೆ ಅವರ ಕಾವ್ಯ ನೆಲಮುಖಿಯಾಗಲು, ಪುರಾಣ ಪ್ರತಿಮೆಗಳನ್ನು ಆಧುನಿಕ ಸಂದರ್ಭದ ಬದುಕಿನೊಂದಿಗೆ ಬೆಸೆಯಲು ಸಹಾಯಕವಾಯಿತೆಂದು ಹೇಳಬಹುದು. ರಾಮಾಯಣದ ಸೀತಾ-ರಾಮರು ಹಚ್ಚ ಹಸುರಿನ, ಹಕ್ಕಿಯ ಇಂಚರದ, ಸೀತೆಯ ಕೊರಳದನಿಯಿಂಪಿನ ಪರಿಸರದಲ್ಲಿ ಬಸರಿಗಿಡದ ಕೆಳಗೆ ಹುಟ್ಟುಹಬ್ಬದ ಅಡುಗೆ ಸವಿಯುವುದು; ಆ ಮರ, ಆ ಜಲ, ಆ ತಾಣಗಳು ಬಾಡದಿರಲೆಂದು ಹೇಳುವುದು; ಕಾಲ ಸರಿದು ಹೋಗಿ ಈಗ ಹರೆಯದ ಹುಡುಗಿಯರು ಸೀತಾರಾಮರಂತೆ ಆ ಹಸಿರಿನಲ್ಲಿ ಕಂಗೊಳಿಸುವುದು; ಪುರಾಣ ಹಾಗೂ ಆಧುನಿಕತೆಗಳು ವ್ಯತ್ಯಯ ಒಸಗೆಗೆ ನಿಲ್ಲುವುದು, 'ರಾಮನವಮಿ' ಕವಿತೆ ಕಲಿಸಿಕೊಡುವ ನಿಸರ್ಗದ ಪಾಠಗಳಾಗಿವೆ.

ಬೇಂದ್ರೆಯವರ 'ನಾದಲೀಲೆ'ಗೆ ಮುನ್ನುಡಿ ಬರೆಯುತ್ತ 'ಭಾವ', 'ಮಾತು' ಮತ್ತು 'ರೀತಿ'ಯಂತಹ ಸೊಗಸಾದ ಕಾವ್ಯಲಕ್ಷಣಗಳಿಂದ ಬೇಂದ್ರೆಯವರು ಶಬ್ದಗಾರುಡಿಗರಾಗಿ ಹೊರಹೊಮ್ಮಿದ್ದಾರೆಂದು; ಕಾವ್ಯಸಿದ್ಧಿಯನ್ನು ಸಾಧಿಸಿದ್ದಾರೆಂದು ಹೇಳಿದ ಮಾಸ್ತಿಯವರು ಬೇಂದ್ರೆ ಕಾವ್ಯದ ಬಗ್ಗೆ ಆಗಿನ ಹೊಸ ವಿಮರ್ಶೆಯಲ್ಲಿದ್ದ ಹಿಂಜರಿಕೆಗಳನ್ನು ದೂರ ಮಾಡಿದರು. ಆಡುಭಾಷೆಯನ್ನು ಕಾವ್ಯಭಾಷೆಯನ್ನಾಗಿ ಪರಿವರ್ತಿಸಿದ್ದ ಕರ್ನಾಟಕದ ನವಕವಿಯನ್ನು ಅತ್ಯಂತ ಪ್ರೀತಿಯಿಂದ ಸ್ವಾಗತಿಸುವ ಮೂಲಕ ಜನಪದ ಲಯ-ನುಡಿಗಟ್ಟುಗಳು ನವೋದಯದ ಕವಿತೆಗೆ ಹೊಸ ಸತ್ವ ಒದಗಿಸಬಲ್ಲ ಶಕ್ತಿ ಹೊಂದಿವೆಯೆಂದು ತೋರಿಸಿಕೊಟ್ಟರು. 'ಜನದ ಬಾಳಿನಿಂದ, ಜನದ ನಡೆಯಿಂದ, ಜನದ ನುಡಿಯಿಂದ ಪ್ರಚೋದಿತವಾಗುವ ಕಾವ್ಯ ಅದರಿಂದ ನೂರುಮಡಿ ಹೆಚ್ಚು ಜೀವಂತವಾಗುತ್ತದೆ. ಕನ್ನಡ ಜನತೆಯ ಕಾವ್ಯ ಎಷ್ಟು ಉತ್ತಮವಾದುದೆಂದು ಹೇಳುವುದಕ್ಕೆ ಈಗ ಹತ್ತು ವರ್ಷದಿಂದ ನಮಗೆ ತುಂಬ ಸಾಮಗ್ರಿ ದೊರೆತಿದೆ. ಈ ಸಾಹಿತ್ಯದಲ್ಲಿ ಕಾಣುವ ಭಾವದ ಊಟೆ, ಮಾತಿನ ಔಚಿತ್ಯ, ಚಿತ್ರಕರ್ಮದ ಕಲೆ ಪ್ರಪಂಚದ ಅತ್ಯುತ್ತಮ ಸಾಹಿತ್ಯದ ಮಟ್ಟವನ್ನು ಮುಟ್ಟುತ್ತದೆ. ಬೇಂದ್ರೆಯವರು ಇಷ್ಟು ಉತ್ತಮವಾದ ರೀತಿಯ ಜನಪದ ಸಾಹಿತ್ಯವನ್ನು ಪ್ರೇಮದಿಂದ ಉಪಾಸಿಸಿದ್ದಾರೆ. ಇವರ ಕವಿತೆಯಲ್ಲಿ ಭಾವಕ್ಕೆ ಮಾತಿನ ಅರ್ಥಗಳನ್ನೂ, ಸಿದ್ಧಿಯನ್ನೂ ತಂದಿವೆ'[೫೩] ಎಂದು ಪ್ರಶಂಸಿಸಿದರು. ಹೊಸ ಕವಿಯನ್ನೂ ಬರೀ ಪ್ರೊಮಿಸಿಂಗ್ ಎಂದು ಹೇಳುವ ಆಗಿನ ಮನೋಭಾವವನ್ನು, ಸಂಕೋಚವನ್ನು ಮೀರಿ ಬೇಂದ್ರೆಯವರು ಸಾಧಿಸಿದ ಸಿದ್ಧಿಯನ್ನು ಸಹೃದಯರಿಗೆ ಮನವರಿಕೆ ಮಾಡಿಕೊಟ್ಟರು. ಬೇಂದ್ರೆಯವರಿಗೆ ನಿಜವಾಗಿಯೂ ಹಿರಿಯಣ್ಣನಾಗಿ ಸಾಹಿತ್ಯದಲ್ಲಿ ಹಾಗೂ ಬದುಕಿನಲ್ಲಿ ಬೆಂಬಲಿಸಿದರು. ಅವರಿಬ್ಬರ ಕಾವ್ಯಮಾರ್ಗಗಳು ಒಂದು ರೀತಿಯಲ್ಲಿ ಬೇರೆ ಬೇರೆಯಾಗಿದ್ದರೂ ಅವರ ನಡುವಿನ ಸಾಮರಸ್ಯ ಮಾತ್ರ ಯಾವಾಗಲೂ ತುಂಬಿ ಹರಿಯುತ್ತಿತ್ತು.

ಕೌಟುಂಬಿಕ ಅಡಚಣೆ ಹಾಗೂ ಬಡತನದ ಬವಣೆಗಳ ಕಾರಣದಿಂದ ಬೇಂದ್ರೆಯವರ ಬದುಕಿನ ನೌಕೆ ಯಾವಾಗಲೂ ನೋವುಗಳ ಸುಳಿಗೆ ಸಿಲುಕುತ್ತಿತ್ತು. ಅಂತಹ ಸಮಯದಲ್ಲಿ ಸುರಕ್ಷಿತ ದಡ ತಲುಪಲು ನೆರವಾದ

ಮಿತ್ರರನ್ನು ಎಷ್ಟು ನೆನೆದರೂ ಬೇಂದ್ರೆಯವರಿಗೆ ಕಡಿಮೆಯೇ ಅನಿಸುತ್ತಿತ್ತು. ಮಾಸ್ತಿ, ವಿ.ಕೃ.ಗೋಕಾಕ, ಮಧುರಚೆನ್ನ, ಶಂಕರಗೌಡ, ಎನ್.ಕೆ.ದೀಕ್ಷಿತ, ದಂತೋಪಂತ ಪೋದ್ದಾರ ಮುಂತಾದ ಗೆಳೆಯರು ಕವಿಯ ಸ್ಮೃತಿಪಟಲದಲ್ಲಿ ಅಚಲವಾಗುಳಿದರು. ಚಿಕ್ಕಪ್ಪನ ಔದಾರ್ಯದಿಂದ ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಬಿ.ಎ. ಮುಗಿಸಿ ಬಂದ ಮೇಲೆ ಹಲವು ಅಲೆದಾಟಗಳನ್ನು, ತಾತ್ಕಾಲಿಕ ನೌಕರಿಗಳ ತಾಪತ್ರಯಗಳನ್ನು ಬೇಂದ್ರೆಯವರು ಅನುಭವಿಸಬೇಕಾಗಿ ಬಂತು. ತಾವು ಕಲಿತ ವಿಕ್ಟೋರಿಯಾ ಹಾಸ್ಟೇಲಿನಲ್ಲಿ, ಸೊಂಡೂರ ಸಂಸ್ಥಾನದಲ್ಲಿ ದುಡಿದರು. ತಾಯಿ ಅಂಬಿಕೆ ಈ ನಡುವೆ ವಿಧಿವಶರಾದರು. ಬ್ರಿಟಿಷ್ ಸರ್ಕಾರದ ಸಂಶಯದ ಮೇರೆಗೆ ಹಿಂಡಲಗಿಯ ಜೈಲಿನಲ್ಲಿ ಮೂರು ತಿಂಗಳು, ಮುಗದದಲ್ಲಿ ಒಂಬತ್ತು ತಿಂಗಳು ಕಳೆಯಬೇಕಾಗಿ ಬಂತು. ಅಲ್ಲಿಂದಲೆ ಮತ್ತೆ ಪೂನಾಕ್ಕೆ ಹೋಗಿ ಎಂ.ಎ. ಪದವಿ ಮುಗಿಸಿ ಬಂದರೂ ಬೇಂದ್ರೆಯವರಿಗೆ ನೌಕರಿಯೆಂಬ ಸುಭದ್ರ ನೆಲೆ ಕನಸಾಗಿಯೇ ಉಳಿಯತೊಡಗಿತ್ತು. ಮಾಸ್ತಿಯವರ ನೆರವಿಲ್ಲದಿದ್ದರೆ ಆ ದಿನಗಳನ್ನು ದೂಡುವುದು ಕಷ್ಟವಿತ್ತು. ೧೯೩೫ ರಿಂದ ೧೯೪೦ ರವರೆಗೆ ಮಾಸ್ತಿಯವರ ಬೆಂಬಲದಿಂದ 'ಜೀವನ' ಪತ್ರಿಕೆಗೆ ಸಂಪಾದಕರಾಗಿ ಬೇಂದ್ರೆ ನಾಡಿನ ಎಲ್ಲೆಡೆ ತಿರುಗಿದರು. ನೋವುಗಳಿವೆಯೆಂದು ಕಾವ್ಯರಚನೆ, ಪತ್ರಿಕಾ ಸಂಪಾದನೆ ನಿಲ್ಲಿಸಲಿಲ್ಲ. ೧೯೪೨ ರಿಂದ ಅವರಿಗೆ ಸಮಾಧಾನವೆನ್ನಬಹುದಾದ ಉದ್ಯೋಗಗಳು ದೊರೆಯುತ್ತ ಹೋದವು.

ಮಾಸ್ತಿ ಬೆಂಬಲಕ್ಕಿದ್ದ ಪರಿಣಾಮವಾಗಿ ಬೇಂದ್ರೆಯವರಲ್ಲಿ ಆತ್ಮವಿಶ್ವಾಸ ಬೆಳೆಯಿತು. ಅವಕಾಶಗಳು ಹೇರಳವಾಗಿ ದೊರೆತವು. ಬೇಂದ್ರೆ-ಮಾಸ್ತಿ-ಮಧುರಚೆನ್ನರ ಸ್ನೇಹವನ್ನು ನಾವು ಬರೀ ವ್ಯವಹಾರಿಕ ಘಟನೆಗಳೆಂದು; ಗೆಳೆತನದ ಬಗೆಗಳೆಂದು ನೋಡದೆ ಆ ಸಂವಾದಗಳ ಮೂಲಕ ಹೊಸ ಕವಿತೆ ಪಡೆದುಕೊಂಡ ವಿಶ್ಲೇಷಣೆಯನ್ನು, ಅರ್ಥಪೂರ್ಣ ಸಂವಾದವನ್ನು ಗುರುತಿಸುವ ಅವಶ್ಯಕತೆಯಿದೆ. ಬೇಂದ್ರೆಯವರ 'ಬೆಳಗು' ಪದ್ಯವನ್ನು ಮಾಸ್ತಿಯವರು ಪ್ರಾಯೋಗಿಕ ರೀತಿಯಲ್ಲಿ ವಿಶ್ಲೇಷಿಸದೆ ಹೋಗಿದ್ದರೆ; ಅದರ ಸೌಂದರ್ಯವನ್ನು, ರಸಾನುಭೂತಿಯನ್ನು ಸಹೃದಯರಿಗೆ ಮನದಟ್ಟು ಮಾಡದೆ ಹೋಗಿದ್ದರೆ ಬೇಂದ್ರೆ ಪದ್ಯಗಳು ಒಪ್ಪಿತವಾಗಲಿಕ್ಕೆ ಮತ್ತಷ್ಟು ಕಾಲ ಹಿಡಿಯಬೇಕಾಗಿತ್ತೇನೋ: 'ಗಿಡದ ಆನಂದ, ತನ್ನ ಆನಂದ, ಗಿಡದಲ್ಲಿ ಕುಳಿತ ಹಕ್ಕಿಯ ಆನಂದ, ಬೀಸುವ ಗಾಳಿಯ ಆನಂದ ಇವು ಬೇರೆ ಬೇರೆ ಎಂದು ತಿಳಿದವನು ಅದನ್ನು ಬಿಡಿಸಿ ಬಿಡಿಸಿ ಹೇಳುತ್ತಾನೆ. ಇವುಗಳೆಲ್ಲ ಒಂದು ಆನಂದ, ನಾಲ್ಕು ಕಡೆ ಕಂಡಿರತಕ್ಕದ್ದು ಎಂದು ಬುದ್ಧಿಯನ್ನು ತಿಳಿಯುವವನು ಇದೊಂದು ವಿಚಾರ ಎಂಬಂತೆ ಹೇಳುತ್ತಾನೆ. ಇದಕ್ಕೂ ಮುಂದಿನ ಒಮ್ಮೆಯನ್ನು ಅರಿತವನು ಬೇಂದ್ರೆಯವರು ಹೇಳಿರುವಂತೆ 'ಗಿಡಗಂಟೆಯ ಕೊರಳು' ಆನಂದದಿಂದ ಹಾಡಿತು ಎನ್ನುತ್ತಾನೆ. ಬಾಳೆಲ್ಲ ಒಂದು ಎನ್ನುವುದು ತಿಳಿವಿಗೆ ಮಾತ್ರ ಕಂಡಾಗ ಅಲ್ಲ, ಅನುಭವದಿಂದ ಕಂಡಾಗ ಮಾತ್ರ ಈ ಮಾತು ಪ್ರಯತ್ನವಿಲ್ಲದೆ ಬರುತ್ತದೆ.'[೭೫] ಬದುಕಿನ ಸಮಗ್ರತೆ ಹಾಗೂ ಅಪೂರ್ವ ಒಳನೋಟಗಳನ್ನು ಕೊಡಲು ಬೇಂದ್ರೆ ಕಾವ್ಯ ಸಮರ್ಥವಾಗಿದೆಯೆಂಬುದನ್ನು ಮಾಸ್ತಿ ತೋರಿಸಿಕೊಟ್ಟರು. ರಸ ಹಾಗೂ ಪ್ರಾಯೋಗಿಕ ವಿಮರ್ಶೆ, ಸಾಹಿತ್ಯ ಸಂವಾದ, ಪ್ರಶಂಸೆಯ ನುಡಿ ಮುಂತಾದ ಸಾಹಿತ್ಯದ ಓದುವಿಕೆಯಲ್ಲಿ

ಹೊಸ ವಿಮರ್ಶೆ ಒಂದು ರೂಪವನ್ನು ಪಡೆದುಕೊಳ್ಳತೊಡಗಿತು. ಕಾವ್ಯ ಸಂಕಲನಗಳ ಮುನ್ನುಡಿಗಳು ಸಹೃದಯರಿಗೆ ದಿಕ್ಸೂಚಿಯಾಗತೊಡಗಿದವು. ಅರ್ಥಹೀನ ಸಾಂಪ್ರದಾಯಕತೆಯನ್ನು ಮೀರುವ; ಹತಾಶೆಯ ಮನೋಭಾವವನ್ನು ತೊರೆಯುವ; ಭೋಗ ಜೀವನದ ಕ್ಷಣಿಕತೆಯನ್ನು ಜಿಂಜಿಸುವ; ಮನುಷ್ಯನನ್ನು ಪ್ರಕೃತಿಯತ್ತ ತಿರುಗಿಸುವ; ವೈಚಾರಿಕತೆ ಹಾಗೂ ಆತ್ಮದೃಷ್ಟಿಯನ್ನು ಬೆಳೆಸುವ ಹೊಸ ಕವಿತೆಯ ಒಲವುಗಳಿಗೆ ಅವು ಕನ್ನಡಿ ಹಿಡಿದವು.

ಬೇಂದ್ರೆಯವರ 'ನಾದಲೀಲೆ'ಯ ಜಾಡು ಹಿಡಿದು ಅದನ್ನು ಆಲಿಸುವಂತೆ ಮಾಡಿದ ಮಾಸ್ತಿಯವರು ಹಾಗೂ ಕುವೆಂಪು ಅವರ ಕೊಳಲಿನ ಇಂಪು ಗುರುತಿಸಿದ ಬಿ.ಎಂ.ಶ್ರೀಯವರು ಹೊಸ ಕವಿಗಳು ಇಡುತ್ತಿದ್ದ ಹೆಜ್ಜೆಗಳಿಗೆ ಆತ್ಮಬಲ ತುಂಬಿದರು. 'ಜೀವಾನಂದ, ಬ್ರಹ್ಮಾನಂದ, ಕಾವ್ಯಾನಂದಗಳನ್ನು ತಮ್ಮ ಶಕ್ತಿಗನುಗುಣವಾಗಿ ಅಂತಃಕರಣದಲ್ಲಿ ತುಂಬಿಕೊಳ್ಳುತ್ತಾ ಹಕ್ಕಿ ಹಾಡಿದಂತೆ ಸುಖವಾಗಿ ಹಾಡುವವರು ಪುಟ್ಟಪ್ಪನವರು'[೬] ಎಂದು ಕುವೆಂಪುರವರ 'ಕೊಳಲು' ಸಂಗ್ರಹಕ್ಕೆ ಮುನ್ನುಡಿ ಬರೆದ ಬಿ.ಎಂ.ಶ್ರೀಯವರು ನವೋದಯ ಕಾವ್ಯದ ಜೀವಂತಿಕೆಯನ್ನು ಗುರುತಿಸಿದರು. ತಮ್ಮ ಹಿಂದಿನ ಸಮಕಾಲೀನ ಹಾಗೂ ಕಿರಿಯರ ಸಾಹಿತ್ಯವನ್ನು ತೆರೆದ ಮನಸ್ಸಿನಿಂದ ಆವಾಹಿಸಿಕೊಂಡ ಆ ಕಾಲದ ಬಹುತೇಕ ಲೇಖಕರು ಹೊಸ ಬೆಳವಣಿಗೆ- ಪ್ರಭಾವ ಭಿನ್ನ ಮಾರ್ಗದ ರೀತಿಗಳಿಗೆ ಮೆಚ್ಚಿಕೆ ತೋರಿದರು. ಪ್ರಭಾವಗಳನ್ನು ಅರಗಿಸಿಕೊಂಡರು. ಹಾಗಾಗಿಯೇ ಮಾಸ್ತಿಯವರಿಗೆ ತರುಣ ಬೇಂದ್ರೆಯವರನ್ನು ಬರೀ Promising ಎನ್ನದೆ Fulfillment (ಸಿದ್ಧಿ) ಅನ್ನು ಸಾಧಿಸಿದ ಕವಿಯೆಂದು ಒಪ್ಪಿಕೊಳ್ಳುವದರಲ್ಲಿ ಸಂಕೋಚ ಕಾಡಲಿಲ್ಲ. ಬೇಂದ್ರೆಯವರಿಗೆ ಕುವೆಂಪುರವರನ್ನು 'ಯುಗದ ಕವಿ' ಎಂದು 'ಜಗದ ಕವಿ'ಯೆಂದು ಕರೆದು ಪ್ರೀತ್ಯಾದರ ತೋರುವುದು ತುಂಬ ಸ್ವಾಭಾವಿಕವಾದ ಸಂಗತಿಯಾಗಿತ್ತು. ಅದರ ಜೊತೆಗೆ ಕವಿ ತೋರಿದ ಮಲೆನಾಡಿನ ಸೌಂದರ್ಯವನ್ನು, ಸಹೃದಯ ಮನಸ್ಸುಗಳು ತಣಿಯುವುದನ್ನು, ರವಿ ಎದುರಿಗೆ ತಮ ಮಾಯವಾಗುವುದನ್ನು ಬೇಂದ್ರೆ ಹೇಳುತ್ತಾರೆ. ಅದೇ ರೀತಿ ನಿಸರ್ಗದ ಪ್ರೀತಿ ದೈವಿಕ ಅನುಭೂತಿಯ ರೀತಿಯಾಗಿ ಕಾಲ ಸಂದರ್ಭವನ್ನು ನಿರ್ದೇಶಿಸಬೇಕೆನ್ನುವ, ಅನಾಚಾರ ನಿರ್ಮೂಲನೆಯಾಗಿ ಆತ್ಮದೃಷ್ಟಿ ಮೆರೆಯಬೇಕೆನ್ನುವ ಒಲವನ್ನು ಬೇಂದ್ರೆ ಪ್ರಕಟಿಸುತ್ತಾರೆ. ಮಾಸ್ತಿಯವರ ಸಾಹಿತ್ಯದಲ್ಲಿಯೂ ಅವರು ಅದನ್ನು ಕಂಡರು : 'ಆತ್ಮದೃಷ್ಟಿಯ ಉದಯವಾಗದೆ, ಅರ್ಥದ ಅನಾಚಾರ ನಿರ್ಮೂಲವಾಗಲಾರದು. ಆ ದೃಷ್ಟಿಯ ಉದಯವಾಗಬೇಕಾದರೆ ಸಾಹಿತ್ಯ ಸರಿಯಾಗಿ ಜೋಪಾನವಾಗಬೇಕು. ಅದರ ಉಪಾಸನೆಯೂ ಬೇಕು. ಜೀವದಯಾಪರದೃಷ್ಟಿ, ಜೀವನದಲ್ಲಿ ದೇವನ ಲೀಲೆ ಕಾಣುವ ದೃಷ್ಟಿ, ಜೀವನಲ್ಲಿ ಶಿವನನ್ನು ಕಾಣುವ ದೃಷ್ಟಿ, ಮತ್ತೆ ದಿನದ ದೃಷ್ಟಿಯಾಗಬೇಕು. ಈ ದೃಷ್ಟಿ ನಮ್ಮ ಸಾಹಿತ್ಯದ ಪುರಾತನರಿಗೆ, ಪಂಪನಿಗೆ, ಬಸವಣ್ಣನಿಗೆ, ಕುಮಾರವ್ಯಾಸನಿಗೆ, ರತ್ನಾಕರನಿಗೆ, ಹರಿಹರನಿಗೆ, ಸರ್ವಜ್ಞನಿಗೆ ಇತ್ತು. ಕನ್ನಡದ ಮನದಲ್ಲಿ ಈ ದೃಷ್ಟಿಯ ಚಿತ್ತನ್ನು ಅವರು ಚಿತ್ರಿದರು. ಇಂದು ಆ ದೃಷ್ಟಿಯ ನಿರ್ಮಲ ಪ್ರಕಾಶವು ನಮ್ಮ ಸಾಹಿತ್ಯದಲ್ಲಿ ಥಾಳವಾಗಿದೆ. ಒಬ್ಬರ ಹೆಸರನ್ನೇ ಹೇಳಬೇಕಾದರೆ ಮಾಸ್ತಿಯವರ ಎಲ್ಲ ಕೃತಿಗಳಲ್ಲಿಯೂ ಅದು ಇರುವುದಾಗಿ ಸಾಹಿತ್ಯಲೋಕವೇ ಬಲ್ಲದು.'[೭] ವಿಭೂತಿಯ ಅರಿವು

ಕನ್ನಡದ ಪರಂಪರೆಯಲ್ಲಿ ಹರಿದು ಬಂದುದನ್ನು, ನವೋದಯದ ಲೇಖಕರು ಅದರ ಅನ್ವೇಷಣೆಯಲ್ಲಿ ತೊಡಗಿರುವುದನ್ನು ಬೇಂದ್ರೆಯವರ ಈ ಮಾತುಗಳಿಂದ ತಿಳಿಯಬಹುದಾಗಿದೆ. ಅದ್ಭುತ ಕಥನ ಪ್ರತಿಭೆಯಾದ ಮಾಸ್ತಿಯವರು ತಮ್ಮ ಕಥೆ ಹಾಗೂ ಕವಿತೆಗಳಲ್ಲಿ ಮಾನವೀಯತೆ ಹಾಗೂ ಆತ್ಮದೃಷ್ಟಿ ಹರಿಸುವ ಲಕ್ಷಣಗಳನ್ನು ಮೆರೆದರು.

ಸರಳ, ಆಪ್ತ ಹಾಗೂ ಮೃದುವಾಗಿರುವ ಅಭಿವ್ಯಕ್ತಿಯಿಂದ ಅದರೊಳಡಗಿರುವ ತುಂಬು ಮಾನವೀಯತೆಯಿಂದ ಮಾಸ್ತಿಯವರ ಕವಿತೆಗಳು ಒಂದು ಕಾಲದ ಜನಜೀವನದ ಚಿತ್ರಣವನ್ನು ಕೊಡಲು ಪ್ರಯತ್ನಿಸುತ್ತವೆ. ಕವಿಯ ವ್ಯಕ್ತಿತ್ವದೊಂದಿಗೆ ಬದುಕಿನ ಅಂಶಗಳು ಕೂಡ ಬೆರೆಯಬೇಕೆಂಬುದು ಅವರ ತಿಳುವಳಿಕೆಯಾಗಿತ್ತು. ಮಾಸ್ತಿಯವರ ಈ ವಿಶಿಷ್ಟತೆಯನ್ನು ಕೀರ್ತಿನಾಥ ಕುರ್ತಕೋಟಿ ಸರಿಯಾಗಿಯೇ ಗುರುತಿಸುತ್ತಾರೆ. ಗದ್ಯ ಪದ್ಯಗಳ ನಡುವಿನ ಮಡಿವೈಲಿಗೆಯ ನಿರ್ಬಂಧವನ್ನು ದೂರ ಮಾಡಿ ಭಾವದಂತೆ ವಿಚಾರಗಳಿಗೆ ಹಾಗೂ ಕಥಾವಸ್ತುವಿಗೂ ಇಂಬುಕೊಟ್ಟು ಮಾಸ್ತಿಯವರು ನವೋದಯ ಕಾವ್ಯದ ವಿಷಯಕ್ಷೇತ್ರವನ್ನು ಹಿಗ್ಗಿಸಿದರೆಂದು ಕುರ್ತಕೋಟಿ ಹೇಳುತ್ತಾರೆ. 'ಕಾವ್ಯದಲ್ಲಿ ನಾಡಿನ ಸಂಸ್ಕೃತಿಯನ್ನು ಚಿತ್ರಿಸುತ್ತ ಅದನ್ನು ವ್ಯಕ್ತಿತ್ವದ ಬಂಧನದಿಂದ ಬಿಡಿಸಿದರು. ಹೊಸಗನ್ನಡ ಕಾವ್ಯದಲ್ಲಿ ಕವಿಯ ವ್ಯಕ್ತಿತ್ವಕ್ಕೆ ಸಿಕ್ಕ ಮಹತ್ವದಿಂದ ಕಾವ್ಯ, ಜನಾಂಗ ಹಾಗೂ ಸಮಾಜಗಳ ಪ್ರಜ್ಞೆಯನ್ನು ಕಳೆದುಕೊಳ್ಳುವದರಲ್ಲಿತ್ತು. ಮಾಸ್ತಿಯವರು ಯಾವ ವಸ್ತುವನ್ನೂ ಜನತೆಯ ಬಾಳಿನ ಒಂದು ಅಂಶವನ್ನಾಗಿಯೇ ಕಾಣುತ್ತಾರೆ. ಮಾಸ್ತಿಯವರು ಸಣ್ಣಕತೆ ಹಾಗೂ ಭಾವಗೀತೆಗಳನ್ನು ಬರೆದಿದ್ದರೂ ಕೂಡ, ನಮ್ಮ ಹಳೆಯ ಕವಿಗಳಂತೆ ಸಾಮಾನ್ಯ ಜೀವನದ ಸಮಗ್ರ ಚಿತ್ರಣಕ್ಕೆ ಮನಸ್ಸು ಹಾಕಿದ್ದಾರೆ.'[೬೮]

ವ್ಯಕ್ತಿಗತ ವಿವರಗಳು ಬದುಕುತ್ತಿರುವ ಸಮಾಜದ ವಿವರಗಳೊಂದಿಗೆ ಮಿಳಿತವಾಗುವುದು ಮಾಸ್ತಿಯವರ ಹೆಚ್ಚುಗಾರಿಕೆಯಾಗಿದೆ. ಕಥೆಗಳಲ್ಲಂತೂ ಅದನ್ನು ಅವರು ಅದ್ಭುತವಾಗಿ ಮಾಡಿ ತೋರಿಸಿದರು. ಕವಿಯು ತನ್ನ ಅನುಭವದ್ರವ್ಯದೊಡನೆ ಭಾವಜಗತ್ತನ್ನು ವಿಸ್ತರಿಸಿಕೊಂಡಂತೆ ಅವನ ಪ್ರತಿಭಾ ಸಾಮರ್ಥ್ಯ ವೃದ್ಧಿಗೊಳ್ಳುತ್ತದೆ. ನವೋದಯದ ಎಲ್ಲ ಪ್ರಮುಖ ಕವಿಗಳು ಅಂತಹ ಸಿದ್ಧಿಯಲ್ಲಿ ತೊಡಗಿದ್ದರು. ಮಾನವೀಯತೆ, ನಿಸರ್ಗಪ್ರೀತಿ, ಆದರ್ಶಪೂರ್ಣ ಬದುಕು ಮುಂತಾದ ಮೌಲ್ಯಗಳ ಆವಿಷ್ಕಾರದಲ್ಲಿ ಅವರು ನಿರತರಾಗಿದ್ದರು. ಪ್ರೀತಿ, ಪ್ರೇಮಗಳೂ ಅದರಲ್ಲಿ ಸೇರಿಕೊಂಡಿದ್ದವು.

೫.೬ ಕೆ.ಎಸ್.ನ. ಕವಿತೆಗಳಲ್ಲಿ ಪ್ರಕೃತಿಯ ಸುಕುಮಾರತೆ :

ಮಧುರ ಹಾಗೂ ಸುಕುಮಾರ ಪ್ರೇಮ ಕವಿತೆಗಳ ಮೂಲಕ ಸಹೃದಯರ ಮನಸ್ಸುಗಳನ್ನು ಸೂರೆಗೊಂಡ ಕೆ.ಎಸ್.ನರಸಿಂಹಸ್ವಾಮಿ ಜನಸಾಮಾನ್ಯರ ದಿನನಿತ್ಯದ ಘಟನೆಗಳನ್ನೆ ತಮ್ಮ ಕಾವ್ಯ ಸರಕಾಗಿಸಿಕೊಂಡರು. ಸರಳತೆ ಕೆ.ಎಸ್.ನ ಅವರ ಮತ್ತೊಂದು ಹೆಚ್ಚುಗಾರಿಕೆಯಾಗಿದೆ. ಆದರೆ ಈ ಸರಳತೆ, ಕೋಮಲತೆ ಹಾಗೂ ಅದೇ ಕಾವ್ಯವಸ್ತು ಮತ್ತೆ ಮತ್ತೆ ಅವರ ಕವಿತೆಗಳಲ್ಲಿ ಕಾಣಿಸಿಕೊಳ್ಳುವುದರಿಂದ ಏಕತಾನತೆ ಆವರಿಸಿಕೊಳ್ಳುತ್ತದೆ. ಪ್ರಕೃತಿಯ ಮೂಲಕ

ತಟ್ಟುವ ಅವರ ವಿಚಾರಗಳು ಕೂಡ ಆಳವಾಗಿ ಇಳಿಯದೆ ಕಾವ್ಯ ರಸಿಕನನ್ನು ಸಂತೃಪ್ತಗೊಳಿಸಬೇಕೆನ್ನುವ ಉದ್ದೇಶ ಮನೆ ಮಾಡಿದಂತಿರುತ್ತದೆ. ಅಡಿಗರ ನವ್ಯ ಕಾವ್ಯದ ಪ್ರಭಾವ ಅವರ ಕವಿತೆಗಳಲ್ಲಿಯ ನಿಸರ್ಗದ ಆಳ ಮಾತುಗಳನ್ನು ಒಂದಷ್ಟು ಕಾಲ ಬರಡಾಗಿಸಿರಬಹುದೇನೊ. ನವೋದಯ ಕಾವ್ಯಕ್ಕೆ ಭಿನ್ನವಾಗಿ ಹೊಸ ಕವಿತೆಯನ್ನು ಕಟ್ಟಬೇಕೆಂಬ ನವ್ಯಕಾವ್ಯದ ಒತ್ತಡ 'ಶರತ್-ಶಾರದೆ'ಯಂತಹ ಕವನಗಳನ್ನು ಬರೆಸಿರಬೇಕು. ಆದರ್ಶಗಳ ಗುಂಗಿನಿಂದ ಹೊರಬಂದು ಪ್ರಾಮಾಣಿಕವಾದ ಕವಿತೆ ಹೆಣೆಯಬೇಕೆಂಬುದನ್ನು ಹೇಳುವುದು ಅವರ ಉದ್ದೇಶವಾದಂತಿದೆ. ಆದರೆ 'ಕುಂಕುಮ ಭೂಮಿ'ಯಂತಹ ಕವನ ಬರೆದು ನವೋದಯ ಮೈಗೂಡಿಸಿಕೊಂಡ ಸತ್ವವನ್ನು ಅವರು ಹೇಳಿದರು. ಇಂತಹ ಗುಣಗ್ರಾಹಿ ಸತ್ವವನ್ನು ಪ್ರಕಟಿಸುವ ಡಾ. ಜಿ.ಎಸ್.ಶಿವರುದ್ರಪ್ಪ ಹಾಗೂ ಡಾ. ಚೆನ್ನವೀರ ಕಣವಿ ಅವರು ಕೂಡ ನವೋದಯದ ಪ್ರತಿಭಾಶಕ್ತಿಯನ್ನು ನವ್ಯದ ಕಾಲಮಾನದ ಸಾಣೆಗೆ ಉಜ್ಜಿ ತಮ್ಮ ಸತ್ವವನ್ನು ಥಳಥಳಿಸುವಂತೆ ಮಾಡಿಕೊಂಡರು. ನಿಸರ್ಗವನ್ನು ಆರಾಧಿಸಿ, ಅದರ ಅನುಭೂತಿ ದೊರಕಿಸಿಕೊಂಡು, ಬದಲಾಗುತ್ತಿದ್ದ ದೇಶಕಾಲದ ಸಂದರ್ಭದಲ್ಲಿ ವೈಚಾರಿಕತೆ ಹಾಗೂ ಸ್ವ ವಿಮರ್ಶೆಯ ಅಗ್ನಿಯಲ್ಲಿ ಅದು ಹಾದು ಬರುವಂತೆ ಮಾಡಿಕೊಂಡ ಜಿ.ಎಸ್.ಎಸ್. ಹಾಗೂ ಚೆನ್ನವೀರ ಕಣವಿ ಅವರು ಕುವೆಂಪು ಹಾಗೂ ಬೇಂದ್ರೆಯವರು ನಿರ್ಮಿಸಿಕೊಟ್ಟಂತಹ ಪರಂಪರೆಗೆ ಶಕ್ತ-ಧ್ವನಿಗಳಾಗಿ ಒದಗಿ ಬಂದರು.

ಕಲ್ಪನೆ, ಭಾವನೆ, ಮಾನವೀಯ ಸಂವೇದನೆಗಳಂತಹ ಮನುಷ್ಯನ ಭಾವಕೋಶದ ರೋಮ್ಯಾಂಟಿಕ್ ಕಾವ್ಯ ಕಲ್ಪನೆಗೆ ವಿರುದ್ಧವಾಗಿ ಹುಟ್ಟಿಕೊಂಡ ನವ್ಯ ಮನೋಧರ್ಮವು ಮೌಲ್ಯಗಳ ಅಧಃಪತನವನ್ನು ತೀಕ್ಷ್ಣವಾಗಿ ಟೀಕಿಸತೊಡಗಿತ್ತು. ಕಾವ್ಯಕರ್ಮವೆಂಬುದು ಅಗೆದೊಡನೆ ಸಿಕ್ಕುವ 'ಚಿನ್ನದದಿರು' ಅಲ್ಲವೆಂದು 'ಭೂತ' ಕವನದ ಮೂಲಕ ಅಡಿಗರು ಲೇವಡಿ ಮಾಡಿದ್ದರು. ಆರಂಭದಲ್ಲಿ ತನ್ನ ಪ್ರಖರತೆಯಿಂದ ನವೋದಯ ಕಾವ್ಯ ಸಂಪ್ರದಾಯದ, ಹೊಸ ಲೇಖಕರ ನಿದ್ದೆಗೆಡಿಸಿದ ನವ್ಯಕಾವ್ಯ ತನ್ನ ಮನೋಧರ್ಮದಲ್ಲಿ ಬಂದಿಲ್ಲದ ಕಾವ್ಯದ ಬಗ್ಗೆ ತಾತ್ಸಾರ ಭಾವನೆ ಬೆಳೆಸಿಕೊಂಡಿತು. ಕನಸುಗಳು ಕರಗಿದ ವಾಸ್ತವ ಬದುಕನ್ನು ತೆರೆದಿಡುವ ನವ್ಯಕಾವ್ಯದ ಆಶಯದಲ್ಲಿ ಯಾವುದೇ ದೋಷವಿರಲಾರದು. ಆದರೆ ನವ್ಯವೆನ್ನುವುದು ಬರಬರುತ್ತ ಒಂದು ಲೋಲುಪತೆಯಾಗಿ ಮನುಷ್ಯನ ಸಹಜ ಬದುಕನ್ನೆ ಧಿಕ್ಕರಿಸತೊಡಗಿತು. ಜೀವಸೃಷ್ಟಿಯ ವಿರುದ್ಧ ಮಾತನಾಡತೊಡಗಿತು. ಅಸ್ತಿತ್ವವಾದದ ಗುಂಗಿನಲ್ಲಿ ಸುರುಳಿ ಸುತ್ತಿಕೊಂಡು ಮಲಗಲಾರಂಭಿಸಿತು. 'ನಮ್ಮ ನೆಲದಲ್ಲಿ ಬೇರೂರಲಾಗದ ವಿದೇಶಿ ಸಸ್ಯವನ್ನು ಕುಂಡದಲ್ಲಿಡಬಹುದೇ ಹೊರತು ನೆಲಕ್ಕೆ ಹಾಕಲಾಗದೆಂದು'[೬] ಕುವೆಂಪುರವರು ಟಿ.ಎಸ್. ಎಲಿಯಟ್‌ನ 'ವೇಸ್ಟ್‌ಲ್ಯಾಂಡ್'ನ್ನು ಸಮರ್ಥಿಸುವ ರಿಚರ್ಡ್ಸ್‌ನನ್ನು ಕುರಿತು ಹೇಳಿರುವುದು ನವ್ಯದ ಮಿತಿಗಳನ್ನು ತೋರಿಸಿದಂತಾಗಿದೆ. ಆದರ್ಶಗಳು ಮುಗ್ಗರಿಸಿದ ಆಘಾತವನ್ನು, ವೈಚಾರಿಕತೆಯನ್ನು ನವ್ಯ ಬಿಂಬಿಸಿರಬಹುದಾದರೂ ಮನುಷ್ಯ ಹಾಗೂ ಸಾಮಾಜಿಕ ನೆಲೆಗಳ ಸಂಬಂಧಗಳನ್ನು ಅದು ಕಡೆಗಣಿಸಿದ್ದು, ಸೃಷ್ಟಿಶೀಲತೆ - ಸಹಜತೆ - ಕಲ್ಪಕತೆಗಳಂತಹ ಲಕ್ಷಣಗಳನ್ನು ಕೈಬಿಟ್ಟದ್ದು ನವ್ಯೋತ್ತರ ಹುಟ್ಟಲು ಕಾರಣವಾಯಿತು. ನವ್ಯದ ಪ್ರಮುಖರಾಗಿದ್ದ

ತೇಜಸ್ವಿ, ಲಂಕೇಶ್‌ರಂಥವರು 'ಹೊಸ ದಿಗಂತದ ಕಡೆಗೆ' ನಡೆಯುವಂತಾಯಿತು. ಪ್ರಕೃತಿಯ ಮನೋಧರ್ಮಕ್ಕೆ ಕವಿ ಕಿವಿಗೊಡಬೇಕೆಂಬ ಮಾತು ಕೇಳಿ ಬರತೊಡಗಿತು. ಹಾಗಾಗಿಯೇ ಕೆ.ಎಸ್. ನರಸಿಂಹಸ್ವಾಮಿ ಅವರು ಅಡಿಗರ 'ಭೂತ'ಕ್ಕೆ ಉತ್ತರವಾಗಿ 'ಕುಂಕುಮ ಭೂಮಿ' ಬರೆದರು. ಚಿಮ್ಮುವ ಜೀವಂತಿಕೆಯಿದ್ದಾಗ ಅಗೆಯುವ ಕೆಲಸವಾದರೂ ಯಾಕೆಂದು ಪ್ರಶ್ನಿಸಿದರು. ತಾವು ಆ ಮಾರ್ಗದಲ್ಲಿ ನಡೆದು ಹೋಗಿದ್ದರೂ ಈಗ ಹಿಂತಿರುಗಿ ನೋಡಿ ಅದನ್ನು ಪ್ರಶ್ನಿಸುವಂತಹ ಮನೋಭಾವವನ್ನು ಬೆಳೆಸಿಕೊಂಡರು. ಆ ಮೂಲಕ ಕೆ.ಎಸ್.ನ. ಅವರು ಭಿನ್ನ ತಾತ್ವಿಕ ನಿಲುವನ್ನು ಪ್ರಕಟಿಸಿದರೆಂದು ಡಾ. ಚಿಂತಾಮಣಿ ಕೊಡ್ಲೆಕೆರೆ ಪರಿಭಾವಿಸುತ್ತಾರೆ.

ಅಗೆದಾಗ ನಕ್ಕಿದ್ದು ನುಣುಪು ಕುಂಕುಮಭೂಮಿ
ಗುದ್ದಲಿಯ ಕೆಲಸ ಅಲ್ಲಿಗೆ ನಿಂತಿದೆ

ಗಣಿಗಾರನಿಗೆ 'ಮಣ್ಣಾ'ಗಿ ಕಂಡಿದ್ದು ಕೃಷಿಕನಿಗೆ 'ಕುಂಕುಮಭೂಮಿ'. ಅವನ ಬಾಳಿನ ಫಲ ಈ ಕುಂಕುಮಭೂಮಿಯಲ್ಲಿ ಹುಟ್ಟಿ ಬರಬೇಕಾದ್ದು. ಅಡಿಗರ ಕಾವ್ಯದ (ನವ್ಯ ಕಾವ್ಯದ) ಕವಿ ಚಿನ್ನದದಿರನ್ನು ಹೊರತೆಗೆದು, ಸುಟ್ಟು, ಸೋಸಿ, ಹೊನ್ನಕಾಯಿಸಿ, ಇಷ್ಟದೇವತೆ ನಿರ್ಮಿಸುವ, 'ಗುಡಿಗೋಪುರದ ಬಂಗಾರ ಶಿಖರ'ದ ಕುಶಲಕರ್ಮಿಯಾದರೆ, ಕೆ.ಎಸ್.ನ. ಕಾವ್ಯದಲ್ಲಿ ಅವನೊಬ್ಬ ಸಹಜ ಕೃಷಿಕ.'[೭೦]

ದೈವಿಕ ರೂಪವೆ ಆಗಿರುವಂತಹ 'ಮಧ್ಯರಾತ್ರಿ'ಯನ್ನು, 'ಉದಯ ಸೂರ್ಯ'ನನ್ನು, ಮುಗಿಲನ್ನು-ಸಿಡಿಲನ್ನು, ಬಯಲನ್ನು-ಬೆಟ್ಟವನ್ನು ಏಕೋಭಾವದಿಂದ ಉಪಾಸಿಸಿದ ಕೆ.ಎಸ್.ನ. ಅವರು ಬಿರುಗಾಳಿಯಿಂದ 'ದೀಪ'ವನ್ನು ರಕ್ಷಿಸಲು ಬಯಸುತ್ತಾರೆ. 'ಬೆಳಕು' ಆರದಿರಲೆಂದು ಪ್ರಾಣಶಕ್ತಿಯೇ ಆಗಿರುವ 'ಪ್ರಥಮ ರಾಜನಿಗೆ' ಮೊರೆಯಿಡುತ್ತಾರೆ.

೫.೭ ಪ್ರೇರಣಾದಾಯಕ ನಿಸರ್ಗ ಪರಂಪರೆಯಲ್ಲಿ ಕಿರಿಯ ಸಮಕಾಲೀನರು -

ಜಿ.ಎಸ್.ಎಸ್. ಹಾಗೂ ಚೆನ್ನವೀರ ಕಣವಿ :

ಕುವೆಂಪು ಹಾಗೂ ಬೇಂದ್ರೆಯವರು ಉತ್ತಿ, ಬಿತ್ತಿ, ಬೆಳೆದು ಬಣವಿ ಒಟ್ಟಿ ನಿಲ್ಲಿಸಿದ್ದ ಕಾವ್ಯ ಸಮೃದ್ಧಿಯ ಸುಗ್ಗಿಯಿಂದ ಪ್ರೇರಿತರಾಗಿ ಆ ಪರಂಪರೆಯ ಹೊಸ ಫಸಲಾಗಿ ಅಸಂಖ್ಯ ನಿಸರ್ಗ ಕವಿತೆಗಳನ್ನು ಡಾ. ಜಿ.ಎಸ್. ಶಿವರುದ್ರಪ್ಪ ಹಾಗೂ ಡಾ. ಚೆನ್ನವೀರ ಕಣವಿ ಅವರು ಬರೆದರು. ಈ ಪ್ರಬಂಧದ ವ್ಯಾಪ್ತಿ ಹಾಗೂ ಪರಿಮಿತಿಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ಕನ್ನಡ ನಿಸರ್ಗ ಕಾವ್ಯ ಪರಂಪರೆಗೆ ಅವರ ಕೊಡುಗೆಯನ್ನು ಕುರಿತು ಕೆಲವು ಮಾತುಗಳನ್ನಾದರೂ ಹೇಳುವುದು ಅನಿವಾರ್ಯವಾಗುತ್ತದೆ. ಪಂಪ, ಅಲ್ಲಮ, ಅಕ್ಕಮಹಾದೇವಿ, ಬಸವಣ್ಣ, ಹರಿಹರ, ಕುಮಾರವ್ಯಾಸ, ಲಕ್ಷ್ಮೀಶ, ಕುವೆಂಪು, ಬೇಂದ್ರೆ ಮುಂತಾದವರ ಕಾವ್ಯ ನದಿಗಳು ಬಂದು ಸೇರುವ ನಿಸರ್ಗದ

ಕಡಲಿಗೆ ಕಣವಿ ಹಾಗೂ ಶಿವರುದ್ರಪ್ಪ ಅವರ ಕಾವ್ಯವೂ ಸೇರುವುದು ; ಕಾವ್ಯ ಸಮುದ್ರದ ಆಳ-ಅಗಲಗಳನ್ನು ವಿಸ್ತರಿಸುವುದು ಕನ್ನಡ ಕಾವ್ಯ ಪಡೆದುಕೊಂಡಿರುವ ಜೀವಂತಿಕೆ ಹಾಗೂ ವೈವಿಧ್ಯತೆಗೆ ಸಾಕ್ಷಿಯಾಗಿದೆ.

ಸಮಕಾಲೀನತೆ ಹಾಗೂ ಪರಂಪರೆಯನ್ನು ಬೆರೆಸುವ ಕಲೆ ಜಿ.ಎಸ್.ಶಿವರುದ್ರಪ್ಪ ಅವರಿಗೆ ಗೊತ್ತಿರುವುದರಿಂದ ಬಯಲಿನ ಹಾಗೂ ನಗರದ ಬೆಳಗಿನ ನಡುವೆ ಅಂತರಗಳನ್ನು ಕಾಣಲು ಅವರಿಗೆ ಸಾಧ್ಯವಾಗುತ್ತದೆ. ಬೆಳಗಾಗಿ ಬಹಳ ಹೊತ್ತಾಗಿದ್ದರೂ ನಾಗರಿಕತೆಯ ರೇಡಿಯೋ ಧ್ವನಿಗೆ, ಮಾಲಿನ್ಯದ ಹೊಗೆಗೆ, ಬದುಕುಗಳು ಅಸ್ತವ್ಯಸ್ತವಾಗಿ ಬಿದ್ದಿರುವ ಸಂದಿಗೊಂದಿಗೆ ಇನ್ನೂ ಮಂಪರು ಹೋಗಿಯೆ ಇಲ್ಲ ಅನಿಸುತ್ತಿದೆ. ಗಿರಿಶಿಖರಗಳು ಸೂರ್ಯನ ಕಾಂತಿಗೆ ಪುಲಕಿತಗೊಳ್ಳುತ್ತಿದ್ದರೆ ಮನುಷ್ಯ ಕಟ್ಟಿರುವ ನಗರ ಕನಸಿನಿಂದ ಬಿಡಿಸಿಕೊಳ್ಳಲಾರದೆ ಮುದುರಿಕೊಂಡಿದೆ.

ಬೇಂದ್ರೆಯವರ 'ಬೆಳಗು' ಪದ್ಯಕ್ಕೆ ವೈದೃಶ್ಯವಾಗಿ ವಾಸ್ತವದ ಚಿತ್ರಣವನ್ನು ಜಿ.ಎಸ್.ಎಸ್. ಅವರ 'ನಗರದ ನಡುವೆ ಒಂದು ಬೆಳಗು' ಕೊಡುತ್ತದೆ.

ಸೂರ್ಯೋದಯವ ಕಂಡು ಪುಲಕಿಸಿತು ನಿಂದಿರುವ
ಹಿರಿಯಗಿರಿ! ಮಲಗಿಯೆ ಇತ್ತಿನ್ನು ಮನುನಗರಿ
ಕನಸುಗಳ ಚಿಂದಿಯಲಿ ತನ್ನ ಮೈ ಮುದುರಿ[೮೧]

ಆದರೆ ಚಿಂದಿಯಾದ ಬದುಕು 'ಒಂದು ಬೆಳಗು' ಕವಿತೆಯಲ್ಲಿ ಚೆಲುವಿಕೆಯ ಮುಂಜಾನೆಗೆ ಹೊಂದಿಕೊಳ್ಳುತ್ತದೆ. ಬೆಳಗೆಂಬುದು ಶಿವನ ಕಾರುಣ್ಯವಾಗಿ, ಹಕ್ಕಿಯ ಕೊರಲಿಗೆ ಗೆಜ್ಜೆಯಾಗಿ, ಚೆಲುವಿನ ಬುಟ್ಟಿ ಹಿಡಿದು ಹಾದಿಯಲ್ಲಿ ಹೊರಟಿರುವ ಹೂವುಗಳ ಕಂಪಾಗಿ ಕಾಣಿಸಿಕೊಳ್ಳುತ್ತದೆ.

ನೂರು ಬೆಳಕಿನ ಹೆಜ್ಜೆ ಹಕ್ಕಿಗೊರಳಿನ ಗೆಜ್ಜೆ-
ಯನು ಕಾಲ್ಗೆ ಕಟ್ಟಿ
ಹೂ ಹೂವಿನಂಗಡಿಯ ಕಂಪು ಮಳಿಗೆಯ ತಟ್ಟಿ
ಸಂಚಾರ ಹೊರಟವೋ ಕೈ ಕೈಯೊಳು ಹಿಡಿದು
ಚೆಲುವುಗಳ ಬುಟ್ಟಿ![೮೨]

ಅನಂತ ಕಾಲದಿಂದ ಭೂಮಿಗೆ ಚೈತನ್ಯವನ್ನು ಹರಿಸಿರುವ, ಜೀವಕ್ಕೆ ಸಂಜೀವಿನಿಯಾಗಿರುವ ಸೂರ್ಯ, ಚೈತನ್ಯದ ಪೂಜೆಗೆ ಮೂರ್ತಿಯಾಗಿದ್ದಾನೆ. ತುಂಬಿರುವ ಕತ್ತಲೆಯನ್ನು ಯಜ್ಞದೋಪಾದಿಯಲ್ಲಿ ಕರಗಿಸುವ, ಮಾನವನ ಹೃತ್ಕಮಲದಲ್ಲಿ ಆನಂದವನ್ನು ಹುದುಗಿಸಿಡುವ ಬಾನಸೂರ್ಯ ಜಗತ್ತಿನ ಭವ್ಯ ಆತ್ಮವಾಗಿ ಒಡಮೂಡಲೆಂದು ಕವಿ ಅಪೇಕ್ಷಿಸುತ್ತಾರೆ:

ಹೋಮ ಧೂಮದ ತೆರದಿ ಕಾವಳಂ ಮುಸುಕಿರಲು
ಚೈತನ್ಯ ಚಿನ್ಮಯನೆ ಮೂಡಿ ಬಾರಾ
ಯುಗಯುಗಾಂತರದೆದೆಯ ಚೆಲುವಿಕೆಯ ಚೇತನವೆ
ಯುಗಯುಗದ ಜೀವನದ ನಿತ್ಯ ಸಂಜೀವಿನಿಯೆ
ಬಹುಕರ್ಮಮಯ ಜಗದ ಚಿರಜೀವಲೋಚನವೆ ಮೂಡಿ ಬಾರಾ[೭೩]

ಅಂಧಕಾರವನ್ನು ನೀಗುವ ಯಜ್ಞ ನಿತ್ಯವೂ ನಡೆದು ರವಿ ಜೀವಕಾಂತಿಯನ್ನು ಚೆಲ್ಲುತ್ತಾನೆ.

'ಬಾ ಫಾಲ್ಗುಣ ರವಿದರ್ಶನಕೆ' ಎನ್ನುವ ತಮ್ಮ ಕವಿತೆಯಲ್ಲಿ ಕುವೆಂಪು ಬೆಳಗಿನ ಕರೆಗೆ ಕವಿ ಮನಸ್ಸು ಪ್ರತಿಭೆಯ ಹೋಮಾಗ್ನಿಯಿಂದೆದ್ದು ಬರುತ್ತದೆಯೆನ್ನುತ್ತಾರೆ. ಕೆಡುಕು ದೂರ ಸರಿಯಲಿಕ್ಕೆ ಅಗ್ನಿದಿವ್ಯದಲ್ಲಿ ಉರಿದುರಿದು ಬರಬೇಕು.

'ಪ್ರತಿಭೆಯ ಹೋಮಾಗ್ನಿಯ ಮೇಲೆ ಕವಿಮನ ತಾನುರಿದುರಿದೇಳೆ
ಮರಗಿಡದಲಿ ಜಡದೊಡಲಲಿ ಇದೆಕೋ ಸ್ಪಂದಿಸುತಿದೆ ಭಾವಜ್ವಾಲೆ!'[೭೪]

ಅಂತಹ ಭಾವದೀಪ್ತಿಯನ್ನು ಜಿ.ಎಸ್.ಶಿವರುದ್ರಪ್ಪ ಹಚ್ಚಿಡುತ್ತಾರೆ. ಮನಸ್ಸಿನ ಕತ್ತಲು ಓಡಿಸಲಿಕ್ಕೆ 'ಉದಯಾಸ್ತಮಾನಗಳಿಲ್ಲದ' ಸೂರ್ಯನೊಬ್ಬ ಯಾವಾಗಲೂ ಪ್ರಜ್ವಲವಾದ ಬೆಳಕನ್ನು ಸುರಿಯುತ್ತಲೆ ಇರುತ್ತಾನೆಂದು 'ಕತ್ತಲೆ ಬೆಳಕು' ಎನ್ನುವ ಪದ್ಯದಲ್ಲಿ ಚೆನ್ನವೀರ ಕಣವಿ ಚಿತ್ರಿಸುವ ಮೂಲಕ ನಿಸರ್ಗದ ಪ್ರತಿಮೆಗಳಿಂದ ಅಲೌಕಿಕ ಅನುಭವದ ದರ್ಶನ ನೀಡುತ್ತಾರೆ:

ಈ ಮನಸ್ಸಿನೊಳಗೊಬ್ಬ ಸೂರ್ಯ ಸುತ್ತಲೂ ಕಿರಣ
ತೂರಿಹನು. ಇಲ್ಲ ಉದಯಾಸ್ತಮನಗಳವಗೆ
ಹೃದಯ ಕಮಲದಿ ಸದಾ ನಿಗಿನಿಗಿ ಕೆಂಡ ಸುರಿವ
ಕೆಂಡವರಳಿದ ಹೂವು, ಮುಡಿದು ನಿಂತಿದೆ ಹರಣ
ನೂರು ಗುಹೆಗಳ ಹೊಕ್ಕು ಹುಡುಕುತಿವೆ ಸಾವಿರದ ಕಿರಣ[೭೫]

ಆಸತ್ತು ಬೇಸತ್ತು ಶಾಂತಿ ಬಯಸಿದಾಗ ಪ್ರಕೃತಿ ಮಾತೆಯ ಮಡಿಲು ಬಿಟ್ಟು ಬೇರೆ ಯಾವ ಆಸರೆಯೂ ಇಲ್ಲವೆಂದು ಕವಿಗೆ ತಿಳಿದಿದೆ. ತಿದ್ದಿ ತೀಡಿದ, ನಿದ್ದೆ ತಿಳಿದ ಮುಂಜಾವಿನ ಎಲರು ಅನುಭಾವದ ಸ್ಪರ್ಶವನ್ನು ಸೋಂಕಿಸಿದೆ. ವಿವಿಧ ಗಿಡ ಮರಗಳ ಹಾಡು ಹಕ್ಕಿಗಳ ಸೊಗಸು ಯಾವುದೋ ಭಾವನೆಯನ್ನು ತಂದು ಚೆಲ್ಲುತ್ತಿದೆ.

ಸುವ್ವಿ ಬಾ ಚೆನ್ನಯ್ಯ ಸುವ್ವಿ ಬಾ ಲಿಂಗಯ್ಯ
ಸುವ್ವಿ ಬಾ ಎನ್ನುತ್ತ ಸಾರುವಯ್ಯ

ಇರುಳಿನಲಿ ಕಂದೀಲ ಬೆಳಕಿನಲಿ ಬರುವಂತೆ

ಬಾಲ್ಯದನುಭವ ಮರಳಿ ಕರೆವುದಯ್ಯ[೭೬]

ಬಾಲ್ಯವನ್ನು ಸಂಪೂರ್ಣ ತುಂಬಿಕೊಂಡಿರುವ ಪ್ರಕೃತಿಯ ಒಡನಾಟ ಮುಂದಿನ ಬದುಕಿಗೆ ಭಾಷ್ಯ ಬರೆಯುತ್ತದೆ. ನಿಸರ್ಗದ ಆರಾಧನೆ ಮನುಷ್ಯನಿಗೆ ಒದಗಿಬಂದಿರುವ ಸುವರ್ಣ ಅವಕಾಶವೆ ಹೊರತು ಸುವರ್ಣ ಸುರಿದು ಚೆಲುವಿಕೆ- ಸೌಂದರ್ಯವನ್ನು ಕೊಂಡುಕೊಳ್ಳಲಾಗುವುದಿಲ್ಲ.

ಹೊನ್ನ ರಾಶಿಯ ಸುರಿದು ಕೊಂಡುಕೊಳ್ಳಲುಬಹುದೆ?

ಚೆಲುವಿಕೆಯು ತಾನಲ್ಲ ಪಣ್ಯವಸ್ತು;

ದೇವ ದೇವನ ತೇಜದೋಜೆ ಪೂಜೆಗೆ ಸಂದು

ಸೃಷ್ಟಿಯಲಿ ವೈದೋರೆ ನುಡಿ 'ನಮೋಸ್ತು'[೭೭]

ಹೀಗೆ ಚೆನ್ನವೀರ ಕಣವಿಯವರು ನಿಸರ್ಗದ ಚೆಲುವಿಕೆಯನ್ನು ಆಸ್ವಾದಿಸುವಲ್ಲಿ, ಅಭಿವ್ಯಕ್ತಿಸುವಲ್ಲಿ ತಮ್ಮ ಅನನ್ಯತೆ ತೋರುತ್ತಾರೆ. ಒಂದು ತಪಸ್ಸಿನಂತೆ ಅದರ ಆರಾಧನೆ ನಡೆದಿದೆ. ಅದನ್ನು ಸೃಷ್ಟಿಸಿದ 'ಕಲಾವಿದ'ನಿಗೆ ಕವಿ ಕೈ ಮುಗಿಯುತ್ತಾನೆ:

ಗಿಡದಿಂದುರುವ ಎಲೆಗಳಿಗೂ ಮುದ-

ಚಿಗುರುವಾಗಲೂ ಒಂದೆ ಹದ

ನೆಲದ ಒಡಲಿನೊಳಗೇನು ನಡೆವುದೋ

ಎಲ್ಲಿ ಕುಳಿತಹನೋ ಕಲಾವಿದ[೭೮]

ಚೆಲುವಿಕೆಯ, ಪ್ರಾಣದುಸಿರಿನ, ಸೃಜನಶೀಲತೆಯ ಸೃಷ್ಟಿಯ ಹಿಂದಿನ ಚೈತನ್ಯವನ್ನು ಕವಿ ತೋರಗೊಡುತ್ತಾರೆ. ಬೇಂದ್ರೆ, ಮಧುರಚೆನ್ನರು ಹಂಬಲಿಸಿದ ಅರವಿಂದರ ಬೆಳಕಿಗೆ ಕಣವಿಯವರೂ ತುಡಿದಿರುವುದು ಅಲ್ಲಲ್ಲಿ ಕಾಣಿಸಿಕೊಳ್ಳುತ್ತದೆ.

ಜೀವನ ಸರೋವರದಿ ದೈವತ್ವದರವಿಂದ -

ವರಳಿಸಿದ ದಿವ್ಯ ಜೀವನದಮರ ದಾರ್ಶನಿಕ[೭೯]

ಪ್ರಕೃತಿಯೊಡನೆ ಕಣವಿಯವರು ನಡೆಸುವ ಮಾತುಕತೆಯಲ್ಲಿ ಪ್ರಕೃತಿ ಬರೀ ಸ್ಫೂರ್ತಿಯ ಸೆಲೆಯಾಗಿರದೆ ಅಖಂಡ ಜೀವನಾನುಭವದ ಅನುಭೂತಿ ಅಡಗಿರುವುದನ್ನು ಸಹೃದಯನು ಕಂಡುಕೊಳ್ಳಬಹುದು. ಸಾಮಾಜಿಕ ಬದುಕಿನ ಪಲ್ಲಟಗಳಿಗೆ ಮನುಷ್ಯ ಘಾಸಿಗೊಂಡಾಗ ಆತ ಮತ್ತೆ ಮತ್ತೆ ಪ್ರಕೃತಿಗೆ ಮರಳುತ್ತಾನೆ. ಚೆನ್ನವೀರ ಕಣವಿ ಅವರು ತಮ್ಮ 'ಭಾವಜೀವಿ' ಎನ್ನುವ ದೀರ್ಘ ಕವನದಲ್ಲಿ ಅದನ್ನು ತುಂಬ ಅದ್ಭುತವಾಗಿ ಸಾಧಿಸುತ್ತಾರೆ.

ಬಣ್ಣ ಬಣ್ಣದೊಳಿಂತು ಸಂಜೆ ರಂಜಿಸುತಿರಲು
ಬಂಜೆ ಮೆದುಳಿಗು ಬಣ್ಣವೇರುತಿಹದು;
ಸಂತೆ ಗದ್ದಲದಲ್ಲಿ ಬಳಲಿ ಬೆಂಡಾಗಿರುವ
ಮನವು ರಸಸೇಚನೆಯ ಪಡೆಯುತಿಹುದು

ನಾನು ಹುಟ್ಟಿದ ಹಳ್ಳಿ ತೊರೆದು ಬೇರೂರಲ್ಲಿ
ನೆಲಸುವಾ ಸಮಯಬರೆ ಸೋತು ಹೋದೆ,
ಆ ಗೆಳೆಯರಾ ಎಳೆಯರಾ ನೋಟವಾ ಕೂಟ
ನೆನೆದು ಕಣ್ಣೀರ್ಮಿಡಿದು ಖಿನ್ನನಾದೆ[೮೦]

ಬೇಂದ್ರೆಯವರ ಬಾಲ್ಯದಲ್ಲಿ ರೊಂಯ್ ಬಿಲ್ಲಪಟ, ರವದಿ, ಗಾಳಿಪಟ, ತಿಪ್ಪೆಯಲ್ಲಿ ಹುಟ್ಟಿರುವ ಮಾವಿನ ಪೀಪಿ ಹಾಗೂ ಭಂವ್ ಎಂದು ತಿರುಗುತ್ತಿರುವ ಬುಗುರಿ ಮುಂತಾದ ಮಕ್ಕಳ ಆಟಿಕೆಯ ವಸ್ತುಗಳು ಅಚ್ಚಳಿಯದೆ ಕೆತ್ತಲ್ಪಟ್ಟವು. ಭಂವ್ ಎಂದು ಜೋರಾಗಿ ಬುಗುರಿ ತಿರುಗುತ್ತಿದ್ದರೂ ಒಮ್ಮೆಲೆ ನೋಡಿದಾಗ ಅದು ಸುಮ್ಮನೆ ಇದ್ದಂತೆ ಕಾಣುತ್ತದೆ. ಬುಗುರಿ ತಿರುಗುತ್ತಿದ್ದರೂ ತಿರುಗದಂತೆ ತೋರುತ್ತದೆ. ಗಾಢನಿದ್ದೆಯಲ್ಲಿ ಬುಗುರಿ ತನ್ಮಯವಾಗುವಂತೆ ನಮ್ಮ ಅನುಭವ ಗಟ್ಟಿಗೊಳ್ಳಬೇಕು ಎಂದು ಬೇಂದ್ರೆ ತಿಳಿದಿದ್ದರು.

ಕಣವಿಯವರಿಗೂ ಕೂಡ ಬಾಲ್ಯದ ಆಟಗಳು ಜೀವನದ ಪಾಠಗಳಾಗಿ ನಿಲ್ಲುತ್ತವೆ. ಬಾಲ್ಯದ ಮಧುರ ನೆನವುಗಳು ಎಲ್ಲ ಕಹಿಯನ್ನು ಮರೆಸಬಲ್ಲ ಶಕ್ತಿ ಹೊಂದಿವೆ :

ನಮ್ಮೂರ ಗುಡ್ಡದೋರೆಯ ಬದಿಯ ಕಿರುಹಳ್ಳ
ಸುವಿಶಾಲ ಆಲ, ಎಲೆವಳ್ಳಿ ತೋಟ
ಈಶ್ವರನ ಗುಡಿ, ಕಲ್ಲುಕಟ್ಟೆ, ಮಾದರ ಕೇರಿ
ಕೆಮ್ಮರಡಿ, ಏನೆಲ್ಲ ಎಂಥ ನೋಟ!

ಗುಂಡು ಗಜಗವನಾಡೆ, ಚಿಣ್ಣಿಕೋಲನು ತೂರೆ
ಮನೆಯವರ ಕಣ್ಮರೆಸಿ ಓಡಾಟವು;
ಬೆಲ್ಲವತ್ತದ ಕಾಯ ಬುಗುರಿಯಲಿ ಜಾಳಿಗೆಯ
ಸುತ್ತಿ ಬಿಚ್ಚಲು ನಾದ ಭೋಂಕಾರವು[೮೧]

ನಿಸರ್ಗದ ಬಯಲಿನಲ್ಲಿ ಗೆಳೆಯರ ಜೊತೆ ಗುಂಡು ಗಜಗವನ್ನಾಡುತ್ತ ; ತಿರುಗುವ ಬುಗುರಿಯ ನಾದದ ಭೋಂಕಾರಕ್ಕೆ ಮೈ ಮರೆಯುತ್ತ ; ಹೊಡೆ ಹಾಯ್ದು ಜೋಳದ ಪೈರು, ಅಕ್ಕಡಿ ಬಳ್ಳಿ, ಬನ್ನಿ ಗಿಡ, ತತ್ರಾಣಿಯೊಳಗಿನ

ತಣ್ಣಗಿನ ನೀರು ಮುಂತಾದ ಜೀವಸಾಮೀಪ್ಯದ ಸಂಗತಿಗಳಿಗೆ ಮನಸ್ಸನ್ನು ಅರಳಿಸಿಕೊಳ್ಳುತ್ತ; ಟಂಟಣ್ ಎನ್ನುತ್ತಿರುವ ಎತ್ತುಗಳ ಕೊರಳ ಗೆಜ್ಜೆಯ ಸರದ ನಾದ ಹಾಗೂ ಬಾನು ಬಯಲುಗಳು ಕಿವಿಗೊಟ್ಟು ಕೇಳುತಿರುವ ಲಾವಣಿ ಹಾಡಿನ ಅಪ್ರತಿಮ ಘಳಿಗೆಗಳನ್ನು ಹಿಡಿದಿಡುತ್ತ ಚೆನ್ನವೀರ ಕಣವಿಯವರು ಬೇಂದ್ರೆಯವರ ಮುಂದುವರಿಕೆಯಾಗಿ ನಿಸರ್ಗದಲ್ಲಿ ಮುಳುಗೆದ್ದ ಕವಿಯಾಗಿದ್ದಾರೆ: ಅದು ಅವರ ಮೊದಲಿನ ಕವಿತೆಗಳಿಗಷ್ಟೆ ಸೀಮಿತವಾಗಿರದೆ ಇಡೀ ಕಾವ್ಯ ಬದುಕಿನ ಜೊತೆಗೆ ಸಂಬಂಧದ ಎಳೆಗಳನ್ನು ನೂತಿದೆ. 'ಭಾವಜೀವಿ'ಯಲ್ಲಿ 'ಧಾರವಾಡದ ವಿಶಿಷ್ಟವಾದ ಪ್ರಕೃತಿಯ ಸೌಂದರ್ಯದ ಚೆಲುವಾದ ವರ್ಣನೆ ಇದೆ. ಈ ಸೌಂದರ್ಯ ಕವಿಯ ಮೇಲೆ ಬೀರಿದ ಪ್ರಭಾವ ಅತ್ಯಂತ ಸೃಜನಶೀಲವಾಗಿದೆ ಎಂಬುದಕ್ಕೆ ಮುಂದೆ ಬರೆದ ಕವಿತೆಗಳೆಲ್ಲ ಸಾಕ್ಷಿಯಾಗಿವೆ.'[೨೨]

ಬೇಂದ್ರೆ ಹಾಗೂ ಧಾರವಾಡದ ನಡುವಿನ ನಂಟು ಹೊಕ್ಕಳು ಬಳ್ಳಿಯಂತಹ ಅವಿನಾಶವಾದ ಸಂಬಂಧವನ್ನು ಪಡೆದಿರುವಂತೆಯೇ ಕಣವಿ ಹಾಗೂ ಧಾರವಾಡದ ಸಂಬಂಧ ಕೂಡ ಅಮರವಾದದ್ದು. ಎಚ್.ಎಸ್. ವೆಂಕಟೇಶಮೂರ್ತಿಯವರು ಕಣವಿಯವರ ಧಾರವಾಡದ ನಂಟನ್ನು ಕುರಿತು ಹೇಳಿರುವುದು ತುಂಬ ಸಮಂಜಸವಾಗಿದೆ. ಒಬ್ಬಾಳಿನ ಹಿರಿಮೆಯನ್ನು ಕವಿ ಕಂಡುಕೊಂಡಿದ್ದಾರೆ. ನಿಧಾನವಾಗಿ ಅದೇ ಅವರ ಜೀವನ ದರ್ಶನವೂ ಆಗಿ ರೂಪುಗೊಳ್ಳುತ್ತಿದೆ.

ದುಃಖ ದುಗುಡಗಳನ್ನು ಮಿಕ್ಕು ಮೀರಲುಬಹುದು
ದರ್ಪಸರ್ಪದ ವಿಷಯ ಹಿಳಿಯಬಹುದು
ಬಂಧು ಭಾವದೊಳಿಂತು ಒಂದುಗೂಡುತ ಬಾಳ
ಆನಂದದರಮನೆಯ ಗೈಯಬಹುದು

ಮನಸ್ಸಿನ ಒಂದು ಶಮಸ್ಥಿತಿಯಲ್ಲಿ ಧಾರವಾಡದ ನೆಲ ಅವರಿಗೆ ತಾಯಿಯ ಪ್ರೀತಿಯನ್ನು ಒದಗಿಸುತ್ತಿರುವ ಅನುಭೂತಿ ಉಂಟಾಗುತ್ತಿದೆ. ಹಳ್ಳಿಯಿಂದ ಈ ಧಾರವಾಡಕ್ಕೆ ಬರುವಾಗಿದ್ದ ಅತಂತ್ರ ಸ್ಥಿತಿ ಈಗ ಮಾಯವಾಗಿದೆ. ಧಾರವಾಡದ ಪ್ರಕೃತಿ ಮತ್ತು ಸಮಾಜ ಅವರಿಗೆ ಪ್ರಿಯವಾಗುತ್ತದೆ.'[೨೩] ಬೇಂದ್ರೆಯವರಿಗೆ ಧಾರವಾಡದ ನೆಲ ನೀರುಣಿಸಿದಂತೆ, ಕಣವಿಯವರಿಗೂ ಶಾಲ್ಮಲೆ ಕಾವ್ಯತೃಷೆ ನೀಗಿದ್ದಾಳೆ.

ಹಳ್ಳಿಯನ್ನು ಬಿಟ್ಟು ನಗರಕ್ಕೆ ಬಂದಾಗ ಹಳ್ಳಿಯ ಕಡೆಗೆ ಜಗ್ಗುತ್ತಿದ್ದ ನಿಸರ್ಗದ ಒಲವು ಈಗ ನಗರ ಹಾಗೂ ಅದರ ಸುತ್ತಮುತ್ತಲಲ್ಲಿಯೇ ಪ್ರಕೃತಿಯ ಆಳ ಅನುಭವಕ್ಕೆ ಸಿಲುಕಿ ಸಮಾಧಾನಗೊಂಡಿದೆ. ಇಂಗ್ಲೀಷ್ ರೋಮ್ಯಾಂಟಿಕ್ ಕವಿಗಳ ಕಾವ್ಯ ಮಜಲನ್ನು ದಾಟಿ ಕಣವಿಯವರು ಮುಂದೆ ಹೋಗುತ್ತಾರೆ.

ನವೋದಯದ ಆದರ್ಶ ಹಾಗೂ ಕನಸಗಳ ಲೋಕವನ್ನು ವಾಸ್ತವದ ಎಚ್ಚರದೊಂದಿಗೆ ಮುಂದುವರೆಸುವ ಪ್ರಯತ್ನ ಶಿವರುದ್ರಪ್ಪ ಹಾಗೂ ಕಣವಿ ಅವರ ಕಾವ್ಯದಲ್ಲಿ ಕಾಣಬಹುದು. ಮನುಷ್ಯನ ನಾಗರಿಕತೆ ಹಾಗೂ ನಿಸರ್ಗದ

ನಡುವೆ ಹಬ್ಬಿರುವ ಕಂದಕ ಈ ಕವಿಗಳಲ್ಲಿ ತಲ್ಲಣದ ಕ್ಷಣಗಳನ್ನು ಹುಟ್ಟಿಸಿವೆ. ಒಡೆಯರ ದನಗಳನ್ನು ಮೇಯಿಸಲು ಕಾಡಿಗೆ ಬರುವ ದನಗಾಯಿ ಹುಡುಗ. ದನಕರುಗಳು ತಿರುಗಿ ಬರದೆ ದುಃಖಿತನಾಗಿ ಕಾಡಿನ ಕತ್ತಲಲ್ಲಿ ಕುಳಿತಿರುವುದನ್ನು ಚಿತ್ರಿಸುವ 'ಕಾಡಿನ ಕತ್ತಲಲ್ಲಿ' ಎನ್ನುವ ಶಿವರುದ್ರಪ್ಪನವರ ಕವಿತೆ ಅನಾಗರಿಕ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಮುಗ್ಧ ಹುಡುಗನಿಗೆ ತನ್ನ ಧಣಿಯ ರೋಷದ ಮುಂದೆ ಕಾಡಿನ ರೋಷ ದೊಡ್ಡದೆನಿಸುವುದಿಲ್ಲ. ಒಡೆಯ ತನ್ನನ್ನು ಪೊರೆಯಲಾರ. ಆದರೆ ಭೀಷಣವೆನ್ನಿಸುವ 'ಜೀರುಂಡೆಗಳ ಮೊರೆತ'ದ, 'ಗಿಜಿ ಗಿಜಿ' ಕಾಡು ಹುಡುಗನಿಗೆ ಸುರಕ್ಷಿತವೆನ್ನಿಸಿದೆ :

ಸುತ್ತ ಕತ್ತಲ ಕಾಡು ; ಆ ಬಗ್ಗೆ
ಭಯವಿಲ್ಲ ಇವನಿಗೆ.
ತಪ್ಪಿಸಿಕೊಂಡ ದನ ಬಾರದ್ದಕ್ಕೆ
ತನಗೆ ಬೀಳುವೇಟಿನ ಭಯಕ್ಕೆ
ಸದ್ದಿರದೇ ಕೂತಿದ್ದಾನೆ[೮೪]

ದನಗಳು ಮರಳದೆ ಹುಡುಗ ಮರಳುವಂತಿಲ್ಲ. ಅಕಸ್ಮಾತ್ ಮರಳಿದರೆ ಧಣಿಗಳ ಹೊಡೆತ ತಪ್ಪಲಾರದು. ಅಂತಹ ಉದ್ವೇಗದ ನಡುವೆ ತನ್ನ ಸುತ್ತಲೂ ಹಬ್ಬುತ್ತಿರುವ ಕಾಡಿನ ಕತ್ತಲೆಗೆ ಬಾಲಕ ಕಂಗಾಲಾಗುತ್ತಾನೆ. ಭಯಂಕರವಾಗಿ ಕಾಣುವ ರಾತ್ರಿಯ ಕಾಡು ಮತ್ತು ಕೈಯಲ್ಲಿ ಚಾವಟಿ ಹಿಡಿದು ಕತ್ತಲೆಗೆ ಕೆಂಗಣ್ಣು ಹಾಯಿಸುತ್ತ, 'ಕಡ್ಡಿ ಕಾಲಿನ, ಜೋಲು ಮೋರೆಯ' ಹುಡುಗನನ್ನು ಹುಡುಕುತ್ತಿರುವ ದರ್ಪದ ಧಣಿ ಅಸಹಾಯಕ ಸ್ಥಿತಿಯಲ್ಲಿರುವವನನ್ನು ಕಾಡುವ ಸಂಗತಿಗಳಾಗಿವೆ. ಪ್ರಕೃತಿಯ ಭೀಷಣವನ್ನು ಮೀರಿಸಬಲ್ಲ ಅಟ್ಟಹಾಸ ಮನುಷ್ಯನ ಎದೆಯಲ್ಲಿ ಅಡಗಿರುವುದನ್ನು ಜಿ.ಎಸ್. ಶಿವರುದ್ರಪ್ಪ ನಿರ್ಲಿಪ್ತವಾಗಿ ನಿರೂಪಿಸುತ್ತಾರೆ.

ಅತಿಯಾದ ಮಳೆ-ಗಾಳಿ-ಜ್ವಾಲಾಮುಖಿ-ಭೂಕಂಪ ಮುಂತಾದ ಪ್ರಕೃತಿಯ ವೈಪರೀತ್ಯಗಳಿಗೆ ಮನುಷ್ಯನ ಸುಲಿಗೆ ಪ್ರವೃತ್ತಿಯೆ ಮೂಲ ಕಾರಣವಾಗಿದೆಯೆಂಬುದನ್ನು; ನಿಸರ್ಗದ ಅನಂತತೆಯ ನಡುವೆ ಮನುಷ್ಯನ ಬದುಕು ಸರಿದು ಹೋಗುವ ಪುಟದಂತೆಂಬುದನ್ನು ಜಿ.ಎಸ್.ಎಸ್. ಅವರು ಚಿತ್ರಿಸುತ್ತಾರೆ. ಬೇಂದ್ರೆಯವರ 'ಮೊದಲಗಿತ್ತಿ', 'ಚಿಗರಿಗಂಗಳ ಚೆಲುವಿ'; 'ಭೂಮಿತಾಯಿಯ ಚೊಚ್ಚಿಲ ಮಗ' ಮುಂತಾದ ಪದ್ಯಗಳಲ್ಲಿ ಪ್ರಕೃತಿ ವಿರೋಧಿಯಾದ ಮನುಷ್ಯನ ಲಾಲನೆಯನ್ನು ಕಾಣಬಹುದು. ಅದರಂತೆ ಜಿ.ಎಸ್.ಎಸ್. ಕೂಡ ವರ್ತಮಾನದ ವಿನಾಶದ ತಲ್ಲಣಗಳನ್ನು ಪ್ರಕೃತಿಯ ಪ್ರತಿಮೆಗಳ ಮೂಲಕ ಹೊರಹಾಕುತ್ತಾರೆ.

ಅರಳಿ ನಗುವ ಹೂ ಹೂಗಳ ಹಿಂದೆಯೆ
ಕುಡುಗೋಲಿನ ನೆರಳು[೮೫]

......ಸುಪ್ತ ಜ್ವಾಲಾಮುಖಿಯ
ಹುತ್ತದಿಂದೆದ್ದು ಕರ್ಬೊಗೆಯ ಕಾಳಿಂಗ
ಕಿಡಿಕಾರಿ ಭುಸುಗುಟ್ಟುತಿವೆ ; ಇದ್ದ ದ್ವೀಪ-
ಗಳೆಲ್ಲವೂ ತಳಕಂಡು, ಹೊಸ ಭೂಕಂಡ-
ವೆದ್ದು ಕುಳಿತಿವೆ ಪೆಡಂಭೂತಗಳಂತೆ!
ಗರಿಗೆದರಿ ನಿಂತ ತೆಂಗಿನ ತೀರ ರೆಕ್ಕೆಮುರಿ-
ದರಚುತಿದೆ ಅಲೆಯ ಹೆಡೆ ಬಡಿತಕ್ಕೆ[೮೬]

* * *

ನಿನ್ನ ನೀಲಜಲದೆದೆಯ ಮೇಲುಗಡೆ ಕೋಟಿ ನಾವೆ ತೇಲಿ
ಹೋಗುತಿಹವು ಕಾಣ್ ತೆರೆಗಳಗ್ರದಲಿ ತೃಣಗಳನ್ನು ಹೋಲಿ!
ಒಮ್ಮೆ ನಿನ್ನ ತೆರೆ ಎತ್ತಿ ಎಸೆಯಿತೋ, ಮುಗಿಯಿತದರ ಪಾಡು
ಮನುಜ ಸಾಹಸದ ಕಿಡಿಗಳಂತೆ ಅವು ತೇಲುತಿಹವು ನೋಡು[೮೭]

ವಿಶಾಲ ಪ್ರಕೃತಿಯ ನಡುವೆ ಮನುಷ್ಯ ಚಿಕ್ಕ ಕಣವಾಗಿದ್ದರೂ ಆತ ತೋರುವ ಸಾಹಸ, ಸಾಧಿಸುವ ಮಹತ್ತು ಕವಿಯ ಬೆರಗಿಗೆ ಕಾರಣವಾಗುತ್ತವೆ. ನಿಸರ್ಗದೊಡನೆ ತಾದಾತ್ಮ್ಯತೆ ಸಾಧಿಸಿದರೆ ಮನುಷ್ಯ ಏನೆಲ್ಲ ಸಾಧಿಸಬಲ್ಲ ಎಂದು ಜಿ.ಎಸ್.ಎಸ್. ವಿಸ್ಮಯಗೊಳ್ಳುತ್ತಾರೆ. ಅಂತಹ ನಿಸರ್ಗ ಪ್ರೀತಿ ಅವರಿಗೆ ನವೋದಯ ಕಾವ್ಯ ಪರಂಪರೆಯಿಂದ ಬಂದಿರುವಂತಹದು. ಬೇಂದ್ರೆ, ಕುವೆಂಪು, ಮಧುರಚೆನ್ನ ಮುಂತಾದ ಆಧುನಿಕ ಕವಿಗಳು ಕಟ್ಟಿದ ನಿಸರ್ಗದ ಸೇತುಬಂಧ ಕಣವಿ-ಜಿ.ಎಸ್.ಎಸ್.ರಂಥವರ ನಾವೀನ್ಯಪೂರ್ಣ ಪ್ರಯೋಗಗಳಿಂದ ಮತ್ತಷ್ಟು ಬಂಧುರವಾದುದರಲ್ಲಿ, ಮತ್ತಷ್ಟು ಸತ್ವ-ಸೌಂದರ್ಯಗಳಿಂದ ಕಂಗೊಳಿಸುವಂತಾದುದರಲ್ಲಿ, ವಾಸ್ತವಿಕವಾದುದರಲ್ಲಿ ಉತ್ಪ್ರೇಕ್ಷೆಯಿರಲಾರದು.

ನಿಸರ್ಗದೊಂದಿಗೆ ಮನುಷ್ಯ ಹೊಂದಿರುವ ಸಂಬಂಧಗಳ ಸರಪಳಿಯನ್ನು ಕತ್ತರಿಸದೆ ಪರಂಪರೆಯ ಮರ ಯಾವಾಗಲೂ ಚಿಗುರುತ್ತಿರುವಂತೆ ನೋಡಿಕೊಳ್ಳಬೇಕೆಂಬ ಮನೋಭಾವ ಕಣವಿ, ಜಿ.ಎಸ್.ಎಸ್.ರಲ್ಲಿ ಇರುವುದನ್ನು ಕಾಣಬಹುದು. ಪ್ರಕೃತಿ ಭವಿಷ್ಯಕ್ಕೂ ಇರಬೇಕೆಂಬ ಎಚ್ಚರಿಕೆ ಅವರಲ್ಲಿದೆ. ಕಣವಿ ಹೇಳುತ್ತಾರೆ ;

ಕಾಯಲಾರದ ಮನುಷ್ಯ ಕೊಡಲಿಯೆತ್ತುತ್ತಾನೆ
ಮಾಯಲಾರದ ಗಾಯ ಭವಿಷ್ಯಕ್ಕೆ[೮೮]

ಅನುಮಾನ ಹಾಗೂ ಸಂಶಯದ ಹುತ್ತಗಳನ್ನು ಹೊಡೆದುಹಾಕಿ ಪ್ರಾಮಾಣಿಕತೆ ಹಾಗೂ ಹೃದಯ ನೈರ್ಮಲ್ಯಗಳನ್ನು ಕಟ್ಟುವ ಕಡೆಗೆ ಅವರು ಸಾಗುತ್ತಾರೆ. ಜಿ.ಎಸ್.ಶಿವರುದ್ರಪ್ಪ ಅವರು ಕೂಡ ತಾಮಸವಿಲ್ಲದ 'ಪ್ರಕೃತಿ ಪೂಜೆ'ಗೆ ಮನುಷ್ಯನನ್ನು ಅಣಿಗೊಳಿಸುತ್ತಾರೆ ;

ಪ್ರಕೃತಿ ಪೂಜೆಗೆ ಬನ್ನಿರೆಲ್ಲರು

ಪ್ರಕೃತಿ ಪೂಜೆಗೆ ಬನ್ನಿರಿ

ಕಣ್ಣು, ಹೃದಯಗಳೆಂಬ ಎರಡನು

ಮಾತ್ರ ಇಲ್ಲಿಗೆ ತನ್ನಿರಿ[೯]

ಸುಂದರವಾಗಿರುವ, ಸತ್ಯದಿಂದ ದೇದೀಪ್ಯಮಾನವಾಗಿರುವ ನಿಸರ್ಗದ ಬೆಳಕಿನ ಕಡೆಗೆ ಮನಸ್ಸನ್ನು ಹರಿಸುವುದು, ಅದರಿಂದ ಆನಂದದ ಅನುಭೂತಿ ಹೊಂದುವುದು ಬಹುತೇಕ ನಿಸರ್ಗ ಕವಿಗಳ ಪ್ರಮುಖ ಆಶಯವಾಗಿದೆ. ಮನುಷ್ಯ ಪ್ರೀತಿ ಹಾಗೂ ನಿಸರ್ಗದ ಆರಾಧನೆಯಂತಹ ಅಂಶಗಳೆ ಜಿ.ಎಸ್.ಎಸ್. ಹಾಗೂ ಚೆನ್ನವೀರ ಕಣವಿಯವರನ್ನು ನವೋದಯ-ನವ್ಯ-ನವ್ಯೋತ್ತರದ ಸಂದರ್ಭದಲ್ಲಿ ಅವರ ಕಾವ್ಯಗುಣಗಳನ್ನು ಪೊರೆದವೆಂದು ತೋರುತ್ತದೆ. ವರ್ತಮಾನಕ್ಕೆ ಪರಂಪರೆಯನ್ನು ಅವರು ಅತ್ಯಂತ ಶಕ್ತವಾಗಿ ಬಳಸಿಕೊಂಡರಿಂದೆ ನವ್ಯದ ಆತ್ಮರತಿ, ವ್ಯಕ್ತಿಪೂಜೆಯಂತಹ ಮಿತಿಗಳನ್ನು ಮೀರಿ ರೆಂಬೆ ಕೊಂಬೆಗಳನ್ನು ಹೊರಚಾಚಿ ಮೈದುಂಬಿ ಬೆಳೆಯಲು ಕಾರಣವಾಯಿತೆಂದು ಕಾಣುತ್ತದೆ.

ಆಳದ ಬೇರಿನಿಂದ ನಿರಳ ಟೊಂಗೆ ಟಿಸಿಲಿನವರೆಗು

ಮರಮರದ ಮರ್ಮರ, ವಿಚಿತ್ರ ನೋವು ನಲಿವು[೧೦]

'ಮರದ ಮರ್ಮರ' ಎನ್ನುವಲ್ಲಿ ಗಿಡಮರಗಳ ನೂರಾರು ಭಾವನೆಗಳನ್ನು ಕಣವಿಯವರು ಹೊರಹೊಮ್ಮಿಸುತ್ತಾರೆ. ಇಡೀ ಜೀವ ಸಂಕುಲ ನಿಸರ್ಗದೊಂದಿಗೆ ಸಾಧಿಸಿರುವ ಅವಿನಾಭಾವ ಸಂಬಂಧಗಳು 'ಮನುಷ್ಯ ಪ್ರಕೃತಿ' ಎನ್ನುವ ಅವರ ಕವಿತೆಯಲ್ಲಿ ಅನಾವರಣಗೊಳ್ಳುತ್ತವೆ. ಆಳವಾಗಿರುವ ಬೇರಿನಿಂದ ಹಿಡಿದು ವಿಶಾಲ ಬಯಲಿನಲ್ಲಿ ಹಬ್ಬಿರುವ ಟೊಂಗೆಗಳವರೆಗೆ ಪರಂಪರೆಯ ಸಂಬಂಧದ ಧಾತು ಹರಡಿಕೊಂಡಿದೆ. ಏಕೋಭಾವದಿಂದ ಮುಗಿಲಿನೆಡೆಗೆ ದೃಷ್ಟಿನೆಟ್ಟ ಸಂತನಂತೆ, ಬರುವ ದಿನಗಳ ವಸಂತಕ್ಕೆ ಕಾಯುವ ಎಲೆಯುದುರಿದ ಬರಡು ಮರ ತನ್ನ ನೆರಳಲ್ಲಿ ಕುಳಿತು ಪ್ರಿಯತಮೆಯ ಗಲ್ಲ ಮುಟ್ಟಿ, ಪ್ರೀತಿಯ ಮುಗುವನ್ನು ಮುದ್ದಿಸಿ ಹೋದವನನ್ನು ನೆನೆಯುತ್ತದೆ. ಮನುಷ್ಯನ ಸಣ್ಣತನ, ದುರಾಸೆಗಳನ್ನು ಅಲಕ್ಷಿಸಿ ಪ್ರಕೃತಿ ಜೀವಸೆಲೆ ಹರಿಸುವುದನ್ನು ಕವಿ ಮನಗಾಣಿಸುತ್ತಾರೆ. ನಿಸರ್ಗ ಮತ್ತು ಮನುಷ್ಯ ಬದುಕಿನ ನಡುವೆ ಸಹಬಾಳ್ವೆಯ ಸಾಹಚರ್ಯವನ್ನು ನಿರ್ಮಿಸುವ ಪ್ರಯತ್ನ ಕಣವಿಯವರಲ್ಲಿದೆ. ಮನುಷ್ಯನ ಬಾಳ್ವೆಯ ಅರ್ಥವನ್ನು ಎಲೆಯುದುರಿಸಿಕೊಂಡು ನಿರ್ಭಾವದಲ್ಲಿ ಸಂತನಂತೆ ಕಣವಿಯವರು ಭಾಷೆಯಲ್ಲಿ ನಿಸರ್ಗದ ಸಾದೃಶ್ಯ ಮಾಡಿಕೊಡುತ್ತಾರೆ. ಕೀರ್ತಿನಾಥ ಕುರ್ತಕೋಟಿಯವರು ಅದನ್ನು 'ಭಾಷೆಯಲ್ಲಿ ಸಂಭವಿಸುವ ಪವಾಡ'ವೆನ್ನುತ್ತಾರೆ. "ಕಣವಿಯವರ ಪ್ರಕೃತಿ ಕಾವ್ಯದಲ್ಲಿಯೇ ಪರಿಪಾಕ, ಪರಿಣತಿ ಕಂಡುಬರುತ್ತವೆ. 'ಹುಲ್ಲು' ಎಂಬ ಕವಿತೆಯನ್ನು ಅವರು ಬರೆದಾಗಲೇ ಪರಿಪಾಕದ ಈ ಪ್ರಕ್ರಿಯೆ ಪ್ರಾರಂಭವಾಗಿತ್ತು.

ಮಳೆಗೆ ಹುಲ್ಲು ಮೊಳೆಯುವುದು ಮೂಲಪ್ರವೃತ್ತಿ, ನಿಸರ್ಗ

ಕಳೆ ತೆಗೆದು ಬಿತ್ತಿ ಬೆಳೆಯುವುದು ನಾಗರಿಕ ಮಾರ್ಗ

ಕಣವಿಯವರ ಕಾವ್ಯದ ಮಟ್ಟಿಗೆ ಹೇಳುವುದಾದರೆ ಮೂಲ ಪ್ರವೃತ್ತಿ ಮತ್ತು ನಾಗರಿಕ ಮಾರ್ಗಗಳು ಒಂದಕ್ಕೊಂದು ವಿರುದ್ಧವಲ್ಲ. ಇವೆರಡೂ ಕೂಡಿ ಕೆಲಸ ಮಾಡುತ್ತಲೇ ಇರಬೇಕು... 'ಜೇನಿಯಾ', 'ಜರ್ಬರಾ', 'ಹೂವು ಹೊರಳುವವು' ಇಂಥ ಕವಿತೆಗಳು ಎಲ್ಲ ರೀತಿಯಿಂದಲೂ ಹೊಸ ಕವಿತೆಗಳಾಗಿವೆ. ನಿಸರ್ಗದ ವಿವರಗಳ ಹೊಸತನ ಮತ್ತು ಕವಿ ಅವುಗಳಲ್ಲಿ ಆರೋಪಿಸುವ ಕಾವ್ಯಾರ್ಥ ಅಭಿವ್ಯಕ್ತಿಯ ಒಂದು ಕ್ಷಣದಲ್ಲಿ ಒಂದಾಗಿ ಬಿಡುತ್ತವೆ.''[೯೧]

ಆಧುನಿಕ ಬದುಕಿನ ಒತ್ತಡಗಳಲ್ಲಿಯೂ ನಿಸರ್ಗ ಮತ್ತು ಮನುಷ್ಯ ಪ್ರೀತಿ ಸಂಘರ್ಷವಿಲ್ಲದೆ ಸಹಬಾಳ್ವೆ ನಡೆಸಿರುವುದು; ಮನುಷ್ಯನ ಕ್ಷುದ್ರತನವನ್ನು ವ್ಯಂಗ್ಯಕ್ಕೀಡು ಮಾಡಿ ವಾಸ್ತವಿಕ ಪ್ರಜ್ಞೆಯಲ್ಲಿ ಅವನನ್ನು ಎಚ್ಚರಿಸಿರುವುದು; ಹಲವು ಕಾವ್ಯ ಪ್ರಯೋಗಗಳ ಮೂಲಕ ನಿಸರ್ಗದ ಸತ್ಯ-ಸೌಂದರ್ಯಗಳನ್ನು ಬಣ್ಣಿಸಿರುವುದು; ಸಹಜ-ಸೌಂದರ್ಯದಿಂದ ಕಾವ್ಯ ಕಂಗೊಳಿಸುವದು ಕಣವಿಯವರ ನಿಸರ್ಗ ಕವಿತೆಗಳ ವೈಶಿಷ್ಟ್ಯವಾಗಿದೆ. ಬೇಂದ್ರೆ-ಕುವೆಂಪು ಅವರು ನಿಸರ್ಗವನ್ನು ಸೂರೆ ಮಾಡಿದ ಮೇಲೂ ಕಣವಿ-ಶಿವರುದ್ರಪ್ಪ ಅವರು ಪ್ರಕೃತಿಯನ್ನು ಭಿನ್ನವಾಗಿ ಕಂಡು ತಮ್ಮ ಅನನ್ಯತೆ-ಸ್ವೋಪಜ್ಞತೆಗಳನ್ನು ಮೆರೆಯಲಿಕ್ಕೆ ಸಾಧ್ಯವಾಯಿತು. ಬೇಂದ್ರೆ-ಕುವೆಂಪು ಅವರು ಪೌರಾತ್ಯ ಹಾಗೂ ಪಾಶ್ಚಿಮಾತ್ಯ ಪ್ರಭಾವಗಳನ್ನು ಅರಗಿಸಿಕೊಂಡು ಕವಿತೆ ಕಟ್ಟಿದಂತೆ ನವೋದಯದ ಉತ್ಕರ್ಷದಲ್ಲಿ ಕಾವ್ಯೋದ್ಯೋಗವನ್ನು ಆರಂಭಿಸಿದ ಕಣವಿ-ಶಿವರುದ್ರಪ್ಪ ಅವರು ನವ್ಯದ ಭರಾಟೆಯಲ್ಲಿ ಪ್ರಕೃತಿ ಕಾವ್ಯದ ಬಗ್ಗೆ ನಿರುತ್ಸಾಹಗೊಳ್ಳದೆ ಅದರ ಮೂಲ ಪ್ರೇರಣೆ ಹಾಗೂ ಕಾಳಜಿಗಳನ್ನು ತಮ್ಮ ಕಾವ್ಯದಲ್ಲಿ ಮುಕ್ಕಾಗದಂತೆ ಕಾಯ್ದುಕೊಂಡು ಬಂದಿರುವುದು; ಕನ್ನಡದ ನಿಸರ್ಗ ಕವಿತೆಗೆ ಹೊಸತನ ತಂದಿರುವುದು ಅವರು ಪರಂಪರೆಯನ್ನು ದುಡಿಸಿಕೊಂಡ ಬಗೆಯಾಗಿದೆ.

೫.೮ ಕನ್ನಡದ ನಿಸರ್ಗಕಾವ್ಯ ಪರಂಪರೆ : ಹರಿಗಡಿಯದ ಹೊನಲು

ಬೇಂದ್ರೆ, ಕುವೆಂಪು ಮುಂತಾದ ನವೋದಯದ ಮುಂದಾಳುಗಳು ಸೃಷ್ಟಿಸುತ್ತಿದ್ದ ಕಾವ್ಯಶ್ರಾವಣದ ದಟ್ಟ ಮುಗಿಲಿಗೆ ಹೊಸ ಹೊಸ ಮೋಡಗಳು ಬಂದು ಕೂಡಿಕೊಳ್ಳುವ ಕಾಲ ಅದಾಗಿತ್ತು. ನಿಸರ್ಗ ಕಾವ್ಯದ ಮೇರು ಸಾಧಕರಾದ ಬೇಂದ್ರೆಯವರ ಪ್ರಭಾವ ಸಹಜವಾಗಿಯೆ ಪ್ರಕೃತಿ ಮನೋಭಾವದ ಕವಿಗಳಿಗೆ ಹೊಸ ಭರವಸೆ ನೀಡಿತ್ತು. ಬೇಂದ್ರೆಯವರನ್ನು ರೂಪಿಸಿದ ಪಂಪ-ರನ್ನ-ಕುಮಾರವ್ಯಾಸ-ಅಲ್ಲಮ-ಬಸವಣ್ಣ-ಲಕ್ಷ್ಮೀಶ-ಕನಕದಾಸ-ಸರ್ವಜ್ಞ ಮುಂತಾದವರ ದಾರ್ಶನಿಕ ಪರಂಪರೆ ಮುಂದಿನ ಪೀಳಿಗೆಗೂ ಮುಂದುವರೆಯುವುದು ಕಾವ್ಯದ ಅದೃಷ್ಟವಾಗಿದೆ. ನವೋದಯ ಲೇಖಕರು ದುಡಿಸಿಕೊಂಡ ಆತ್ಮವಿಕಾಸ ಹಾಗೂ ಕಲ್ಯಾಣದೃಷ್ಟಿ ಸಮಕಾಲೀನ ಸಂದರ್ಭದ ಕೆಲವು

ಲೇಖಕರಿಗೂ ಪ್ರೇರಣಾದಾಯಕವಾಗಿದೆ. ಪ್ರಾತಿನಿಧಿಕವೆಂಬಂತೆ ನಿಸರ್ಗಕಾವ್ಯವನ್ನು ಪ್ರೀತಿಯಿಂದ ಸಾಗುವಳಿ ಮಾಡಿರುವ ಜಿ.ಎಸ್.ಎಸ್. ಹಾಗೂ ಕಣವಿ ಅವರನ್ನು ಸ್ಥೂಲವಾಗಿ ನೋಡಲಾಯಿತು. ಬೇಂದ್ರೆಯವರು ಉತ್ತರ ಕರ್ನಾಟಕ ಭಾಗದ ಜನಪದ ಜೀವನ, ಧಾರವಾಡದ ಪ್ರಭಾವ ಪರಿಸರದಿಂದ ಹೇಗೆ ಬೆಳೆದರೊ ಅಂತಹ ಧಾರವಾಡ ತತ್ವವನ್ನು ಕಣವಿಯವರಲ್ಲಿ ಗುರುತಿಸಿ ಪ್ರೋತ್ಸಾಹಿಸಿದರು. ಅಂತಹ ಕೆಲವು ವಿವರಗಳನ್ನು ನೋಡಬಹುದೆಂದು ತೋರುತ್ತದೆ. ಆಗಿನ ಕವಿಗಳು ಬೇಂದ್ರೆಯವರ ಕಾವ್ಯ ಪರೀಕ್ಷೆಯಲ್ಲಿ ಪಾಸಾಗುವುದು ಒಂದು ಸಾಧನೆಯೇ ಆಗಿತ್ತೆನ್ನಬಹುದು. ತರುಣ ಕವಿ ೨೧ ರ ಹರೆಯದ ಚೆನ್ನವೀರ ಕಣವಿಯವರು ತಮ್ಮ ಮೊದಲ ಕವನ ಸಂಕಲನ 'ಕಾವ್ಯಾಕ್ಷಿ'ಗೆ ಬೇಂದ್ರೆಯವರ ಮುನ್ನುಡಿ ಬಯಸಿದರು. ಸೊಲ್ಲಾಪುರದ ಡಿ.ಎ.ವ್ಹಿ. ಕಾಲೇಜಿನಲ್ಲಿ ಪ್ರಾಧ್ಯಾಪಕ ವೃತ್ತಿ ನಿರ್ವಹಿಸುತ್ತಿದ್ದ ಬೇಂದ್ರೆಯವರ ಕೈಗೆ ಕಣವಿಯವರ ಕವಿತೆಗಳು ತಲುಪಿದವು. ಮುಖತಃ ಪರಿಚಯವಿರದ ಕಣವಿಯವರ ಕಾವ್ಯವನ್ನು ಪರಿಶೀಲಿಸಿ ಕನ್ನಡ ಕಾವ್ಯವಾಹಿನಿ ಹರಿಗಡಿಯದ ಹೊನಲೆಂದು ಬೇಂದ್ರೆ ಮೆಚ್ಚುಗೆ ಸೂಚಿಸಿದುದು ಪರಂಪರೆಯೊಂದು ಬೆಳೆಯುವ ಮಾರ್ಗವಾಗಿದೆ: 'ಕವಿಗಳಾದ ಚೆನ್ನವೀರ ಕಣವಿಯವರನ್ನು ಧಾರವಾಡದಲ್ಲಿ ನಾನು ನೋಡಿದ್ದರೂ ನೋಡಿರಬಹುದು. ಆದರೆ ಅವರ ನನ್ನ ಪರಿಚಯವಿಲ್ಲ. ಅವರ ಕವನಗಳನ್ನು ಮಾತ್ರ ಅಲ್ಲಲ್ಲಿ ಮಾಸಪತ್ರಿಕೆಗಳಲ್ಲಿ ಕಂಡಿದ್ದೆ. ಉದಿತವಾದ ಕನ್ನಡದ ಹೊಸ ಹುಮ್ಮಸ್ಸಿನ ದಂಡೆಗೆ ಸೇರಿದ ವೀರರು ಇವರೊಬ್ಬರು ಎಂದು ಗುರುತಿಸಿದ್ದೆ. ಅವರ ಕವನದಲ್ಲಿ ಜೀವಂತ ಗತಿಯಿದೆ, ಮಾತಿಗೆ ಅಚ್ಚುಕಟ್ಟು ಇದೆ. ಅಲ್ಪ ಸಂತುಷ್ಟಿ ಇಲ್ಲ, ಮಹತ್ತಿನ ಕಡೆಯ ಎಳೆತವಿದೆ.. ಸಮಕಾಲೀನ ಸಾಹಿತ್ಯದ ಪ್ರತಿಧ್ವನಿಯೂ, ಗತಿಧ್ವನಿಯೂ ಸಹಜ ನಿರ್ಭಯತೆಯಿಂದ ಕಾಲಿಕ್ಕಿದೆ. ಇದು ಹೊಸ ನೀರು, ಈ ಪ್ರವಾಹದಲ್ಲಿ ಮಾತ್ರ ಹಳ್ಳದ ರಭಸವಿರದೆ, ಹೊಳೆಯ ಗಾಂಭೀರ್ಯವಿದೆ... ಕವಿಗಳ ಶಾರದೀಯ ಪ್ರವಾಹವೂ ಹರಿದು ಬಂದು ಕನ್ನಡ ಕಡಲನ್ನುಕ್ಕಿಸಲಿ!'[೬]

ಬೇಂದ್ರೆಯವರ ಈ ಮಾತುಗಳನ್ನು ಇಲ್ಲಿ ಪುನರುಚ್ಚರಿಸುವ ಉದ್ದೇಶವೇನೆಂದರೆ ಕನ್ನಡ ನವೋದಯವು ತಂದಿದ್ದ ಹೊಸತನದ ಹಾಗೂ ಅಭಿವ್ಯಕ್ತಿಯ ಮಾದರಿಗಳನ್ನು ಕಣವಿ, ಶಿವರುದ್ರಪ್ಪರಂತಹ ಕವಿಗಳು ಅನುಸರಿಸಿ ಕನ್ನಡದ ಕಾವ್ಯ ಪರಂಪರೆ ಹರಿಗಡಿಯದಂತೆ, ನಿಸರ್ಗ ಹಾಗೂ ಮಾನವೀಯ ಕಾಳಜಿಗೆ ವಿಮುಖವಾಗದಂತೆ, ಸಾಹಿತ್ಯದ ಕಾಳಜಿ ಬರಿ ವೈಯಕ್ತಿಕವಾಗಿರದಂತೆ ನೋಡಿಕೊಂಡರು. ಹಾಗಾಗಿಯೇ ಬೇಂದ್ರೆ-ಕುವೆಂಪು ಅವರು ಸೃಷ್ಟಿಸಿದ ಪರಂಪರೆಯನ್ನು ಕಣವಿ-ಶಿವರುದ್ರಪ್ಪನವರು ಮುಂದುವರೆಸಿರುವುದು ಸಹಜವಾದ ಬೆಳವಣಿಗೆಯಾಗಿದೆ. ಆತ್ಮವಿಕಾಸ ಹಾಗೂ ಸಮಷ್ಟಿಪ್ರಜ್ಞೆ ಬೇಂದ್ರೆಯವರ ನಿಸರ್ಗಕಾವ್ಯದ ಉದ್ದೇಶವಾಗಿರುವಂತೆ ಕಣವಿಯವರ ದಾರಿ ಕೂಡ ಆ ಹೆದ್ದಾರಿಯನ್ನೇ ಕೂಡಿಕೊಳ್ಳುತ್ತದೆ. ಡಾ. ಜಿ.ಎಸ್. ಆಮೂರ ಅದನ್ನು ಸೂಕ್ತವಾಗಿ ಗುರುತಿಸಿದ್ದಾರೆ : 'ಕಣವಿಯವರ ಕಾವ್ಯ ಮನೋಧರ್ಮವನ್ನು 'ರೋಮ್ಯಾಂಟಿಕ್' ಎಂದು ಗುರುತಿಸುವುದು ವಾಡಿಕೆಯಾಗಿದೆ. ಆದರೆ ಅದು ಇದಕ್ಕಿಂತಲೂ ಹೆಚ್ಚು ಸಂಕೀರ್ಣವಾದ ಮನೋಧರ್ಮ. ಆದರ್ಶವಾದ, ನಿಸರ್ಗಪ್ರೇಮ, ಭಾವನಿಷ್ಠೆ ಇವು ಅವರ ರೋಮ್ಯಾಂಟಿಕ್ ಒಲವುಗಳತ್ತ ಬೊಟ್ಟು ಮಾಡಿ ತೋರಿಸಿದರೆ ಸಮದರ್ಶನ, ಸಮಭಾವ, ಸ್ವೀಕೃತಿಗಳಂಥ

ಮೌಲ್ಯಗಳಲ್ಲಿರುವ ಅವರ ನಂಬುಗೆ ಭಾರತೀಯ ಸಂದರ್ಭದಲ್ಲಿ ಅಭಿಜಾತ ಒಲವುಗಳನ್ನೇ ಸೂಚಿಸುತ್ತದೆ.... ನವೋದಯ ಕಾವ್ಯ ತನ್ನ ಸಿದ್ಧಿಯ ಪರಾಕಾಷ್ಠೆಯನ್ನು ತಲುಪಿದ್ದ ಕಾಲದಲ್ಲಿ, ಅದೂ ಕೂಡ ಅದರ ಪ್ರಮುಖ ಕೇಂದ್ರಗಳಲ್ಲೊಂದಾದ ಧಾರವಾಡದಲ್ಲಿ, ತಮ್ಮ ಕಾವ್ಯೋದ್ಯೋಗವನ್ನು ಪ್ರಾರಂಭಿಸಿದ ಕಣವಿಯವರು ಸಹಜವಾಗಿಯೇ ಅದರ ಪ್ರಭಾವಕ್ಕೆ ಒಳಗಾದರು. ಬೇಂದ್ರೆ, ಮಧುರಚೆನ್ನ, ಆನಂದಕಂದರೇ ಮೊದಲಾದ ಗೆಳೆಯರ ಗುಂಪಿನ ಕವಿಗಳ ಕಾವ್ಯಪ್ರಯೋಗಗಳು ಅವರನ್ನು ಆಕರ್ಷಿಸಿದವು. ಗೆಳೆಯರ ಗುಂಪಿನ ನಿಜವಾದ ವಾರಸುದಾರರೆಂದರೆ ಕಣವಿಯವರೇ.'[೯೩]

ಬೇಂದ್ರೆ, ಕುವೆಂಪು, ಪು.ತಿ.ನ., ಕೆ.ಎಸ್.ನ. ಮುಂತಾದ ನವೋದಯದ ಹರಿಕಾರರು ಪ್ರಕೃತಿ ಮನೋಧರ್ಮದ ಮೂಲಕ ಶ್ರೇಷ್ಠ ಕಾವ್ಯವನ್ನು ರೂಪಿಸಿದರು. ಅಭಿವ್ಯಕ್ತಿಯ ಸಾಧ್ಯತೆಗಳನ್ನು ಬೆಳೆಸಿ ಶಬ್ದ-ನಾದ-ತಾಳ-ಲಯಗಳಲ್ಲಿ ಹೆಚ್ಚುಗಾರಿಕೆಯನ್ನು ಸಾಧಿಸಿದರು. ನವೋದಯದ ಇಂತಹ ಗುಣಗಳನ್ನು ಕಣವಿಯವರು ಅತ್ಯಂತ ಸಹಜವಾಗಿ ಸ್ವೀಕರಿಸಿದರು. ಆ ಪ್ರೇರಣೆಗಳನ್ನು ತಮ್ಮ ಪ್ರಕೃತಿ ಕಾವ್ಯದಲ್ಲಿ ದುಡಿಸಿಕೊಂಡರು. ಬೇಂದ್ರೆ, ಕುವೆಂಪು ಅವರ ಪ್ರಭಾವದಲ್ಲಿ ಕಣವಿಯವರು ಕಾವ್ಯರಚನೆ ಮಾಡಿದರೂ ತಮ್ಮ ಸ್ವಂತಿಕೆಯನ್ನು ಎಂದೂ ಬಿಟ್ಟುಕೊಟ್ಟಿಲ್ಲ. ಭಾಷೆ ಮತ್ತು ವಸ್ತುವಿನ ನಿರ್ವಹಣೆಯಲ್ಲಿಯೂ ತಮ್ಮ ಅಸ್ಮಿತೆಯನ್ನು ಸಾಧಿಸಿದರು. ರೂಪಕ ಹಾಗೂ ಪ್ರತಿಮೆಗಳು ಕೂಡ ಕಣವಿಯವರಿಗೆ ವಿಶಿಷ್ಟವಾದವುಗಳು.

ಕಣವಿಯವರ 'ಕಾವ್ಯಾಕ್ಷಿ'ಗೆ ಬೇಂದ್ರೆಯವರ ಮುನ್ನುಡಿ ಹೊಸಗನ್ನಡ ಕಾವ್ಯಪರಂಪರೆಯ ಒಂದು ಸಂಬಂಧದ ಸೂತ್ರವನ್ನು ಹೇಳುತ್ತದೆ. ಹಾಗೆಯೇ ಕಣವಿಯವರ ಕಾವ್ಯದ ಮಹತ್ವವನ್ನೂ ಅದು ಹೇಳುತ್ತದೆ. ಬೇಂದ್ರೆಯವರ 'ನಾದಲೀಲೆ'ಗೆ ಮಾಸ್ತಿಯವರು ಬರೆದ ಮುನ್ನುಡಿ ಹೇಗೆ ಒಂದು ಅಪರೂಪದ ಸಂಗತಿಯಾಗಿದೆಯೋ ಹಾಗೆಯೆ ಕಣವಿಯವರ 'ನೆಲಮುಗಿಲು' ಸಂಕಲನಕ್ಕೆ ಬೇಂದ್ರೆಯವರು ಬರೆದ ಮುನ್ನುಡಿ ಅಪರೂಪದ್ದಾಗಿದೆಯೆಂದು ಕೀರ್ತಿನಾಥ ಕುರ್ತಕೋಟಿಯವರು ಅಭಿಪ್ರಾಯಪಡುತ್ತಾರೆ. ಧಾರವಾಡದ ನೆಲವು ಬೇಂದ್ರೆ, ಕಣವಿಯವರನ್ನು ತಬ್ಬಿಹಿಡಿದ ಬಗೆಯನ್ನು ಕುರ್ತಕೋಟಿಯವರು ಬಣ್ಣಿಸಿರುವುದು ಸಮಂಜಸವಾಗಿದೆ: 'ಕವಿಯ ಜೀವಸತ್ವ ನೆಲದೊಡಲಿಗೆ ತನ್ನ ಬೇರು ಬಿಟ್ಟಿರುತ್ತದೆ ಎಂದು ಬೇಂದ್ರೆಯವರು ಹೇಳಿ ಕಣವಿಯವರ ಕಾವ್ಯವಸ್ತು ಏನೆಂಬುದನ್ನು ಹುಡುಕಿ ತೆಗೆಯುತ್ತಾರೆ. 'ಎಲ್ಲಿ ನೋಡಿದರೂ ಧಾರವಾಡದ ಹೂರಣ' ಅವರಿಗೆ ಕಾಣುತ್ತದೆ. ಈ ವಸ್ತು 'ಕಾವ್ಯಾಕ್ಷಿ'ಯಲ್ಲಿಯೂ ಇತ್ತು. 'ಕಾವ್ಯಾಕ್ಷಿ'ಯಲ್ಲಿ ಅದೇ ನೆಲಮುಗಿಲು; 'ನೆಲಮುಗಿಲಿ'ನಲ್ಲಿ ಅದೇ 'ಕಾವ್ಯಾಕ್ಷಿ'... ಕಣವಿಯವರ ಕಾವ್ಯ ಧಾರವಾಡಕ್ಕೆ ಉಪಕೃತವಾಗಿರುವಂತೆ ಕಣವಿಯವರ ಕಾವ್ಯಕ್ಕೆ ಧಾರವಾಡವೂ ಉಪಕೃತವಾಗಿರಬೇಕು ಎನ್ನುವುದೇ ಈ ಮಹತ್ವದ ಮಾತಾಗಿದೆ. ಹಾಗೆ ನೋಡಿದರೆ 'ಧಾರವಾಡ ತತ್ವ' ಬೇಂದ್ರೆಯವರ ಸ್ವಂತ ಕಾವ್ಯವನ್ನೂ ರೂಪಿಸಿದೆ... ಬೇಂದ್ರೆ ತಾವು ಬರೆಯುತ್ತಿದ್ದಾಗ ಇದ್ದ ಧಾರವಾಡಕ್ಕೂ ಕಣವಿಯವರ ಕಾವ್ಯದ ಧಾರವಾಡಕ್ಕೂ ಇರುವ ಅಂತರವನ್ನಲ್ಲ, ಅವುಗಳ ನಡುವಿನ ಸಂಬಂಧವನ್ನು

ಪರಿಶೀಲಿಸುತ್ತಿದ್ದಾರೆ.'[೧೪] ಪರಂಪರೆಯನ್ನು ನೋಡುವ ಹಾಗೂ ಭವಿಷ್ಯವನ್ನು ಕಟ್ಟುವ ರೀತಿ ಇದಾಗಿದೆ. ಬೇಂದ್ರೆಯವರಿಗೆ ಕಣವಿಯವರ ಕಾವ್ಯ ಧಾರವಾಡದ ಒಂದು ಚಿತ್ರದಂತೆ, ಈ ಪ್ರದೇಶದ ವಿನಯವನ್ನು ಬಣ್ಣಿಸುವ ಪ್ರತಿಮೆಯಂತೆ, ಹೊಸ ಕಾಲದ ಸವಾಲಿನಂತೆ ಕಂಡುಬರುತ್ತಿರಬೇಕು. ಅದನ್ನು ಗುರುತಿಸುವ ಕವಿಮನಸ್ಸು ಅವರಿಗಿತ್ತು. ಧಾರವಾಡದ ತತ್ವ, ಧಾರವಾಡದ ನೆಲದ ಗುಣ, ನೀರಿನ ಗುಣ ಮತ್ತು ಆ ಕಾಲದ ಯುಗಧರ್ಮ ಹೇಗೆ ಕವಿಗಳನ್ನು ರೂಪಿಸುತ್ತದೆಯೆನ್ನುವುದು ಇದರಿಂದ ತಿಳಿಯುತ್ತದೆ. ೧೯೬೧ ರಲ್ಲಿ ಕಣವಿಯವರಿಗೆ ಐವತ್ತು ತುಂಬಿದ ನೆನಪಿಗೆ ನಡೆದ 'ಚೆಂಬೆಳಕು' ಗ್ರಂಥದ ಬಿಡುಗಡೆ ಸಮಾರಂಭದಲ್ಲಿ ಪು.ತಿ.ನ., ಬೇಂದ್ರೆ, ಬಸವರಾಜ ಕಟ್ಟೀಮನಿ, ಶಾಂತರಸ, ಪಾಟೀಲ ಪುಟ್ಟಪ್ಪ ಮುಂತಾದವರು ಪಾಲ್ಗೊಂಡಿದ್ದು ವಿಶೇಷವಾಗಿದೆ. ತಾವು ಜ್ವರದಿಂದ ಅಸ್ವಸ್ಥರಾಗಿದ್ದರೂ ೬೫ ರ ಹರೆಯದ ಬೇಂದ್ರೆಯವರು ಅಂದು ಮಾತಾಡಿದ್ದು ಪರಂಪರೆಯನ್ನು ಜೋಡಿಸುವ, ಗಟ್ಟಿಗೊಳಿಸುವದರ ಕುರಿತೇ ಆಗಿತ್ತು: 'ಒಬ್ಬರೊಬ್ಬರೊಳಗ ಒಡನಾಟ ಇರಬೇಕು, ದೇಶದೊಳಗ ಒಳ್ಳೇ ಕವಿ ಹುಟ್ಟಿದರಷ್ಟೇ ಸಾಲದು, ಅವ ಒಳ್ಳೇವ ಅನ್ನಲಿಕ್ಕೆ ಒಬ್ಬ ಒಳ್ಳೆ ವಿಮರ್ಶಕ ಹುಟ್ಟಬೇಕು. ಕವಿ-ಸಹೃದಯರ ಒಡನಾಟ ಸರಸ್ವತೀ ತತ್ವ... ರವಿ ಕಾಣದ್ದನ್ನು ಕವಿ ಕಾಣ್ತಾನ; ಕವಿ ಕಾಣದ್ದನ್ನ ಸಹೃದಯ ಕಾಣ್ತಾನ. ಪಂಪ, ಕುಮಾರವ್ಯಾಸರ ನಾಡಿನಲ್ಲಿ ಬಂದಿದ್ದೇವೆ. ಒಬ್ಬರಿಗಿಂತ ಒಬ್ಬರು ಹೆಚ್ಚಿನವರಾಗಿ ಬೆಳೀಬೇಕು.'[೧೫] ತಾವು, ಪು.ತಿ.ನ. ಹಾಗೂ ಕುವೆಂಪು ತುಳಿದ ದಾರಿಯನ್ನು ತುಳಿಯದೆಯೇ ಹೊಸದಾರಿ ತುಳಿದು ಹೆಸರು ಗಳಿಸುವ ವಾರಸುದಾರರು ಬರಬೇಕೆಂದು ಬೇಂದ್ರೆಯವರು ಅಪೇಕ್ಷಿಸಿದರು. ಯಾರೊಬ್ಬರ ಸಂಪೂರ್ಣ ಮಾದರಿಯನ್ನು ಅನುಸರಿಸಿದವರು ಒಳ್ಳೆಯ ಬರಹಗಾರರು ಆಗಲು ಸಾಧ್ಯವಿಲ್ಲವೆಂಬ ಅರಿವು ಬೇಂದ್ರೆಯವರಿಗಿತ್ತು. ಪಂಪ - ಕುಮಾರವ್ಯಾಸ - ಲಕ್ಷ್ಮೀಶ - ಸರ್ವಜ್ಞ - ಕನಕದಾಸರ ಹಾದಿಯನ್ನು ತುಳಿದೂ ತಾವು ಬೇರೆಯಾದ ಬಗೆ ಅವರಿಗೆ ಗೊತ್ತಿತ್ತು. ಧಾರವಾಡ ತತ್ವವನ್ನೂ ಪಾಲಿಸಿಯೂ ಕಣವಿಯವರು ಹೇಗೆ ಭಿನ್ನರಾಗಿದ್ದಾರೆಂಬ, ತಮ್ಮದೇ ವೈಶಿಷ್ಟ್ಯ ವಿನಯವನ್ನು ಹೇಗೆ ಕಾಪಾಡಿಕೊಂಡಿದ್ದಾರೆಂಬ ನೋಟಗಳು ಬೇಂದ್ರೆಯವರಿಗೆ ತಿಳಿದಿದ್ದರಿಂದ ಕಣವಿಯವರ ಕಾವ್ಯವನ್ನು 'ಹಳಸದ ವಿನಯ'ವೆಂದು ಕರೆದರು. ಹೀಗೆ ತಮ್ಮ ಸಮಕಾಲೀನರು ಹಾಗೂ ಯುವಗೆಳೆಯರೊಂದಿಗೆ ಅರ್ಥಪೂರ್ಣ ಸಂಬಂಧಗಳನ್ನು ಬೇಂದ್ರೆಯವರು ಹೊಂದಿದ್ದರು. ಗೆಳೆತನದ ಸಂಬಂಧಗಳು ಅವರಿಗೆ ವ್ಯವಹಾರಿಕವಾಗಿರಲಿಲ್ಲ. ಕಾವ್ಯದ ಹಾದಿಗಳಾಗಿದ್ದವು. ಕವಿತೆಗಳನ್ನು ಬರೆಯಲಿ, ಮುನ್ನುಡಿಯನ್ನೇ ಬರೆಯಲಿ ಕಾವ್ಯ ಹಾಗೂ ಕಾವ್ಯಕ್ಕೆ ಹೊಂದಿಕೊಂಡ ಬದುಕು ಅವರಿಗೆ ಮುಖ್ಯವಾಗಿತ್ತು. ಕಳೆದುಹೋದ, ಸುತ್ತುವರೆದ, ಬದುಕಿನ ಬಳ್ಳಿಗೆ ಚಿಗುರಿದ ಸ್ನೇಹವು, ಪರಂಪರೆಯನ್ನು ಬೆಳೆಸುವ ರೀತಿಯಲ್ಲಿಯೆ ಅವರಿಗೆ ಕಾಣುತ್ತಿತ್ತು.

ನವೋದಯದ ಹಿರಿ-ಕಿರಿಯರೆಲ್ಲ ಸೇರಿದಾಗ ಒಂದುತನದ ಭಾವ ಅವರಲ್ಲಿ ಹರಿದಾಡುತ್ತಿದ್ದುದು ಅನೇಕ ಪ್ರಸಂಗಗಳಿಂದ ಗೊತ್ತಾಗುತ್ತದೆ. ಮಾಸ್ತಿ, ಬೇಂದ್ರೆ, ಕುವೆಂಪು, ಪು.ತಿ.ನ. ತಮ್ಮ ತಮ್ಮಲ್ಲಿ ಸ್ನೇಹದ ಅನುರಾಗ ಇಟ್ಟುಕೊಂಡಿದ್ದರು. ಪ್ರೀತಿಯೇ ಜಗತ್ತನ್ನು ಬೆಸೆಯುವ ಸೂತ್ರವೆಂದು ಅವರು ನಂಬಿದ್ದರು. ತತ್ವಪದಕಾರರು

ಮತ್ತು ಅನುಭಾವಿಕರ ರಚನೆಗಳು ನವೋದಯದ ಲೇಖಕರನ್ನು ತುಂಬ ಕದಡುತ್ತಿದ್ದವು. ಭಕ್ತಿಕಾವ್ಯದ ಪರಂಪರೆಗೆ ಅವರು ತಮ್ಮನ್ನು ಜೋಡಿಸಿಕೊಂಡಿದ್ದರು. ಬೇಂದ್ರೆ, ಮಾಸ್ತಿ ಮುಂತಾದ ಕವಿಗಳೆಲ್ಲರೆಲ್ಲ ಸೇರಿದ್ದ ಸಂದರ್ಭದಲ್ಲಿ ಚೆನ್ನವೀರ ಕಣವಿಯವರು ಮುಪ್ಪಿನ ಷಡಕ್ಷರಿಯ ಪದವೊಂದನ್ನು ಹೇಳಿದಾಗ ಬೇಂದ್ರೆಯವರು ಶ್ಲೇಷಾರ್ಥದ ಮೂಲಕ ಹೆಚ್ಚಿನ ಅರ್ಥ ಹೊಳೆಯಿಸಿದ್ದನ್ನು ಈ ಮೊದಲು ನೋಡಿದ್ದೇವೆ.[೬೧] ಅಂಥದೇ ಇನ್ನೊಂದು ಸಂದರ್ಭವೊಂದನ್ನು ಕಣವಿಯವರು ದಾಖಲಿಸಿದ್ದಾರೆ:

'ನಾನು ಹಿಂದೊಮ್ಮೆ ಅವರ ಮನೆಗೆ ಹೋದಾಗ ಅವರ ಮೇಜಿನ ಮೇಲೆ ಕುವೆಂಪು ಅವರ 'ಬೆರಳ್‌ಗೆ ಕೊರಳ್' ನಾಟಕವಿತ್ತು. ಅದನ್ನವರು ಮೆಚ್ಚಿಕೊಂಡದ್ದು ಅವರ ಮಾತಿನ ಮೇಲಿಂದ ನನಗೆ ತಿಳಿದುಬಂದಿತು. ಕುವೆಂಪು ಆ ನಾಟಕವನ್ನು 'ಶ್ರೀ' ಅವರಿಗೆ ಅರ್ಪಿಸಿ ಕೆಳಗೆ ಒಂದು ಕವಿತೆಯನ್ನೇ ಬರೆದಿದ್ದಾರೆ. 'ಬೆರಳ್‌ಗೆ ಕೊರಳ್' ಏಕಲವ್ಯ-ದ್ರೋಣರ ಪ್ರಸಂಗವನ್ನು ಧ್ವನಿಪೂರ್ಣವಾಗಿ ಸೂಚಿಸುತ್ತದೇನೊ ನಿಜ. ಆದರೆ 'ಶ್ರೀ' ಮತ್ತು ಕುವೆಂಪುಗೆ ಸಂಬಂಧಪಟ್ಟಂತೆ ಅದನ್ನು 'ಬೆರಳು ಹಿಡಿದು ನಡೆಸಿದ ಗುರುವಿಗೆ ತನ್ನ ಕೊರಳು ಅಂದರೆ ಕಂಠ, ಧ್ವನಿ(ಕಾವ್ಯ)ಯ ಅರ್ಪಣೆ' ಎಂದು ಬೇಂದ್ರೆಯವರು ಅರ್ಥೈಸಿ ನನಗೆ ಹೇಳಿದರು. ಹೀಗೆ ಯಾರಿಗೂ ಹೊಳೆಯದ್ದು ಬೇಂದ್ರೆಯವರಿಗೆ ಹೊಳೆಯುತ್ತಿದ್ದುದು ಅವರ ಪ್ರತಿಭೆಯ ವಿಶೇಷ ಲಕ್ಷಣ.'[೬೭]

ಹೀಗೆ ಸರಸ್ವತಿ ಸೂಕ್ತ, ಸ್ನೇಹಸೂಕ್ತ, ಅನುಭಾವ ಸೂಕ್ತಗಳನ್ನು ತಮ್ಮ ನೆಲೆಗಳನ್ನಾಗಿ ಮಾಡಿಕೊಳ್ಳಲು ನವೋದಯದ ಬಹುತೇಕರು ಪ್ರಯತ್ನಿಸಿ ಅದರಲ್ಲಿ ಯಶಸ್ವಿಯಾಗಿದ್ದನ್ನು ಕಾಣಬಹುದು. ಅಭಿಪ್ರಾಯ ಭೇದಗಳು ಇದ್ದರೂ ಭಕ್ತಿ ಮತ್ತು ಪ್ರೀತಿಯ ಅರಸುವಿಕೆಯಲ್ಲಿ ಅವರಿಗೆ ವೈಮನಸ್ಸು ಉಂಟಾಗಲು ಸಾಧ್ಯವಿರಲಿಲ್ಲ. ಬೇಂದ್ರೆ, ಕುವೆಂಪು ಅವರ ನಿಸರ್ಗಕಾವ್ಯದ ಮಹತ್ವ ಇಂತಹ ದಾರಿಯನ್ನು ತೋರಿಸುವದರಲ್ಲಿಯೆ ಇದೆ. ಮನುಷ್ಯ ಎತ್ತರಕ್ಕೇರಬೇಕೆನ್ನುವ, ಆತನ ಲೌಕಿಕವನ್ನು ಆಧ್ಯಾತ್ಮ-ಅನುಭಾವವೆಂಬ ಪರುಷದಿಂದ ಬಂಗಾರವನ್ನಾಗಿಸಬೇಕೆನ್ನುವ ಅಪೇಕ್ಷೆ ಅವರಲ್ಲಿತ್ತು. ಕುವೆಂಪು ಅವರನ್ನು ಕುರಿತ ಬೇಂದ್ರೆಯವರ 'ಯುಗದ ಕವಿಗೆ' ಎನ್ನುವ ಕವಿತೆಯಲ್ಲಿ ಸತ್ಸಂಗದಿಂದ ತಮಂಧದ ಕೇಡು ಕಳೆಯಲು ಸಾಧ್ಯವೆನ್ನುವ ವಿಚಾರ ವ್ಯಕ್ತವಾಗಿದೆ.

ತಮವೆಲ್ಲಿದೆ ರವಿ ಇದಿರಿಗೆ
ಉತ್ತಮ ಕವಿ ನುಡಿ ಚದುರಿಗೆ
ಚಾರುತ್ವದ ಕುಂದಣದಲ್ಲಿ
ಚಾರಿತ್ರ್ಯದ ರತ್ನ
ಚಾತುರ್ಯದ ಮಂತಣದಲಿ
ಸತ್ಸಂಗದ ಯತ್ನ
ಇದೇ ತೃಪ್ತಿಯು ನಮಗೆ[೬೩]

ಸಚ್ಚಾರಿತ್ರ್ಯ, ಸದ್ಭಾವನೆ, ಆತ್ಮವಿಕಾಸ ಹಾಗೂ ಮಾನವತೆಗಳಂತಹ ಮೌಲ್ಯಗಳನ್ನು ತಮ್ಮ ಕಾವ್ಯದಲ್ಲಿ ಬಿತ್ತಿ ಬೆಳೆಯಲು ಬೇಂದ್ರೆ ಹಾಗೂ ಅವರ ಸಮಕಾಲೀನರು ಸೆಣಸಿದರು. ತಮಗಿಂತ ಭಿನ್ನವಾಗಿ ಬರೆಯುವುದೇ ಹೊಸಕಾಲದ, ಹೊಸ ಸಂವೇದನೆಯ ಕರ್ತವ್ಯವೆಂದು ಬಗೆದರು. ಹೊಸಹಾದಿಯ ಕಾವ್ಯಕ್ಕೂ ಅವರು ಪ್ರೇರಕರಾದರು.

ಅಡಿಟಿಪ್ಪಣಿಗಳು :

೧. ಡಾ. ದ.ರಾ.ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೬೫೦, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೨. ಅದೇ, ಪು. ೬೪೭.

೩. ದ.ರಾ. ಬೇಂದ್ರೆ: 'ಸೂರ್ಯಪಾನ', ಪು. ೮೭, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೪. ಡಾ. ದ.ರಾ.ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೯೨, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೫. ಅದೇ, ಪು. ೯೩.

೬. ಡಾ. ಗುರುಲಿಂಗ ಕಾಪಸೆ: 'ಮಧುರಚೆನ್ನ', ಪು. ೧೧, ಸಾಹಿತ್ಯ ಅಕಾಡೆಮಿ, ಎ.ಮು., ೨೦೦೮.

೭. ಡಾ. ದ.ರಾ.ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೬೪೯, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೮. ಡಾ. ದ.ರಾ.ಬೇಂದ್ರೆ: 'ಸಂಚಯ', ಪು. ೪೬, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೯.

೯. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ನೂರು ಮರ ನೂರು ಸ್ವರ', ಪು. ೧೭೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೧೦. ಡಾ. ಗುರುಲಿಂಗ ಕಾಪಸೆ: 'ಮಧುರಚೆನ್ನ', ಪು. ೧೮, ಸಾಹಿತ್ಯ ಅಕಾಡೆಮಿ, ಎ.ಮು., ೨೦೦೮.

೧೧. ಡಾ. ದ.ರಾ.ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೬೪೮, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೧೨. ದ.ರಾ.ಬೇಂದ್ರೆ: 'ಒಲವೆ ನಮ್ಮ ಬದುಕು', ಪು. ೧೨೯, ಗೀತಾ ಬುಕ್ ಹೌಸ್, ಮೈಸೂರು, ದ್ವಿ.ಮು., ೧೯೮೦.

೧೩. ಅದೇ, ಪು. ೧೩೪.

೧೪. ದ.ರಾ.ಬೇಂದ್ರೆ: 'ಒಲವೆ ನಮ್ಮ ಬದುಕು', ಪು. ೧೯೪, ಗೀತಾ ಬುಕ್ ಹೌಸ್, ಮೈಸೂರು, ದ್ವಿ.ಮು., ೧೯೮೦.

೧೫. ಡಾ. ಗುರುಲಿಂಗ ಕಾಪಸೆ: 'ಮಧುರಚೆನ್ನ', ಪು. ೬೫-೬೬, ಸಾಹಿತ್ಯ ಅಕಾಡೆಮಿ, ಎ.ಮು., ೨೦೦೮.

೧೬. ದ.ರಾ.ಬೇಂದ್ರೆ: 'ಒಲವೆ ನಮ್ಮ ಬದುಕು', ಪು. ೧೯೪, ಗೀತಾ ಬುಕ್ ಹೌಸ್, ಮೈಸೂರು, ದ್ವಿ.ಮು. ೧೯೮೦.

೧೭. ಡಾ. ಯು.ಆರ್. ಅನಂತಮೂರ್ತಿ: 'ಭವ್ಯ-ನಿತ್ಯಗಳ ಅಪೂರ್ವ ಸಂಗಮ ಕುವೆಂಪು', ಲೇ. ಪು. ೨೮, (ಕುವೆಂಪು ಒಂದು ಪುನರನ್ವೇಷಣೆ - ಸಂ: ಡಿ.ಎಸ್.ನಾಗಭೂಷಣ), ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೫.

೧೮. ಡಾ. ಪ್ರಭುಶಂಕರ: 'ಕನ್ನಡದಲ್ಲಿ ಭಾವಗೀತೆ', ಪು. ೨೨೫, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ಮೂರನೆ ಮುದ್ರಣ, ೨೦೦೦.

೧೯. ಕುವೆಂಪು: 'ಕುವೆಂಪು ಸಮಗ್ರ ಕಾವ್ಯ-೧', ಪು. ೧೫, ಕ.ವಿ.ವಿ. ಹಂಪಿ, ೨೦೦೦.

೨೦. ಕೆ.ಪಿ. ನಟರಾಜ: 'ಕುವೆಂಪು ಮತ್ತು ಬೇಂದ್ರೆ ಕಾವ್ಯ: ಒಂದು ತೌಲನಿಕ ನೋಟ', ಪು. ೯೩, ಲೇ. ('ಕುವೆಂಪು ಒಂದು ಪುನರನ್ವೇಷಣೆ', ಸಂ: ಡಿ.ಎಸ್.ನಾಗಭೂಷಣ), ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೫.

೨೧. ದ.ರಾ.ಬೇಂದ್ರೆ: 'ಮರ್ಯಾದೆ', ಪು. ೪೪, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೬.

೨೨. ದ.ರಾ.ಬೇಂದ್ರೆ: 'ಸಖಿಗೀತ', ಪು. ೭೫, ಮನೋಹರ ಗ್ರಂಥ ಪ್ರಕಾಶನ ಸಮಿತಿ, ೧೯೪೦.

೨೩. ಅದೇ, ಪು. ೬೫.

೨೪. ಕುವೆಂಪು: 'ಕುವೆಂಪು ಸಮಗ್ರ ಕಾವ್ಯ', ಸಂಪುಟ-೧, ಪು. ೭೫೧, ಕ.ವಿ.ವಿ. ಹಂಪಿ, ೨೦೦೦.

೨೫. ಅದೇ, ಪು. ೧.

೨೬. ಡಾ. ಜಿ.ಎಸ್. ಶಿವರುದ್ರಪ್ಪ: ಕುವೆಂಪು ಸಮಗ್ರ ಕಾವ್ಯಕ್ಕೆ ಒಂದು ಪ್ರವೇಶ', ಪು. XXIV-XXV, ಕುವೆಂಪು ಸಮಗ್ರ ಕಾವ್ಯ-ಸಂಪುಟ-೧, ಕ.ವಿ.ವಿ. ಹಂಪಿ, ೨೦೦೦.

೨೭. ಕುವೆಂಪು: 'ಸಮಗ್ರ ಕಾವ್ಯ ಸಂಪುಟ-೧', ಪು. ೩೩, ಕ.ವಿ.ವಿ. ಹಂಪಿ, ೨೦೦೦.

೨೮. ಕುವೆಂಪು: ಕುವೆಂಪು ಸಮಗ್ರ ಕಾವ್ಯ, ಸಂಪುಟ-೧, ಪು. ೨೨೮, ಕ.ವಿ.ವಿ. ಹಂಪಿ, ೨೦೦೦.

೨೯. ವಿ. ಚಂದ್ರಶೇಖರ ನಂಗಲಿ: ಪು. ೮೦, ('ಕುವೆಂಪು: ಒಂದು ಪುನರನ್ವೇಷಣೆ'), ಸಂ: ಡಿ.ಎಸ್.ನಾಗಭೂಷಣ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೫.

೩೦. ಡಾ. ಕೃಷ್ಣಮೂರ್ತಿ ಹನೂರು: ಕುವೆಂಪು: ಒಂದು ಪುನರನ್ವೇಷಣೆ, ಪು. ೧೫೬, ಸಂ. ಡಿ.ಎಸ್. ನಾಗಭೂಷಣ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೫.

೩೧. ಟಿ.ಎಸ್.ಸತ್ಯನಾಥ: ಪು. ೧೫೨, ಅದೇ.

೩೨. ಪ್ರೊ. ಜಿ.ಎಚ್.ನಾಯಕ: ಸ್ಥಿತಿಪ್ರಜ್ಞೆ, ಪು. ೫೦, ಪ್ರಸಾರಾಂಗ, ಕ.ವಿ.ವಿ. ಹಂಪಿ, ೨೦೦೭.

೩೩. ಕೀರ್ತಿನಾಥ ಕುರ್ತಕೋಟಿ: 'ಯುಗಧರ್ಮ ಮತ್ತು ಸಾಹಿತ್ಯ ವಿಕಾಸ' : ಪು. ೬೭, ಮನೋಹರ ಗ್ರಂಥ ಮಾಲೆ, ಧಾರವಾಡ.

೩೪. ಅದೇ, ಪು. ೬೮.

೩೫. ಅದೇ.

೩೬. ಪ್ರೊ. ಎಚ್.ಎಸ್.ರಾಘವೇಂದ್ರರಾವ್ : 'ಹಾಡೆ ಹಾದಿಯ ತೋರಿತು', ಪು. ೨೨೯, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ, ಬೆಂಗಳೂರು, ೧೯೯೫.

೩೭. ಡಾ. ಕೆ.ವಿ.ನಾರಾಯಣ: 'ಕುವೆಂಪು ಒಂದು ಪುನರನ್ವೇಷಣೆ', ಪು. ೨೧೩, ಸಂ: ಡಿ.ಎಸ್.ನಾಗಭೂಷಣ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೫.

೩೮. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ಯುಗಧರ್ಮ ಹಾಗೂ ಸಾಹಿತ್ಯದರ್ಶನ', ಪು. ೫೭, ಮನೋಹರ ಗ್ರಂಥಮಾಲೆ, ಧಾರವಾಡ.

೩೯. ಬನ್ನಂಜೆ ಗೋವಿಂದಾಚಾರ್ಯ : 'ನಾಕು ತಂತಿ', ಪು. ೩೩೧, (ಬೇಂದ್ರೆ ಕಾವ್ಯ - ಸಂ. ಜಿ.ಎಸ್.ಆಮೂರ), ಕ.ಸಾ.ಅ. ಬೆಂಗಳೂರು, ೨೦೦೩.

೪೦. ಅದೇ, ಪು. ೩೪೩.

೪೧. ಡಾ. ಜಿ.ಎಸ್. ಆಮೂರ: ಪ್ರಸ್ತಾವನೆ, ಪು. ೧೭, 'ಬೇಂದ್ರೆ ಕಾವ್ಯ', (ಸಂ. ಜಿ.ಎಸ್. ಆಮೂರ), ಕ.ಸಾ. ಅ. ಬೆಂಗಳೂರು, ೨೦೦೩.

೪೨. ಡಾ. ಗಿರಡ್ಡಿ ಗೋವಿಂದರಾಜ: 'ಕನ್ನಡ ಕಾವ್ಯ ಪರಂಪರೆ ಮತ್ತು ಬೇಂದ್ರೆಯವರ ಕಾವ್ಯ', ಪು. ೨೨, ಪ್ರಸಾರಾಂಗ ಕ.ವಿ.ವಿ. ಧಾರವಾಡ, ೨೦೦೪.

೪೩. ದ.ರಾ.ಬೇಂದ್ರೆ: 'ಗಂಗಾವತರಣ', ಪು. ೭೨, ಪ್ರತಿಭಾ ಗ್ರಂಥಮಾಲೆ, ಧಾರವಾಡ, ಎ.ಮು. ೧೯೫೫.

೪೪. ಅದೇ.

೪೫. ಅದೇ.

೪೬. ದ.ರಾ.ಬೇಂದ್ರೆ: 'ಹಾಡು-ಪಾಡು', ಪು. ೨೪, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೪೭. ದ.ರಾ.ಬೇಂದ್ರೆ: 'ಗಂಗಾವತರಣ', ಪು. ೬೮, ಪ್ರತಿಭಾ ಗ್ರಂಥಮಾಲೆ, ಧಾರವಾಡ. ಎ.ಮು. ೧೯೫೫.

೪೮. ಡಾ. ಎಂ.ಎಂ.ಕಲಬುರ್ಗಿ : 'ಶತಮಾನದ ಪ್ರತಿಭೆ', 'ಕುವೆಂಪು ಸಮಗ್ರ ಕಾವ್ಯ', ಸಂಪುಟ.೧, ಪು. XIX, ಕ.ವಿ.ವಿ. ಹಂಪಿ, ೨೦೦೦.

೪೯. ಪು.ತಿ.ನ.: 'ಹಸು ಪುಣ್ಯಕೋಟಿ','ಶತಮಾನದ ಸಾಹಿತ್ಯ ವಿಮರ್ಶೆ', ಪು. ೧೮೪, ಸಂ. ಎಚ್.ಎಸ್. ಆರ್., ಕ.ಸಾ.ಅ. ಬೆಂಗಳೂರು.

೫೦. ಪು.ತಿ.ನ.: 'ಸಮಗ್ರ ಕವನಗಳು', ಪು. ೧೫, ಲಿಪಿ ಪ್ರಕಾಶನ, ಬೆಂಗಳೂರು, ೧೯೮೮.

೫೧. ಅದೇ, ಪು. ೯, ೧೦.

೫೨. ಅದೇ, ಪು. ೧೦೭.

೫೩. ಪ್ರೊ. ಎಚ್.ಎಸ್. ರಾಘವೇಂದ್ರರಾವ್ : 'ಹಾಡೆ ಹಾದಿಯ ತೋರಿತು', ಪು. ೧೫೫, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೯೫.

೫೪. ದ.ರಾ.ಬೇಂದ್ರೆ: 'ಸಂಖಿಗೀತ', ಪು. ೧೮-೧೯, ಮನೋಹರ ಪ್ರಕಾಶನ ಸಮಿತಿ, ಧಾರವಾಡ, ೧೯೪೦.

೫೫. ಅದೇ, ಪು. ೧೭.

೫೬. ಪು.ತಿ.ನ. : 'ಸಮಗ್ರ ಕವಿತೆಗಳು', ಪು. ೨೧೭, ಲಿಪಿ ಪ್ರಕಾಶನ, ಬೆಂಗಳೂರು, ೧೯೮೮.

೫೭. ಪು.ತಿ.ನ. : 'ಸಮಗ್ರ ಕವಿತೆಗಳು', ಪು. ೯೨, ಲಿಪಿ ಪ್ರಕಾಶನ, ಬೆಂಗಳೂರು, ೧೯೮೮.

೫೮. ಅದೇ, ಪು. ೬೯.

೫೯. ಅದೇ, ಪು. ೧೫೪.

೬೦. ಅದೇ, ಪು. ೧೫೦.

೬೧. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ನೂರು ಮರ ನೂರು ಸ್ವರ', ಪು. ೨೫೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೬೨. ಅದೇ.

೬೩. ವಿ. ಚಂದ್ರಶೇಖರ ನಂಗಲಿ: 'ತಿಟ್ಟತ್ತಿ ತಿರುಗಿ', ಪು. ೧೫೨, ಶಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೨.

೬೪. ಮಾಸ್ತಿ : 'ನಾದಲೀಲೆ' ಯ ಮುನ್ನುಡಿ, ಪು. ೨೯೨, 'ಬೇಂದ್ರೆ ಕಾವ್ಯ', ಸಂ. ಜಿ.ಎಸ್.ಆಮೂರ, ಕ.ಸಾ.ಅ. ಬೆಂಗಳೂರು, ೨೦೦೩.

೬೫. ಅದೇ, ಪು. ೨೮೧.

೧೬. ಬಿ.ಎಂ.ಶ್ರೀ. : 'ಕೊಳಲು' ಸಂಗ್ರಹಕ್ಕೆ ಮುನ್ನುಡಿ, ಕುವೆಂಪು ಸಮಗ್ರ ಕಾವ್ಯ, ಸಂಪುಟ-೧, ಕ.ವಿ.ವಿ. ಹಂಪಿ, ೨೦೦೦.

೧೭. ದ.ರಾ. ಬೇಂದ್ರೆ : ಸಾಹಿತ್ಯದ ವಿರಾಟ ಸ್ವರೂಪ, ಪು. ೧೫, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೧೮. ದ.ರಾ.ಬೇಂದ್ರೆ : ಯುಗಧರ್ಮ ಮತ್ತು ಸಾಹಿತ್ಯ ವಿಕಾಸ, ಪು. ೭೦, ಮನೋಹರ ಗ್ರಂಥಮಾಲಾ, ಧಾರವಾಡ.

೧೯. ಪ್ರೀತಿ ಶುಭಚಂದ್ರ : 'ಕನ್ನಡ ಕಾವ್ಯ ಮೀಮಾಂಸೆ : ಕುವೆಂಪು ಕೊಡುಗೆ', ಲೇ. (ಕುವೆಂಪು- ಒಂದು ಪುನರನ್ವೇಷಣೆ, ಸಂ. ಡಿ.ಎಸ್. ನಾಗಭೂಷಣ), ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೫.

೨೦. ಡಾ. ಚಿಂತಾಮಣಿ ಕೊಡ್ಲೆಕೆರೆ : ಅಂತರಂಗದ ಆಕಾಶ, ಪು. ೨೦೨, ಚಿತ್ರಮೂಲ ಪ್ರಕಾಶನ, ಅಘನಾಶಿನಿ, ೨೦೦೬.

೨೧. ಜಿ.ಎಸ್. ಶಿವರುದ್ರಪ್ಪ :'ಸಮಗ್ರ ಕಾವ್ಯ', ಪು. ೪೮೬, ಕಾಮಧೇನು ಪ್ರಕಾಶನ, ಬೆಂಗಳೂರು, ೧೯೯೭.

೨೨. ಅದೇ, ಪು. ೫೭.

೨೩. ಅದೇ, ಪು. ೫೬.

೨೪. ಕುವೆಂಪು : ಕುವೆಂಪು ಸಮಗ್ರ ಕಾವ್ಯ, ಸಂಪುಟ. ೧, ಪು. ೬೪೨, ಕ.ವಿ.ವಿ. ಹಂಪಿ, ೨೦೦೦.

೨೫. ಡಾ. ಚೆನ್ನವೀರ ಕಣವಿ : ಕಣವಿ ಸಮಗ್ರ ಕಾವ್ಯ, ಪು. ೨೬೩, ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ, ೧೯೯೬.

೨೬. ಅದೇ ಪು. ೪೨.

೨೭. ಅದೇ ಪು. ೪೪.

೨೮. ಅದೇ ಪು. ೪೪೨.

೨೯. ಅದೇ ಪು. ೧೧೫.

೩೦. ಡಾ. ಚೆನ್ನವೀರ ಕಣವಿ : ಕಣವಿ ಸಮಗ್ರ ಕಾವ್ಯ, ಪು. ೩೨, ೪೨ ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ, ೧೯೯೬.

೩೧. ಅದೇ, ಪು. ೩೯.

೩೨. ಪ್ರೊ. ಕೀರ್ತಿನಾಥ ಕುರ್ತಕೋಟಿ : 'ಕಣವಿಯವರ ಕವಿತೆ ಹೊಸ ಓದು', ಪು. ೨೦, ಸುಮುಖ ಪ್ರಕಾಶನ, ಬೆಂಗಳೂರು, ೨೦೦೮.

೩೩. ಅದೇ, ಪು. ೧೫.

೩೪. ಜಿ.ಎಸ್. ಶಿವರುದ್ರಪ್ಪ: 'ಸಮಗ್ರ ಕಾವ್ಯ', ಪು. ೪೧೧, ಕಾಮಧೇನು ಪ್ರಕಾಶನ, ಬೆಂಗಳೂರು, ೧೯೯೭.

೩೫. ಅದೇ, ಪು. ೨೧೯.

೩೬. ಅದೇ, ಪು. ೨೨೧.

೮೭. ಜಿ.ಎಸ್. ಶಿವರುದ್ರಪ್ಪ: 'ಸಮಗ್ರ ಕಾವ್ಯ', ಪು. ೧೨೪, ಕಾಮಧೇನು ಪ್ರಕಾಶನ, ಬೆಂಗಳೂರು, ೧೯೯೭.

೮೮. ಚೆನ್ನವೀರ ಕಣವಿ: 'ಕಣವಿ ಸಮಗ್ರ ಕಾವ್ಯ', ಪು. ೪೪೧, ವೀರಶೈವ ಅಧ್ಯಯನ ಅಕಾಡೆಮಿ, ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ, ೧೯೯೬.

೮೯. ಜಿ.ಎಸ್.ಶಿವರುದ್ರಪ್ಪ : ಸಮಗ್ರ ಕಾವ್ಯ, ಪು. ೫೧, ಕಾಮಧೇನು ಪ್ರಕಾಶನ, ಬೆಂಗಳೂರು, ೧೯೯೭.

೯೦. ಚೆನ್ನವೀರ ಕಣವಿ: 'ಕಣವಿ ಸಮಗ್ರ ಕಾವ್ಯ', ಪು. ೪೪೦.

೯೧. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ನೂರು ಮರ ನೂರು ಸ್ವರ', ಪು. ೩೦೯, ಪ್ರಸಾರಾಂಗ, ಕ.ವಿ.ವಿ. ಹಂಪಿ, ೧೯೯೮.

೯೨. ದ.ರಾ.ಬೇಂದ್ರೆ : 'ಕಾವ್ಯಾಕ್ಷಿಗೆ' ಮುನ್ನುಡಿ; ಪು. ೩೭೯, 'ಬೆಳ್ಳಿ ತೇರಿನ ದಾರಿ', ಸಂ : ಡಾ. ಜಿ.ಎಸ್. ಕಾಪಸೆ ಮತ್ತು ಡಾ. ಜಿ.ಎಂ. ಹೆಗಡೆ, ಅಂಕಿತ ಪುಸ್ತಕ, ಬೆಂಗಳೂರು, ೨೦೦೩.

೯೩. ಡಾ. ಜಿ.ಎಸ್. ಆಮೂರ : 'ಕಣವಿ ಸಮಗ್ರ ಕಾವ್ಯ'ದ ಪ್ರಸ್ತಾವನೆ, ಅದೇ, ಪು. ೪೦೫.

೯೪. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ಧಾರವಾಡ ತತ್ವ', ಲೇ. ಅದೇ ಸಂಪಾದಿತ ಸಂಕಲನ, ಪು. ೧೨೯.

೯೫. ಚೆನ್ನವೀರ ಕಣವಿ: 'ಸಾಹಿತ್ಯ ಸಮಾಹಿತ', ಪು. ೧೯, ಕ.ವಿ.ವಿ. ಹಂಪಿ, ೨೦೦೭.

೯೬. ಅದೇ, ಪು. ೧೭.

೯೭. ಅದೇ, ಪು. ೧೭-೧೮.

೯೮. ದ.ರಾ.ಬೇಂದ್ರೆ : 'ಕುವೆಂಪು : ಒಂದು ಪುನರನ್ವೇಷಣೆ', ಕೃತಿಯ ಹಿಂಬದಿ ರಕ್ಷಾಪುಟ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೫.

ಅಧ್ಯಾಯ – ಆರು

ಬೇಂದ್ರೆ ಕಾವ್ಯದಲ್ಲಿ ನಿಸರ್ಗದ ಅನುಭೂತಿ

ಅಧ್ಯಾಯ : ಆರು

ಬೇಂದ್ರೆ ಕಾವ್ಯದಲ್ಲಿ ನಿಸರ್ಗದ ಅನುಭೂತಿ

೬.೧ ಪೀಠಿಕೆ :

ಪ್ರಕೃತಿಯನ್ನು ಬರೀ ಸೌಂದರ್ಯ ಆರಾಧನೆಯ ದೃಷ್ಟಿಯಿಂದ ಬೇಂದ್ರೆಯವರು ನೋಡಲಿಲ್ಲ. ಬದಲಾಗಿ ನಿಸರ್ಗದೊಡನೆ ಮನುಷ್ಯ ತುಳಿಯುತ್ತಿರುವ ಹಾದಿಯನ್ನು ಅವಲೋಕಿಸುತ್ತ ಅಲೌಕಿಕ ಶಕ್ತಿಯ ಚೈತನ್ಯದ ಸಂಬಂಧಗಳಲ್ಲಿ ಪ್ರಕೃತಿ ಮತ್ತು ಮನುಷ್ಯ ಬದುಕುನ್ನು ಬೆಸೆಯುವುದರೊಂದಿಗೆ ಅದುವರೆಗೂ ಅಭಿವ್ಯಕ್ತಿಯಾಗದೆ ಉಳಿದಿದ್ದ ನಿಸರ್ಗದ ನಾನಾ ರೂಪಗಳು ವಿರಾಟ ವ್ಯಾಪ್ತಿಯಲ್ಲಿ ಪ್ರಕಟಗೊಳ್ಳುವಂತೆ ಅವರು ನೋಡಿಕೊಂಡರು. ತಮ್ಮ ಕವಿತೆಗಳಲ್ಲಿ ನಿಸರ್ಗದ ವಿವರಗಳನ್ನು ಕೊಡುವಾಗ ಅವರು ಕಂಡುಕೊಂಡ ಆನಂದ ಹಾಗೂ ವಿಷಾದಗಳ ಅನುಭವ ಸಹೃದಯನಲ್ಲೂ ಉಂಟಾಗುವುದರಿಂದ ಕವಿ ದೊರಕಿಸಿಕೊಂಡ ಅನುಭೂತಿ ಹೆಚ್ಚಾನುಹೆಚ್ಚು ಓದುಗನಿಗೂ ಮುಟ್ಟುವುದರಲ್ಲಿ ಸಂಶಯವಿಲ್ಲ. ಹೊಸ ಹೊಸ ಕಲ್ಪನೆಗಳನ್ನು ಕೊಡುವ ಚತುರಮತಿಯಾಗಿ, ಆಳ ಪ್ರೇರಣೆಗಳನ್ನು ನೀಡುವ ಪ್ರವರ್ತಕನಾಗಿ ಕವಿ ಬೇಂದ್ರೆ ದುಡಿದಿದ್ದರಿಂದ ಹೊಸ ನೀರು, ಹೊಸ ಬೆಳಕಿಗೆ ಕನ್ನಡ ಕಾವ್ಯ ತಣಿಯಿತು. ಪ್ರಕೃತಿಯಿಂದ ಏನೆಲ್ಲ ಬೇಂದ್ರೆ ಪಡೆದರು ಹಾಗೂ ತಮ್ಮ ಪ್ರತಿಭಾಶಕ್ತಿಯಿಂದ ಪ್ರಕೃತಿಯನ್ನು ಹೇಗೆ ಹಿಡಿದಿಟ್ಟರೆನ್ನುವುದು ಇಲ್ಲಿ ಮುಖ್ಯವಾಗುತ್ತದೆ. ನಿಸರ್ಗ ಅವರಲ್ಲಿ ನೋವುಣ್ಣುವ, ನಲಿಯುವ ಬಗೆಗಳು ಅಸಾಧಾರಣವಾದವುಗಳು. ಸೂರ್ಯ, ಚಂದ್ರ, ಭೂಮಿ, ಆಕಾಶ, ಗುಡ್ಡ, ಬೆಟ್ಟ, ನೀರು, ನದಿ, ಮಳೆ, ಮುಗಿಲು ಮುಂತಾದವುಗಳು ಭಾಷೆಯಲ್ಲಿ ಜೀವಚೈತನ್ಯದಿಂದ ನಳನಳಿಸುತ್ತವೆ. ಅವು ತಮ್ಮ ಅಂತರ್ಯವನ್ನು ತೆರೆದಿಡುವದರ ಜೊತೆಗೆ ತಮ್ಮ ಮೇಲಿನ ಮನುಷ್ಯನ ಆಕ್ರಮಣವನ್ನು ಕೂಡ ವಿರೋಧಿಸುವ ಕೆಲಸ ಮಾಡುತ್ತವೆ. ಕೋಮಲವಾಗಿರುವ ವಸುಧೆ ತಾನು ಉಸಿರಿರುವ ಒಡಲೆಂದು ಮನುಷ್ಯನಲ್ಲಿ ಎಚ್ಚರ ಮೂಡಿಸುತ್ತಾಳೆ.

ಮುತ್ತಾಗಿ ಹೊಳೆಯುವ ಮೂಡಲದ ಬೆಳಕಿನ ತೋರಣ, ಚಂದ್ರಜ್ಯೋತಿಯ ಮಾರ್ದವತೆಯನ್ನು ಹೀರಿಕೊಳ್ಳುವ ತಾಣ, ಮೊದಲಗಿತ್ತಿ ತಾಯಿಯಾಗುವ ಸಂಭ್ರಮದ ಶ್ರಾವಣ ಮುಂತಾದ ಪ್ರಾಕೃತಿಕ ಚೇತನಗಳು ಮನುಷ್ಯನ ಹಿಂಸಾ ಪ್ರವೃತ್ತಿಯನ್ನು ತಗ್ಗಿಸಿ ಅವನೆದೆಗೆ ವಾತ್ಸಲ್ಯದ ಹಾಲು ಹರಿಸುವ ಶಕ್ತಿ ಹೊಂದಿವೆಯೆಂದು ಬೇಂದ್ರೆ ನಂಬುತ್ತಾರೆ. ಬದುಕನ್ನು ಉದ್ದೀಪನಗೊಳಿಸುವ ಸಾಮರ್ಥ್ಯ ನಿಸರ್ಗದಲ್ಲಿರುವುದನ್ನು ಅವರು ಮತ್ತೆ ಮತ್ತೆ ಸಾಬೀತುಪಡಿಸುತ್ತಾರೆ. ಬದುಕಿನ ಸಂಭ್ರಮದ ಹರಿವಿನಲ್ಲಿ ಕೆಡುಕುಗಳು ಇಣುಕಿ ಹಾಕುತ್ತವೆ. ದಾರಿ ತಪ್ಪಿಸುತ್ತವೆ. ಆದರೆ ನಿಸರ್ಗ ಅವುಗಳನ್ನು ಮೀರುವ, ಮೆಟ್ಟುವ ಗುಣಗಳಿಂದ ಸಮೃದ್ಧವಾಗಿರುವುದರಿಂದ ಆನಂದ ಮತ್ತು ಶಾಂತಿಯ ಕ್ಷಿತಿಜಗಳನ್ನು ಅರಸಿ ಹೋಗುವುದಕ್ಕೆ ಅಡೆತಡೆಗಳಿಲ್ಲವೆಂದು ಬೇಂದ್ರೆ ಕವಿತೆಗಳು ಸ್ಪಷ್ಟಪಡಿಸುತ್ತವೆ. ಪ್ರಕೃತಿಯ ರುದ್ರ, ಕರುಣ, ಮಧುರ, ಭಯಾನಕ ಹಾಗೂ ಶಾಂತ ರೂಪಗಳನ್ನು ಮನುಷ್ಯ ಬದುಕಿನೊಂದಿಗೆ

ಸಮೀಕರಿಸುವ ಮೂಲಕ ಬೇಂದ್ರೆ, ಅಪ್ಪಟ ಜೀವನಪ್ರೀತಿಯನ್ನು ಮೆರೆಯುತ್ತಾರೆ. ಮನುಷ್ಯನ ಬಾಳಿಗೆ ಹೊಸ ಹೊಸ ಅರ್ಥ ಹಚ್ಚುತ್ತಾರೆ. ಕೇಡ ಕಳೆಯುತ್ತಾರೆ. ಬೆಳಕು, ಬೆಳದಿಂಗಳು, ಭೂಮಿ, ಭೂಮಿಯ ಹಸಿರು, ಜೀವನದಿಯ ನೀರು, ಸ್ವರ್ಗವನ್ನು ನೆನಪಿಸುವ ನಾಡು, ಚೆಲುವ ಕೋಗಿಲೆಯ ಹಾಡು ಮುಂತಾದವು ಬೇಂದ್ರೆ ಕಾವ್ಯದಲ್ಲಿ ಮೈದಳೆಯುವ ರೀತಿಯನ್ನು ಒಂದಷ್ಟು ವಿವರವಾಗಿ ನೋಡಬಹುದಾಗಿದೆ.

೬.೨ 'ಬೆಳಕಿನಿಂದ ಬಂದೇವಣ್ಣ ಬೆಳಕಿನತ್ತ ನಡೆದೆವು' :

ಬೆಳಕು, ಅದು ಸೂರ್ಯನದಿರಲಿ ಅಥವಾ ಚಂದ್ರನದಿರಲಿ, ಬೇಂದ್ರೆ ಕವಿತೆಯನ್ನು ಪ್ರವೇಶಿಸುವ, ಆವರಿಸುವ ಮತ್ತು ಅದನ್ನು ಪ್ರತಿಫಲಿಸುವ ರೀತಿ ತುಂಬ ವಿಶಿಷ್ಟವಾದುದು. ಬೆಳಕನ್ನು ಕುರಿತ ಅವರ ಕವಿತೆಗಳು ತಮ್ಮೊಳಗಿನ ಉಜ್ವಲ ಬೆಳಕಿನಿಂದ ಪ್ರಕಾಶಿಸುತ್ತವಷ್ಟೆ ಅಲ್ಲ, ಮರಳಿ ನಿಸರ್ಗದ ಮೇಲೆ ಬೆಳಕು ಚೆಲ್ಲುತ್ತವೆ. ಅದರೊಡನೆ ಅನುಸಂಧಾನ ನಡೆಸುತ್ತವೆ. ಬೆಳಕಿನೊಡನೆ ಬದುಕನ್ನು ಹೊಂದಿಸುವ ರೀತಿಯೊಂದು ಅವರ ಕವಿತೆಗಳಲ್ಲಿ ನಿರಂತರವಾಗಿ ಕೆಲಸ ಮಾಡುತ್ತಿರುತ್ತದೆ. ಶ್ರಾವಣದ ಕವಿಯೆಂದು ಹೆಸರಾಗಿರುವ ಬೇಂದ್ರೆ; ಬೆಳಕಿನ ಕವಿಯೂ ಹೌದು. ಬೆಳಕನ್ನು ಕುರಿತು ಅವರು ನೂರಾರು ಕವಿತೆಗಳನ್ನು ಬರೆದಿದ್ದಾರೆ. ಹಲವಾರು ಕವಿತೆಗಳಲ್ಲಿ ಅದು ಪರೋಕ್ಷವಾಗಿ ಬೆಳಕು ಹಿಡಿಯುತ್ತಿರುತ್ತದೆ. ಬದುಕಿನ ಹಲವು ಸಂಗತಿಗಳ ಮೇಲೆ ಬೆಳಕನ್ನು ಕೇಂದ್ರೀಕರಿಸುತ್ತಿರುತ್ತದೆ.

ಮನುಷ್ಯನ ಅಂತರಂಗದ ಅವ್ಯಕ್ತ ನೆಲೆಗಳನ್ನು ಹುಡುಕಿ ಅವುಗಳನ್ನು ದೀಪ್ತಗೊಳಿಸುವ ಕಾಳಜಿಯನ್ನು ಅವರ ಕವಿತೆಗಳೊಳಗಿನ ಬೆಳಕು ನಿರ್ವಹಿಸುತ್ತದೆ. ಆ ಬೆಳಕಿನ ಗುರಿ ಮನುಷ್ಯನ ಆಂತರ್ಯವನ್ನು, ಅವನ ಬಾಳಿನ ಹಾದಿಯನ್ನು ಬೆಳಗುವುದೆ ಆಗಿದೆ. 'ಬೆಳಗು', 'ನಸುಕು ಬಂತು ನಸುಕು', 'ಬೆಳಕಿನ ತಾಯಿ', 'ಸೂರ್ಯನ ಹೊಳಿ', 'ಬಿಳಿಕಣಗಿಲ', 'ಲಾಸ್ಯವಾಡಬಾರೆ ಉಷಾ', 'ಚಿಗುರು ಬೆಳಕು', 'ಬೆಳಗು ಜಾವ', 'ಮೌನ' ಮುಂತಾದ ಕವಿತೆಗಳಲ್ಲದೆ ಬೆಳದಿಂಗಳನ್ನು ಕುರಿತ 'ಬೆಳುದಿಂಗಳ ನೋಡs', 'ದವನದ ಹುಣ್ಣಿಮೆಯ ಜಾತ್ರೆಯ ರಾತ್ರಿ', 'ಬಿದಿಗೆ ಚಂದ್ರ ಬಂದ ನೋಡು', 'ರಾಗರತಿ', 'ಅನಂತ ಪ್ರಣಯ' ಇತ್ಯಾದಿ ಕವಿತೆಗಳ ಮೂಲಕ ಬೆಳಕಿನ ಬುಗ್ಗೆ ಪುಟಿಯುವಂತೆ ಮಾಡುತ್ತಾರೆ.

ಮನುಷ್ಯನ ಬದುಕಿನ ವ್ಯಾಪಾರ ಪ್ರತಿದಿನದ ಬೆಳಗಿನಿಂದಲೇ ಆರಂಭವಾಗುತ್ತದೆ. ಕತ್ತಲು ಮುಗಿದು ಬೆಳಕು ಹರಿಯುವ ಕ್ಷಣಗಳನ್ನು ಬೇಂದ್ರೆಯವರು ಹಿಡಿದಿಡುವ ರೀತಿ ಮಾತ್ರ ಅಸ್ವಾದೃಶವಾದುದು. ಕವಿ ನೀಡುವ ಚಿತ್ರ ಬರೀ ಸ್ವಾಭಾವಿಕವಾದುದಲ್ಲ. ಅದು ವಿಲಕ್ಷಣವಾದುದು, ವಿಸ್ಮಯಪಡುವಂತಹುದು. ಬೇಂದ್ರೆ ಚಿತ್ರಿಸುವ ಬೆಳಗು ಬದುಕಿನ ಸತ್ಯಗಳನ್ನು ಅನಾವರಣಗೊಳಿಸುವಂತಹದು. ಅದು ಉಕ್ಕುವ ಬೆಳಕಿನ ಝರಿಯಾಗಿದೆ, ಮೊಗ್ಗು ಅರಳಿಸುವ ಸೆಲೆಯಾಗಿದೆ. ಜೀವನವನ್ನು ಪವಿತ್ರಗೊಳಿಸುವ ಸೂರ್ಯನ ಹೊಳೆಯಾಗಿದೆ.

ಬೇಂದ್ರೆಯವರ 'ಬೆಳಗು' ಪದ್ಯ ಕನ್ನಡ ಕಾವ್ಯಲೋಕದಲ್ಲಿ ಹೊಸ ಸಂಚಲನ ಮೂಡಿಸಿದ ಪದ್ಯ. ಅದುವರೆಗೂ ಕನ್ನಡದ ಭಾವಗೀತೆಯೊಂದು ಈ ತೆರನಾಗಿ ಪ್ರಕೃತಿಯನ್ನು ಆವಾಹಿಸಿಕೊಳ್ಳುವ, ಸುಂದರ ಬೆಳಗಿನಲ್ಲಿ ಮನುಷ್ಯನ ಅಂತರ್ಯವನ್ನು ನಿಶಿತಗೊಳಿಸಿಕೊಳ್ಳುವ ಸೃಜನಶೀಲ ಮಹತ್ತಿಗೆ ದುಡಿದಿರಲಿಲ್ಲ. ಜಾನಪದೀಯ ಹಾಗೂ ದೇಸಿ ನುಡಿಗಟ್ಟಿನ ಕಾವ್ಯದ ಆಕೃತಿಯಲ್ಲಿ ಬೇಂದ್ರೆಯವರು ಪ್ರತಿಭೆಯ ಹೊಸ ಮುಖವನ್ನೇ ತೆರೆದಿಟ್ಟರು. ಮೂಡಲದ ಮನೆಯಿಂದ ತೂರಿಬರುವ ಬೆಳಕು ಮುತ್ತಿನ ನೀರಿನಂತೆ ಭಾಸವಾಗುವ ಕಲ್ಪನೆಗೆ ಓದುಗ ಬೆರಗುಪಡುವಂತಾಯಿತು. ಕವಿಯೊಬ್ಬ ನಿಸರ್ಗದಲ್ಲಿ ಎಷ್ಟರ ಮಟ್ಟಿಗೆ ತಲ್ಲೀನಗೊಳ್ಳಬಹುದೆಂದು; ತಲ್ಲೀನಗೊಂಡ ಭಾವದಿಂದ ಎಷ್ಟೆಲ್ಲ ರೀತಿಯಲ್ಲಿ ಅದನ್ನು ವರ್ಣಿಸಬಹುದೆಂದು ಸಹೃದಯರಿಗೆ ಮನದಟ್ಟಾಯಿತು. ಎಷ್ಟೆಲ್ಲ ಆನಂದದ ಅನುಭೂತಿಯನ್ನು ಬೆಳಗೊಂದು ದೊರಕಿಸಬಲ್ಲುದೆಂದು ಬೇಂದ್ರೆ ಕಾವ್ಯರಸಿಕರಿಗೆ ಮನಗಾಣಿಸಿದರು. ಕಣ್ಣು, ಕಿವಿ, ಮೂಗು, ನಾಲಿಗೆ, ಮೈ ಎನ್ನುವ ದೇಹದ ಪಂಚೇಂದ್ರಿಯಗಳಿಗೆ ಸುಖದ ಸ್ಪರ್ಶ ನೀಡುವ; ಒಳಗಣ್ಣು ತೆರೆದು ಸೃಷ್ಟಿಯ ಹಿಂದಿನ ಬೆರಗನ್ನು ಆವಾಹಿಸಿಕೊಳ್ಳುವ; ಮನಸ್ಸೆಂಬ ಮನೆಯ ಎಲ್ಲ ಕಿಟಕಿ, ಬಾಗಿಲು ತೆರೆದು ದೇವರ ಬೆಳಕನ್ನು ತುಂಬಿಕೊಳ್ಳುವ ಹಲವು ಅಲೌಕಿಕತೆಯ ಅರ್ಥಗಳು ಲೋಕ ವ್ಯಾಪಾರದ ಬೆಳಗಿನ ವರ್ಣನೆಯ ಮೂಲಕವೆ ಸ್ಫುಟಗೊಳ್ಳುವುದು ಈ ಕವಿತೆಯ ಹೆಚ್ಚುಗಾರಿಕೆಯಾಗಿದೆ. ಕಾರಂಜಿಯಿಂದ ಪುಟಪುಟನೆ ಪುಟಿಯುವ ರತ್ನದ ರಸ, ಪಟಪಟನೆ ಒಡೆಯುವ ಮೊಗ್ಗು, ಎಲೆಗಳ ಮೇಲೆ ಅಮೃತದ ಬಿಂದುಗಳಂತೆ ತೋರುವ ನೀರಿನ ಹನಿ, ಗಿಡಗಂಟಿಗಳ ಕೊರಳಿನಿಂದ ಬಿತ್ತರವಾಗುತ್ತಿರುವಂತೆ ಭಾಸವಾಗುವ ಹಕ್ಕಿಯ ಹಾಡು ಮುಂತಾದ ಅಪರೂಪವೆನ್ನಿಸುವ ಸಂಗತಿಗಳಿಂದ ಬೆಳಗಿನ ಪ್ರಪಂಚ ಅಕ್ಷರಶಃ ಪ್ರತಿಸ್ವರ್ಗದಂತೆ ಕಾಣುತ್ತದೆಯೆಂದು ಬೇಂದ್ರೆಯವರಿಗೆ ಹೇಳಬೇಕಾಗಿದೆ.

ಎಲೆಗಳ ಮೇಲೇ ಹೂಗಳ ಒಳಗೇ
ಅಮೃತದ ಬಿಂದು
ಕಂಡವು - ಅಮೃತದ ಬಿಂದು
ಯಾರಿರಿಸಿರುವರು ಮುಗಿಲ, ಮೇಲಿಂ-
ದಿಲ್ಲಿಗೇ ತಂದು
ಈಗ - ಇಲ್ಲಿಗೇ ತಂದು[1]

ಕಣ್ಣಿಗೆ ಕಾಣದ ಚೈತನ್ಯ ಶಕ್ತಿ ಮುಗಿಲಿನ ಅಮೃತವನ್ನು ನೆಲಕ್ಕೆ ಹರಿಸಿದೆಯೆಂದು ಕವಿ ಹೇಳುವುದು ಸ್ಪಷ್ಟವಾಗುತ್ತದೆ. ತನ್ಮಯತೆಯಿಂದ ಸವಿದರೆ ಕಾಣದ ಲೋಕ ಅನಾವರಣಗೊಳ್ಳುತ್ತದೆ.

ಕಂಡಿತು ಕಣ್ಣು ಸವಿದಿತು ನಾಲಗೆ
ಪಡೆದೀತೀ ದೇಹಾ

ಸ್ಪರ್ಶ-ಪಡೆದೀತಿದೇಹಾ

ಕೇಳಿತು ಕಿವಿಯು ಮೂಸಿತು ಮೂಗು

ತನ್ಮಯದಿ ಗೇಹಾ

ದೇವರ-ದೀ ಮನಸಿನ ಗೇಹಾ[೧]

ಈ ಗಾಳಿ ಬೆಳಕಿನ ಸ್ಪರ್ಶ ಅಪರೂಪವಾದದ್ದೆಂದು, ಅಮೃತವನ್ನೆರೆಯುವವನ ಹತ್ತಿರ ಕೊಂಡೊಯ್ಯಬಲ್ಲುದೆಂದು ಧಾರವಾಡದ ಒಂದು ಪ್ರದೇಶದ ಸಹಜ, ವಾಸ್ತವ ವರ್ಣನೆಯ ಮೂಲಕ ಬೇಂದ್ರೆ ಹೇಳುವುದು ಸ್ಪಷ್ಟವಾಗಿದೆ. ಗಾಳಿಯಲ್ಲಿ ತೇಲಿಬರುತ್ತಿರುವ ಗಂಧ, ಮಗಮಗಿಸುವ ಹೂವುಗಳ ವಾಸನೆ, ಮಧುರ ನಾದ ತುಂಬುತ್ತಿರುವ ಹಕ್ಕಿಯ ಹಾಡು, ಬೆಳಕಿನ ಕಾರಂಜಿ, ದುಂಬಿಯ ದಂಡು ಮುಂತಾದ ಬೆಳಗಿನ ಲೋಕದ ವಿಸ್ಮಯಗಳು ಎಷ್ಟೊಂದು ಅಮೂಲ್ಯವಾದವುಗಳೆನ್ನುವ ಸಂಗತಿಯನ್ನು ಹೇಳುವುದರ ಜೊತೆಗೆ ಭೂಮಿಯನ್ನು ಗಂಧರ್ವರ ಸೀಮೆಗೆ ಹೋಲಿಸಿ ಇಹ-ಪರಗಳ ನಡುವಿರಬಹುದಾದ ಸಂಬಂಧದ ತಂತುಗಳನ್ನು ಅನುಭವವೇದ್ಯವಾಗಿಸುತ್ತಾರೆ. ಸೂರ್ಯನ ಬೆಳಕು ಮನುಷ್ಯನ ಕ್ರಿಯೆಗಳಿಗೆ ಅರ್ಥ ಹಚ್ಚುವ ಕೆಲಸ ಮಾಡುತ್ತದೆಯೆಂದು ಹೇಳುವ ಕೀರ್ತಿನಾಥ ಕುರ್ತಕೋಟಿ ‘ಜಗತ್ತಿನಲ್ಲಿ ನಡೆಯುವ ವ್ಯಾಪಾರಗಳಿಗೆಲ್ಲ ಸೂರ್ಯನ ಬೆಳಕು ಪ್ರೇರಕ ಶಕ್ತಿಯಷ್ಟೇ ಅಲ್ಲದೆ ಆ ವ್ಯಾಪಾರಗಳನ್ನು ಅರ್ಥಪೂರ್ಣವಾಗುವಂತೆ ಹೊಂದಿಸುವ ಕಲೆಯೂ ಆಗುತ್ತದೆ. ಈ ಬೆಳಕಿನಾಟದಲ್ಲಿ ವಸ್ತು ವಸ್ತುಗಳಿಗಿರುವ ಮತ್ತು ಪರವಸ್ತುವಿನ ಜೊತೆಗಿನ ಸಂಬಂಧಗಳೆಲ್ಲ ಕಾಣತೊಡಗುತ್ತವೆ. ಅದೃಷ್ಟದ ಕೈವಾಡ ಕಣ್ಣಿಗ ಕಾಣದಿದ್ದರೂ ಅನುಭವಗೋಚರವಾಗುತ್ತದೆ ಮತ್ತು ಅಂಥ ಅನುಭವಕ್ಕೆ ಈ ಕವಿತೆ ಮಾತು ಕೊಟ್ಟಿದೆ’[೨] ಎಂದು ಅಭಿಪ್ರಾಯಪಡುತ್ತಾರೆ. ಅಲೌಕಿಕತೆಯ ಕಡೆಗೆ ಕೈ ಚಾಚುವ ತುಡಿತ ಬೇಂದ್ರೆಯವರ ಪ್ರಾರಂಭದ ಕವಿತೆಗಳಲ್ಲಿ ಒಂದಾದ ‘ಬೆಳಗು’ ಪದ್ಯದಲ್ಲಿಯೆ ಕಾಣುವುದು ಅನುಭಾವಿಕ ಅಂಶಗಳು ಅವರ ಕಾವ್ಯ ಬದುಕಿನುದ್ದಕ್ಕೂ ಚಾಚಿಕೊಂಡಿರುವುದಕ್ಕೆ ನಿದರ್ಶನವಾಗಿದೆ.

ಮುಂಜಾನೆಯ ಚುಮುಚುಮು ಬೆಳಕಿನಲ್ಲಿರುವ ಜೀವಶಕ್ತಿಯನ್ನು ಎಷ್ಟು ವರ್ಣಿಸಿದರೂ ಬೇಂದ್ರೆಯವರಿಗೆ ತೃಪ್ತಿಯಿಲ್ಲ. ವಿಶಾಲವಾದ ಬಯಲಿನಲ್ಲಿ ಬೆಳಕಿನ ಬಳ್ಳಿ ಕುಡಿಬಿಟ್ಟಿದೆ. ‘ನಸುಕು ಬಂತು ನಸುಕು’ (ಗಂಗಾವತರಣ) ಕವಿತೆಯಲ್ಲಿ, ಮುಂಜಾವನ್ನು ಸೂಸುತ್ತಿರುವ ಬೆಳಗು ಮನುಷ್ಯನ ಉತ್ಸಾಹಕ್ಕೆ ಉನ್ಮಾದವನ್ನು ಸೇರಿಸುತ್ತಿದೆ. ನಸುಕು ಹರಿಸುವ ಕ್ರಿಯೆಯಲ್ಲಿ ಬದುಕಿನ ಬಳ್ಳಿ ಬೆಳಕಚಿಗುರಿನಿಂದ ನಳನಳಿಸುತ್ತಿರಲೆಂಬ ಆಶಯವಿದೆ :

ಬೆಳಕು ಗಾಳಿ ತಾಕಿ ಚಳಿತು

ಇರುಳ ಮರವು ಒಡೆದು ತಳಿತು

ಅರುಣ ಗಂಧ ಹರುಹಿ ಒಳಿತು

ನಸುಕು ಬಂತು[೩]

ಬೆಳಕು ಪಸರಿಸುತ್ತ ನೂರು ದಾರಿಯಲ್ಲಿ ನಮ್ಮೆದುರು ನಡೆದು ಬರುವಾಗ ನಾವು ಬೆಳಕಿನತ್ತ ನಡೆಯಲಾರೆವೆ ಎನ್ನುವ ಪ್ರಶ್ನೆಯನ್ನು ಬೇಂದ್ರೆ ಹಾಕಿಕೊಳ್ಳುತ್ತಾರೆ. ಜೀವ ಸಂಚಲನ ಕಿರಣವಾಗಿ, ವಾತ್ಸಲ್ಯಕ್ಕೆ ಬಾಯಾಗಿ, ನಸುಕಿನ ಶುಭ್ರ ನಗೆಯಾಗಿ ಅಖಿಲ ಜೀವಜಾತವನ್ನು ಪೊರೆಯುವ ತಾಯಿಯ ಸ್ವರೂಪದಲ್ಲಿ ಸೂರ್ಯನ ಬೆಳಕನ್ನು ಕವಿ ಕಾಣುತ್ತಾರೆ.

ಬಾರೆ ಬೆಳಕಿನ ತಾಯಿ

ಜೀವ ಜೀವದ ಬಾಯಿ

ಅಂಬೆಗರೆಯುತ್ತ ಬಾ - ತಾರೆ ಮಾಮಾಯಿ

ಹಣ್ಣು ಹೂ ಕಾಯಿ[೫]

ಬದುಕಿನ ಲೋಕಕ್ಕೆ ಹರಿದು ಬರುವ ಬೆಳಕು ಒಂದು ದೊಡ್ಡ ಹೊಳೆಯಾಗುವ, ಜೀವನದಿಯಾಗುವ ಅದ್ಭುತ ಕಲ್ಪನೆ ಸೂರ್ಯನಿಗೆ ಹೊಸ ಆಯಾಮವನ್ನು ಕೊಡುವಂತಹದು. ಮನುಷ್ಯನ ಜೀವನ ದಂಡೆಗೆ ನೀರು ಉಣ್ಣಿಸುವ, ಬದುಕನ್ನು ಪರಿಶುದ್ಧಗೊಳಿಸುವ ಹೊಳೆಯಾಗಿ ಬೆಳಕು ಪರಿವರ್ತಿತವಾಗುವ ಬಗೆ ಬೇಂದ್ರೆ ಕಟ್ಟಿಕೊಡುವ ಮಹತ್ವದ ನಿಸರ್ಗರೂಪಕವಾಗಿದೆ.

ಬಂದsದ ಸೂರ್ಯನs ಹೊಳೀ

ನಡೀ ಮೈ ತೊಳಿ, ನೀರಿನ್ಯಾಗಿಳಿ

ಬಾ ಗೆಣೆಯಾ ಯಾಕ ಮೈ ಛಳಿ[೬]

ಚೈತನ್ಯ ಸ್ವರೂಪವಾಗಿರುವ ಸೂರ್ಯನ ಚುಮುಚುಮು ಬೆಳಕಿನಲ್ಲಿ ಮೀಯುವದೆಂದರೆ ಚೈತನ್ಯದ ಬೆಳಕಿನಲ್ಲಿ ತನ್ಮಯದಿಂದ ಒಂದಾಗುವುದಾಗಿದೆ. ಆ ಲೋಕದ ಅನಂತ ಪ್ರಕಾಶದಿಂದ ಈ ಲೋಕವನ್ನು ಬೆಳಗಿಕೊಳ್ಳಬೇಕೆನ್ನುವ ಬಯಕೆ ಕವಿಯದಾಗಿದೆ. ರವಿಯ ತೇಜಃಪುಂಜವು ನದಿಯಾಗಿ ಸಾಗುವ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸುವ ಬೇಂದ್ರೆಯವರು ಪ್ರಕೃತಿಯ ಸಂಗದಲ್ಲಿ ಮನುಷ್ಯ ಪರಿಶುದ್ಧ ವ್ಯಕ್ತಿತ್ವವುಳ್ಳವನಾಗಬಲ್ಲನೆಂದು ನಂಬಿದರು. ಬೆಳಕು ಚಿಗುರುವ, ಅರಳುವ, ಘಮಘಮವೆನ್ನುವ ತಲ್ಲೀನತೆಯನ್ನು ಅವರ ಕಾವ್ಯದ ಸಾಲುಗಳಲ್ಲಿ ನೋಡಬಹುದು.

ಚಿಗತsದ ನಸುಕಿನಾ ಚಿಗುರು

ಘಮಘಮ ಅಗುರು-

ಗಂಧದ ತಿಗುರು -

ಅಳ್ಳ್ಯಾsದ ಹೊತ್ತು ಹೂ ಹಗುರು[೭]

ಹೊತ್ತು ಅರಳಲಿಕ್ಕೆ ಸಾಧ್ಯವಾಗುವುದಾದರೆ, ಬೆಳಕಿನ ಬಳ್ಳಿ ಕುಡಿಯೊಡೆಯಬಲ್ಲುದಾದರೆ ಮನಸ್ಸು ಜ್ಯೋತಿಯನ್ನರಸುತ್ತ ಹೋಗುವುದಕ್ಕೆ ಯಾಕೆ ಸಾಧ್ಯವಿಲ್ಲವೆನ್ನುವ ಪ್ರಶ್ನೆಯನ್ನು ಕವಿ ಕೇಳುವಂತಿದೆ. ನಿಸರ್ಗದ ಹೊರನೋಟಗಳನ್ನು ಮಾಂತ್ರಿಕನಂತೆ ಬಣ್ಣಿಸುತ್ತಲೆ ಅಂತರ್ಯವನ್ನು ತಟ್ಟಿ ಮುಗಿಲಿಗೆ ಸೇತುವೆ ಕಟ್ಟುವುದು; ಸೃಷ್ಟಿ ಸಾಧಿಸಿರುವ ಪರಿಪೂರ್ಣತೆಯನ್ನು ಅರಿಯುವುದು ಅವರ ಕವಿತೆ ನಿರ್ವಹಿಸುವ ಆಶಯವಾಗಿದೆ. ಬೇಂದ್ರೆಯವರು ಬೆಳಕಿನ ನಾನಾ ರೂಪಗಳನ್ನು ಕಣ್ಣಿಗೆ ಕಟ್ಟುವ ದೃಶ್ಯಗಳನ್ನಾಗಿ ಮಾರ್ಪಡಿಸುವುದನ್ನು ನೋಡಿದಾಗ ಅವರು ಮನಸ್ಸಿನಲ್ಲಿ ಕಂಡುಕೊಂಡಿರಬಹುದಾದ ಬೆಳಕಿನ ಹಾದಿಗಳು ಎಲ್ಲೆಯಿಲ್ಲದೆ ಅನಂದ, ಅಚ್ಚರಿಗಳನ್ನು ಕಲೆಹಾಕಿರುವದರಲ್ಲಿ ಸಂಶಯವಿರಲಾರದು.

ಶಿವಮೊಗ್ಗೆಯ ಕಾಡಿನಲ್ಲಿ ಬಿಳಿ ಕಣಗಿಲ ಹೂವೊಂದನ್ನು ಅವರು ಕಂಡಾಗ ಮೂಡಿಬಂದ ಅಭಿವ್ಯಕ್ತಿ ಅಂತರಂಗವನ್ನು ಬೆಳಗುತ್ತದೆ. ಬೆಳಕಿನ ತುಂಬು ಬಸಿರಿನಿಂದ ಹೊಂಬಣ್ಣ ನಯವಾಗಿ ಅರಳುವಂತೆ, ನಸುಕಿನ ಸುಳಿಗಾಳಿ ಹೂವನ್ನು ಮೃದುವಾಗಿ ಮುಟ್ಟುವಂತೆ ಬಿಳಿ ಕಣಗಿಲದ ಮೊಗ್ಗು ಚಳಿಯ ಸೆರಗನ್ನು ತೆಗೆದು ಇಂಪಾದ ಧ್ವನಿಯಲ್ಲಿ ಗುಣಗುಣುಗುಟ್ಟುತ್ತ ಅರಳಿದೆ.

ಬೆಳಕಿನ ಬಸಿರಲಿ ಅರಳುವ ಹೊಂಬಣ್ಣದ ತೆರದಿ

ಬಿಳಿ ಕಣಗಿಲ ಇಗೊ ಅರಳಿವೆ ಚಳಿಯಲಿ ಇಂಚರದಿ

ಎಲರಲರಿದೆ ಬೆರಳಿನ ತುದಿ ಹೂ ಹಿಡಿ ಹಿಡಿವಂತೆ

ಕೋಕಿಲ ಕಂಠದ ಪಂಚಮ ವರ್ಣದಿ ಮಿಡಿವಂತೆ[೮]

ಮುಂಜಾನೆಯ ಚಳಿಯ ಹಿತವಾದ ಸ್ಪರ್ಶಕ್ಕೆ ಮೈ ಹಿಗ್ಗಿಸುತ್ತಿರುವ ಮೊಗ್ಗು, ವಾತಾವರಣಕ್ಕೆ ಬೇರೆ ಲೋಕದ ಬಣ್ಣ ನೀಡುತ್ತದೆ. ಗಂಧರ್ವ ಸೀಮೆಯಂತೆ ಪರಿವರ್ತನೆ ಹೊಂದುವ ಪ್ರಕೃತಿಯ ಕ್ರಿಯಾಶೀಲತೆಗೆ ಕವಿ ಬೆರಗಾಗಿ ವಾಸ್ತವ ದೃಷ್ಟಿಯಲ್ಲಿ ಕಾಣದಂತಿರುವ ಆದರೆ ಅನುಭವಕ್ಕೆ ಬರುತ್ತಿರುವ ಹೊಸ ಬೆಳಕಿಗೆ ಸ್ವಾಗತವನ್ನೀಯಲು ಸಿದ್ಧರಾಗುತ್ತಾರೆ. ಎದೆಯ ಕೇಡನ್ನು ಹೊರಗೆ ಚೆಲ್ಲಿ ಅಲ್ಲಿ ಸಿಹಿಯನ್ನು, ಆನಂದವನ್ನು, ನಾದದ ಇಂಪನ್ನು ತುಂಬಿಕೊಂಡರೆ ಮನಸ್ಸು ಪ್ರಫುಲ್ಲಿತವಾಗಿ, ತುಂಬಿದ ಕೊಡವಾಗಿ ಶಾಂತಿ ಸುಖಗಳನ್ನು ಅನುಭವಿಸಬಲ್ಲುದೆಂದು ಬೇಂದ್ರೆಯವರು ಪರೋಕ್ಷವಾಗಿ ತಿಳಿಯಬಯಸುತ್ತಾರೆ. ನಮ್ಮ ಮನಸ್ಸು ಪರಿಪೂರ್ಣತೆಯಿಂದ ಅರಳಬೇಕೆನ್ನುವ ಸಂಕೇತವನ್ನು ಬಿಳಿಕಣಗಿಲ ಪದ್ಯದಿಂದ ಕವಿ ಕೊಡುತ್ತಾರೆ.

ಬೆಳಕು ತುಂಬಿಕೊಳ್ಳುವದೆಂದರೆ ಕಲ್ಮಶಗಳನ್ನು ಕಳೆಯುವುದು. ಜಗತ್ತಿನ ದೀಪವಾಗಿರುವ ಸೂರ್ಯ, ಜ್ಞಾನದ ಬಾಗಿಲನ್ನು ತೆರೆದು ಹೃದಯದ ಅಂಧಕಾರವನ್ನು ಕಳೆಯುತ್ತಾನೆ. ಬೆಳಕಿನ ರೂಪದಲ್ಲಿರುವ ಅರಿವು ಕತ್ತಲೆಯ ಹೊಟ್ಟೆಯನ್ನು ಸೀಳಿ ಅನಾಹುತಗಳನ್ನು ತಪ್ಪಿಸುತ್ತದೆ. ಪರಮಾತ್ಮ ಹೊತ್ತಿಸಿದ ಈ ಬತ್ತಿಯಿಂದ ಸುಖ,

ಸಮೃದ್ಧಿ ಉನ್ಮೀಲಿಸುತಿರಲೆಂದು ಬೇಂದ್ರೆಯವರು 'ಯಾರಿಟ್ಟರು ಈ ಹಣತೆ' ಎನ್ನುವ ಪದ್ಯದಲ್ಲಿ ಹೇಳುತ್ತಾರೆ. ದೈವಿಕ ಪ್ರೇರಣೆಗಳನ್ನು ನಿಸರ್ಗದ ನಡುವೆ ಅವರು ಅರಸುವುದು ಸ್ಪಷ್ಟವಾಗುತ್ತದೆ.

ಯಾರಿಟ್ಟರು ಈ ಹಣತೆ?
ಹಣಿಸಿದರಾರೆಣ್ಣೆ?
ಈ ಬತ್ತಿಯ ಹೊತ್ತಿಸಿದರು
ಅದು ಯಾ ಯಾ ನಿನ್ನೆ?
ಕತ್ತಲೆಯಾ ಹೊಟ್ಟೆಯೊಳೀ
ಹೊತ್ತಿದ್ದಿದೆ ದೀಪ
ಶೂನ್ಯವನೇ ಕವಳಿಸುತಿದೆ
ಚಿನ್ಮಯ ಚಿದ್ರೂಪ್

ಜ್ಞಾನವೇ ರೂಪಗೊಂಡಂತಿರುವ ಬೆಳಕು ಕುಡಿಯಾಗಿ ಪಲ್ಲವಿಸುವುದನ್ನು, ದೀಪವಾಗಿ ಬೆಳಗುವುದನ್ನು ಬೇಂದ್ರೆ ಹೇಳುವುದು ವಿಶಿಷ್ಟವೆನಿಸುತ್ತದೆ. ನೆಲದ ಅರ್ಥ ಕೊಡುತ್ತಲೆ ಮುಗಿಲಿನ ಅರ್ಥ ಕೊಡುವುದು ಅವರಿಗೆ ಸುಲಭವಾಗಿದೆ. ಸರಳ ವರ್ಣನೆಯೆಂಬಂತೆ ತೋರಿದರೂ ಆಳದಲ್ಲಿ ಅಡಗಿರುವ ವಿವೇಚನೆಗಳು ಅವರ ಕಾವ್ಯ ಪಡೆದುಕೊಳ್ಳಲು ಹವಣಿಸುತ್ತಿದ್ದ ಅನುಭಾವದ ಸೆಳಕುಗಳತ್ತ ಬೆರಳು ಮಾಡುತ್ತವೆ. ಹಾಗಾಗಿಯೆ 'ಅರಳು-ಮರಳು' ಸಂಕಲನದ ನಂತರ ಭೌತಿಕ ಆಕರ್ಷಣೆ ಕಡಿಮೆಯಾಗಿ ತಾತ್ವಿಕತೆಯತ್ತ ಅವರು ಹೆಚ್ಚು ವಾಲಿದರೆಂಬುದನ್ನು ಗುರುತಿಸಬಹುದು. ಅಷ್ಟಾಗಿಯೂ ಕೂಡ ಉತ್ಕಟ ಜೀವನ ಪ್ರೀತಿಯ, ಈ ಲೋಕದಲ್ಲೆ ಭದ್ರವಾಗಿ ಬೇರು ಬಿಟ್ಟಿರುವ, ತುಂಬಿದ ಹೊಳೆ-ಹಳ್ಳದ, ಹಚ್ಚ ಹಸುರಿನ, ತುಂಬು ಬಸುರಿಯ ಹೋಲಿಕೆಗೆ ಎಣೆಯಿಲ್ಲದ ಚಿತ್ರಗಳನ್ನು ಅಕ್ಷರಗಳಲ್ಲಿ ಕಟ್ಟಿಕೊಡಬಲ್ಲ ಕಾವ್ಯ ಪ್ರತಿಭೆಯಾಗಿರಲು ಅವರು ಇಷ್ಟಪಟ್ಟರು. ನವೋದಯದ ಸಮಕಾಲೀನ ಲೇಖಕರು ಒಂದಲ್ಲ ಒಂದು ರೀತಿಯಲ್ಲಿ ಶ್ರೀ ಅರವಿಂದರು, ವಿವೇಕಾನಂದ ಮುಂತಾದ ತತ್ವಜ್ಞಾನಿಗಳ ಪ್ರಭಾವಕ್ಕೆ ಒಳಗಾಗಿದ್ದರು. ಬೇಂದ್ರೆಯವರು ಕೂಡ ಅದಕ್ಕೆ ಹೊರತಾಗಿರಲಿಲ್ಲ. ಬೌದ್ಧಿಕವಾಗಿ ಮಹತ್ತರ ಸಾಧನೆ ಮಾಡಬೇಕೆಂಬ ಹಂಬಲ ಅನೇಕರಿಗಿತ್ತು. ಕೆಲವರಿಗೆ ಆಧ್ಯಾತ್ಮಿಕ ವಿಷಯದಲ್ಲಿ ಅಪಾರವಾದ ಸಾಧನೆ, ಸಿದ್ಧಿಗಳನ್ನು ಕೈಗೊಳ್ಳುವ ಅಭಿಲಾಷೆಯಿದ್ದಿತು. ಬೇಂದ್ರೆಯವರ ಜೀವದ ಗೆಳೆಯರಾಗಿದ್ದ ಮಧುರಚೆನ್ನರು ಅನುಭಾವದ ದಿಕ್ಕಿನಲ್ಲಿ ಮಾತ್ರವೆ ನಡೆಯುತ್ತ ಅನುಭಾವಿ ಕವಿ ಎಂದೆನಿಸಿಕೊಂಡರು. ಆದರೆ ಬೇಂದ್ರೆ ಅರಸಿಕೊಂಡ ಹಾದಿ ಮಾತ್ರ ತುಂಬ ಸೂಕ್ಷ್ಮವೂ, ಸವಾಲಿನದೂ ಆಗಿತ್ತು. ಒಬ್ಬ ಅಪ್ಪಟ ಕವಿಯಾಗಿ, ಹೆಚ್ಚೆಂದರೆ ಒಬ್ಬ ಭಕ್ತ ಕವಿಯಾಗಿ, ಅಲ್ಲಿ ಇಲ್ಲಿ ಕುಸುರಿ ಮಾಡಿದಂತೆ ದೈವಿಕ ಅನುಭೂತಿಯ ದಾರದ ಎಳೆಗಳನ್ನು ಅಲ್ಲಲ್ಲಿ ಸೇರಿಸಿ ನೇಯ್ದ ಸೀರೆಯಂತೆ ಅನುಭಾವದ ಅಂಶಗಳನ್ನು ಒಳಗೊಂಡ ಕವಿಯಾಗಿ ಇರಲು ಬೇಂದ್ರೆ ಪ್ರಯತ್ನಪಟ್ಟರು. ಅವರ ಕಾವ್ಯದ ಗರುಡ ಅಮೃತಕ್ಕಾಗಿ

ಮುಗಿಲಿಗೆ ಹಾರುತ್ತಲೆ ಸದಾಕಾಲ ನೆಲದ ಮೇಲೆ ಕಣ್ಣಿಟ್ಟಿರುವ ನೆಲದ ಹಕ್ಕಿಯಾಗಲು ಬಯಸುತ್ತದೆ. ಸಾಧನೆ, ಸಿದ್ಧಿ, ಅನುಭಾವಗಳು 'ಬೇಂದ್ರೆಯವರ ದೈವವಾಗಿರಲಿಲ್ಲ. ಕಾವ್ಯ ಮತ್ತು ಅನುಭಾವಗಳಲ್ಲಿ ಕಾವ್ಯದ್ದೇ ಮೇಲುಗೈಯಾಯಿತು. ಬೇಂದ್ರೆಯವರಿಗೆ ವೇದಾಂತದಲ್ಲಿಯೂ ಆಸಕ್ತಿಯಿತ್ತು. ಸಂಖ್ಯಾಶಾಸ್ತ್ರದಲ್ಲಿಯೂ ಆಸಕ್ತಿಯಿತ್ತು. ಆದರೂ ಅವರ ಕಾವ್ಯದ ಆಸಕ್ತಿ ಕಡಿಮೆಯಾಗಲಿಲ್ಲ'[illegible] ಎಂದು ಕೀರ್ತಿನಾಥ ಕುರ್ತಕೋಟಿ ಬೇಂದ್ರೆಯವರ ಕಾವ್ಯಸಿದ್ಧಿಯನ್ನು ನಿಖರವಾಗಿ ಗುರುತಿಸುತ್ತಾರೆ. ಆಧ್ಯಾತ್ಮಿಕ ಸಂಗತಿಗಳತ್ತ ಬೇಂದ್ರೆಯವರ ಗಮನ ಅವರ ಬಾಲ್ಯದಿಂದಲೆ ಇದ್ದುದರಿಂದ ಆ ಸಂಗತಿಗಳು ಅವರ ಕಾವ್ಯದಲ್ಲಿ ಸೇರಿಕೊಳ್ಳುವುದು ಸಹಜವಾಗಿದೆ. ಭಕ್ತಿಯ ಪರಿಸರದಿಂದ ಅವರು ತುಂಬ ಪ್ರಭಾವಿತರಾಗಿದ್ದರು. ''ಆಧ್ಯಾತ್ಮಿಕ ಜಗತ್ತನ್ನು ಹೀಗೆ ಕಾವ್ಯದ 'ವಸ್ತು'ವಾಗಿ, 'ರೂಪಕ'ವಾಗಿ ಆರಿಸಿಕೊಂಡುದರಿಂದ ಅವರ ಸಮಗ್ರ ಕಾವ್ಯಕ್ಕೆ ಹೊಸ ಆಯಾಮಗಳು ಮತ್ತು ಭೌತಿಕ ಜಗತ್ತಿನ ಪರಿಮಿತಿಗಳನ್ನು ದಾಟಿಯೂ, ಅನುಸಂಧಾನ ಮಾಡುವ ಮುಕ್ತ ಅವಕಾಶಗಳು ದೊರಕಿದವೆಂಬ ಮಾತು ನಿಜ''[illegible] ಎಂದು ಎಚ್.ಎಸ್. ರಾಘವೇಂದ್ರರಾವ್ ಅವರು ಅಲೌಕಿಕತೆಯನ್ನು ಸಾಧಿಸುತ್ತಲೆ ಲೌಕಿಕತೆಯನ್ನು ಮೆರೆದ ಒಬ್ಬ ಶ್ರೇಷ್ಠ ಕವಿಯಾಗಿ ಬೇಂದ್ರೆ ಸಾಧನೆ ಮಹತ್ವದ್ದೆನ್ನುವ ಮಾತು ಹೇಳುತ್ತಾರೆ.

ನೆಲದ ಬದುಕಿನ ಆಚೆಗೆ ಏನೋ ಇದೆಯೆಂದು, ಮಾಮರದ ಕೊನೆಗೆ ಕೂತು ಹಾಡುತ್ತಿರುವ ಕೋಗಿಲೆಯ ಹಾಡಿನಲ್ಲಿ ಯಾವುದೋ ಕರೆಯಿದೆಯೆಂದು, ಬೆಳಕಿನ ನದಿಯ ಆಳದಲ್ಲಿ ಅಮೂಲ್ಯವಾದದ್ದೇನೊ ಹುದುಗಿದೆಯೆಂದು ಬೇಂದ್ರೆ ಹೇಳುವ ಮೂಲಕ ಕವಿತೆಯಲ್ಲಿ ಅಸಾಮಾನ್ಯತೆಯನ್ನು ಸಾಧಿಸುತ್ತಾರೆ. ನೆಲವನ್ನು ನಂದನವನವನ್ನಾಗಿ ಮಾಡುವವನು ಯಾರೆಂದು ವಿಸ್ಮಯ ಹುಟ್ಟಿಸುವ ಅಗಾಧ ಜವಾಬ್ದಾರಿಯನ್ನು ಅವರ ಕವಿತೆ ನಿರ್ವಹಿಸುವ ಮೂಲಕ ಕಾವ್ಯಕ್ಕೆ ದೈವಿಕ ಅನುಭೂತಿಯ ವಿವೇಕ ತಂದುಕೊಡುತ್ತದೆ. ಧಾರವಾಡದ ಅತ್ತಿಕೊಳ್ಳದ ಮುಂಜಾನೆಯನ್ನು ಬಣ್ಣಿಸುತ್ತ ಅಲ್ಲಿ ಕಂಡ ಸೂರ್ಯೋದಯ ಬರಿ ಬೆಳಗಲ್ಲ ಎನ್ನುವುದು; ಶಿವಮೊಗ್ಗ ಕಾಡಿನಲ್ಲಿಯ ಬಿಳಿ ಕಣಗಿಲವೊಂದು ಅರಳುವ ಹೊತ್ತಿಗೇನೇ ಕೋಗಿಲೆ ಕೂ ಎಂದು ಕೂಗುವುದು; ಎದುರಿನ ತೋಟದ ಪಾತರಗಿತ್ತಿ ನಂದನದ ತೋಟಕ್ಕೆ ಓಡುವುದು; ಚಿಗರಿಗಂಗಳ ಚೆಲುವೆಯಾದ ಭೂಮಿ ಹೊತ್ತಿನ ಬೆನ್ನು ಹತ್ತಿರುವುದು; ಇಳೆಯ ಮಕ್ಕಳಿಗೆಲ್ಲ ಬೆಳಕಿನ ಕೊರತೆಯಾಗದಂತೆ ಬೆಳಕಿನ ತಾಯಿಯ ಬಸಿರೆಲ್ಲ ಕೆಚ್ಚಲವೆ ಆಗಿರುವುದು; ಇರುಳಿನ ಮರ ಒಡೆದು ಹಗಲು ಹೊರಬರುವುದು; ಬಿದಿಗೆ ಚಂದ್ರನ ನಗುವು ಬೆಳ್ಳಿಯನ್ನು ಸೇರಿ ಬೆಳಕಿನ ಜಾಳಿಗೆ ಹಾಸಿರುವುದು; ಸೂರ್ಯನ ತೇರಿನಲ್ಲಿ ಆಕಾಶದ ನೀಲಿಯೆಲ್ಲ ನೀರಿನಂತೆ ಕಾಣುವುದು ಬೇಂದ್ರೆಯವರು ಸೃಷ್ಟಿಸಿದ ಅದ್ಭುತ ನಿಸರ್ಗ ರೂಪಕಗಳಾಗಿವೆ. ಅವು ಪ್ರಕೃತಿಯನ್ನು ಬಣ್ಣಿಸುವ ಅಪ್ರತಿಮ ದೃಶ್ಯಕಾವ್ಯಗಳಾಗಿವೆ. ಮಾಮರದಲ್ಲಿ ಕೂತು ಹಾಡುವ ಕೋಗಿಲೆಗೂ ಮನದ ಕೋಗಿಲೆಗೂ ಸಂಬಂಧಗಳನ್ನು ಅವರು ಸ್ಥಾಪಿಸುತ್ತ ಹೋಗುತ್ತಾರೆ. ಸೂರ್ಯನ ಮತ್ತು ಚಂದ್ರನ ಬೆಳಕನ್ನು ಹೊಂದಿಸುತ್ತ ನಡೆಯುತ್ತಾರೆ. ಸೂರ್ಯ, ಚಂದ್ರ, ಭೂಮಿ ಒಂದು ತಳಹದಿಯ ಮೇಲೆ ಸುತ್ತುವದನ್ನು ಹೇಳುತ್ತಾರೆ.

ಹಗಲಿನ ಸೂರ್ಯ ಹಾಗೂ ರಾತ್ರಿಯ ಚಂದ್ರನಿಂದ ಮನುಷ್ಯ ಪಡೆಯುವ ಬೆಳಕಿನ ಉದ್ದೀಪನವನ್ನು ಹಾಗೂ ಆ ಬೆಳಕಿನಲ್ಲಿ ಅವನು ಪಡೆಯುವ ಆವಿಷ್ಕಾರಗಳನ್ನು ಬೇಂದ್ರೆ ಕವಿತೆಗಳಲ್ಲಿ ತಂದಿರುವ ಬಗೆ ಕುತೂಹಲಕಾರಿಯಾದುದು. ಸೂರ್ಯನ ಬೆಳಕಿನಷ್ಟೇ ಮಹತ್ವ ಚಂದ್ರನಿಗೂ ಇರುವುದರಿಂದ ಬೇಂದ್ರೆಯವರಲ್ಲಿ ಅವೆರಡೂ ಸಾಮರಸ್ಯ ಸಾಧಿಸುವ ಪರಿ ವಿಶಿಷ್ಟವಾದುದು.

ಸೂರ್ಯನ ಪ್ರಖರ ಬೆಳಕಿನಿಂದ ಹೇಗೋ ತಪ್ಪಿಸಿಕೊಂಡ ಕೇಡನ್ನು ಕಳೆಯಲು ಬೇಂದ್ರೆಯವರಿಗೆ ಬೆಳದಿಂಗಳಂತೂ ಇದ್ದೇ ಇದೆ. ಕುದಿವ ಮನಸ್ಸನ್ನು ತಣ್ಣಗಿರಿಸುವ ತಿಂಗಳು ತನ್ನ ತಂಪಾದ ಬೆಳಕಿನಿಂದ ಹಗಲಿನ ದಣಿವನ್ನು ಹಿಂಗಿಸಿ, ಕತ್ತಲನ್ನು ಚೂರೂ ಬಿಡದಂತೆ ಇಂಗಿಸಿ ಒಂದು ಮಾಯಾಲೋಕವನ್ನೆ ಸೃಷ್ಟಿಸಿಬಿಡುತ್ತದೆ. ಬೇಂದ್ರೆಯವರ 'ಬೆಳದಿಂಗಳು ನೋಡs' ಎನ್ನುವ ಲಾವಣಿ ರೂಪದ ಕವಿತೆಯಲ್ಲಿ ಚಂದ್ರಮನ ನುಣುಪಾದ ಬೆಳಕು ('ಬೆಳಗು' ಕವಿತೆಯಲ್ಲಿ ಮುತ್ತಿನ ನೀರನ್ನು ಚಿಮುಕಿಸಿದಂತೆ ಹೊಯ್ಯುವ ಬೆಳಕಿನ ಎರಕ ಕೂಡ ನುಣ್ಣಗೆ ಇದೆ) ಒಂದು ಭಿನ್ನ ಕಾಲವನ್ನು ನಿರ್ಮಿಸುತ್ತದೆ.

ಕಲಿಕಪ್ಪು ಎಲ್ಲನೂ ಇಲ್ಲ
ಒಂದೆ ಸವನೆಲ್ಲ
ಎಲ್ಲನೂ ನುಣುಪs
ಎಲ್ಲನೂ ನುಣುಪು ॥
ಇದು ಹಾಲಗಡಲಿನs ಸೀಮಿ
ಚಂದ್ರಮನೆ ಸ್ವಾಮಿ
ಚಂದ್ರಮನೆ ಸ್ವಾsಮಿs
ಏನೆಂಥ ಹಂದರದ ಈsಡs
ಬೆಳುದಿಂಗಳ ನೋಡs ॥[೨]

ಮದುಮಗಳ ಕಣ್ಣಲ್ಲಿ ನಗೆಯಾಗಿ ಕೂತಿರುವ ಚಂದ್ರನ ಬೆಳಕು ತನ್ನ ನಗೆಯ ಮದದಿಂದ ಗಾಳಿಯ ಟಿಂಹಕ್ಕಿಗೆ ಮತ್ತು ಬರಿಸಿ, ಅದರ ಮನಸ್ಸಿನೊಳಗೆ ಬೆಳದಿಂಗಳ ಮಾಯೆ ಹೊಗಿಸಿ ಗಿಡದಲ್ಲಿ ಸುತ್ತು ಹಾಕುವಂತೆ ಮಾಡಿದೆ. ಮಕಮಲ್ಲ ಬಟ್ಟೆಯಂತೆ ನಯವಾದ ಬೆಳದಿಂಗಳು ಪೆಂಟೆಪೆಂಟೆಯಾಗಿ ಬಿದ್ದು ಹಕ್ಕಿಗಳಿಗೆ ತುಪ್ಪುಳದ ಗೂಡಾಗಿ ಪರಿಣಮಿಸಿದೆ. ಇಂತಹ ನವೀನ ಕಲ್ಪನೆಯ ಚಿತ್ರ ಕಟ್ಟಿಕೊಡುವ ಮೂಲಕ ಬೆಳದಿಂಗಳಿನ ಪ್ರಭಾವ ಎಷ್ಟೆಲ್ಲ ಇರಬಹುದೆಂಬುದನ್ನು ಬೇಂದ್ರೆ ತೋರಿಸುತ್ತಾರೆ. ಮಾಟಗಾರನೊಬ್ಬ ತನ್ನ ಕಣ್ಕಟ್ಟಿನ ವಿದ್ಯೆಯ ಮೂಲಕ ಇಲ್ಲದ್ದನ್ನು ಇದ್ದಂತೆ ತೋರಿಸುವ, ಇಲ್ಲದಿರುವುದನ್ನು ಇದೆಯೆಂದು ನಂಬಿಸುವ ಕೆಲಸ ಮಾಡಿದಂತೆ ಬೇಂದ್ರೆ ಕೂಡ ಇಲ್ಲಿ ವಾಸ್ತವಕ್ಕೆ ಭಿನ್ನವಾಗಿರುವ ಒಂದು ಹೊಸ ಲೋಕವನ್ನೆ ಸೃಷ್ಟಿಸುತ್ತಾರೆ. ಬೆಳದಿಂಗಳನ್ನು ಕುಡಿದ ಹಕ್ಕಿಗೆ ಮತ್ತೇರಿದೆ.

ತೂಕಡಸತಽದ ತಾನೀಗ

ಜಂಪು ಬಂಧಾಂಗ

ಜಂಪು ಬಂಧಾಂಗಽ

ಇದು ಅದರ ತುಪ್ಪಳದ ಗೂಽಡಽ।

ಬೆಳುದಿಂಗಳ ನೋಡಽ॥[೧೩]

ಬೇರೆ ಲೋಕಕ್ಕೆ ಬಂದಿಳಿದಂತೆ ಕಾಣುವ ಬೆಳುದಿಂಗಳ ಮಾಯಕಾರದ ಜೀಡಿನಲ್ಲಿ ವಾಸ್ತವ ಮರೆಯಾಗಿ ಕಾಲ ಬೇರೆ ಅನ್ನಿಸುತ್ತಿದೆ.

ದಣಿಸಿದಾ ಹಗಲು ಹಿಂಗ್ಯಽದ

ಕತ್ತಲಿಂಗ್ಯದ

ಬೇರೆ ಈ ಕಾಽಲಽ

ಬೇರೆ ಈ ಕಾಲಽ[೧೪]

ಮನಸ್ಸನ್ನು ಮರಳುಗೊಳಿಸುವ, ನಿತ್ಯ ತಾಪತ್ರಯದ ಜಗತ್ತನ್ನು ವಿಶ್ರಾಂತಿಗೆ ದೂಡುವ, ಮದದಿಂದ ತುಂಬಿ ಮೆರೆಯುವ ಕನಸಿನ ಲೋಕವೊಂದು 'ಬೆಳುದಿಂಗಳ ನೋಡಽ' ಕವಿತೆಯಲ್ಲಿ ಬಿಚ್ಚಿಕೊಳ್ಳುತ್ತದೆ. 'ಗಾಳಿ ಅದೃಶ್ಯವಾದ ಹಕ್ಕಿಯಾಗಿ, ಬೆಳದಿಂಗಳು ಅದರ ಗೂಡಾಗಿರುವ ಈ ಚಿತ್ರ ಕವಿತೆಯ ಶಿಖರವಾಗಿದೆ. ಬೆಳುದಿಂಗಳಲ್ಲಿ ಮಾತ್ರ ಸಾಧ್ಯವಾಗುವ ಸಾಮರಸ್ಯದ ಚಿತ್ರ ಇದು'[೧೫] ಎಂದು ಕುರ್ತಕೋಟಿಯವರು ಇದನ್ನು ವಿಶ್ಲೇಷಿಸಿರುವುದು ಅತ್ಯಂತ ಸೂಕ್ತವಾಗಿದೆ.

ಚಂದ್ರನ ಬೆಳಕಿಗೆ ಸೂರ್ಯನೆ ಮೂಲ. ಸೂರ್ಯ ಹಾಗೂ ಚಂದ್ರರಿಬ್ಬರನ್ನು ಹೊಂದಾಣಿಸುವ, ಅವರ ಸಾಮರಸ್ಯದ ಫಲಗಳನ್ನು ಉಂಡ ಲೋಕ ನಿಸರ್ಗಪ್ರೇರಿತವಾಗಿ ಬೆಳೆಯುವ ಪರಿಯನ್ನು ಬೇಂದ್ರೆ ಪ್ರಸ್ತುತಪಡಿಸುತ್ತಾರೆ. ಸೂರ್ಯ ಹಾಗೂ ಚಂದ್ರನ ಬಲ ಎರಡನ್ನೂ ವಿವರಿಸುವುದು ಅವರಿಗೆ ಮುಖ್ಯವಾಗಿದೆ. ಅವೆರಡರ ಪ್ರೇಮ ಪರಿಣಯದಲ್ಲಿ ಸೃಷ್ಟಿಗೆ ಅರ್ಥ ಬಂದಿದೆ.

ಭೂರಂಗಕೆ ಅಭಿಸಾರಕೆ ಕರೆಯುತ

ತಿಂಗಳು ತಿಂಗಳು ನವೆಯುತಿದೆ

ತುಂಬುತ ತುಳುಕುತ ತೀರುತ ತನ್ನೊಳು

ತಾನೇ ಸವಿಯನು ಸವಿಯುತಿದೆ[೧೬]

ಸೂರ್ಯನ ಬೆಳಕನ್ನುಂಡ ಚಂದ್ರ ತಂಪಾದ ಬೆಳಕನ್ನು ಪೃಥ್ವಿಗೆ ನೀಡುವಂತೆ; ಒಡಲ ಸಂಕಟದಿಂದ ಕುದ್ದು ಹೋಗುತ್ತಿದ್ದರೂ ಅಪಾರ ತಾಳ್ಮೆಯಿಂದ ದಂಡೆಗೆ ಮೊರೆಯಿಡುವ ಕಡಲನ್ನು ಭೂಮಿಯು ಅಪ್ಪಿ ರಮಿಸುವಂತೆ

ಕವಿಯ ಸೃಷ್ಟಿ ಕೂಡ ಪ್ರಾಪಂಚಿಕ ದುಃಖದೊಂದಿಗೆ ತೀವ್ರ ಅನುಸಂಧಾನ ನಡೆಸುತ್ತ ಮನುಷ್ಯರ ಹೃದಯ ಕಮಲಗಳಲ್ಲಿ ಹಾಲಿನಂತಹ ಬೆಳದಿಂಗಳನ್ನು ಸುರಿಯುತ್ತದೆ. ವಾಸ್ತವ ಜಗತ್ತಿಗೆ ಪರ್ಯಾಯ ಜಗತ್ತನ್ನು ಕಟ್ಟಿಕೊಡುವ ಚಂದ್ರನಾಗಿ, ಹೃದಯಕ್ಕೆ ಹಾಲನ್ನೆರೆಯುವ ಚಂದ್ರನಾಗಿ, ಕನಸುಗಳನ್ನು ಹುಟ್ಟಿಸುವ ಚಂದ್ರನಾಗಿ, ತಾಯಿಯಂತೆ ಸಲಹುವ ಚಂದ್ರನಾಗಿ ಮತ್ತು ಕವಿಯ ಸೃಜನಶೀಲತೆಗೆ ಅರ್ಥ ಹಚ್ಚುವ, ಮತ್ತೊಬ್ಬರ ದುಃಖ ಕಳೆಯುವ ಚಂದ್ರನಾಗಿ ಬೇಂದ್ರೆ ಕಾವ್ಯದಲ್ಲಿ ಕೋಮಲ ಚಂದ್ರ ಕಾಣಿಸಿಕೊಳ್ಳುತ್ತಾನೆ. ತಾನು ಆಡುವ ಶಬ್ದಗಳು ಪ್ರತಿಚಂದ್ರರಂತೆ ಪರದುಃಖವನ್ನು ಹೀರುತ್ತಿರಲೆಂಬ ಆಶಯ ಕವಿಯದಾಗಿದೆ.

ನಿನ್ನೊಳವು ನನ್ನೊಳಗೆ ಮೊಳೆಯಿತು
ನಿನ್ನ ಮಣಿಹವು ತಣಿಸಿತೆನ್ನನು
ತನ್ನ ದುಃಖವ ನುಂಗಿ ಪರದುಃಖವನ್ನು ಹಿಂಗಿಸುವ
ಚೆನ್ನಿಗಳು ಭೂದೇವಿ, ಆಕೆಯ
ನನ್ನಿಯಲಿ ಮಡಿಯಾದ ನುಡಿಗಳು
ನನ್ನ ನಾಲಗೆಯಲ್ಲಿ ಮೂಡಲ ಪ್ರತಿಚಂದ್ರರಂತೆ[೯೭]

ಮೊಸರನ್ನು ಕಡೆದಾಗ ಬೆಣ್ಣೆ ಹೊರಬರುವಂತೆ ಕವಿತೆ ಕೂಡ ಅನೇಕ ಮಜಲುಗಳನ್ನು ದಾಟಿ ಹೊರಬರಬೇಕಾಗುತ್ತದೆ. ಸೃಜನಕ್ಕೆ ಚಂದ್ರ ರೂಪಕವಾಗಿ ಬರುತ್ತಾನೆ. 'ಚಂದ್ರ' (ಡಾ. ವಾಮನ ಬೇಂದ್ರೆಯವರು ಸಂಪಾದಿಸಿದ 'ಔದಂಬರ ಗಾಥೆ' ಸಂಪುಟಗಳಲ್ಲಿ 'ಬಿದಿಗೆ ಚಂದ್ರ ಬಂದ ನೋಡು' ಎಂಬ ಶೀರ್ಷಿಕೆ ನೀಡಲಾಗಿದೆ) ಎನ್ನುವ ತಮ್ಮ ಮತ್ತೊಂದು ಕವಿತೆಯಲ್ಲಿ ಬೇಂದ್ರೆ ಮುಗಿಲನ್ನು ಮಜ್ಜಿಗೆಯಂತೆ ಕಲ್ಪಿಸಿಕೊಂಡು ಅಲ್ಲಿ ತೇಲುವ ಚಂದ್ರನನ್ನು ಬೆಣ್ಣೆಯ ಮುದ್ದೆಯಂತೆ ಕಲ್ಪಿಸಿಕೊಳ್ಳುತ್ತಾರೆ. ಮುಗಿಲನ್ನು ಒಮ್ಮೊಮ್ಮೆ ನೀಲಿ ಕಡಲನ್ನಾಗಿ, ಮಗದೊಮ್ಮೆ ಬೆಳಕಿನ ಹೊಳೆಯನ್ನಾಗಿ ಬೇಂದ್ರೆ ಚಿತ್ರಿಸಿರುವುದು ನಿಸರ್ಗವನ್ನು ಅವರು ಎಷ್ಟೊಂದು ಚೇತೋಹಾರಿಯನ್ನಾಗಿ ಕಾಣುತ್ತಿದ್ದರೆಂಬುದಕ್ಕೆ ನಿದರ್ಶನವಾಗಿದೆ:

ಬಂದನು ಹುಣ್ಣಿವೆಯ ಚಂದ್ರ,
ಬೆಳದಿಂಗಳು ನಿಬಿಡ ಸಾಂದ್ರ,
ಅಲ್ಲ ಅಲ್ಲ ಮುಗಿಲು ತುಂಬ
ಇಹುದು ಮಜ್ಜಿಗೆ
ಬೆಣ್ಣೆ ಮುದ್ದೆ ಮೇಲೆಯೊಂದು
ಹೇಳು ಅಜ್ಜಿಗೆ[೯೮]

ಬೇಂದ್ರೆಯ ಸೂರ್ಯ ಪ್ರಖರವಾದ ಬೆಂಕಿಯಂತಹ ವಾಸ್ತವವನ್ನು ಎದುರಿಗಿಟ್ಟರೆ ಚಂದ್ರ ಕಲ್ಪನೆಯ ಗರಿ ಹಚ್ಚಿಕೊಂಡು ಕನಸುಗಳನ್ನು ಕರೆಯುತ್ತಾನೆ. ಸೂರ್ಯ ತನ್ನ ಪಕ್ವತೆಯನ್ನು ಬೆಳದಿಂಗಳಿನಲ್ಲಿ ತೋರಿಸುತ್ತಾನೆ ಎನ್ನುವ ಅರ್ಥವನ್ನು 'ದವನದ ಹುಣ್ಣಿವೆಯ ಜಾತ್ರೆಯ ರಾತ್ರಿ' ಕವನ ಒದಗಿಸುತ್ತದೆ. ಬಿಸಿಲು ತನ್ನ ನಮ್ರತೆಯನ್ನು ಹಾಗೂ ಕಾರುಣ್ಯದ ರೂಪಾಂತರವನ್ನು ಬೆಳದಿಂಗಳಲ್ಲಿ ಪಡೆದಿದೆ.

ಹಣ್ಣಾದ ಬಿಸಿಲ ಬಣ್ಣನs ಕಳತು ಬೆಳದಿಂಗಳಾತೋ ಏನೋ
ಹರದsದ ಬಾನಜೇನೋ ।।[೧೯]

ತನ್ನ ಉರಿಯನ್ನು ಶಾಂತಗೊಳಿಸಿರುವ, ತನ್ನ ಸಾಮರ್ಥ್ಯದಲ್ಲಿ ಪ್ರೌಢಿಮೆಯನ್ನು ಮೆರೆದಿರುವ, ವಿನಯದಿಂದ ಬಾಗಿರುವ ಸೂರ್ಯನ ಚಿತ್ರವನ್ನು ಬೇಂದ್ರೆಯವರು ಕೊಡುತ್ತಾರೆ. ಸೂರ್ಯ ಚಂದ್ರರು ಬೆಳಗುವಂತಹ ಸೃಷ್ಟಿಯಲ್ಲಿ ಇಳೆಯೂ ಸಂತಸದಿಂದ ಪಾಲ್ಗೊಳ್ಳುತ್ತದೆ. ಹಾಗಾಗಿ ಬಯಲು ಗುಡಿಯಾಗಿ ಪ್ರಕಾಶ ಪರಮಾತ್ಮನಾಗಿ ಭೂಮಿ ಅವನ ಪೀಠದ ಹಾಗೆ ಕಾಣಿಸುತ್ತದೆಯೆಂದು ಬೇಂದ್ರೆ ಭಾವಿಸುತ್ತಾರೆ.

ಆಕಾಶ ಅನಸತದ ಗುಡಿಯ ಹಾಂಗ ಪ್ರಕಾಶ ಮಹಾಲಿಂಗ
ನೆಲ ಅಗಲ ಪೀಠಧಾಂಗ[೨೦]

ಪರವಶಗೊಳಿಸುವ ಒಂದು ಪ್ರತಿಸೃಷ್ಟಿ ಚಂದ್ರನ ಬೆಳಕಿನಲ್ಲಾಗುತ್ತದೆಯೆಂದು ಬೇಂದ್ರೆ ನಂಬಿದ್ದರು. ವಾಸ್ತವದಂತಿರುವ ಆದರೆ ವಾಸ್ತವವಲ್ಲದ ಒಂದು ಲೋಕ ಅಲ್ಲಿ ತೆರೆದುಕೊಳ್ಳುತ್ತದೆ. ವಾಸ್ತವವನ್ನು ಸಾಧ್ಯಮಾಡಬಲ್ಲ ಒಂದು ಸೃಜನಶೀಲ ಕೃತಿಯ ಹಾಗೆ ಬೆಳುದಿಂಗಳಿನ ಜಗತ್ತು ತನ್ನನ್ನು ಒಪ್ಪಿಸಿಕೊಳ್ಳುತ್ತದೆ. ನಾಳಿನ ಹೊಸ ಬೆಳಗಿಗೆ ಅದು ಕಾರಣವಾಗಬಲ್ಲುದು. ಬೆಳದಿಂಗಳ ಸಮುದ್ರಕ್ಕೆ ಭಗ್ಗನೆ ಬರುವ, ಕನಸುಗಳ ತಿನಿಸನ್ನು ತರುವ, ತಲೆಗೆ ಗುಂಗು ಹಿಡಿಸುವ ಹಾಗೂ ಹಿಡಿದ ಹುಚ್ಚು ಬಿಡಿಸುವ ಈ ಮಂದ, ತಂಪು ಬೆಳಕಿನಾಕೆ ಕಣ್ಣಿಗೆ ನಿದ್ದೆ ಬರಿಸುವ ಜೊತೆಗೆ ಹಗಲನ್ನು ಹೊಸದನ್ನಾಗಿ ಮಾಡುತ್ತೇನೆನ್ನುವ ವಿಶ್ವಾಸ ಹೊಂದಿರುವುದು ಬೇಂದ್ರೆಯವರ ಮೇರು ಅಭಿವ್ಯಕ್ತಿಗೆ ಸಾಕ್ಷಿಯಾಗಿದೆ :

ಕಣ್ಣಿಗೆ ನಿದ್ದೆಯ ತಂದಾಕೆ
ಬೆಳಗಿಗೆ ಏಳಿರಿ ಎಂದಾಕೆ
ಓಹೋ! ಮುಗಿಲಿಕೆ ಜಗಿದಾಕೆ
ಸೂರ್ಯನ ಬೆಳಕಿಗೂ ಸಿಗದಾಕೆ
ನನ್ನೊಳಗೆ ನನ್ನೆಳೆದಾಕೆ ![೨೧]

ಮುಗಿಲಿಗೆ ಜಗಿಯುವ ಈ ಬೆಳಕಿನಾಕೆ ಲೋಕದ ಅರ್ಥಗಳಿಗೆ ಮುಗಿಲಿನ ಅರ್ಥಗಳನ್ನು ಹಚ್ಚುತ್ತಾಳೆನ್ನುವುದು ಸ್ಪಷ್ಟವಾಗಿದೆ. ಬೇಂದ್ರೆಯವರು ಬೆಳಕನ್ನು ಕುರಿತು ಬರೆಯುವಾಗ, ಅದು ಸೂರ್ಯನ ಬೆಳಕೇ ಇರಲಿ ಅಥವಾ

ಚಂದ್ರನದೇ ಇರಲಿ, ಉತ್ಸಾಹ, ಲವಲವಿಕೆಯಿಂದ ತಮ್ಮನ್ನು ಎಣೆಯಿಲ್ಲದಂತೆ ತೊಡಗಿಸಿಕೊಳ್ಳುತ್ತಾರೆ. ಬೆಳಕು ಜೀವನವೆಂದು, ಚೈತನ್ಯವೆಂದು ನಂಬಿ ತಮ್ಮ ಕಾವ್ಯ ಬದುಕಿನುದ್ದಕ್ಕೂ ಅದನ್ನು ಆರಾಧಿಸಿದ್ದಾರೆ.

ಬೆಳದಿಂಗಳ ತಿರುಳನ್ನು ಪಡೆದುಕೊಂಡು, ಬದುಕಿನ ಕಂದಕಗಳನ್ನು ದಾಟುತ್ತ ಕುಲುಕುಲು ನಗೆಯನ್ನು ಹಬ್ಬಿಸುತ್ತಿರುವ ಈ ಬೆಳಕಿನಾಕೆ ಈಶೆಯಾಗಿ ಎಲ್ಲವನ್ನೂ ವ್ಯಾಪಿಸುತ್ತಾಳೆ.

ಬೆಳುದಿಂಗಳ ತಿರುಳಾಕೆ
ಪಡೆದಾಕೆ ಹಡೆದಾಕೆ
ಮುದ್ದಿಲಿ ಹಿಡಿದಾಕೆ[೨೨]

ಉಜ್ವಲವಾದ ಬೆಳಕಿನಿಂದ ಬಾಳಿನ ಅರ್ಥವನ್ನು ಉಜ್ಜಬೇಕೆಂದು ಅವರು ಬಯಸಿದುದು ಕಾವ್ಯದಲ್ಲಿ ಕಾಣುತ್ತದೆ. ಬೆಳಕಿನ ಸಮ್ಮುಖದಲ್ಲಿ, ಬೆಳಕಿನ ಬದಿಯಲ್ಲಿಯೆ ಇರಲು ಅವರ ಮನಸ್ಸು ತಹತಹಿಸುತ್ತಿತ್ತು. ಹೊಟ್ಟೆ, ಬಟ್ಟೆ, ವಿಷಯಂಗಳ ಸಲುವಾಗಿ ಬದುಕುವುದಾದರೆ ಅದು ಜೀವನವಲ್ಲ. ಪ್ರೀತಿ, ಪ್ರೇಮಗಳಿಂದ ತುಂಬಿದ ಬದುಕು ಬೆಳಕಿನಿಂದ ಉದ್ದೀಪನ ಪಡೆಯಬೇಕೆಂಬುದು ಅವರ ನಿಲುವಾಗಿತ್ತು:

ಅನ್ನಕ್ಕೆ ಬಾಳಾಗಿ ಕಾಮಕೆ ಹೋಳಾಗಿ
ಮೌನಕೆ ಆಳಾಗಿ ಉಸಿರೆಳೆದುದು
ಬಾಳಲ್ಲ ಬದುಕಲ್ಲ; ಜೀವ ಜೀವಕೆ ಉ-
ದ್ದೀಪನವಾದುದೆ ಜೀವನವು
ಅದು ಇದೆ ಎದೆಯಲ್ಲಿ; ಬೆಳಕಿನ ಬದಿಯಲ್ಲಿ
ರಸಗಂಗಾನದಿಯಲ್ಲಿ ಅದರುಗಮ
ಹೆಸರದಕೆ ಪ್ರೀತಿಯು, ಹಿಗ್ಗಿನ ರೀತಿಯು
ಆತ್ಮದ ನೀತಿಯು ಮಧುಸಂಗಮ[೨೩]

ಬೆಳಕಿಗೆ ತೆರೆದುಕೊಂಡಿರುವುದು ಹಿಗ್ಗಿನ ರೀತಿಯಾಗುತ್ತದೆ. ಕತ್ತಲಲ್ಲಿ ಹುದುಗುವುದೆಂದರೆ ವ್ಯಕ್ತಿತ್ವವನ್ನು ಮತ್ತು ತನ್ನತನವನ್ನು ಕಳೆದುಕೊಳ್ಳುವುದು ಎಂದರ್ಥ. ಬಾಳಿನ ದುಃಖಗಳ ಇರುಳನ್ನು ದೂರದಲ್ಲಿ ಮಿನುಗುತ್ತಿರುವ ದೀಪದ ಆಶೆಯಿಂದಲೆ ದಾಟಬೇಕೆನ್ನುವ ಆಶಯ ಅವರ ಕವಿತೆಯಲ್ಲಿ ಮತ್ತೆ ಮತ್ತೆ ಬರುತ್ತದೆ.

ಇರುಳು-ತಾರೆಗಳಂತೆ ಬೆಳಕೊಂದು ಮಿನುಗುವುದು
ಕಳೆದ ದುಃಖಗಳಲ್ಲಿ ನೆನೆದಂತೆಯೆ[೨೪]

* * *

ರಾತ್ರಿಯಲ್ಲಿ ನಮ್ಮ ಆದಿ, ರಾತ್ರಿಯಲ್ಲ ಅಂತ್ಯವು
ತಾಯಿಬಸಿರ ಬೆಳಕೆ ನಮ್ಮ ಚಿರಂತನದ ಅಂತ್ಯವು
ಬೆಳಕಿನ ಬಾಂಧವ್ಯದಿಂದ ತಾಯಿಸೆರಗ ಹಿಡಿದೆವು
ಬೆಳಕಿನಿಂದ ಬಂದೆವಣ್ಣ ಬೆಳಕಿನತ್ತ ನಡೆದೆವು[೩೦]

ಕತ್ತಲನ್ನು ಕುಕ್ಕುವಂತಹ, ಮರೆವನ್ನು ಹರಿಯುವಂತಹ, ನಿದ್ದೆಯನ್ನು ತೊಲಗಿಸುವಂತಹ ಅಭಿಲಾಷೆ ಅವರ ಕಾವ್ಯದುದ್ದಕ್ಕೂ ಕಾಣುತ್ತದೆ. ಅವರಲ್ಲಿ ಅಷ್ಟೊಂದು ಬೆಳಕಿನ ಹಂಬಲವಿದೆ. ಮಬ್ಬನ್ನು ದೂಡಬೇಕು, ಅದನ್ನು ಆಚೆ ಚೆಲ್ಲಬೇಕು, ಬೆಳಕನ್ನು ಆಹ್ವಾನಿಸಬೇಕು ಎಂದು ತುಡಿಯುತ್ತಾರೆ :

ಕಂಪು ಚೆಲ್ಲೆ ಪಕಳೆ ಮಿಕ್ಕಿ
ದನಿ ತುಳುಕಿತು ಕಂಠವುಕ್ಕಿ
ನಲಿಯೆ ಹೂವು, ಉಲಿಯೆ ಹಕ್ಕಿ
ಬೆಳಕ ತೂರಿ ಬಾರೆ
ಚಳಕ ತೋರಿ ಬಾರೆ[೩೧]

ಪ್ರಾಪಂಚಿಕ ಹಾಗೂ ದೈವಿಕ ಅನುಭೂತಿಯನ್ನು ಪಡೆಯುವದರತ್ತ, ಶಾಶ್ವತವಾದ ಮತ್ತು ಸಾರ್ವಕಾಲಿಕ ಸತ್ಯಗಳನ್ನು ತಿಳಿಯುವುದರತ್ತ ಅವರು ಗಮನ ಹರಿಸಿ ಅವುಗಳ ಅಭಿವ್ಯಕ್ತಿಯ ಒಂದು ಮಾರ್ಗವಾಗಿ ಪ್ರಕೃತಿ ಕೇಂದ್ರಿತ ಕವಿತೆಗಳನ್ನು ಬರೆದರೆಂದು ತೋರುತ್ತದೆ. ನಿಸರ್ಗವನ್ನು ಪರಿಚಯ ಮಾಡಿಕೊಡುವ ಸಲುವಾಗಿಯೋ ಅದರ ಚೆಲುವಿಕೆಯನ್ನು ಬಣ್ಣಿಸಲೋ ಎಂಬಂತೆ ಅವರು ನಿಸರ್ಗ ಕಾವ್ಯ ಬರೆಯಲಿಲ್ಲವೆಂಬುದನ್ನು ವಿಮರ್ಶೆ ಈಗಾಗಲೆ ಒಪ್ಪಿಕೊಂಡಿದೆ. ಉತ್ಕಟವಾದ ಕಾವ್ಯಾನುಭವವನ್ನು ನೀಡುತ್ತಲೆ ತಮ್ಮ ಗುರಿಯೆಡೆಗೆ ಅವರು ಸಾಗುತ್ತಲಿದ್ದರು. 'ಪ್ರಕೃತಿ ಚಿತ್ರಗಳನ್ನು ಕೇವಲ ಅವುಗಳ ಚೆಲುವಿನ ವರ್ಣನೆಗಾಗಿ ಅಥವಾ ತನ್ನ ಕವಿತೆಯ ಅಲಂಕಾರವಾಗಿ ಬಳಸದೆ, ತನ್ನ ಅಭಿವ್ಯಕ್ತಿ ಮಾರ್ಗದ ಪ್ರಧಾನ ನೆಲೆಯಾಗಿ'[೩೨] ಬಳಸುತ್ತಾರೆಂದು ಎಚ್.ಎಸ್.ರಾಘವೇಂದ್ರರಾವ್ ಅವರು ಬೇಂದ್ರೆಯವರಲ್ಲಿ ನಿಸರ್ಗ ಅಭಿವ್ಯಕ್ತಗೊಂಡ ಬಗೆಯನ್ನು ತುಂಬ ಸರಿಯಾಗಿ ಗುರುತಿಸಿದ್ದಾರೆ.

ಬೇಂದ್ರೆಯವರು ಬೆಳಕನ್ನು ಸರ್ವ ರೀತಿಯಲ್ಲಿಯೂ ಆದರಿಸಿ ತಮ್ಮ ಕವಿತೆಯನ್ನು ಹದನಗೊಳಿಸುತ್ತಾರೆ. ಅವರ ಪ್ರಕೃತಿ ಕಾವ್ಯದ ಸುಗ್ಗಿಯಲ್ಲಿ ಕಣ್ಣು ಕುಕ್ಕುವಂತಹ ಬೆಳಕಿನ ರಾಶಿ. ಸೂರ್ಯನ ತೇಜಸ್ಸನ್ನು, ಚಂದ್ರನ ಕಾಂತಿಯನ್ನು ಒಳಗೊಳ್ಳುವ ಅವರ ಕಾವ್ಯ ಸತ್ವಶಾಲಿ ನಿಸರ್ಗ ಕವಿತೆಗಳ ಒಂದು ಪರಂಪರೆಯನ್ನೇ ಹುಟ್ಟುಹಾಕುತ್ತದೆ. ಬೆಳಕಿನ ತಾಯಿಯ ಮಗನಾಗಿರುವುದಕ್ಕೆ, ಸೂರ್ಯನ ಹೊಳೆಯಲ್ಲಿ ಮೀಯಲಿಕ್ಕೆ, ಬೆಳದಿಂಗಳಿನ ಮತ್ತಿನಲ್ಲಿ ಕನಸು ಕಾಣುವದಕ್ಕೆ ಕವಿ ಸಂತೋಷಪಡುತ್ತಾರೆನ್ನುವುದು ಸ್ಪಷ್ಟವಾಗುತ್ತದೆ.

೬.೩ ಬೇಂದ್ರೆಯವರ ಭೂಮಿತತ್ವ : 'ಮೊದಲಗಿತ್ತಿಗೆ ಹಸಿರುಡುಗೆ'

ದಿವ್ಯ ಸೂರ್ಯಕಿರಣ ಭೂಮಿಯಲ್ಲಿ ಬಗೆಬಗೆಯಾಗಿ ಚಿತ್ರಣಗೊಳ್ಳಬೇಕು ಹಾಗೂ ಅಪಾರವರ್ಣದಲ್ಲಿ ಅದು ಪ್ರತಿಫಲನಗೊಳ್ಳಬೇಕು ಎನ್ನುವ ಆಶಯ ಹೊಂದಿದ್ದ ಬೇಂದ್ರೆಯವರಿಗೆ ಭೂಮಿ ಬರಿ ಮಣ್ಣಿನ ಹೆಂಟೆಯಾಗಿ ಕಾಣಲಿಲ್ಲ. ಬೆಳಕಿಗೆ ಹೆಚ್ಚು ಹೆಚ್ಚು ತೆರೆದುಕೊಂಡಷ್ಟೂ ಭೂಮಿಯ ಕಾಂತಗುಣವು ಹೆಚ್ಚಾಗುತ್ತದೆಯೆನ್ನುವ ನಂಬಿಕೆ ಅವರ ಕವಿತೆಗಳಲ್ಲಿ ಕಂಡುಬರುತ್ತದೆ. ಉನ್ನತ ಗಿರಿಶಿಖರಗಳನ್ನು, ಜೀವ ಸೆಲೆಯ ಹೊಳೆ-ಹಳ್ಳಗಳನ್ನು, ಸುಗಂಧದ ಗಿಡಮರಬಳ್ಳಿಗಳನ್ನು ಹೊತ್ತಿರುವ ವಸುಂಧರೆ ಮನುಷ್ಯನ ನಾಗರಿಕತೆಗೆ ಮೂಲವಾಗಿದ್ದಾಳೆ. ಪೃಥ್ವಿಯಲ್ಲಿ ಬಿದ್ದ ಬೀಜಗಳು ಗಾಳಿ, ಬೆಳಕು, ನೀರಿನ ಸಂಯೋಗದೊಂದಿಗೆ ಮರಗಳಾಗಿ ಮಾನವನೆದೆಗೆ ಉಸಿರು ನೀಡುತ್ತವೆ. ಸಂಭ್ರಮದ ಸುಗ್ಗಿ ತರುತ್ತವೆ. ಹಾಗಾಗಿಯೇ ಮನುಷ್ಯನ ಬದುಕು ಗಾಳಿಯ ಅಲೆಯಲ್ಲಿ, ನಲುಮೆಯ ನೀರಿನಲ್ಲಿ, ಹಸಿರಲ್ಲಿ, ಕೆಸರಲ್ಲಿ, ಬಾನಗಲದ ತೊಟ್ಟಿಲಲ್ಲಿ ಜೀವಕಳೆಯನ್ನು ಸೂಸುತ್ತಿದೆ. ಭೂಮಿಯ ಪೋಷಕ ಗುಣವನ್ನು ಚಿತ್ರಿಸುವದಷ್ಟೇ ಬೇಂದ್ರೆಯವರ ಉದ್ದೇಶವಾಗಿಲ್ಲ. ತಾಯಿಯ ಹಾಲನ್ನು ಕುಡಿದ ಮನುಷ್ಯ ವಿಷವನ್ನು ಕಾರಿರುವ ನಾಗರಿಕತೆಯ ಕರಾಳ ಅಧ್ಯಾಯಗಳು ಮತ್ತು ಕ್ಷುದ್ರತೆಯ ಕಪ್ಪು ಚುಕ್ಕೆಗಳು ತಾಯ ಚಿತ್ರಣದ ಸಂಪುಟದಲ್ಲಿ ಸೇರಿಕೊಂಡಿವೆ. ಸಹೋದರತ್ವವನ್ನು ಮರೆಯದೆ ನಿಂತ ನೆಲವನ್ನು ಆಹ್ಲಾದವಾಗಿರಿಸಿಕೊಂಡರೆ ಮನೆಯಲ್ಲಿಯೆ ಬಯಲನ್ನು, ಬಾನನ್ನು ಕಾಣಬಹುದೆಂಬ ತಿಳವಳಿಕೆಯನ್ನು ಬೇಂದ್ರೆ ಕೊಡುತ್ತಾರೆ. 'ಇಳೆ ಎಂದರೆ ಬರಿ ಮಣ್ಣಲ್ಲ', 'ಒಂದೆ ತಾಯಿಯ ಮಕ್ಕಳು', 'ಭೂಮಿತಾಯಿ', 'ಮೊದಲಗಿತ್ತಿ', 'ಚಿಗರಿಗಂಗಳ ಚಲುವಿ', 'ಗಂಧವತಿ', 'ಸ್ಥಿರೆ-ತಿರೆ', 'ಬಿಡಿಮುತ್ತು', 'ಈಶ', 'ಒಳಬೆಡಗಿನ ತಿಳಿಹಾಡು' ಮುಂತಾದ ಕವಿತೆಗಳು ಈ ನಿಟ್ಟಿನಲ್ಲಿ ದುಡಿಯುತ್ತವೆ ಹಾಗೂ ಸಹೃದಯರ ಎದೆಯಲ್ಲಿ ಇಳೆಯ ಹಂಬಲ ಹೊತ್ತಿಸುತ್ತವೆ.

ಹೆತ್ತತಾಯಿ ತನ್ನ ಮಗನ ಅಭ್ಯುದಯವನ್ನು ಬಯಸುವಂತೆ ಭೂಮಿತಾಯಿ ಕೂಡ ಸದಾಕಾಲ ಮನುಷ್ಯನ ಒಳಿತನ್ನೆ ಬಯಸುವವಳಾಗಿದ್ದಾಳೆಂದು ಬೇಂದ್ರೆಯವರು ಭೂಮಿಯ ಮಾನವೀಯ ಹಾಗೂ ಪೋಷಕ ಗುಣಗಳನ್ನು ಅಭಿವ್ಯಕ್ತಗೊಳಿಸುವ ಮೂಲಕ ಭೂಮಿಯ ಜೊತೆಗಿನ ಮನುಷ್ಯ ಸಂಬಂಧಗಳಿಗೆ ಆಳವಾದ ಒಳನೋಟಗಳನ್ನು ಕೊಡುವಲ್ಲಿ ಶಕ್ತರಾಗುತ್ತಾರೆ.

ನೀರಿನುಸಿರೆ ಮೇಲೆ ಹಾರಿ
ಬೆಳಕು-ಹಕ್ಕಿ ಬೆನ್ನ ಏರಿ
ಬಿಳಿಯ ಮೋಡ ಬೆಳಕಿನಲ್ಲಿ
ತೇಲುವಂತೆ ಬಂದಳೋ
ನೋಡು ಕಂದ ಎಂದಳು[೨೫]

* * *

ಬಾನಿಗಾವುದು ಕಂಬ?

ಇಳೆಗಾವುದಾಲಂಬ?[೨೯]

ಎಂದು ಅಲೌಕಿಕ ಅರ್ಥಗಳನ್ನು ಹಚ್ಚುತ್ತಲೆ ಭೂಮಿಯ ಕಾರುಣ್ಯಕ್ಕೆ ಕೃತಜ್ಞನಾಗಿರಬೇಕಾದ ಮಾನವ ಅನಾಗರಿಕನಾಗಿ ಸ್ವೇಚ್ಛೆಯಿಂದ ವರ್ತಿಸಿ ಕೃತಘ್ನನಾಗಿರುವುದನ್ನು ಕವಿ ಬಹಳಷ್ಟು ವ್ಯಥೆಯಿಂದ ನಿರೂಪಿಸುತ್ತಾರೆ. ತಾಯಿಯ ವಾತ್ಸಲ್ಯದ ಹಾಲು ಉಂಡ ಮನುಷ್ಯ ಉಪಕಾರಿಯಾಗದೆ ಹೆತ್ತೊಡಲನ್ನೆ ಪೀಡಿಸುವ, ನಿಂತ ಗಿಡವನ್ನೆ ಕಡಿಯುವ ಹಿಂಸಕ ಪ್ರವೃತ್ತಿಯವನಾಗಿರುವುದಕ್ಕೆ ಬೇಂದ್ರೆಯವರಿಗೆ ದುಃಖವಿದೆ. ಆ ತಾಯಿಯನ್ನು, ಮನೆಯನ್ನು ಮರೆತಿರುವುದಕ್ಕೆ ಆಕೆ ಹಾಕಿಕೊಟ್ಟ ಹಾದಿ ಬಿಟ್ಟು ಅಡ್ಡಡ್ಡ ಹಾದಿ ಹಿಡಿದಿರುವುದಕ್ಕೆ ಕವಿಗೆ ಆಕ್ರೋಶವಿದೆ. ಅದಕ್ಕಾಗಿ ಆಕೆ ರಣಚಂಡಿ ಕೂಡ ಆಗಬಲ್ಲಳು. ಭೂಮಿಯ ಇತಿಹಾಸ ಬರೆಯುತ್ತ ತಾಯಿಗಂಡರಿಗೆ ತಕ್ಕಪಾಠ ಕಲಿಸಿದ ತಾಯಿಯ ದುಷ್ಟ ನಿಗ್ರಹ ಶಿಷ್ಟ ರಕ್ಷಣೆಯ ತತ್ವವನ್ನು ಪರೋಕ್ಷವಾಗಿ ಕಟ್ಟಿಕೊಡುತ್ತಾರೆ.

ಹಿಂಡಾಗಿ ಪುಂಡರು ಅಂಡಲೆಯಲು ನಿನ್ನ

ನೆತ್ತರು ಒರೆಹಚ್ಚಿ ನೋಡಿರುವೆ

ಪಾತಾಳ ಕಂಡರು ಕೆಲ ತಾಯಿಗ್ಗಂಡರು

ಅವರನ್ನು ಮಡಿಲಾಗೆ ಮಲಗಿಸಿಹೆ

ಹದಿನಾರು ರಾಜರು ತಲೆಕೆಳಗಾದರು

ಆದರು ತಲೆಯೆತ್ತಿ ನಿಂತಿರುವೆ[೩೦]

ಒಂದಾಗಿದ್ದ ಜನರು ಮನಸ್ಸಿಗೆ ಬಂದಂತೆ ಕಾದಾಡಿದ್ದಾರೆ. ಬೀದಿಯಲ್ಲಿ ರಕ್ತವನ್ನು ಹರಿಸಿದ್ದಾರೆ. ಅಂತಹ ಮಕ್ಕಳು ಈ ದೇಶದಲ್ಲಿ ಅನೇಕ ಪ್ಲಾಸಿಗಳಾಗಲು, ಪಾನಿಪತ್ತಗಳಾಗಲು ಕಾರಣರಾಗಿದ್ದಾರೆಂದು ಬೇಂದ್ರೆ ವಿಷಾದಿಸುತ್ತಾರೆ.

ಒಕ್ಕುಡಿತೆ ಅರೆಮುಕ್ಕು ಎನುತೆನುತೆ ಹಲಕೆಲವು

ಪಾನಿಪತ್ತುಗಳನ್ನು ಮುಕ್ಕುಳಿಸುವೆ

ಕೊಡಲಿ ರಾಮನು ಎರೆದ ಕೆನ್ನೀರ ಜಳಕಕ್ಕೆ

ಕೂದಲು ನನೆಯಲಿಲ್ಲೆನ್ನುತಿಹೆ[೩೧]

ರಕ್ತತರ್ಪಣದ ಅನೇಕ ಕೆಂಚರನ್ನು, ಸಾಮಂತರನ್ನು ಭೂಮಿಯ ಒಳಿತಿಗಾಗಿ ನುಂಗಿರುವ ಭೂದೇವಿ ಮನುಷ್ಯರು ಸಹಬಾಳ್ವೆಯ, ಸದಾಚಾರದ ಬದುಕಿಗೆ ಕಾಲಿಟ್ಟಾಗ ಆಕೆಯಷ್ಟು ಸಂತೋಷಪಡುವವರು ಯಾರೂ ಇಲ್ಲವೆಂದೆನ್ನಬಹುದು. ತನ್ನ ಮಕ್ಕಳ ಏಳ್ಗೆಯೇ ತನ್ನ ಏಳ್ಗೆ ಎನ್ನುತ ತಪ್ತ ಭೂಮಿ ಈಗ ಸೀಮಂತಕ್ಕೆ ಸಿಂಗಾರಗೊಂಡಿದೆ.

ಹಾಲಿನ ಹೃದಯಕ್ಕೆ ಕುಬ್ಬುಸವನು ತೊಡಿಸಿ
ಹೂ ಮುಡಿಸಿಕೊಂಡೆಂದು ನೀ ನಲಿವೆ?
ಬಸಿರು ತುಂಬಲು ಹಸಿರುಡಿಗೆಯನುಟ್ಟೆಂದು
ವನವಾಸ ನವಮಾಸ ತೀರಿಸುವೆ?[21]

ದುಷ್ಟರನ್ನು ಸದೆಬಡಿಯುವ ತಾಯಿಯ ಆಕ್ರೋಶದ ಚಿತ್ರಣ ಬೇಂದ್ರೆಯವರಲ್ಲಿ ಅನೇಕ ಸಲ ಕಂಡು ಬರುತ್ತದೆ. ಭೂಮಿತಾಯಿ ಶಕ್ತಿದೇವತೆಯಾಗಿ ತನ್ನ ಬಲವನ್ನು ಪ್ರಕಟಿಸುತ್ತಾಳೆ. 'ಯಾವೂರಾಕಿ ನೀ ಮಾಯಕಾರತಿ?' ಎನ್ನುವ ಕವಿತೆಯಲ್ಲಿಯೂ ಕೂಡ ಪೃಥ್ವಿ ಪುರಾತನದ ಲೆಕ್ಕಪಕ್ಕವನ್ನೆಲ್ಲ ಹರಿದೊಗೆದು ಹೊಸತನಕ್ಕೆ ಸಿದ್ಧಗೊಳ್ಳುತ್ತಾಳೆ. ಹೊಸ ಬೆಳಕಿಗೆ ತಾಯಿ ನಲಿಯುತ್ತಾಳೆ.

ಶೃಂಗೇರಿ ತುಂಗಿ ಆಗಿ, ಕಾಶಿಯ ಗಂಗಿಯಾಗಿ
ಕೂಡಲ ಸಂಗಿ ಆಗಿ ಮುಂದ ಸರಿದೀ
ಭುಜಬಲ, ಕುಜಬಲ, ನಾ ಭಲಾ ನೀ ಭಲಾ
ತಾಯಿಗ್ಗಂಡರ ಕತ್ತನ್ನ ಮುರಿದೀ
ಕರ್ಮದ ಜಂಜಡ, ಮರ್ಮದ ಕೀಲ ತಿರುವಿ
ಹಳೆ ಲೆಕ್ಕಾಪಕ್ಕಾ ಎಲ್ಲಾ ಹರಿದಿ
ಮಕ್ಕಳನ್ನು ಮುದ್ದಿಟ್ಟು, ಮುಗಿಲಾದ ತೊಟ್ಟಿಲಾ ಕಟ್ಟಿ
ಬೇರೇನ ಹಣೆಬರಾ ಬರಿದಿ[22]

ತಾನು ನೆಲೆನಿಂತ ನೆಲಕ್ಕೇನೆ ದ್ರೋಹ ಬಗೆಯುವ ದುಷ್ಟರ ಬಗ್ಗೆ ಹೇಳುತ್ತಲೆ ಕವಿತೆ ಸೃಷ್ಟಿಯ ಮೂಲ ಉದ್ದೇಶವಾದ ಶಾಂತಿ, ಪ್ರೀತಿ, ಸಹಬಾಳ್ವೆ, ಆನಂದದ ಕಡೆಗೆ ನಡೆಯುವುದು ಅಚ್ಚರಿ ಹುಟ್ಟಿಸುತ್ತದೆ. ಬಾನನ್ನು ಇಳೆಗೆ ಇಳಿಸುವುದು ಅಥವಾ ಮುಗಿಲಿಗೆ ತೊಟ್ಟಿಲು ಕಟ್ಟುವುದು ಬೇಂದ್ರೆಯವರಿಗೆ ಪ್ರಿಯವಾದ ಸಂಗತಿಗಳು. ಅಂತರಂಗದ ಅರಿವಿನ ಅನುಭೂತಿಗೆ ಅವರ ಕವಿತೆಗಳು ಸುಪ್ತವಾಗಿ ಚಲಿಸುತ್ತಲೆ ಇರುತ್ತವೆ.

ಓಂಕಾರ ರ್ಝೋಕಾಲಿ, ಆಗ್ತ ಆಗ್ತ ಆಗ್ತಿ ನೀ
ಅಂಬಿಕೆಯ ಮುತ್ತಿನ ಮೂಗುತೀ[23]

ಮನುಷ್ಯಜೀವಿ, ಪ್ರಾಣಿ, ಪಕ್ಷಿ ಹಾಗೂ ಒಟ್ಟು ಜೀವ ಸಂತತಿಯ ಭಾರ ಹೊತ್ತಿರುವ, ಸಾಕಿ ಸಲಹುತ್ತಿರುವ ಭೂಮಿ ತಾಯಿಯ ರೂಪದಲ್ಲಿ, ಪ್ರಕೃತಿಮಾತೆಯ ವೇಷದಲ್ಲಿ ಜೀವ ಚೈತನ್ಯಕ್ಕೆ ಕಾರಣವಾಗಿದೆ. ಹೆತ್ತ ತಾಯಿ, ಇಳೆ, ದೇಶ ಮುಂತಾದವು ಬೇಂದ್ರೆಯವರಿಗೆ ತಾಯಿಯ ಪ್ರತಿರೂಪಗಳೆ ಆಗಿರುವುದು ಅವರು ಅರವಿಂದರ

ಆಧ್ಯಾತ್ಮಿಕ ಪ್ರೇರಣೆಗಳಿಂದ ಪಡೆದ ಫಲವಾಗಿದೆ. ತಾಯಿಯ ಶಕ್ತಿಯನ್ನು ಅಗಾಧವಾಗಿ ವಿಸ್ತರಿಸುತ್ತಾ ಹೋಗುವುದು ಬೇಂದ್ರೆಯವರಿಗೆ ತುಂಬ ಮೆಚ್ಚಿಕೆಯ ವಿಷಯವಾಗಿತ್ತು. ತಾಯಿಯ ನುಡಿಗೆ ತಾನು ಬರಿ ಕೊರಳಾಗಿದ್ದೇನೆಂದು, ಆಕೆ ಇತ್ತಿರುವುದನ್ನು ಮಾತ್ರ ತನಗೆ ಕೊಡಲು ಸಾಧ್ಯವಾಗಿದೆಯೆಂದು, ಕವಿ ಎಂದು ತನ್ನನ್ನು ಜನ ಕರೆಯುವುದರ ಹಿಂದೆ ತಾಯಿಯ ಶಕ್ತಿಯಿದೆಯೆಂದು ಅವಳನ್ನು ಮನಸಾರೆ ಹಾಡಿ ಹೊಗಳುತ್ತಾರೆ. ಎಲ್ಲ ಶಕ್ತಿ ಸಾಮರ್ಥ್ಯಗಳು ತಾಯಿ ಆಟ ಹೂಡಿದ ಫಲವಾಗಿ ತನಗೆ ದಕ್ಕಿವೆಯೆನ್ನುತ್ತಾರೆ:

ತಾಯೆ ಮಾಯೆ ಅಂಬಿಕೆಯೇ ನಿನ್ನ ತನಯ ದತ್ತನು
ನೀನು ಇತ್ತುದಿತ್ತನು ॥
ನಿನ್ನ ಜನುಮದೊಂದು ಪಾಡು ಹಾಡು ಆಗಿ ಮೂಡಿತು
ನನ್ನ ಕೊರಳು ಹಾಡಿತು ॥[೩೫]

ಸೃಷ್ಟಿಕರ್ತನಿಗೆ ಕವಿ ಮುಗಿದ ಕೈಯು ಏಕಕಾಲಕ್ಕೆ ಜನ್ಮಕೊಟ್ಟ ತಾಯಿಗೂ, ಭಾರ ಹೊತ್ತ ಭೂಮಿಗೂ, ರಾಷ್ಟ್ರಮಾತೆಗೂ, ಕನ್ನಡ ತಾಯಿಗೂ, ಪ್ರಕೃತಿ ಮಾತೆಗೂ ಸಂದು ಎಲ್ಲ ತಾಯಿಯರ ಋಣಗಳನ್ನು ತೀರಿಸಲು ಯತ್ನಿಸುತ್ತದೆ. ಅವರ ತಾಯಿಭಕ್ತಿ ಬರಬರುತ್ತ ಧಾರವಾಡದ ತಾಯಿಯನ್ನು, ಮಹಾಲಕ್ಷ್ಮಿ, ಮಹಾಸರಸ್ವತಿ ಮುಂತಾದ ಶಕ್ತಿದೇವತೆಗಳನ್ನು ಒಳಗೊಳ್ಳುತ್ತದೆ. ತಮ್ಮ ಸೃಜನಶೀಲ ಶಕ್ತಿಯ ಮೂಲವನ್ನು ಅವರು ತಾಯಿಯಲ್ಲಿಯೇ ಹುಡುಕಿದರು.

''ಇದು ತಾಯಿಯ ಬಗ್ಗೆ ಅವರಿಗಿದ್ದ ಭಕ್ತಿ-ಪ್ರೀತಿಯ ಅವಿಚಾರಿತ ವಿಪರೀತ ಎನಿಸಿದರೂ, 'ತಾಯಿ' ಎಂಬ ಪರಿಕಲ್ಪನೆಯನ್ನೇ ಬೇಂದ್ರೆಯವರು ಅಗಾಧವಾಗಿ ವಿಸ್ತರಿಸಿದ್ದಾರೆ ಎಂದು ಡಾ. ಗಿರಡ್ಡಿ ಗೋವಿಂದರಾಜ ಹೇಳುತ್ತ ಅಲೌಕಿಕ ನೆಲೆಗಳನ್ನು ಕಾವ್ಯದಲ್ಲಿ ಸಾಧಿಸಲು ಈ ನಂಬಿಕೆ ಅವರಿಗೆ ನೆರವಾಗಿದೆಯೆನ್ನುತ್ತಾರೆ. ದೈವಿ ಪರಿವರ್ತನೆ ಮಾತೆಯ ಮೂಲಕವೇ ಸಾಧ್ಯವೆಂದು ಅವರ ನಂಬಿಕೆಯಾಗಿತ್ತು. ಬೇಂದ್ರೆಯವರಲ್ಲಿ ತಾಯಿಯ ಬಗ್ಗೆ ಇದ್ದ ಕಲ್ಪನೆಗೆ ಅರವಿಂದರ ತತ್ವ ಆಧ್ಯಾತ್ಮಿಕ ಸಮರ್ಥನೆ ನೀಡಿದಂತೆ ಕಾಣುತ್ತದೆ.''[೩೬]

ಒಂದು ರೀತಿಯ ಆಧ್ಯಾತ್ಮಿಕ ಹಾಗೂ ಭಕ್ತಿಯ ಪರಿಸರ ಬಾಲ್ಯದಲ್ಲಿ ತಾಯಿಯ ಮೂಲಕ ಅವರಿಗೆ ದೊರಕಿದುದರ ಪರಿಣಾಮವಾಗಿ ಕಾವ್ಯದ ಮೂಲಕ ಅವ್ಯಕ್ತ ನೆಲೆಗಳನ್ನು ಅರಸಲು ಅವರಿಗೆ ಸಾಧ್ಯವಾಯಿತು. ಅಭಿವ್ಯಕ್ತಿಗೆ ಕಷ್ಟವಾಗಿದ್ದ ವಿಚಾರಗಳನ್ನು ಕೈಗೆಟಕುವ ಸಂಗತಿಗಳಿಂದಲೆ ಹೇಳಿದ್ದು ಬೇಂದ್ರೆಯವರ ವಿಶಿಷ್ಟತೆಯೆನ್ನಬೇಕು. ಲೌಕಿಕ ಬದುಕಿನ ಕಷ್ಟ-ಸುಖಗಳ ಆಚೆಗಿನ ಲೋಕದ ಬಯಕೆ ಸಹಜವಾಗಿಯೇ ಅವರನ್ನು ಕಾಡುತ್ತದೆ. ತಾಯಿ ಮಾಯಿಯನ್ನು ಅದಕ್ಕಾಗಿ ಕೋರುತ್ತಾರೆ. 'ಹೃದಯ ಸಮುದ್ರ' ಸಂಕಲನದಲ್ಲಿನ 'ಓ ತಾಯಿ -ಮಾಯಿ'[೩೭] ಎನ್ನುವ ಅವರ ಪದ್ಯ ಲೌಕಿಕವನ್ನು ಸೀಳಿಕೊಂಡು ಅನುಭಾವದ ತೀವ್ರತೆಯನ್ನು ಸಾಧಿಸಬಯಸುವ ಅದ್ಭುತ ರಚನೆಯಾಗಿದೆ.

'ಓ ಮಾಯಿ ಬಂದೆ ಓ ತಾಯಿ ಬಂದೆ ಓ ಕಾಯೆ ಕಾಯಿ ಬಂದೆ
ನಿನ್ನ ಕಾಲ ನಾತ ಮೂಸಿಡುತ ಬಂದೆ ನಿನ ನಾಯಿಯಾಗಿ ಬಂದೆ
ಒಳಬಳಕಿ ಬೆಳಸ ಹಸಿದೇನ ತಾಯಿ ಸಣ್ಣಕ್ಕಿ ತಳಸಬೇಕs
ಮೈಗಡಗಿ ತೊಳದು ಒಳಗಡಗಿ ಮಾಡ, ಬಾ ಅಡಗಿ ಕೂತಿಯಾಕ'

ತಮ್ಮ ಅನುಭವವನ್ನು ಭಾಷೆಯ ಲಯ, ಶಕ್ತಿ ಅಭಿವ್ಯಕ್ತಿಯಿಂದ ಔನ್ನತ್ಯಕ್ಕೆ ಏರಿಸುವುದು ಬೇಂದ್ರೆಯವರಿಗೆ ಕರಗತವಾಗಿದೆ. ಭಗವಂತ ಭಕ್ತನನ್ನು ಕರೆದ ರೀತಿಯಲ್ಲಿ ಮಾಯೆಯಾಗಿರುವ ತಾಯಿ ಮಗನನ್ನು ಮಾನಸಕೊಳ್ಳಕ್ಕೆ ಕರೆಯುವುದು ವಿಶಿಷ್ಟವಾಗಿದೆ.

ನಾಡಾಡಿ ಹಕ್ಕಿ ನೀನಲ್ಲೊ ಮಗನ ಹೊಕ್ಕಾಕ ಬೆಳ್ಳಕ್ಯಾಗs
ನಿನ ತಾಯಿ ಕಣ್-ಹನಿಮುತ್ತ ಸುರಸತಾಳ ಮಾನಸಕೊಳ್ಳದಾಗ

ಜೀವನದ ಅನುಭೂತಿಯೆಂದರೆ ಜೀವನದ ಸಮಸ್ಯೆಗಳ, ದ್ವಂದ್ವಗಳ ನಡುವೆಯೆ ಪರವಿಚಾರಕ್ಕಾಗಿ ಮಿಡಿಯುವುದಾಗಿದೆ. ಭೋಗದೊಳಗಿದ್ದೂ ಯೋಗದ ಕನಸು ಕಾಣುವಂತಾಗಬೇಕು. ಆದರೆ ಅದು ಮನಸ್ಸಿನ ಪ್ರಾಮಾಣಿಕತೆ, ಋಜುಗುಣಗಳಿಂದ ಮಾತ್ರ ಸಾಧ್ಯವಾಗುತ್ತದೆ. ಉತ್ಕಟವಾದ ಅನುಭವದ ನಂತರ ಪ್ರಾಪಂಚಿಕ ದೃಷ್ಟಿ ಮಾಯೆಯನ್ನು ದಾಟಬೇಕಾಗುತ್ತದೆ. ಅಂತಹ ಹಸಿವು ಹುಟ್ಟಿದಾಗ ಮನುಷ್ಯ ಅನುಭಾವದ ಬಾಗಿಲು ಬಡಿಯುತ್ತಾನೆ.

ಬಂದಾನ ಏನ ನನ ಕಂದ ಮನಿಗೆ ಇಂದಾರೆ ಅನತ ಮನಕ
ಎಂದಾರೆ ಬಾರೊ ಕಾದಿರುವೆ ಇಲ್ಲೆ ನೀನಾಗಿ ಬರುವ ತನಕ
ಅಡ್ಡಡ್ಡ ಹಾದಿ ನೀ ಹೋದ ಮ್ಯಾಲೆ ನಾ ಕಾದೆನೆಷ್ಟೊ ನಿನಗs
ಹಾಲ್‌ಹಸಿವು ಹುಟ್ಟಿದಾಗ ನೀನs ಬರತಿಯೋ ಚಿಂತಿ ಯಾಕ ನನಗ?

'ಗರಿ', 'ನಾದಲೀಲೆ', 'ಉಯ್ಯಾಲೆ', 'ಹಾಡು-ಪಾಡು', 'ಗಂಗಾವತರಣ' ಮೊದಲಾದ ಕವನ ಸಂಕಲನಗಳಲ್ಲಿ ಇರುವ ಬೇಂದ್ರೆ ಮತ್ತು 'ಅರಳು ಮರಳು' ಸಂಕಲನದಲ್ಲಿ ದೊರಕುವ ಬೇಂದ್ರೆ ಭಿನ್ನವಾಗಿ ತೋರಲು ಇಂತಹ ಅನುಭಾವದ ಹಾಲಹಸಿವೆ ಕಾರಣವಾಗಿದೆ. ಲೌಕಿಕದ ಉತ್ಕಟತೆಯಲ್ಲಿ ಮುಚ್ಚಿ ಹೋಗಿದ್ದ ಅದು ಈಗ ಪ್ರಕಾಶಮಾನವಾಗಿ ಹೊಳೆಯುತ್ತಿದೆ. ಇಹದ ಅನುಭೂತಿ ಮರೆಗೆ ಸರಿಯುತ್ತ ಪರದ ಅನುಭೂತಿ ಮೇಲುಗೈ ಸಾಧಿಸುತ್ತದೆ. ಇದರರ್ಥ ಲೌಕಿಕವು ಪೂರ್ಣ ಮರೆಯಾಗಿದೆಯೆಂದಲ್ಲ. ಬದುಕಿನ ಸಂಕಟಗಳ ನಡುವೆಯೆ ಆ ಸಪಿಗೆ ಕವಿ ಕೈಚಾಚುತ್ತಾರೆ. ಇಂತಹ ಪರಿವರ್ತನೆ ಸಹಜವೆಂದು, ಉತ್ಕಟ ಬದುಕಿನ 'ಹ್ಯಾಮ್ಲೆಟ್'-'ಮ್ಯಾಕಬೆತ್'ಗಳ ನಂತರ ಶೇಕ್ಸ್‌ಪೀಯರ್‌ನು ಟೆಂಪೆಸ್ಟ್ ಬರೆಯಬೇಕಾಯಿತೆಂದು ಶಂಕರ್ ಮೊಕಾಶಿ ಪುಣೇಕರರು ಅಭಿಪ್ರಾಯ ಪಡುತ್ತಾರೆ.

: 'ಹ್ಯಾಮ್ಲೆಟ್-ಮ್ಯಾಕಬೆಥ್-ಮೆಝುರಟು ಮೆಝುರಗಳನ್ನು ಬರೆದ ಮೇಲೆ ಶೇಕ್ಸ್‌ಪಿಯರನಿಗೆ ಟೆಂಪೆಸ್ಟ್ ಬರೆಯದೆ ಇನ್ನೊಂದು ಉಪಾಯವಿದ್ದಿಲ್ಲ; ಅದು ಅವನ ನೈಸರ್ಗಿಕ ಬೆಳವಣಿಗೆ.'[೩೮] ಟೆಂಪೆಸ್ಟ್‌ದಲ್ಲಿ ಹ್ಯಾಮ್ಲೆಟ್‌ನಲ್ಲಿರುವಂತೆ ಮಾನವೀಯ ತಿಕ್ಕಾಟವನ್ನು ಹುಡುಕುತ್ತ ನಿರಾಶರಾಗಬಾರದೆಂದು ಪುಣೇಕರರು ಹೇಳುವುದು ಸರಿಯಾದುದಾಗಿದೆ. ಆ ಕಾವ್ಯದಲ್ಲಿ ಇಲ್ಲದ ಸಂಗತಿಗಳನ್ನು ಶೋಧಿಸುವುದು, ಅದು ಸಿಗದಿದ್ದಾಗ ಕವಿಯ ದೋಷವೆಂದು ಪರಿಗಣಿಸುವುದು ವಿಮರ್ಶೆಯ ಒಳ್ಳೆಯ ಗುಣವಾಗಲಾರದು. ಭಕ್ತಿ ಪರಂಪರೆಯನ್ನು ಬೇಂದ್ರೆ ರೂಢಿಸಿಕೊಂಡವರಾದುದರಿಂದ ಭಕ್ತಿಯ ಹೊಳೆಯಲ್ಲಿಯೆ ಅವರು ಇರಬಯಸುತ್ತಾರೆ. ಕಾಮ ತುಂಬಿ ತುಳುಕುವ, ಕ್ಷೋಭೆ ಸಂಕಟ ಉಂಟು ಮಾಡುವ ಸಮಯದಲ್ಲಿಯೂ ಚೈತನ್ಯ ಸ್ವರೂಪನ ಜಪದಿಂದ ಸಂಕಷ್ಟ ದೂರಾಗಬಲ್ಲದೆಂದು ತಿಳಿಯುತ್ತಾರೆ. ಬದುಕಿನ ಸಾಮಾಜಿಕತೆಯನ್ನು ದಾಟಿ ಆಧ್ಯಾತ್ಮದ ಹಾದಿ ಹಿಡಿಯುತ್ತಾರೆ. ಇದರಿಂದ ಬದುಕಿನ ಕಷ್ಟಗಳು ಮುಗಿದು ಹೋಗುತ್ತವೆಂದು ಅವರೇನು ತಿಳಿದುಕೊಂಡಿಲ್ಲ. ಮತ್ತೆ ಜೀವನಕ್ಕೆ ಮರಳುವುದು ಇದ್ದೇ ಇದೆ. ಅವರು ತಿಳಿದುಕೊಂಡಿದ್ದಂತೆ ಕಷ್ಟದಿಂದ ಸುಖಕ್ಕೆ, ಸುಖದಿಂದ ಕಷ್ಟಕ್ಕೆ ಮರಳುವುದು ಇದ್ದೇ ಇದೆ. ಬದುಕಿನ ಕಲಕು ಮಲಕು ತಾಳಲಾರದೆ ಒಳಒಳಕೆಯನ್ನು ಬೆಳೆಸೆಂದು, ಬೆಳಕಿನ ಹಸಿವು ಹೆಚ್ಚಿಸೆಂದು ಮಾಯಿಯಾಗಿರುವ ತಾಯಿಯಲ್ಲಿ ಕೋರುತ್ತಾರೆ.

ಮಗ ತುಂಬಿಯಾದರೆ ತಾಯಿ ತಾವರೆಯಾಗಿದ್ದಾಳೆ. ಅವನ ಹೃದಯದಲ್ಲಿ ಯೋಗ ತೆರೆಯುವ ಜಗವತಿ, ಭಗವತಿಯಾಗಿದ್ದಾಳೆ. 'ಸೂರ್ಯಪಾನ', 'ಹೃದಯ ಸಮುದ್ರ', 'ಮುಕ್ತಕಂಠ', 'ಚೈತ್ಯಾಲಯ', 'ಜೀವಲಹರಿ' ಮುಂತಾದ ಕವನ ಸಂಕಲನಗಳಲ್ಲಿನ ಕವಿತೆಗಳೆಲ್ಲ ತಾಯಿಯ ಮಾನಸ ಕೊಳ್ಳಕ್ಕೆ ಧುಮುಕುತ್ತವೆ. ಅಂತರಂಗದ ಬೆಳಕು ಕಾಣಲಿಕ್ಕೆ ತುಡಿಯುತ್ತವೆ. ಹಾಗಾಗಿಯೇ ಅವರ 'ಅರಳು-ಮರಳು' ಕೃತಿಯನ್ನು ಅನುಭವ ಪಕ್ವತೆಯಿಂದ ಮಾಗುವ ಮತ್ತು ಮರಳಿ ಅರಳುವ ಪ್ರಯತ್ನವೆಂದು ಕನ್ನಡ ವಿಮರ್ಶೆ ವ್ಯಾಖ್ಯಾನಿಸಿದೆ. 'ಓ ತಾಯಿ-ಮಾಯಿ' ಕವನವು ಅರವಿಂದ ಭಕ್ತಿಯ ಸೆಲೆಯಿಂದಲೇ ಹುಟ್ಟಿಬಂದ ಕವನವೆಂದು ಹೇಳಿದರೆ ಯಾರೂ ಸಂಶಯಪಡಲಾರರು... ಭೂಮಿ ಜೀವಿಯಾದ ಕವಿ ಭೂಮಿಜೀವನದ ಉಮ್ಮಳಿಕೆ-ಭಯ-ಸಂಕಟಗಳನ್ನು ಜೊತೆಗಿಟ್ಟುಕೊಂಡೇ ಶಿವಜಾಯಿ ಮಾಯೆಗೆ ಎದುರಾಗುತ್ತಾನೆ. ಅದಕ್ಕೆ ಅವಳು ಕೊಡುವ ಉತ್ತರವಾದರೂ ಎಂಥದು?

ಹಾಂಗಲ್ಲೊ ಮಗನ ನೀ ಭೋಗ ಬೇಡಿದಲ್ಲಲ್ಲು ಬಾಗಿಲಾಗಿ
ತೆರಿತಾವ ಹಾದಿ, ಅದಕಂತ ಕಾದಿ, ನಿನ ಮನಸೆ ಕನಸು ಆಗಿ

'ನಮ್ಮ ಇಚ್ಛೆಯೇ ನಮ್ಮ ಜಗತ್ತಾಗಿ ನಮ್ಮತ್ತ ಬಂದು ಅಣಕಿಸುತ್ತದೆ.... ಸಮಸ್ಯೆಯ ಎದೆಯನ್ನೇ ಸೀಳಿ ಹಿಂತಿರುಗಿ ಬರುವಾಗ ಕೆಚ್ಚಿನೊಡನೆ ಕೆಚ್ಚು, ಸಮಾಧಾನದೊಡನೆ ಸಮಾಧಾನ, ಇಂಥ ಜೀವನ ಧರ್ಮವನ್ನು ಪಡೆದು 'ಓ ತಾಯಿ-ಮಾಯಿ' ಬರುತ್ತದೆ.'[೩೯] ಲೌಕಿಕದ ಸಂಭ್ರಮ ವಿಷಾದದಲ್ಲಿ ಮತ್ತೆ ಮತ್ತೆ ಮುಳುಗುವವನನ್ನು ಮಾಯಿ

ಎಚ್ಚರಿಸುತ್ತಿದ್ದಾಳೆ. ಅನುಭಾವ ಒಲ್ಲೆಯೆಂದು ಓಡಿಹೊರಡುವ ಮಗನನ್ನು ಕಾಲವೆ ಅವನನ್ನು ಅದಕ್ಕೆ ಸನ್ನದ್ಧಗೊಳಿಸುತ್ತದೆಯೆನ್ನುವ ವಿಶ್ವಾಸ ಹೊಂದಿದ್ದಾಳೆ.

ಓಡ್ಯೋಡಿ ಹೊರಟೆ ಎಲೆ ಬಾಲ! ಕಾಲ ನಿನ ನೋಡಿ ನೋಡಿ ನಗನs?
ನಿನ ಕಾಲ ನೂತು ಬರುವಾಗ ಬಾರೊ ನನಗೊಂದೆ ಹಾದ್ಯೊ ಮಗನs

ಹೆತ್ತ ತಾಯಿ, ಭೂಮಿತಾಯಿ ಅಡ್ಡಡ್ಡ ಹೋಗುತ್ತಿರುವ ಮಗನನ್ನು ಕ್ಷಮಿಸಿ ಅಕ್ಕರೆ ನೀಡುವಂತೆ ಅನುಭಾವದ ತಾಯಿ ದುರ್ಗೆ-ಅಂಬೆ-ಮಾಯೆ ದಣಿದ ಮಗನಿಗೆ ತನ್ನ ಮಾನಸಕೊಳ್ಳದ ನೀರು ಹಣಿಸುತ್ತಾಳೆ.

ಅಂತರಂಗದ ಶೋಧ ಹೆಚ್ಚಾಗುತ್ತ ನಡೆದಂತೆ ಅವರ ಕಾವ್ಯ ಅಮೂರ್ತತೆಯನ್ನು ಮೈಗೂಡಿಸಿಕೊಂಡು ಅದು ಕ್ಲಿಷ್ಟವೆನಿಸುವಂತಹ ಅಭಿಪ್ರಾಯ ವ್ಯಕ್ತವಾಗತೊಡಗಿತು. ಅಷ್ಟಾಗಿಯೂ ಕೂಡ ಆಗಿಂದಾಗ್ಗೆ ಅವರು ಮೊದಲಿನ ಕಾವ್ಯತೀವ್ರತೆಯತ್ತ ಗಮನ ಹರಿಸಲು ಪ್ರಯತ್ನಪಟ್ಟರು. ಕೀರ್ತಿನಾಥ ಕುರ್ತಕೋಟಿ ಅದನ್ನು ಹೀಗೆ ವಿವರಿಸುತ್ತಾರೆ: 'ಜೀವನದ ಪರಿಪಕ್ವ ಸ್ಥಿತಿಯಲ್ಲಿ ಬೇರೊಂದು ರೀತಿಯ ಕಾವ್ಯವನ್ನು ಹೊಸದಾಗಿ ಪ್ರಾರಂಭಿಸುವ ಅವಸ್ಥೆ ಪ್ರತಿಯೊಬ್ಬ ದೊಡ್ಡ ಕವಿಗೂ ಇರುತ್ತದೆ. ಅಸ್ಪಷ್ಟವಾಗಿ ಮೂಡಿದ್ದನ್ನು ಸ್ಪಷ್ಟಗೊಳಿಸಿಕೊಳ್ಳಬೇಕಾಗುತ್ತದೆ. ಕಣ್ಣಿಗೆ ಕಂಡದ್ದನ್ನು ಅಂಗೈಯಲ್ಲಿ ಹಿಡಿದು ಪರೀಕ್ಷಿಸಬೇಕಾಗುತ್ತದೆ. ಆಮೇಲೆ ಆ ಅನುಭವವನ್ನು ಒಂದು ಕಾವ್ಯಪದ್ಧತಿಯ ಮೂಲಕ ಅರುಹಬೇಕಾಗುತ್ತದೆ.'[೪೦] ಬೇಂದ್ರೆಯವರ ಪದ್ಯಗಳಲ್ಲಿ ಇದು ಲೌಕಿಕ, ಇದು ಅಲೌಕಿಕ ಎಂದು ಹೇಳುವುದು ತುಂಬ ಕಷ್ಟದ ಮಾತು. ಯಾಕೆಂದರೆ ಅವು ಒಂದರೊಳಗೊಂದು ಬೆರೆತು ಹೋಗಿವೆ. ಬೆಳಗನ್ನು, ಬೆಳದಿಂಗಳನ್ನು, ಭೂಮಿಯನ್ನು, ಮಳೆಯನ್ನು, ಮುಗಿಲನ್ನು ವರ್ಣಿಸುತ್ತ, ತಮ್ಮ ಅನುಭವವನ್ನು ಹೇಳಿಕೊಳ್ಳುತ್ತ ಅಮೂರ್ತ ನೆಲೆಗಳನ್ನರಸಿ ಅವರು ಹೊರಟುಬಿಡುತ್ತಾರೆ.

ಹಾರೋs ಹಕ್ಕಿಯ ಪುಚ್ಚ, ಸೊಚ್ಚ ಮಾಡಿ ಮುಂಗೈ ಮ್ಯಾಲೆ
ಪಪ್ಪು ತಿನಿಸಿ, ಒಪ್ಪ ಮಾಡಿ ಸಾಕತೀ
ಕುಣಿದಾಡೋ ಡೌಲಿನ್ಯಾಗ, ಚಲ್ಲಾಪಿಲ್ಲಿ ಚಿಕ್ಕಿ ಮಾಡಿ
ಆಕಾಶಗಂಗೀ ತಲೀ ತಾಕತೀ
ಸಂಸಾರ ಸಾಗsರ ಹಾಲು ಮಾಡಿ ತುಪ್ಪಾ ಮಾಡಿ
ಭಕ್ತಿಯಿಂದ ಮುಕ್ತಿ ತನಕಾ ಜೀಕತಿ[೪೧]

ಅಜ್ಞಾತ, ಅವ್ಯಕ್ತ ನೆಲೆಗಳನ್ನು ಹುಡುಕುವ ಹಾಗೂ ಅವುಗಳನ್ನು ಅಭಿವ್ಯಕ್ತಗೊಳಿಸುವ ಇಚ್ಛೆ ಬೇಂದ್ರೆಯವರಿಗೆ ಮೊದಲಿನಿಂದಲೂ ಇದ್ದುದರಿಂದ ಅಲೌಕಿಕದ ಎಳೆಗಳು ಅವರ ಪ್ರಾರಂಭದ ಕವಿತೆಗಳಿಂದಲೆ ಸೇರಿಕೊಂಡಿವೆ. ಬರಬರುತ್ತ 'ನಾಕು ತಂತಿ', 'ಬಾಲಬೋಧೆ' ಯಂತಹ ಸಂಕಲನಗಳಲ್ಲಿ ಪ್ರತಿಮೆ, ಸಂಕೇತ,

ಅಭಿವ್ಯಕ್ತಿಯ ವಿಧಾನಗಳು ಸಂಕೀರ್ಣಗೊಂಡು ಅವರ ಕಾವ್ಯ ಒಮ್ಮೆಗೆ ಒಲಿಯುವುದಿಲ್ಲವೆಂದು ತೋರುತ್ತದೆ. ಪೂರ್ವಸಿದ್ಧತೆಯಿಲ್ಲದೆ ಅವರ 'ಅರಳು-ಮರಳು' ಹಾಗೂ ನಂತರದ ಕೃತಿಗಳ ಜೊತೆ ಅನುಸಂಧಾನ ನಡೆಸುವುದು ಕಷ್ಟವೆಂದು ಅನೇಕ ವಿಮರ್ಶಕರು ಹೇಳಿದ್ದು ಈ ದೃಷ್ಟಿಯಿಂದ ಸರಿಯಾದುದಾಗಿದೆ.[೬೨] ಬೇಂದ್ರೆ ಉತ್ತರ ಕಾವ್ಯದ ಅಗಮ್ಯತೆಯ ಬಗ್ಗೆ ಏನೇ ವಾದ-ವಿವಾದಗಳಿದ್ದರೂ ಕೂಡ ಆಗಮಿಕ ಮತ್ತು ಲೌಕಿಕ ಅಂಶಗಳು ಅವರಲ್ಲಿ ಅಸಾದೃಶ್ಯವಾಗಿ ಬೆರೆಯುವ ರೀತಿಗೆ ಓದುಗಲೋಕ ಬೆರಗಾಗುತ್ತದೆ. ತತ್ವಪದಕಾರರ, ಶರಣರ, ದಾಸರ, ಸರ್ವಜ್ಞನಂತಹ ಅನುಭಾವಿಕರ ಹಾದಿಯನ್ನು ಅವರು ತುಳಿದು ಬಂದಿದ್ದರಿಂದ ಇದು ಸಾಧ್ಯವಾಗಿರಬೇಕು. ಕನ್ನಡದ ಅನುಭಾವ ಪರಂಪರೆ ಅವರ ಕಾವ್ಯಕ್ಕೆ ನಿಗೂಢತೆ, ಅಂತರಂಗದ ಶೋಧ, ಹುಡುಕಾಟಗಳಂತಹ ನೆಲೆಗಳನ್ನು ತಂದುಕೊಡುವಲ್ಲಿ ಸಹಾಯಕಾರಿಯಾಗಿರಬೇಕು. ಸಾಂಪ್ರದಾಯಿಕತೆಯನ್ನು ದುಡಿಸಿಕೊಂಡರೂ ಅದನ್ನು ಮುರಿದು ಕಟ್ಟಿ ಹೊಸ ಪರಂಪರೆಯನ್ನು ಹುಟ್ಟು ಹಾಕಿದ ಸಾಲಿಗೆ ಬೇಂದ್ರೆ ಸೇರುತ್ತಾರೆ. 'ಆಧ್ಯಾತ್ಮದ ಎಳೆಯೊಂದು ಕವಿತೆಯಲ್ಲಿ ಇದ್ದರೂ, ಅದು ಸುಪರಿಚಿತವಾದ ಸಾಂಪ್ರದಾಯಿಕ ಆಧ್ಯಾತ್ಮಿಕತೆ ಅಲ್ಲ. ಹೀಗೆ ತತ್ವಪದಗಳ ಪರಂಪರೆಯನ್ನು ಅನುಸರಿಸಿಯೂ, ಅದನ್ನು ಬದಲಿಸಿದ, ಬೆಳೆಸಿದ ಅನೇಕ ಕವಿತೆಗಳನ್ನು ಬೇಂದ್ರೆಯವರು ಬರೆದಿದ್ದಾರೆ' ಎನ್ನುವ ಡಾ. ಗಿರಡ್ಡಿ ಗೋವಿಂದರಾಜ ಅವರು, ತತ್ವಪದಗಳ ಹಿಂದಿನ ಹಾಡುಗಳ ಪರಂಪರೆಯನ್ನು ಬೇಂದ್ರೆ ಅನುಸರಿಸಿದ ರೀತಿ ವಿವರಿಸುತ್ತ, 'ಬೆಳದಿಂಗಳ ನೋಡs', 'ಗಂಗಾವತರಣ', 'ಮಾಯಾ ಕಿನ್ನರಿ', 'ಹುಬ್ಬಳ್ಳಿಯಾಂವಾ', 'ಸಣ್ಣ ಸೋಮವಾರ', 'ತುಂಬಿತ್ತು ಹಾಲಗೇರಿ' ಯಂತಹ ಕವಿತೆಗಳು ಪ್ರಸಿದ್ಧ ಹಾಡುಗಳಾಗಿರುವದರತ್ತ ನಮ್ಮ ಗಮನ ಸೆಳೆಯುತ್ತಾರೆ. 'ಇವುಗಳಲ್ಲಿ ಆಗಮಿಕ ಒಂದು ತುದಿಯಾದರೆ, ಲೌಕಿಕ ಇನ್ನೊಂದು ತುದಿ. ಈ ಎರಡು ತುದಿಗಳ ನಡುವೆ ಒಮ್ಮೆ ಆಚೆ ಒಲಿಯುತ್ತ, ಒಮ್ಮೆ ಈಚೆ ಒಲಿಯುತ್ತ, ಕೆಲವು ಸಲ ಎರಡರ ನಡುವೆ ಸಮನ್ವಯ ಸಾಧಿಸುತ್ತ ಅವರ ಕವಿತೆಗಳು ಪರಂಪರೆಯ ಜೊತೆ ಅನುಸಂಧಾನ ನಡೆಸುತ್ತವೆ'[೬೩] ಎಂದು ಹೇಳುತ್ತಾರೆ.

ಭೂಮಿಯನ್ನು ಕುರಿತ ಅವರ ಕವಿತೆಗಳು ಕೂಡ ಈ ಲೌಕಿಕ ಅಲೌಕಿಕದ ಸಂಬಂಧಗಳಲ್ಲಿ ನಳನಳಿಸುತ್ತವೆ. ಈ ಮೊದಲು ಉದಾಹರಿಸಿದ 'ಓ ತಾಯಿ-ಮಾಯಿ' ಕವನದಂತೆ ಭಯಾನಕ ಹಾಗೂ ಕೇಡಿನ ಲೋಕದ ದರ್ಶನದ ನಂತರ ತುಂಬು ಪ್ರೀತಿಯ ತತ್ವಕ್ಕೆ ಕವಿತೆಯ ಭಾವ ಮರಳುವದರೊಂದಿಗೆ ಕಷ್ಟಗಳ ನಂತರದ ಸುಖದ ಹಾದಿಯನ್ನು ತಾಯಿ-ಮಕ್ಕಳಿಬ್ಬರೂ ತಲುಪುತ್ತಾರೆ. ವಿನಾಶಕಾರಿಯಾದ ಮನುಷ್ಯನ ಅಭಿವೃದ್ಧಿಯ ಮಂತ್ರ ನಿಸರ್ಗಕ್ಕೆ ಎರವಾಗಿದೆಯೆಂಬುದನ್ನು ಸೂಚ್ಯವಾಗಿ ಬೇಂದ್ರೆ ಹೇಳುತ್ತಾರೆ. ವಾತ್ಸಲ್ಯದ ತಾಯಿತತ್ವ ಬೇಂದ್ರೆ ಭೂಮಿಗೀತೆಗಳ ಒಂದು ಪ್ರಧಾನ ನೆಲೆಯಾಗಿದೆ ಎಂದು ಡಾ. ಡಿ.ಆರ್.ನಾಗರಾಜ್ ಸರಿಯಾಗಿ ಗುರುತಿಸುತ್ತಾರೆ. 'ಬೇಂದ್ರೆಯವರಲ್ಲಿ ಹೆತ್ತ ತಾಯಿಯ ಅನುಭವ ಮತ್ತು ಭೂಮಿತಾಯಿಯ ಅನುಭವ ಎರಡಕ್ಕೂ ತುಂಬ ತನ್ಮಯತೆಯ ವಿಷಯದಲ್ಲಿ ಸಾಮ್ಯವಿದೆ. ಉಕ್ಕಿ ಹರಿವಂಥ ವಾತ್ಸಲ್ಯ ಎರಡೂ ತಾಯಂದಿರಿಗೆ ಸಮಾನ. ಆದರೆ ಭೂಮಿತಾಯಿಯ ವ್ಯಕ್ತಿತ್ವ ಹೆತ್ತ ತಾಯಿಯ ಹಾಗೆ ಬರೀ ಶುದ್ಧ ವಾತ್ಸಲ್ಯದ ಪ್ರತೀಕವಾಗಿ ನಿಲ್ಲುವುದಿಲ್ಲ. ಈ ವಾತ್ಸಲ್ಯ ಮೂಲಸ್ಥಾಯಿಯಾದರೂ

ಭೂಮಿತಾಯಿ ಒಂದು ದೊಡ್ಡ ಆಧ್ಯಾತ್ಮಿಕ ಸಮಸ್ಯೆಯಾಗಿ ಬೆಳೆದು ನಿಲ್ಲುತ್ತಾಳೆ... ಆದರೆ ಎಲ್ಲ ಹುಡುಕಾಟದ ನಂತರ, ಭಯಾನಕ ಲೋಕಗಳ ಪ್ರಯಾಣದ ನಂತರ ಆಕೆ ತುಂಬು ವಾತ್ಸಲ್ಯದ ಸ್ಥಾಯಿಗೇ ಮರಳಿ ಎಲ್ಲ ತಾಯಂದಿರಲ್ಲಿ ಆಕೆ ಬೆರೆತು ಹೋಗಿ ಒಂದಾಗುತ್ತಾಳೆ.'[೪೪]

ಮೇಲ್ನೋಟದ ನಿಸರ್ಗವನ್ನು ವರ್ಣಿಸುತ್ತ ತಾವು ನಂಬಿದ ತತ್ವಗಳ ಅನುಭವವನ್ನು ಹೇಳುವುದು ಬೇಂದ್ರೆಗೆ ಮುಖ್ಯವಾಗಿದೆ. ನೋಡಿದಷ್ಟೂ ಹಿಗ್ಗುವ ಅನಂತ ಮತ್ತು ಚಿರಂತನದ ಅಭೀಪ್ಸೆಯಾಗಿರುವ ಅನಂತ ಈ ಎರಡೂ ಮನುಷ್ಯ ಬಾಳಿ ಬದುಕುತ್ತಿರುವ ನೆಲದಿಂದಲೆ ಆರಂಭವಾಗಬೇಕು. ಮೃತ್ತಿಕೆಯಲ್ಲಿ ಮೃತ್ಯುಂಜಯನನ್ನು ಒಲಿಸಿಕೊಳ್ಳುವಂತಹ ನೋಟವನ್ನು ಹೊಂದಬೇಕು ಎಂದು ಬೇಂದ್ರೆ ಬಯಸುತ್ತಾರೆ. ಮಣ್ಣು ಪವಿತ್ರವಾದದ್ದು. ಅದನ್ನು ಹೀಗಳೆಯುವ, ಉಪಯೋಗ ತೀರಿದ ಮೇಲೆ ಉಡಾಫೆಯಿಂದ ಕಾಣುವ ಪರಿಪಾಠ ಸಲ್ಲದು. ಮರ್ತ್ಯಲೋಕ ವಿಕಸಿಸುತ್ತಿರುವದರಿಂದಲೆ ಜೀವನಕ್ಕೆ ಅರ್ಥ ಬಂದಿದೆ. ಭೂಮಿ ತನ್ನ ಅನಂತ ಸೌಂದರ್ಯದಿಂದ ಕಂಗೊಳಿಸುತ್ತಿರುವಾಗ, ಶ್ರೀನಿವಾಸನೆ ತಿರುಮಲೆಯಲ್ಲಿ ನೆಲೆ ನಿಂತಿರುವಾಗ ಇಳೆಯನ್ನು ಮಣ್ಣೆಂದು ನಿಕೃಷ್ಟವಾಗಿ ಕಾಣುವ ಮನೋಧರ್ಮವನ್ನು ಬೇಂದ್ರೆ ಟೀಕಿಸುತ್ತಾರೆ.

ಮಣ್ಣೆಂದು ಜರಿಯುವರು

ಏನು ಮಣ್ಣೋ ಕಾಣೆ

ಮಣ್ಣ ಬೆಳೆ, ಮಣ್ಣ ಕಳೆ, ಮಣ್ಣಗಂಪು

ಒಡೆಯಬಿಟ್ಟರು -

ಒಡಲು ಬಿಡದು ಮಣ್ಣಿನ ನೆಲೆಯ

ಬೂದಿಯಾದರು ಬದುಕು

ಮಣ್ಣೆ ತಂಪು

ಬಾನಗಂಗೆಯ ಮರುಕ

ಮೃತಪಿಂಡ ತೊಳೆಯುತಿದೆ

ಮಾಟ ಮಮತೆಗೆ ತೊರೆವ

ಬಾಳಚಿಲುಮೆ

ಶ್ರೀನಿವಾಸನು ಕೂಡ

ತಿರುಮಲೆಗೆ ನೆಲೆನಿಂತ

ಮಣ್ಣಲ್ಲ ಈ ಭೂಮಿ ದೇವನೊಲುಮೆ'[೪೫]

ದೇವನ ಒಲುಮೆಯಾಗಿ ಬಳುವಳಿ ಬಂದಿರುವ ಭೂಮಿ ನಾಗರಿಕತೆಯ ವೈರುಧ್ಯಗಳಿಂದ, ಮನುಷ್ಯನ ಅಟ್ಟಹಾಸ ಆಭಾಸಗಳಿಂದ ನೊಂದಿದೆ. ಮನುಷ್ಯನನ್ನು ಕ್ಷಮಿಸೆಂದು, ಕೂಡಿ ಬಾಳುವುದನ್ನು ಕಲಿಸೆಂದು ಬೇಂದ್ರೆ ಭೂಮಿಯನ್ನು ಕಾಯುತ್ತಿರುವ ತಾಯಂದಿರಿಗೆ ಮೊರೆಯಿಡುತ್ತಾರೆ. 'ಏನು ಬಂದಿರಿ, ಹದುಳವಿದ್ದಿರೆ ಎಂದರೆ ನಿಮ್ಮ ವೈಸಿರಿ ಹಾರಿ ಹೋಹುದೇ''[೪೬] ಎಂದು ಬಸವಣ್ಣ ಕೇಳುವಂತೆ ಬನ್ನಿರಿ, ಕುಳಿತುಕೊಳ್ಳಿರಿ ಎನ್ನುವ ವಿನಯ ಮರೆಯಾಗುತ್ತಿರುವುದಕ್ಕೆ ಬೇಂದ್ರೆ ವಿಷಾದಿಸುತ್ತಾರೆ. ತನುಮನಗಳನ್ನು ತಾಯಿಯ ಮನೆಯಾಗಿಸಿಕೊಳ್ಳಬೇಕು ಎಂದು ನಿವೇದಿಸುತ್ತ ತಾಯಿಯ ಹಲವು ರೂಪಗಳಲ್ಲಿರುವ ಮಹೇಶ್ವರಿ, ಮಹಾಕಾಳಿ, ಮಹಾಲಕ್ಷ್ಮಿ, ಮಹಾಸರಸ್ವತಿ, ರಮೆ, ಗೌರಿಯರನ್ನು ಕರೆಯುತ್ತಾರೆ.

ನಿಮ್ಮ ಭಯಾ ನಮಗಭಯಾ
ಮಹಾಕಾಳಿ ಬಂದಿರೇ
ವಿದ್ವಪ್ರಾಣಮಂದಿರೇ?
ಕೋಟಿ ಸಲವು ಹುಟ್ಟಿ ಸತ್ತು
ಧಿಮಿತಿಕಿದಿಟ ಎಂದತ್ತು
ಆದರೇನು ನೀವೇ ಬಲ
ನೀವೇ ಹೊಲ ನೀವೇ ಚಲ
ಕಲಿಸಿರವ್ವ ಕಲಿಸಿರಿ
ಹಸುಹರಣವ ಬಲಿಸಿರಿ[೪೭]

ಪೊರೆಯುವ ಕೆಲಸದಲ್ಲಿ ಚೂರೂ ಪುರುಸೊತ್ತಿಲ್ಲದಿದ್ದರೂ, ಕಂದನ ಕಾಳಜಿಗೆ ಅವಳ ಗಂಟಲು ಕಟ್ಟಿದ್ದರೂ ಅದನ್ನು ಲೆಕ್ಕಿಸದ ಮಗ ಮಾತ್ರ ಸ್ವಾರ್ಥಲಾಲಸೆಯಲ್ಲಿ ಮುಳುಗಿದ್ದಾನೆ. ಪ್ರಕೃತಿಯ ಸುಲಿಗೆಯಿಂದ ಪ್ರತಿದಿನವೂ ಭೂಮಿತಾಯಿಯ ಜೀವ ಚೂರು ಚೂರೇ ಸಾಯುತ್ತಿದೆ. ಹೂವು-ಹಣ್ಣು-ಗಿಡ-ಮರ- ಕಾಯಿಗಳಿಂದ ಸಮೃದ್ಧವಾಗಿದ್ದ ಜಿಂಕೆಯ ಕಣ್ಣುಳ್ಳ ಚೆಲುವೆ ಈಗ ಬೆದರಿದ್ದಾಳೆ. ನಾಶದ ಅಂಚಿನಲ್ಲಿದ್ದಾಳೆ.

'ಬ್ಯಾಟಿ ನಾಯೊದರ್ಯಾವೋ
ಹಸುಜೀವ ಬೆದರ್ಯಾವೋ
ಗಳಗಳನೆ ಗಿಡದೇಲಿ ಉದರ್ಯಾವೋ
ಗೆಣೆಯಾ ಉದರ್ಯಾವಽ
ದಿನ್ನಿ ಮಡ್ಡಿ ಗುಡ್ಡ ಅದರ್ಯಾವ;
ಆದನ ತಾ ಕಂಡು ನೊಂದಾಽಳೊ

ಬೆಂದಾsಳೊ

ಅಂದಾsಳೋ

'ಇದು ಎಂಥಾ ಜೀವದ ಬ್ಯಾಟಿ ಹಾಡೇ ಹಗಲs'[೪೮]

ತಾನು ನೆಲೆ ನಿಂತಿರುವ ಭೂಮಿಯನ್ನೇ ಅಗೆಯುತ್ತಿರುವ ಮನುಷ್ಯ ಒಂದು ರೀತಿಯಲ್ಲಿ ಹಾಡೇ ಹಗಲ ತಾಯಿಯ ಬೇಟೆಯಾಡುತ್ತಿರುವನೆಂಬ ದುರಂತ ಚಿತ್ರಣವನ್ನು ಬೇಂದ್ರೆ ನೀಡುತ್ತಾರೆ.

'ಮಗನ ದುಃಖಕ್ಕಾಗಿ ಕೊರಗಿ

ಮಗನ ಸುಖಕ್ಕಾಗಿ ಸೊರಗಿ

ಮಗುವೆ ಜಗವದಾಗಿ ತೋರಿ

ಬೆಳೆದರಾರೊ ನನ್ನ ಚಿನ್ನ?'[೪೯]

ಮಗನನ್ನೆ ಜಗತ್ತು ಎಂದು ತಿಳಿದುಕೊಂಡಿದ್ದ ಹೆತ್ತ ತಾಯಿಗೂ, ನೀರಿಗೆ ಆಧಾರವಾಗಿರುವ ನೆಲದೊಡಲಿಗೂ ಅಂತರವಿಲ್ಲ. ನಿಸರ್ಗದಲ್ಲಿ ದೋಷ ಕಾಣುವುದು ನೀಚತನವಾಗುತ್ತದೆಯೆಂದು ಕವಿ ಎಚ್ಚರಿಸುತ್ತಾರೆ. ಪ್ರಕೃತಿಯ ಎಲ್ಲ ಸಂಗತಿಗಳಲ್ಲಿ ಒಂದಾಗುವ, ಸಾಮರಸ್ಯದಿಂದ ಬದುಕುವ ಗುಣವಿದೆ.

ನೆಲಕೆ ನೀರೇ ಗತಿಯು; ನೆಲ ನೀರಿಗಾಧಾರ

ಮಣ್ಣು ನೆಲದಲ್ಲಿ ಭವ ಬರಲು ಮಾಸುವುದೆ ಗುಣ?

ನೀರೇ ಮಡಿ; ಅದರಲ್ಲಿ ದೋಷ ಕಂಡವ ಪಿಸುಣ

ಇಬ್ಬರೀ ಜತೆ ಸಖ್ಯ ವತ್ಸಲತೆಯೂ ಹಾರ[೫೦]

ಒಂದೆ ತಾಯಿಯ ಮಕ್ಕಳಲ್ಲಿ ವತ್ಸಲ ಗುಣ ಇಲ್ಲದಿದ್ದರೆ ಭೂಮಿ ಬರಡಾಗುವ ದಿನ ದೂರವಿಲ್ಲವೆಂದು ಕವಿ ತಿಳಿಯುತ್ತಾರೆ. ಮನುಷ್ಯ ಮನುಷ್ಯರು ಕಾದಾಡಿ ರಾಜ ಮಹಾರಾಜರಾಗಿ ಮೆರೆಯಲು ಹೊರಟರೆ, ಭೂಪತಿಗಳಾಗಿ ಪೃಥ್ವಿಯ ಮೇಲೆ ಒಡೆತನ ಸಾಧಿಸಲು ಪ್ರಯತ್ನಿಸಿದರೆ ಅದರಿಂದೊದಗುವ ಕೇಡಿಗೆ ಮನುಷ್ಯರೆ ಜವಾಬ್ದಾರರಾಗುವುದನ್ನು ಬೇಂದ್ರೆ ಹೇಳುತ್ತಾರೆ. ಧರ್ಮವೆಂಬುದು ಮಾಯವಾಗಿ ಕರ್ಮವೆ ಮೆರೆಯತೊಡಗಿದರೆ ಕನಿಕರವನ್ನಲ್ಲದೆ ನಿಸರ್ಗ ಬೇರೆ ಏನು ಕೊಟ್ಟೀತು? 'ಮನುವಿನ ಮಕ್ಕಳು' ಎನ್ನುವ ತಮ್ಮ ಕವಿತೆಗೆ ಭಾವಾರ್ಥ ನೀಡುತ್ತ ಬೇಂದ್ರೆ ಭೂಮಿಯ ಮೇಲೆ ಮನುಷ್ಯ ನಡೆಸುತ್ತಿರುವ ಅತ್ಯಾಚಾರವನ್ನು ಬಯಲಿಗೆಳೆಯುತ್ತಾರೆ. 'ಮನುಷ್ಯನ ಸುಖಕ್ಕೆ ಮನುಷ್ಯರೇ ಅಷ್ಟಾಗಿ ಬರುವಷ್ಟು ನಿಸರ್ಗ ಬರುವುದಿಲ್ಲ. ನಿಸರ್ಗಕ್ಕೇನು? ಹುಟ್ಟಿದವರ ಮೇಲೂ ಬೆಳಕು ಚೆಲ್ಲುತ್ತದೆ; ಸತ್ತವರ ಮೇಲೂ ಬೆಳಕು ಚೆಲ್ಲುತ್ತದೆ. ಮಾನವರ ದೌರ್ಬಲ್ಯವನ್ನು ನಿಸರ್ಗದ ಮೇಲೆ ಆರೋಪಿಸುವದರಲ್ಲಿ ಅರ್ಥವಿಲ್ಲ'[೫೧] ಮಿಥ್ಯೆಯನ್ನು ಜೀವನದ ಉದ್ದೇಶವಾಗಿಟ್ಟುಕೊಂಡರೆ ಸಕಲಾತ್ಮನ ದಿವ್ಯತೆ

ಒದಗಿಬರುವುದಿಲ್ಲವೆಂಬುದು ಬೇಂದ್ರೆಯವರ ನಂಬುಗೆಯಾಗಿದೆ. 'ಸೌಭಾಗ್ಯ ದರ್ಶನ' ಎನ್ನುವ ಅವರ ಕವಿತೆ ಅದನ್ನೆ ಹೇಳುತ್ತದೆ. ಭೂಮಿಯಲ್ಲಿ ದೇವತ್ವದ ಬೀಜ ಬಿತ್ತುವುದಕ್ಕೆ ಆ ಜೀವನನ್ನು ಕೋರುತ್ತಾರೆ.

ದುರ್ಭಾಗ್ಯ ಕವಚದಲಿ ಸೌಭಾಗ್ಯ ಬೀಜವಿದೆ
ಅಜ್ಞಾನದಲ್ಲಿರುವ ಜ್ಞಾನದಂತೆ
ತ್ರಿಪುರದಹನದ ಭಸ್ಮ ಹಳೆ ಹಣೆಬರಹವನು ತೊರೆಯುತಲಿದೆ
ಶ್ರೀಮದ್ವಿಭೂತಿಗಳ ಚಾರಿತ್ರ್ಯವನು ಬರೆಯುತಲಿದೆ
ಸತಿವೃಂದೆ ಸುಟ್ಟು ಸುಣ್ಣಾದ ಮಣ್ಣಾದ ಮಸಣದಲಿ
ತುಳಸಿಯಾ ಊದಿ ಬಣ್ಣದ ಕಣ್ಣು,
ಭಕ್ತಿ ಮಂಜರಿಯಾಗಿ, ಪ್ರಸನ್ನತೆಯ ಸುಮನಾಂಜಲಿಯ
ಹೃದಯ ಶಾಲಿಗ್ರಾಮದಲಿ ಅರ್ಪಿಸಲಿದೆ[೫೨]

ಮನುಷ್ಯನ ದ್ವೇಷಕ್ಕೆ ಪ್ರತಿಯಾಗಿ ಭೂಮಿತಾಯಿ ನಾ ನೀ ಎನ್ನುವವರನ್ನು ತನ್ನ ಮಣ್ಣಲ್ಲಿ ಮಣ್ಣಾಗಿಸಿ ಮೆರೆಯುವುದನ್ನು 'ಮೊದಲಗಿತ್ತಿ'ಯಲ್ಲಿ ಚಿತ್ರಿಸಿದ ಬೇಂದ್ರೆಯವರು ಅದೇ ಪದ್ಯದ ಕೊನೆಗೆ ಮೊದಲಗಿತ್ತಿಯಿದ್ದವಳು ತನ್ನ ಮಕ್ಕಳನ್ನು ಕ್ಷಮಿಸುವ, ವಾತ್ಸಲ್ಯ ಹರಿಸುವ ತಾಯ್ತನ ಹೊಂದಿದ್ದಾಳೆ. ಹಾಲಿನ ಹೃದಯಕ್ಕೆ ಕುಪ್ಪಸ ತೊಟ್ಟು, ಹೂವು ಮುಡಿದುಕೊಂಡು, ಹಸಿರುಟ್ಟು ಸೀಮಂತನದ ಸಂಭ್ರಮದಲ್ಲಿದ್ದಾಳೆ. ಇದು ಬದುಕಿನ ವೈರುಧ್ಯ, ಹಿಂಸೆ, ಅರಾಜಕತೆಗಳು ಕೊನೆಗೊಂಡು ತೃಪ್ತ ಜೀವನ ಆರಂಭಗೊಳ್ಳುವ ಸಂಕೇತವಾಗಿದೆ. 'ಮೊದಲಗಿತ್ತಿ' ಕವಿತೆಯ ಆಶಯವೆ 'ಸೌಭಾಗ್ಯ ದರ್ಶನ'ದಲ್ಲಿಯೂ ಕಂಡುಬರುತ್ತದೆ.

ನಿರ್ಗತಿಳಕಲ್ಲ ಈ ಭೂಮಿ
ದುರ್ಗತಿಗೆ ಈಡಲ್ಲ ಈ ಮಾನವ ಜಾತಿ
ತ್ರಿಗುಣ ತಿರುಗಣಿ ಮಡುವಿನಲಿ, ಸಭ್ಯತೆಗಳರಳಿದವು
ಉರುಳಿದವು ನಾಗರಿಕತೆ
ಮತ್ತೆ ಬಂದಿದೆ ಇಂದು, ನವ ವಿಚಾರ ಪ್ರಳಯ
ಜಗದ ನೆತ್ತಿಯಲ್ಲಿಹುದು ಸೌಭಾಗ್ಯ ಬಿಂದು
ವಿಧು ಬಿಂಬ ಸಿಂಧು ಸಿಂಧೂರದೊಲು, ಸೀಮಂತರೇಖೆಯಲಿ[೫೩]

ಕ್ಷೇಮ, ಸುಭಿಕ್ಷೆ, ಪ್ರೇಮ, ದಯೆ, ವಾತ್ಸಲ್ಯದಂತಹ ಸದ್ಗುಣಗಳು ತಾಯಿ ಮತ್ತು ಮಕ್ಕಳಲ್ಲಿ ಯಥೇಚ್ಛವಾಗಿರಲಿ ಎಂದು ಕವಿ ಬಯಸುವುದು ಅವರು ನಂಬಿಕೊಂಡಿದ್ದ ಭೂಮಿತತ್ವಕ್ಕೆ ಪೂರಕವಾಗಿದೆ.

ಮಾಯೆ ಹಿಮ್ಮೆಟ್ಟಿರಲಿ, ಕಾಯ ಭುಜ ತಟ್ಟಿರಲಿ
ತಾಯ ಎದೆಯಲ್ಲಿರಲಿ 'ಸ್ವಸ್ತಿ' ವಚನ
ಹಳ್ಳದಾ ದಂಡೆಯಲಿ ಹಳ್ಳಿ ಹಲವಾರಿರಲಿ
ಹೊಲದಲ್ಲಿ ಪಯಿರಿರಲಿ, ಪಚ್ಚೆ ಪವಳ
ಹಯನಿರಲಿ ತೊಟ್ಟಿಯಲಿ, ಕೂಸಿರಲಿ ತೊಟ್ಟಿಲಲಿ
ಹೆಣ್ಗಂಡು ಒಪ್ಪಂದ ನಿಚ್ಚನಿವಳ[೫೪]

'ಮೊದಲಗಿತ್ತಿ' ಕವನದ 'ಹಾಲಿನ ಹೃದಯಕೆ ಕುಪ್ಪಸವನು ತೊಡಿಸಿ / ಹೂ ಮುಡಿಸಿಕೊಂಡೆಂದು ನೀ ನಲಿವೆ?' ಎನ್ನುವುದು ಹಾಗೂ 'ಸೌಭಾಗ್ಯದರ್ಶನ' ದ 'ತಾಯ ಎದೆಯಲ್ಲಿಯಲಿ' 'ಸ್ವಸ್ತಿ' 'ವಚನ' ಎನ್ನುವುದು ಒಂದೆ ಆಶಯದ ರೂಪಕಗಳಾಗಿವೆ. ವಾತ್ಸಲ್ಯ, ಪ್ರೇಮ, ವಿನಯ, ಸಮೃದ್ಧತೆಗಳನ್ನೊಳಗೊಂಡ ಭೂಮಿಯ ಬದುಕೆ ಬದುಕು. 'ಸೌಭಾಗ್ಯದರ್ಶನ' ಕವನ ತುಸು ವಾಚ್ಯವಾಗಿದ್ದು 'ಮೊದಲಗಿತ್ತಿ' ಮಾತ್ರ ಹೊಸ ಹೊಸ ಅರ್ಥಗಳನ್ನು ಹೊಳೆಯಿಸುತ್ತ ಹೋಗುತ್ತದೆ. 'ತನ್ನ ಸ್ಪಷ್ಟ ವಿಚಾರಗಳಿಂದಾಗಿ ಸೌಭಾಗ್ಯ ದರ್ಶನ ಸಾಧಾರಣ ಕವನವಾದರೆ, ತನ್ನ ನಿಗೂಢತೆ, ಆಂತರಿಕ ಅರ್ಥದ ಪದರುಗಳಿಂದಾಗಿ 'ಮೊದಲಗಿತ್ತಿ' ಶ್ರೇಷ್ಠ ಕವನವಾಗಿದೆ'[೫೫] ಎಂದು ಡಿ.ಆರ್. ನಾಗರಾಜ್ ಹೇಳುತ್ತಾರೆ. ಕವಿತೆಯು 'ಮೊದಲಗಿತ್ತಿ', ಪ್ರೇಮ-ದಯೆ - ಸಂತೋಷಗಳನ್ನು ಮಿತಿಯಿಲ್ಲದಂತೆ ದಯಪಾಲಿಸುವ ಮಾತೃಪ್ರಧಾನ ಸಮಾಜ ವ್ಯವಸ್ಥೆಯ ಆಶಯವನ್ನು ತನ್ನ ಒಡಲಲ್ಲಿ ಇರಿಸಿಕೊಂಡಿದೆ.

ಮಂಗಳಮಯವಾದ ಜಗತ್ತಿಗೆ ತನ್ನನ್ನು ಒಪ್ಪಿಸಿಕೊಳ್ಳುವ ಕೆಲಸ ಮನುಷ್ಯನಿಂದಾಗಬೇಕೆಂದು ಬೇಂದ್ರೆ ಪರೋಕ್ಷ ಹೇಳುವಂತಿದೆ. ಮುಯ್ಯಿಗೆ ಮುಯ್ಯಿ ಎನ್ನದೆ ತಾಯಿ ತನ್ನ ತಂಬೆಳಕು ಹೊಮ್ಮಿಸಲಿ. ಅದರಿಂದ ಮಕ್ಕಳ ಬದುಕು ಬೆಳಕು ಕಾಣಲಿ ಎನ್ನುವ ಭಾವ 'ಮೊದಲಗಿತ್ತಿ', 'ಒಂದೆ ತಾಯಿಯ ಮಕ್ಕಳು', 'ಭೂಮಿ ತಾಯಿ', 'ಸ್ಥಿರೆ-ತಿರೆ', 'ಸೌಭಾಗ್ಯದರ್ಶನ' ದಂತಹ ಕವನಗಳಲ್ಲಿ ಸ್ಥಾಯಿಯಾಗಿದ್ದು ಬೇಂದ್ರೆ ನಂಬಿಕೊಂಡಿದ್ದ ಭೂಮಿತಾಯಿಯ ತತ್ವಕ್ಕೆ ರೂಪಕಗಳಾಗಿ ದುಡಿಯುತ್ತವೆ. ಅರವಿಂದರ 'ಸಾವಿತ್ರಿ' ಕೃತಿಯ ಕೆಲ ಸಾಲುಗಳನ್ನು ಅವರು 'ಸೌಭಾಗ್ಯದರ್ಶನ'[೫೬] ದಲ್ಲಿ ಉದ್ಧರಿಸುವುದರೊಂದಿಗೆ ನಿಸರ್ಗದ ವಿವರಗಳು ಬದುಕಿನ ಭೂಮಿಯಲ್ಲಿ ಬೆಳಕಿನ ಬೀಜ ಬಿತ್ತುವುದಕ್ಕೆ ಉಪಯೋಗಿಸಿಕೊಂಡ ಕಾವ್ಯ ಸಾಮಗ್ರಿಗಳೆಂಬುದು ಅರಿವಾಗುತ್ತದೆ.

O, sun-word, thou shalt raise
the earth soul to light
and bring down god unto lives of men
earth shall be my work-chamber

and my house

My garden of life to plant a seed-divine

- Savitri Book I

ಬೇಂದ್ರೆಯವರ ಭೂಮಿ, ಶಕ್ತಿದೇವತೆ, ಮಾಯೆ ಒಮ್ಮೊಮ್ಮೆ ಕಠಿಣ ಹೃದಯಿಯಾಗಿ ಕಾಣಿಸಿಕೊಂಡರೂ ಎದೆಯನ್ನು ಹಾಲಿನಿಂದ ತುಂಬಿಸಿಕೊಳ್ಳುವುದಕ್ಕೆ ತಡ ಮಾಡುವುದಿಲ್ಲ. ಚಿರಂತನವಾದ ದೈವಿಕ ಅನುಭೂತಿಯ ದಾಹಕ್ಕೆ ಬೆಳಕಿನ ಸುತ್ತ ಸುತ್ತುವಳು. ತನ್ನ ಸೌಂದರ್ಯದಿಂದ ಮತ್ತಷ್ಟು ಕಂಗೊಳಿಸುವಳು. ಮಕ್ಕಳ ಹಿಗ್ಗನ್ನು ಹಿಗ್ಗಿಸುವಳು.

ಇವಳು ಸ್ಥಿರೆ, ಇವಳೆ ತಿರೆ ಸಂಚಾರದಲ್ಲಿ ಸ್ಥಾಯಿ
ಬೆಳೆಯುತಿರೆ, ರಸ ಒಸರಿ ಬರೆ, ಸೃಷ್ಟಿ ಹಿಗ್ಗುತಿದೆ
ಅಗೊ ಅಲ್ಲಿ ಆ ಧ್ರುವನೆ ತಾ ಪ್ರದಕ್ಷಿಣವಾಗಿ
ಜಗದ ನಾರಾಯಣಗೆ ನಮಿಸುವನು ಭಕ್ತಿಯಲಿ[೭೭]

ಎಲ್ಲ ಕಹಿ ಮರೆತು, ವಿರಸ ತೊರೆದು ಭೂಮಿ ವಾತ್ಸಲ್ಯ ಹಾಗೂ ಸಂಭ್ರಮದ ಕಪಾಟು ತೆರೆಯಬಲ್ಲಳು ಎಂಬುದನ್ನು ಐಂದ್ರಿಕ ವಿವರಗಳೊಂದಿಗೆ ಬೇಂದ್ರೆಯವರು ನಿರೂಪಿಸುವುದು ಅಪ್ಪಟ ಕಾವ್ಯ ಪ್ರತಿಭೆಯ ಉದಾಹರಣೆಯಾಗಿದೆ. ತಾಯಿಯ ಹೃದಯ ಮತ್ತಷ್ಟು ಸಂಭ್ರಮ ಪಡಲೆಂದೆ ಉನ್ಮತ್ತನಾಗಿರುವ ಶ್ರಾವಣ ಹಾಗೂ ಹರಿ-ಹರರು ಒಂದಾಗಿರುವ ಶ್ರಾವಣ ಬರುತ್ತಾನೆ.

೬.೪ ಇಳೆ ಮತ್ತು ಮಳೆಯ ಗೆಳೆತನದ ಪ್ರತೀಕ ಶ್ರಾವಣ :

ಸುಲಿಗೆ-ಹಿಂಸೆಗಳಿಂದ ಜರ್ಜರಿತವಾಗಿರುವ, ನಿಗಿನಿಗಿಸುವ ಮುಗಿಲಿನಿಂದ ಕಂಗೆಟ್ಟಿರುವ ಭೂಮಿ ಮತ್ತೆ ಜೀವಕಳೆಯಿಂದ ಚಿಗಿಯಲು, ಸಮೃದ್ಧ ಬೆಳೆಯಿಂದ ಪೃಥ್ವಿ ಕತ್ತೆತ್ತಿ ನಿಲ್ಲಲು ಮಳೆ ಬರುವುದು ಅವಶ್ಯವಾಗಿದೆ. ಪ್ರಖರತೆಯ ನಂತರ ನಿಸರ್ಗದ ಕರುಣೆಯ ಮೋಡ ಒಡೆದು ನೆಲದಲ್ಲಿ ನೀರು ಹರಿಯುವುದು ಇಳೆಗೆ ಹೊಸತನ ಬರುವ ಸಂಕೇತವಾಗಿದೆ. ಮಳೆಗಾಗಿ, ಶ್ರಾವಣಕ್ಕಾಗಿ ಮನುಷ್ಯನ ಮನಸ್ಸು ತಹತಹಿಸುವ ಚಿತ್ರಣವನ್ನು ಬೇಂದ್ರೆ ನೀಡಿರುವ ರೀತಿ ವಿಶಿಷ್ಟವಾದುದು. ಮಳೆಯ ಗೆಳೆತನವಿಲ್ಲದೆ ಭೂಮಿ ಬದುಕಲಾರದು ಎನ್ನುವುದು ಅವರಿಗೆ ಗೊತ್ತಿದೆ. ಅದನ್ನು ಮತ್ತೆ ಮತ್ತೆ ನಮಗೆ ಗೊತ್ತುಮಾಡಬೇಕೆನ್ನುವ ಅವರ ಅಪೇಕ್ಷೆ ಅನೇಕ ಕವನಗಳಲ್ಲಿ ಹಣಕಿ ಹಾಕುತ್ತದೆ. 'ಇಳೆಗೆ ಬೇಕು ಮಳೀ ಗೆಣೆತನಾ' ಎನ್ನುತ್ತ ಬಾಯಿ ಬಿಡುತ್ತಿರುವ ಭೂಮಿಗೆ, ಮೂಗು ಚಾಚಿರುವ ಮಲ್ಲಿಗೆ ಜಾಜಿಗೆ ತಡ ಮಾಡದೆ ಮಳೆ ಹನಿಯಲೆಂದು ಮಳೆರಾಯನನ್ನು ಕೇಳಿಕೊಳ್ಳುವ ಬೇಂದ್ರೆ, ಮಳೆ ಸ್ವಲ್ಪ ಹುಸಿ ಹೋದರೆ ಸಾಕು ವಿಲವಿಲ ಒದ್ದಾಡುವ ಜೀವ ಪರಿತಾಪವನ್ನು ಬಣ್ಣಿಸುತ್ತಾರೆ. ಆಷಾಢದ ಮಳೆ ಮಾಡಿದಂತೆ ಮಳೆ ಬಂತು-ಹೋತು ಅನ್ನುವಂತಾಗದೆ ಇಳೆ ಹೂವಿನ ಬುಟ್ಟಿ ಹೊರುವಂತಾಗಲಿ ಎನ್ನುತ್ತಾರೆ.

ಜಡೀ ಬಿಟ್ಟುಕೊಂಡ ಮೃಗ ಕುಣೀಲಿ

ಜಗಾ ನೋಡತಿರಲಿ

ಕಸಾಕಡ್ಡಿ ಕೂಡ ಹಸಾ ಆಗಿ ಹೂ-

ಹಡಲಗಿ ಹೊತ್ತಿರಲಿ

ಏಳುವ ಬೆಳೀ ಬಾಳುವಿಗಾಗಿ

ಕತ್ತ ಎತ್ತಿರಲಿ, ಓ ಆಷಾಢಾ[೫೮]

ನೆಲ ಹೊಲಗಳೆಲ್ಲ ನೀರಿನಲ್ಲಿ ತೇಲಿ ನಲಿಯಲಿ, ಉದ್ದಂಡ ಮಳೆಯಾಗಲಿ ಎಂದು 'ಮಳೆಗೆ ಪ್ರಾರ್ಥನೆ' ಯಲ್ಲಿ ವರ್ಷಕಾಲವನ್ನು ಕೋರಿಕೊಂಡರೆ, 'ಬಾರೋ ಸಾಧನಕೇರಿಗೆ', 'ಹಸಿರಲ್ಲಿವೆ ಕೆಸರಲ್ಲಿವೆ', 'ಹುಚ್ಚಿಮಳೆ', 'ಚಿತ್ತಿಯ ಮಳೆಯ ಸಂಜೆ' ಮುಂತಾದ ಕವಿತೆಗಳಲ್ಲಿ ಮಳೆ ಇಳೆಯಲ್ಲಿ ಹಸಿರಿನ ತೇರನ್ನು ಸಂಭ್ರಮದಿಂದ ಎಳೆಯುವ ಬಗೆಯನ್ನು ಚಿತ್ರಿಸುತ್ತಾರೆ. ಮಳೆಯ ಉನ್ಮತ್ತತೆಯನ್ನು, ಶ್ರಾವಣ ಜೀವನಕ್ಕೆ ನೀಡುವ ಹೊಸತನವನ್ನು ಬೇಂದ್ರೆಯವರಂತೆ ಅಭಿವ್ಯಕ್ತಿಸಿದವರಿಲ್ಲ.

ಹರೆಯದ ಹೆಣ್ಣು ಹುಬ್ಬು ಹಾರಿಸಿ ತನ್ನೊಳಗಿನ ಉಲ್ಲಾಸವನ್ನು, ಯೌವನದ ಮದವನ್ನು ಪ್ರಕಟಸುವಂತೆ ಹುಚ್ಚಿ ಮಳೆ ಕೂಡ ಹಗಲು ರಾತ್ರಿಯೆನ್ನದೆ ಭೂಮಿಗೆ ಮೋಡಗಳ ಟೊಪ್ಪಿಗೆ ಹಾಕಿರುವುದನ್ನು, ಗಾಳಿಯ ಕೂಡ ಪ್ರಣಯದಾಟ ಆಡುತ್ತಿರುವುದನ್ನು, ಹುಚ್ಚೆದ್ದು ಹಾರುವುದನ್ನು ಮತ್ತು ಹಾಡುವುದನ್ನು ಬೇಂದ್ರೆ ಕಾವ್ಯ ರಸಿಕರ ಮುಂದಿಡುತ್ತ ಮಳೆಗಾಲದ ಆರ್ಭಟ - ವೈಭವಗಳನ್ನು ಕಟ್ಟಿಕೊಡುತ್ತಾರೆ.

ಹುಚ್ಚಿ ಮಳೆ ಹುಬ್ಬ ಹಾರಿಸುತ್ತಿತ್ತು

ಕಣ್ಮಿಂಚು ದಿಕ್ಕಗೆಡಿಸುತಲಿತ್ತು

ಮೂಡಲೆತ್ತೋ? ಎತ್ತ ಪಡುವಲವೊ?

ಹಗಲು ಮುಳುಗಿದುದೆಲ್ಲಿ?

ಇರುಳು ಮೂಡಿದುದೆತ್ತ?

ನೆಲಕೆಲ್ಲ ಮೋಡ ಟೊಪ್ಪಿಗೆಯ ಹಾಕಿತ್ತು

ದಿಙ್ಮೂಢವಾಗಿತ್ತು. ಇತ್ತೊ ಕಾಣುವ ಕಣ್ಣು[೫೯]

ಮುಗಿಲಿನ ಸ್ಪರ್ಶದಿಂದ ನೆಲ ಅರಳುವದನ್ನು, ಮೊಗ್ಗು ಹೂ ಬಿಡುವುದನ್ನು, ಗಿಡಮರ ಕುಣಿಯುವುದನ್ನು, ಸೃಷ್ಟಿ ಹೊಸತನಕ್ಕೆ ಹೊರಳುತ್ತಿರುವುದನ್ನು ಕಾಣುವ ಕಣ್ಣು ನಮಗಿದೆಯೇ ಎಂದು ಪ್ರಶ್ನಿಸುವ ಮೂಲಕ ಕವಿ ಪ್ರಾಕೃತಿಕ ವರ್ಣನೆಗೆ ಮೀರಿದ ಒಳನೋಟಗಳನ್ನು ಕೊಡಲು ಪ್ರಯತ್ನಿಸುತ್ತಾರೆ.

ಭೂಮಿ ಮತ್ತು ಬಾನು ಒಂದಾಗುವಲ್ಲಿ, ಒಂದನ್ನೊಂದು ಆಕರ್ಷಿಸುವಲ್ಲಿ, ಪ್ರತಿಬಿಂಬಿಸುವಲ್ಲಿ ಸೃಷ್ಟಿಯೊಳು ತುಂಬಿರುವ ಜೀವದೊಲುಮೆ ಪ್ರಕಟವಾಗುತ್ತದೆ. ನೆಲಕ್ಕೆ ನೀರು ಹರಿದಾಗ ಭೂಮಿ ಪುಳಕಿತಗೊಂಡು ಆನಂದದ ರೆಕ್ಕೆ ಒಡೆಯುತ್ತವೆಯೆಂದು ಹೇಳುವುದು ಹಾಗೂ ಆಕಾಶದಗಲದ ಮತ್ತು ಸಮುದ್ರದಾಳದ ಮೀನು ಪರಮಾತ್ಮನ ಇರುವಿಕೆಯೆಂಬಂತೆ ತೋರುವುದು ಬೇಂದ್ರೆ ನಿಸರ್ಗದ ಮೂಲಕ ಕಟ್ಟಿಕೊಡುವ ಅಲೌಕಿಕ ಅರ್ಥದ ಪ್ರತಿಮೆಯಾಗಿದೆ.

ನೆಲವೆಲ್ಲಾ ನೀರಾಗಿರೆ
ಸೃಷ್ಟಿಯು ಎತ್ತೋ ಸಾಗಿರೆ
ಒಡೆದವು ಆನಂದದ ರೆಕ್ಕೆ
ಬಾನಗಲದ ಕಡಲಾಳದ
ಒಂದೇ ಮೀನಕ್ಕೆ[೬೦]

ಶ್ರಾವಣದ ಸಂಪತ್ತು ಭೂಮಿಯಲ್ಲಿ ಕಾಣಿಸಿಕೊಳ್ಳುವುದರ ಮುನ್ಸೂಚನೆಯೆಂಬಂತೆ ತೇರು ಎಳೆದಂತೆ ರಸ್ತೆಯಲ್ಲಿ ಒಂದೇ ಸಮನೆ ಬೀಳುತ್ತಿದೆ ಮಳೆ. ತೋಟದಲ್ಲಿ ಕುಣಿಯುತ್ತಿರುವ ಪಾತರಗಿತ್ತಿ, ಹಸಿರು ಚಾಚಿಕೊಳ್ಳುತ್ತಿರುವ ನೆಲದ ಹರಯ ಕಣ್ಣಿಗೆ ಆನಂದವನ್ನುಂಟು ಮಾಡುತ್ತಿವೆ. ಭೂಮಿ ಬರೀ ಮಣ್ಣಾಗಿ ಕಾಣದೆ ಸ್ವರ್ಗದ ತುಣುಕು ಇಲ್ಲಿ ಬಂದು ಬಿದ್ದಿದೆಯೇನೋ ಎನ್ನುವಷ್ಟರ ಮಟ್ಟಿಗೆ ಮಳೆಗಾಲದ ದೃಶ್ಯ ಅಪ್ಯಾಯಮಾನವಾಗಿದೆ. ಅಂತಹ ನೋಟ ಕಣ್ತುಂಬ ತುಂಬಿಕೊಳ್ಳಲಿಕ್ಕೆ ಕವಿ ತನ್ನನ್ನು ತಾನೇ ಆಹ್ವಾನಿಸಿಕೊಳ್ಳುತ್ತಿದ್ದಾನೆ.

ಬಾರೋ ಸಾಧನಕೇರಿಗೆ
ಮರಳಿ ನಿನ್ನೀ ಊರಿಗೆ
ಮಳೆಯು ಎಳೆಯುವ ತೇರಿಗೆ
ಹಸಿರು ಏರಿದೆ ಏರಿಗೆ
ಹಸಿರು ಸೇರಿದೆ ಊರಿಗೆ
ಹಸಿರು ಚಾಚಿದೆ ದಾರಿಗೆ
ನಂದನದ ತುಣುಕೊಂದು ಬಿದ್ದಿದೆ
ನೋಟ ಸೇರದು ಯಾರಿಗೆ[೬೧]

ಶ್ರಾವಣ ಬರುವ ಹಾದಿಯಲ್ಲಿದೆ. ಅದನ್ನು ಸ್ವಾಗತಿಸಲೆಂಬಂತೆ ಮಳೆಗಾಲದ ಮೊದಲ ದಿನಗಳು ವರ್ಷಾಕಾಲದ ವಾತಾವರಣವನ್ನು ಪೂರಾ ಹಚ್ಚ ಹಸಿರನ್ನಾಗಿ ಮಾಡಿ ಇಟ್ಟಿವೆ. ಧಾರವಾಡದಲ್ಲಿ ಬೇಂದ್ರೆಯವರು

ವಾಸಿಸುತ್ತಿದ್ದ ಸಾಧನಕೇರಿಯ ಸುತ್ತಮುತ್ತಲಿನ ಪ್ರಕೃತಿಯ ಚಿತ್ರಣವೇ 'ಬಾರೋ ಸಾಧನಕೇರಿಗೆ' ಪದ್ಯದಲ್ಲಿ ತುಂಬಿಕೊಂಡಿದ್ದರೂ ದಾಹಗೊಂಡು ಮಲಗಿರುವ ಇಳೆ ಒಡಮುರಿದು ಏಳುವ, ಬರಲಿರುವ ಶ್ರಾವಣದ ಸಿರಿಗೆ ಕೈಚಾಚುವ ಚೈತನ್ಯದ ಪಾಠಗಳು ಮನುಷ್ಯನಿಗಾಗಿ ಹೆಣೆಯಲ್ಪಟ್ಟವೆ. ಧೋ ಧೋ ಎಂದು ಸುರಿಯುತ್ತಿರುವ ಮಳೆಯ ದೃಶ್ಯವೊಂದನ್ನು ಬೇಂದ್ರೆಯವರು ಅದ್ಭುತವಾಗಿ ಅಭಿವ್ಯಕ್ತಿಸುವ ರೀತಿಗೆ ಸಹೃದಯ ಲೋಕ ಬೆರಗಾಗುತ್ತದೆ. ಹೃದಯಾಂತರಾಳದಿಂದ ಮನುಷ್ಯನ ಬದುಕಿಗೆ ಆಹ್ವಾನ ನೀಡುವ ನಿಸರ್ಗದ ಕರೆ ಈ ಕವಿತೆಯಲ್ಲಿ ಅಡಗಿದಂತಿದೆ. ಅಂತಹುದೆ ವರ್ಣನಾತ್ಮಕ ಪದ್ಯ 'ಚಿತ್ತಿಯ ಮಳೆಯ ಸಂಜೆ' ಮಳೆಯ ಸ್ಪರ್ಶದಿಂದ ಭೂಮಿ ಕ್ಷಣಮಾತ್ರದಲ್ಲಿ ಬದಲಾಗುವುದನ್ನು ಹೇಳುತ್ತದೆ. ಚಿತ್ತಿ ಮಳೆ ಬೀಳುವ ದೃಶ್ಯವನ್ನು ಅಪ್ಪಟವಾಗಿ ವರ್ಣಿಸುತ್ತಲೆ ನಿಸರ್ಗದ ಸಂಗತಿಗಳಲ್ಲಿ ಹಬ್ಬಿಕೊಂಡಿರುವ ಆತ್ಮೀಯತೆಯನ್ನು ಚಿತ್ರಿಸುತ್ತಾರೆ. ಆ ಸಂಜೆಯ ಸೌಂದರ್ಯವನ್ನು ಇನ್ನಿಲ್ಲದಂತೆ ಬಣ್ಣಿಸುತ್ತಾರೆ.

ಇದಿರು ಗುಡ್ಡದ ತಲೆಗೆ
ಮೋಡ ಮುಸುಕೆಳೆವಾಗ
ಬದಿಯ ಗುಡ್ಡದ ಮ್ಯಾಲೆ
ಬಿಸಿಲು ಮೈ ಚಾಚ್ಯಾವ

ತೋಪು ತೋಟದ ಗಾಳಿ
ನುಗ್ಗಿ ನುಸುಳಿ ಬಂದು
ಹುಲ್ಲುಗಾವಲಾ ಸವರಿ
ಬೈತಲಾ ಬಾಚ್ಯಾವ'[೬೨]

ಕಣ್ಣಿಗೆ ಕಾಣುವುದನ್ನೆಲ್ಲ ಬಣ್ಣಿಸುತ್ತ ಸಾಗುವ ಕವಿತೆ ನಿಸರ್ಗ ವಿಸ್ಮಯದ ಕೇಂದ್ರದಂತೆ ಸೀಗಿಗೌರಿಯ ದನಿಯನ್ನು ನಾಡು ಕೇಳುವಂತೆ ಮಾಡಿ ಕವಿತೆಯನ್ನು ಮತ್ತೆಲ್ಲಿಗೊ ಜೋಡಿಸುವ ಆಶ್ಚೆ ಪ್ರಕಟಿಸುತ್ತದೆ. ಬಯಲಿನ ಜೀವಕ್ಕೂ ಕಾಡಿನ ಹಕ್ಕಿಗೂ ಸಂಬಂಧಗಳನ್ನು ಕಲ್ಪಿಸುತ್ತದೆ.

ಬಯಲು-ಗುಡಿಸಲದ ಜೀವ
ಕಾಡು-ಗೂಡಿನ ಹಕ್ಕಿ
ತಮ್ಮ ಸರಿಜೋಡಿ ಮಾಡಿ
ಸೋಬಾನೆ ಹೇಳ್ಯಾವ

ಮುಚ್ಚಂಜೆ ಮುಗಿದಾಗ
ಸೀಗಿಗೌರಿಯ ದನಿಯ
ತೇಲಿ ಬರುವಂತೆ ನಾಡು
ಕಿವಿಯಾಗಿ ಕೇಳ್ಯಾವ'[೬೩]

ಕಾಣದಂತಿರುವ ಸತ್ಯವನ್ನು ಬೇಂದ್ರೆ ಕಾಣಿಸುವ ರೀತಿ ಇದೆಂದು ಕೀರ್ತಿನಾಥ ಕುರ್ತಕೋಟಿ ಅಭಿಪ್ರಾಯಪಟ್ಟಿರುವುದು ಅತ್ಯಂತ ಸೂಕ್ತವಾಗಿದೆ. 'ಕವಿತೆಯ ಪ್ರಾರಂಭದಿಂದ ಮುಕ್ತಾಯದವರೆಗೆ ಮೂಡಿರುವ ಎಲ್ಲ ಚಿತ್ರಗಳಿಗೂ ಸಂಬಂಧವನ್ನು ಕಲ್ಪಿಸಿ ಐಕ್ಯವನ್ನು ತರುವ ಸತ್ವವೆಂದರೆ ಈ ಸೀಗಿಗೌರಿಯ ದನಿ. ನೆಲದ ಫಲವತ್ತತೆ, ಮುಗಿಲಿನ ಕರುಣೆ, ಗಿಡಬಳ್ಳಿಗಳ ಚೆಲುವು, ದುಡಿಮೆಯ ವಿನಯ, ಮನುಷ್ಯ ಮತ್ತು ನಿಸರ್ಗದ ಸಂಬಂಧ, ಗುಡಿಸಲದ ಜೀವಕ್ಕೂ ಕಾಡಿನ ಹಕ್ಕಿಗೂ ಕಾಳು ತಿನಿಸಿ ಪೋಷಿಸುವ ನೆಲದ ಬೆಳೆಯ ಔದಾರ್ಯ, ಕೃತಕೃತ್ಯತೆ, ಫಲದಾಸೆಯಿಲ್ಲದ ಕರ್ಮ, ಆಯಾಚಿತವಾಗಿ ಮೈದೋರುವ ಫಲ ಈ ಎಲ್ಲ ಅರ್ಥ ಸಮೂಹಕ್ಕೆ ಒಂದು ಕೇಂದ್ರಬಿಂದು ಇರಬೇಕು, ಇದೆ ಎನ್ನುವ ನಂಬಿಕೆ ಸೀಗಿಗೌರಿಯ ಪ್ರತಿಮೆಯಲ್ಲಿದೆ.'[೬೪] ಸಲಹುವ ತಾಯಿಯಾದ ಪಾರ್ವತಿಯ ಹಾಡಿಗೆ ಕವಿ ಕಿವಿಗೊಟ್ಟಿರುವುದನ್ನು ಕಾಣಬಹುದಾಗಿದೆ. ವರ್ಷಾಕಾಲ ಭೂಮಿಯ ಉತ್ಸವದ ಸಮಯವಾಗಿದೆ ಎಂದು ಬೇಂದ್ರೆ ತೋರಿಸಿಕೊಡುತ್ತಾರೆ. ಹೊಸತನ, ಸಂಭ್ರಮಗಳು ಶ್ರಾವಣದಲ್ಲಿ ಹೊನಲಾಗಿ ಹರಿಯುವುದರ ಜೊತೆಗೆ ಸಂಕಟದ ಘಳಿಗೆಗಳು ಅಲ್ಲಲ್ಲಿ ಕೂಡಿಕೊಂಡು ಮನುಷ್ಯನ ಬದುಕಿನ ಜೊತೆಗೆ ಸಂಬಂಧಗಳನ್ನು ಬೆಸೆಯುತ್ತವೆ. ನವೀನತೆ, ಉಲ್ಲಾಸ, ಎಲ್ಲ ಕಾಲಕ್ಕೂ ಇರುವುದು ಸಾಧ್ಯವಿಲ್ಲ. ದೀಪಮಾಲೆಯ ಜೊತೆ ಸುಡುವ ಕೆಂಡವೂ, ಸಂಭ್ರಮದ ತೊರೆಯ ಜೊತೆ ಹುಚ್ಚು ಹೊಳೆಯೂ, ಬೆಳದಿಂಗಳ ಜೊತೆಗೆ ಕಾಳರಾತ್ರಿಯೂ, ಸೌಂದರ್ಯ ಝರಿಯ ಜೊತೆಗೆ ಕಣ್ಣೀರಿನ ಮಳೆಯೂ ಕೂಡ ಬೇಂದ್ರೆಯವರಲ್ಲಿ ಕಂಡುಬರುವುದು ಸಹಜವಾಗಿದೆ. ವರ್ಷಾಕಾಲದ ಶ್ರಾವಣದಿಂದ ಹೊಸತನ, ಬದಲಾವಣೆ ಈ ಭೂಮಿಗೆ ಬಂದಂತೆ ಮಾನವನ ಬದುಕಿನಲ್ಲಿ ಕೂಡ ಶ್ರಾವಣ, ಹಬ್ಬ-ಹುಮ್ಮಸ್ಸು-ತಿರುವುಗಳನ್ನು ತರುವ ಕಾಲವಾಗಿದೆ ಎಂಬುದು ಅವರ ಕವಿತೆಗಳಲ್ಲಿ ಅಡಗಿದ ಆಶಯವಾಗಿದೆ.

'ಶ್ರಾವಣದ ವೈಭವ '(ಸಖಿಗೀತ), 'ಶ್ರಾವಣ'(ಹಾಡುಪಾಡು), 'ಗಂಗಾವತರಣ' (ಗಂಗಾವತರಣ), 'ಬಂದಿಕಾರಾ ಶ್ರಾವಣ' (ಗಂಗಾವತರಣ), 'ಮಲೆನಾಡ ಸೆರಗು' (ಸಂಚಯ), 'ಪ್ರತಿವರ್ಷದಂತೆ ಬಂತು, ಶ್ರಾವಣಾ'(ಸೂರ್ಯಪಾನ), 'ಶ್ರಾವಣದ ಹಗಲು' (ಉಯ್ಯಾಲೆ), 'ಮತ್ತೆ ಶ್ರಾವಣಾ' (ನಾಕುತಂತಿ), 'ಸಣ್ಣ ಸೋಮವಾರ' (ಮುಗಿಲ ಮಲ್ಲಿಗೆ), 'ತುಂಬಿತ್ತು ಹಾಲಗೇರಿ' (ಮರ್ಯಾದೆ), 'ಸಖಿಗೀತ' ಮುಂತಾದ ಕವನಗಳಲ್ಲಿ ಶ್ರಾವಣವೆನ್ನುವ ಹೊಸತನದ ಹರಿಕಾರನನ್ನು ಅತ್ಯಂತ ವೈವಿಧ್ಯಮಯವಾಗಿ ಬಣ್ಣಿಸುವ ಮೂಲಕ ಬೇಂದ್ರೆ ಭೂಮಿತಾಯಿಯ ನಂತರ ಶ್ರಾವಣ ಹೇಗೆ ತಮ್ಮ ಮತ್ತೊಂದು ಮುಖ್ಯ ತತ್ವವಾಗಿದೆಯೆಂಬುದನ್ನು ನಿರೂಪಿಸುತ್ತಾರೆ.

'ಶ್ರಾವಣದ ವೈಭವ', 'ಶ್ರಾವಣದ ಹಗಲು', 'ಪ್ರತಿವರ್ಷದಂತೆ ಬಂತು ಶ್ರಾವಣಾ' ಇತ್ಯಾದಿ ಕವನಗಳು ಶ್ರಾವಣ ಮಾಸದಲ್ಲಿ ಪ್ರಕೃತಿಯಲ್ಲಿರುವ ಚೆಲುವನ್ನು ಎಳೆಎಳೆಯಾಗಿ ಜಿಡಿಸಿಡುತ್ತವೆ. ಅರಳಿರುವ ಭೂಮಿಯ ವರ್ಣನೆ ಈ ಕವಿತೆಗಳಲ್ಲಿ ತುಂಬಿಕೊಳ್ಳುತ್ತದೆ. ಹಬ್ಬದ ಉಮೇದಿನಲ್ಲಿ ನಿಸರ್ಗ ನಕ್ಕು ನಲಿಯುವುದನ್ನು ಇಲ್ಲಿ ಕಾಣಬಹುದು. ಹಸಿರು, ಹಳದಿ ಬಣ್ಣಗಳಿಂದ ಸಕಲ ವಸ್ತುಗಳಿಗೂ ಬಣ್ಣ ಬಂದಿದೆ. ಅವು ತಮ್ಮ ಸತ್ವವನ್ನು ಒಡೆದು ನಿಂತಿವೆ.

ಹುಲ್ಲು ಹೂವು ಆದರೇನು,
ಹಬ್ಬದುಬ್ಬಿನಲ್ಲಿವೆ;
ದಿಬ್ಬಗಳನು ತಬ್ಬಲೆಂದು
ಎಲ್ಲ ನೆಲಕು ಹಬ್ಬಿವೆ
ಮಳೆಯ ಬಿಲ್ಲು ಮುರಿದು ಹತ್ತು -
ಕಡೆಗೆ ಹಂಚಿದಂತಿದೆ,
ಹುಲ್ಲು ಕಸವು ಬಣ್ಣ ಒಡೆದು
ಹೂತು ಹಿಗ್ಗಿ ನಿಂತಿದೆ[೬೫]

ಭೂಮಿಯ ಸುತ್ತ ಹೆಣೆದ 'ಮೊದಲಗಿತ್ತಿ' ಕವಿತೆಯಲ್ಲಿ ಮೊದಲಗಿತ್ತಿಯಾದವಳು ಯಾವಾಗ ಬಸುರಯಾಗಿ ಹಸಿರನ್ನುಟ್ಟು ಸಂಭ್ರಮದಿಂದ ನಲಿಯುತ್ತಾಳೆ ಎನ್ನುವ ಹಂಬಲವಿತ್ತು. ಆ ಕಾಲ ಈಗ ಬಂದಿದೆ. ಹೊಸ ಋತುವಿಗೆ ಇಳೆ ಸರಿದಿದೆ.

ಬಸಿರೆ ಹೊಲಕೆ ಹೂವು ಮುಡಿಸ-
ಲೆಂದು ಬಂದ ಸಂಭ್ರಮ;
ಸೃಷ್ಟಿಯಲ್ಲಿ ಕಾಣುತಿಹದು
ಮನುಜನೆತ್ತಿದೀ ಕ್ರಮ[೬೬]

ಹಿಗ್ಗು, ಸಂತೋಷಕ್ಕೆ ಮೇರೆಗಳಿಲ್ಲದೆ ದುಂಬಿ, ಚಿಟ್ಟೆ, ಹೂವುಗಳಿಂದ ತುಂಬಿದ ಲೋಕವೊಂದು ಸ್ವರ್ಗಕ್ಕೆ ಸೋಪಾನವನ್ನು ಕಟ್ಟಿರುವುದನ್ನು ಬೇಂದ್ರೆ ಗುರುತಿಸುತ್ತಾರೆ. ಮೈ ಹಾಗೂ ಮನಸ್ಸು ತುಂಬಿ ಕುಣಿಯುತ್ತಿರುವ ಭೂಮಿ ತಪಸ್ವಿನಿಯಂತೆ ಕಾಣುತ್ತಾಳೆ.

ಹೂವ ಹಡಲಿಗೆಯನು ಹೊತ್ತ
ಭೂಮಿತಾಯಿ ಜೋಗಿತಿ
ಮೈಽ ತುಂಬಿ ಕುಣಿಯುತಿಹಳ
ನಂತಕಾಲವೀಗತಿ[೬೭]

ಗಾಳಿಯೆನ್ನುವ ಕುದುರೆಯನ್ನೇರಿ, ಬಿದಿರಿನ ಕೊಳಲನ್ನು ನುಡಿಸುತ್ತ, ಗುಡ್ಡಬೆಟ್ಟಗಳ ಹೆಳಲಿಗೆ ಹೂವು ಮುಡಿಸುತ್ತ, ಮುತ್ತಿನ ನೀರಿನ ಹನಿಗಳನ್ನು ಅತ್ತ ಇತ್ತ ತೂರುತ್ತ ಬರುವ ಶ್ರಾವಣನ ಅಂದ-ಚಂದ 'ಶ್ರಾವಣ' (ನಾದಲೀಲೆ) ಕವಿತೆಯಲ್ಲಿ ಇನ್ನಿಲ್ಲದಂತೆ ವರ್ಣಿಸಲ್ಪಟ್ಟಿದೆ. ಮನಸ್ಸಿನ ಹಿಗ್ಗನ್ನು ಪ್ರಕಟಿಸುವ ತುಂಟ ಹುಡುಗನಾಗಿ, ಮೋಡಗವಿದ ಕಣ್ಣಿನವನಾಗಿ, ಹಾವಸೆಯ ಉಡುಪು ತೊಟ್ಟವನಾಗಿ ಶ್ರಾವಣ ಬಿಸಿಲು ಉಂಡು ಮಳೆಯ ಕನಸ ಹಿಡಿದಿರುವ ತಾಯಿಗೆ ಮುದ್ದಿನ ಮಗನಾಗಿದ್ದಾನೆ. ಶ್ರಾವಣ ಕಾಲದ ಧಾರವಾಡವನ್ನು ಬೇಂದ್ರೆ ಕಣ್ತುಂಬ ತುಂಬಿಕೊಳ್ಳುತ್ತಾರೆ.

ಗುಳ್ಳಗಂಜಿ ತೊಡವ ತೊಟ್ಟು
ಹಾವಸೆಯಾ ಉಡುಪನುಟ್ಟು
ನಗುವ ತುಟಿಯ ನೆನೆದ ಎವೆಯ
ತರಳ ನೀನು ಶ್ರಾವಣಾ,
ಅಳಲು ನಗಲು ತಡವೆ ಇಲ್ಲ
ಇದುವು ನಿನಗೆ ಆಟವೆಲ್ಲ
ಬಾರೊ ದಿವ್ಯ ಚಾರಣಾ
ತುಂಟ ಹುಡುಗ ಶ್ರಾವಣಾ[೬೮]

ಬುದ್ಧಿ-ಭಾವಗಳನ್ನು, ಮೂರ್ತ-ಅಮೂರ್ತಗಳನ್ನು ಶ್ರಾವಣದ ರೂಪಕದಿಂದಲೇ ಬೇಂದ್ರೆ ಕೂಡಲು ಯತ್ನಿಸುತ್ತಾರೆ. ಜೀವನವೆ ಮರಳಿ ಬರುವ, ವರ್ಷ ವರ್ಷವೂ ಹಸಿರಾಗಿ ಅರಳುವ ಪರಿಗೆ ಬೇಂದ್ರೆ ಅಚ್ಚರಿಗೊಳ್ಳುತ್ತಾರೆ. ಮಳೆಯ ಮೇಳ, ನೀಲಿಯ ನೀರು, ಪಚ್ಚೆಯ ಹಸಿರು, ಸತ್ತ ಜೀವಕ್ಕೆ ಮತ್ತೆ ಜೀವ ಕೊಡಬಲ್ಲ ಶ್ರಾವಣದ ಗಾಳಿ ಕವಿಗೆ ಹುಚ್ಚು ಹಿಡಿಸಿದೆಯೆನ್ನುವ ಮಾತು 'ಗ್ಯಾನಾ-ಧ್ಯಾನಾ' ಈಗ ಅಲೌಕಿಕದ್ದೆಂದು ಸ್ಪಷ್ಟಪಡಿಸುತ್ತವೆ.

ಬೀಸ್ತದ ಶ್ರಾವಣದ ಗಾಳಿ
ಹಿಡಿದ ಹೆಗ್ಗಾಳಿ
ಹೊರಟಿದ್ದ ದಾಳಿ
ಶಿವನ ಗಣಕ
ಹುಟ್ಟsದ ಜೀವ ಹೆಣಕ[೬೯]

ಸತ್ತು ಹೋದ ಸಂಗತಿಯಲ್ಲಿಯೂ ಜೀವ ಹುಟ್ಟಿಸಬಲ್ಲ ಸಾಮರ್ಥ್ಯ ಶ್ರಾವಣದಲ್ಲಿದೆ ಎಂದು ಬೇಂದ್ರೆ ಹೇಳುತ್ತಾರೆ.

'ನಾಕುತಂತಿ' ಸಂಕಲನದ 'ಮತ್ತೆ ಶ್ರಾವಣಾ', 'ಮತ್ತೆ ಶ್ರಾವಣಾ ಬಂದಾ' ಕವಿತೆಗಳು ಭಕ್ತಿಯ ಪರಾಕಾಷ್ಠೆಯನ್ನು ಸೂಚಿಸುವ ಸಂಕೇತಗಳನ್ನು ತಮ್ಮ ಒಡಲಲ್ಲಿ ಇರಿಸಿಕೊಂಡಿವೆ. ಇಲ್ಲಿ ಭೌತಿಕ ಶ್ರಾವಣ ಇಲ್ಲ. ಬದಲಾಗಿ ಸೃಷ್ಟಿಯಲ್ಲಿನ ಬದುಕು ಹಾಗೂ ನಾದಗಳನ್ನು ಹೊಂದಿಸುವ ಬಗೆಯಿದೆ. ವರ್ಷ ವರ್ಷವೂ ಶ್ರಾವಣ ಹೊಸತನವನ್ನು ತರುವ ಉದ್ದೇಶ ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಎಂಬುದು ಕವಿಯ ನಂಬುಗೆಯಾಗಿದೆ. ತನ್ನ ಕಾವ್ಯಸೃಷ್ಟಿ ಕೂಡ ಶ್ರಾವಣ ತಂದಿರುವ ಫಲವೆಂದು, ಆ ಸಮಯದಲ್ಲಿ ಅದನ್ನು ಊರ್ಧ್ವಗೊಳಿಸಿಕೊಳ್ಳಬೇಕೆಂದು ಹೇಳುವುದಾಗಿದೆ. 'ಮತ್ತ ಶ್ರಾವಣಾ' ಕವನ ಹರಿಹರರ ಸಾಮರಸ್ಯವನ್ನು ಹೇಳುವಂತೆ ಕವಿ ಆರಿಸಿಕೊಂಡ ಕಾವ್ಯದ ಹಾದಿಯನ್ನೂ ತೋರಿಸುವಂತಿದೆ.

ಹರಹರ ಶ್ರಾವಣಕ ಬಂದಿs ಶೃತಿ ತಂದಿss
ಹರಿಹರಿ ಶ್ರಾವಣಕ ಬಂದಿs ಕೃತಿ ತಂದಿss
ನೀವು ತಂದಿ ತಾಯಿ ನಮಗ
ಕಂದನು ನಾ ನಿಮಗs[೨೦]

ಹೊಂದಿಕೆಯ ಹಾಗೂ ಒಳಗೊಳ್ಳುವ ಗುಣ ಮನುಷ್ಯನಲ್ಲಿ ಇರಬೇಕಾದ ಅಪೇಕ್ಷೆಯನ್ನು ಇಲ್ಲಿ ಗುರುತಿಸಬಹುದು. 'ಹರನದು ಸ್ಮಾರ್ತ ಮಾರ್ಗವಾದರೆ ಹರಿಯದು ಬದಲಾವಣೆಯ ಹೊಸ ಮಾರ್ಗ. ಎರಡರಲ್ಲಿ ಭೇದವಿಲ್ಲ. ಹರ ಶೃತಿಯನ್ನು ತಂದರೆ; ಹರಿ ಕೃತಿಯನ್ನು ತರುತ್ತಾನೆ. ಮಾರ್ಗ ಮತ್ತು ದೇಸಿಗಳಂತೆ ಶೃತಿ ಮತ್ತು ಕೃತಿಗಳು ಒಂದಾಗಲು ಕಾತರಗೊಂಡು ನಿಂತ ಮಾರ್ಗಗಳು'[೨೧] ಎಂದು ಕುರ್ತಕೋಟಿ, ಪರಂಪರೆಗಳಿಂದ ಬೇಂದ್ರೆ ರೂಢಿಸಿಕೊಂಡ ಸ್ವಂತದ ಕಾವ್ಯಮಾರ್ಗವನ್ನು ಗುರುತಿಸುತ್ತಾರೆ.

ಜಗತ್ತಿಗೆ ತಂದೆಯಾಗಿರುವ ಕೃಷ್ಣ ವಸುದೇವನ ಹೆಂಡತಿ ದೇವಕಿಯ ಗರ್ಭದಿಂದ ಶ್ರಾವಣದಲ್ಲಿ ಹುಟ್ಟಿ ಬರಲೆಂದು ಕವಿ ಪ್ರಾರ್ಥಿಸುತ್ತಾರೆ. ಆ ಪ್ರಾರ್ಥನೆಯ ಹಿಂದೆ ಬದುಕಿನ ಕೇಡು ದೂರಾಗಲೆಂಬ ಆಶಯವಿದೆ. ಶಿವನ ಪ್ರಚಂಡ ಬಲ ಮತ್ತು ಶಕ್ತಿಯ ಆಪಾರ ಶ್ರದ್ಧೆಯನ್ನು ಒಂದುಗೂಡಿಸುವ ಕಾಮ ದೈವದ ಸಂಕಲ್ಪವಾಗಿದ್ದಾನೆ. ಸುರ ಮತ್ತು ಅಸುರರ ಕಸರು ಕಳೆಯಲು ಕೃಷ್ಣ ಹುಟ್ಟಿ ಬರುವುದು ಸಾತ್ವಿಕತೆಯ ವಿಜಯವಾಗಿದೆ.

ವಸುದೇವs ದೇವಕಿ ಗರ್ಭಾs । ತುಂಬಿದ ತುಂಬಿ
ಸೆರೆ ಬಿಡಿಸಿ ಬಂದಿ । ವಿಶ್ವದ ತಂದಿ
ಸುರ-ಅಸುರರ ಕಸರs ಕಳೆದೂ
ಮೈ ತಳೆದೂ ಬಾರಯ್ಯಾ[೨೨]

ತಂದೆ-ತಾಯಿಯನ್ನು ಸೆರೆಯಿಂದ ಬಿಡಿಸಿದ ಕಂದನನ್ನು ಮನತುಂಬಿ ಕರೆಯಬೇಕೆಂದು 'ಬಂದಿಕಾರಾ ಶ್ರಾವಣಾ' ಕವಿತೆಯಲ್ಲಿಯೂ ಅವರು ಕೋರುತ್ತಾರೆ.

ಬಂಧಮುಕ್ತಿಯ ದಿನವೆ ಬಂದೆಯಾ ಬಾ ಬಳಿಗೆ
ಎಂದು ಕರೆಯೋ ಶ್ರಾವಣಾ
ದುಂದು-ಕಂಸನ ಕೊಂದು, ತಂದೆ-ತಾಯ್ ಹೊರತಂದ
ಕಂದನ್ನ ಕರೆ ಶ್ರಾವಣಾ
ಕೇದಗೆಯ ಹೊಡೆ ತೂರಿ ಊದು ನಿನ್ನ ತುತೂರಿ
ಮೋದ ಬೀರೋ ಶ್ರಾವಣಾ
ನಾದವಿದು ಯಾವುದೋ ಅಗಾಧ ತಳದಿಂ ಬಂತು
ಊದೋದಿದೋ ಶ್ರಾವಣಾ[೬೩]

ವರುಷ ವರುಷಕ್ಕೆ ಮರಳುವ ಶ್ರಾವಣ ಬೇಂದ್ರೆ ಅವರಲ್ಲಿ ಪ್ರತಿವರ್ಷ ಉನ್ಮಾದವನ್ನು ತುಂಬುತ್ತಿದ್ದುದರ ಪರಿಣಾಮವಾಗಿ ಅವರ ಕಾವ್ಯದ ಉದ್ಯೋಗ ಹೊಸ ರೂಪಗಳನ್ನು ಪಡೆಯುತ್ತ ಹೋಯಿತು. ಅವರೊಳಗಿನ ಅನುಭವ ಹೊಸ ಹೊಸ ಸಂಕೇತಗಳನ್ನು ಹೊತ್ತು ಬರುತ್ತಿತ್ತು. ತನ್ನನ್ನು ಅಭಿವ್ಯಕ್ತಿಗೆ ಒಡ್ಡನ್ನುತ್ತಿತ್ತು. 'ಮತ್ತೆ ಶ್ರಾವಣ' ಪದ್ಯವನ್ನು ಬರೆದ ತುಸು ಹೊತ್ತಿನಲ್ಲಿಯೆ ಶ್ರಾವಣ ಮಾಸ ಅವರಲ್ಲಿ ಉಕ್ಕಿಸಿದ ಭಾವೋನ್ಮಾದ 'ಮತ್ತೆ ಶ್ರಾವಣಾ ಬಂದಾ' ಕವಿತೆಯನ್ನು ಬರೆಯಲು ಹಚ್ಚಿತು. ಭಾರತೀಯ ಕಾವ್ಯ ಪರಂಪರೆಗೆ ಅರವಿಂದರು ನೀಡಿದ ಆಧ್ಯಾತ್ಮಿಕ ಹೊಳಹುಗಳನ್ನು ಈ ಕವಿತೆ ಪಠಣ ಮಾಡುತ್ತದೆಯೆಂದರೆ ತಪ್ಪಾಗಲಾರದು. ಕವಿತೆಯ ಭಾವಸಂದರ್ಭದಲ್ಲಿ ಬೇಂದ್ರೆಯವರೆ ಅದನ್ನು ಸ್ಪಷ್ಟಪಡಿಸುತ್ತಾರೆ. 'ಶ್ರಾವಣ-ಆಗಸ್ಟ ಇದು ಶ್ರೀ ಅರವಿಂದರ ಮಾಸ. ಈ ವಿಷಯದ ಮಾತು ಇನ್ನೂ ಉಳಿದಿದೆ ಎಂಬಂತೆ ಛಂದ ಉಕ್ಕಿಬಂದು ಶ್ರೀ ಅರವಿಂದರ ಸಾವಿತ್ರಿಯಿಂದ ಮತ್ತೆ ನವೀನ ಕಾವ್ಯಕ್ಕೆ ಶ್ರೀ ಗಣೇಶಾಯನಮಃ ಆಗಿದೆ ಎಂದು ಧ್ವನಿಗೊಡುತ್ತ ಇನ್ನೊಂದು ಲಹರಿ ಬಂತು.'[೬೪] ಅನುಭಾವಿಕರನ್ನು ಈ ನೆಲಕ್ಕೆ ತಂದು ಕೊಡುವ ಯೋಗವನ್ನು ಶ್ರಾವಣದ ದಿನಗಳು ತಂದೊಡ್ಡಿವೆಯೆಂದು ಬೇಂದ್ರೆ ನಂಬುತ್ತಾರೆ. ಕೊನೆಯಿಲ್ಲದ, ಮೇರೆಯಿಲ್ಲದ ಅನಂತದ ಬೇರಿನಲ್ಲಿ ಬೇರಾಗಿ ಬೆರೆಯುವದರಲ್ಲಿಯೆ ಅರವಿಂದರು ಕಂಡಂತಹ ಅನುಭಾವದ ಅರ್ಥಗಳಿವೆಯೆಂಬ ಸೂಚನೆಯನ್ನು ಈ ಕವಿತೆಯಲ್ಲಿ ಕಾಣಬಹುದಾಗಿದೆ. ಮನಸ್ಸಿನ ಭಕ್ತಿ, ದೇವರು ಮತ್ತು ಮಾನವರನ್ನು ಬೆಸೆದಿದೆ. ಭೂಮಿ ದೇವನ ಮನೆಯಾಗಿ, ವೃಂದಾವನವಾಗಿ, ಶ್ರೀಕೃಷ್ಣನ ಅಂಗಳವಾಗಿ ಸಾತ್ವಿಕತೆಯ ಮಳೆ ಕರೆಯಲಿ ಎಂಬ ಆಶಯ ಬೇಂದ್ರೆಯವರದಾಗಿದೆ. ಪರಿಶುದ್ಧವಾಗಿರುವ ಶ್ರಾವಣ ಮಾಸವೆ ಅರವಿಂದರ ಸಾವಿಲ್ಲದ ಸಾವಿತ್ರಿಯ ಕಾವ್ಯದ ಕುರಿತು ಕಣ್ಣು ತೆರೆಸಿತೆಂದು ಕವಿ ಸಂತೃಪ್ತರಾಗಿದ್ದಾರೆ. ಪುರಾಣ, ವೇದ, ಐತಿಹ್ಯಗಳನ್ನು ಉಪಯೋಗಿಸಿಕೊಂಡು ಬಹು ವ್ಯಾಪಕವಾದ ಅರ್ಥಗಳನ್ನು ಈ ಕವಿತೆಯಲ್ಲಿ ಅವರು ಕಟ್ಟಿಕೊಡುತ್ತಾರೆ. ಹಂಪೆಯ ಸಾಸಿವೆಯ ಗಣಪನಿಗೂ ಚಾಂಗುಭಲಾದ ಶಿವನಿಗೂ ಬ್ರಹ್ಮರೂಪದ ಕೃಷ್ಣನಿಗೂ ಸಂಬಂಧಗಳನ್ನು ಸ್ಥಾಪಿಸುವ ಬೇಂದ್ರೆಯವರ ಬಗ್ಗೆ ಅಚ್ಚರಿ ಹುಟ್ಟುತ್ತದೆ.

ಓ ಯಕ್ಷಾ, ಯಜ್ಞಾ, ಸರ್ವತ್ರಾ ಓಂಕಾರಿ
ಪುಳಿನದ ದಾರಿ ಮರುಳ್, ಮರುಳ್
ವೃತ್ತಿಕಾವತೀ । ಧೂಲೀಧೂಸರಾ
ಸದS ಉದಯೋನ್ಮುಖಾ ನೇಸರಾ
ನಿಸರ್ಗಾ, ವಿಸರ್ಗಾ, ಭರ್ಗಾ, ದುರ್ಗಾ
ಹೇರುಂಬಾ ಪಿರಿಯಾ ಮಹಾ ಉದರಾ
ಆನಂದಾ । ತುಂಬಾ
ಕೃಷ್ಣನ ಕೈಯಲ್ಲಿ ಕೊಟ್ಟಾ । ಈ ಚಂದ್ರಭಟ್ಟಾ
ಸಾವಿತ್ರಿಯ ಪಟ್ಟಾ[೨೫]

ಕುರ್ತಕೋಟಿಯವರು ಇಲ್ಲಿಯ ಧ್ವನಿಯನ್ನು ಹೀಗೆ ಗುರುತಿಸುತ್ತಾರೆ. 'ಈ ಗಣಪತಿ ನನ್ನ ಮಗನಾಗಿದ್ದರೂ ನನ್ನವನಲ್ಲ. ಇವನು ಸೃಷ್ಟಿದೇವತೆ, ಬ್ರಹ್ಮ. ಆದುದರಿಂದ ಇವನು ನನ್ನ ಮಗನಾಗುವುದಕ್ಕಿಂತ ಶ್ರೀಕೃಷ್ಣನ ಮಗನಾಗಲಿ. ಅದರಂತೆ ಚಂದ್ರಭಟ್ಟಾ (ಶಿವ), ಗಣಪತಿಯನ್ನು ಬ್ರಹ್ಮರೂಪದಲ್ಲಿ ಕೃಷ್ಣನ ಹೊಕ್ಕಳದ ಕಮಲದಲ್ಲಿ ಜನಿಸುವಂತೆ ಮಾಡಿರಬೇಕು ಎಂಬುದು ಇಲ್ಲಿಯ ಕವಿಕಲ್ಪನೆ. ಇದರಿಂದ ಈ ಬ್ರಹ್ಮನಿಗೆ = ಗಣಪತಿಯ ಸಾವಿತ್ರಿಯ ಪಟ್ಟಾ (ಸಾವು ಇಲ್ಲದ ಪಟ್ಟ) ಲಭಿಸಿತು ಎಂಬುದು ಒಂದು ಅರ್ಥವಾದರೆ ; ಮಹಾಗಣಪತಿ ಸದೃಶರಾದ ಶ್ರೀ ಅರವಿಂದರು ಸೃಷ್ಟಿಸಿದ ಸಾವಿತ್ರಿ ಮಹಾಕಾವ್ಯಕ್ಕೆ ಅಮರವಾದ ಸ್ಥಾನವಿದೆ ಎಂಬ ಅರ್ಥವೂ ಇಲ್ಲಿ ಅಡಗಿದೆ.'[೨೬] ಭೂಮಿಗೆ ಸುಂದರವಾಗಿರುವ ಹಲವು ಆಶಯಗಳನ್ನು ಶ್ರಾವಣ ತಂದು ಸುರಿಯುತ್ತಿದೆಯೆಂದು ಬೇಂದ್ರೆ ತಿಳಿಯುತ್ತಾರೆ.

ಜೀವದ ಝರಿ ಶ್ರಾವಣದಲ್ಲಿ ಉಕ್ಕಿ ಹರಿಯುತ್ತದೆಯೆಂದು ಬೇಂದ್ರೆ ಅಚಲವಾಗಿ ನಂಬಿದ್ದರೆನ್ನುವುದಕ್ಕೆ ಅವರ 'ತುಂಬಿತ್ತು ಹಾಲಗೇರಿ' (ಮರ್ಯಾದೆ) ಕವನ ಮೇರುಸಾಕ್ಷಿಯಾಗಿ ಒದಗುತ್ತದೆ. ತುಂಬಿ ತುಳುಕುತ್ತಿದ್ದ ಹಾಲಗೇರಿಯ ಕೆರೆಯಲ್ಲಿ ಅವರು ಕಾಲರುದ್ರನಿಂದ ಪಾರಾದ ಬಗೆಯನ್ನು ಕವಿತೆ ಪರೋಕ್ಷವಾಗಿ ಚಿತ್ರಿಸುತ್ತದೆ. ಶ್ರಾವಣದ ಮಳೆ ಸುರಿಯುವ, ಕ್ಷಣದಲ್ಲಿ ಮೋಡ ಸರಿದು ಹಗಲಾಗುವ, ಹಚ್ಚನೆಯ ಹಸಿರು ಸುತ್ತಲೂ ತೋರುವ, ಚೈತನ್ಯರೂಪಿ ದೇವನಿಗೆ ಈ ನೆಲದ ಭಕ್ತಿ ತಟ್ಟುವ ಸಮಯದಲ್ಲಿ ಬೇಂದ್ರೆ ನೀರಲ್ಲಿ ಮುಳುಗಿ ಏಳುತ್ತಾರೆ. ಮುಳುಗಬಹುದಿದ್ದ ಮಗುವನ್ನು ತಾಯಿ ಎತ್ತುತ್ತಾಳೆ. ಸಂಕಟದ ಘಳಿಗೆಯಾಗಬಹುದಾದದ್ದು ಸಂತಸದ ಕ್ಷಣವಾಗಿ ಮಾರ್ಪಾಡಾಗುತ್ತದೆ.

ತುಂಬಿದ ಕೊಡ ಬಗಲಾಗಿತ್ತು
ಮೋಡಾ ಸರಿದು ಹಗಲಾಗಿತ್ತು

ಶ್ರಾವಣದ ಹಸಿರು ನಗಲಾಗಿತ್ತು
ಯಾವುದೋ ಧ್ವನಿ ಮುಗಲಾಗಿತ್ತು
ಸಂಧ್ಯಾವಂದನಿ ಮುಗಿದಿತ್ತು
ಹೊತ್ತಾಗಿತ್ತು
ಕಾಲರುದ್ರನಿಗೆ ಗೊತ್ತಾಗಿತ್ತು
ಅಂದ ತುಂಬಿತ್ತು ಹಾಲಗೇರಿ[೭೭]

ಪರಮ ಚೈತನ್ಯದಾಯಕನ ಧ್ವನಿಗೆ ಪ್ರತಿಯೊಂದು ಜೀವವೂ ಅಂಬಾ ಎನ್ನುವ, ಮುಗಿಲಿನಿಂದ ಕೇಳಿ ಬರುವ ಕೊಳಲ ದನಿಗೆ ಇನ್ನಿಲ್ಲದಂತೆ ಹಂಬಲಿಸುವ ಮನುಷ್ಯನ ಎದೆಯ ಬಯಕೆಯನ್ನು ಒಗೊಡುವ ಗುಡ್ಡದ ಸಾಕ್ಷಿಯಾಗಿ, ಹರಿಯುವ ನೀರಿನ ಸಾಕ್ಷಿಯಾಗಿ, ಅರಳುವ ಹೂವಿನ ಸಾಕ್ಷಿಯಾಗಿ, ನಿಗಿನಿಗಿಸುವ ಬೆಳಕಿನ ಸಾಕ್ಷಿಯಾಗಿ ಬೇಂದ್ರೆ ವ್ಯಕ್ತಪಡಿಸುತ್ತಾರೆ. ಮಾನವನ ಜೀವ ಮೂಲಜೀವದ ಪ್ರತಿಬಿಂಬವೇ ಆಗಿದೆ.

ದೇಹ ಖಂಬಾ ಖಂಬಾ ; ಜೀವಾ ಜೀವಾ ಪ್ರತಿಬಿಂಬಾ
ಆದರೊಳಗ ದೇವ ದೇವನಽ ಬಿಂಬಾ ಲಕ್ಷ ಕೋಟಿ ತುಂಬಾ
ಸಾವಿರದ ಸಾವಿರಾ ಹಂಬಾಽ ಹಂಬಾಽ
ಹಂಬಲಸ್ತಾವ ಬೆಂಬಲಸ್ತಾವ ಕೊಳಲಿನ ದನೀ
ಅದು ದೂರಂದರ ದೂರಾ; ಸನೀ ಅಂದರ ಸನೀ[೭೮]

ನಿಸರ್ಗದ ಆದಿಮ ಶಕ್ತಿಯ ಬಗ್ಗೆ ನಂಬಿಕೆಯನ್ನು ಇಡಲೂಬಹುದು, ಬಿಡಲೂಬಹುದು ಎಂದು ಕವಿ ಹೇಳುವಂತೆ ತೋರುತ್ತದೆ. ಅಂದರೆ ಅದು ಭಕ್ತನೊಬ್ಬನ ಹಾದಿ. ಯಾವುದೋ ಶಕ್ತಿಯ ಹುಡುಕಾಟದಲ್ಲಿ ಯಾವುದೋ ಅವ್ಯಕ್ತ ಕರೆಗೆ ಆತ ನಡೆದಿದ್ದಾನೆ. ಸುಖದುಃಖದ ಮಳೆಯೊಳಗೆ ನೆನೆಯಬೇಕೆಂದು ಕವಿ ಬಯಸುತ್ತಾನೆ. ಬೆಣ್ಣೆ ಕರಗದೆ ತುಪ್ಪ ಹೇಗೆ ಆದೀತೆಂದು ಆತ ಪ್ರಶ್ನಿಸುತ್ತಾನೆ. ಭಕ್ತಿಯ ಪರಿಧಿ ಹಿಗ್ಗುತ್ತ ದೇಶ ಕಾಲಗಳನ್ನು ವ್ಯಾಪಿಸುವ ಬಗೆ ವಿಸ್ಮಯ ಮೂಡಿಸುತ್ತದೆ. ದತ್ತಾತ್ರೇಯ ಅಲ್ಲಿ ಇಲ್ಲಿ ಎಲ್ಲ ಕಡೆ ವ್ಯಾಪಿಸಿಕೊಂಡು ಧಾರವಾಡದಲ್ಲಿಯೂ ತಂಗಿ ಎಳೆಯ ಬೇಂದ್ರೆಯಲ್ಲಿ ಚೈತನ್ಯವನ್ನು ತುಂಬುತ್ತಿದ್ದಾನೆ. ತಾಯಿಯೇ ನಡುವೆ ಮಾಧ್ಯಮ. 'ದತ್ತನ್ನ ತುಂಬಕ್ತಿದ್ದಳು ಜಗದಂಬಾ'. ಕವಿಯ ಪಾಲಿಗೆ ತಾಯಿ ಅಂಬಿಕೆ ಜಗದಂಬಿಕೆಯೇ ಆಗಿದ್ದಾಳೆ. ದತ್ತಾತ್ರೇಯನ ಗುಡಿಯ ಸುತ್ತಮುತ್ತ ಬಂದು ಬೀಳುವ ಕಸವನ್ನು ಗುಡಿಸುತ್ತಿದ್ದಾಳೆ. ಇಂತಹ ಓಂಕಾರ ನಾದದ ಸಮಯದಲ್ಲಿ ಶ್ರಾವಣ ತುತ್ತೂರಿ ಊದುವುದು ತುಂಬ ಔಚಿತ್ಯಪೂರ್ಣವಾಗಿದೆ. ನೆನಪುಗಳಲ್ಲಿ ನಾಗರಿಕತೆಯ ಜೀವವಿದೆ. ಹಾಲಗೇರಿ ಎಂಬ ಹಿಂದಿನ ಕೆರೆಯನ್ನು ನೆನೆಯುತ್ತ ಅಲ್ಲಿ ಸುತ್ತಮುತ್ತ ಇದ್ದ ಧಾರವಾಡದ ಕೋಟೆ ಈಗ ಪೇಟೆಯಾಗಿದ್ದನ್ನು ಬಣ್ಣಿಸುತ್ತಾರೆ. ಆದರೆ ನೆನಪಿನ ಝರಿ ಅಷ್ಟಕ್ಕೆ ನಿಲ್ಲುವುದಿಲ್ಲ. ಅದು ಮುಂದೆ ಹರಿದುಹೋಗಿ ಗೋಕರ್ಣವನ್ನು, ಅರಬ್ಬೀ

ಸಮುದ್ರವನ್ನು ಸೇರುತ್ತದೆ. ಗುಪ್ತಗಾಮಿನಿಯಾದ ಶಾಲ್ಮಲಾ ಕಾಲದುದ್ದಕ್ಕೂ ಜೀವನದಿಯಾಗಿ ಹರಿಯುತ್ತಾಳೆಂದು ಬೇಂದ್ರೆ ಭಾವಿಸುತ್ತಾರೆ. ನೆನಪಿನಗುಂಟ ಸಾಗಿದಾಗ ಸಿಗುವುದು ಬರೀ ನೀರಲ್ಲ, ಬರೀ ನೆಲವಲ್ಲ. ಅರವಿಂದರ ಕಾವ್ಯಲಹರಿ ಎಂದು ಮಾರ್ಮಿಕವಾಗಿ ಹೇಳಿ ಅಲೌಕಿಕ ಕಡಲಿನ ಹಾದಿ ಹಿಡಿಯುವುದು ಬೇಂದ್ರೆ ವೈಶಿಷ್ಟ್ಯವಾಗಿದೆ.

ಮರವಿನ ಮರಿವಿಗಿತ್ತು ನೆನವಿನ ಕೆರೀ

ಅಲ್ಲೇ ಇತ್ತು ಜೀವದ ಝರಿ

ನೆಲಾ ಅಲ್ಲಾ, ಕೆರೀ

ನೀರಲ್ಲಾ, ಜಲಹರಿ

ಅರವಿಂದ ಕಾವ್ಯಲಹರಿ[೭೯]

ನಿದ್ದೆ ತಿಳಿದು ಏಳುವುದು, ತ್ಯಾಗ-ತಿಳಿವುಗಳಲ್ಲಿ ಸುಖ ಕಾಣುವುದು, ದೇವನ ಚೆಲುವನ್ನು ನಿಸರ್ಗದಲ್ಲಿ ಅರಳಿಸುವುದು, ದಿವ್ಯವನ್ನು ಕಾಣಲೆಂದು ಕಣ್ಣು ತೆರೆಯುವುದು ಬೇಂದ್ರೆಯ ಕೆಲವು ನಿಸರ್ಗ ಕವಿತೆಗಳ ಜೀವಾಳವಾಗಿದೆ. 'ಅರಳು-ಮರಳು', 'ಬಾಲಬೋಧೆ', 'ನಾಕುತಂತಿ' ಸಂಕಲನಗಳಲ್ಲಿ ಈ ಅಭಿವ್ಯಕ್ತಿಯ ಕಡೆಗೆಯೇ ಅವರು ಹೆಚ್ಚು ಗಮನ ಹರಿಸಿದರು. ಅರವಿಂದರು ತೋರಿಸಿಕೊಟ್ಟ ಅನುಭಾವದ ನೀರು ತುಂಬಲೆಂದು ಮೆಟ್ಟಿಲುಗಳನ್ನಿಳಿಯುತ್ತ ಬಾವಿಯ ಆಳಕ್ಕೆ ಹೋದರು. ಅರಿವಿನ ನದಿಯ ದಂಡೆಯಲ್ಲಿ ಕುಳಿತು ಸಹೃದಯರಿಗೆ ನೀರು ಹಣಿಸುವಾಗ ಹತ್ತಿರವಾಗುತ್ತಾರೆ. ಆಳ ಹುಡುಕಿ ದೂರ ದೂರ ಹೋದಂತೆ ಅಸ್ಪಷ್ಟವಾಗಿ ನಿಲುಕದೆ ಉಳಿಯುವ ಸಂಭವವೂ ಇಲ್ಲದಿಲ್ಲ. ಬೆಳಕಿನ ಮಹಾಪೂರದಲ್ಲಿ ನೆಲ ತಪ್ಪನೆ ತೋಯಲೆಂದು ಬೇಂದ್ರೆ ಬಯಸಿದರು. ಅವರ ನಿಸರ್ಗ ಪ್ರತಿಮೆಗಳೆಲ್ಲ ಆ ಅರ್ಥದಿಂದಲೆ ತುಂಬಿವೆ.

ಮರಗೂಳಿ ಮಣ್ಣಿನಲಿ ಬೆಳಕು-ನೆರೆ ತುಂಬಿತ್ತು

ಕುಡಿಹೊತ್ತಿ ಮಡಿ-ಮೂರ್ತಿ ಮಾಡಲಾಯ್ತು

ಧ್ಯಾನ ದೀಪಿತ ಕಿರಣ ನಮ್ಮ ನೆಲ ಮುಟ್ಟಿತ್ತು

ದೇವ-ಜೀವರ ಮನಕೆ ಆಯ್ತು ಸೇತು

ಹಸಿವೆಯಾಗಿ ಬಂದಿತ್ತು ಬಸಿರಿನಲಿ ಹಸಿದು ವಿಶ್ವದಗಲ

ಬಯಕೆಯಾಗಿ ಬೀಸಿತ್ತು ಒಲವು ತಾನಾಗಿ ಪ್ರಾಣನನಿಲ

ಬ್ರಹ್ಮಕರ್ಮ ಪ್ರತಿಸರ್ಗದಲ್ಲಿ ಬರೆ ತಾ ವಿಸರ್ಗವೆನಿಸಿ

ನೆಲದ ಒಲವಿನಲಿ ಚೆಲುವೆ ಹೂತಿತ್ತು ತಾ ನಿಸರ್ಗವೆನಿಸಿ[೮೦]

ಸದ್ಭಾವ, ಓಂಕಾರ, ಮಣ್ಣಿನ ಶಕ್ತಿ ಹಾಗೂ ದಿವ್ಯವಾಗಿರುವ ಚೇತನಗಳ ಅನುಭೂತಿಯನ್ನು ದೊರಕಿಸುವಲ್ಲಿ ಬೇಂದ್ರೆ ಸಫಲವಾಗಿರುವುದನ್ನು ಕನ್ನಡ ವಿಮರ್ಶೆ ಗುರುತಿಸಿದೆ. ಬೇಂದ್ರೆ ಕಾವ್ಯದಲ್ಲಿ ಈ ಲೋಕದ ತುತ್ತೂರಿಯೂ

ಇದೆ. ಆ ಲೋಕದ ದಿವ್ಯತೂರ್ಯವೂ ಇದೆ. ಮನುಷ್ಯನ ಮತ್ತು ದೇವನ ಮನಸ್ಸುಗಳ ನಡುವೆ ಸೇತುವೆಯನ್ನು ಕಟ್ಟುವ ಕೆಲಸ ಅವರ ಕವಿತೆಗಳಲ್ಲಿ ಒಂದಲ್ಲ ಒಂದು ರೀತಿಯಿಂದ ನಡೆದೇ ಇದೆ. ಎಷ್ಟೊಂದು ಆಹ್ಲಾದದಿಂದ, ಎಷ್ಟೊಂದು ನವೋಲ್ಲಾಸ ಹರ್ಷದಿಂದ ಅವರು ಅದನ್ನು ಸಾಧಿಸುತ್ತಾರೆನ್ನುವುದಕ್ಕೆ ನೂರಾರು ಉದಾಹರಣೆಗಳನ್ನು ಅವರ ನಿಸರ್ಗದ ಅಭಿವ್ಯಕ್ತಿಯಲ್ಲಿಯೇ ನೋಡಬಹುದು. 'ಬಾರೋ ಸಾಧನಕೇರಿಗೆ' ಕವಿತೆಯಿಂದ 'ಶ್ರಾವಣದ ವೈಭವ' ತನಕ ; ಕಾಡಿಸುವ ಆಷಾಢದಿಂದ ಹುಬ್ಬಿ ಮಳೆಯ ತನಕ; ಸಣ್ಣ ಸೋಮವಾರದ ಸೋಮೇಶ್ವರದಿಂದ ಕಂಟದ ಅಂಚಿನವರೆಗೂ ಭಕ್ತಿ ತುಂಬಿರುವ ಹಾಲಗೇರಿಯ ತನಕ; ಶ್ರಾವಣನ ದಿವ್ಯ ಚಾರಣದ ತನಕ; ಮೊದಲಗಿತ್ತಿ ಹಸಿರುಡುವ ತನಕ ಬೇಂದ್ರೆ ದೊರಕಿಸಿಕೊಳ್ಳುವ ಮತ್ತು ಸಹೃದಯರಿಗೆ ದೊರಕುವಂತೆ ಮಾಡುವ ಲೌಕಿಕ-ಅಲೌಕಿಕ ಅನುಭೂತಿಯು ನಿಸರ್ಗ ಪ್ರೀತಿಯಾಗಿ ಹರಿದಿದೆ. ಆ ತಿಳಿವು ಮತ್ತು ಆ ಅರ್ಥ ಹಲವು ಸ್ತರದಲ್ಲಿ ಹಬ್ಬಿಕೊಂಡಿದೆ. ಕೆಲವೊಮ್ಮೆ ಸರಳವಾಗಿ ಮತ್ತೆ ಕೆಲವು ಸಲ ಸಂಕೀರ್ಣವಾಗಿ ಕಾವ್ಯದ ಹರಿವಿನಲ್ಲಿ ಮಡುಗಟ್ಟಿದೆ.

ವಸಂತನನ್ನು ಕುರಿತು, ಶ್ರಾವಣನನ್ನು ಕುರಿತು ತುಂಬ ತನ್ಮಯವಾಗಿ ಬರೆಯುವ ಬೇಂದ್ರೆ, ಋತುಗಳ ವರ್ಣನೆಯನ್ನು ಮಾಡಲಿಕ್ಕೆಂದೆ ಕವಿತೆಯಲ್ಲಿ ಮುಂದುವರೆಯುವುದಿಲ್ಲ. ತಾವು ಕಾಣುತ್ತಿರುವ ನಿಸರ್ಗದಲ್ಲಿ ದರ್ಶನವೊಂದನ್ನು ತೆರೆದಿಡುತ್ತಾರೆ. ಅಪ್ಪಟ ಕಾವ್ಯವಾಗಿಯೂ, ಉತ್ಕಟ ಜೀವನಾನುಭವವಾಗಿಯೂ ಬೇಂದ್ರೆ ಕವಿತೆ ಪಡೆಯುವ ವ್ಯಾಪ್ತಿ, ವಿಸ್ತಾರಗಳು ತುಂಬ ವಿಶಾಲವಾದವುಗಳೆಂದು ಹೇಳಿದರೆ ಅದು ಬೇಂದ್ರೆ ಹಾಗೂ ಇಡೀ ಕನ್ನಡ ಕಾವ್ಯದ ಪ್ರಶಂಸೆಯಾಗುವುದರಲ್ಲಿ ಸಂದೇಹವಿಲ್ಲ. ಅವರ ಕವಿತೆಯಲ್ಲಿನ ವಸಂತ ವರ್ಷ ವರ್ಷವೂ ಮರಳಿ ಬಂದು ಮನುಷ್ಯನ ಬದುಕಿಗಿರುವ ಸಾವಿನ ಮಿತಿಯನ್ನು ತೋರಿಸುತ್ತದೆ.

ನಿದ್ದೆಗೊಮ್ಮೆ ನಿತ್ಯ ಮರಣ
ಎದ್ದ ಸಲ ನವೀನ ಜನನ
ನಮಗೆ ಏಕೆ ಬಾರದೋ?
ಎಲೆ ಸನತ್ಕುಮಾರದೇವ!
ಸಲೆ ಸಾಹಸಿ ಚಿರಂಜೀವ
ನಿನಗೆ ಲೀಲೆ ಸೇರದೋ?
ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ
ನಮ್ಮನ್ನಷ್ಟೆ ಮರೆತಿದೆ![೨೦]

ಹೊಸ ಜನ್ಮ, ಹೊಸ ಹರೆಯ, ಹೊಸ ಬಾಲ್ಯಗಳನ್ನು ಮತ್ತೆ ಮತ್ತೆ ಪಡೆಯುವ ಪ್ರಕೃತಿಯ ಚಿರಂತನದ ಎದುರು ಮನುಷ್ಯನ ಮಿತಿಗಳು ಕವಿತೆಯಲ್ಲಿ ಪ್ರಾಮುಖ್ಯತೆ ಪಡೆದಿವೆ. ಮನುಷ್ಯನಲ್ಲಿ ಅಂತರ್ಗತವಾಗಿರುವ ಚಿರಂತನದ ಹುಡುಕಾಟ ಹಾಗೂ ಅವನ ಸೃಜನಶೀಲತೆ ಇಲ್ಲಿ ಮರೆಗಿದ್ದರೂ ಚೇತನವನ್ನು ಬಗೆದು ಬಗೆದು ತುಂಬುವ ಭಕ್ತ ಅವರ ಉಳಿದ ಕವಿತೆಗಳಲ್ಲಿ ಪ್ರಕತಿಯೊಂದಿಗೆ ನಡೆದಿದ್ದಾನೆ. ನಿಸರ್ಗದಿಂದ ಮನುಷ್ಯ ಕಲಿಯಬೇಕಾದ ಪಾಠವೆಂದರೆ ಮತ್ತೊಮ್ಮೆ ಹುಟ್ಟಿ ಬಂದಂತಹ ಸಂತೋಷವನ್ನು ಅನುಭವಿಸುವದಾಗಿದೆ. ಮುಂಜಾನೆ ಮತ್ತು ಸಂಜೆ ಪ್ರಕೃತಿ ಚೆಲ್ಲುವ ಕೆಂಬೆಳಕಿನಲ್ಲಿ; ನೆಲಕ್ಕೆ ಬಿದ್ದ ಬೀಜ ಮೊಳೆಯುವಲ್ಲಿ; ಚಳಿಗಾಲದಲ್ಲಿ ಚಿಗುರುಗಟ್ಟುವ ದಾಂಪತ್ಯದಲ್ಲಿ ಋತುಗಾನದ ಅರ್ಥ ಅಡಗಿದೆಯೆಂದು ಬೇಂದ್ರೆ ಹೇಳುತ್ತಾರೆ.

‘ತಿರುತಿರುಗಿಯು ಹೊಸದಾಗಿರಿ’ ಎನುತಿದೆ ಋತುಗಾನ
ಈ ಹಾಡಿಗೆ ಶೃತಿ ಹಿಡಿದಿದೆ ಬ್ರಹ್ಮಾಂಡದ ಮೌನ[೮೨]

ನಂಬಿಕೆಗಳ ಹಾದಿ ಹಲವಾರು ಇದ್ದರೂ ಅವುಗಳನ್ನು ತೊಡಕು ಮಾಡಿಕೊಳ್ಳದೆ ಪ್ರೀತಿಯ ಬುನಾದಿಯನ್ನೆ ಯುಗಾದಿಯನ್ನಾಗಿ ಮಾಡಿಕೊಳ್ಳಬೇಕೆಂಬ ಆಶಯ ಅವರ ‘ಇದು ಯುಗಾದಿ’ ಕವಿತೆಯಲ್ಲಿದೆ.

ಇದು ಯುಗಾದಿ
ಆಗಿರು ಸಂವಾದಿ
ಏಕೆ ವಾದ ಬೀದಿ?
ಸಾದಿ ನಮ್ಮ ಹಾದಿ ತಮ್ಮಾ
ಯಾಕೆ ಕೆಡುವೆ ಕಾದಿ
ನಿನ್ನ ಪಾಡು ನಿನ್ನ ಜಾಡು
ವಿರಸ ನಿನಗನಾದಿ
....
ಆದಿ ಇಲ್ಲ; ಅಂತ್ಯ ಇಲ್ಲ
ಮಧ್ಯೆ ಯಾವ ಹಾದಿ
ಯುಗ ಯುಗಗಳ ವಿರಹದೊಳಿದೆ
ಪ್ರೀತಿಯಾ ಬುನಾದಿ
ನನ್ನು ಸಿರಿಗೆ ನಿನ್ನು ಸಿರನು
ಸಂಗಡಿಸು ಸಮಾಧಿ[೮೩]

ನಮ್ಮ ಸುತ್ತಮುತ್ತಲಿನ ಯುಗಾದಿ ನಮ್ಮ ಎದೆಯಲ್ಲಿಯೂ ಇರಬೇಕೆಂದು ಕವಿ ಅಪೇಕ್ಷಿಸುತ್ತಾನೆ. ವಸಂತ ಬರುವುದು ಎದೆ ಹಿಗ್ಗಿಸುವುದಕ್ಕೆ ಎಂದು ಕವಿಯ ನಂಬುಗೆಯಾಗಿದೆ. 'ಈ ಸಲದ ಸುಗ್ಗಿ' ಎನ್ನುವ ಕವಿತೆಯಲ್ಲಿ ಅದು ಅಭಿವ್ಯಕ್ತಿ ಕಂಡುಕೊಂಡಿದೆ.

ಪ್ರತಿ ವರುಷದ ಹಾಗಲ್ಲವು ಈ ಸಲದೀ ಸುಗ್ಗಿ ।
ಏನರಳಿದೆ ಗಿಡಮರ ಬಳ್ಳಿಗಳೆದೆ ಹಿಗ್ಗಿ
ಎಸಳೆಸಳಿನ ಸಿರಸಲ ಚವುರಿಸುವುದು ಮೈಯನ್ನೆ
ಬೀಸಲು ಮೈ ನವಿರೇರಿದ ನೇರಿಳೆ ನವಕನ್ನೆ[೮೪]

ಯುಗ ಯುಗಗಳಿಂದ ವಸಂತ ಪ್ರತಿ ವರ್ಷವನ್ನು ಹೊಸದೆನ್ನುವಂತೆ ಸೃಷ್ಟಿಸುವುದು ಬೇಂದ್ರೆಯವರಿಗೆ ವಿಸ್ಮಯವಾಗಿದೆ. ನಿಸರ್ಗದಲ್ಲಿನ ಬದಲಾವಣೆಯನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುವ, ಅದನ್ನು ಸವಿಯುವ ಜಾಣ್ಮೆ ಇಲ್ಲಿ ಕಾಣಿಸಿಕೊಳ್ಳುತ್ತದೆ. ವಸಂತದಲ್ಲಿ ಅರಳಿದ ಬೇವಿನ ಹೂವು, ನವಕನ್ನೆಯಂತೆ ಮೈ ನವಿರೇರಿಸಿಕೊಂಡಿರುವ ನೀರಲ ಮರ, ಹಸುರಿನ ಅಂಗಿ ತೊಟ್ಟು ಮುಖವೆತ್ತಿ ನಿಂತಿರುವ ಪಾರಿಜಾತ ಮುಂತಾದವು ಸೃಷ್ಟಿಯ ಸೊಬಗನ್ನು ಬಣ್ಣಿಸುತ್ತಿವೆಯೆಂದು ಬೇಂದ್ರೆ ಹೇಳುತ್ತಾರೆ. ಗಿಡಮರಗಳ ಎಲೆಗಳು ಕೋಲಾಟ ಮಾಡುತ್ತಿರುವಂತೆ; ಹುಲಗಲ ಹೂ ಹುಣಿಸೆಯ ತುಂಬೆಲ್ಲ ವಸಂತ ಕಂಡು ಇಡಿ ಪರಿಸರಕ್ಕೆ ರಂಗವಲ್ಲಿಯನ್ನು ಯಾರೊ ಕೈಯಿಂದ ಬರೆದಿರುವಂತೆ; ಒಲಿದವರ ಒಡನಾಟದಲ್ಲಿ ಹಗಲು ಕೂಡ ಬೆಳದಿಂಗಳು ಅನಿಸುವಂತೆ ಮಧುಮಾಸ ಸೃಷ್ಟಿಯನ್ನು ತಬ್ಬಿದೆಯೆಂದು ಕವಿ ಅನನ್ಯವಾದ ಅಭಿವ್ಯಕ್ತಿ ಕೊಟ್ಟಿದ್ದಾರೆ. ಪಂಪನ ಬನವಾಸಿ ಅಂದು ಅರಳಿದಂತೆ ಇಂದೂ ಅರಳಿದೆಯೆಂದು ಹೇಳುತ್ತಾರೆ. ವಸಂತದ ಶಕ್ತಿ ಕವಿಯೊಬ್ಬ ಹಾಡುವ ಹಾಡಿನಲ್ಲಿಯೂ ಇದ್ದರೆ ಅಚ್ಚರಿ ಪಡಬೇಕಾಗಿಲ್ಲ. 'ನಮನ' ಸಂಕಲನದ 'ಮಧುಮಾಸದ ಕುಣಿತ'[೮೫] ಪದ್ಯ ಸೃಷ್ಟಿಯಲ್ಲಿ ನಡೆಯುವ, ಅರಳುವ, ಹೊಸದಾಗುವ, ಹೂ ಬಿಡುವ ಸೃಜನವನ್ನು ಬೇಂದ್ರೆಯವರು ಇನ್ನಿಲ್ಲದಂತೆ ವರ್ಣಿಸುತ್ತಾರೆ.

ನಾ ಹೇಳುವ ಹಾಡಿನಲ್ಲು
ನೀ ಕೇಳುವ ಹೃದಯದಲ್ಲು
ಒಳಹೊರಗೂ ತಾನೆಲ್ಲೆಲ್ಲು ॥ ಕುಣೀತದದ ಹ್ಯಾಂಗ...॥
ಕುಣಿSತSದ ನೋಡ ಗೆಳತಿ । ಕುಣೀತದ ನೋಡು
ಒನಪಿಲೆ ಮಧುಮಾಸ ಇಲ್ಲಿ । ಕುಣೀತದ ನೋಡು

ವಸಂತನ ಒನಪನ್ನು ಅಷ್ಟೇ ಒನಪಿನಿಂದ ಬೇಂದ್ರೆಯಂತೆ ಚಿತ್ರಿಸಿದವರು ವಿರಳವೆಂದೇ ಹೇಳಬೇಕು. ಮಧುಮಾಸದ ಪ್ರಕೃತಿಗೆ ವೈವಿಧ್ಯಮಯವಾದ ನೂರಾರು ದನಿಗಳಿವೆಯೆಂದು ಕವಿ ತೋರಿಸುತ್ತಾರೆ.

ಏನೋ ವಿಧ! ಏನೋ ಹದ
ಗಾಳಿಗೊಡೆದ ಬುದ್ಬುದ
ಬೆಳಕೆ ಮುದ ಎಂಬ ಮುದ
ಜೀವ ಹೊಮ್ಮಿ ಚಿಮ್ಮಿದ
ನೂರು ಮರ! ನೂರು ಸ್ವರ
ಒಂದೊಂದು ಅತಿ ಮಧುರ
ಬಂಧವಿರದೆ ಬಂಧುರ
ಸ್ವಚ್ಛಂದ-ಸುಂದರ[೮೬]

ಬದುಕಿನ ಸುಖದುಃಖಗಳು, ವಿಷಯ ವೈವಿಧ್ಯಗಳು ಪ್ರಕೃತಿಯ ಬಣ್ಣನೆಯೊಂದಿಗೆ ಅಭಿವ್ಯಕ್ತಿ ಪಡೆಯುತ್ತವೆ. ಬದುಕಿನ ಕಡಲನ್ನು ಈಸಲಿಕ್ಕೆ ತೆಪ್ಪವಾದರೂ ಸರಿ, ತಾರಿಯಾದರೂ ಸರಿ. ಕೈಗಳನ್ನೇ ಹರಗೋಲು ಮಾಡಿ ಆನಂದದ ಹಡಗನ್ನೇರಿ ದಂಡೆ ಮುಟ್ಟುವುದಾಗಬೇಕು ಎನ್ನುವ ಆಶಯ ಅವರ 'ಸಖಿಗೀತ'ದಲ್ಲಿ ಮೂಡಿದೆ. ವೈಯಕ್ತಿಕವೂ, ಸಾರ್ವತ್ರಿಕವೂ ಆಗುವ ದುಃಖ-ದುಮ್ಮಾನ, ಸರಸ-ಸಮ್ಮಾನಗಳ ಉತ್ಕಟತೆಯನ್ನು ಅವರ ದೀರ್ಘ ಕವಿತೆ 'ಸಖಿಗೀತ'ದಲ್ಲಿ ಕಾಣಬಹುದು. ಅಂತಃಪಟದಾಚೆ ಮಾಲೆ ಹಿಡಿದು ನಿಂತಿದ್ದ ವಧುವನ್ನು ವರಿಸಿ ಬಾಳಿನ ನಂಟನ್ನು ಮುನ್ನಡೆಸಿದ ನಾಯಕ ಎಲ್ಲ ಏಳು-ಬೀಳುಗಳನ್ನು ಬಂದಂತೆಯೇ ಸ್ವೀಕರಿಸುತ್ತಾನೆ. ಋತುಗಳ ಏರಿಳಿತದಂತೆ, ಕಾಲಚಕ್ರದಂತೆ ಎಲ್ಲಕ್ಕೂ ಎದೆಯೊಡ್ಡುತ್ತಾನೆ. ಸುಗ್ಗಿ-ಶ್ರಾವಣಗಳು ತರುವ ಸಂಭ್ರಮವನ್ನು, ಮಮತೆಯ ಕುರುಹನ್ನು ನೆನೆಯುತ್ತಾನೆ.

ಸುಗ್ಗಿಯು ಬರುವಾಗ ತರುವುದು ಸಂಗಡ
ಮೂಂದಳಿರ ಮಲ್ಲಿಗೆ ಮೊಗ್ಗುಗಳ
ಅವು ತರುವವು ಗುಂಗಿ ಗುಂಜಾರವ ಏನು
ಕೋಗಿಲೆಯ ಪಂಚಮದಿಂಚರವ[೮೭]

* * *

ಮಲೆನಾಡ ಸೆರಗಿನ ನೆರೆಗಿದ್ದ ಮನೆಯೊಂದು
ಮಮತೆಯ ಕುರುಹಾಗಿ ತಾ ದೊರಕಿತು
ಅಲ್ಲಿ ಸಂಪಿಗೆಯಿತ್ತು ಪಾರಿಜಾತಕವಿತ್ತು
ಮಾವು ಮಲ್ಲಿಗೆಯಿತ್ತು ಮನೆಯಿದಿರು
ಮುಗಿಲ-ಮಲ್ಲಿಗೆಯಿತ್ತು ತೆಂಗಿತ್ತು ಹಲಸಿತ್ತು

ನಿಂಬಿಯ ಇಂಬಿತ್ತು ಎಡೆಎಡೆಗೆ
ಹೊಂಗೆಯ ಸಾಲಿತ್ತು ಕಣ್ಮುಂದೆ ಕೆರೆಯಿತ್ತು
ಗುಡ್ಡದ ನೆರೆಯಿತ್ತು ಅದರಾಚೆಗೆ[೮೮]

ಧಾರವಾಡದ ವರ್ಷಾಕಾಲವನ್ನು, ಗಾಳಿಯ ಹಾರಾಟ-ವಿರಾಟವನ್ನು, ಚಂದನದ ಗಂಧವನ್ನು, ಚೈತ್ರ-ವೈಶಾಖ, ಆಷಾಢ-ಶ್ರಾವಣಗಳನ್ನು ಇನ್ನಿಲ್ಲದಂತೆ ಶಬ್ದಗಳಲ್ಲಿ ಮರುಸೃಷ್ಟಿ ಮಾಡುವ ಬೇಂದ್ರೆ, ಆಧುನಿಕ ಕನ್ನಡ ನಿಸರ್ಗ ಕಾವ್ಯದ ಅಧ್ವರ್ಯರೆಂದೇ ಹೇಳಬೇಕು. ಚಳಿಗಾಲವನ್ನು ಅವರು ವರ್ಣಿಸುವ ರೀತಿ ಅದ್ಭುತವಾಗಿದೆ. ಗಂಡು-ಹೆಣ್ಣಿನ ಪ್ರಣಯಕ್ಕೆ ಸಾಕ್ಷಿಯಾಗಿ ಇಮ್ಮುಖವು ಒಮ್ಮುಖವಾಗಿದೆ.

ಹೊಸ್ತಿಲ ಹುಣ್ಣಿವೆಗೆ ಹೊಸ್ತಿಲ ನಡುಗಿತ್ತು
ಬನದ ಹುಣ್ಣಿವೆಗೆಲ್ಲ ಬನ ನಡುಗಿದೆ
ಮನೆ ನಡುಗಿ ಮನ ನಡುಗಿ 'ಎ ಹುಡುಗ, ಎಲೆ ಹುಡುಗಿ'
ಎನ್ನುವ ಸಲುಗೆಯ ಬೆಸುಗೆ ಬರೆ
ಮೈ ತಾಗಿ ಮನ ಬಾಗಿ, ಒಳಿತಾಗಿ, ಇಂಬಾಗಿ
ನಾವಾಗಿ, ಈ ಮಾಣಗೊಳಗಾಗಿರೆ
ಕೊಡುಕೊಳೆ ಎಂಬುದು ಇಮ್ಮುಖದಲಿ ಕೂಡ
ಒಮ್ಮುಖವೆಂಬಂತೆ ಆಗುತಿದೆ[೮೯]

ನಮ್ಮೊಳಗೆ ಚಳಿ ಹೋಗುವುದನ್ನು, ಕಾಲು ಒಡೆದು ಕೈ ಒಡೆದು ತುಟಿ ಒಡೆದು ಮಾಗಿ ಮೈಯೆಲ್ಲ ಅಪ್ಪುವುದನ್ನು ಬೇಂದ್ರೆ ವರ್ಣಿಸುವ ರೀತಿ ಅಕ್ಷರಶಃ ಪ್ರಣಯದ ವರ್ಣನೆಯಂತಿದೆ.

ಕಾಲ್ಬಿದ್ದು ಕೈ ಹಿಡಿದು ಮುತ್ತಿಟ್ಟು ಮುಗಿಬಿದ್ದು
ಮೈ ಏರಿ ಮೈ ಹೊಕ್ಕು ಮಾಗಿ ಬರೆ
ಮೈಮೈಯ್ಯಡರುವ ಮಾಗಿಯ ಮೈಮೆಯು
ಬೆಳಗು ಮುಸುಕಿನಲ್ಲು ಒಗ್ಗುತಿರೆ
ಮಕರ ಸಂಕ್ರಾಂತಿಗೆ ಮೈ ತುಂಬ ತುಟಿ ತುಂಬ
ಎದೆ ತುಂಬ ಕುಸುರೆಳ್ಳು ಮೂಡುತಿದೆ'[೯೦]

ಪ್ರೇಮಿಗಳ ಎದೆಯಾಳದಲ್ಲಿ ಪ್ರಕೃತಿ ಮೂಡಿಸುತ್ತಿರುವ ಪ್ರೇಮದ ನವಿರಾದ ಚಿತ್ರಣಕ್ಕೆ ಕವಿ ಅಭಿವ್ಯಕ್ತಿ ನೀಡುತ್ತಾನೆ. ಸೀಗೆಹುಣ್ಣಿವೆಯ ಹೊತ್ತಿನ ಚಳಿಯನ್ನು ಬೇಂದ್ರೆ ಮೋಹಕ ಶಬ್ದಗಳಲ್ಲಿ ಹಿಡಿದಿಟ್ಟಿದ್ದಾರೆ. ಹೊಸ್ತ

ಸೇವಂತಿಗೆಯ ಹೆರಳಿನಿಂದ, ಬಿಳಿಯ ಸೇವಂತಿಗೆಯ ಬಳೆಗಳಿಂದ, ನದಿಯ ಉಸಿರಿನಿಂದ ತಯಾರಾಗಿರುವ ಮಂಜಿನ ಸೆರಗಿನಿಂದ ಚಳಿಯಾಕೆ ಬೆಡಗು-ಬಿನ್ನಾಣಗಳ ಹೆಣ್ಣಾಗಿದ್ದಾಳೆ. ಅಪ್ಪಿದ ಅಪ್ಪುಗೆಯನ್ನು ಬಿಡಲಾರದವಳಾಗಿದ್ದಾಳೆ.

ಉಸುರುಸುರಿಗೆ ಮರುಕ
ಹೆಜ್ಜೆ ಹೆಜ್ಜೆಗೆ ಬೆಡಗು
ಮೆಲ್ಲಗೆ ಮುಂಗೈ ಹಿಡಿವಾಕೆ
ಯಾವ ಜಾತಿಯ ಹೆಣ್ಣೊ
ಹಾವಭಾವವೆ ಬೇರೆ
ಅಪ್ಪಿದ ಅಪ್ಪಿಗೆ ಬಿಡದಾಕೆ[೯೦]

ಮಾಗಿ ಕಾಲದ ಈ ಶೃಂಗಾರದ ಹೆಣ್ಣು ಒಮ್ಮೊಮ್ಮೆ ಭೂಮಿಯಲ್ಲಿ ಬೆಳೆದು ನಿಂತ ಬತ್ತಿದ ತೆನೆಗಳಿಗೆ ಮಾರಿಯಾಗುವ ಸಂದರ್ಭಗಳನ್ನು ಕೂಡ ಬೇಂದ್ರೆ ವ್ಯಕ್ತಪಡಿಸಿ ಪ್ರಕೃತಿ ತರುವ ವಿಕೋಪಗಳನ್ನು ಚಿತ್ರಿಸುತ್ತಾರೆ. ಕೈಗೆ ಬಂದಿರುವ ಭತ್ತವನ್ನು ಅತಿಯಾದ ಚಳಿಯಿಂದ ಹಾಳು ಮಾಡದೆ ಹಾಲು ತುಂಬಿಕೊಂಡಿರುವ ತೆನೆಗಳು ರೈತನ ಪಾಲಿಗೆ ದಕ್ಕಲೆನ್ನುತ್ತಾರೆ.

ತೆನೆಹಾಲು ದಕ್ಕಲಿ
ಕಕ್ಕಿಸಬೇಡದನು
ನಿನ್ನ ನಂಜಿನ ಸೆರಗ ಬೀಸಾಡಿ[೨]

ಅನ್ನದಾತನಿಗೆ ಪೈರು ದಕ್ಕುವುದು, ತಿಂದ ಕೂಳು ದಕ್ಕುವುದು, ತಂದೆ-ತಾಯಿಗೆ ಬೆಳೆದು ನಿಂತ ಮಗ ದಕ್ಕುವುದು, ಒಲವಿನ ಹೆಣ್ಣು ದಕ್ಕುವುದು ಬದುಕಿನಲ್ಲಿ ಮುಖ್ಯ ಸಂಗತಿಗಳಾಗಿವೆ. ದಕ್ಕದೆ ಹೋದಾಗ ಆಗುವ ದುರಂತಗಳು, ಪಟ್ಟ ಪಾಡುಗಳು, ಅನುಭವಿಸುವ ನೋವುಗಳು, ಹೇಳಲದೃಶವಾಗುವ ಸಂಭವನೀಯತೆಯನ್ನು ಬೇಂದ್ರೆ ಕಟ್ಟಿಕೊಡುತ್ತಾರೆ. ಬಾಳಿನಲ್ಲಿ ಕಷ್ಟವೆ ಕರುವಿಡುತ್ತ ಬಂದುದನ್ನು ಬೇಂದ್ರೆ ಕಂಡವರಾಗಿದ್ದರು.

ಬಿತ್ತುವ ತತ್ತಿ ನೋಡಿ ರೈತ ಬಿತ್ತುವಂತೆ, ಉತ್ತುವಂತೆ ಋತುಗಳ ಸಾಮರಸ್ಯದಲ್ಲಿ ಮನುಷ್ಯ ಬದುಕಿಗೆ ಉದ್ದೀಪನ ಪಡೆಯಬೇಕೆಂದು ಬೇಂದ್ರೆ ಸೂಚಿಸುತ್ತಾರೆ. ಪ್ರಕೃತಿಯಲ್ಲಿ ಮನುಷ್ಯನಿಗೆ ಬೇಕಾದ ರಾಗ ಅನುರಾಗಗಳು ಸಮ್ಮಿಳಿತಗೊಂಡು ಜೀವ ಜೀವದ ಜೊತೆ ಹೆಜ್ಜೆ ಹಾಕುತ್ತಿವೆ.

ಋತುಗತಿಯ ತಲೆಯಲ್ಲಿ ಹದಬೆದೆ ಕಂಡುಂಡು
ಹವಣಾಗಿ ನಡೆದಿತ್ತು ಬಾಳುವೆಯು[೩]

ಚೈತನ್ಯದ ಮೂಲವೊಂದು ಜೀವನವನ್ನು, ಜೀವನಕ್ರಮವನ್ನು ನಿರ್ದೇಶಿಸುತ್ತಿದೆಯೆಂದು ಕವಿ ಹೇಳುತ್ತಾನೆ.

ಯಾರಿಂದೊ ಚಲಿಸುವ ಪ್ರಾಣದ ಸೂತ್ರವು
ಪುರುಷ-ಪ್ರಕೃತಿಗಳನು ಕುಣಿಸುತಿದೆ
ಘನರಸ ಆನಂದ; ಆನಂದದ್ರವ ರಸ
ಯಾವದೊ ಕಾವಿಗೆ ಆಗುತಿದೆ[೯೪]

ಮಾನವನ ಎದೆಯಲ್ಲಿನ ಪ್ರಕೃತಿ ಆಪ್ತ ಒಳದನಿಗೆ ಕಿವಿಗೊಡುವುದನ್ನು ಬೇಂದ್ರೆ ಚಿತ್ರಿಸುತ್ತಾರೆ. ಆ ದನಿ ಸಖಿಯದಾಗಿರಬಹುದು. ಮಾತು ಹಾಗೂ ಮೌನದ ನಡುವೆ ಸಂಬಂಧ ಹುಟ್ಟು ಹಾಕುವದಾಗಿರಬಹುದು. ನೀರಿಗೂ, ಕಲ್ಲಿಗೂ ಜೊತೆಯನ್ನು ಏರ್ಪಡಿಸುವಂತಹದಾಗಿರಬಹುದು.

ಒಳಗಿದ್ದ ಪ್ರಕೃತಿಗೆ ಒಳದನಿಯೊಂದಾಗ
ಅಂತರ್ಮುಖವಾಗಿ ಕರೆಯುವುದೇ[೯೫]

ನಿಸರ್ಗದ ದನಿಗೆ ಅವರ ಅಂತರ್ಯದ ದನಿ ಓಗೊಟ್ಟ ಕಾರಣದಿಂದ ಕಾವ್ಯದ ಬುತ್ತಿಯನ್ನು ಅವರು ಭಕ್ತಿಯಿಂದ ಉಣ್ಣುವಂತಾಯಿತು. ಬೆಳಕಿನ ಮಾಧ್ಯಮದ ಮೂಲಕ ಬೆಳಕನ್ನು ನೋಡಿ ಆ ಹಿಗ್ಗನ್ನು ಬೆಳಕು ಪಸರಿಸುವ ರೀತಿಯಿಂದಲೆ ವರ್ಣಿಸುವ ಕಲೆಯನ್ನು ಅವರು ಸಾಧಿಸಿಕೊಂಡರು. ಬೇಂದ್ರೆಯವರು ಅನುವಾದಿಸಿರುವ ಮಹಾರಾಷ್ಟ್ರದ ಸಂತ ಕವಿ ಜ್ಞಾನೇಶ್ವರನ 'ಚಾಂಗದೇವ ಪಾಸಷ್ಟಿ' ಹಾಗೂ ಕಬೀರನ 'ವಚನಾವಳಿ' ಕೃತಿಗಳು ಕನ್ನಡ ನೆಲದ ಭಕ್ತಿಯ ನೀರಿನಿಂದ ಪ್ರೋಕ್ಷಿಸಲ್ಪಟ್ಟಿವೆಯೆಂದು ಹೇಳಬಹುದು.

೧. ಮನವು ಪರ್ವತವಾಗಿತ್ತು. ಅದರಿಂದಾಗಿ ನಾನು ಕಷ್ಟ ಹೊಂದಿದೆ. ಶಬ್ದದ ಚಾಣೆಯಿಂದ ಭೇದಿಸಿದೆ. ಕಾಂಚನದ ಖಣಿಯೇ ಹೊರಟಿತು.[೯೬]

೨. ಮನಸ್ಸು ಪಕ್ಷಿಯಾಯಿತು. ಆಕಾಶಕ್ಕೆ ಹಾರಿ ಹೋಯಿತು. ಮೇಲಿನಿಂದ ಬಿದ್ದಿತು ಮಾಯೆಯ ಬಳಿಯಲ್ಲಿ.[೯೭]

೩. ಕುಂಭದಲ್ಲಿ ಜಲವು ಬಂಧಿತವಾಗಿರುವುದು. ಜಲವಿಲ್ಲದಿದ್ದರೆ ಅದು ಕುಂಭವಾಗದು. ಜ್ಞಾನವು ಮನದಲ್ಲಿ ಬಂಧಿತವಾಗಿರುವುದು. ಜ್ಞಾನವಿಲ್ಲದಿದ್ದರೆ ಅದು ಮನವಾಗದು. ನೀರಿಲ್ಲದೆ ಕೊಡವಿಲ್ಲ. ಜ್ಞಾನವಿಲ್ಲದೆ ಮನವಿಲ್ಲ.[೯೮]

೪. ನಗ್ನವಾಗಿದ್ದುಕೊಂಡು ಬಗಲಲ್ಲಿ ಚರ್ಮ ಸುತ್ತಿ ಹಿಡಿದುಕೊಂಡು, ಕಟ್ಟಿಕೊಂಡು ತಿರುಗುತ್ತಾರೆ ಸಾಧುಗಳಂತೆ; ಆದರೆ ಆತ್ಮರಾಮನನ್ನೇ ಗುರುತಿಸರು. ನಗ್ನವಾಗಿ ತಿರುಗುವದರಿಂದ ಯೋಗವಾಗುತ್ತಿದ್ದರೆ ವನದ ಮೃಗಕ್ಕೂ ಮುಕ್ತಿಯಾಗಬಹುದಿತ್ತು.[೯೯]

ಮನಸ್ಸನ್ನು ನಿಗ್ರಹಿಸುವ, ತನ್ನನ್ನು ತಾನು ಅರಿಯುವ ಹಾದಿಯೆ ಭಕ್ತಿಯ ಹಾದಿಯೆಂದು ದೇಶ ರಾಜ್ಯಗಳ ಸಂತರ ಸ್ವಂತ ಅನುಭವವಾಗಿದೆಯೆಂಬುದನ್ನು ಬೇಂದ್ರೆ ಸೂಚ್ಯವಾಗಿ ಹೇಳುತ್ತಾರೆ. 'ಜೀವವು ಹೋಗುವುದು

ಎಂಬುದನ್ನು ನಾವು ಬಲ್ಲೆವು. ಐದು ತತ್ವಗಳಿಂದ ಮಾಡಿದ ಈ ಪಂಜರದಲ್ಲಿ ಇರುವ ವಸ್ತು ಪರಕೀಯವಾದದ್ದು. ಅದು ಬರುವುದನ್ನು ಹೋಗುವುದನ್ನು ಯಾರೂ ನೋಡಲಿಲ್ಲ. ನೀರಿಲ್ಲದೆ ಮುಳುಗಿಹೋಯಿತು. ರಾಜನು ಹೋಗುವ, ರಾಣಿಯೂ ಹೋಗುವಳು, ಅಭಿಮಾನಿಗಳೂ ಹೋಗುವರು. ಯೋಗ ಮಾಡುವ ಯೋಗಿಗಳೂ ಹೋಗುವರು. ಕಥೆ ಹೇಳುವ ಕೇಳುವ ಜ್ಞಾನಿಗಳೂ ಹೋಗುವರು. ಪಾಪ-ಪುಣ್ಯದ ಸಂತೆ ನೆರೆದಿದೆ. ಧರ್ಮದಂಡವನ್ನು ಹಿಡಿದ ದ್ವಾರಪಾಲನು ನಿಂತಿದ್ದಾನೆ. ಐವರು ಸಖಿಯರು ಜತೆಗೂಡಿ ನೋಡಲು ಬಂದರು. ಅವರು ಒಬ್ಬರಿಗಿಂತ ಒಬ್ಬರು ಬುದ್ಧಿವಂತೆಯರು. ಚಂದ್ರನೂ ಹೋಗುವನು. ಸೂರ್ಯನೂ ಹೋಗುವನು. ಗಾಳಿಯೂ ಹೋಗುವುದು. ನೀರೂ ಹೋಗುವದು. ಯಾವ ಭಕ್ತನ ಮತಿಯು ಸ್ಥಿರವಾಗಿರುವುದೋ ಅವನು ಮಾತ್ರ ಹೋಗುವುದಿಲ್ಲ ಎಂದು ಕಬೀರನು ಹೇಳುತ್ತಾನೆ.'[೧೦೦]

ಭೌತಿಕವಾದ ಜಗತ್ತು, ಭೌತಿಕವಾದ ಶರೀರ ಒಂದು ದಿನ ಬಿದ್ದು ಹೋಗುವವಾದ್ದರಿಂದ ಚೈತನ್ಯ ಸ್ವರೂಪನಲ್ಲಿಯ ಭಕ್ತಿ ಮಾತ್ರ ಶಾಶ್ವತವಾದುದೆನ್ನುವ ಸಂತರ, ಅನುಭಾವಿಕರ ಪ್ರಭಾವ ಒಂದಲ್ಲ ಒಂದು ರೀತಿಯಲ್ಲಿ ಬೇಂದ್ರೆಯವರ ಮೇಲಾಯಿತು. ಹಾಗಾಗಿಯೆ ಅವರು ಬದುಕನ್ನು ಉತ್ಕಟವಾಗಿ ಪ್ರೀತಿಸಿದಂತೆಯೇ ನಿರ್ಮೋಹಿಯಾಗಿರಬಲ್ಲ ಶಕ್ತಿಯನ್ನೂ ಪಡೆದರು. ನಿಜಜೀವನದ ವೈಯಕ್ತಿಕ ದುಃಖಗಳನ್ನು, ಬಡತನವನ್ನು, ಮಕ್ಕಳ ಮರಣವನ್ನು ಗೆದ್ದು ನಿಂತರು. ಮೈ ಕವಚವನ್ನು ಕಳಚಿಡುವಂತೆ ತನ್ನ ದೇಹವನ್ನು ಕಳಚಿಟ್ಟು ಕದಳಿಯಲ್ಲಿ ಕಾಣದಾದ ಅಲ್ಲಮಪ್ರಭುವೆಂಬ ಜ್ಯೋತಿಯನ್ನು ಬೇಂದ್ರೆಯವರಿಗೆ ಎಷ್ಟು ಬಣ್ಣಿಸಿದರೂ ಕಡಿಮೆಯೆ ಅನಿಸುತ್ತದೆ. ಮನ ನಿರ್ಮಲವಾಗಿದ್ದರೆ ಎಲ್ಲವನ್ನೂ ಗೆಲ್ಲಬಹುದು ಎನ್ನುವ ಪ್ರಭುವಿನ ಮಾತನ್ನು ನೆನಪಿಸುತ್ತಾರೆ. 'ಪ್ರಭುದೇವರ ಪ್ರತಿಯೊಂದು ಮಾತಿನಲ್ಲಿಯೂ ನಾವು ಜ್ಯೋತಿಯನ್ನು ಕಾಣಬಹುದು. ಜ್ಯೋತಿಯೆಂದರೆ ಮಾರ್ಗದರ್ಶಕ ಶಕ್ತಿ. ಇದು ವಿಜ್ಞಾನ ಮಾರ್ಗ!'

ಕಾಯ ಜೀವವೆಂಬ ಸೂತಕ ಮನ ನಿರ್ಮಲವಾದಲ್ಲಿಯೇ ಅಳಿಯಿತ್ತು
ಗುಹೇಶ್ವರನೆಂಬ ಲಿಂಗವನರಿಯಬೇಕಾದರೆ
ನಿನ್ನೊಳಗೆ ನೀನು ತಿಳಿದು ನೋಡಾ ಸಿದ್ಧರಾಮಯ್ಯ[೧೦೧]

ತಿಳಿಯದವನಿಗೆ ಸ್ಪರ್ಶಮಣಿಯು ಸಾದಾ ಕಲ್ಲಿನಂತೆ ಕಾಣುವಂತೆ ಅಲೌಕಿಕದ ಮಹತ್ವ ಒಮ್ಮೆಲೆ ತಿಳಿಯಲಾರದು.

ದೇವರಿದ್ದಾನೆಯೆ ಎಂದು ಬೆನ್ನು ಹತ್ತಿ ಅವನ ದರ್ಶನಕ್ಕೆ ಪೀಡಿಸುವದರಲ್ಲಿ ಭಕ್ತಿಯ ಲವಲೇಶವೂ ಇಲ್ಲವೆಂದು ಸಂತಕವಿ ಜ್ಞಾನದೇವ ಹೇಳುವುದನ್ನು ಬೇಂದ್ರೆ ಭಾವಾನುವಾದ ಮಾಡಿದ 'ಚಾಂಗದೇವ ಪಾಸಷ್ಟಿ' ಯಿಂದ ತಿಳಿಯಬಹುದು. ಆ ಕವಿತೆಯ ಭಾವ ಸಂದರ್ಭವನ್ನು ಬೇಂದ್ರೆ ಸೂಚಿಸಿರುವುದು ಮಹತ್ವದ್ದಾಗಿದೆ: 'ಚಾಂಗದೇವ ಪಾಸಷ್ಟಿ ಮಹಾರಾಷ್ಟ್ರ ಸಂತಕವಿ ಶ್ರೀ ಜ್ಞಾನದೇವನ ಒಂದು ಸಂಪೂರ್ಣ ಕೃತಿಯ ಜೀವ ಭಾವಾನುವಾದ. ಚಾಂಗದೇವ

೮೦೦ ವರ್ಷ ಬಾಳಿದ ವೃದ್ಧಯೋಗಿ. ಜ್ಞಾನದೇವನಿಗೆ ಆಶೀರ್ವಾದ ಬರೆಯಬೇಕೋ? ನಮಸ್ಕಾರ ಬರೆಯಬೇಕೋ? ಎಂಬ ಇತಿಮಿತಿಯಲ್ಲಿ ಏನೂ ಬರೆಯದೆ ಬಿಳಿ ಹಾಳೆಯನ್ನ ಕಾಗದವೆಂದು ಕಳುಹಿದ್ದ ಚಾಂಗದೇವ. ಆತನ ಹೃದಯದ ಅಪೇಕ್ಷೆಗೆ ಜ್ಞಾನದೇವ ನೀಡಿದ ಉತ್ತರ ೬೫ ಪಾಸಷ್ಟ 'ಓವಿ'ಗಳಲ್ಲಿದೆ.'

ನಿನ್ನ ನಾನು ಕಾಣುವದೆ ಎಂದು ನೆನೆ-
ದಾಗ ಕಂಡೆ ನನ್ನ
ದರ್ಶನಕೆ ಹಠಮಾಡಿ ನಾನು ಕಳ-
ಕೊಳ್ಳಬೇಕೆ ನಿನ್ನ?
ಗೆರೆ ಹೊಡೆದು ಹೇಗೆ ಕೊರೆದಿಡಲಿ ನಿನ್ನ
ಇದಕೆಲ್ಲಿ ಯಾವ ಮೇರೆ
ಆ ಮಾತುಗೀತು ಕಲ್ಪಿಸುವದೆಂತು?
ನೀ ಬೇರೆ? ನಾನು ಬೇರೆ?
ಯಾರೆ ಕನ್ನಡಿಯ ಕಂಡರೇನು? ಕಾ-
ಣುವುದು ತನ್ನ ತಾನು
ಇದನ್ನೋದಿ ಮೋದಿಸದರಾರು? ಬಾನ್
ತುಂಬ ಒಂದೆ ಭಾನು'[೧೦೨]

೬.೫ ಯಾ ಬುದ್ಧನು ಒಳಗಿದ್ದನೊ :

ಪ್ರಕೃತಿಯ ಮಣ್ಣು, ಗಾಳಿ, ಬೆಳಕು, ನೀರು, ಗಿಡ, ಮರ, ಸಸಿ, ಹೂವು, ಗೊನೆಗಳನ್ನು ಅಭಿವ್ಯಕ್ತಿಯ ಕ್ರಮದಲ್ಲಿ ಜೋಡಿಸುತ್ತ ಅರಳಿದ ಹೂವು ಭೂಮಿಗೆ ಮಣಿಯುವುದನ್ನು, ಗೊನೆಬಿಟ್ಟ ಬಾಳೆ ಅರ್ಥಪೂರ್ಣ ಅಸ್ತಿತ್ವ ಮುಗಿಸಿ ನೆಲಕ್ಕೆ ಒರಗುವುದನ್ನು ಬೇಂದ್ರೆ ಚಿತ್ರಿಸುತ್ತಾರೆ. ನೆನಪನ್ನು, ಸ್ಮಾರಕವನ್ನು ಬಿಟ್ಟು ತೆರಳುವ ಬಾಳೆಯ ಸಾವಿನೊಳಗೆ ಬೆಲೆ ಕಟ್ಟಲಾಗದ ಬಾಳಿನ ಅರ್ಥಗಳಿವೆಯೆಂದು ಅವರು ತೋರಿಸಿಕೊಡುತ್ತಾರೆ. ದಟ್ಟವಾದ ದೈವಿಕ ಅನುಭೂತಿಯ ಛಾಯೆ ಅವರ 'ಬಾಳೆ', 'ಕುದುರಿಯವರ ಕಿವಿಮಾತು', 'ಸಣ್ಣ ಸೋಮವಾರ', 'ಸ್ವರೂಪ-ದೀಪ', 'ಜೋಗಿ', 'ನಮ್ಮ ತಾಯಿ ಮಾಹೂರಗಡದಾಕಿ', 'ಪರಾಕಿ' ಮುಂತಾದ ಕವಿತೆಗಳಲ್ಲಿ ಹರಡಿಕೊಂಡಿದೆ. ನಿಸರ್ಗ ರೂಪಕದ ಭಾಷೆಯಲ್ಲಿ ಮಾತನಾಡುತ್ತ ನಿಸರ್ಗವನ್ನು ಸೂರೆಗೊಳ್ಳುತ್ತ ಅವರು ಬರೆದಿರುವ ನೂರಾರು ಕವಿತೆಗಳನ್ನು ನಾವು ನೋಡಿದ್ದೇವೆ. ವಿಸ್ಮಯದಿಂದ ಅವು ತೆರೆದುಕೊಳ್ಳುವ, ಸಹೃದಯರನ್ನು ಒಳಗೊಳ್ಳುವ ಬಗೆಯನ್ನು ಕಂಡಿದ್ದೇವೆ. ತನ್ಮಯಗೊಳ್ಳುವ, ತಲ್ಲೀನಗೊಳ್ಳುವ, ಜೀವ ಜಪ್ಪಿಸುವ ಬೇಂದ್ರೆ ನಿಸರ್ಗ ಗೀತೆಗಳಲ್ಲಿ ಲೌಕಿಕ ವ್ಯಾಪಾರದಿಂದ ಹಿಡಿದು ಮುಗಿಲಿನ ಮಾತಿಗೆ ಪ್ರತಿಸ್ಪಂದಿಸಿದ ಉದಾಹರಣೆಗಳು ಸಾಕಷ್ಟಿವೆ. ಭೂಮಿ, ಬೆಳಕು,

ಮುಗಿಲು, ಋತುಗಳು ಬೇಂದ್ರೆ ಶಬ್ದಜಾಲದಲ್ಲಿ ತಮ್ಮ ಅರ್ಥಗಳನ್ನು ವಿಸ್ತರಿಸಿಕೊಳ್ಳುತ್ತ ಸಾಗಿರುವುದನ್ನು ಇಲ್ಲಿಯವರೆಗಿನ ವಿಶ್ಲೇಷಣೆಯಲ್ಲಿ ಕಾಣಬಹುದಾಗಿದೆ. ಅಲೌಕಿಕ ವ್ಯಾಪಾರದ ನಂಟನ್ನು ಕೂಡ ಅವು ಜತನದಿಂದ ಕಾಪಾಡಿಕೊಂಡ ಬಗೆಯನ್ನು ನೋಡಿದ್ದಾಗಿದೆ. ಶ್ರಾವಣದ ಪದ್ಯಗಳು, 'ತುಂಬಿತ್ತು ಹಾಲಗೇರಿ', 'ಬೆಳಗು' ಮುಂತಾದ ಪದ್ಯಗಳಲ್ಲಿ ಅನುಭಾವದ ಕಿರಣಗಳು ಮೆಲ್ಲನೆ ಸೋಕುವ ಪರಿಯಿದ್ದರೆ 'ಜೋಗಿ', 'ಸ್ವರೂಪದೀಪ', 'ಸಣ್ಣಸೋಮವಾರ' ಮುಂತಾದ ಪದ್ಯಗಳು ದಟ್ಟವಾದ ಅನುಭಾವದ ಮಳೆಯ ಸೆಳಕುಗಳಿಂದ ಓದುಗರನ್ನು ತೋಯಿಸುತ್ತವೆ. ಧಾರವಾಡದ ನಿಸರ್ಗ ವಿವರಗಳನ್ನು ಕಣ್ತುಂಬ ತುಂಬಿಕೊಳ್ಳುತ್ತಿರುವಾಗ, ಪ್ರಕೃತಿಯ ರುದ್ರರಮಣೀಯತೆಗೆ- ಭಯಾನಕತೆಗೆ ಬೆಚ್ಚುವಾಗ ಅಲೌಕಿಕತೆಯ ವಿವರಗಳು ಓದುಗನನ್ನು ಈಡು ಮಾಡಿಕೊಳ್ಳುವ ಪರಿ ಕನ್ನಡ ಕಾವ್ಯದಲ್ಲಿಯೆ ವಿಶಿಷ್ಟವಾಗಿದೆ. ಹಾಗಾಗಿಯೇ ಬೇಂದ್ರೆಯವರ 'ಜೋಗಿ' ಶತಮಾನದ ಕವಿತೆಯೆಂದು ವಿಮರ್ಶಕರಿಂದ ಮೆಚ್ಚುಗೆಗೆ ಪಾತ್ರವಾಗಿದೆ. ನೂರಾರು ಕಾವ್ಯಾಭ್ಯಾಸಿಗಳಿಂದ ವಿಶ್ಲೇಷಣೆಗೆ ಒಳಪಟ್ಟಿದೆ. ಅದು ಸ್ಫುರಿಸುವ ಅರ್ಥಗಳಿಗೆ ಸಾರಸ್ವತಲೋಕ ಬೆರಗುಪಟ್ಟಿದೆ.

ಅಲೌಕಿಕ ಸಂಗತಿಗಳಿಂದ ಆಂತರ್ಯವನ್ನು ರೂಪಿಸಿಕೊಳ್ಳಬೇಕೆನ್ನುವ ಮತ್ತು ಅಸಾಮಾನ್ಯವಾದುದನ್ನು ಸಾಧಿಸಬೇಕೆನ್ನುವ ಹಂಬಲ ಹೊತ್ತ ವ್ಯಕ್ತಿ ತನಗೆ ಎದುರಾಗುವ ಸಂಕಷ್ಟಗಳಿಂದ ಬಿಡಿಸಿಕೊಳ್ಳುವ ಹಂತವನ್ನು ವಿವರಿಸುವ ಪ್ರಯತ್ನವನ್ನು 'ಜೋಗಿ'[೧೧೩] ಕವಿತೆ ಮಾಡುತ್ತದೆ. ಅಪ್ಪಟ ಕಾವ್ಯ ಪ್ರತಿಭೆಯ ಉದಾಹರಣೆಯಾಗಿದ್ದುಕೊಂಡೂ ಅನುಭಾವದಂತಹ ವಸ್ತುವನ್ನು ಅದು ನಿರ್ವಹಿಸಿರುವ ರೀತಿಗೆ ಸಹೃದಯ ವಿಸ್ಮಯಕ್ಕೊಳಗಾಗುವುದು ಸಹಜವಾಗಿದೆ. ಹಲವಾರು ಅರ್ಥಸಾಧ್ಯತೆಗಳನ್ನು ಒಳಗೊಂಡಿರುವ ಕಾರಣದಿಂದ ಜೋಗಿ ಪ್ರಕಟವಾದ ಹಲವು ದಶಕಗಳಿಂದಲೂ ಸಾಕಷ್ಟು ವಿಶ್ಲೇಷಣೆಗೆ ಒಳಪಟ್ಟಿದೆ. ಪ್ರತಿಯೊಬ್ಬ ಓದುಗನಿಗೂ, ಕೇಳುಗನಿಗೂ ತನ್ನ ನಾದಮಯತೆಯಿಂದ, ರಹಸ್ಯಮಯತೆಯಿಂದ, ಭಕ್ತಿಯ ದಾರಿಗೆಳೆದುಕೊಳ್ಳುವ ಅಂಶಗಳಿಂದ ಅದು ಎದೆಗೆ ಹತ್ತಿರವಾಗುತ್ತದೆ.

ಬದುಕಿನಲ್ಲಿ ಮತ್ತೆ ಮತ್ತೆ ಸೆಳೆಯುವ, ಯಾವಾಗಲೂ ಕೂಗೇ ಕೂಗುವ ವಿಷಯವೆಂಬ ಆಕರ್ಷಣೆಯನ್ನು ದಾಟುವುದು ಅಷ್ಟು ಸರಳವಾದುದಲ್ಲ. ಅದನ್ನು ಮೆಟ್ಟಿನಿಲ್ಲುವ, ಪ್ರಲೋಭನೆಯ ಸ್ವರಕ್ಕೆ ಕಿವಿಗೊಡದಿರುವ ಮತ್ತು ಗುರು ಕಾರುಣ್ಯದಿಂದ ಭಕ್ತಿಯ ಹಾದಿಗೆ ಬಂದು ನಿಲ್ಲುವ ಭಕ್ತೆಯೊಬ್ಬಳ ಅಂತರಂಗದ ತುಮುಲಗಳನ್ನು ಪರಿಣಾಮಕಾರಿಯಾದ ದೃಶ್ಯವನ್ನಾಗಿ ಬೇಂದ್ರೆ ಕಟ್ಟಿಕೊಟ್ಟಿದ್ದಾರೆ. ಅದೃಶ್ಯಲೋಕದ ಅಸ್ತಿತ್ವವೊಂದು ಲೌಕಿಕ ಬದುಕಿನ ಜೊತೆಯೇ ಇರುವುದು ಕಣ್ಣಿಗೆ ಕಾಣುತ್ತದೆ. ಸಾಧಕಳ ಅಲ್ಲೋಲ-ಕಲ್ಲೋಲ ಮನಸ್ಥಿತಿಯನ್ನು, ಮೈಮೇಲೆ ಬಂದು ಬೀಳುವ ಆಕರ್ಷಣೆಗಳನ್ನು, ನಂಬಿದ ಜೋಗಿ ಹೊತ್ತಿಗೆ ಬಂದು ಮಾರ್ಗ ತೋರುವುದನ್ನು ಕವಿತೆ ಬಿಡಿಸಿಡುತ್ತದೆ. ಕವಿತೆ ಓದಿಸಿಕೊಳ್ಳುವ ಪರಿಗೆ ಯಾವುದೆ ಓದುಗ ಅವಾಕ್ಕಾಗಿ ಅದರ ಗೂಢಾರ್ಥದಲ್ಲಿ ಕಳೆದುಕೊಳ್ಳುವ ಸಂಭವವೆ ಹೆಚ್ಚಾಗಿದೆಯೆಂದು ಅನ್ನಿಸುತ್ತದೆ. ಬೇಂದ್ರೆಯವರ ನಿಸರ್ಗ ಕಾವ್ಯದಲ್ಲಿ 'ಜೋಗಿ'

ಕವಿತೆಯು ಅರ್ಥೈಸಲು ಬಹಳ ಕಠಿಣವಾದದ್ದೆಂದು ಬಹುತೇಕ ಲೇಖಕರ ಹಾಗೂ ವಿಮರ್ಶಕರ ಅನಿಸಿಕೆಯಾಗಿದೆ. ಇದು ಆ ಕವಿತೆ ಹೊಂದಿರುವ ವ್ಯಾಪ್ತಿ-ಆಳಗಳನ್ನು ಸೂಚಿಸುವಂತಿದೆ. 'ಜೋಗಿ ಯ ಗೀತ ಧಾರವಾಡದ ಸುತ್ತಲಿನ ನಿಸರ್ಗ ಮಾಯೆಯಿಂದಲೂ ಒಳಜೀವದೊಳಗಿನ ಕಾಳರಾತ್ರಿಯ ಭಯಾನಕ ಸಂಶಯಾಕುಲಿತ ಭಾವನೆಯಿಂದಲೂ ಉದಿತವಾಗಿದೆ'[೧೦೪] ಎಂದು ಬೇಂದ್ರೆ ತಮ್ಮ ಕವಿತೆಗೆ ಭಾವಸಂದರ್ಭವನ್ನು ಸೂಚಿಸಿದ್ದಾರೆ. 'ಜೋಗಿ' ಪ್ರಕಟವಾದ ೨೦ ವರ್ಷಗಳ ನಂತರ ದಕ್ಷಿಣ ಕನ್ನಡದ ಮುಲ್ಕಿಯ ವಿಜಯಾ ಕಾಲೇಜಿನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುವ ಸಂದರ್ಭದಲ್ಲಿ ಬೇಂದ್ರೆಯವರು ಆ ಕವಿತೆಯ ಮೇಲೆ ಮತ್ತಷ್ಟು ಬೆಳಕು ಚೆಲ್ಲಿದ್ದಾರೆ. ಕವಿತೆಯೊಳಗಿನ ನಾಯಕ ಪಾತ್ರ ಸ್ತ್ರೀ, ಎಂದು ಸಂಶಯಗಳನ್ನು ನಿವಾರಿಸಿದ್ದಾರೆ. ಅವರ ಹೇಳಿಕೆಯನ್ನು ಪೂರ್ಣವಾಗಿ ನೋಡುವದರಿಂದ ಕವಿತೆ ತನ್ನ ರಹಸ್ಯವನ್ನು ಸ್ವಲ್ಪವಾದರೂ ಬಿಟ್ಟುಕೊಡುವ ಸಂಭವವಿದೆ: 'ಇದು ನಿಜವಾಗಿ, ನನ್ನ ತಾಯಿಯ ಅನುಭವದ ಪದ್ಯ. ಇದರೊಳಗಿನ ಪಾತ್ರ ಸ್ತ್ರೀ ಪಾತ್ರ. ಇದನ್ನು ಎಷ್ಟೋ ಮಂದಿ ಅರಿತುಕೊಂಡಿಲ್ಲ. ಬೇಂದ್ರೆಯವರೇ ಹೇಳಿಕೊಂಡದ್ದು ಎಂದು ತಿಳಿದಿದ್ದಾರೆ. ಎಷ್ಟೋ ನಾಟ್ಯಗೀತಗಳಲ್ಲಿರುವಂತೆ, ಈ ಅನುಭವವನ್ನು ನನ್ನ ಅನುಭವ ಎಂಬಂತೆ ಹೊಂದಿಸಿಕೊಂಡು ಈ ಪದ್ಯ ಬರೆದೆನು. ನಮ್ಮ ಊರ ಹೊರಗಿನ 'ಸೋಮೇಶ್ವರ' ಎಂಬ ಸ್ಥಳದ ಪ್ರಕೃತಿಯ ಭಯಾನಕ ರಮ್ಯತೆಯನ್ನು ನೆನೆಸಿಕೊಂಡು, ಜೀವನದಲ್ಲೂ ಬರುವಂಥ ಇಂಥ ಒಂದು ರಮ್ಯ ಭಯಾನಕ ಸ್ಥಿತಿಯನ್ನು ಈ ಪದ್ಯ ಹೇಳುತ್ತದೆ. ಯಾರೋ ಒಂದು ಮಂತ್ರ ಕೊಡುತ್ತಾರೆ. ಆದರ ಫಲ ಏನೋ ಅದ್ಭುತ ಬರುತ್ತದೆ. ಆ ಕಾಲಕ್ಕೆ ಅದರ ಬೆಲೆ ಕಟ್ಟಲಿಕ್ಕಾಗುವುದಿಲ್ಲ. ಅಂಥ ಬೆಲೆ ಕಟ್ಟಲಾಗದ ಕಾಲಕ್ಕೆ ಮತ್ತೆ ಒಂದು ವಿಷಮ ಕಾಲ ಬರುತ್ತದೆ. ಹೇಗೆ ನಿಮಗೆ ಮಂತ್ರ ಕೊಡುವ ಗುರು ಬರುತ್ತಾನೋ, ಹಾಗೆ ವಿಷಮ ಕಾಲದಿಂದ ದಾಟಿಸುವ ಗುರುವೂ ಬರುತ್ತಾನೆ. ಇದೇ ಮಹತ್ವದ ಮಾತು ''ದಾಟಿಸು, ಗುರುವೇ, ದಾಟಿಸು, ದಾಟಿಸು'' ಎಂಬ ಮಾತು ಬಂದಾಗ. ''ಹಾಂ!'' ನಿನಗೆ ದಾಟುವುದು ಅಗತ್ಯವಿದೆ ತಾನೆ? ಹಿಂದಿನದನ್ನು ಬಿಟ್ಟಿರುವಿ ತಾನೆ? ಮುಂದಿನದಕ್ಕೆ ಹೋಗಬೇಕಾಗಿದೆ ತಾನೆ?'' ಎಂದು ಹೇಳುವ ಗುರುಕಾರುಣ್ಯ ದಾಟಿಸುತ್ತದೆ. ಹೇಗೆ ನೀರಿನಲ್ಲಿ ಬಿದ್ದ ಒಂದು ಇರುವೆಗೆ, ಬಿದ್ದ ಒಂದು ಕಡ್ಡಿ ಆಧಾರವಾಗಿ, ಅದನ್ನು ಹಿಡಿದುಕೊಂಡು ಹೋಗುತ್ತದೋ, ಹಾಗೆ ಗುರುಕಾರುಣ್ಯ ಬರುತ್ತದೆ ಎಂದು ಹೇಳುವಂಥ ಮಾತಿನ ಪದ್ಯ ಇದು.

ನಿಮಗೆ ಈ 'ಜೋಗಿ' ಎಂಬ ಪದ್ಯ 'ಪಠ್ಯ'ವಾಗಿದೆ ಎಂದು ಕೇಳಿದ್ದೇನೆ. ನಿಮಗೆ ನಾನು ಪದ್ಯದ ಅರ್ಥ ಹೇಳಿಲ್ಲ. ಈಗ ಆ ಅರ್ಥ ತಿಳಿಯದಿದ್ದರೆ ಇನ್ನಾದರೂ ತಿಳಿದೀತು ಎಂದು ಓದಬೇಕು.''[೧೦೫]

ಬದುಕಿನ ಭಯಾನಕ ರಮ್ಯತೆಯನ್ನು ದಾಟುವುದು, ಕಾಳರಾತ್ರಿಯನ್ನು ಗೆದ್ದು ಬರುವುದು ಈ ಕವಿತೆ ಸೂಚಿಸುವ ಹಲವು ಅರ್ಥಗಳಲ್ಲಿ ಮುಖ್ಯವೆಂದು ಅಂದುಕೊಳ್ಳಬಹುದು. ಈ ಭಯಾನಕ ರಮ್ಯತೆ ಎಂಬುದು ಆಕರ್ಷಣೆಯ ಸಾಗರದ ಜೊತೆಗೆ ವೈರಾಗ್ಯದ ಬಿಂದುವಿರುವುದನ್ನು ಸೂಚಿಸುತ್ತಿರಬಹುದು. ಬೇವಿಗೆ ಸುತ್ತಿಕೊಂಡಿರುವ ಅಮೃತಬಳ್ಳಿ, ಗಿರಣಿಯ ಸದ್ದಿನಂತೆ ತೆರಪಿಲ್ಲದೆ ಕರೆಯುತ್ತಿರುವ ಕೋಗಿಲೆಯ ದನಿಯ ಜೊತೆಗೆ

ಕೇಳುವ ಜೋಗಿಯ ಜನಪದ ದನಿ ಮುಂತಾದವು ಭಕ್ತಿಯನ್ನು ತುಂಬಿಕೊಳ್ಳುವಾಗ ಅದರ ಸುತ್ತ ಸುತ್ತಿಕೊಳ್ಳುವ ವಿಷಯ ವಾಂಛೆಯ ಪ್ರಲೋಭನೆಗಳನ್ನು ವಿವರಿಸುತ್ತವೆ. ಪ್ರಲೋಭನೆಗಳ ಹತ್ತಿರವೆ ಮೃತ್ಯುಕೂಪಗಳಿರುವುದನ್ನು ಕವಿತೆ ಮುಚ್ಚಿಡುವುದಿಲ್ಲ. ಅಂಜಿಕೆ ಬರುವಂತಹ ವಾತಾವರಣದ ಜೊತೆಗೆ ಆಸೆಗಳು ಕೈಮಾಡಿ ಕರೆಯುವ ಸನ್ನಿವೇಶಗಳನ್ನು ಕವಿ ಅಭಿವ್ಯಕ್ತಿಸಿರುವ ರೀತಿಯಂತೂ ಅದ್ವಿತೀಯವಾಗಿದೆ.

ಧಾರವಾಡದ ಊರ ಹೊರಗಿನ ಭಯಾನಕವೆನಿಸುವಂತಹ ಗುಡ್ಡ-ಗಿಡ-ಮರ-ಹುತ್ತ-ಹೊಂಡ, ಹಳ್ಳ-ಕೊಳ್ಳ- ಮುಳ್ಳು-ಕಂಟಿಗಳಿಂದ ತುಂಬಿದ ಗವ್ವೆನ್ನುವ ನಿಸರ್ಗದ ದೃಶ್ಯವನ್ನು ತೆರೆದಿಡುವದರೊಂದಿಗೆ ಕವಿತೆ ಪ್ರಾರಂಭವಾಗುತ್ತದೆ.

ಊರ ತುದಿಯ ಆ ಮೂರು ಬಟ್ಟೆ ಮುಗಿದಲ್ಲಿ ಕೊಳ್ಳವೆಲ್ಲಿ
ಹಳ್ಳ ಅಡಗಿ ಹರಿದಲ್ಲಿ, ತುಡುಗು ದನ ತೊಂಡು ಮೇಯುವಲ್ಲಿ
ದಿಕ್ಕು ತಪ್ಪತಾರ ತಪ್ಪಿ ಹೊಕ್ಕರ ಕಕ್ಕಾವಿಕ್ಕಿಯಾಗಿ
ಇರುಳು ಅಂತನ್s ಹಗಲs ಗೂಕತಾವ ಅಲ್ಲಿ ಜೋಡಗೂಗಿ

ಊರ ತುದಿಯಲ್ಲಿ ಮೂರು ದಾರಿಗಳು ನಡೆದು ಹೋಗಿ ಸೇರುವ ಕೊಳ್ಳ, ಅಲ್ಲಿ ಅಡಗಿ ಹರಿಯುತ್ತಿರುವ ಹಳ್ಳ, ಸ್ವಲ್ಪ ದೂರದಲ್ಲಿಯೆ ಇರುವ ಸ್ಮಶಾನ, ಅದರ ಎಡಬಾಜು ಹೊಂದಿಕೊಂಡ ಕಪ್ಪು ನೀರಿನ ಹೊಂಡ ಒಂದು ನೀರವ ವಾತಾವರಣವನ್ನು ಸೃಷ್ಟಿಸುತ್ತವೆ. ಹೊಂಡದಲ್ಲಿನ ನೀರು ನಿಂತು ನಿಂತು ಪಾಚಿಗಟ್ಟಿ ಕಾಮು ತನ್ನ ಹಸಿರಂಗಿಯನ್ನು ಹಾಸಿದಂತಿದೆ. ಅದನ್ನು ಮೆಚ್ಚಿಕೊಂಡು ಅಲ್ಲಿ ಕಾಲಿಟ್ಟರೆ ಕರಿನೀರಿನ ಸುಳಿ ಒಳಗೆ ಜಗ್ಗದೆ ಬಿಡಲಾರದು.

ಅದನ ದಾಟಿ ಆ ಮಸಣವಾಟಿ ಎಡಕಾಗಿ ಅದರ ಆಚಿ
ಕಾಮು ತನ್ನ ಹಚ್ಚಂಗಿ ಹಾಸಿಧಾಂಗೆಲ್ಲಿ ನೀರ ಪಾಚಿ
ಹೊಚ್ಚಿ ಹೊಂಡವನು ಮೆಚ್ಚ ಮಾಡತಾವೋ ಕಂಡ ಕಣ್ಣುಗಳಿಗೆ
ಪಾಚಿ ಸರಿಸಿದಾಗ ಕಪ್ಪು ನೀರು ಕರಿತಾವ ಒಳಗ ಬಳಿಗೆ

ಕಾಮು ಹರವಿ ನಿಂತಿರುವ, ಮನಸ್ಸಿಗೆ ಪ್ರಿಯವಾಗಿರುವ ಈ ಹಸಿರಿನ ಪ್ರಲೋಭನೆಯನ್ನು ತಾನು ಹೇಗೆ ತಿರಸ್ಕರಿಸಲೆಂದು ಕವಿತೆಯ ನಾಯಕಿ ದ್ವಂದ್ವಕ್ಕೀಡಾಗಿದ್ದಾಳೆ. ಸ್ವತಃ ಮೃತ್ಯು ಕಾಮದ ಅಂಗಿ ತೊಟ್ಟು ಬಂದಿದ್ದರೂ ಕಣ್ಣಿಗೆ ಮೆಚ್ಚಿಕೆಯಾಗುವುದು ಬರಿ ಅಂಗಿ ಮಾತ್ರ. ಅದಕ್ಕಾಗಿಯೇ ಅತ್ತಿ ಗಿಡದ ಹಣ್ಣಿನ ಕಡೆ ಗಮನ ಹರಿಸದೆ ತೊಟಗುಟ್ಟುವ ಜೇನಿನ ಕಡೆ ಮನಸ್ಸು ಓಡುತ್ತಿದೆ.

ಅತ್ತಿ ಗಿಡಕ ಹತ್ಯಾವ ಹಲಸಿನ್ಹಂಗ ಬುಡಕು ಕೆಂಪು ಹಣ್ಣು
ಜೇನು ತುಂಬಿ ತೊಟಗುಟ್ಟತಾವ ಅದ ಬಯಸತಾವ ಕಣ್ಣು

ಆಲ, ಅರಳೆ, ಬೇವು, ಹುಣಸೆ ಮುಂತಾದ ದೊಡ್ಡ ದೊಡ್ಡ ಗಿಡಮರಗಳ ನಡುವಿನ ಮೂಲೆಯಲ್ಲಿ ಹೇಗೋ ತಪ್ಪಿ ಬೆಳೆದಿರುವ ಮಾವು ನಾಯಕಿಯನ್ನು ಅಸರಂತ ಕೂಗುತ್ತಿರುವ ಕೋಗಿಲೆಗೆ ವಾಸಸ್ಥಾನವಾಗಿದೆ.

ಆ ಮಾವಿನೊಳಗ ಈ ಸುಗ್ಗಿಯೊಳಗ ಬಂದಽದ ಕೋಗಿಲೊಂದು
ತನ್ನ ಜೋಡಿ ಕರೆದ್ಹಾಂಗ ಕರೀತಽದ ನನ್ನ ಬಾರಽ ಅಂದು
ಕೂಗೇ ಕೂಗತದ ಕೂಗೇ ಕೂಗತದ ಗಿರಣಿ ಕರೆಯೊ ಹಾಂಗ
ತೆರವು ಇಲ್ಲ ಒಂದಳತಿ ಕೂಗತಽದ ಬ್ಯಾಸರಿಲ್ಲ ಧಾಂಗ

'ತನ್ನ ಜೋಡಿ ಕರೆದ್ಹಾಂಗ ಕರೀತಽದ ನನ್ನ ಬಾರಽ ಅಂದು' ಎನ್ನುವಲ್ಲಿ ಮಾಮರದಿಂದ ಕೂಗುತ್ತಿರುವ ಕೋಗಿಲೆ ಗಂಡು ಎಂಬುದು ಬಹಳಷ್ಟು ಸ್ಪಷ್ಟವಾಗಿದೆ. 'ಕೋಗಿಲೆಗೆ' ಎನ್ನುವ ತಮ್ಮ ಮತ್ತೊಂದು ಪದ್ಯದಲ್ಲಿ ಕೂಡ ಬೇಂದ್ರೆಯವರು ಕೂಗುವ ಕೋಗಿಲೆ ಯಾವಾಗಲೂ ಗಂಡು ಎಂದು ಹೇಳಿದ್ದಾರೆ. ಕಾಮ ಸೃಷ್ಟಿಸಿರುವ ಆಕರ್ಷಣೆಯಿಂದ, ತೊಟಗುಟ್ಟುವ ಜೇನಿನ ಆಸೆಯಿಂದ, ಕೋಗಿಲೆಯ ಮಧುರ ಧ್ವನಿಯಿಂದ, ಇದ್ದ ಕೆಲಸಗಳನ್ನು ಬದಿಗೊತ್ತಿ ಅದರ ಬೆನ್ನುಹತ್ತಿ ಹೋಗಬೇಕೆನ್ನುವ ಕೊಳಲಿನ ಉಲಿಯುವಿಕೆಯಿಂದ ನಾಯಕಿ ವಿಹ್ವಲಗೊಂಡಿದ್ದಾಳೆ. ವ್ಯಾಕುಲದಿಂದ ಪರಿತಪಿಸುತ್ತಿದ್ದಾಳೆ. ತನ್ನನ್ನು ಒಂದೇ ಸಮನೆ ಕಾಡುತ್ತಿರುವ ಆ ಬಯಕೆಯ ಬಣ್ಣವನ್ನು, ಅದಕ್ಕಿರುವ ಇಂದ್ರಜಾಲಿಕ ಕಣ್ಣುಗಳನ್ನು ನೋಡಿ ಬರಲೇನು ಎಂದು ತುದಿಗಾಲಲ್ಲಿ ನಿಲ್ಲುವ ಮಟ್ಟಿಗೆ ವಿಷಯಲಾಲಸೆ ಅವಳ ಬೆನ್ನುಬಿದ್ದಿದೆ. ಕಾಮದ ಆಮಿಷ ಚಿತ್ತಾಕರ್ಷಕವಾಗಿ ಕಾಡುತ್ತಿದೆ. ಅಂತಹ ಪ್ರಲೋಭನೆಯ ಮುಂದೆ ಮನುಷ್ಯ ಒದ್ದಾಡುವ ಸ್ಥಿತಿಯನ್ನು ಬಸವಣ್ಣ ತಮ್ಮ ವಚನವೊಂದರಲ್ಲಿ ಪ್ರಸ್ತಾಪಿಸುವುದು ಹೀಗೆ :

ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ;
ಹಸುವೇನ ಬಲ್ಲುದು? ಹಸುರೆಂದಳಸುವುದು
ವಿಷಯರಹಿತನ ಮಾಡಿ, ಭಕ್ತಿರಸವ ದಣಿಯೆ ಮೇಯಿಸಿ,
ಸುಬುದ್ಧಿಯೆಂಬುದಕವನೆರೆದು, ನೋಡಿ ಸಲಹಯ್ಯಾ
ಕೂಡಲಸಂಗಮದೇವಾ[೧೦೬]

ಆಮಿಷಗಳನ್ನು ಮೀರುವ ಬಗೆ ತಿಳಿಯದೆ ಕವಿತೆಯ ನಾಯಕಿ ಒದ್ದಾಡುತ್ತಿದ್ದಾಳೆ. ಅವಳ ಈ ದ್ವಂದ್ವ ಸ್ಥಿತಿಗೆ ಕಾರಣವೇನೆಂದರೆ ಆಕೆ ಇಷ್ಟು ದಿನ ರೂಢಿಸಿಕೊಂಡಿರುವ ಭಕ್ತಿ ಕೈ ಜಾರಿ ಹೋಗುವ ಸಂಭವವಿದೆ. ನಾಮ ಜಪಿಸುವ ದನಿಯನ್ನು ಕೋಗಿಲೆಯ ದನಿ ಕತ್ತರಿಸುವಂತಿದೆ. ಸಾಧನೆಯ ಮಾರ್ಗವನ್ನು ಜೋಗಿಯೊಬ್ಬ ಹೇಳಿಕೊಟ್ಟು ಹೋಗಿದ್ದಾನೆ. ನಾಯಕಿ ಸಾಧನೆಯ ಹಾದಿಯಲ್ಲಿರುವಾಗ ಅವಳನ್ನು ಕಾಮದ ವಿಷಮಕಾಲ ಅಡ್ಡಗಟ್ಟಿ ತನ್ನ ದಾರಿಯನ್ನು ಹಿಡಿಸುವಂತಿದೆ. ಅದು ತನ್ನ ಹಾಡಿನ ಲಯದಿಂದ ಆಕೆ ಕಟ್ಟಿಕೊಂಡ ಕೋಟೆಗಳನ್ನು ಛೇದಿಸುತ್ತಿದೆ. ಅವಳ ಮನಸ್ಸನ್ನು ತುಂಬಿಕೊಂಡಿರುವ ಭಕ್ತಿಯನ್ನು ಹೊರದೂಡಿ ಅಲ್ಲಿ ವಿಷಯವೆಂಬ ಹಸುರನ್ನು ತುಂಬಿಸಲು

ಪ್ರಯತ್ನಿಸುತ್ತಿದೆ. ವಿಷಯದ ಪರಿಮಳಕ್ಕೆ ಮನಸೋತ ಆಕೆ ಪಾಡು ಆಗಿ, ಹಣ್ಣು ಆಗುವ ಸ್ಥಿತಿಯಲ್ಲಿದ್ದಾಳೆ. ಆದರೆ ಸಕಾಲಕ್ಕೆ ಮರಳಿ ಬರುವ ಜೋಗಿ ಆಕೆಗೊದಗಿದ ಕೇಡನ್ನು ಸ್ವಲ್ಪದರಲ್ಲಿಯೇ ತಡೆಯುತ್ತಾನೆ. ಸುಗ್ಗಿಯ ಸೊಲ್ಲಿನಲ್ಲಿ, ಹಸುರಿನ ಬೆಳೆಯಲ್ಲಿ ಕಳೆದು ಹೋಗುತ್ತಿದ್ದ ಅವಳು ಹಿಂದೆ ಸರಿಯುವ ಸೂಚನೆ ಸಿಗುತ್ತದೆ. ಜೋಗಿಯ ಆಗಮನದಿಂದ ಅವಳಿಗೆ ಬಲ ಬಂದಿದೆ.

ಬಂದೆ ಜೋಗಿ ಬಾ, ಬಾರೊ ಜೋಗಿ ಬಾ, ಏನು ಹೊತ್ತು ಬಂದಿ
ನೀನೆ ಹೇಳಿದಾ ನಾಮ ಜಪಿಸುವಾಗ ಬಂತೋ ಸುಗ್ಗಿ ಸಂಧಿ
ತಲೆಯ ಯಾವುದೋ ನಾಡಿಯೊಳಗ ಸುರುವಾತು ಸುಗ್ಗಿ ಸೊಲ್ಲು
ಮುಂದೆ ಕೇಳಿದರ ಅದಽ ತುಂಬಿತೋ ಮೂಲೆ ಮೂಲೆಯಲ್ಲು

ಮರೆತು ಹೋಗುತ್ತಿದ್ದ ನಾಮವನ್ನು ಉಳಿಸಿಕೊಳ್ಳುವುದು ಆಕೆಗೆ ಕಷ್ಟಕರವಾಗಿದೆ. ಅದನ್ನು ಹೇಗಾದರೂ ಮಾಡಿ ಮತ್ತೆ ಎದೆಯಲ್ಲಿ ಪ್ರತಿಷ್ಠಾಪಿಸಬೇಕೆಂದು ಆಕರ್ಷಕವಾಗಿರುವ ಕೋಗಿಲೆಯ ಸ್ವರದೊಂದಿಗೆ ಹೋರಾಟ ನಡೆಸಿದ್ದಾಳೆ. ಜೋಗಿ ಉಪದೇಶಿಸಿದ ಭಕ್ತಿಯನ್ನು ಪಾಲನೆ ಮಾಡುವಲ್ಲಿನ ವೈರಾಗ್ಯದ ನೋವು ಆಕೆಗೆ ಅರಿವಾಗಿದೆ. ಭಕ್ತಿಯ ಮಹತ್ವದ ಅರಿವಿದ್ದೂ ಕೋಗಿಲೆಯ ಕೂಗಿಗೆ ಕಿವಿಗೊಡುವಷ್ಟರ ಮಟ್ಟಿಗೆ ಪ್ರಲೋಭನೆ ಅವಳನ್ನು ಸುತ್ತಿಕೊಂಡಿದೆ.

ಗುಡಿಗೆ ನಾನು ಹೊರಟಾಗ ಕರೀತಽದ ಕುಹೂಕ್ಕುಹೂ ಎಂದು
ಮನದ ಜಪದ ನಡುನಡುವೆ ನಡೀತಽದ ಓಂ ಕುಹೂ ಎಂದು
ಕನಸಿನೊಳಗ ನಾ ಸ್ವರಾ ಕೇಳಿ ಮಾಮರಾ ಆಗತೇನೋ
ಅಂತ ಭ್ರಮ್ಯಾ ಆಗಕ್ಯಽದ ಮನಕ ನೀ ಬಂದೇ ಜೋಗಿ ಏನೋ!

ಯಾವ ಸ್ವರ ಇದು ಯಾವ ಕೋಗಿಲಾ ಯಾವ ಮರವೋ ಏನೋ
ಯಾಕ ಹೀಂಗ ಅಸರಂತ ಕೂಗತದ ಏನು ಇದಕೆ ಬ್ಯಾನ್ಯೊ
ಸುತ್ತು ಗುಡ್ಡ ನುಗ್ಗಾಗಿ ಹೋದವೋ ಓಗೊಟ್ಟು ಇದಕಽ
ಬಿಸಿಲು ಕುಣಿದು ಬೆವತಽದ ಈಗ ಬಂದಽದ ಮಳಿಯ ಹದಕಽ

ಸುತ್ತಮುತ್ತಲಿನ ಗುಡ್ಡಗಳು ಓಗೊಡುವಷ್ಟರ ಮಟ್ಟಿಗೆ ಕೋಗಿಲೆ ಕೂಗುತ್ತಿದೆಯಾದರೂ ನಾಯಕಿ ಮಾತ್ರ ಇನ್ನೂ ಓಗೊಟ್ಟಿಲ್ಲ. ಕನಸಿನಲ್ಲಿಯೂ ಅದು ಬಂದು ಕಾಡುತ್ತಿದ್ದರೂ ಆಕೆ ಇನ್ನೂ ಭ್ರಮೆಗೆ ಒಳಪಟ್ಟಿಲ್ಲ. ಹಾಗಾಗಿಯೆ ಕಾಡುವ ಕೋಗಿಲೆಯನ್ನು 'ಏನು ಇದಕೆ ಬ್ಯಾನ್ಯೊ' ಎಂದು ಆಕೆ ತಿರಸ್ಕರಿಸುವ ಸೂಚನೆಯನ್ನು ಕವಿತೆಯಲ್ಲಿ ಗಮನಿಸಬೇಕು.

ಅತ್ತ ಇತ್ತ ಹೊಯ್ದಾಡಿದ ಮನಸ್ಸು ಒಂದು ನೆಲೆಗೆ ನಿಂತು ಸಮಾಧಾನಗೊಳ್ಳುವ ಸ್ಥಿತಿಗೆ ತಲುಪಿದ್ದರಿಂದಲೆ ಕವಿ 'ಬಿಸಿಲು ಕುಣಿದು ಬೆವತಽದ ಈಗ ಬಂದಽದ ಮಳಿಯ ಹದಕಽ' ಎಂದು ಹೇಳುತ್ತಾನೆ. ನೀರು ಹನಿಸಿ ಕಲಸಿಟ್ಟ ಹಿಟ್ಟು ರೊಟ್ಟಿ ಮಾಡುವ ಹದಕ್ಕೆ ಬರುವಂತೆ ವಿಷಮ ಕಾಲದ ಪರಿಧಿಯೊಳಗೆ ಬಂಧಿಯಾಗಲು ಬಯಸುತ್ತಿದ್ದ ಮನಸ್ಸು ಗುರುವಿನ ಪುನರಾಗಮನದಿಂದ ಜ್ಞಾನೋದಯಗೊಂಡು ಸದ್ಗುರು ಹೇಳಿಕೊಟ್ಟ ಅನುಭಾವದ ಮೌಲ್ಯ ತಿಳಿದುಕೊಳ್ಳುತ್ತದೆ. ಈ ಅನುಭಾವವನ್ನು ಆಚರಿಸುವುದು ಎಷ್ಟು ಕಠಿಣವೆಂದು ನಾಯಕಿಗೆ ತಿಳಿದಿದೆ. ಹರಿದು ಕರಿನೀರು ಸೇರಲು ಬಯಸುವ ಉದ್ರೇಕಿತ ಭಾವನೆಗಳನ್ನು ಶಮನಗೊಳಿಸುವುದು ಸತ್ತು ಹುಟ್ಟಿದಂತೆ ಎಂದು ಆಕೆಗೆ ಅರಿವಾಗಿದೆ. ಅನುಭಾವದ ಬದುಕನ್ನು ಬದುಕಲು ತನುವಿಗೆರವಾಗುವ ಕಠೋರತೆಯನ್ನು ಪಾಲಿಸಲು ಸಿದ್ಧಳಾಗುತ್ತಾಳೆ. ನಿಜದ ಭಕ್ತಿ ಅಷ್ಟು ಸರಳವಾದುದಲ್ಲವೆಂದು ಬೇಂದ್ರೆಯವರಿಗೆ ಹೇಳಬೇಕಾಗಿದೆ. ಭಕ್ತ ನಡೆಯುವ ದಾರಿ ಎಷ್ಟು ದುರ್ಗಮವಾದದ್ದೆಂದು ಬಸವಣ್ಣ ತಮ್ಮ ವಚನವೊಂದರಲ್ಲಿ ಹೀಗೆ ವಿವರಿಸಿದ್ದಾರೆ :

ಭಕ್ತಿಯೆಂಬುದ ಮಾಡಬಾರದು
ಕರಗಸದಂತೆ ಹೋಗುತ್ತ ಕೊಯ್ವುದು ಬರುತ್ತ ಕೊಯ್ವುದು !
ಘಟಸರ್ಪನಲ್ಲಿ ಕೈ ದುಡುಕಿದರೆ ಹಿಡಿವುದು ಮಾಂಬುದೇ,
ಕೂಡಲಸಂಗಮದೇವಾ?[೧೦೭]

ಜೀವನದ ಸುಖಗಳನ್ನು ತ್ಯಜಿಸುವ ಹಾಗೂ ನೀರಸವೆನ್ನಿಸುವ ಬದುಕನ್ನು ಅಪ್ಪಿಕೊಳ್ಳುವ ಸಂದರ್ಭದಲ್ಲಿ ಮನಸ್ಸನ್ನು ಚುಚ್ಚಿ ಚುಚ್ಚಿ ಘಾಸಿಗೊಳಿಸುವ ದ್ವಂದ್ವ -ತಲ್ಲಣಗಳನ್ನು ಬೇಂದ್ರೆಯವರು 'ಜೋಗಿ'ಯಲ್ಲಿ ನಿರೂಪಿಸುತ್ತಾರೆ. ಗುರುಕಾರುಣ್ಯ ಭಕ್ತನಿಗಿದ್ದರೂ ಭಕ್ತ ಸಂಭಾಳಿಸಬೇಕಾದುದು ಬಹಳಷ್ಟಿದೆ ಎಂಬುದನ್ನು ಬೇಂದ್ರೆ ಪರೋಕ್ಷವಾಗಿ ಹೇಳುತ್ತಾರೆ. 'ಜೋಗಿ' ಎಂಬ ಹೆಸರು ಕವಿತೆಗಿದ್ದರೂ ಕೂಡ ಆ ಕವಿತೆಯ ಮುಖ್ಯ ದನಿ ಭಕ್ತಳದಾಗಿದೆಯೆಂದು ಡಾ. ಜಿ.ಎಸ್.ಆಮೂರ ಅತ್ಯಂತ ನಿಖರವಾಗಿ ಗುರುತಿಸಿದ್ದಾರೆ. 'ಗುರು ಕರುಣೆಯ ಸೂಚನೆ 'ಜೋಗಿ'ಯಲ್ಲಿ ಮೆಲುದನಿಯಾಗಿ ಬಂದರೆ ಮಾತೃಕೃಪೆಯ ಸೂಚನೆ 'ಓ ತಾಯಿ ಮಾಯಿ'ಯಲ್ಲಿ ಮೇಲ್ದನಿಯಲ್ಲಿಯೆ ಬರುತ್ತದೆ. 'ಜೋಗಿ' ಎಂಬ ಶೀರ್ಷಿಕೆ ಹೊತ್ತರೂ ಆ ಕವಿತೆಯಲ್ಲಿ ಕೇಳಿ ಬರುವುದು ಭಕ್ತಳ ದನಿ... ಇಲ್ಲಿನ ಭಕ್ತಳಿಗೆ ಶಿವಕರುಣೆಯ ರಕ್ಷಣೆಯಿಲ್ಲ. ಸಾಧಕನ ಪಾಲಿಗೆ ಬರುವ ಕಾಳರಾತ್ರಿಯ ಅನುಭವ ಈ ಕವನಕ್ಕೆ ಸಾಮಗ್ರಿಯನ್ನೊದಗಿಸಿದೆ. ಈ ಕವನದ ಪ್ರತಿಮೆಗಳೆಲ್ಲ ದ್ವಿಮುಖವಾದವುಗಳು. ಕವಿತೆ ಸೂಚಿಸುವ ಅಹಂಭಾವದ ನಾಶ -

ಕನಸಿನೊಳಗ ನಾ ಸ್ವರ ಕೇಳಿ ಮಾಮರಾ ಆಗತೇನೋ
ಅಂತ ಭ್ರಮಾ ಆಗ್ಯಽದ ಮನಕ ನೀ ಬಂದೆ ಜೋಗಿ ಏನೋ!

ಜೋಗಿ ಭಕ್ತಳ ಕಲ್ಯಾಣದ ದಾರಿಯೂ ಆಗಿರುವ ಶಕ್ಯತೆಯಿದೆ.'[೧೦೮]

ಭಕ್ತಿ ಸಾಧನೆಯ ಮಾರ್ಗದಲ್ಲಿ ಎದುರಾಗುವ ಸಂಘರ್ಷಗಳನ್ನು ಸಹೃದಯನಿಗೆ ಕವಿತೆ ಮುಖಾಮುಖಿಯಾಗಿಸುತ್ತದೆ. 'ಜೋಗಿ'ಯಲ್ಲಿ ಅಸರಂತ ಕೂಗುತ್ತಿರುವ ಕೋಗಿಲೆಯ ಕುರಿತು ಭಿನ್ನ ವಿಭಿನ್ನ ವ್ಯಾಖ್ಯಾನಗಳನ್ನು ಕನ್ನಡ ವಿಮರ್ಶೆಯಲ್ಲಿ ಗುರುತಿಸಬಹುದು. ಗಿರಣಿ ಕರೆಯುವ ಹಾಗೆ ಕರೆಯುತ್ತಿರುವ ಅದರ ಕೂಗು ಆಧ್ಯಾತ್ಮದ ಕೂಗು, ದಿವ್ಯ ಕರೆ ಎಂದು ಒಂದು ಅಭಿಪ್ರಾಯವಿದ್ದರೆ, ಈ ಕವಿತೆಯಲ್ಲಿನ ಕೋಗಿಲೆ ವಾಸನಾ ಪ್ರಪಂಚದ್ದೆಂದು, ವಿಷಯ ಹಸುರಿನ ಕರಿನೀರಿನ ಕೊಳಕ್ಕೆ ಕರೆದೊಯ್ಯುವಲ್ಲಿ ಮಗ್ನವಾಗಿದೆಯೆಂದು ಇನ್ನೊಂದು ಅಭಿಪ್ರಾಯವಿದೆ. ಸ್ವತಃ ಬೇಂದ್ರೆಯವರೇ ಸೂಚಿಸಿರುವಂತೆ ವಿಷಮ ಕಾಲವನ್ನು ಪ್ರತಿನಿಧಿಸುತ್ತಿರುವ ಕೋಗಿಲೆ ಅಲೌಕಿಕದ ಕರೆ ನೀಡುವುದು ಅಷ್ಟು ಸಂಗತವೆನಿಸುವುದಿಲ್ಲ. ಮನಸ್ಸು ಕೈಗೊಂಡಿರುವ ಜಪದ ನಡು ನಡುವೆ ಕುಹೂ ಎನ್ನುವ ಶಬ್ದ, ವಿಷಯ ಪ್ರಪಂಚವೆ ಉತ್ತಮವೆಂಬ ಭ್ರಮೆಯನ್ನು ಹುಟ್ಟಿಸುತ್ತಿದೆ. ಕವಿತೆಯ ನಾಯಕಿಯು ಜೋಗಿಯ ಸಹಾಯದಿಂದ ಆ ಭ್ರಮೆಯನ್ನು ಕಿತ್ತೊಗೆಯುವ ಸನ್ನಾಹದಲ್ಲಿದ್ದಾಳೆ.

ಯಾವ ಸ್ವರಾ ಇದು ಯಾವ ಕೋಗಿಲಾ ಯಾವ ಮರವು ಏನೋ
ಯಾಕ ಹೀಂಗ ಅಸರಂತ ಕೂಗತದ ಏನು ಇದಕೆ ಬ್ಯಾನ್ಯೋ

ತನ್ನನ್ನು ಕಂಗೆಡಿಸುತ್ತಿರುವ ತನ್ನ ಮನಸ್ಸಿನ ದಿಕ್ಕು ತಪ್ಪಿಸುತ್ತಿರುವ ಕೋಗಿಲೆಯ ಅದಮ್ಯ ಶಕ್ತಿಯ ಕುರಿತು ಅಚ್ಚರಿಯಿಂದಲೆ ಎಲ್ಲಿಯ ಸ್ವರವಿದು, ಎಷ್ಟೊಂದು ಪ್ರಬಲವಾಗಿದೆಯೆಂದು ಹೇಳುತ್ತ ಅದು ಜೀಸುತ್ತಿರುವ ಬಲೆಯಿಂದ ತಪ್ಪಿಸಿಕೊಳ್ಳಲು ಆಗುತ್ತದೆಯೋ ಇಲ್ಲವೊ ಎಂದು ಅನುಮಾನಪಡುತ್ತ 'ಏನು ಇದಕೆ ಬ್ಯಾನ್ಯೊ' ಎಂದು ಆಕ್ರೋಶದಿಂದ ನಾಯಕಿ ನುಡಿಯುವುದು ಸ್ಪಷ್ಟವಾಗಿದೆ.

ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಬೆಕ್ಕು, ನಾಯಿ ಒಂದೇ ಸಮನೆ ಒದರುತ್ತಿದ್ದರೆ 'ಅದಕ್ಕೇನ ಬ್ಯಾನಿ ಆಗೇತಿ, ಹಂಗ್ಯಾಕ ಒದರಾಕ ಹತ್ತೇತಿ' ಎಂದು ಅನ್ನುವುದು ರೂಢಿ. ಅದೇ ತರಹ ಮಕ್ಕಳು ಏನಾದರೂ ತಪ್ಪು ಮಾಡಿದಾಗ 'ನಿನಗೇನ ಬ್ಯಾನಿ ಬಂದಿತ್ತು' ಎಂದು ಹೇಳುವುದನ್ನು ಕೂಡ ಕೇಳಬಹುದು. ಅದಕ್ಕಾಗಿ ಸಂದರ್ಭೋಚಿತವಾಗಿ ಅರ್ಥೈಸಿಕೊಳ್ಳುವ ಬೇನೆ ಶಬ್ದಕ್ಕೆ ಕವಿತೆಯಲ್ಲಿ ಸಂಗತವೆನಿಸದ ಮಗು ಹೆರುವಾಗಿನ ತಾಯಿಯ ಬೇನೆಗೆ ಕೆಲವರು ಹೋಲಿಸಿರುವುದು ಅಷ್ಟು ಯುಕ್ತವಾದುದಲ್ಲವೆಂದು ಹೇಳಬಹುದು. ಸುಮತೀಂದ್ರ ನಾಡಿಗ ಅವರು ಜೋಗಿ ಮತ್ತು ಕೋಗಿಲೆಯ ಜಗತ್ತುಗಳ ನಡುವಿನ ಸಂಘರ್ಷವನ್ನು ಹೇಳಿದ್ದಕ್ಕೆ ಪ್ರತಿಕ್ರಿಯೆಯಾಗಿ ಶ್ರೀ ಆರ್.ಜಿ. ಕುಲಕರ್ಣಿ ಮತ್ತು ರಂ.ಶ್ರೀ ಮುಗಳಿ ಅವರು 'ಬ್ಯಾನಿ'ಯನ್ನು ಹೊಸ ಸೃಷ್ಟಿಗೆ ಜನ್ಮಕೊಡುವ ಧ್ವನಿಯೆಂದು ಗುರುತಿಸುವುದು ಅಷ್ಟು ಸಮಂಜಸವೆನಿಸುವುದಿಲ್ಲ. ಗುಡಿಗೆ ಹೊರಟಾಗ ಕರೆಯುವ ಕೋಗಿಲೆ, ಜಪ ಮಾಡುವಾಗ ಕರೆಯುವ ಕೋಗಿಲೆ, ಭ್ರಮೆಯನ್ನು ಹುಟ್ಟಿಸುವ ಕೋಗಿಲೆ ಅನುಭಾವದ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುವುದು ದೂರದ ಮಾತು. ಪಾರಮಾರ್ಥಿಕ ಸಂಗತಿಗಳಿಗೆ ತುಡಿಯುವ ಮನಸ್ಸಿರುವಾಗ ಎದೆಯಲ್ಲಿ ಗಲಿಬಿಲಿ ಎಬ್ಬಿಸುವ 'ಮಧುರ' ಸ್ವರಕ್ಕೆ ಯಾಕೆ ಈ ಬೇನೆ ನಿಲ್ಲಲೊಲ್ಲದೆಂದು; ಸಹಾಯ ಮಾಡೋ ಜೋಗಿ ಎಂದು ತನ್ನ ಅನುಭಾವದ ಆಸೆಯನ್ನು

ಚಿತ್ತರಿಸುತ್ತಿದ್ದಾಳೆ. ಕಗ್ಗತ್ತಲಲ್ಲಿ ಜೋಗಿ ಬೆಳಕಿನ ದೀಪ ಹಿಡಿದು ಬರುವುದು ಕವಿತೆಯ ರಮ್ಯ ಹಾಗೂ ಭಯಾನಕ ನಿಸರ್ಗದ ವಾತಾವರಣಕ್ಕೆ ಸೂರ್ಯಕಿರಣವನ್ನು ಹಾಯಿಸುತ್ತದೆ. ರಹಸ್ಯದ, ಮೃತ್ಯುವಿನ ಕೂಪದಂತಿದ್ದ ನಿಗೂಢ ಲೋಕಕ್ಕೆ ಕಳುಹಿಕೊಳ್ಳದೆ ಅವಳನ್ನು ಉಳಿಸಿಕೊಳ್ಳುವ ಮೂಲಕ ಜೋಗಿ ಅವಳು ಜಪಿಸುತ್ತಿದ್ದ ಓಂಕಾರದ ನಾದದಲ್ಲಿ ಮನಸ್ಸನ್ನು ಧೃತಿಗೆಡಿಸುವ ಕರೆ ಕಳೆದು ಹೋಗುವಂತೆ ಮಾಡುತ್ತಾನೆ. ಅದೆ ನಾಯಕಿ ಮತ್ತು ಜೋಗಿಯ ವಿಜಯವಾಗಿದೆ. ಬೇಂದ್ರೆಯವರು 'ಜೋಗಿ' ಎಂಬ ಶೀರ್ಷಿಕೆಯನ್ನು ಇಟ್ಟಿರುವುದರ ಹಿಂದೆ ಜೋಗಿಯ ನಾಮದ ಬಲದಿಂದ ಆಗಮಿಕವು ಕ್ರಮೇಣ ಲೌಕಿಕವನ್ನು ಗೆಲ್ಲುವುದೇ ಆಗಿರಬಹುದು. ಲೌಕಿಕದ ಸೌಂದರ್ಯ, ಅದೃಷ್ಟ, ಶಕ್ತಿ, ರೂಪ, ಸುಖ ಮುಂತಾದವು ಮನಸ್ಸಿನ ಶಕ್ತಿಯೆದುರು ಸೋಲಬಲ್ಲವು ಎಂಬ ಸೂಚನೆ ಒಂದೆ ಸಮನೆ ಒಲಿಸುತ್ತಿರುವ ಅದೃಷ್ಟವನ್ನು ಆಕೆ ನಿರಾಕರಿಸುವುದರಲ್ಲಿದೆ. 'ಅದೃಷ್ಟ ದೇವರಿರಬಹುದು, ಇಲ್ಲದೆ ದೆವ್ವವೂ ಆಗಿರಬಹುದು. ಅದೃಷ್ಟ ನಮ್ಮ ಹಿಡಿತಕ್ಕೆ ದೊರೆಯುವ ವಸ್ತುವಲ್ಲ. ಆದರೆ ಅಂಥ ತತ್ವದ ಬೆನ್ನು ಹತ್ತಿದವರಿಗೆ ಇಂಥ ಅನುಭವದಿಂದ ಬಿಡುಗಡೆಯೂ ಇಲ್ಲ... ಭವಿ ಇದ್ದವನು ಶರಣನಾಗಬೇಕಾದರೆ ಈ ಅನುಭವದ ಮೂಲಕ ಪುನರ್ಜನ್ಮವನ್ನು ಪಡೆಯಬೇಕು'[೧೧೦] ಎಂದು ಕೀರ್ತಿನಾಥ ಕುರ್ತಕೋಟಿಯವರು ಅನುಭಾವದ ಹಾದಿಯಲ್ಲಿನ ಕಾಳರಾತ್ರಿಗಳ ಭಯಾನಕತೆಯನ್ನು ಹೇಳುತ್ತಾರೆ. ಕೋಗಿಲೆ ಅದೃಷ್ಟದ ಸಂಕೇತವಾಗಿದೆಯೆಂಬುದು; ಅವಳ ಬದುಕನ್ನು ಡೋಲಾಯಮಾನವಾಗಿಸುತ್ತಿದೆಯೆಂಬುದು ನಿಚ್ಚಳವಾಗಿದೆ. ಕಾಮದ ಆಕರ್ಷಣೆ ಪ್ರಪಾತಕ್ಕೆ ತಳ್ಳುವಂತಿದೆ. ಆದುದರಿಂದಲೆ ನಾಯಕಿ ಅದರ ಲಯಕ್ಕೆ ಕುಣಿಯದಿರಲು, ಅದರ ಕೂಗಿಗೆ ಕಿವಿಗೊಡದಿರಲು ನಿರ್ಧರಿಸುತ್ತಾಳೆ. ಮೋಹದ ಬಾಗಿಲನ್ನು ಮುಚ್ಚುವಲ್ಲಿ ಯಶಸ್ವಿಯಾಗುತ್ತಾಳೆ. 'ಬಿಸಿಲು ಕುಣಿದು ಬೆವತಃದ ಈಗ ಬಂದಃದ ಮಳಿಯ ಹದಕ' ಎನ್ನುವ ಸಾಲು ಮುಂದೆ ಎಲ್ಲ ಒಳ್ಳೆಯದಾಗಬಹುದಾದುದರ ಸೂಚನೆಯೆಂದು ಬಹುತೇಕ ಎಲ್ಲ ವಿಮರ್ಶಕರು ಅಭಿಪ್ರಾಯಪಡುತ್ತಾರೆ.

೧. ಸ್ವರ, ಕೋಗಿಲೆ, ಮರ ಇವುಗಳ ಸಂಬಂಧವೇನು, ಕರೆಯ ಅರ್ಥವೇನು ಎನ್ನುವುದು ಗೊತ್ತಾಗಿಲ್ಲ. ಕೋಗಿಲೆಯ ದನಿ ಎಷ್ಟು ಪ್ರಬಲವಾಗಿದೆಯೆಂದರೆ ಅದರ ದನಿಯಲ್ಲಿ ಅನುಭವದ ಉಳಿದ ವಿವರಗಳು ಮುಳುಗಿ ಬಿಟ್ಟಿವೆ. ಪಡಿದನಿ ಕೊಟ್ಟು ಗುಡ್ಡಗಳು ದಣಿದರೂ ಇದು ಕೂಗುವುದನ್ನು ಬಿಡುವುದಿಲ್ಲ. ... ಕೊನೆಯ ಸಾಲಿನಲ್ಲಿ ಮುಂದೆ ಒಳ್ಳೆಯದಾಗಬಹುದು ಎಂಬ ಸೂಚನೆ ಇದೆ. -ಕುರ್ತಕೋಟಿ.[೧೧೧]

೨. ಜಪದ ಮಂತ್ರದ ಸ್ಥಾನವನ್ನು ಕೋಗಿಲೆಯ ಕರೆ ಆಕ್ರಮಿಸಿ ನಾಯಿಕೆಯ ಜಪಭ್ರಷ್ಟತೆಗೆ ಕಾರಣವಾಗಿದೆಯಲ್ಲದೆ ಅದು ಅವಳ ಮನಸ್ಸನ್ನು ತನ್ನ ವಾಸಸ್ಥಳವನ್ನಾಗಿ ಪರಿವರ್ತಿಸುವ ಪ್ರಯತ್ನದಲ್ಲಿದೆ. ಆದರೆ, ಈ ವೇಳೆಗೆ ಜೋಗಿ ಬರುವುದರಿಂದ ಆ ಪ್ರಯತ್ನ ವಿಫಲವಾಗುತ್ತದೆ. ಕವಿತೆಯ ಕೊನೆಯಲ್ಲಿಯೂ ಕೂಡಾ, ನಾಯಕಿ ಕೋಗಿಲೆಯ ಪ್ರಭಾವದ ವಲಯದಲ್ಲಿಯೇ ಇದ್ದಾಳೆ. 'ಬಿಸಿಲು ಕುಣಿದು ಬೆವತಃದ ಈಗ ಬಂದಃದ ಮಳಿಯ ಹದಕ' ಎಂಬ ಸಾಲಿನಲ್ಲಿ ಮಾತ್ರ ಅವಳ ಸಾಧನೆ ಯಶಸ್ವಿಯಾಗುವ ಮೃದು ಸೂಚನೆಯಿದೆ - ಡಾ. ಜಿ.ಎಸ್. ಆಮೂರ.[೧೧೨]

೩. ಬೇಂದ್ರೆಯ ಕನಸು, ವಾಸ್ತವ ಮತ್ತು ಆಧ್ಯಾತ್ಮ್ಯ ಲೋಕಗಳನ್ನು ಏಕಕಾಲದಲ್ಲಿ ತೆರೆದಿಡುವ ಕವನ ಇದು. ಇದೊಂದು ತೋಪಿನ, ನಿರಂತರವಾಗಿ ಇರುವ ಹಳ್ಳಕೊಳ್ಳದ ಚಿತ್ರ; ಇದೊಂದು ಜೋಗಿಯ ಚಿತ್ರ... ಗೂಬೆ, ಬಾವಲಿ, ಮರಗಳು, ಪ್ರಾಣಿಗಳು ಎಲ್ಲವೂ ಒಂದು ಅಲೌಕಿಕ ಭಯಾನಕ ವಾತಾವರಣ ಸೃಷ್ಟಿಸುತ್ತವೆ... ಈ ಅನುಭವವನ್ನು ಸ್ವಾಗತಿಸಿ ಅನುಭವಿಸಿ ಹೆಚ್ಚು ತೀವ್ರವಾಗಬೇಕಾದಸೆ ಕೋಲ್‌ರಿಜ್ (Coleridge) ತನ್ನ 'ಏನ್ಸಂಟ್ ಮ್ಯಾರಿನರ್' (The Ancient Mariner) ಪದ್ಯದಲ್ಲಿ ಕೊಡುವಂತೆ ಒಂದು ಕತೆಯನ್ನು ಲಾವಣಿಯಾಗಿ ಹೇಳಬೇಕಾಗುತ್ತದೆ. ನಮ್ಮ ಜಾನಪದ ಹಾಡು 'ಜೋಗಪ್ಪ'ನಲ್ಲಿಯಂತೆ ಒಂದು ಆಕರ್ಷಣೆ ಮತ್ತು ವಿಕರ್ಷಣೆಯ, ಕಾತರ ಮತ್ತು ನಿರಾಶೆಯ ಪ್ರಸಂಗದ ಮೂಲಕ ಅನುಭವವನ್ನು ಮಂಡಿಸಬೇಕಾಗುತ್ತದೆ -ಪಿ. ಲಂಕೇಶ್.[೧೧೩]

೪. ಈ ಕವಿತೆ 'ನಿಸರ್ಗ ಮಾಯೆಯ ಮೂಲಕ ಹೊರಾವರಣದ ಜಗತ್ತನ್ನು ನಮ್ಮ ಮುಂದೆ ತೆರೆದಿಟ್ಟರೆ, ಅನುಭಾವದ ಕಾಳರಾತ್ರಿಯ ಮೂಲಕ ಒಳಾವರಣದ ಜಗತ್ತನ್ನು ನಮ್ಮ ಮುಂದೆ ವಿಶಿಷ್ಟ ಪ್ರತಿಮಾವಳಿಗಳ ಮೂಲಕ ತೆರೆದಿಡುತ್ತದೆ.' -ಮಲ್ಲೇಪುರಂ ಜಿ. ವೆಂಕಟೇಶ.[೧೧೪]

೫. ಕೊನೆಯ ಸಾಲುಗಳು 'ಸುಖವಾಗಿ ತಿಂದು ಬದುಕು' ಎಂದು ಹೇಳುವ ಕೋಗಿಲೆಯ ಆಕರ್ಷಕ ಕರೆಯಿಂದ ಮೈಮರೆತು ತಮ್ಮ ಸಾಧನೆಯ ಪಥದಿಂದ ವಿಚಲಿತರಾದ, ಅನೇಕ ಜನರನ್ನು ಕುರಿತು ಹೇಳುತ್ತಿರಬಹುದೆಂದು ನನ್ನ ಊಹೆ.... ಇದನ್ನು ಗಮನಿಸಿದ ಸಾಧಕನು, ಕೋಗಿಲೆಯ ಕೂಗಿನಿಂದ ತಾನೇ ದಾರಿ ತಪ್ಪುವುದಿಲ್ಲವೆಂಬ ಅಂಶ ಖಂಡಿತ. ಅವನು ತಲುಪಿದ ನಿರ್ಧಾರವೇನೆಂಬುದನ್ನು ಕೊನೆಯ ಸಾಲು ಅದ್ಭುತವಾಗಿ ಪ್ರತಿಮಿಸುತ್ತದೆ -ಪ್ರೊ. ಎಚ್.ಎಸ್.ರಾಘವೇಂದ್ರರಾವ್.[೧೧೫]

೬. ಈ ಕವನದಲ್ಲಿನ ನಿಸರ್ಗದ ಮಾಯೆ, ಒಳಜೀವನದೊಳಗಿನ ಕಾಳರಾತ್ರಿಯ ಭಯಾನಕ ಸಂಶಯಾಕುಲಿತ ಭಾವನೆಗಳು, ವಿಷಮಕಾಲದ ಸಂಕಟಗಳು, ಅಂಥ ವಿಷಮಕಾಲದಿಂದ ದಾಟಬೇಕೆಂಬ ನಿರಂತರ ತುಡಿತ ಕೇವಲ ಯಾವುದೋ ಒಬ್ಬ ವ್ಯಕ್ತಿಯ ಅಥವಾ ಒಂದು ಯುಗದ ನೋವಿನ ಫಲ ಮಾತ್ರವಲ್ಲ. ಒಂದು ದೇಶದ, ಒಂದು ನಾಡಿನ ಸಂವೇದನೆಯು, ಪ್ರಜ್ಞೆಯು ದಾಸ್ಯದಿಂದ ಅನುಭವಿಸಿದ ನೋವಿನ ಫಲ. -ಕೆ.ಸಿ. ಶಿವಾರೆಡ್ಡಿ.[೧೧೬]

ಭಕ್ತಿಯ ಹಾದಿಗೆ ತೆರೆದುಕೊಂಡ ಭಕ್ತ ಅಥವಾ ಭಕ್ತೆಯ ಮೇಲೆ ಪ್ರೇಮ ಮತ್ತು ಕಾರುಣ್ಯದ ಮಳೆ ಸುರಿಯುವುದು ಒಳಗಣ್ಣಿಗೆ ಸ್ಪಷ್ಟವಾಗಿ ಗೋಚರಿಸುತ್ತದೆ. ಕವಿತೆಯ ಸಾಧಕನು ವಿಷಮ ಕಾಲದ ಕೋಗಿಲೆಯ ಕರೆಯಿಂದ ದೂರ ಸರಿಯುವುದು ಕೂಡ ಸ್ಪಷ್ಟವಾಗಿದೆ. ಭಯಾನಕವೆನಿಸುವ ಭಾವಲೋಕವೊಂದು ತಾನೆ ತಿಳಿಯಾಗುತ್ತ ಅರಿವಿನ ಪಕ್ವತೆಯ ಕಡೆಗೆ ನಡೆಯುವ ತತ್ವದೊಂದಿಗೆ ಕವಿತೆ ಮುಕ್ತಾಯವಾಗುತ್ತದೆ. ಒಂದು ಪ್ರದೇಶದ ನಿಸರ್ಗ ವ್ಯಾಪಾರವನ್ನು ಬಣ್ಣಿಸುತ್ತ ಮನುಷ್ಯ ಬದುಕಿನ ತಾತ್ವಿಕ ಚಿಂತನೆಯನ್ನು ಕವಿತೆ ಕಟ್ಟಿಕೊಡುತ್ತದೆ.

ಕಾಳರಾತ್ರಿಯ ಸಂಕಟ ಮುಗಿದು ಬೆಳಗು ಮೂಡುತ್ತದೆ. ರಣರಣವೆನ್ನಿಸುವ ಬಿಸಿಲು ಮುಗಿದು ಮುಗಿಲು ಮಳೆ ಕರೆಯುತ್ತದೆ.

ಆಕರ್ಷಣೆ ಮತ್ತು ವಿಕರ್ಷಣೆಗಳ ನಡುವಿನ ಸಂದಿಗ್ಧ ಆಯ್ಕೆಯನ್ನು ಕೈಗೊಳ್ಳಬೇಕಾದಾಗ ಉಂಟಾಗುವ ಮನಸ್ಸಿನ ಉದ್ವೇಗ ಹೇಳತೀರದಷ್ಟಿರುತ್ತದೆ. ಅಗ್ನಿದಿವ್ಯದ ಅನುಭವವು ಅಷ್ಟು ಸರಳವಾಗಿ ಅಭಿವ್ಯಕ್ತಿಗೆ ದಕ್ಕುವುದಿಲ್ಲ. ಪ್ರಾಪಂಚಿಕ ಲೋಕದ ವಿವರಗಳನ್ನು ನೀಡುತ್ತ ಆ ಎಳೆಗಳೊಂದಿಗೆ ಅಲ್ಲೊಂದು ಇಲ್ಲೊಂದು ಅಲೌಕಿಕದ ಸೂಚನೆ ಸೇರಿಸುತ್ತ ಗೊತ್ತಿರದ ಲೋಕದ ಅಂದಾಜು ಸಿಗುವಂತೆ ಮಾಡುವಲ್ಲಿ ಬೇಂದ್ರೆ ಯಶಸ್ವಿಯಾಗುತ್ತಾರೆ. ಕವಿಗೆ ಬೆಳಗಿನ ಜಾವ ತಾಯಿ ಮತ್ತು ಅಜ್ಜಿ ಬೀಸುವಾಗ ಹೇಳುತ್ತಿದ್ದ ಪದಗಳೊಂದಿಗೆ ಅಲೌಕಿಕದ ನಾದ ಕಿವಿಗೆ ಬೀಳುತ್ತಿತ್ತು. ಕಾಳು ಬೀಸಿ ಹಿಟ್ಟು ಮಾಡುವುದು ಒಂದು ಲೌಕಿಕ ವ್ಯಾಪಾರ. ಆದರೆ ಆ ಕೆಲಸದೊಂದಿಗೆ ಶ್ರದ್ಧೆ ಬೆರೆಸುವುದು, ನಂಬಿಕೆ ಇಟ್ಟು ಭಗವಂತನ ಸ್ಮರಣೆ ಮಾಡುವುದು ಅಲೌಕಿಕದ ಎಳೆಗಳಾಗಿವೆ. ''ನಿಂಬಿಯ ಮರ ಹುಟ್ಟಿ ನಿಂಗಕ್ಕೆ ನೆರಳಾಗಿ ಬಂದ ಜಂಗಮಕಃ ಬಸವಯ್ಯಾ ಸೂವಿ' ಎನ್ನುವ ಬಾಲಬಸವರ ಹಾಡು ಕಿವಿಗೆ ಬೀಳುತ್ತಲೆ ನಮ್ಮ ಕಾಲು ಹೇಳದೆ ಕಿತ್ತಿ ಅವರಿದ್ದಲ್ಲಿಗೆ ಹೋಗಿ ಅವರ ಸಾಕ್ಷಾತ್ಕಾರವಾದಾಗ ಈ ಕಣ್ಣಿಗೆ ತೃಪ್ತಿ. ಗೊಲ್ಲರು, ಕವಲೆತ್ತಿನವರು, ದುರ್ಗಮುರ್ಗಿಗಳು - ಎಂಥ ''ತಾನಾ ತಂದಾನಾಃ'' ಇದ್ದರೂ ಕಿವಿಗೆ ಔತಣವೆನಿಸುತ್ತಿತ್ತು''[೨೨೨] ಎನ್ನುವ ಬೇಂದ್ರೆ ಮಾತಿನಲ್ಲಿ ಅವರು ಹಾದು ಬಂದ ಭಕ್ತಿ ಪರಂಪರೆಯ ಎಳೆಗಳಿವೆ. ಇಂತಹ ಅಮರ ಎಳೆಗಳೆ ಅವರ ಕಾವ್ಯಕ್ಕೆ ಅಲೌಕಿಕದ ತಂತುಗಳನ್ನು ಜೋಡಿಸಿದವು. ಜಂಗಮನೊಬ್ಬ ಮರದ ಕೆಳಗಿನ ಲಿಂಗಕ್ಕೆ ನೆರಳಾಗಿ ಶಿವರಾತ್ರಿಯ ದಿನ ನಿಂತಂತೆ; ಬೇಡನೊಬ್ಬ ತನಗೆ ಗೊತ್ತಿಲ್ಲದಂತೆಯೆ ಲಿಂಗಕ್ಕೆ ನೀರು ಎರೆದು ಬಿಲ್ವಪತ್ರಿ ಮುಡಿಸಿದಂತೆ ಅಲೌಕಿಕದ ಸಂಕೇತಗಳು ಬದುಕಿನ ದಟ್ಟ ಹೋರಾಟದಲ್ಲಿಯೂ ಕೂಡ ಇರಬಲ್ಲವು ಎಂಬುದನ್ನು ಅವರ ಕವಿತೆಗಳು ಸೂಚಿಸುತ್ತ ಬಂದಿವೆ. 'ಜೋಗಿ' ಯಲ್ಲಿಯೂ ಅಷ್ಟೆ, ನಾಯಕಿಯ ತಪಸ್ಸಿಗೆ ಜೋಗಿ ನೆರವಾಗುತ್ತಿದ್ದಾನೆ. ಸುಡು ಬಿಸಿಲಿಗೆ ಆಕೆ ಬೆಂದು ಹೋಗದಿರಲೆಂದು ನೆರಳಾಗಿ ಬರುತ್ತಾನೆ. ಆ ನೆರಳಿನ ಸಹಾಯದಿಂದ ಆಕೆ ಆಧ್ಯಾತ್ಮದ ಪರಿಧಿಯಲ್ಲಿಯೆ ಉಳಿಯುತ್ತಾಳೆ. ತಮ್ಮ 'ಗುರು-ಚತುರ್ಮುಖಿ'ದಲ್ಲಿ ಬೇಂದ್ರೆಯವರು 'ಗುರುವಿನ ಹತ್ತಿರಿರು ಎಂದ ಸರ್ವಜ್ಞ'[೨೨೮] ಎನ್ನುವ ಮಾತನ್ನು ಉಲ್ಲೇಖಿಸುತ್ತಾರೆ. ಅಲೌಕಿಕತೆಯನ್ನು ಒಂದು ಮಿಂಚು ಹೊಡೆದಂತೆ ಹೇಗೆ ಹೊಳೆಯಿಸಬೇಕೆಂಬುದು ಕವಿಗೆ ತಿಳಿದಿತ್ತು. ಅದನ್ನೇನು ಅವರು ಪ್ರಜ್ಞಾಪೂರ್ವಕವಾಗಿ ಮಾಡುತ್ತಿರಲಿಲ್ಲ. ತತ್ವಪದಕಾರರ, ವಚನಕಾರರ, ದಾಸರ, ಪಾಶ್ಚಾತ್ಯ ದಾರ್ಶನಿಕರ ಪರಂಪರೆಯಲ್ಲಿ ಅವರು ಹಾದು ಬಂದಿದ್ದರಿಂದ ಸಹಜವಾಗಿಯೆ ಅದು ಅವರಿಗೆ ಲಭಿಸಿತ್ತು. ಅನುಭಾವಿ ಕವಿ ಎ.ಈ. ಅವರ 'ಕಲೆಕ್ಟೆಡ್ ಪೋಯೆಮ್ಸ್'ನ ಒಂದು ಪ್ರತಿಯಲ್ಲಿ ವಿ.ಕೆ.ಗೋಕಾಕ್ ಅವರು ಬೇಂದ್ರೆಯವರು ಎ.ಈ. ಹಾದಿಯಲ್ಲಿದ್ದಾರೆ. (A.E. the Seer. D.R. the seer) ಎಂದು ಆಗಲೆ ಬರೆದಿದ್ದುದು ಬೇಂದ್ರೆಯವರು ಗೆಳೆಯರ ಸಂಪರ್ಕದಲ್ಲಿ ಪಡೆದುಕೊಂಡ ಅನುಭಾವದ ಅಂಶಗಳನ್ನು ತಿಳಿಸುತ್ತದೆ. ಆದರೆ ಮಧುರಚೆನ್ನರಂತೆ ಪೂರ್ಣ

ಅನುಭಾವ ಲೋಕವೆ ಅವರ ಆದ್ಯತೆಯಾಗಿರಲಿಲ್ಲ. ಭೂಮಿಯ ಮೇಲೆ ಬದುಕಿ ಬಾಳುವ ತೀವ್ರತೆಯನ್ನು ಅಷ್ಟೆ ಆಕರ್ಷಕವಾಗಿ ಅವರು ಹಿಡಿಯಬಲ್ಲವರಾಗಿದ್ದರು.

ಧಾರವಾಡದ ಸೀಮೆಯ ನಿಸರ್ಗದ ಪ್ರತಿಮೆಗಳ ಮೂಲಕವೆ ಬೇಂದ್ರೆಯವರು ಕಟ್ಟಿ ನಿಲ್ಲಿಸುವ ಮತ್ತೊಂದು ಅನುಭಾವ ಪದರಿನ ಪದ್ಯವೆಂದರೆ 'ಸಣ್ಣ ಸೋಮವಾರ.'[೧೧೯] ಉತ್ತರ ಕರ್ನಾಟಕದ ಜನರ ಬಾಯಲ್ಲಿ ಶ್ರಾವಣ ಸೋಮವಾರವು 'ಸಣ್ಣ ಸ್ವಾಮಾರ' ಆಗಿರುವುದನ್ನು ಬೇಂದ್ರೆ ಅದನ್ನು ಹಾಗೆಯೆ ಉಳಿಸಿಕೊಂಡು 'ದೇಸಿ'ಯನ್ನು ಹಾಗೂ ಧಾರವಾಡ ಸೀಮೆಯನ್ನು ಮರೆದಿರುವುದು ಮೇರು ಕಾವ್ಯಾಭಿವ್ಯಕ್ತಿಯ ಲಕ್ಷಣವೆನ್ನಬಹುದು. ಸರಳವಾದ ಭಾಷೆಯಲ್ಲಿ ಉತ್ಕಟವಾದ ಜೀವನಾನುಭವ ಈ ಪದ್ಯದಲ್ಲಿ ಹರಿದಿದೆ. 'ಸಣ್ಣ ಸೋಮವಾರ' ಬೇಂದ್ರೆಯವರ ಬಾಲ್ಯದ ದಿನಗಳನ್ನು ನೆನಪಿಸುವಂತಿದ್ದರೂ, ಭಜನೆಯ ಮೇಳದ ದನಿಯೊಂದಿಗೆ, ಓಂಕಾರದ ನಾದದೊಂದಿಗೆ ಮನುಷ್ಯ ಗುಡಿಗೆ ನಡೆದಾಗ; ಜಂಭ ಕಳೆದುಕೊಂಡು ದೇವರ ಮುಂದೆ ಕಂಬದಂತೆ ನಿಂತಾಗ ಸೋಮೇಶ್ವರ ಬಂದು ಕೈ ಹಿಡಿಯಬಲ್ಲನೆಂಬ ಆಶಯ ಇಲ್ಲಿ ಮುಖ್ಯವಾಗಿದೆ. ಮಾನಸ ಸರೋವರದ ತಳಮಳ ಶಿವನ ಮುಂದೆ ಮಾಯವಾಗಿ ಒಳಗೆ ಮತ್ತು ಹೊರಗೆ ಕೈಲಾಸವೆ ತುಂಬಿಕೊಳ್ಳುವುದು; ನಮೋ ಎನ್ನುವ ಶಬ್ದದಲ್ಲಿ ಲೀನವಾಗುವುದು; ಎಚ್ಚರಾದಾಗ ಲೌಕಿಕದ ಜಾತ್ರೆಗೆ ಮರಳುವುದು ಕವಿತೆ ಎಣಿಸುವ 'ಖ್ಯಾಲ'ಗಳಾಗಿವೆ. ಮೋಡದ ಹಡಗಿನಲ್ಲಿ, ಮಿಂಚು ಗುಡುಗಿನಲ್ಲಿ, ಏರಿಳಿವಿನ ಅಂದದಲ್ಲಿ, ತೊಯ್ದು ಗಿಡದಿಂದ ಟಪಟಪ ಬೀಳುವ ನೀರಲ ಹಣ್ಣಿನಲ್ಲಿ, ಗಿಡ-ಮರಗಳ ಗುಂಪಿನಲ್ಲಿ ಶ್ರಾವಣವೆಂಬ ಹಬ್ಬ ವೈವಿಧ್ಯತೆಯಿಂದ ಸಂಭ್ರಮಿಸುವುದು ನಿಸರ್ಗದ ಜೀವಂತಿಕೆಗೆ ಕಾರಣವಾಗಿದೆ. ಸೋಮೇಶ್ವರನನ್ನು ಕಾಣಲು ಶ್ರಾವಣ ಹಾದಿಯಾಗಿ ತೆರೆದುಕೊಂಡಿದೆ. ಗೆಳೆಯರ ಜೊತೆ ಆಟವಾಡುತ್ತ, ಕಾಯಿ-ಕರ್ಪೂರ, ಬೆಲಪತ್ರಿ ಹಿಡಿದುಕೊಂಡು ಸೋಮೇಶ್ವರನಿಗೆ ನಡೆಯುವುದು ಬಾಲ್ಯದ ನೆನಪಾಗಿದ್ದರೂ, ಕನಸಿನಲ್ಲಿ ಕಂಡಂತಿರುವ ಅನುಭೂತಿಯ ಎಳೆ ಕಾಲಾತೀತವಾಗಿ ಚಾಚಿಕೊಳ್ಳುತ್ತದೆ :

> ಬಂತಣ್ಣ ಸಣ್ಣ ಸೋಮವಾರ
> ಕಾಣಬೇಕಣ್ಣ ಸೋಮೇಶ್ವರ
> ಹಾದಿಗುಂಟ ಚೆಲ್ಲಾಟ
> ದಾರಿ ಉದ್ದ ನೀರನೋಟ
> ಹಸರಾಣಿ ಬನರಾಣಿ ತ್ವಾಟ;
> ಅತ್ತ ಏರಿ ಇತ್ತ ವಾರಿ
> ನಡುನಡುವೆ ಕೆರಿ, ಕೆರಿ
> ಸುತ್ತು ಮುತ್ತು ಪಯಿರಿನ ಮಾಟ

ಹಸುರಿನಿಂದ, ಪಯಿರಿನಿಂದ, ಏರಿ-ವಾರಿಗಳಿಂದ, ಕೆರೆ-ನದಿಗಳಿಂದ ಕಂಗೊಳಿಸುವ ನಿಸರ್ಗ ಒಂದು ರೀತಿಯಲ್ಲಿ ಸೋಮೇಶ್ವರದಲ್ಲಿ ನೆಲೆ ನಿಂತ ಚೈತನ್ಯ ಸ್ವರೂಪನಿಗೆ ಪಚ್ಚೆತೋರಣವಾಗಿದೆ. ಸಡಗರದಿಂದ ಮಕ್ಕಳು-ದೊಡ್ಡವರು ಅಲ್ಲಿಗೆ ನಾ ಮುಂದು, ತಾ ಮುಂದು ಎಂದು ನಡೆಯುವುದು; ಫರಾಳ ತಿನ್ನುವುದು; ಹುಡುಗರ ಕಾಟಕ್ಕೆ ಗಿಡದ ಮೇಲಿನ ಮಂಗ ಹುಬ್ಬು ಹಾರಿಸುವುದು; ಲಿಂಗದೆದುರಲ್ಲಿ ಕಣ್ಣು ತಾವೇ ತಾವು ಮುಚ್ಚುವುದು; ಗವಿಯೊಂದು ಗೋಚರಿಸಿ ಚಂದ್ರಕ್ವಾರಿ ಪ್ರಕಾಶಿಸುಪುದು - ಈ ಎಲ್ಲ ಲೌಕಿಕ ಮತ್ತು ಅಲೌಕಿಕ ಸಂಗತಿಗಳನ್ನು ಬೇಂದ್ರೆ ಬೆರೆಸಿ, ನುರಿಸಿ, ಅರಗಿಸಿಕೊಳ್ಳುವ ಅನುಭವ ಕಥನ ಓದುಗನನ್ನು ಭಕ್ತಿಯ ಭಾವದಲ್ಲಿ ಅದ್ದುತ್ತದೆ.

ಗರ್ಭ ಗುಡಿಯೊಳಗ ಲಿಂಗ
ನಿದ್ದಿಯೊಳಗs ನೋಡಿದ್ಹಾಂಗ
ಕಣ್ಣು ಮುಚ್ಚತಾವ ನಮೋ ಎಂದು
ಗವಿಯೊಳಗಿನ ದಾರಿ
ಹರದಾರಿ ಹರದಾರಿ
ಮಿಂಚಿತ್ತು ಚಂದ್ರಕ್ವಾರಿ ಒಂದು
ನಿಂತs ವೈಯಾಗಿ ಖಂಬ
ಸೋರ್‍ಯಾವ ಜಂಬಗಿಂಬ
ಹಿಡಿದಾನ ಕೈಯ್ಯ, ಶಿವನೆ ಬಂದು

ಎಚ್ಚರದಾಗ ಇದು ಹುಚ್ಚುಚ್ಚಾರ ಅನಿಸಿ
ಎಲ್ಲಾರ ಕೂಡ ಕೈ ಮುಗಿದು
ಬೆಂಡೂ ಬೆತ್ತಾಸ ಅಂತ
ತಿಂತsನ ನುರಿಸಿಕೊಂತ
ಹೋಗತಿದ್ವಿ ಜಾತ್ರಿಗಿ ಜಿಗಿದು

ವಾಸ್ತವದ ವ್ಯಾಪಾರ ಮತ್ತು ಮನಸ್ಸಿನ ಒಳಗಡೆ ನಡೆಯುವ ಆಧ್ಯಾತ್ಮಿಕ ತೇಲುಮೇಲ ಅಲೌಕಿಕ ಜಗತ್ತು ಇದೆಯೆಂದರೆ ಇದೆ. ಇಲ್ಲವೆಂದರೆ ಇಲ್ಲ ಎನ್ನುವ ವಾತಾವರಣವನ್ನು ನಿರ್ಮಿಸಿವೆ. ಅನುಭೂತಿ ಎಂಬುದು ವೈಯಕ್ತಿಕವಾಗಿ ಆಚರಿಸಿಕೊಳ್ಳಬೇಕಾದ, ಕಟ್ಟಿಕೊಳ್ಳಬೇಕಾದ ಭಕ್ತಿ ಎಂದು ಕವಿತೆ ಹೇಳುತ್ತದೆ. ಜಾತ್ರೆಯ ವ್ಯಾಪಾರ, ಬೆಂಡು-ಬೆತ್ತಾಸು-ಚುರಮರಿ, ಹುಡುಗರ ಗದ್ದಲ, ಸೀಟಿ ಹೊಡೆಯುತ್ತ ಬರುವ ಗೂಡ್ಸ್ ಗಾಡಿ ಮುಂತಾದವು ದಿನನಿತ್ಯದ ಜೀವನವನ್ನು ಪ್ರತಿನಿಧಿಸಿದರೆ ಗರ್ಭಗುಡಿಯಲ್ಲಿ ಹೋಗಿ ನಿಂತಾಗಿನ ಒಂದೆರಡು ಕ್ಷಣಗಳು ಅಲೌಕಿಕ ಲೋಕದ ದರ್ಶನ ಮಾಡಿಸುತ್ತವೆ. ಅಗಮಿಕದ ಎಳೆಗಳು ಕಂಡೂ ಕಾಣದಂತೆ ಬದುಕಿನ ಎಳೆಗಳ ಜೊತೆ

ಅಸ್ತಿತ್ವದಲ್ಲಿರುವುದನ್ನು 'ಸಣ್ಣ ಸೋಮವಾರ' ಕವಿತೆ ಮನದಟ್ಟು ಮಾಡುತ್ತದೆ. ನೋಡಬಲ್ಲವರಿಗೆ, ಗುರುತಿಸಬಲ್ಲವರಿಗೆ ಶಿವರಾತ್ರಿಯ ಬೆಳಕು ಬೆಳ್ಳ ಬೆಳಗಾಗಿ ಶಿವನ ಅಸ್ತಿತ್ವದ ಕುರುಹಾಗಿ ಕೈಲಾಸವನ್ನು ನಿರ್ಮಿಸಿ ಇಡುತ್ತದೆ.

ಆ ರಾತ್ರಿ ಈ ರಾತ್ರಿ
ಯಾತರದು ಐತಿ ಖಾತ್ರಿ
ಶಿವರಾತ್ರಿ ಬೆಳಕೆ, ಬೆಳ್ಳಬೆಳಗು
ಒಟ್ಟಿತ್ತು ಏನೋ ಹಾಸ
ತಟ್ಟಿತ್ತು ಶಿವಭಾಸ
ಕೈಲಾಸಾನೆ ಹೊರಗೂ ಒಳಗು
ಜೀವದ ಜಾಗರಣೆ
ಶ್ರಾವಣದ ಶರಣ ಸರಣಿ
ಓಂಕಾರ ಕಹಳೆಯ ಮೊಳಗು

ಸೋಮೇಶ್ವರ ದೇವಸ್ಥಾನದ ಹತ್ತಿರ ಹುಟ್ಟುವ ಶಾಲ್ಮಲಾ ನದಿ ಸಣ್ಣ ತೊರೆಯಿದ್ದದ್ದು ಗುಪ್ತಗಾಮಿನಿಯಾಗಿ ಹರಿಯುತ್ತ ಅಗಲವಾಗಿ, ಆಳವಾಗಿ, ಗಂಗಾವಳಿಯಾಗಿ ಅವಸರದಿಂದ ಕಡಲ ಸೇರಲು ಗೋಕರ್ಣದ ಕಡೆಗೆ ಧಾವಿಸುತ್ತಿರುವುದನ್ನು ಬೇಂದ್ರೆ ಹೇಳುತ್ತ ಶಾಲ್ಮಲೆ ಹುಟ್ಟುವ ಸೋಮೇಶ್ವರ ಮತ್ತು ಅದು ಸೇರುವ ಮಹಾಬಳೇಶ್ವರ (ಗೋಕರ್ಣ) ಚೈತನ್ಯದ ನೆಲೆಗಳಾಗಿರುವುದನ್ನು ಪರೋಕ್ಷವಾಗಿ ಸೂಚಿಸುತ್ತಾರೆ. ದೇವ ಇರುವ ತಾಣಗಳಿಂದ ಅಲೌಕಿಕ ಸ್ಪರ್ಶಕ್ಕೆ ನದಿ ಒಳಗಾಗಿದೆಯೆಂಬುದನ್ನು ಇದು ಹೇಳುತ್ತದೆ.

ಶಾಲ್ಮಲಿ ಸಣ್ಣ ಬಾಲಿ
ಕಿವಿಯಲ್ಲಿ ತಾಳೆ-ವಾಲಿ
ಗರಿಗರಿ ಬನದಾಗ ಅಡಗಿ;
ಗಂಗಾ ಹೊಳಿಯಾಗಿ
ಸಾಗರಬಿದ್ದು ಸಾಗರಕಾಗಿ
ಹೊರಟಾಳ ಗೋಕರ್ಣಕಡಿಗಿ
ಬೂರಲ ದೀಪಮಾಲಿ
ನಂದಿಸಿ ಸೆಜ್ಜೆ ಸಾಲಿ
ಗತ್ತಿನ ಸಪ್ಪಳಿಲ್ಲದ ನಡಿಗಿ

'ದೇವಸ್ಥಾನ, ಭಜನೆಯ ಮೇಳ, ನದಿ, ಸುತ್ತಲಿನ ಬನ, ಧಾರವಾಡದ ಸೀಮೆಯ ಚಂದ ಇವೆಲ್ಲ ಆಸ್ತಿಕತೆಯ ಭಾವವನ್ನು ಹುಟ್ಟಿಸಿವೆ. ದೇವರ ಸ್ವರೂಪ ಈ ಭಾವದ ಪ್ರತಿಬಿಂಬವಾಗುತ್ತದೆ'[illegible] ಎಂದು ಕುರ್ತಕೋಟಿಯವರು ಹೇಳುವುದು ಸೂಕ್ತವಾಗಿದೆ. ಭಕ್ತಿಯ ಭಾವದಿಂದ ತಮ್ಮ ಸಂವೇದನೆಗಳಿಗೆ ಕವಿ ಅಭಿವ್ಯಕ್ತಿ ಕೊಟ್ಟಿರುವುದು ಮೇಲು ನೋಟದಲ್ಲಿಯೆ ತಿಳಿಯುತ್ತದೆ. ಆದರ ಜೊತೆಗೆ ಗರ್ಭಗುಡಿಯಲ್ಲಿ ಸಣ್ಣದಾಗಿ ಮಿನುಗುತ್ತಿರುವ ಎಣ್ಣೆಯ ದೀಪದಂತೆ ಸರಿದು ಹೋದ ಕಾಲ ಸದಾ ಮಿನುಗುತ್ತಿರುತ್ತದೆಯೆಂದು ಹೇಳುವ ಮೂಲಕ ತಮ್ಮ ಅನುಭವಕ್ಕೆ ಸಾರ್ವತ್ರಿಕತೆಯನ್ನು ತಂದುಕೊಡುತ್ತಾರೆ.

ನೆನಪಿನಾ ಓರಿಯೊಳಗ
ಮಿಣುಕ್ತಾವ ಎಣ್ಣೀದೀಪ
ಎಲ್ಲೆ । ಹೋದಾವೊ ಗೆಳೆಯಾ ಆ ಕಾಲಾ?

ಕಳೆದು ಹೋದ ಕಾಲದ ಬಗ್ಗೆ ಪರಿತಾಪವಿಲ್ಲ. ಬದಲಾಗಿ ಪರಿತೋಷವಿದೆ. ನಿಸರ್ಗದ ಪರಿಭಾಷೆಯಲ್ಲಿ ಮಾತನಾಡುತ್ತ ದೇವರ ಹಾಡಿಗೆ ಹಂದರ ಹಾಕುವ ಅನುಭಾವದ ದನಿಯಲ್ಲಿ ತಮ್ಮ ದನಿಯನ್ನೂ ಸೇರಿಸಿ ಅದರಲ್ಲಿ ತಲ್ಲೀನರಾಗುತ್ತಾರೆ.

ಮುಗಿಲ-ಮಲ್ಲಿಗೆ (೧೯೬೧) ಸಂಕಲನದಲ್ಲಿರುವ 'ಸಣ್ಣ ಸೋಮವಾರ' ಕವಿತೆಯು ತನ್ನ ದಟ್ಟ ಅಲೌಕಿಕತೆಯ ಮೂಲಕ ಸಂಕಲನದ ಶೀರ್ಷಿಕೆಗೆ ಅನ್ವರ್ಥಕವಾಗುವಂತೆ ಅಲೌಕಿಕದ ಪರಿಮಳದಲ್ಲಿ ಮಿಂದೇಳುತ್ತದೆ. ಹಾಗೆ ನೋಡಿದರೆ ಈ ಗುಚ್ಛದಲ್ಲಿಯ ಹಲವು ಕವಿತೆಗಳು ಮುಗಿಲಿನ ಕಡೆಗೆ ಮುಖ ಮಾಡಿವೆ. ಭಕ್ತಿಯ ಭಾವದಿಂದ ತುಂಬಿಕೊಂಡಿವೆ. ಕ್ಷಣ ಮಾತ್ರದಲ್ಲಿ ಕವಿತೆಯ ಭಾವದ ಮೂಲಕ ಲೌಕಿಕವನ್ನು ಅಲೌಕಿಕವನ್ನಾಗಿ ಪರಿವರ್ತಿಸುವ; ಶಿವನ ಕೈಯಲ್ಲಿಯ ಅಲಗು ಹೊಳೆಯುವಂತೆ ಮಾಡುವ; ಲಿಂಗ ಪ್ರಕಾಶಿಸುವಂತೆ ತೋರುವ; ಕಷ್ಟ-ಸುಖದ ಬದುಕನ್ನು ಹೊಸ ಮಜಲಿಗೆ ಮುಟ್ಟಿಸುವ ಕ್ರಿಯೆ ಅವರ ಕವಿತೆಗಳಲ್ಲಿ ನಡೆಯುವುದರಿಂದ ಪರಿವರ್ತನೆಯ ಅನುಭವ ಸಹೃದಯನಿಗಾಗುತ್ತದೆ. ಮನೆಯ ಅಂಗಳದಲ್ಲಿರುವ ಮುಗಿಲ-ಮಲ್ಲಿಗೆಯ ಮರ ಚೈತನ್ಯ ಸ್ವರೂಪನಿಗೆ ಹೂವು ಚೆಲ್ಲುತ್ತ, ಪರಿಮಳ ಬೀರುತ್ತ ಆಕಾಶದ ಕಡೆಗೆ ಏರುತ್ತಿರುವಂತೆ ಮನುಷ್ಯನ ಬದುಕು ಕೂಡ ಅಂತಹ ದೈವಿಕ ಅನುಭೂತಿಯ ಎಳೆಗಳಿಂದ, ಆತ್ಮವಿಕಾಸದ ಹಂತಗಳಿಂದ ತುಂಬಬೇಕೆಂದು ಬೇಂದ್ರೆಯವರು ಅಪೇಕ್ಷಿಸುವುದು ಗೋಚರವಾಗುತ್ತದೆ. ಪ್ರಕೃತಿಯಲ್ಲಿನ ಪುಷ್ಪವೊಂದು ಹೇಗೆ ಬದಲಾವಣೆ ಹೊಂದುತ್ತದೆಯೋ, ಹೇಗೆ ಮಾಗುತ್ತದೆಯೋ ಅದೇ ರೀತಿ ನಮ್ಮ ಬದುಕಿನಲ್ಲಿ ಮಾಗುವಿಕೆ ಸಂಭವಿಸಬೇಕೆನ್ನುವ ವಿಚಾರಧಾರೆ ಅವರ ಕವಿತೆಗಳಲ್ಲಿ ಹರಿಯುತ್ತದೆ.

ಪರಿವರ್ತನೆಯ, ವಿಕಾಸದ ಹಾದಿಗೆ ಪ್ರಕೃತಿಯನ್ನು ಮಾದರಿಯನ್ನಾಗಿ ಅವರು ಸ್ವೀಕರಿಸಿದರು. 'ಮುಗಿಲ-ಮಲ್ಲಿಗೆ' ಪದ್ಯದ ಭಾವಸಂದರ್ಭ ಸೂಚಿಯಲ್ಲಿ ಅದು ವ್ಯಕ್ತವಾಗುತ್ತದೆ. 'ನನ್ನ ಮನೆಯಂಗಳದಲ್ಲಿ

ಮುಗಿಲ-ಮಲ್ಲಿಗೆಯ ಮರವೊಂದಿದೆ. ಈ ವಿಷಯ ಸಖಿಗೀತದಲ್ಲಿಯೂ ಬಂದಿದೆ. ಅದರ ಸಾಂಕೇತಿಕ ಅರ್ಥವನ್ನು ಭಾವಿಸಿ ಬರೆದುದು. 'ಪರಿಣಮನ ಪುಷ್ಪ' (Transformation Flower) ಎಂದೂ ಅದರ ಸಂಕೇತ.'[೧೨೧] ಪುರುಷವನ್ನು ಮುಟ್ಟಬೇಕೆನ್ನುವ ಹಂಬಲ ಉಕ್ಕಿನದ್ದಾಗಬೇಕೆಂದು; ಲೌಕಿಕವೆಂಬ ಹುಸಿ ಸುಖದ ಎದುರು ಅಲೌಕಿಕದ ನಿಜವನ್ನು ಅರ್ಥಮಾಡಿಕೊಳ್ಳಬೇಕೆಂದು ಅವರು ಬಯಸುವದರ ಸಂಕೇತವಾಗಿ ನಿಸರ್ಗ ಕಾಣಿಸಿಕೊಳ್ಳುತ್ತದೆ.

ಭೂಮಿಯಲ್ಲಿ ನಿನ್ನ ಬೇರು
ಬಯಲಿನಲ್ಲಿ ನಿನ್ನ ಏರು
ಏನು ಲಕ್ಷ್ಯ? ಇಲ್ಲ ಲಕ್ಷ?
ಯಾವ ಲೀಲೆ ತೋರುವೆ?
ಯಾವ ಲೋಕಕೇರುವೆ?

ಓಹೊ ಹೂವು ಜಲ್ಲಿ ಜಲ್ಲಿ
ಬಾಗಿದೆ ಅಗೊ ಗೊಲ್ಲಿ ಗೊಲ್ಲಿ
ನೇಹ ನೂತು - ಮಮತೆ ಸೋತು
ಯಾ ಪ್ರಸಾದ ತರುತಿಹೆ?
ಯಾ ಅರ್ಪಣದಿರುತಿಹೆ?[೧೨೨]

ಲೌಕಿಕದಲ್ಲಿ ಉಂಡ ಸವಿಗಿಂತ ಭಿನ್ನವಾದ ಸವಿಗೆ ಮನಸ್ಸು ಹಾತೊರೆಯುವುದು ಸ್ಪಷ್ಟವಾಗಿದೆ. ಜೀವನದ ಕಷ್ಟಗಳನ್ನು ನುಂಗದೆ ಅದು ರುಚಿಸದು. ಶಿವನು ಹಾಲಾಹಲವನ್ನು ಕುಡಿದಿದ್ದರಿಂದಲೆ ಅಮೃತದ ಸೆಲೆ ಉಕ್ಕುವಂತಾಯಿತು. ಪ್ರಕೃತಿಯ ಚೆಲುವನ್ನು ಮೀರಿ ಚೈತನ್ಯ ಸ್ವರೂಪವಾಗಿರುವ ಮಾಯೆಯ ಸೌಂದರ್ಯ ಕಂಗೊಳಿಸುತ್ತದೆ.

ಶಿವಾ ಕುಡಿದಿದ್ದಾ ವಿಷಾ
ಅಂತಽ ಸುರುವಿದಾ ರಾಮರಸಾ
ಹೊಸಾ, ಹೊಸಾ, ಹೊಸಾ
ಸುರೂ ಆಗಲಿ ಓಂ ನಾಮಾ
ನಿನ್ನ ಚೆಲುವಿಗಿಲ್ಲಾ ಸೀಮಾ

ಆದನ್ನಿಲ್ಲಿ ಉಕ್ಕಿಸಬೇಕು
ಕುಡಿದ ಹಾಲು ದಕ್ಕಸಬೇಕು
ಆಗ ಸೆಲೀತ್ತೈತಿ ಬ್ಯಾರೆ ಸವಿ[೧೨೩]

ಮನುಷ್ಯನಲ್ಲಿಯ ದಾನವತ್ವ ಸತ್ತು, ಮಾನವೀಯತೆ, ಮಾನವತೆಗಳಿಂದ ಕಣ್ಣಾಸ್ನು ತುಂಬಿಸಿಕೊಂಡರೆ ಅದೇ ಭಾವ, ಅನುಭಾವದ ಮಾರ್ಗ ಎಂಬುದು 'ಕನ್ನಡ-ಕವನ', 'ಎಚ್ಚರಾಗಿದೆ ಹಳ್ಳಿ', 'ಭಾವವೇನೆ ಇರಲಿ' ಕವಿತೆಗಳ ವಸ್ತುವಾಗಿದೆ. ಮನುಷ್ಯರಲ್ಲಿ ವ್ಯತ್ಯಾಸವಳಿದು ಮಾತು ಜ್ಯೋತಿಯಾಗಿ ವೇದಾಂತವೆಂಬ ಸದ್ದಿಗೆ ಮರುಳಾಗದೆ ಪಿತ್ತಲ ಮದ್ದಾಗಿರುವ ಅನುಭಾವವನ್ನು ಅನುಸರಿಸಬೇಕೆನ್ನುವ ಅಪೇಕ್ಷೆ ಅಲ್ಲಿ ವ್ಯಕ್ತವಾಗಿದೆ.

ಭಾವವೆ ದೇವ, ಭಾವವೆ ದೆವ್ವ
ದುರ್ಗಿಗು ದೇವುವ್ವಗು ನಂಟು
ಬೆಳಕು ಬಿಟ್ಟು ನೆರಳೆಲ್ಲಿದೆ ತಮ್ಮಾ?
ನಮ್ಮಾ ನಿಮ್ಮಾ ಇದೆ ಗಂಟು![೧೨೪]

ದಿವ್ಯದ ಸರಳತೆಯನ್ನು ಬಣ್ಣಿಸಿದುದಾದ ಮೇಲೆ ಸಂಕೇತ, ಪ್ರತಿಮೆ, ಪ್ರತೀಕಗಳು ಹೆಚ್ಚಿನ ಅರ್ಥ ಉಳಿಸಿಕೊಳ್ಳುವುದಿಲ್ಲವೆಂದು ಬೇಂದ್ರೆಯವರಿಗೆ ತಿಳಿದಿದೆ.

ರೂಪ ಕಾಂತಿಯಲೆ ರೂಪದ ಭ್ರಾಂತಿ
ಹೆಜ್ಜೆ-ಗೆಜ್ಜೆಗಳ ಸುಳಿವೆಲ್ಲೋ?
ಓಂ ರಾಗದ ಕವಿಗಾರನೆ ಹೇಳು
ಪ್ರತಿಮೆ ಪ್ರತೀಕವು ಯಾಕಲ್ಲೋ?[೧೨೫]

ಜೀವನವನ್ನು ಮಾಗಿಸುವ ಹಾಗೂ ಕಷ್ಟಗಳ ವಿಷವರ್ತುಲದಲ್ಲಿ ಅಮೃತದ ಧಾರೆ ಹರಿಸುವ ಭಕ್ತಿಯ ರಸವಿಲ್ಲದಿದ್ದರೆ ಬದುಕಿಗೆ ಅರ್ಥವಿರುವುದಿಲ್ಲ. ದೈವದ ಸಾನಿಧ್ಯಕ್ಕಾಗಿ ಹುಟ್ಟಿನಿಂದ ಸಾಯುವವರೆಗೂ ಆಧ್ಯಾತ್ಮದ ಸಿದ್ಧಿಯನ್ನೇ ಮಾಡಬೇಕೆಂದಿಲ್ಲ. ತಪಸ್ಸನ್ನೆ ಆಚರಿಸಬೇಕೆಂದಿಲ್ಲ. ಶುದ್ಧಭಾವದ ಮೂಲಕ, ಕುಂದುಗಳನ್ನು ಕರಗಿಸುವ ಮೂಲಕ ಭಕ್ತಿಯ ಮಳೆಗೆ ಮೈಯೊಡ್ಡಬಹುದು. ದಾನವತ್ವದ ನಂಟನ್ನು ಕಡಿದುಕೊಂಡು ಭಕ್ತಿಯ ನಂಟಿಗೆ ಬೆಸೆದುಕೊಂಡಾಗ ದೈವದ ಬೆಳಕು ನಮ್ಮ ಎದೆಯೆಂಬ ಹೊಲದಲ್ಲಿ ಬಿತ್ತಿಗೆ ನಡೆಸುತ್ತದೆ.

ಚಂದಪ್ಪನೇ ಕಂದು ಇರುವಾಗ ಕುಂದಿಗೇಕೀ ಕೊರಗು?
ಹೊಲ ಹರಗು, ಬೀಜ ಆರಿಸಿ ಬಿತ್ತು, ಮಳೆಗೆ ಕತ್ತೆತ್ತು
ಕಾವಲಿಲ್ಲದ ಬದುಕು, ಗಾಳಿಗೊಡ್ಡಿದ ಸರಕು
ಎಚ್ಚರೆಚ್ಚರು, ಶರಣಗೋ ಮರಣವೇ ಒರೆಗಲ್ಲು![೧೨೬]

ಪ್ರಕಾಶಮಾನವಾಗಿರುವ ಹಾದಿ ಎಲ್ಲರಿಗೂ ತೆರೆದೆ ಇದೆ. ಎದೆಯ ದೀಪ ಗಾಳಿಗೆ ಆರದಂತೆ ಕಾವಲಿದ್ದು ಸದ್ಗುಣ, ಸದ್ಭಾವಗಳೆಂಬ ಬೀಜಗಳನ್ನು ದೇಹವೆಂಬ ಹೊಲದಲ್ಲಿ ಬಿತ್ತಿ ಬೆಳೆಯಬೇಕೆಂಬ ಶರಣ ಭಾವವನ್ನು

ಬೇಂದ್ರೆಯವರು ಪ್ರಕಟಿಸುತ್ತಾರೆ. ಅನುಭಾವದಿಂದ ಜೀವನವನ್ನು ಸ್ಪರ್ಶಗೊಳಿಸದಿದ್ದರೆ, ಒಳ್ಳೆಯ ಬೀಜಗಳನ್ನು ಆರಿಸಿ ಬಿತ್ತದಿದ್ದರೆ, ಮುಗಿಲಿನಿಂದ ಬೀಳುವ ಚೈತನ್ಯದ ಮಳೆಗೆ ಕತ್ತು ಎತ್ತದಿದ್ದರೆ ಹುಟ್ಟಿದಂತೆಯೆ ಸತ್ತು ಜೀವನ ವ್ಯರ್ಥವಾಗುತ್ತದೆ.

ತಿದ್ದುವ ಶಿವನಿಲ್ಲದಿರೆ - ಇದ್ದದ್ದೆ ಇದ್ದೀತು;
ಬುದ್ಧಿಯಾಚೆಯ ಬಿತ್ತು, ಬಿತ್ತದೇ ಉಳಿದಿತ್ತು[೧೨]

ಸದ್ಯೋಜಾತ ಭಾವದಿಂದ ತುಂಬಿರುವ 'ಮುಗಿಲ-ಮಲ್ಲಿಗೆ' ಸಂಕಲನದ ಬಹುಪಾಲು ಕವಿತೆಗಳು ಬೇಂದ್ರೆಯವರ ಮಾಗುವಿಕೆಯನ್ನು ಪ್ರಕಟಪಡಿಸುತ್ತವೆ. ಅವರಿಗೆ ಅನುಭಾವದ ಪ್ರೇರಣೆಯನ್ನೊದಗಿಸಿದ ಅರವಿಂದರು, ರವೀಂದ್ರನಾಥ ಟ್ಯಾಗೋರರು, ಶರಣರು ಇಂತಹ ಭಾವಕ್ಕೆ ನೀರು ಹಣಿಸಿದ್ದಾರೆ. 'ಮುಗಿಲ-ಮಲ್ಲಿಗೆ'ಯನ್ನು 'ಗುರುದೇವ ರವೀಂದ್ರರ ಸದೋದಿತ ದರ್ಶನ'ಕ್ಕೆ ಬೇಂದ್ರೆಯವರು ಅರ್ಪಿಸಿರುವುದು ಹಾಗೂ ಶ್ರೀ ಅರವಿಂದರ ಜನ್ಮದಿನದಂದು (೧೫ ಆಗಸ್ಟ, ೧೯೬೧) ಅದು ಬೆಳಕು ಕಂಡಿರುವುದು ಅನುಭಾವವೆಂಬ ಪರುಷ ಸೋಕಿದುದರ ಪರಿಣಾಮವೆಂದು ತಿಳಿಯಬಹುದು. 'ಸಣ್ಣ ಸೋಮವಾರ' ಪದ್ಯದಲ್ಲಿ ಕಂಡಂತಹ ಚಂದ್ರಕ್ವಾರಿಯ ಅದೃಷ್ಟ ಮತ್ತು ಹೊಳೆದು ಮಾಯವಾಗುವ ಅನುಭವ 'ಸ್ವರೂಪ ದೀಪ'[೧೩] ಎನ್ನುವ ಮತ್ತೊಂದು ಮಹತ್ವದ ಕವಿತೆಯಲ್ಲಿ ನಿರೂಪಿತವಾಗಿದೆ. ಅದರ ಭಾವವನ್ನು ಬೇಂದ್ರೆಯವರು ಹೀಗೆ ಸೂಚಿಸಿದ್ದಾರೆ : 'ನಾವು' ಎಂಬ ನೆರಳಿಗೆ ಮೂಲವಾಗಿ ತಿರುಳೊಂದು ಬಾಳಿನ ಆಳದಲ್ಲಿ ಹುದುಗಿರುತ್ತದೆ. ಆಕಸ್ಮಾತ್ತಾಗಿ ಬೆಳಕಿನಲ್ಲಿ ಮುಟ್ಟಹೋದದ್ದು ಕತ್ತಲಲ್ಲಿ ಕಾಣಹತ್ತಿತೆಂದರೆ ಇಂಥ ಚಮತ್ಕಾರದ ಸ್ನೇಹದ ಒಗಟನ್ನು ಬಿಡಿಸಬೇಕಾಗುತ್ತದೆ.'[೧೪] ಬದುಕಿನ ತಿರುಳಾದ ಭಕ್ತಿಯನ್ನು, ಶರಣ ಭಾವವನ್ನು, ಪ್ರಾಮಾಣಿಕತೆಯ ಬಾಲ್ಯವನ್ನು ಬೆಸೆಯುವ; 'ಸಣ್ಣ ಸೋಮವಾರ' ಪದ್ಯದಲ್ಲಿದ್ದಂತೆ ಬಾಲ್ಯದಲ್ಲಿ ಹೊಳೆದಿದ್ದ, ಕಂಡಿದ್ದ ಪ್ರಕಾಶದ ಮಿಣುಕು ದೀಪವನ್ನು ಇಡೀ ಜೀವನಕ್ಕೆ ಹೊಂದಿಸುವ ಪ್ರಯತ್ನ 'ಸ್ವರೂಪ ದೀಪ' ಕವಿತೆಯಲ್ಲಿ ಇರುವಂತಿದೆ. ಹಾಗಾಗಿ ಆ ಪದ್ಯವನ್ನೂ ಕೂಡ ಸ್ವಲ್ಪ ವಿವರವಾಗಿ ನೋಡಬಹುದೆಂದು ತೋರುತ್ತದೆ.

'ಜೋಗಿ' ಕವಿತೆಯಲ್ಲಿ ಕರೆಯುವ ಕೋಗಿಲೆ ಒಂದು ನಿಗೂಢ, ಅದೃಷ್ಟದ ಸಂಕೇತವಾದಂತೆ 'ಸ್ವರೂಪ ದೀಪ' ಕವಿತೆಯಲ್ಲಿ ಅದೃಷ್ಟವೆಂಬಂತೆ ಬರುವ ಗಾಳಿ ನಾಯಕನ ಹೆಗಲಿಗೆ ಕೈಹಾಕಿ, ಸಲಿಗೆ ಬೆಳೆಸಿ ಅವನನ್ನು ವಿಸ್ಮೃತಿಯ ಲೋಕಕ್ಕೆ ಕರೆದೊಯ್ಯುವ ಪ್ರಯತ್ನ ಮಾಡುತ್ತದೆ. ರಾತ್ರಿಯ ಹೊತ್ತು ಚಂದಿರನ ಬೆಳಕಿನಲ್ಲಿ ಎಂದೋ ಸೂರ್ಯನ ಬೆಳಕಿನಲ್ಲಿ ಕಂಡ ಸ್ನೇಹದ ವ್ಯಕ್ತಿಯೊಂದಿಗೆ ಈಗ ಈ ಲೋಕದ್ದಲ್ಲವೆನ್ನುವಂತಹ ಸಲುಗೆ ಸಾಧ್ಯವಾಗಿರುವುದಕ್ಕೆ ಕವಿತೆಯ ನಾಯಕನ ಎದೆಯಲ್ಲಿ ತಳಮಳವಿದೆ. ಸ್ನೇಹಿತನ ರೂಪದಲ್ಲಿರುವ ಅದೃಷ್ಟ ತನ್ನನ್ನು ಎಲ್ಲಿಗೋ ಕರೆದೊಯ್ಯುತ್ತಿರುವ ಸಾಹಸಕ್ಕೆ ವಿಚಲಿತಗೊಂಡ ನಾಯಕ ವಿಸ್ಮೃತಿಯಲ್ಲಿ ಬುದ್ಧಿಯಾಚೆಗಿನ ಆತ್ಮಜೀವನ ಪರಿಸರದ ಗಾಳಿ ಕುಡಿದು ಸ್ನೇಹಿತನ ಜೊತೆ ಏನೂ ಮಾತಾಡದೆ ಹಿಂದಿರುಗುತ್ತಾನೆ. ಚಂದ್ರನ ಬೆಳಕು ಹಗಲಿನ ವ್ಯಾಪಾರವನ್ನು

ಮರೆಸುವಂತಹದು. ಯಾವುದೋ ಮಾಟದಿಂದ ಸೃಷ್ಟಿಯಾದಂತೆ ಹುಣ್ಣಿಮೆ, ನಕ್ಷತ್ರಗಳ ಮಾಲೆ ನಾಯಕನ ಸುತ್ತಲ ಇರುವಿಕೆಯನ್ನು ದೀಪ್ತಗೊಳಿಸಿವೆ. ಹೊರಗೆ ಥಂಡಿಯಿದ್ದಂತೆ ಆತನ ಮನಸ್ಸು ಕೂಡ ಅಲೌಕಿಕ ಭಾವಕ್ಕೆ ಅದುರುತ್ತಿದೆ. ರಾತ್ರಿಯ ಜೀರುಂಡೆಗಳು ಮಾಡುತ್ತಿರುವ ಕಿಲಿಕಿಲಿಯೆನ್ನುವ ಶಬ್ದ ನಾಯಕನನ್ನು ಕರೆದುಕೊಂಡು ಹೋಗಲು ಬರುತ್ತಿರುವ ಬಂಡಿಯ ಗಿಲಿಗಿಲಿ ಗಂಟೆಯಂತೆ ಕೇಳಿಸುವುದು. ಈ ಸಾದೃಶ್ಯ ಬೇಂದ್ರೆ ಸೃಷ್ಟಿಸುವ ಲೌಕಿಕ-ಅಲೌಕಿಕದ ಲೋಕಕ್ಕೆ ಅವಲಂಬನೆಯಾಗುತ್ತದೆ.

ಹೆಗಲಿಗೆ ಕೈ ಹಾಕಿ, ಬಂದಿತ್ತೊ ಗಾಳಿ
'ನಡೆ ನನ್ನ ಸಂಗಾಟಾ'
ಅಂದಾಗ ನಾನಂದೆ, 'ಯಾಕೀಗ ಸಲಗಿ?'
ಬಲುದಿನಕ ಈ ಬ್ಯಾಟಾ

ಯಾ ದೂರ ಬಂಡಿಯ ಗಿಲಿಗಿಲಿಗಂಟಿ
ಕಿಲಿಕಿಲಿ ಚಿಮ್ಮಂಡೀ
ಕರೆದಾವೊ ಕಾಣೆ, ಕೊರಳಿನ ಆಣೆ
ಅಪ್ಪಿತ್ತು ಚಳಿ, ತಂಡೀ

ನಾಯಕನ ಮೈಯಲ್ಲಿ ಮೈಯಾಗಿ ಸೇರಿ, ಕೈಯಲ್ಲಿ ಕೈಯಿಟ್ಟು ಕರುಳಾಟ ಮತ್ತು ಬೆರಳಾಟದಲ್ಲಿ ನಿರತವಾಗಿರುವ ಯಾವುದೋ ಲೋಕದ, ಎಂದೊ ನೋಡಿದ ಸ್ನೇಹಿತನ ಒಲವಿಗೆ ಈತ ಮಾತ್ರ ತಣ್ಣಗೆ ಇದ್ದಾನೆ. ಕರುಳನ್ನು ಕರುಳು ಗುರುತಿಸುವ, ಜೀವದಲ್ಲಿ ಜೀವ ಸೇರಿ ಹೋಗುವ ಈ ಘಳಿಗೆ ನಾಯಕನ ಮನಸ್ಸು ಅವನಿಗೆ ಗೊತ್ತಿರದಂತೆಯೆ ಬಯಸುವ ಕ್ಷಣವಾಗಿದೆ. ಕನಸಿನಲ್ಲಿ ಎಂಬಂತೆ ಅದು ಅವನನ್ನು ಕರೆದೊಯ್ದಿದೆ.

ಚಮಮಕಿ ಹಾರಿ, ಕಂಡಿತೋ ಮಾರಿ
ಎಂದಿನದೀ ನೋಟಾ
ಮೈಯೊಳಗSS ಮೈಯು ಕೈಯಲ್ಲಿ ಕೈಯ್ಯು
ಕರುಳಾಟಾ, ಬೆರಳಾಟಾ

ಅಂಗುಲಿಯ ಉಂಗುರ ಕಳಚಿತ್ತು ಜಾರಿ
ಬಳ್ಳಿಗೋ ಹೂ ಭಾರಾ!
ಗುರುತಿದ್ದರಿರಲಿ, ಕುರುಹ್ಯಾಕ ಬ್ಯಾರೆ?
ಒಲವಲ್ಲಾ ವ್ಯಾಪಾರಾ

ತನಗೆ ಹೊಸದೆಂಬಂತೆ ತೋರುವ ಪಾರಲೌಕಿಕದ ಅನಿರ್ವಚನೀಯ ಅನುಭವ ಮಾಡಿಸುತ್ತಿರುವ, ಬೆಳದಿಂಗಳ ಗಾಳಿಯ ರೂಪದಲ್ಲಿರುವ ಸ್ನೇಹಿತನ ಗುರುತಿಗಾಗಿ ಬುದ್ಧಿಗೆ ಕೆಲಸ ಹಚ್ಚುವ ನಾಯಕ ಕೊನೆಗೆ ಸುಮ್ಮನಾಗುತ್ತಾನೆ. ಒಲವು ವ್ಯಾಪಾರವಲ್ಲ, ಕುರುಹಿನಿಂದ ಗುರುತಿಸುವಂತಹದಲ್ಲ ಎಂದು ತಿಳಿಯುತ್ತದೆ. ಹಗಲಿನ ಪ್ರಖರ ಬೆಳಕಿನಲ್ಲಿ ಮುಚ್ಚಿಹೋದದ್ದು ರಾತ್ರಿಯ ತಂಪು ಬೆಳಕಿನಲ್ಲಿ, ಅಮೃತವನ್ನೆರೆಯುತ್ತಿರುವ ಚಂದ್ರನ ಸಾಕ್ಷಿಯಲ್ಲಿ ಗೋಚರಿಸುತ್ತದೆ. ಅಲೌಕಿಕದ ದರ್ಶನ ಮಾಡಿಸುತ್ತಿರುವ ಗಾಳಿ ನಾಯಕನಿಗೆ ಕಿವಿಮಾತು ಹೇಳುತ್ತದೆ.

ನೆಲವೇ ಘನರೂಪ
ಜೀವಕ್ಕೆ ಜೀವ ಸಮೀಪವೋ ಭಾವಾ
ಸ್ವರೂಪವೇ ದೀಪ

ಪರಮಾತ್ಮನ ಜೊತೆಗೆ ಮನುಷ್ಯನ ಸಂಬಂಧ ಕಲ್ಪಿಸುವಂತಹ, ಲೋಕ-ಪರಲೋಕಗಳನ್ನು ಬೆಸೆಯುವಂತಹ ಅದೃಶ್ಯದ ಶಕ್ತಿ ಆತ್ಮಜ್ಞಾನದಿಂದ ಲಭಿಸಬಹುದೆಂದು ಕವಿತೆ ಹೇಳುವಂತಿದೆ. 'ಸಣ್ಣ ಸೋಮವಾರ' ಪದ್ಯದ ಲಿಂಗದೆದುರಲ್ಲಿ ಶಿವನ ಚಂದ್ರಕ್ವಾರಿ ಹೊಳೆಯುವ ಅನುಭವದಂತೆ, ಇಲ್ಲಿ ಸ್ವರೂಪದ ದೀಪದ ಬೆಳಕಿನಲ್ಲಿ ಗಾಳಿಯ ಸಂಗಡ ಹೋಗಿ ಬಂದ ಅನುಭವ ನಾಯಕನಿಗಾಗುತ್ತದೆ. 'ಸ್ವರೂಪ ದೀಪ'ದ ಕೊನೆಯ ಸಾಲುಗಳನ್ನು ಡಾ. ಜಿ.ಎಸ್.ಆಮೂರರು ಅಲ್ಲಮನ ವಚನವೊಂದರಿಂದ ಅರ್ಥೈಸುವುದು ಕುತೂಹಲಕಾರಿಯಾಗಿದೆ;

ನೆನಹು ನೆನೆವ ಮನದಲ್ಲಿಲ್ಲ. ತನುವಿನಾಸೆ ಮುನ್ನಿಲ್ಲ
ಮನಮನವನೊಳಗೊಂಡ ಘನ ಘನವೆನೆಂತೆಂಬೆ; ತನ್ನಲ್ಲಿ ತಾನೆಯಾಯಿತ್ತು
ನೆನೆಯಿಲ್ಲದ, ನಿಂದ ನಿರಾಳ ಅನಾಗತವಾದುದ ಕಂಡು ನಾನು ಬೆರಗಾದೆ

ಬಹುಶಃ 'ಸ್ವರೂಪ'ದ ಬೆಳಕಿನಲ್ಲಿ ಜೀವಜೀವಗಳ ಸಂಬಂಧದ ಅರಿವು ಮೂಡಿಬರುವುದನ್ನು ಕವಿತೆ ಸೂಚಿಸುತ್ತಿರಬೇಕು. ಈ ಹಿನ್ನೆಲೆಯಲ್ಲಿ 'ನೆನಹಿ'ಗೆ ಮಹತ್ವದ ಪಾತ್ರವಿದೆಯೆನ್ನುವುದು ಕವಿತೆಯ ಧ್ವನಿಯಲ್ಲಿದೆ.[೧೩೦] ಜೀವ ಜೀವ ಕೂಡುವ ಕವಿತೆಯ ಸಂದರ್ಭವನ್ನು ಬಸವಣ್ಣನವರ ಒಂದು ಅನುಭಾವದ ವಚನದೊಂದಿಗೆ ಕೂಡ ಹೋಲಿಸಿ ಮತ್ತಷ್ಟು ಅರ್ಥವನ್ನು ಪಡೆಯಬಹುದಾಗಿದೆ.

ಸಮಸ್ತ ಕತ್ತಲೆಯ ಮುಸಕ ಕಳೆದಿಪ್ಪ ಇರವ ನೋಡಾ!
ಬೆಳಗಿಂಗೆ ಬೆಳಗು ಸಿಂಹಾಸನವಾಗಿ,
ಬೆಳಗು ಬೆಳಗ ಕೂಡಿದ ಕೂಟವ
ಕೂಡಲಸಂಗಯ್ಯ ತಾನೇ ಬಲ್ಲ![೧೩೧]

ಪರಮಾತ್ಮನನ್ನು ಕಂಡು ಜೀವ ಗುರುತು ಹಿಡಿಯುವಾಗ, ಅವನಲ್ಲಿ ಸೇರುವಾಗ ಲೋಕದ ಕುರುಹುಗಳು ಬೇಡವಾಗುತ್ತವೆ. ಭಕ್ತಿಯಿಂದ ಅರ್ಚಿಸುವಾಗ ಭಕ್ತನ ಜೀವ ಪರಮಹಂಸನ ಸಮೀಪವೇ ಇರುತ್ತದೆಯೆಂಬುದು ಕವಿತೆಯ ಅರ್ಥವಾಗಿದೆ. ದಟ್ಟ ಅನುಭಾವದ ಸೆಳಕಿನ ಪದ್ಯವನ್ನು ಆಡುನುಡಿಯ ಗ್ರಾಮ್ಯಕೋಶದಿಂದಲೆ ಹೆಣೆದಿರುವುದು ಬೇಂದ್ರೆಯವರ ವೈಶಿಷ್ಟ್ಯವಾಗಿದೆ.

ಭಕ್ತಿಯನ್ನು ಸೂಸುವ ನಿಸರ್ಗ ಪ್ರತಿಮೆಗಳ ಅವರ ಮತ್ತೊಂದು ಮಹತ್ವದ ಕವಿತೆಯೆಂದರೆ 'ನಮನ' ಸಂಕಲನದ 'ಬಾಳೆ'.[೧೩೨] ಬದುಕಿನಲ್ಲಿ ಅರ್ಪಣೆಯ ಮನೋಭಾವವನ್ನು ತುಂಬಿಕೊಳ್ಳುವ ಮೂಲಕವೆ ಭಕ್ತಿಯನ್ನು ತುಂಬಿಕೊಳ್ಳಬಹುದೆಂಬ ಸೂಚನೆ 'ಬಾಳೆ' ಕವಿತೆಯಲ್ಲಿ ಸಿಗುತ್ತದೆ. ಸಾವು-ನೋವಿನ ಬೆಂಕಿಯಲ್ಲಿ ದಿಕ್ಕು ತಪ್ಪಿದರೂ ಕೂಡ ತನ್ನ ಬೇರಿಗೆ ಆಸರೆಯಾಗಿರುವ ಭೂಮಿಗೆ ಕೃತಜ್ಞತೆಯಿಂದ ಶರಣೆನ್ನುತ್ತಿದೆ.

ಎದೆ ಹೂ ಇಗೊ ತಲೆ ಬಾಗಿಸಿ
ಮಣಿಯುತ್ತಿದೆ ಇಳೆಗೆ
ಫಲ, ನಿಷ್ಫಲ! ಹೀಳಿಗೆಯೋ-
ಮೂಲದಲಿದೆ ಬೆಳಗೆ

ಅರ್ಪಣಕಿದು ದರ್ಪಣವೆನೆ
ಮಿರುಗುತ್ತಿದೆ ಮೈಯು
ದರ್ಶಿಸದಲೆ ತರ್ಪಿಸುವೊಲು
ಎಲೆ ಎಲೆ ಕೈ ಕೈಯು

ಶರಣನ ಗುಣವನ್ನು ಮರಣದಲ್ಲಿ ನೋಡಿದಂತೆ ಬಾಳೆ ತನ್ನ ಸಾವಿನಿಂದ ತ್ಯಾಗದ ಅರ್ಥವನ್ನು ಹೆಚ್ಚಿಸುತ್ತದೆ. ಬಾಳೆಗಿಡಕ್ಕೆ ಗೊನೆ ಬಿಟ್ಟರೆ ಸಾಕು ಸಾವು ಬಂದಂತೆಯೆ. ಬಾಳ್ವೆಗೆ ಕೊನೆ ಬರುವುದು ನಿಶ್ಚಿತ. ತನ್ನ ಬದುಕಿಗೆ ಕೊನೆಯನ್ನು ಫಲ ನೀಡುವುದರಿಂದ ಅದು ತಂದುಕೊಳ್ಳುತ್ತದೆ.

ಬಾ ಗೆಳೆಯಾ ನೋಡಿದೆಯಾ
ಕ್ಷಣವಾದರು ನಿಂತು
ಬಾಳಿನ ಕೊನೆ ಬಂದಂತಿಗೊ
ಬಾಳೆಗೆ ಗೊನೆ ಬಂತು!

ಬಾಳೆಗಿಡದ ಸಾವಿನಿಂದ ಮನುಷ್ಯ ಕಲಿಯಬೇಕಾದ ತ್ಯಾಗದ ಪಾಠವನ್ನು ಪದ್ಯ ಗರ್ಭೀಕರಿಸಿಕೊಂಡಿದೆ.

ನೀ ತಣ್ಣಗೆ ನೀ ನುಣ್ಣಗೆ
ನೀ ಕಣ್ಣಿಗೆ ಚೆಂದ
ಬಾಳಿನ ಸ್ಮಾರಕದಂತಿದೆ
ಈ ಸಾವಿನ ಅಂದ

ತ್ಯಾಗ, ನಿಸ್ವಾರ್ಥ ಸಂಕಲ್ಪ ಮಹಾಪುರುಷನೊಬ್ಬನ ಹುಟ್ಟಿಗೆ ಕಾರಣವಾಗುವಂತೆ ಗೊನೆ ಈಯುತ್ತ ಬಾಳೆ ಬದುಕಿಗೆ ಕಡೆ ಹೇಳುವ ಚಿತ್ರಣ ಮೂಡಿಬಂದಿದೆ. ಬುದ್ಧನ ಹುಟ್ಟು ಹಾಗೂ ಅವನ ತಾಯಿಯ ಮರಣ ಸೂಚ್ಯವಾಗಿ ಬಂದು ತಾಯಿಯ ತ್ಯಾಗವನ್ನು ಬೇಂದ್ರೆ ಕಡಲಿನಷ್ಟು ವಿಸ್ತರಿಸುತ್ತಾರೆ. ಕರುಳಬಳ್ಳಿ ಮಗನಿಗೂ ತ್ಯಾಗದ ಪಾಠವನ್ನು ಕಲಿಸದೆ ಬಿಡಲಿಲ್ಲ.

ಯಾ ಬುದ್ಧನು ಒಳಗಿದ್ದನೋ
ಹೊರಬಿದ್ದನೊ ಈಗ
ಸಿದ್ಧಾರ್ಥಗೆ ಸಿದ್ಧಿಸುತ್ತಿದೆ
ಸರ್ವಸ್ವದ ತ್ಯಾಗ

'ಶರಣ, ಸಂತ, ಸಿದ್ಧ ಮೊದಲಾದವರ ಹುಟ್ಟು, ಜೀವನ ಮತ್ತು ಸಾವು ಇವೆಲ್ಲ ರೂಢಿಗತವಾದವುಗಳಲ್ಲ. ಅವರ ಹುಟ್ಟಿಗೆ ಅನುವಂಶಿಕತೆ ಇಲ್ಲ ಮತ್ತು ಅವರ ಸಾವಿಗೆ ಪರಿಣಾಮವಿಲ್ಲ. ಸೃಷ್ಟಿ ಕ್ರಮವನ್ನು ಮೀರಿ ಇರುವ ಒಂದು ಸತ್ವ ಸೃಷ್ಟಿ ಕ್ರಮದಲ್ಲಿ ಮಾಡುವುದಕ್ಕೆ ಅವತಾರವೆಂದು ಹೆಸರು ಕೊಡಬಹುದು. ಕ್ರಿಸ್ತನ ಜನ್ಮ ಮತ್ತು ಮರಣ ಇತಿಹಾಸದ ಸಂಗತಿಗಳಾಗಿದ್ದೂ ಇತಿಹಾಸದ ಹೊರಗೆ ಇರುವಂತೆ ಎಲ್ಲ ಮಹಾಪುರುಷರ ಬಾಳುವೆ ಕೂಡ. ಜೈನ ಮತ್ತು ಬೌದ್ಧ ನಂಬಿಕೆಯ ಪ್ರಕಾರ, ಭವಾವಳಿಯ ಪರಿಪಾಕ ಚರಮದೇಹಿಗಳಲ್ಲಾಗುತ್ತದೆ. ತೀರ್ಥಂಕರರು, ತಥಾಗತರು ಇಂಥವರು. ಇಂಥ ಒಂದು ಜೀವನ ಚಿತ್ರವನ್ನು ಇಲ್ಲಿಯ ಬಾಳೆಯ ರೂಪಕದ ಮೂಲಕವಾಗಿ ನಿರೂಪಿಸಲಾಗಿದೆ... ಬಾಳೆಯ ಗಿಡದಲ್ಲಿ 'ಬಾಳಿನ ಕದಳಿ' ಕದಲದೆ ನಿಂತಿದೆ. 'ಬಾಳಿನ ಕದಳಿ' ಎನ್ನುವುದು ಕೊನೆಯ ಜನ್ಮವೆಂದು ಅರ್ಥ. ಶ್ರೀಶೈಲದ ಹತ್ತಿರ ಅಕ್ಕ, ಕದಳಿಯಲ್ಲಿ ಮಾಯವಾದಳು ಎಂಬುದಕ್ಕೂ ಇದೇ ಅರ್ಥ'.[೧೬.೬.] 'ಬಾಳೆ' ಪದ್ಯ ಎಷ್ಟೊಂದು ಬಾಳಿನ ಅನುಭೂತಿಯನ್ನು ತನ್ನಲ್ಲಿ ಹುದುಗಿಸಿಕೊಂಡಿದೆಯೆಂಬುದಕ್ಕೆ ಕುರ್ತಕೋಟಿಯವರ ಮೇಲಿನ ವಿವರಣೆ ಸಾಕ್ಷಿಯಾಗಿದೆ. ಈ ನೆಲದ ಭಕ್ತಿಯ ಸಾರವನ್ನು ಅನುಭವಿಸಿ ಬರೆದ ಪದ್ಯ ಅದಾಗಿದೆ. ಬಾಳೆಯ ಅರ್ಪಣೆಯ ಜೀವನಕ್ರಮದಲ್ಲಿ ಜನ್ಮಾಂತರಗಳ ಕಷ್ಟವಿಲ್ಲ. ಫಲ ನೀಡುವದರೊಂದಿಗೆ ತಾನು ನಿಷ್ಫಲವಾಗಿ ಭವ ನೀಗುವುದು ಭಕ್ತಿಯ ಹೃದ್ಯವಾದ ಅಭಿವ್ಯಕ್ತಿಯಾಗಿದೆ. ಅಕ್ಕನ ಕದಳಿ, ಬಸವಣ್ಣನವರ '....ಬಾಳೆಗೆ ಗೊನೆ ಬಂದಿತ್ತೇ ಕಡೆ' ಎನ್ನುವ ವಚನ ಬೇಂದ್ರೆಯವರ ಮನಸ್ಸಿಗೆ ಬಂದಿರಲೂಬಹುದು.

ಚೇಳಿಗೆ ಬಸುರಾಯಿತ್ತೇಕಡೆ, ಬಾಳೆಗೆ ಫಲವಾಯಿತ್ತೇಕಡೆ, ನೋಡಾ
ರಣರಂಗದಲ್ಲಿ ಕಾದುವ ಓಲೆಕಾರಂಗೆ ಓಸರಿಸಿತ್ತೇಕಡೆ
ಮಾಡುವ ಭಕ್ತಂಗೆ ಮನ ಹೀನವಾದರೆ
ಅದೇಕಡೆ, ಕೂಡಲಸಂಗಮದೇವಾ[೭೩೪]

ಬಸವಣ್ಣನವರ ವಚನದ ಅರ್ಥ, ಮನಸ್ಸಿಲ್ಲದ ಭಕ್ತಿ ಸಾವಿಗೆ ಸಮನಾದುದು ಎನ್ನುವಂತಹದು. ವೈದೃಶ್ಯ ದರ್ಶನದ ಉದಾಹರಣೆಯಾಗಿ ಇವುಗಳನ್ನು ನೋಡಬಹುದೆಂದು ತೋರುತ್ತದೆ.

೬.೬ 'ಬೊಗಸಿ ತುಂಬಾ ಭಕ್ತಿ ಹಿಡಿದು' :

'ಕುದುರಿಯವರ ಕಿವಿಮಾತು'[೭೩೫] ಕವಿತೆಯು ಸಹ ಏನೊ ಅಲೌಕಿಕವಾದುದನ್ನು ತಂದುಕೊಡುವ ಸನ್ನಾಹದಲ್ಲಿದೆ. ಭಕ್ತಿಯಿಂದ ಮಾತ್ರ ಅದನ್ನು ಸಾಧಿಸಬಹುದೆಂಬ ಸತ್ಯವೂ ಅದರಲ್ಲಿ ಅಡಕವಾಗಿದೆ. ಭಕ್ತಿ, ಅನುರಾಗ, ಪ್ರೀತಿಗಳನ್ನು ತುಂಬಿಕೊಂಡ ಮನಸ್ಸು ತಾಳ್ಮೆಯಿಂದ ಕಾಯ್ದಾಗ ಎಂದಾದರೂ ಒಂದು ದಿನ ಚಂಗನೆ ಅಲೌಕಿಕ ಜಗತ್ತಿನ ಸೂಜಿಗಲ್ಲು ತನ್ನ ತೆಕ್ಕೆಗೆ ತೆಗೆದುಕೊಳ್ಳಬಹುದು. ಲೌಕಿಕವಾದ ಕಾವ್ಯದ ಅಭಿವ್ಯಕ್ತಿಗೆ ಅಲೌಕಿಕದ ಕುಸುರನ್ನು ಬೆರೆಸುವುದಕ್ಕೆ ಭಕ್ತಿ, ಅನುಭವ, ಅನುರಾಗಗಳು ತುಂಬಿಕೊಳ್ಳಬೇಕೆಂದು ಈ ಕವಿತೆ ಹೇಳುತ್ತದೆ. ಭಕ್ತಿಯನ್ನು ಬೊಗಸೆ ತುಂಬ ತುಂಬಿಕೊಂಡು ಕುದುರಿಯವರನ್ನು ಕಾಯುತ್ತ ಅಗಸೆಯ ಬಾಗಿಲಿಗೆ ನಿಲ್ಲಬೇಕೆನ್ನುವಲ್ಲಿ ಅನುಭವ ಕುದ್ದು ಕುದ್ದು ಪ್ರತಿಭೆಯ ಸಾಣೆಗೆ ಒಳಪಡಬೇಕೆಂಬುದಾಗಿದೆ. ಒಂದು ರೀತಿಯಲ್ಲಿ ಇದು ಬೇಂದ್ರೆಯವರ ಕಾವ್ಯದ ಅಭಿವ್ಯಕ್ತಿಯ ವ್ಯಾಖ್ಯೆಯನ್ನು ವಿವರಿಸುತ್ತಿದೆ. ಅನುಭವವನ್ನು ಹದನ ಮಾಡಬೇಕೆಂದು ಅವರು ಹೇಳುತ್ತಿದ್ದಾರೆ. ಅಂದರೆ ಭಕ್ತನ ತಪಸ್ಸಿನ ರೀತಿಯಲ್ಲಿ ಕಾವ್ಯ ಒಲಿದು ಬರುವ ಘಳಿಗೆಗಾಗಿ ಕಾಯಬೇಕೆಂಬುದೆ ಆಗಿದೆ. ಅಂತಹ ತಾಳ್ಮೆ ಮಾತ್ರ ಅಭಿವ್ಯಕ್ತಿಗೆ ಕುಶಲತೆ ತಂದುಕೊಡಬಲ್ಲ ಶಕ್ತಿ ಹೊಂದಿದೆ.

ಮೈಗೊಂದು ಉಸಿರು ಕೊಟ್ಟರು
ಉಸಿರಿಗೊಂದು ಹೆಸರು ಕೊಟ್ಟರು
ಹೆಸರಿಗೊಂದು ಕುಸುರು ಕೊಟ್ಟರು
ಕುಶಲದ ಕುದರೀಯವರು ಏನೇನೊ ತಂದರು?

ಅನುಭವದ ಮೂಟೆಗೆ ಒಂದು ಸುಂದರ ಆಕಾರ ಕೊಡುವಲ್ಲಿ ಕುದುರೆಯನ್ನೇರಿದ ಸುಂದರಾಂಗ ಸಫಲನಾಗಿದ್ದಾನೆ. ಕವಿತೆಯ ನಾಯಕಿಗೆ ಜೀವ ಬರಿಸುವ ಮಂತ್ರವೊಂದನ್ನು ಹೇಳಿದ ಹಾಗೆ ಆ ಕುದುರೆಯವನು ಹೂವಿನೊಳಗಿನ ರಸವನ್ನು, ರಸದೊಳಗಿನ ಜೇನನ್ನು ಬಿಡಿಸುವ ಕಲೆ ಹೇಳಿಕೊಟ್ಟಿದ್ದಾನೆ. ಇದೆಲ್ಲ ಕನಸಿನಲ್ಲೆಂಬಂತೆ ನಡೆದಿದೆ. ಕವಿತೆಯಲ್ಲಿಯ ಸಖಿ ಕವಿತೆಯೆ ಆಗಿದೆ. ಅದಕ್ಕೆ ಪ್ರತಿಭೆಯ, ಕಲ್ಪಕತೆಯ ಸಾಣೆಯನ್ನು ಅಮೂರ್ತ

ವ್ಯಕ್ತಿಯೊಬ್ಬ ಹಿಡಿಯಬೇಕಾಗಿದೆ. ಆ ವ್ಯಕ್ತಿ ಕಲ್ಪನಾಶಕ್ತಿ ಆಗಿರಬಹುದು. ಕವಿಚೈತನ್ಯದ ವಿಲಾಸವೂ ಆಗಿರಬಹುದು. ಭಕ್ತಿಯಂತಹ ಕಠಿಣ ವ್ರತವನ್ನು ಪಾಲಿಸಿದಾಗಲೆ ಅದು ಸಾಧ್ಯ. ಸತತ ಪ್ರಯತ್ನ ಹಾಗೂ ಶ್ರದ್ಧೆಯಿಂದ ಮಾತ್ರ ಕವಿತೆಯಾಗಲಿ, ಅಲೌಕಿಕತೆಯಾಗಲಿ ಸಾಧ್ಯವೆಂದು ಬೇಂದ್ರೆ ಹೇಳುತ್ತಿದ್ದಾರೆ. ದಿನದಿನ ಕಾಯುತ್ತಿರುವಾಗ ಎಂದೋ ಒಂದು ದಿನ ಹೊಳಪಿನ ಮಿಂಚು ಒಲಿಯಬಹುದು.

ಸಂಜೀ ಮುಂಜಾನೆ ನಾವು
ಎಂದಾರೆ ಒಂದ ದಿನ
ಅಲಕ್ಕಂತ ನಿಮ್ಮ ಮುಂದ
ಬರತೇವಿ ಆವಾಗ
ಬೊಗಸಿ ತುಂಬಾ ಭಕ್ತೀ ಹಿಡಿದು
ಅಗಸೀ ಬಾಗಿಲ್ಗೆ ನಿಂದ್ರು
ಕುದುರಿಯವರು ಅಂದ್ರು

ಬೊಗಸೆ ತುಂಬಾ ಭಕ್ತಿಯನ್ನು ತುಂಬಿಕೊಳ್ಳದ ಹೊರತು ಕಾವ್ಯಲೋಕದ ಬಾಗಿಲಾಗಲಿ, ಆಧ್ಯಾತ್ಮಿಕ ಬಯಲಾಗಲಿ ದಕ್ಕುವುದು ಕಷ್ಟಸಾಧ್ಯ ಎಂಬುದು ಬೇಂದ್ರೆಯವರ ನಂಬಿಕೆಯಾಗಿದೆ.

ದರ್ಪದ ಆಳ್ವಿಕೆಗೆ ಕೊನೆ ಹೇಳಿ ಕಲ್ಯಾಣದ ಹಾದಿಗೆ ಲೋಕದ ಕಣ್ಣು ತೆರೆಸುವ ಹಾಗೂ ತಮವನ್ನು ಕರಗಿಸಿ ಬೆಳಕಿನ ಕೋಡಿ ಹರಿಸಬಲ್ಲ ಶಕ್ತಿಗಾಗಿ ಮೊರೆಯಿಡುವ ಚಿತ್ರಣ 'ಸೂರ್ಯಪಾನ'(೧೯೫೬) ಸಂಕಲನದ 'ನೃತ್ಯಯಜ್ಞ' ಮತ್ತು 'ಕಣಸು' ಕವನಗಳಲ್ಲಿ ಕಾಣಸಿಗುತ್ತದೆ. ಮಳೆ, ಗುಡುಗು, ಸಿಡಿಲು, ಮಿಂಚು, ಪ್ರವಾಹ, ತುಂಬಿ, ನವಿಲು, ಸರ್ಪ, ಸೃಷ್ಟಿ, ಪ್ರಳಯ ಮುಂತಾದ ನಿಸರ್ಗ ರೂಪಕಗಳ ಮೂಲಕ ಮನುಷ್ಯನ ಏಳ್ಗೆಯ ಪುರಾಣವನ್ನು ಬೇಂದ್ರೆ ಬಿಚ್ಚಿಡುತ್ತಾರೆ. 'ನೃತ್ಯಯಜ್ಞ'[೧೩೬] ನವಿಲಿನ ಸಹಜ ಕುಣಿತವೆಂಬಂತೆ ಕಂಡರೂ ಹೆಡೆಯೆತ್ತಿರುವ ಸರ್ಪವನ್ನು ಮುಗಿಸಲು ಅದು ಶಿವ-ಪಾರ್ವತಿಯರ ಕುಮಾರ ಷಣ್ಮುಖನನ್ನು ಭೂಮಿಗೆ ಕರೆಯುತ್ತದೆ. ನವಸೃಷ್ಟಿಗೆ ಮೊದಲು ಪ್ರಳಯದ ಸ್ವರೂಪ ಪೃಥ್ವಿಯಲ್ಲಿ ಕಾಣಿಸಿಕೊಳ್ಳುತ್ತದೆ. ಕತ್ತಲಾವರಿಸಿ, ಕುಂಭದ್ರೋಣ ಮಳೆ ಸುರಿದು ಹಳ್ಳಕೊಳ್ಳ ತುಂಬಿ ಹರಿದು ಭೀತಿ ಆವರಿಸುತ್ತದೆ.

ದಿಕ್ಕು ದಿಕ್ಕು ಕತ್ತಲಿಸಿತು ಪ್ರಳಯವೆ ಇದು ಬಂತೇ
ಮುಳುಗಿಸುವದೊ ತೇಲಿಸುವದೊ ಕಾಲವೆ ಎಂಬಂತೆ
ಥಕ ಥೈ ಥೈ ಧಿಕಿ ತಟತೋರಿ ಇದೇ ತಾಲ ಮಳೆಯದೋ
ಹಳ್ಳಕೊಳ್ಳಗಿರಿದರಿಯಲಿ ಹರಿಯುತ್ತಿಹ ಹೊಳೆಯದೋ
ಋತುರಾಜನ ಋತಜಾತದ ಜೀವನದಲಿ ಋಣವಿದೋ

ಓ ಕುಮಾರ, ಬೇಗ ಬಾರ, ತುಂಬಿ ತಾರ, ಬೆಳೆಯನು
ಕಾರ್ತಿಕದಲಿ ಭೂಮಿ ಕಾಂಬ ಶಾರದೀಯ ಕಳೆಯನು

ನವಿಲು ಮಳೆಗಾಗಿ ಮುಗಿಲನ್ನು ಪ್ರಾರ್ಥಿಸಿ ಕುಣಿಯುತ್ತಿರುವ ಸಂದರ್ಭದಲ್ಲಿ ಭೂಮಿಯಲ್ಲಿ ಅನ್ನಕ್ಕಾಗಿ, ಅಸ್ತಿತ್ವಕ್ಕಾಗಿ ಹೊಡೆದಾಟ, ಬಡಿದಾಟಗಳ ಬೆಂಕಿ ಕಾಣಿಸಿಕೊಂಡು ಜೀವ ವಿರೋಧಿ ಮತ್ತು ಜೀವಸೃಷ್ಟಿಯ ಸಂಘರ್ಷದ ರೂಪಕವಾಗಿ ಕವಿತೆ ಬೆಳೆಯುತ್ತದೆ.

ಕುಣಿಯೊ ಕುಣಿ ಸಹಸ್ರಮುಖೀ ಆಸೆ ತಲೆಯನೆತ್ತಿವೆ
ಅನ್ನ ಅನ್ನ ಬುಸುಗುಡುತಿದೆ ಮಾನವನಾಗರವು
ತೆರೆ ತೆರೆಯಲಿ ತೆರೆಯಿತು ನವದುಃಖವ ಸಾಗರವು
ತಾರಕ ಸಂಹಾರಕವಾಗುತ ಅಗೊ ಕಂದರ್ಪ
ದರ್ಪದಿಂದ ಹೆಡೆ ಸೆಡೆಯುತ ತಾಂಡವಿಸಿತು ಸರ್ಪ

ಸರ್ಪದ ಉಪಟಳ ಹೆಚ್ಚಾದಾಗ ಶಿಖಿ ಷಣ್ಮುಖನನ್ನು ಕರೆಯುವುದು ಸ್ವಾಭಾವಿಕವಾಗಿದೆ.

ಶಕ್ತಿಕಂದ ಶಿವನಂದನ ಶಿಖಿ ಸ್ಕಂದನ ಕರೆವೆ
ವಾಹನವಾಗಲು ಅರ್ಪಿಸಿ ಅವನಲಿ ಮೈದೆರೆವೆ

ಸ್ಕಂದನ ಆಗಮನದಿಂದ ನವಿಲಿನ ಆಶಯ ಈಡೇರುವುದನ್ನು ಕುರ್ತಕೋಟಿ ಹೀಗೆ ವಿವರಿಸುತ್ತಾರೆ: 'ಕಲ್ಯಾಣ ಮತ್ತು ಶಕ್ತಿ ಇವು ಬೇರೆ ಬೇರೆಯಾಗಿರುವುದು ಬೇಂದ್ರೆಯವರ ಪ್ರಕಾರ ಮೌಲ್ಯ ಸಂಕರಕ್ಕೆ ಹಾದಿ ಮಾಡಿಕೊಟ್ಟಂತೆ. ಅವೆರಡನ್ನೂ ತನ್ನಲ್ಲಿ ಮೇಳವಿಸಿಕೊಂಡ ಷಣ್ಮುಖ 'ಅಗ್ನಿದೇಹಿ, ಆತ್ಮಸ್ನೇಹಿ'. ಆದ್ದರಿಂದ ಅವನು ಬಂದರೆ ಸಾಕು, ಕೆಟ್ಟದ್ದು ಉರಿದುಹೋಗುತ್ತದೆ. 'ಶಿಖಿ' ಶಬ್ದಕ್ಕೆ ನವಿಲು ಮತ್ತು ಅಗ್ನಿ ಎಂಬ ಎರಡು ಅರ್ಥಗಳಿವೆ. ಅವೆರಡನ್ನೂ ಕವಿತೆ ಉಪಯೋಗಿಸಿಕೊಂಡಿದೆ. ದೇವತೆಗಳ ಸೇನಾಪತಿಯನ್ನು ಭೂಮಿಗೆ ಬರಲು ಕರೆಯುವುದರಿಂದ, ನವಿಲಿನ ನೃತ್ಯಯಜ್ಞ ಸಾರ್ಥಕವಾಗುತ್ತದೆ.'[೧೩೭] ನೃತ್ಯವಿದ್ದದ್ದು ಯಜ್ಞವಾಗಬೇಕಾದರೆ ಕಲೆಯ ಉಪಾಸನಾ ಶಕ್ತಿಯ ಬಗ್ಗೆ ಬೇಂದ್ರೆಯವರಲ್ಲಿ ಇದ್ದ ನಂಬಿಕೆಯೇ ಕಾರಣವಾಗಿದೆ. ಮಾನವನ ಏಳ್ಗೆಯ ಒಂದು ವಿಶಾಲ ತಳಹದಿಯ ಮೇಲೆ ಕಾವ್ಯ ಅಥವಾ ಕಲೆಯೆನ್ನುವುದು ಕೆಲಸ ಮಾಡುತ್ತದೆ. ದೃಷ್ಟಿ ಸೌಖ್ಯದ ಮೂಲಕ ಸಮಷ್ಠಿ ಸೌಖ್ಯದೆಡೆಗೆ, ವೃತ್ತಿಯ ಆತ್ಮವಿಕಾಸದಿಂದ ಸಾಮಾಜಿಕ ನೆಮ್ಮದಿಯ ಕಡೆಗೆ ನಡೆಯುವುದು ಕವಿತೆಯ ಉದ್ದೇಶವಾದಂತಿದೆ.

ಕಣಕಣದಲಿ ಕಣ್‌ಕುಣಿಯಲಿ ಪರಮೇಷ್ಠಿಯ ಕಂಡು
ಸಾಮುಷ್ಠಿಕ ಕ್ಷೇತ್ರದಲ್ಲಿ ವ್ಯಕ್ತಿಯ ಸುಖವುಂಡು
ಐಕ್ಯಸಮುದ ಛಾಯಿಯಲ್ಲಿ ಬಹುವಧು ಉದ್ದೀಪ್ತ
ಆ ತುರಾಯಿ ಕುಣಿಸಿ ಕುಣೀ ಓ ಪ್ರಜ್ಞಾ ಸುಪ್ತಾ

ತನ್ನ ತಾನು ಅರಿಯುವುದು ಮತ್ತು ನಿಸರ್ಗದ ಸಾಹಚರ್ಯದಲ್ಲಿ ಸೃಜನಶೀಲತೆಯನ್ನು ಉದ್ದೀಪನಗೊಳಿಸಿಕೊಳ್ಳುವುದು ಕವಿಗೆ ಇಷ್ಟವಾದಂತಿದೆ. ಕವಿತೆಯ ಭಾವ ಸಂದರ್ಭ ಸೂಚಿಯಲ್ಲಿ ಅದನ್ನು ಅವರು ವ್ಯಕ್ತಪಡಿಸುತ್ತಾರೆ. ''ಸಾಹಿತ್ಯ ಕಾವ್ಯ' ಬರಿ ವಿಲಾಸವಲ್ಲ. ಅದು ಕಲ್ಯಾಣ ಕರೆಯುವ ಮಯೂರ ನೃತ್ಯ-ಯಜ್ಞ ರೂಪ. ನೃತ್ಯ ಯಜ್ಞದ ಮಯೂರನೇ 'ಕಣಸು' ಕವನದ ಬೀಜವಿರಬಹುದು.''[೧೩೮] 'ಸೂರ್ಯಪಾನ' ಕವನ ಸಂಕಲನದ 'ಸೂರ್ಯಪಾನ', 'ನೃತ್ಯಯಜ್ಞ', 'ಕಣಸು' ಕವಿತೆಗಳು ಒಂದಕ್ಕೊಂದು ಸಂಬಂಧ ಕಲ್ಪಿಸಿಕೊಂಡಿವೆ. ಒಂದರ ಅರ್ಥ ಇನ್ನೊಂದರಲ್ಲಿ ಬೆಳೆಯುತ್ತದೆ. ಹಾಗಾಗಿಯೇ ಬೇಂದ್ರೆ 'ಕಣಸು' ಕವಿತೆಯ ಬೀಜವನ್ನು 'ನೃತ್ಯಯಜ್ಞ'ದಲ್ಲಿ ಕಾಣುತ್ತಾರೆ. 'ಸೂರ್ಯಪಾನ' ಕವಿತೆ ''ವಿಜ್ಞಾನದ ಜ್ಯೋತಿಗಾಗಿ ತಪಿಸುವ ಹೃದಯ ಕಮಲವನ್ನು ಪ್ರತಿಮಿಸುವುದು' ಎಂದು ಸಂದರ್ಭವನ್ನು ಬೇಂದ್ರೆ ಕೊಡುತ್ತಾರೆ.''[೧೩೯] ಅದೇ ರೀತಿ 'ಕಣಸು' ಪದ್ಯದ ಸಂದರ್ಭಕ್ಕೆ ಮೂರೂ ಕವಿತೆಗಳನ್ನು ಜೋಡಿಸುತ್ತಾರೆ. ''ಸಿಂಹದಂತೆ ಕಾಣುವ ಹೂವು ಸೂರ್ಯಪಾನದಿಂದ ಪ್ರಾರಂಭ, ನವಿಲುಗರಿಗಳಿದ್ದ ಸಿಂಹ ಮುಖದ ಕಣಸಿನಿಂದ ಕೊನೆ.''[೧೪೦]

ಔನ್ನತ್ಯ ಮತ್ತು ಔದ್ಧತ್ಯಗಳು ಒಟ್ಟಿಗೆ ಮೇಳವಿಸಿರುವ 'ಸೂರ್ಯಪಾನ'[೧೪೧] ಎಂಬ ಹೆಸರಿನ ಹೂವಿನಲ್ಲಿ ಆತ್ಮಜ್ಞಾನದ ಅನುಭೂತಿಯನ್ನು ಬೇಂದ್ರೆ ಕಾಣುತ್ತಾರೆ. ಅದು ಸೆಟೆದು ನಿಂತಿರುವುದು ತನ್ನ ಸೂರ್ಯನ ತೃಷೆಯನ್ನು ನೀಗಿಸಿಕೊಳ್ಳುವುದಕ್ಕೆ.

ಏನಿದರ ಔನ್ನತ್ಯ ಏನಿದರ ಔದ್ಧತ್ಯ
ಕುಕ್ಕಿಸುವ ಕಣ್ಣುಗಳ ದಿಟ್ಟಿಸುವುದು
ಬಾನಗಣ್ಣಿನ ಬಿಸಿಯ ಹಸಿಯಾರದಲೆ ಕುಡಿದು
ಬೆಳಕ ನೀರಡಿಕೆಯನು ಹುಟ್ಟಿಸುವುದು

ಗಿರಿನಾರ ಕೋಡಿನಲೊ ಕೈಲಾಸ ಶಿಖರದಲೊ
ವಿಶ್ವದೀಪಕ ದೃಷ್ಟಿ ಮೂಡುವಂತೆ
ದಿಂಬಿನಲಿ ಮೊಗದೋರಿ ಎಸಳನಾಯಾಳಿಸುತ
ಸಿಂಹಾವಲೋಕನದಿ ನೋಡುವಂತೆ

ಸಿಂಹದ ರೂಪದಂತೆ ಕಾಣುತ್ತಿರುವ ಹೂವು ತಾನು ಅರಳಿದಂತೆ ಹೃದಯ ಕಮಲವನ್ನು ಕೂಡ ಅರಳಿಸುತ್ತಿರುವುದು ಕವಿಯ ಅನುಭವವಾಗಿದೆ. ಆತ್ಮ ದೀಕ್ಷೆಯನ್ನು ಅದು ನೀಡುತ್ತಿದೆ. ಕೈಲಾಸ ಶಿಖರದಲ್ಲಿ, ಮಾನಸ ಸರೋವರದಲ್ಲಿ ಮನಸ್ಸು ಓಡಾಡುತ್ತಿದೆ. ತಾವು ಕಂಡ ದರ್ಶನವನ್ನು, ಅರಿವಿನ ಅನುಭೂತಿಯನ್ನು 'ಕಣಸು'[೧೪೨] ಕವನದಲ್ಲಿ ಬೇಂದ್ರೆ ನೀಡುತ್ತಾರೆ.

ಸಿಂಹ ಮುಖಕ್ಕಿದೆ ನವಿಲಿನ ಸೋಗೆ
ಶಕ್ತಿಶಾರದೆಯ ಮೇಳದ ಹಾಗೆ!
ನಾಗಮೋಡಿಯಲಿ ನಡೆದಿದೆ ನಾಡಿ
ತಮ ಹಿಂದೂಡಿ, ಪ್ರಕಾಶ ಕೋಡಿ
ಬಾನ ಕೆದರುತಿದೆ ಕಣ್ಣಿನ ಕದಿರು
ಅಪಾರ ಅಪಾರ ಸಪಾರದಿದಿರು!

ನವಿಲಿನ ಗರಿಯನ್ನು ಚುಚ್ಚಿಕೊಂಡಿರುವ ಸಿಂಹದ ಪ್ರತಿಮೆಯನ್ನು ಶಕ್ತಿಶಾರದೆಯು ಕೂಡಿರುವ ಪ್ರತಿಮೆಯೊಂದಿಗೆ ಕವಿ ಹೋಲಿಸುವಲ್ಲಿ ಆತ ಅರ್ಥೈಸಿಕೊಂಡ ಅಖಂಡ ಅನುಭೂತಿಯಿದೆ. ಸೋಜಿಗವೂ, ಭಯಾನಕವೂ, ರಹಸ್ಯಮಯವೂ, ಕನಸು ಇರುವ ಪರಿಯೂ ಅದಾಗಿದೆ.

ಸಿಂಹ-ಮಯೂರ ! ಯಾವುದು ಮೋಡಿ?
ಶಕ್ತಿ-ಸ್ಕಂದ ಏನನು ನೋಡಿ?
ಆವ ರಣಕ್ಕಿದು? ಏನಿದು ಜೋಡಿ?

ಸಿಂಹ ಹಾಗೂ ನವಿಲಿನ ಜೋಡಿ ಕಂಡು ಕವಿ ವಿಸ್ಮಯಕ್ಕೊಳಗಾಗಿದ್ದಾನೆ. ಬಲು ಅಪರೂಪವಾಗಿರುವ, ಅಗಮ್ಯವಾಗಿರುವ ಈ ಜೋಡಿ ಹೊರಟಿರುವ ಸನ್ನಾಹವನ್ನು ಕವಿ ಕೂಡ ಭಯಮಿಶ್ರಿತ ಬೆರಗಿನಿಂದ ವೀಕ್ಷಿಸುತ್ತಿದ್ದಾನೆ.

ಆನರಿಯುವೆನೇ ಈ ಬಿನ್ನಾಣ?
ತಾಯಿ! ಸಲಹು ನೀ ನಿನ್ನದೆ ಪ್ರಾಣ

ಸುತ್ತಲಿನ ಭಯಾನಕ ತಮವನ್ನು ಕರಗಿಸಲು ಕವಿ ಮತ್ತೆ ತಾಯಿಗೆ ಮೊರೆಯಿಡುತ್ತಾನೆ. 'ನವಿಲಿನ ಗರಿಯಿಟ್ಟುಕೊಂಡ ಸಿಂಹ-ಮುಖ ಗುರುವಿನ ಸಂಕೇತವೆಂದು ಬೇಂದ್ರೆಯವರು ಹೇಳಿದ್ದರೂ ಈ ಕವಿತೆಯಲ್ಲಿ 'ತಾಯಿ'ಯನ್ನು ಕುರಿತು ಪ್ರಾರ್ಥನೆ ಇದೆಯಲ್ಲದೆ ಗುರುವನ್ನು ಕುರಿತಲ್ಲ. ಇದೂ ಒಂದು ರಹಸ್ಯವೇ ಆಗಿದೆ'[೭೫] ಎಂದು ಡಾ. ಜಿ.ಎಸ್.ಆಮೂರ ವಿಶ್ಲೇಷಿಸಿರುವುದು ಕವಿತೆಯ ಅರ್ಥ ಆಳವಾಗಿರುವುದನ್ನು ಸೂಚಿಸುತ್ತದೆ. ತನ್ನ ಸಂದಿಗ್ಧತೆಗಳನ್ನು ದೂರ ಮಾಡೆಂದು ತಾಯಿಯನ್ನು ಕೇಳಿಕೊಳ್ಳುವ ದನಿಯು ಕೂಡ ಅಲ್ಲಿರಬಹುದು.

ರುದ್ರತಾಂಡವದ ನಂತರ ಶಿವನ ಕಲ್ಯಾಣದೃಷ್ಟಿ ಹರಿದಾಗಲೆ ಪೃಥ್ವಿ ಹೊಸ ಚಿಗುರಿನಿಂದ ಕುಡಿಯೊಡೆಯಬಲ್ಲುದೆಂದು 'ಸೂರ್ಯಪಾನ' ಸಂಕಲನದ 'ಗಾಳಿಗಳೇ'[೭೬] ಕವಿತೆ ಹೇಳುತ್ತದೆ. ಬರೀ ಪ್ರಳಯವಾದರೆ ರಕ್ತದೋಕುಳಿಯಲ್ಲಿ ಭೂಮಿ ನಲುಗುವುದು.

ಗಾಳಿಗಳೆ, ಮರುಳರಿರಾ, ಶಿವಗಣಂಗಳಿರಾ

ಬನ್ನಿ ಬೀಸಿರಿ ಮರುಳು ಕಾಡಿನಿಂದ ನಿಮ್ಮ ಗೂಡಿನಿಂದ

ಮೂಡಲಿದೆ ಹೊಸ ಚಿಗುರು

ಮೂಡಲಿದೆ ಹೊಸ ಪೊಗರು

ಮೂಡಲಿದೆ ಹೊತ್ತು

ಕುಡಿಯೊಡೆದು ಕಣಕಣವು

ಕುಣಿಯೆ ರುದ್ರರ ಗಣವು

ಕುಣಿಯಲೆದ್ದಿತು ಹೆಣವು

ಪರ್ವವೀಕ್ಷಣವು

ಬೆಳಕಿನ ಹಾದಿ ತೆರೆಯುವುದು ಬೇಕಾಗಿದೆ. ಆದರೆ ಬೆಳಕೆ ಸಿಡಿಲಾಡುವ ಸಂದರ್ಭ-ದೂರಾಗಲಿ ಎನ್ನುವ ಆಶಯ ಒಳಗಿದೆ.

ಕಡಲು ಕದಲಾಡಿತ್ತು

ನೆಲವು ನಡುಗಾಡಿತ್ತು

ಬೆಳಕು ಸಿಡಿಲಾಡಿತ್ತು

ಸುತ್ತು ಮುತ್ತು

ಮನುಷ್ಯ ಸಂಕುಲ ಜೀವದ ಬೇಟೆಯಾಡುತ್ತ ನಡೆದರೆ ಆ ಪ್ರಳಯವನ್ನು ನಿಲ್ಲಿಸಬಲ್ಲ ಶಕ್ತಿ ಆಗಮಿಸಬೇಕಾಗಿದೆ. ಸಿಟ್ಟಿಗೆದ್ದ ಶಿವನ ರೂಪ ಮಂದಸ್ಮಿತವಾಗಿ ಪರಿವರ್ತನೆಗೊಳ್ಳಬೇಕು.

ಚಿಮ್ಮಿತ್ತು ಕೈಲಾಸ

ಹೊಮ್ಮಿ ರುದ್ರನ ಹಾಸ

ಪ್ರಳಯ ಎಬ್ಬಿಸುವ ಶಕ್ತಿಗಳು ಸೃಷ್ಟಿಕರ್ತ ಶಿವನನ್ನು ಕೂಡಲೆಂದು ಕವಿ ಹಾರೈಸುತ್ತಾನೆ.

ಮರುಳರಿರಾ, ಮರುತರಿರಾ

ಏನು ಆಡುವಿರಾವ ಆಟ ಹೂಡಿ?

ಬನ್ನಿ, ಶಿವನ ಕೂಡಿ

ಶಿವಮಯವಾಗಬೇಕು, ಮಂಗಳಕರವಾಗಬೇಕು, ಭಾನುವಿನ ದೃಷ್ಟಿತೇಜಸ್ಸಿಗೆ ಭೂಮಿ ಸದಾ ಒಳಗಾಗುತ್ತಿರಬೇಕು ಎನ್ನುವ ಪ್ರಾರ್ಥನೆ ಅವರ ಅನುಭಾವದ ಸೂತ್ರವನ್ನು ರೂಪಿಸುತ್ತಿತ್ತು. ಬೇಂದ್ರೆಯವರ

ಭಾವದೀಪಿಕೆಯಿಂದ ಹೊರಡುವ ಕಾಂತಿ ನೆಲಮುಗಿಲೆರಡಕ್ಕೂ ಹಬ್ಬುತ್ತಲಿತ್ತು. ಹಸುರಿನ, ಹೆಂಗರುಳಿನ ಪೃಥ್ವಿ ವಾತ್ಸಲ್ಯಮಯಿ - ಮಂಗಳಮಯಿ ತಾಯಿಯಾಗಿದ್ದಾಳೆ. ಕಾರುಣ್ಯ ಸೂಸುತ್ತಿರುವ ಬಾನು ಅಲೌಕಿಕದ ಪ್ರಕಾಶ ಬೀರುತ್ತ ಒಲವಿನ ತಂದೆಯಾಗಿದ್ದಾನೆ. ನೆಲಮುಗಿಲಿನ ಬಾಂಧವ್ಯವನ್ನು ಬೇಂದ್ರೆ ನಿಸರ್ಗ ಕವಿತೆಗಳು ಇನ್ನಿಲ್ಲದಂತೆ ವಿವರಿಸುತ್ತವೆ. ಕವಿಗೆ ಅದರಲ್ಲಿಯೆ ಸಂಪೂರ್ಣ ತೃಪ್ತಿಯಿದೆ.

ನೆಲದ ತಾಯೆ, ಓ ಬಾನ ತಂದೆ, ಬಾಂ
ಧವ್ಯವಿರಲಿ ಚಂದಾss[೧೪೫]

ತಾವು ನಂಬಿಕೊಂಡ ಭಕ್ತಿಯ ಬುಗ್ಗೆಗಳಿಂದಲೆ ಬದುಕಿನ ಬೆಂಕಿಯನ್ನು ಬೇಂದ್ರೆ ತಮ್ಮ ಅನುಭವದಲ್ಲಿ ಅರಗಿಸಿಕೊಂಡರು. ಅದವ್ಯು ಉತ್ಸಾಹ, ಅನುರಾಗ, ಆಧ್ಯಾತ್ಮಿಕತೆ, ಬಾಳಿನ ಒಳನೋಟಗಳು ಅವರ ಅನುಭೂತಿಯನ್ನು ನೀರಸವಾಗಿಸದೆ ಅದ್ವಿತೀಯವೆನಿಸುವ ಕಾವ್ಯಾಭಿವ್ಯಕ್ತಿಯಿಂದ ನಳನಳಿಸುವಂತೆ ಮಾಡಿವೆ. ಹಾಗಾಗಿಯೆ ಸೃಷ್ಟಿಯಂತೆ ಚೆಲುವು ಮತ್ತು ನಿಗೂಢತೆಯನ್ನು ಉಳಿಸಿಕೊಳ್ಳಲು ಅವರ ಕಾವ್ಯಕ್ಕೆ ಸಾಧ್ಯವಾಯಿತು.

ಅಡಿಟಿಪ್ಪಣಿಗಳು :

೧. ದ.ರಾ. ಬೇಂದ್ರೆ : 'ಗರಿ', ಪು. ೧, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಮೂರನೆಯ ಆವೃತ್ತಿ, ೧೯೫೧.

೨. ಅದೇ, ಪು. ೨.

೩. ಪ್ರೊ. ಕೀರ್ತಿನಾಥ ಕುರ್ತಕೋಟಿ : 'ಶ್ರಾವಣ ಪ್ರತಿಭೆ', ಪು. ೧೯, ಪುಟಬಂಗಾರ, ಸಂಪುಟ-೫, ಮನೋಹರ ಗ್ರಂಥಮಾಲೆ, ೧೯೮೭.

೪. ದ.ರಾ. ಬೇಂದ್ರೆ : 'ಗಂಗಾವತರಣ', ಪು. ೯೧, ಪ್ರತಿಭಾ ಗ್ರಂಥಮಾಲೆ, ಧಾರವಾಡ, ಎ.ಮು. ೧೯೫೫.

೫. ದ.ರಾ. ಬೇಂದ್ರೆ : 'ಸಂಚಯ', ಪು. ೭೨, ಸಮಾಜ ಪುಸ್ತಕಾಲಯ, ಧಾರವಾಡ, ದ್ವಿ.ಮು. ೧೯೫೬.

೬. ದ.ರಾ. ಬೇಂದ್ರೆ : 'ಕೃಷ್ಣಾಕುಮಾರಿ ಮತ್ತು ಹಾಡು-ಪಾಡು', ಪು. ೪೪, ಸಮಾಜ ಪುಸ್ತಕಾಲಯ, ಧಾರವಾಡ, ದ್ವಿ.ಮು. ೧೯೫೭.

೭. ಅದೇ.

೮. ದ.ರಾ. ಬೇಂದ್ರೆ : 'ಅರಳು ಮರಳು', ಪು. ೩೭೪, ಶ್ರೀ ಮಾತಾ ಪ್ರಕಾಶನ, ಧಾರವಾಡ, ಮೂರನೆಯ ಆವೃತ್ತಿ, ೧೯೬೫.

೯. ದ.ರಾ.ಬೇಂದ್ರೆ: 'ಯಕ್ಷ ಯಕ್ಷಿ', ಪು. ೨೭, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೨.

೧೦. ಪ್ರೊ.ಕೀರ್ತಿನಾಥ ಕುರ್ತಕೋಟಿ: 'ನೂರು ಮರ, ನೂರು ಸ್ವರ', ಪು. ೧೪೯, ಪ್ರಸಾರಾಂಗ, ಕ.ವಿ.ವಿ. ಹಂಪಿ, ೧೯೯೮.

೧೧. ಪ್ರೊ. ಎಚ್.ಎಸ್.ರಾಘವೇಂದ್ರರಾವ್ : 'ಹಾಡೇ ಹಾದಿಯ ತೋರಿತು', ಪು. ೩೪೨, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೯೫.

೧೨. ದ.ರಾ.ಬೇಂದ್ರೆ: 'ನಾದಲೀಲೆ', ಪು. ೭೩, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು. ೧೯೫೫.

೧೩. ಅದೇ ಪು. ೭೫.

೧೪. ಅದೇ.

೧೫. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ಶ್ರಾವಣ ಪ್ರತಿಭೆ', ಪು. ೮೪, ಪುಟಬಂಗಾರ, ಸಂಪುಟ-೫, ಮನೋಹರ ಗ್ರಂಥಮಾಲೆ, ೧೯೮೭.

೧೬. ದ.ರಾ.ಬೇಂದ್ರೆ: 'ನಾದಲೀಲೆ', ಪು. ೫೦, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು. ೧೯೫೫.

೧೭. ದ.ರಾ.ಬೇಂದ್ರೆ: 'ಗರಿ' ಪು. ೫, ಮನೋಹರ ಗ್ರಂಥಮಾಲೆ, ಧಾರವಾಡ, ಮೂ. ಆ. ೧೯೫೧.

೧೮. ದ.ರಾ.ಬೇಂದ್ರೆ: 'ಅರಳು ಮರಳು', ಪು. ೩೭೮, ಶ್ರೀ ಮಾತಾ ಪ್ರಕಾಶನ, ಧಾರವಾಡ, ೧೯೯೫ (ಜೀವಲಹರಿ, ಪು. ೧೫, ೧೯೫೭).

೧೯. ದ.ರಾ.ಬೇಂದ್ರೆ, ಕೃಷ್ಣಾಕುಮಾರಿ ಮತ್ತು ಹಾಡುಪಾಡು, ಪು. ೨೪, ಸಮಾಜ ಪುಸ್ತಕಾಲಯ, ಧಾರವಾಡ, ದ್ವಿ.ಮು. ೧೯೫೬.

೨೦. ಅದೇ.

೨೧. ದ.ರಾ.ಬೇಂದ್ರೆ: 'ಅಂಬಿಕಾತನಯದತ್ತರ ಸಮಗ್ರ ಕಾವ್ಯ', ಜು. ೧೦೩, ('ಔದುಂಬರಗಾಥೆ', ಸಂಪುಟ-೨) ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೩.

೨೨. ಅದೇ, ಸಂಪುಟ-೨, ಪು. ೧೮೦.

೨೩. ದ.ರಾ.ಬೇಂದ್ರೆ: 'ಸಖಿಗೀತ', ಪು. ೧೦೨, ಮನೋಹರ ಗ್ರಂಥ ಪ್ರಕಾಶನ ಸಮಿತಿ, ೧೯೪೦.

೨೪. ಅದೇ, ಪು. ೬೫.

೨೫. ದ.ರಾ. ಬೇಂದ್ರೆ: 'ಅರಳು ಮರಳು', ಪು. ೩೪೫, ಶ್ರೀಮಾತಾ ಪ್ರಕಾಶನ, ಧಾರವಾಡ, ಮೂ.ಆ., ೧೯೯೫.

೨೬. ದ.ರಾ.ಬೇಂದ್ರೆ: 'ಕಾಮಕಸ್ತೂರಿ', ಪು. ೫೩.

೨೭. ಪ್ರೊ. ಎಚ್.ಎಸ್.ರಾಘವೇಂದ್ರರಾವ್ : 'ಹಾಡೆ ಹಾದಿಯ ತೋರಿತು', ಪು. ೨೪೯, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೯೫.

೨೮. ದ.ರಾ. ಬೇಂದ್ರೆ: 'ಗಂಗಾವತರಣ', ಪು. ೯೪, ಪ್ರತಿಭಾ ಗ್ರಂಥಮಾಲೆ, ಧಾರವಾಡ, ಎ.ಮು. ೧೯೫೫.

೨೯. ದ.ರಾ. ಬೇಂದ್ರೆ: 'ಹೃದಯ ಸಮುದ್ರ', ಪು. ೪೩, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೩೦. ದ.ರಾ. ಬೇಂದ್ರೆ: 'ನಾದಲೀಲೆ', ಪು. ೪೦, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು, ೧೯೫೫.

೩೧. ಅದೇ.

೩೨. ಅದೇ.

೩೩. ದ.ರಾ. ಬೇಂದ್ರೆ: 'ಪರಾಕಿ', ಪು. ೪, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೨

೩೪. ಅದೇ.

೩೫. ದ.ರಾ. ಬೇಂದ್ರೆ: 'ಗಂಗಾವತರಣ', ಪು. ೧೪, ಪ್ರತಿಭಾ ಗ್ರಂಥಮಾಲೆ, ಧಾರವಾಡ, ಎ.ಮು. ೧೯೫೫.

೩೬. ಡಾ. ಗಿರಡ್ಡಿ ಗೋವಿಂದರಾಜ: 'ಪ್ರಮಾಣು' ಪು. ೩೧, ಕ.ವಿ.ವಿ. ಹಂಪಿ, ೨೦೦೭.

೩೭. ದ.ರಾ. ಬೇಂದ್ರೆ: 'ಹೃದಯ ಸಮುದ್ರ', ಪು. ೧೮, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೩೮. ಪ್ರೊ. ಶಂಕರ ಮೊಕಾಶಿ ಪುಣೇಕರ; 'ಓ ತಾಯಿ ಮಾಯಿ', ಲೇಖನ, ಪು. ೪೫೯, 'ಇಳಿದು ಬಾ ತಾಯಿ' ಗ್ರಂಥ, ಸಂ: ಬುದ್ಧಣ್ಣ ಹಿಂಗಮಿರೆ, ಸಾಹಿತ್ಯ ಮಂಟಪ, ಹುಬ್ಬಳ್ಳಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೭.

೩೯. ಅದೇ, ಪು. ೪೭೦.

೪೦. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ಬಾರೋ ಸಾಧನಕೇರಿಗೆ', ಪು. ೯೭, ಮನೋಹರ ಗ್ರಂಥಮಾಲಾ, ಧಾರವಾಡ, ೧೯೯೩.

೪೧. ದ.ರಾ. ಬೇಂದ್ರೆ: 'ಪರಾಕಿ', ಪು. ೩, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೨.

೪೨. ಡಾ. ಜಿ.ಎಸ್. ಅಮೂರ (ಸಂ.): 'ಬೇಂದ್ರೆ ಕಾವ್ಯ', ಪು. ೧೭, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೩.

೪೩. ಡಾ. ಗಿರಡ್ಡಿ ಗೋವಿಂದರಾಜ: 'ಪ್ರಮಾಣು', ಪು. ೬೪, ಕ.ವಿ.ವಿ. ಹಂಪಿ, ೨೦೦೭.

೪೪. ಡಾ. ಡಿ.ಆರ್. ನಾಗರಾಜ್: 'ಶಕ್ತಿ ಶಾರದೆಯ ಮೇಳ', ಪು. ೫೩, ಅಕ್ಷರ ಪ್ರಕಾಶನ, ಸಾಗರ, ೧೯೮೭.

೪೫. ದ.ರಾ. ಬೇಂದ್ರೆ: 'ಅರಳು-ಮರಳು', ಪು. ೨೫೭, ಶ್ರೀ ಮಾತಾ ಪ್ರಕಾಶನ, ಧಾರವಾಡ, ಮೂ.ಆ., ೧೯೯೫.

೪೬. ಬಸವಣ್ಣನವರ ವಚನ ಸಂಗ್ರಹ: ಪು. ೧೩೯, ಸಾಹಿತ್ಯ ಅಕಾಡೆಮಿ, ಹೊಸ ದೆಹಲಿ, ೧೯೯೬.

೪೭. ದ.ರಾ. ಬೇಂದ್ರೆ: 'ನಾಲ್ವರು ತಾಯಂದಿರು', ಪು. ೧೫೧, ಅರಳು-ಮರಳು, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೯೫.

೪೮. ದ.ರಾ. ಬೇಂದ್ರೆ: 'ಸಖಿಗೀತ', ಪು. ೫೫, ಮನೋಹರ ಗ್ರಂಥ ಪ್ರಕಾಶನ ಸಮಿತಿ, ೧೯೪೦.

೪೯. ದ.ರಾ. ಬೇಂದ್ರೆ: 'ನಾದಲೀಲೆ', ಪು. ೨೮, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು., ೧೯೫೫.

೫೦. ದ.ರಾ. ಬೇಂದ್ರೆ: 'ಸೂರ್ಯಪಾನ', ಪು. ೪೫, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೫೧. ದ.ರಾ. ಬೇಂದ್ರೆ: 'ನಾದಲೀಲೆ', ಪು. ೯೦, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು., ೧೯೫೫.

೫೨. ದ.ರಾ. ಬೇಂದ್ರೆ: 'ನಮನ', ಪು. ೭, ಸಮಾಜ ಪುಸ್ತಕಾಲಯ, ಧಾರವಾಡ. ೧೯೫೮.

೫೩. ಅದೇ, ಪು. ೬.

೫೪. ಅದೇ, ಪು. ೫.

೫೫. ಡಾ. ಡಿ.ಆರ್. ನಾಗರಾಜ್ : ‘ಶಕ್ತಿ ಶಾರದೆಯ ಮೇಳ’, ಪು. ೮೫, ಅಕ್ಷರ ಪ್ರಕಾಶನ, ಸಾಗರ, ೧೯೮೭.

೫೬. ದ.ರಾ. ಬೇಂದ್ರೆ : ‘ನಮನ’, ಪು. ೮, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೮.

೫೭. ದ.ರಾ. ಬೇಂದ್ರೆ : ‘ಸೂರ್ಯಪಾನ’, ಪು. ೪೭, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೫೮. ದ.ರಾ. ಬೇಂದ್ರೆ : ‘ನಮನ’, ಪು. ೨೬, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೮.

೫೯. ದ.ರಾ. ಬೇಂದ್ರೆ : ‘ಸಂಚಯ’, ಪು. ೨೨, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೯.

೬೦. ದ.ರಾ. ಬೇಂದ್ರೆ : ‘ಹೃದಯ ಸಮುದ್ರ’, ಪು. ೪೫, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೬೧. ದ.ರಾ. ಬೇಂದ್ರೆ : ‘ಗಂಗಾವತರಣ’, ಪು. ೧೦, ಪ್ರತಿಭಾ ಗ್ರಂಥಮಾಲೆ, ಧಾರವಾಡ, ಎ.ಮು., ೧೯೫೫.

೬೨. ದ.ರಾ. ಬೇಂದ್ರೆ : ‘ಸಖಿಗೀತ’, ಪು. ೩೯, ಮನೋಹರ ಗ್ರಂಥ ಪ್ರಕಾಶನ ಸಮಿತಿ, ೧೯೪೦.

೬೩. ಅದೇ, ಪು. ೪೧.

೬೪. ಪ್ರೊ. ಕೀರ್ತಿನಾಥ ಕುರ್ತಕೋಟಿ : ‘ಬಾರೋ ಸಾಧನಕೇರಿಗೆ’, ಪು. ೫೨-೫೩, ಮನೋಹರ ಗ್ರಂಥಮಾಲಾ, ಧಾರವಾಡ, ೧೯೯೩.

೬೫. ದ.ರಾ. ಬೇಂದ್ರೆ : ‘ಸಖಿಗೀತ’, ಪು. ೩೧, ಮನೋಹರ ಗ್ರಂಥ ಪ್ರಕಾಶನ ಸಮಿತಿ, ೧೯೪೦.

೬೬. ಅದೇ, ಪು. ೩೨.

೬೭. ಅದೇ, ಪು. ೩೫.

೬೮. ದ.ರಾ. ಬೇಂದ್ರೆ : ‘ನಾದಲೀಲೆ’, ಪು. ೨೫, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು. ೧೯೫೫.

೬೯. ದ.ರಾ. ಬೇಂದ್ರೆ : ‘ಸೂರ್ಯಪಾನ’ತ ಪು. ೧೦೫, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೭೦. ದ.ರಾ. ಬೇಂದ್ರೆ : ‘ನಾಕುತಂತಿ’, ಪು.೧, ಸಮಾಜ ಪುಸ್ತಕಾಲಯ, ಧಾರವಾಡ, ದ್ವಿ.ಮು. ೧೯೭೪.

೭೧. ಪ್ರೊ. ಕೀರ್ತಿನಾಥ ಕುರ್ತಕೋಟಿ : ‘ಪುಟ ಬಂಗಾರ’, ಪು. ೨೪೨, ಮನೋಹರ ಗ್ರಂಥಮಾಲಾ, ಧಾರವಾಡ, ೧೯೮೭.

೭೨. ದ.ರಾ. ಬೇಂದ್ರೆ : ‘ನಾಕುತಂತಿ’, ಪು.೧, ಸಮಾಜ ಪುಸ್ತಕಾಲಯ, ಧಾರವಾಡ, ದ್ವಿ.ಮು. ೧೯೮೯.

೭೩. ದ.ರಾ. ಬೇಂದ್ರೆ : ‘ಗಂಗಾವತರಣ’, ಪು. ೫೬, ಪ್ರತಿಭಾ ಗ್ರಂಥಮಾಲೆ, ಧಾರವಾಡ, ಎ.ಮು., ೧೯೫೫.

೭೪. ದ.ರಾ. ಬೇಂದ್ರೆ : ‘ನಾಕುತಂತಿ’, ಪು.೭೮, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೮೯.

೭೫. ಅದೇ, ಪು. ೪.

೭೬. ಪ್ರೊ. ಕೀರ್ತಿನಾಥ ಕುರ್ತಕೋಟಿ : ‘ಪುಟ ಬಂಗಾರ’, ಸಂಪುಟ-೫, ಶ್ರಾವಣ ಪ್ರತಿಭೆ, ಪು. ೨೪೭-೨೪೮, ಮನೋಹರ ಗ್ರಂಥಮಾಲಾ, ಧಾರವಾಡ, ೧೯೮೭.

೭೭. ದ.ರಾ. ಬೇಂದ್ರೆ : ‘ಮರ್ಯಾದೆ’, ಪು. ೪೪, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೬.

೭೮. ಅದೇ, ಪು. ೪೨.

೭೯. ಅದೇ, ಪು. ೪೪.

೮೦. ದ.ರಾ. ಬೇಂದ್ರೆ: 'ಅರಳು ಮರಳು', ಪು. ೩೪೬-೩೪೭, ಶ್ರೀ ಮಾತಾ ಪ್ರಕಾಶನ, ಧಾರವಾಡ, ೧೯೯೫, (ಆವೃತ್ತಿ-೩).

೮೧. ದ.ರಾ. ಬೇಂದ್ರೆ: 'ಗರಿ', ಪು. ೧೧೮, ಮನೋಹರ ಗ್ರಂಥಮಾಲೆ, ಧಾರವಾಡ, ಮೂ. ಆ., ೧೯೫೧.

೮೨. ದ.ರಾ. ಬೇಂದ್ರೆ: 'ನಾದಲೀಲೆ', ಪು. ೨೬, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು. ೧೯೫೫.

೮೩. ದ.ರಾ. ಬೇಂದ್ರೆ: 'ನಾಕುತಂತಿ', ಪು.೫೬-೫೭, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೮೯.

೮೪. ದ.ರಾ. ಬೇಂದ್ರೆ: 'ಮುಕ್ತಕಂಠ', ಪು. ೪೪, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೮೫. ದ.ರಾ. ಬೇಂದ್ರೆ: 'ನಮನ', ಪು. ೨೪-೨೫, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೮.

೮೬. ದ.ರಾ. ಬೇಂದ್ರೆ: 'ಸಖಿಗೀತ', ಪು. ೭೪, ಮನೋಹರ ಗ್ರಂಥ ಪ್ರಕಾಶನ ಸಮಿತಿ, ೧೯೪೦.

೮೭. ಅದೇ, ಪು. ೭೫.

೮೮. ಅದೇ, ಪು. ೮೧.

೮೯. ಅದೇ, ಪು. ೮೧.

೯೦. ದ.ರಾ. ಬೇಂದ್ರೆ: 'ಗರಿ', ಪು. ೧೦೭, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಮೂ. ಆ., ೧೯೫೧.

೯೧. ಅದೇ, ಪು. ೧೦೬.

೯೨. ದ.ರಾ. ಬೇಂದ್ರೆ: 'ಸಖಿಗೀತ', ಪು. ೮೩, ಮನೋಹರ ಗ್ರಂಥ ಪ್ರಕಾಶನ ಸಮಿತಿ, ೧೯೪೦.

೯೩. ಅದೇ, ಪು. ೮೫.

೯೪. ಅದೇ, ಪು. ೮೫.

೯೫. ಅದೇ.

೯೬. ಕಬೀರ ವಚನಾವಳಿ: (ಅನುವಾದ: ದ.ರಾ. ಬೇಂದ್ರೆ) ಪು. ೯೧, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೮೮.

೯೭. ಅದೇ, ಪು. ೯೬.

೯೮. ಅದೇ, ಪು. ೯೭.

೯೯. ಅದೇ, ಪು. ೯೮.

೧೦೦. ಅದೇ, ಪು. ೯೯.

೧೦೧. ದ.ರಾ. ಬೇಂದ್ರೆ: ಸಾಹಿತ್ಯದ ವಿರಾಟ ಸ್ವರೂಪ: ಪು. ೧೦೦, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೧೦೨. ದ.ರಾ. ಬೇಂದ್ರೆ: 'ಸಂಚಯ', ಪು. ೯, ೧೩, ಸಮಾಜ ಪುಸ್ತಕಾಲಯ, ಧಾರವಾಡ. ೧೯೫೯.

೧೦೩. ದ.ರಾ. ಬೇಂದ್ರೆ: 'ಗಂಗಾವತರಣ', ಪು. ೮೫, ಪ್ರತಿಭಾ ಗ್ರಂಥಮಾಲೆ, ಧಾರವಾಡ, ಎ.ಮು. ೧೯೫೫.

೧೦೪. ದ.ರಾ. ಬೇಂದ್ರೆ: 'ಗಂಗಾವತರಣ', ಪು. ೧೧೫, ಪ್ರತಿಭಾ ಗ್ರಂಥಮಾಲೆ, ಧಾರವಾಡ. ಎ.ಮು. ೧೯೫೫.

೧೦೫. ದ.ರಾ. ಬೇಂದ್ರೆ: 'ಮಾತೆಲ್ಲ ಜ್ಯೋತಿ', ಪು. ೬೪, ಅಕಾಡೆಮಿ ಆಫ್ ಜನರಲ್ ಎಜುಕೇಶನ್, ಮಣಿಪಾಲ, ೧೯೭೨.

೧೦೬. ಶ್ರೀ ಬಸವಣ್ಣನವರ ವಚನ ಸಂಗ್ರಹ : ಸಂ. ಸ.ಸ. ಮಾಳವಾಡ, ಪು. ೯೯, ಸಾಹಿತ್ಯ ಅಕಾಡೆಮಿ, ಹೊಸದೆಹಲಿ, ಮೂ.ಮು. ೧೯೯೬.

೧೦೭. ಅದೇ, ಪು. ೨೭.

೧೦೮. ಡಾ. ಜಿ.ಎಸ್. ಆಮೂರ : ಶತಮಾನದ ಕವಿತೆ 'ಜೋಗಿ', ಪು. ೯೧, (ಸಂ. ಕೆ.ಸಿ. ಶಿವಾರೆಡ್ಡಿ), ಕ.ವಿ.ವಿ. ಹಂಪಿ, ೧೯೯೯.

೧೦೯. ಅದೇ, ಪು. ೧೨, ೨೦, ೫೦.

೧೧೦. ಪ್ರೊ. ಕೀರ್ತಿನಾಥ ಕುರ್ತಕೋಟಿ : 'ಪುಟ ಬಂಗಾರ' (ಶ್ರಾವಣ ಪ್ರತಿಭೆ - ಸಂಪುಟ ಐದು) ಪು. ೧೨೯, ಮನೋಹರ ಗ್ರಂಥಮಾಲಾ, ಧಾರವಾಡ, ೧೯೮೭.

೧೧೧. ಅದೇ, ಪು. ೧೩೦.

೧೧೨. ಡಾ. ಜಿ.ಎಸ್. ಆಮೂರ : 'ಭುವನದ ಭಾಗ್ಯ', ಪು. ೨೧೩, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ತೃ.ಮು. ೨೦೦೭.

೧೧೩. ಪಿ. ಲಂಕೇಶ್ : 'ಜೋಗಿ', ಗಂಗಾವತರಣ, ಲೇ: ಪು. ೩೮೫, ('ಬೇಂದ್ರೆ ಕಾವ್ಯ' ಸಂ.: ಜಿ.ಎಸ್. ಆಮೂರ) ಕ.ಸಾ.ಅ. ಬೆಂಗಳೂರು, ೨೦೦೩.

೧೧೪. ಅದೇ, ಪು. ೩೮೯.

೧೧೫. ಪ್ರೊ. ಎಚ್.ಎಸ್. ರಾಘವೇಂದ್ರರಾವ್ : ಶತಮಾನದ ಕವಿತೆ 'ಜೋಗಿ' ಲೇ, (ಸಂ. ಕೆ.ಸಿ. ಶಿವಾರೆಡ್ಡಿ) ಪು. ೪೩, ಕ.ವಿ.ವಿ. ಹಂಪಿ, ೧೯೯೯.

೧೧೬. ಅದೇ, ಪ್ರಸ್ತಾವನೆ - 'ಸಂಧಿಕಾಲದ ಆಧುನಿಕ ಪುರಾಣ', ಪು. xvi.

೧೧೭. ದ.ರಾ. ಬೇಂದ್ರೆ : 'ಸಾಹಿತ್ಯದ ವಿರಾಟ ಸ್ವರೂಪ', ಪು. ೫೨, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೧೧೮. ಅದೇ, ಪು. ೮೯.

೧೧೯. ದ.ರಾ. ಬೇಂದ್ರೆ : 'ಮುಗಿಲ ಮಲ್ಲಿಗೆ', ಪು. ೨೩, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೧.

೧೨೦. ಪ್ರೊ. ಕೀರ್ತಿನಾಥ ಕುರ್ತಕೋಟಿ : 'ಪುಟ ಬಂಗಾರ' (ಶ್ರಾವಣ ಪ್ರತಿಭೆ - ಸಂಪುಟ ಐದು) ಪು. ೨೨೫, ಮನೋಹರ ಗ್ರಂಥಮಾಲಾ, ಧಾರವಾಡ, ೧೯೮೭.

೧೨೧. ದ.ರಾ. ಬೇಂದ್ರೆ : 'ಮುಗಿಲ ಮಲ್ಲಿಗೆ', ಪು. ೭೯, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೧.

೧೨೨. ಅದೇ, ಪು. ೧.

೧೨೩. ಅದೇ, ಪು. ೧೧.

೧೨೪. ಅದೇ, ಪು. ೩೮.

೧೨೫. ಅದೇ.

೧೨೬. ಅದೇ, ಪು. ೪೦.

೧೨೭. ದ.ರಾ.ಬೇಂದ್ರೆ : 'ಮುಗಿಲ ಮಲ್ಲಿಗೆ', ಪು. ೪೦, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೧.

೧೨೮. ಅದೇ, ಪು. ೧೮.

೧೨೯. ಅದೇ, ಪು. ೮೦.

೧೩೦. ಡಾ. ಜಿ.ಎಸ್. ಆಮೂರ : 'ಭುವನದ ಭಾಗ್ಯ', ಪು. ೨೨೬, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ತ್ರೈ.ಮು. ೨೦೦೭.

೧೩೧. ಶ್ರೀ ಬಸವಣ್ಣನವರ ವಚನ ಸಂಗ್ರಹ : ಸಂ. ಸ.ಸ. ಮಾಳವಾಡ, ಪು. ೧೮೨, ಸಾಹಿತ್ಯ ಅಕಾಡೆಮಿ, ಹೊಸದೆಹಲಿ, ಮೂ.ಮು. ೧೯೯೬.

೧೩೨. ದ.ರಾ.ಬೇಂದ್ರೆ : 'ನಮನ', ಪು. ೨೦, ಸಮಾಜ ಪುಸ್ತಕಾಲಯ, ಧಾರವಾಡ, ೧೯೩೮.

೧೩೩. ಪ್ರೊ. ಕೀರ್ತಿನಾಥ ಕುರ್ತಕೋಟಿ : 'ಪುಟ ಬಂಗಾರ' (ಶ್ರಾವಣ ಪ್ರತಿಭೆ - ಸಂಪುಟ ಐದು) ಪು. ೨೦೪, ಮನೋಹರ ಗ್ರಂಥಮಾಲಾ, ಧಾರವಾಡ, ೧೯೮೭.

೧೩೪. ಶ್ರೀ ಬಸವಣ್ಣನವರ ವಚನ ಸಂಗ್ರಹ : ಸಂ. ಸ.ಸ. ಮಾಳವಾಡ, ಪು. ೧೦೯, ಸಾಹಿತ್ಯ ಅಕಾಡೆಮಿ, ಹೊಸದೆಹಲಿ, ಮೂ.ಮು. ೧೯೯೬.

೧೩೫. ದ.ರಾ.ಬೇಂದ್ರೆ : 'ಯಕ್ಷ ಯಕ್ಷಿ', ಪು. ೩೧, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೨.

೧೩೬. ದ.ರಾ.ಬೇಂದ್ರೆ : 'ಸೂರ್ಯಪಾನ', ಪು. ೨೯, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೧೩೭. ಪ್ರೊ. ಕೀರ್ತಿನಾಥ ಕುರ್ತಕೋಟಿ : 'ಪುಟ ಬಂಗಾರ' (ಶ್ರಾವಣ ಪ್ರತಿಭೆ - ಸಂಪುಟ ಐದು) ಪು. ೧೯೭, ಮನೋಹರ ಗ್ರಂಥಮಾಲಾ, ಧಾರವಾಡ, ೧೯೮೭.

೧೩೮. ದ.ರಾ.ಬೇಂದ್ರೆ : 'ಸೂರ್ಯಪಾನ', ಕವಿತೆಗಳ ಸಂದರ್ಭಸೂಚಿ, ಪು. ೩, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬ (ಪ್ರ.ಮು.).

೧೩೯. ಅದೇ.

೧೪೦. ಅದೇ, ಪು. ೬.

೧೪೧. ಅದೇ, ಪು. ೧.

೧೪೨. ಅದೇ, ಪು. ೧೨೧.

೧೪೩. ಡಾ. ಜಿ.ಎಸ್. ಆಮೂರ : 'ಭುವನದ ಭಾಗ್ಯ', ಪು. ೫೯, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ತೃ.ಮು. ೨೦೦೭.

೧೪೪. ದ.ರಾ.ಬೇಂದ್ರೆ : 'ಸೂರ್ಯಪಾನ', ಪು. ೭೨, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬ (ಪ್ರ.ಮು.).

೧೪೫. ದ.ರಾ.ಬೇಂದ್ರೆ : 'ಯಕ್ಷ ಯಕ್ಷಿ', ಪು. ೫೯, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೨ (ಪ್ರ.ಮು.).

ಅಧ್ಯಾಯ – ಏಳು

ಮೇರು ಅಭಿವ್ಯಕ್ತಿಯ ಕೌಶಲ

ಅಧ್ಯಾಯ-೭

ಮೇರು ಅಭಿವ್ಯಕ್ತಿಯ ಕೌಶಲ

೭.೧ ಪೀಠಿಕೆ :

ನಿಸರ್ಗದ ಪ್ರತಿಮೆ ಹಾಗೂ ಚಿತ್ರಗಳ ಮೂಲಕ ಬೇಂದ್ರೆಯವರು ಕೊಡುವ ಅನುಭವದ ಚಿತ್ರಣ ವಿಶಿಷ್ಟವಾಗಿರುವುದನ್ನು ನಾವು ನೋಡಿದ್ದೇವೆ. ಪ್ರಕೃತಿ ಅವರಲ್ಲಿ ಪ್ರಕಟಗೊಳ್ಳುವ, ಕಾಣಿಸಿಕೊಳ್ಳುವ, ತೋರಿಕೊಳ್ಳುವ ರೀತಿ ಶ್ರೇಷ್ಠ ಕಾವ್ಯವಾಗಿ ಹೊರಹೊಮ್ಮಿದೆ. ಕವಿ ತಾನು ದೊರಕಿಸಿಕೊಳ್ಳುವ ದರ್ಶನ ಹಾಗೂ ಸಾಕ್ಷಾತ್ಕಾರ ಸಹೃದಯನ ಅನುಭವವೂ ಆಗುವುದರಿಂದ ಸಾಕ್ಷಾತ್ಕರಿಸಿದವನ ಕಾವ್ಯಕೌಶಲ್ಯ ಮಹತ್ವದ್ದಾಗುತ್ತದೆ. ಭಾಷೆ, ಶಬ್ದ, ಧ್ವನಿ, ನಾದ, ರಸ, ಗಂಧಗಳಿಂದ ಸಮೃದ್ಧವಾಗಿ ಕಣ್ಣಿಗೆ ಕಾಣುವ ಸ್ವರೂಪ, ಕಿವಿಗೆ ಕೇಳುವ ವೈಖರಿಗಳಿಂದ ಅನುಭೂತವಾಗಿ ಬೇಂದ್ರೆ ಕಾವ್ಯ ನಮ್ಮನ್ನು ಆವರಿಸಿಕೊಳ್ಳುತ್ತದೆ. ಓದುಗರನ್ನು ಒಳಗು ಮಾಡಿಕೊಳ್ಳುವ, ಅವರನ್ನು ಒಂದು ರೀತಿಯಲ್ಲಿ ಸಮ್ಮೋಹನಗೊಳಿಸುವ ಕಲೆ ಬೇಂದ್ರೆಯವರಿಗೆ ಒಲಿದಿತ್ತು. ಇದರ ಅರ್ಥ ಕವಿ ಬರೀ ಭಾವದೊಡನೆ ಆಟವಾಡಿದರೆಂದಲ್ಲ. ಬುದ್ಧಿ-ಭಾವಗಳ ಸರಿಯಾದ ಬೆಸುಗೆಯಿಂದ ಅವರು ಅದನ್ನು ಸಾಧಿಸಲು ಸಾಧ್ಯವಾಯಿತು. ತಮ್ಮ ಉತ್ಕಟ ಅನುಭವದ ಪರಿಣಾಮಕಾರಿ ಅಭಿವ್ಯಕ್ತಿ ಹೇಗಿರಬೇಕೆಂಬುದರ ಅರಿವು ಅವರಿಗಿದ್ದುದರಿಂದಲೆ ಸೃಜನಶೀಲತೆಯನ್ನು ಬಣ್ಣಿಸುವ, ಕಾವ್ಯದ ಹುಟ್ಟು ಹೇಳುವ, ಜನರಿಗೆ ಎಂಥ ಕಾವ್ಯ ಬೇಕೆನ್ನುವ ಮತ್ತು ಅನುಭೂತಿಯನ್ನು ಲೌಕಿಕದ ಅರ್ಥದಲ್ಲಿ ಹಿಡಿದಿಡುವ ಪ್ರಯತ್ನವನ್ನು ಅವರು ಮಾಡಿದರು. ಕನ್ನಡ ಕಾವ್ಯ ಪರಂಪರೆಯನ್ನು ಬೇಂದ್ರೆ ಚೆನ್ನಾಗಿ ಬಲ್ಲವರಾದುದರಿಂದ ತಮ್ಮ ಅಭಿವ್ಯಕ್ತಿಯ ಮಾರ್ಗ ಹೇಗಿರಬೇಕೆಂಬುದನ್ನು ಅವರು ಬಲುಬೇಗನೆ ಕಂಡುಕೊಂಡರು. ಬೆಂಕಿಯಂತೆ ಕುದಿಯುತ್ತಿದ್ದ ಹಾಗೂ ನೀರಿನಂತೆ ಪ್ರಶಾಂತವಾಗಿದ್ದ ಅನುಭವಗಳಿಗೆ ಸರಿಹೊಂದುವ ರೂಪವನ್ನೂ, ಎದೆಯ ಉಸಿರನ್ನೂ ನೀಡಿದರು. ಪ್ರೇಮವನ್ನೂ, ವೈರಾಗ್ಯವನ್ನೂ ಬೆರೆಸುವಂತಾದರು. ಅನುಭಾವದ ಸೆಳಕುಗಳಿಂದ ಭಿನ್ನರಾದರು. ಮಣ್ಣು, ನೀರು, ಗಾಳಿ, ಬೆಳಕಿನ ಜೊತೆ ಮನುಷ್ಯ ಸಂಬಂಧಗಳನ್ನು ಬೇಂದ್ರೆ ಕಾವ್ಯದಲ್ಲಿ ಅಕ್ಷರಶಃ ಕಂಡಂತಹ ಅನುಭವ ಉಂಟಾಗಲು ಕಾರಣವೇನೆಂದರೆ ತಾವು ಬಾಳಿ ಬದುಕಿದ ಪರಿಸರದ ನಿಸರ್ಗ ರೂಪಕಗಳಿಂದಲೆ ಅವರು ತಮ್ಮ ಕವಿತೆ ಕಟ್ಟಿದರು. ಅದೂ ಜನರಾಡುವ ಭಾಷೆಯಲ್ಲಿ ಎಂಬುದು ಮತ್ತಷ್ಟು ಮಹತ್ವದ್ದಾಗುತ್ತದೆ.

೭.೨ 'ಕಾವ್ಯಶಕ್ತಿಗೆ ಶರಣೇಂದೆನು' :

ತಮ್ಮ ಕಾವ್ಯಶಕ್ತಿಗೆ ತಾಯಿಯೇ ಮೂಲ ಪ್ರೇರಣೆಯೆಂದು, ಹುಟ್ಟು ಸವಿಯುಳ್ಳ ಕನ್ನಡವೆ ತಮ್ಮ ಕಾವ್ಯದ ಭಾಷೆಯೆಂದು ಹಲವು ಸಲ ಹೇಳಿದ್ದಾರೆ. ತಾಯಿ ಕಲಿಸಿದ್ದನ್ನು ತಾನು ಹೇಳುತ್ತಿರುವೆನೆಂಬ ವಿನಯ ಅವರದು. 'ಶಕ್ತಿ' ಎನ್ನುವ ಪದ್ಯದಲ್ಲಿ ತಮ್ಮ ಕಾವ್ಯಶಕ್ತಿಗೆ ನಮನ ಸಲ್ಲಿಸುತ್ತಾರೆ.

ನಿನ್ನ ನಾಲಗೆಯನ್ನು ತನ್ನ ಮಂಚಕ ಮಾಡಿ

ನಿನ್ನ ತುಟಿಗಳ ತನ್ನ ತಲೆದಿಂಬು ಮಾಡಿ

ತನ್ನ ಪದಗಳ ನಿನ್ನ ಕಂಠದೇಶದಲ್ಲಿಟ್ಟು

ಚೆನ್ನೆ ಸರಸತಿ ನಿತ್ಯ ಪವಡಿಸುವಳಾಡಿ[೨]

ತಮ್ಮ ಕವಿತೆಯ ಉದ್ದೇಶ ಆಕೆಯ ಋಣವನ್ನು ತೀರಿಸುವದಾಗಿದೆ ಎಂದು ನಮ್ರರಾಗಿ ಹೇಳಿಕೊಳ್ಳುತ್ತಾರೆ.

ನಿನ್ನ ನೆನವೇ ನನಗೆ ಪ್ರತಿ ಪ್ರತಿಭೆಯಾಗಿರಲು

ನಿನ್ನ ಮೂರ್ತಿಯ ಕಾವ್ಯವಸ್ತು ಮಾಡಿ,

ಇನ್ನು ಮುನ್ನಿನ ಜನ್ಮ ಹಾಡಿ ಉದ್ಧರಿಸುವೆನು

ನಿನ್ನ ತೊಡಯಿರಲೆನಗೆ ಪವಡಿಸಲು ಆಡಿ[೩]

ಬೇಂದ್ರೆಯವರು ತಮ್ಮ ಮೊದಲ ಸಂಕಲನ 'ಗರಿ'ಯಿಂದಲೆ ಕವಿತೆಗಳಿಗೆ ತುಸು ಅನುಭಾವದ ಲೇಪವನ್ನು ಸಹಜ ಮಾತುಗಳಲ್ಲಿ ಅಡಗಿಸಿಡುತ್ತ ಬಂದರು. ತಾಯಿ ಎನ್ನುವ ಶಕ್ತಿ ಸ್ವರೂಪಿಣಿಯ ಲೀಲೆಗೆ ಶಬ್ದವಾದರು. ತಾಯ ಬಳಿ ಸೇರುವ, ನಾಮ ಜಪಿಸುವ, ಬೊಗಸೆಯಲ್ಲಿ ಭಕ್ತಿ ಹಿಡಿಯುವ ಕಾರ್ಯಕ್ಕೆ ಅವರು ಕಾತರರಾಗುತ್ತಾರೆ. ಅದರ ಅಭಿವ್ಯಕ್ತಿಗೆ ಕಾಯುವುದು ಕೂಡ ಅವರಿಗೆ ಸಂತೋಷಕರವಾದದ್ದು. ಸ್ಫೂರ್ತಿ ಬರುವುದು ಹೇಳಿ ಕೇಳಿಯಲ್ಲ. ವರ್ಡ್ಸ್‌ವರ್ತ್ ಹೇಳಿದಂತೆ ಸಹಜತೆಯಿಂದ, ಭಾವಸಾಹಚರ್ಯದಿಂದ ಧುಮ್ಮಿಕ್ಕುವ ನದಿಯೆ ಕಾವ್ಯ ಎನ್ನುವ ಮಾತು ಸ್ಫೂರ್ತಿಗೆ ಅನ್ವರ್ಥಕವಾಗಿರಬಹುದು. ಕಾವ್ಯ ಒಡಮೂಡುವ ಕ್ಷಣ ಮತ್ತೊಂದು ಹೃದಯವನ್ನು ಮುಟ್ಟುವಂತಹ, ಜೀವ ಜೀವಕ್ಕೆ ಚಾಚುವಂತಹ, ಮುಗಿಲಿಗೆ ಮುಟ್ಟಿ ಚೈತನ್ಯದ ಶಬ್ದವನ್ನು ಮಾರ್ನುಡಿಯುವಂತಹ ಕ್ಷಣವಾಗಿರಬೇಕೆಂದು ಬೇಂದ್ರೆ ಅಪೇಕ್ಷಿಸಿದರು.

ಬಿತ್ತಿದರೆ ಬಿತ್ತುವುದು ಮುಕ್ಕು ಚಿಕ್ಕೆಯ ಕಾಳು

ಮುತ್ತು ರತನವ ಬಿತ್ತಿ ಮಾಡದಿರು ಹೊಲ ಹಾಳು

ಜೀವವನು ಚಾಚಿ ಮುಗಿಲಂಗಳಕೆ ಹಚ್ಚಿ

ದೇವನೊಡನೆನುಡಿವಂತೆ ಮಾಡು ಮೆಚ್ಚಿ;

ಏಳು ಮಲಗಿದೆಯೇಕೆ ಶರಣ ನಾಡೇ

ಓ ಹಾಡೆ, ಓ ಹಾಡೆ, ಓ ಹಾಡೇ![೪]

ಒಲವುಳ್ಳ, ರಸವುಳ್ಳ, ಜೇನು ತುಂಬಿದ, ನವಿಲುಕಣ್ಣಿನ, ಬೆಂದ ಮನವನು ಸಂತೈಸುವ ಗುಣಗಳನ್ನೊಳಗೊಂಡ ಕಾವ್ಯದ ಬಾಗಿಲನ್ನು ತೆರೆಯೆಂದು ತಾಯಿಯನ್ನು ಕವಿ ಪ್ರಾರ್ಥಿಸುತ್ತಿದ್ದಾನೆ.

ಅಳುವ ಕೂಸನು ಲಾಲಿಯೆಂದು ಮಲಗಿಸುವಂತೆ
ಬಳಲಿದಂತಹ ಬಗೆಯ ಸಂತವಿಸಿದೌ ಶಾಂತೆ !
ಮುನ್ನ ಬಗೆಯಲಿ ಹಾಡ ನೀ - ನೀನೆ ಹೆತ್ತಿ
ನನ್ನ ನಾಲಗೆ ನಿನ್ನ ಬರಿ ಸೂಲಗಿತ್ತಿ
ಇಲ್ಲದಿರೆ ಹಾಡುವುದು ನನ್ನ ಪಾಡೇ?
ಓ ಹಾಡೇ! ಓ ಹಾಡೆ! ಓ ಹಾಡೆ![೪]

ತಾನೊಬ್ಬ ಶ್ರೇಷ್ಠಮಟ್ಟದ ಹಾಡುಗಾರ, ಕವಿಯಾಗಬೇಕೆಂಬ ಹಂಬಲದ ದನಿ 'ಹಸಿ ಹಂಬಲ' ಕವಿತೆಯಲ್ಲಿ ದೊರೆಯುತ್ತದೆ. ಷಟ್ಪದಿಗಳಿಂದ ಭಾವಗೀತೆಯ ಕಡೆಗೆ, ಅಭಿವ್ಯಕ್ತಿಯ ಸ್ವಾತಂತ್ರ್ಯದ ಕಡೆಗೆ ಚಲಿಸುವುದನ್ನು ಕೂಡ ಅವರ ಪ್ರಾರಂಭದ ಕವಿತೆಗಳಲ್ಲಿ ನಾವು ಗುರುತಿಸಬಹುದು.

ಈ ಸವಿಗಳನು ಸವಿದು ಸವೆದ ನಾಲಗೆಗೀಗ
ಯಾ ಸವಿಯು ಹತ್ತಿಹುದೋ? ಹಗಲಿರುಳು ಜಿನುಗುವುದು
ಆ ಸರಸ ಮಾತುಗಳ ಮಾತೆಯಾಗುವವರೆಗೆ
ಏನುಂಡರೇನು ನನಗೆ?[೫]

ಕವಿಯು ಸೃಷ್ಟಿಯ ವೈಚಿತ್ರ್ಯಕ್ಕೆ ಬೆರಗಾಗಿದ್ದಾನೆ. ಅದರ ಹಿಂದಿನ ಚೈತನ್ಯಕ್ಕೆ ತಲೆಬಾಗಿದ್ದಾನೆ. ಪ್ರಕೃತಿಯ ವಿರಾಟ ರೂಪವನ್ನು, ವಿರಾಟ ಪುರುಷನಾದ ಪರಮಾತ್ಮನನ್ನು ಅಭಿವ್ಯಕ್ತಿಸುವ ಹಂಬಲ ಕಣ್ಮುಂದೆ ಕುಣಿಯುತ್ತಿದೆ. ಭವಿಷ್ಯ ಫಲವಾದ ಕಣಿಯನ್ನು ಕವಿಯೆ ಹೇಳುವನು.

ರೋಮರಂಧ್ರಗಳರಳೆ ಶತಕೋಟಿ ಕಣ್ಣುಗಳು
ಆ ಮಹಾರೂಪ ಕಂಡಾ ಕುಣಿಯನುಸಿರುವೆನು
ಸಾಮಗಾನದ ಪರಿಯ ನಿಸ್ಸೀಮ ಛಂದದೊಳು
ಸಾಸಿರುಸಿರೀಗಳಾಗಿ[೬]

ಪ್ರೇರಕಶಕ್ತಿ ಒಲಿಯುವ ಸಮಯಕ್ಕಾಗಿ ಪ್ರತಿಭೆ ಕಾದು ಕುಳಿತಿರಬೇಕೆನ್ನುವ ಬೇಂದ್ರೆಯವರ ಆಶಯ 'ಕುದರಿಯವರ ಕಿವಿಮಾತು'[೭] ಕವಿತೆಯಲ್ಲಿ ವ್ಯಕ್ತವಾಗಿದೆ.

ಹೂ ಬಿಡಿಸಿ ರಸಾ ತಂದರು
ರಸಾಗುಡಿಸಿ ಜೇನ ತಂದರು
ಜೇನ ಕುಡಿಸಿ ಕಿವೀಯೊಳಗs

ಏನೇನೊ ಅಂದ್ರವ್ವಾ

ಏನೇನೊ ಅಂದ್ರು

ರಸಜೇನಿನ ಬಾಯಿ ಚಪ್ಪರಿಸುವ ಸಂಗತಿಯ ಜೊತೆಗೆ ಈ 'ಏನೇನೋ ಅಂದ್ರು' ಎನ್ನುವುದು ಅದೃಷ್ಟ, ಅಲೌಕಿಕತೆ, ಅನಿರ್ವಚನೀಯ ಅನುಭವಕ್ಕೆ ಸಂಕೇತವಾಗಿದೆ.

ಸಂಜೀ ಮುಂಜಾನೆ ನಾವು

ಎಂದಾರೆ ಒಂದ ದಿನ

ಅಲಕ್ಷಂತ ನಿಮ್ಮ ಮುಂದ

ಬರತೇತಿ ಆವಾಗ

ಬೊಗಸಿ ತುಂಬಾ ಭಕ್ತೀ ಹಿಡಿದು

ಅಗಸಿ ಬಾಗಿಲ್ಗೆ ನಿಂದ್ರು

ಕುದರೀಯವರು ಅಂದ್ರು

ಹೇಳದೆ ಕೇಳದೆ ಯಾವಾಗಲಾದರೂ, ಎಂದಾದರೂ ಕಾವ್ಯಪ್ರೇರಣೆ ಉಂಟಾಗಬಹುದೆಂಬ ಅರ್ಥ ಇಲ್ಲಿ ಅಡಗಿದೆ. ಅಂದರೆ ಅನುಭವಕ್ಕೆ ಸೌಂದರ್ಯದ ದೀಕ್ಷೆ ತೊಡುವ ಕೆಲಸದಲ್ಲಿ ಕವಿ ಸತತಾಭ್ಯಾಸಿ ಆಗಿರಬೇಕೆಂಬ ನಿಲುವು ಇಲ್ಲಿ ಪ್ರಕಟವಾಗಿದೆ. 'ಕಾವ್ಯ ಜಡವಾದ ಸತ್ಯವನ್ನು ಚೈತನ್ಯದ ಅರಿವಿನಿಂದ ಮಿಡಿಯುವಂತೆ ಮಾಡಬಲ್ಲುದು... ಸೃಷ್ಟಿಯ ಸದ್‌ಭಾವಕ್ಕೆ ಅದನ್ನು ಗುರುತಿಸುವಂತೆ ಒಂದು ಹೆಸರೂ ಬೇಕು. ಕಾವ್ಯ ಅದನ್ನು ಕೊಡಬಲ್ಲುದು.... ಸೌಂದರ್ಯ ನಿರ್ಮಾಣ, ಕಾವ್ಯದ ವಿಶೇಷ ಅಧಿಕಾರಗಳಲ್ಲೊಂದಾಗಿದೆ. ಇವು ಮೂರು ಕುದುರೆಯವರ ಕಾಣಿಕೆಗಳು.... ಕವಿ ಕೂಡ ತನ್ನಲ್ಲಿರುವ ಬುದ್ಧಿ, ಭಾವ ಮತ್ತು ಅನುಭವಗಳನ್ನು ಬೊಗಸೆ ತುಂಬ ಹಿಡಿದುಕೊಂಡು, ಪ್ರತಿಭೆ ಕರುಣಿಸುವ ಮುಹೂರ್ತಕ್ಕಾಗಿ ಕಾದುನಿಲ್ಲಬೇಕೆಂಬುದು ಈ ಕವಿತೆಯ ಒಳ ಆಶಯವಾಗಿದೆ.'[೮]

ಎಲ್ಲ ಸಂದರ್ಭಗಳಲ್ಲಿಯೂ ಪ್ರತಿಭೆಯ ಕಾರುಣ್ಯಕ್ಕಾಗಿ ಕಾದು ಕುಳಿತಿರಬೇಕೆಂಬುದು ಬೇಂದ್ರೆಯವರ ಅರ್ಥವಲ್ಲ. ಅವರ ಎಲ್ಲ ಕಾವ್ಯಕ್ಕೂ ಇದು ಅನ್ವಯಿಸುವಂತಹದೂ ಅಲ್ಲ. ಕವಿತೆಯ ಜಾಡು ಹಿಡಿದು ಹೊರಟಾಗ ಇಂತಹ ರಚನೆಗಳು ಉಂಟಾಗಿರಲಿಕ್ಕೆ ಸಾಕು. ಅದೂ ಅಲ್ಲದೆ ಮೊದಲಿನಿಂದಲೂ ತಾಯಿ ಮತ್ತು ದೈವಾವಲಂಬನದ ಮೇಲೆ ಅವರು ಇಟ್ಟ ಭಕ್ತಿಯ ಪರಿಣಾಮವಾಗಿ ತಾನು ಬರಿ ಲಿಪಿಕಾರ, ಮಾಧ್ಯಮ ಎಂದು ಅವರು ಹೇಳುತ್ತ ಬಂದರು. ಕಾವ್ಯಸೃಷ್ಟಿ ಎನ್ನುವುದು ಒಂದು ಅದ್ಭುತ ಸೃಜನಶೀಲ ಕ್ರಿಯೆ, ಮಾನಸಿಕ ಹೊಯ್ದಾಟದ ತಾರ್ಕಿಕ ಅಂತ್ಯ ಎಂದೆಲ್ಲ ಅವರಿಗೆ ಹೇಳಬೇಕಾಗಿದೆ. ಮನಸ್ಸಿನಲ್ಲಿ ಹಗಲು ರಾತ್ರಿಯೆನ್ನದೆ ನಡೆಯುವ ಆಲೋಚನೆಗಳು ಅವರನ್ನು ಯಾವಾಗಲೂ ಕವಿತೆಯ ಗುಂಗಿನಲ್ಲಿಟ್ಟದ್ದವು. ಸುಪ್ತವಾಗಿರುತ್ತಿದ್ದ ಭಾವ ಒಮ್ಮೊಮ್ಮೆ ಕನಸಿನಲ್ಲಿಯೆ ಬಂದು

ಗರಿಗೆದರಿ ಕುಣಿಯುತ್ತಿತ್ತು. ಸ್ವಪ್ನದಲ್ಲಿಯ ಕೆಲವು ಸಾಲುಗಳನ್ನು ಅವರು ಮುಂದೆ ವಿಸ್ತರಿಸಿದ್ದೂ ಇದೆ. ಕಾವ್ಯಸೃಷ್ಟಿಯ ಕುರಿತಾದ ಅವರ ಪ್ರಸಿದ್ಧ ಕವಿತೆ 'ಭಾವಗೀತ' ಅಂತಹ ಒಂದು ಉದಾಹರಣೆಯಾಗಿದೆ. ಕವಿತೆ ಕಲ್ಪನೆಯ ವಿಲಾಸವಾಗಿ ತನ್ನ ತಾನೆ ಪರಿಪೂರ್ಣವಾಗಿ ಸೃಷ್ಟಿ ಮಾಡಿದವನಲ್ಲಿ ಮಂದಹಾಸ ಮೂಡಿಸಿ ಹೋಗುವ ಲಹರಿಯಾಗಿ ಇಲ್ಲಿ ಹೊರಹೊಮ್ಮಿದೆ. ಅಸಾಧ್ಯ ನೋವಿನ ನಡುವೆ ಹುಟ್ಟುವ ಕವಿತೆ ಸಾವಿನ ಅನುಭವ ಮೂಡಿಸಿದಷ್ಟು ಕವಿಗೆ ನೋವು ಹಣಿಸಿ ಕೊನೆಗೆ ಹಿಗ್ಗಿನಿಂದ ನಲಿಯುತ್ತದೆ.

ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸಾ
ಮಸೆದ ಗಾಳಿ ಪಕ್ಕ ಪಡೆಯುತ್ತಿತ್ತು ಸಹಜ ಪ್ರಾಸಾ
ಮಿಂಚಿ ಮಾಯವಾಗುತ್ತಿತ್ತು ಒಂದು ಮಂದಹಾಸಾ
....
ಮಾತು ಮಾತು ಮಥಿಸಿ ಬಂದ ನಾದದ ನವನೀತಾ
ಹಿಗ್ಗ ಬೀರಿ ಹಿಗ್ಗಲಿತ್ತು ತನ್ನ ತಾನೆ ಪ್ರೀತಾ
ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ

ಮಾತನ್ನು ಕಡೆದು ಕಡೆದು ಬೆಣ್ಣೆಯ ಉಂಡಿ ಮಾಡಿ ಇಟ್ಟ ಹಾಗೆ ಕಾವ್ಯ ಹುಟ್ಟುವ ಹಾಗೂ ಅಭಿವ್ಯಕ್ತಿ ಪಡೆಯುವ ಪ್ರಕ್ರಿಯೆ ಎಂದು ಬೇಂದ್ರೆ ಬಣ್ಣಿಸುತ್ತಾರೆ.

೭.೩ ಕಾವ್ಯ ರಚನೆ ಬರಿ ರಂಜನೆಯಲ್ಲ :

'ನನ್ನ ಕಾವ್ಯಮಂಥನದಿಂದ ನವನೀತವೇನಾದರೂ ಹೊರಟರೆ ಅದು ಪುರುಷ-ಪ್ರಕೃತಿಗಳ ರಸವಾದಕ್ಕೂ, ಶಿವಶಕ್ತಿಗಳ ಜ್ಯೋತಿರ್ವಾದಕ್ಕೂ, ಶಬ್ದಬ್ರಹ್ಮ ಶಬ್ದಮಾಯೆಯ ಸ್ಫೋಟವಾದಕ್ಕೂ, ಲೀಲಾವತಾರದ ದೇವಜಾತಿವಾದಕ್ಕೂ ಹವ್ಯ ದ್ರವ್ಯವಾದೀತು ಎಂದು ನಾನು ನಂಬಿದ್ದೇನೆ. ಎಂದಿಗೂ ಕವಿಯ ಕಾವ್ಯ ಬಾಳುವುದು ಸಹೃದಯರ ಸಂವಾದದಿಂದ ಸಂಮಿತಿಯಿಂದ.'[೨೦] ಕಾವ್ಯಾಭಿವ್ಯಕ್ತಿ ಬರಿ ಪ್ರಕೃತಿ ವಿಲಾಸದ ರಂಜನೆಯಾಗದೆ ಪುರಾಷಾರ್ಥಪೂರ್ಣವಾಗಬೇಕೆಂದು ಬೇಂದ್ರೆ ಬಯಸಿದ್ದರು. ಮಾಯೆಯೆ ಮೈಯಲ್ಲಿ ಬಂದಂತೆ ಚಿತ್ರಿಸುತ್ತ ಭಕ್ತಿರಸ, ಕರುಣ ರಸಗಳ ಮಡುವಾಗಿ ಶಿವಶಕ್ತಿಯರ ಬೆಳಕಿನ ಕಿರಣ ತಗುಲಿಸಿಕೊಂಡು ಕಾವ್ಯ ಸಾರ್ಥಕತೆಯನ್ನು ಸಾಧಿಸಬೇಕು ಎನ್ನುವ ವಿಚಾರ ಸರಣಿಯನ್ನು ಅವರು ಹೊಂದಿದ್ದರು. ಸರ್ವೋದಯದ ಎಳೆವೆಯಲ್ಲಿ ಭಾವಪೂರ್ಣವಾದ ಕಾವ್ಯಕೃಷಿ ಮಾಡುವುದೆ ಒಂದು ಹೆಚ್ಚುಗಾರಿಕೆಯಾಗಿತ್ತು. ಆದುದರಿಂದ 'ಭಾವಗೀತ'ದಲ್ಲಿ ಅವರು ಇಟ್ಟುಕೊಂಡಿದ್ದ ಅರ್ಥರಹಿತ ಕಲ್ಪನೆಯ ವಿಲಾಸಗಳಿಂದ ಸ್ವತಃ ಬೇಂದ್ರೆಯವರೆ ಮುಂದೆ ದೂರ ಸರಿದರು. ಗೆಳೆಯರ ಗುಂಪಿನ ವಿಘಟನೆಯ ಚಿತ್ರಣವನ್ನಾಗಿಯೂ ಕೂಡ 'ಭಾವಗೀತೆ'ಯನ್ನು ನೋಡಬಹುದಾಗಿದೆ.

ಅಂತು ಇಂತು ಪ್ರಾಣ ತಂತು ಹೆಣೆಯುತ್ತಿತ್ತು ಬಾಳಾ
ಅಲ್ಲು ಇಲ್ಲು ಚೆಲುವು ನಿಂತು ಹಾಕುತ್ತಿತ್ತು ತಾಳಾ
ಬಂತೆಲ್ಲಿಗೆ? ಕೇಳುತ್ತಿದ್ದನೀಯನಂತ ಕಾಳಾ

ಇದಕ್ಕೆ ಕುರ್ತಕೋಟಿಯವರ ವ್ಯಾಖ್ಯಾನ ಔಚಿತ್ಯಪೂರ್ಣವಾಗಿದೆ. 'ಗುಂಪಿನ ಕನಸುಗಾರಿಕೆ ಬಹಳ ದಿನ ತಡೆಯುವಂಥದಲ್ಲ ಎಂಬ ಸಂಗತಿ ಬೇಂದ್ರೆಯವರಿಗೆ ಆಗಲೇ ಮನದಟ್ಟಾಗಿರಬೇಕು. ಪ್ರಾಣತಂತು ಹೆಣೆಯುವ ಬಾಳು ಮೋಹಕವಾಗಿದ್ದರೂ ಕೊನೆ ಬಾಳುವಂಥದ್ದಲ್ಲ. ಆದರ್ಶಪ್ರೀಯತೆಯ ಹಂಬಲದ ಮೇಲೆ ನಿಂತ ಮೈತ್ರಿಯ ಸಂಬಂಧಗಳು ಜೇಡರ ಬಲೆಯ ಎಳೆಗಳಂತೆ ತೆಳುವಾಗಿರುತ್ತವೆ ಎಂದು ಎಮರ್ಸನ್ ಹೇಳುತ್ತಾನೆ.' 'ಅರ್ಥವಿಲ್ಲ, ಸ್ವಾರ್ಥವಿಲ್ಲ ಬರಿಯ ಭಾವಗೀತಾ' ಎನ್ನುವಲ್ಲಿ ಕವಿತೆಯೊಳಗೆ ಹೆಚ್ಚಿನ ಅರ್ಥವನ್ನು ಹುಡುಕಬೇಕಾಗಿಲ್ಲ. ಅದು ತನ್ನಷ್ಟಕ್ಕೆ ತಾನೆ ಇರುವಂಥಹದು ಎಂದು ಹೇಳುವ ಮೂಲಕ ಕಲೆಗಾಗಿ ಕಲೆ ಎನ್ನುವ ಸಿದ್ಧಾಂತವನ್ನು ಅವರು ಆಗಿನ ಕಾಲಕ್ಕೆ ಹೊಂದಿದ್ದರೆಂದು ಕಾಣುತ್ತದೆ. ಕಾವ್ಯದ ಇತರ ಮುಖಗಳನ್ನು ಅವರು ನಂತರ ಕಂಡುಕೊಂಡರು. 'ಕುರುಡು ಕಾಂಚಾಣ', 'ಪುಟ್ಟ ವಿಧವೆ' ಯಂತಹ ಕವಿತೆಗಳಲ್ಲಿನ ಆದರ್ಶ ಸಂಪೂರ್ಣ ಬದಲಾದುದೇ ಅದಕ್ಕೆ ಸಾಕ್ಷಿಯಾಗಿದೆ. ಭಕ್ತಿ ಹಾಗೂ ಅನುಭಾವದ ಒಲವು ಅವರಲ್ಲಿ ಹೆಚ್ಚಾಗಿದ್ದುದರಿಂದ ಕಾವ್ಯದ ಅಂತರ್ಮುಖವೆ ಅವರಿಗೆ ಹೆಚ್ಚು ಇಷ್ಟವಾಗಿತ್ತು.

ನೇಯ್ಗೆಯೊಳಗೆ ನೂಲು ಸೇರಿಕೊಳ್ಳುವ ಮತ್ತು ಒಡಲ ನೂಲಿನಿಂದ ಜೇಡ ಜಾಲ ನೇಯುವ ಪ್ರತಿಮೆಗಳು ಸೃಜನಶೀಲತೆಯ ಮೇರು ವ್ಯಾಖ್ಯಾನಗಳಾಗಿವೆ. 'ಭಾವಗೀತೆ' ಯ ಉಸಿರೆನ್ನುವಂತೆ ಈ ಸಾಲುಗಳು ವ್ಯಕ್ತವಾಗಿವೆ.

ಒಡಲ ನೂಲಿನಿಂದ ನೇಯುವಂತೆ ಜೇಡ ಜಾಲಾ
ತನ್ನ ದೈವರೇಖೆ ಬರೆಯುವಂತೆ ತನ್ನ ಭಾಲಾ
ಉಸಿರಿನಿಂದ ಹುಡುವಂತೆ ತನ್ನ ಬಾಳ ಮೇಲಾ

'ಮುಂಡಕೋಪನಿಷತ್ತಿನ ಮೂಲದಿಂದ ಬಂದ ಜೇಡನ ಪ್ರತಿಮೆಯ ಸಾಂಕೇತಿಕತೆಯನ್ನು ಅರ್ಥಮಾಡಿಕೊಳ್ಳಲು ಕಷ್ಟಪಡಬೇಕಾಗಿಲ್ಲ. ಬೇಂದ್ರೆಯವರು ಈ ಪ್ರತಿಮೆಯನ್ನು ಬೇರೆ ಸಂದರ್ಭಗಳಲ್ಲಿಯೂ ಉಪಯೋಗಿಸಿದ್ದುಂಟು. (ಜೇಡ ತಿಳಿಯದೇ ಬಲೆಯ ಜಾಡ ಇತ್ಯಾದಿ) ಆದರೆ ಮುಂದಿನವೆರಡು ಉಪಮೆಗಳನ್ನು ಗ್ರಹಿಸುವುದು ಸುಲಭವಲ್ಲ. ಇಲ್ಲಿ ಬೇಂದ್ರೆಯವರ ಪ್ರಚಂಡ ಊಹಾಶಕ್ತಿ ತಾನೇ ತಾನಾಗಿ ಮೆರೆದಿದೆ. ಹಣೆಯ ಬರಹವನ್ನು ಬರೆಯುವವನು ಬ್ರಹ್ಮ (ಬ್ರಹ್ಮಲಿಖಿತ) ಎನ್ನುವುದು ಸಾಮಾನ್ಯ ತಿಳುವಳಿಕೆ. ಆದರೆ ಇಲ್ಲಿ ಹಣೆ (ಭಾಲ) ತನ್ನ ದೈವರೇಖೆಯನ್ನು ತಾನೇ ಬರೆಯುವ ಒಂದು ಅಲೌಕಿಕ ಸನ್ನಿವೇಶವನ್ನು ನಾವು ಕಲ್ಪಿಸಿಕೊಳ್ಳಬೇಕಾಗುತ್ತದೆ. ಹಾಗೆಯೆ, ಕೊನೆಯ ಉಪಮೆಯಲ್ಲಿ ಮನುಷ್ಯ ತನ್ನ ಬಾಳಿನ ಶ್ರೇಯ (ಮೇಲು)ವನ್ನು ತನ್ನ ಉಸಿರಿನ ಬಲ (ಪ್ರಾಣಾಯಾಮ) ದಿಂದಲೇ ಹುಡುಕಿಕೊಳ್ಳುವ ಸಾಹಸವನ್ನು ಊಹಿಸಬೇಕಾಗುತ್ತದೆ.' ಬೇಂದ್ರೆ ಕಾವ್ಯದ ಶ್ರೇಷ್ಠ

ವಿಮರ್ಶಕರಲ್ಲೊಬ್ಬರಾದ ಡಾ. ಆಮೂರರ ಈ ವಿವರಣೆ ಬೇಂದ್ರೆಯವರ ಕಾವ್ಯಾಭಿವ್ಯಕ್ತಿಯ ಜೀಸನ್ನು ಅರಿತುಕೊಳ್ಳಲು ಸಹಾಯ ಮಾಡುತ್ತದೆ. ಕಾವ್ಯ ಸಾಧಿಸಬೇಕಾದ ಅನಂತತೆಯನ್ನು, ಅಮೃತ ತತ್ವವನ್ನು, ಕಾವ್ಯ ಕರ್ಮದ ಕಷ್ಟವನ್ನು ಇಷ್ಟು ಮೋಹಕ ರೀತಿಯಲ್ಲಿ ಹೇಳಿರುವುದು ಬೇಂದ್ರೆಯವರ ಪ್ರತಿಭೆಗೆ ನಿದರ್ಶನವಾಗಿದೆ.

ರೂಪಕ, ಉಪಮೆಗಳ ಮೂಲಕವೆ ಮಾತಾಡುವುದು ಅವರ ಅಭಿವ್ಯಕ್ತಿಯ ಒಂದು ಮುಖ್ಯ ಗುಣವಾಗಿದೆ. ಕಾವ್ಯ ಗರುಡನಾಗಿ ಅಮೃತಕ್ಕೆ ಕೈ ಚಾಚಬೇಕೆಂದು ಅವರು ಹೇಳಿದರು. 'ಕಾವ್ಯ ಅಮೃತಕ್ಕೆ ಹಾರುವ ಗರುಡ, ಅವನ ಗರಡಿಯಲ್ಲಿ ನವೋನವ ಗಾರುಡ ಮಂತ್ರ ಒಡಮೂಡಬೇಕು. ಅವನ ಗರಿಯಲ್ಲಿಯೂ ಶರಣಾಗುವ ಶರ-ಭಾವ ಇರುವುದು... ಕರುಳ್ ಕಾವ್ಯ ಬರೆದವರು ಪುರುಷಾರ್ಥ ವಿಚಾರವನ್ನೆ ಕಾವ್ಯೋಕ್ತಿ ಮಾಡಿದರು; ಸರ್ವಜ್ಞನ ಪದ್ಧತಿಯೂ ಪುರುಷಾರ್ಥ ವಿವೇಕ ಮಾಡುವ ಸರಣಿಯದೇ. ಪಂಪನು ಕಾವ್ಯಧರ್ಮ ಮತ್ತು ಜೀವನಧರ್ಮ ಹಾಸುಹೊಕ್ಕಾಗಿ ಪಟ ಮಾಡಿದ. ಇಂದಿನ ಕವಿ, ಭೂಮಂಡಲ ವ್ಯಾಪಿಯಾಗುವ ಮಾನವ-ಹೃದಯ ದೇವ-ಜೀಜವನ್ನು ಪ್ರಕಾಶಕ್ಕೆ ತರಬೇಕಾಗಿದೆ.'[೧೩]

ಭೂಮಿ ಮತ್ತು ಬಯಲನ್ನು ಬೆಸೆಯುವ, ಜೀವನ ಪ್ರೀತಿ ಮತ್ತು ಭಕ್ತಿರಸಗಳನ್ನು ಒಂದು ಮಾಡುವ ವ್ಯಾಪಕ ಹರವು ಅವರ ಅಭಿವ್ಯಕ್ತಿಯ ಕೇಂದ್ರವಾಗಿದೆ. ನೆಲದ ಮೇಲೆ ನಿಂತುಕೊಂಡು ಮುಗಿಲಿಗೆ ಕೈಚಾಚಬೇಕೆನ್ನುವುದು ಅವರ ಆಶಯ, ಅದನ್ನು ಸಾಧಿಸುವುದು ಹೇಳಿದಷ್ಟು ಸುಲಭವಲ್ಲವೆಂಬ ಕಲ್ಪನೆಯೂ ಅವರಿಗಿದೆ. ಕಾವ್ಯದ ಲೀಲೆ ಅನಾಯಾಸವಾಗಿ ತೂರಿ ಬಂದಂತೆ ಇರಬೇಕು ಎನ್ನುವುದು ನಿಜವಾದರೂ ಅದಕ್ಕೆ ಪ್ರಾಣದ ಕೆಚ್ಚನ್ನು ನೀಡಬೇಕಾಗುತ್ತದೆ. 'ಗಾರುಡಿಗ'[೧೪] ಎನ್ನುವ ಅವರ ಪದ್ಯದ ವಸ್ತು ಕಾವ್ಯದ ಅಮೃತಕ್ಕೆ ಕೈಚಾಚಬೇಕೆಂಬುದಾಗಿದೆ.

ಇದು ಮಂತ್ರ; ಅರ್ಥಕ್ಕೊಗ್ಗದ ಶಬ್ದಗಳ ಪವಣಿಸುವ ತಂತ್ರ;
ತಾನೆ ತಾನೆ ಸಮರ್ಥಛಂದ; ದೃಗ್ಬಂಧ ದಿ-
ಗ್ಬಂಧ; ಪ್ರಾಣದ ಕೆಚ್ಚು ಕೆತ್ತಿ ರಚಿಸಿದೆ; ಉಸಿರ
ಹೆದೆಗೆ ಹೂಡಿದ ಗರಿಯು ಗುರಿಯ ನಿರಿಯಿಟ್ಟು ಬರು-
ತಿರೆ ತೂರಿ ಲೀಲೆಯಲನಾಯಾಸ. ಗರುಡನಂ-
ತೆರಗಿ ಬಂದಿತು - ಭ್ರಮೆಯೋ? ಹಮ್ಮದವೊ? ನಂಜೋ? ಮರ -
ಣವೊ? ನಿದ್ದೆಯೊ! ಮೋಹನವೊ! ಎಚ್ಚರಕೆ ಕವಿದ
ಮರೆವೊ! ಕನಸೋ ನನಸು - ಎಲ್ಲ ಹಾಲೋಹಾಲು!'

ಸೃಜನಶಕ್ತಿಯ ಗುರಿ ತಪ್ಪಲಾರದು. ಉಸಿರಿನ ಜಲ್ಲಿಗೆ ಗರಿಯೆಂಬ ಬಾಣವನ್ನು ಹೂಡಲಾಗಿದೆ. ಆದ್ದರಿಂದ ಸೃಜನಕ್ಕೆ ವಿರುದ್ಧವಾಗಿರುವ ಕೇಡಿನ ಜಂತು ಕಾವ್ಯ ಗರುಡನಿಂದ ತಪ್ಪಿಸಿಕೊಳ್ಳುವಂತಿಲ್ಲ.

..... ನೀನು ಪಾತಾಳಕಿಳಿದರೂ
ಮತ್ತೆ ಕಾಡುವೆ. ರಸಿಕನೆನೆ ಚೆಂದ ತಲೆದೂಗಿ
ನಾಳೆ ಕಾರುವೆ ಗರಳ ! ಬಯಸುತಿರು, ಬಯಸುತಿರು
ಕಂಡಿಲ್ಲವೇನೊ ಅಂಗ್ಯೆಯ ಗರುಡನ ಗೆರೆಯ!

ಮರುಳ ಮಾಡಿ ಮಾತು ಕೇಳುವವನಂತೆ ಪುಂಗಿಯ ನಾದಕ್ಕೆ ತಲೆದೂಗಿ ಕೊನೆಗೆ ಕಡಿಯುವ ಹಾವಿನ ವಿಷತತ್ವದ ಜೊತೆಗೆ ಸಮರಕ್ಕೆ ಗರುಡ ಸಜ್ಜಾದಂತೆ ಯಕ್ಷಿಣಿ ವಿದ್ಯೆಯನ್ನು ಕಲಿತಿರುವ ಕವಿ ಕೇಡಿನ ತತ್ವಕ್ಕೆ ಹೆದರಬೇಕಾಗಿಲ್ಲ. ಕತ್ತಲೆ ಬೆಳಕನ್ನು ಕಂಡು ಓಡಿಹೋಗುವಂತೆ ಶಬ್ದಗಳಿಂದ ಹೊಸ ಸೃಷ್ಟಿ ಮಾಡುತ್ತಿರುವ ಶಬ್ದಗಾರುಡಿಗನ ಮುಂದೆ ಸೃಜನಶೀಲತೆಯನ್ನು ಕುಗ್ಗಿಸುವ ಮಾತುಗಳು ನಡೆಯುವುದಿಲ್ಲ. ಕಾವ್ಯ ಗರುಡನೆಂದಾಗ ಗರುಡಕ್ಕಿರುವ ತೀಕ್ಷ್ಣದೃಷ್ಟಿ, ದೂರದೃಷ್ಟಿ, ಚುರುಕು ದೃಷ್ಟಿಗಳು ಕೂಡ ಅಸಾಮಾನ್ಯ ಅರ್ಥದ ಜೊತೆಗೆ ಅರ್ಥ ಪಡೆದುಕೊಳ್ಳುತ್ತವೆ. ಕೆಟ್ಟದ್ದನ್ನು ಪಳಗಿಸುವ ಕವಿಯೆಂಬ ಮಾಟಗಾರ, ವಿಷವನ್ನು ಹಲ್ಲಲ್ಲಿಟ್ಟುಕೊಂಡಿರುವ ಹಾವಿಗೆ ಗರುಡರೇಖೆಯ ಗಾರುಡಿಗನಾಗುತ್ತಾನೆ. ಸ್ವಾಮಿಭಕ್ತನೂ ಆಗುತ್ತಾನೆ. ದೇವತೆ ಮತ್ತು ಅಮೃತದ ಕಡೆಗೆ ಅವನ ಲಕ್ಷ್ಯವಿರುವುದರಿಂದ ಜಾಗೃತಪ್ರಜ್ಞೆ ಅವನಲ್ಲಿ ಸದಾ ಮನೆಮಾಡಿರುತ್ತದೆ. ಪ್ರೇಮ ಮತ್ತು ಭಕ್ತಿಯ ಮೇಲೆ ಪ್ರಕಾಶ ಬೀರುವ ಕೆಲಸ ಕವಿಯದು ಎಂಬುದು ಬೇಂದ್ರೆಯವರ ನಂಬಿಕೆಯಾಗಿದೆ.

ಕವಿತೆ ನಡೆಯುವ ದಾರಿ ಬಾನದಾರಿ ಎಂಬ ಆತ್ಮವಿಶ್ವಾಸ ೧೯೩೨ ರಲ್ಲಿ ಪ್ರಕಟವಾದ ಅವರ ಮೊದಲ ಕವನ ಸಂಕಲನದ 'ಗರಿ'ಯಲ್ಲಿಯೆ ವ್ಯಕ್ತವಾಗಿದೆ. ಎದೆಯ ಉಸಿರಿನ ಧನುಸ್ಸಿಗೆ ಗರಿಯೆಂಬ ಬಾಣವನ್ನು ಅವರು ಅಂದೇ ಹೂಡಿದ್ದರು. 'ಗರಿ'[೧೯] ಹೆಸರಿನ ಕವಿತೆಯ ಕೆಲ ಗರಿಗಳಿವು :

ಎಲ್ಲೆಕಟ್ಟು ಇಲ್ಲದಾ
ಬಾನಬಟ್ಟೆಯಲ್ಲಿದೊ
ಎಂದೆಂದು ಹಾರುವೀ
ಹಕ್ಕಿ-ಗಾಳಿ ಸಾಗಿದೆ

ಅದರ ಹಾಗೆ ಸಾಗಿದಾ
ಹಾರುವಂಥ ಹಕ್ಕಿಯ
ಜಾಡು ಹಿಡಿದು ನಡೆದಿವೆ
ಉದುರಿದಂಥ ಗರಿಗಳು

ಊದು ತೂರಿ ಹಾರಿಸು
ಹಾರಿದಷ್ಟು ಹಾರಲಿ

ಹಾರಲೆಂದು ಹುಟ್ಟಿದ

ಹಕ್ಕಿಮೈಯ ಗರಿಗಳು

೭.೪ ಷಟ್ಪದಿಯಿಂದ ಭಾವಗೀತೆಗೆ :

ಷಟ್ಪದಿ ಪರಂಪರೆಯ 'ಕೃಷ್ಣಾಕುಮಾರಿ' ಎನ್ನುವ ಕೃತಿ ಬೇಂದ್ರೆಯವರ ಮೊದಲ ಪ್ರಕಟಿತ ಸಂಕಲನವಾಗಿ ೧೯೨೨ ರಲ್ಲಿ 'ಶಾರದಾ ಮಂಡಲ'ದಿಂದ ಬೆಳಕು ಕಂಡರೂ ಹೇಳಿಕೊಳ್ಳುವಂತಹ ಪ್ರಸಿದ್ಧಿಯನ್ನೇನೂ ಅದು ತಂದುಕೊಡಲಿಲ್ಲ. ಆದರೆ ಅಂತಃಕರಣ ಮೀಟಬಲ್ಲ ಬೇಂದ್ರೆಯವರ ಈ ವರ್ಣನಾತ್ಮಕ ಕವಿತೆ ಅವರನ್ನು ಭರವಸೆಯ ಕವಿಯಾಗಿಸಿತ್ತು. ಮನುಷ್ಯರ ಕಾಮದ ಮನೋವಿಕಾರದಿಂದ ಸಂಕಟ ಮತ್ತು ಸಾವು ಅನುಭವಿಸಬೇಕಾಗಿ ಬಂದ ಅನುಪಮ ಸೌಂದರ್ಯವತಿ ಕೃಷ್ಣಾಕುಮಾರಿ ಆತ್ಮಹತ್ಯೆ ಮಾಡಿಕೊಳ್ಳುವ ಮೂಲಕ ಕಾಮನನ್ನು ಕೊಲ್ಲುತ್ತಾಳೆ. ಹೆಂಗಸು ಸಿಕ್ಕರೆ ಸಾಕು ಭೋಗಿಸಬೇಕೆನ್ನುವ ಗಂಡಸಿನ ಭೋಗಾಪೇಕ್ಷೆಯನ್ನು ತನ್ನ ಸಾವಿನಿಂದ ಇಲ್ಲವಾಗಿಸುತ್ತಾಳೆ. ಇಂಗ್ಲೀಷಿನ Lord Byron ಮತ್ತು Robert Browning ಅವರ ಅಭಿವ್ಯಕ್ತಿಮಾರ್ಗದ ಪ್ರೇರಣೆ 'ಕೃಷ್ಣಾಕುಮಾರಿ' ರಚನೆಯ ಕಾಲಕ್ಕೆ ತಮ್ಮ ಮೇಲಾದುದನ್ನು ತಮ್ಮ ಕೃತಿಯ ಮುನ್ನುಡಿಯಲ್ಲಿಯೆ ಬೇಂದ್ರೆ ಹೇಳುತ್ತಾರೆ. ಕನ್ನಡದ ಕಾವ್ಯ ಪರಂಪರೆಯಲ್ಲಿ ಸಾಗುತ್ತಿರುವ ತಮ್ಮ ಹೆಜ್ಜೆಗಳಿಗೆ ಸಹೃದಯರ ವಿಶ್ವಾಸವನ್ನು ಕೋರುತ್ತಾರೆ. 'ಇದನ್ನು ಬರೆಯುವಾಗ್ಗೆ 'Byron'ನ ಭಾವನಿರ್ಭರತೆಯೂ 'Browning'ನ ವಿಚಾರಾವೇಗವೂ ನನ್ನ ಲಕ್ಷ್ಯದಲ್ಲಿದ್ದವು.

ಪಾಪಮಿದು ಪುಣ್ಯಮಿದು ಹಿತ-
ರೂಪಮಿದಹಿತಪ್ರಕಾರಮಿದು ಸುಖಮಿದು ದುಃ-
ಖೋಪಾತ್ತಮಿದೆಂದ ರಿಪುಗು
ಮಾಪರಮ ಕವಿಪ್ರಧಾನರಾ ಕಾವ್ಯಂಗಳ್ ॥

ಎಂದು ನೃಪತುಂಗದೇವನು ತೋರಿಸಿಕೊಟ್ಟ ರಾಜಮಾರ್ಗದಲ್ಲಿ ನಾನು ದಟ್ಟಡಿಯಿಡಹತ್ತಿರುವೆನೋ ಇಲ್ಲವೋ ಇದನ್ನು ರಸಿಕರೇ ಹೇಳಬಲ್ಲರು. 'ಯಾರು' 'ನಾ' ಮೊದಲಾದ ಶಬ್ದ ಪ್ರಯೋಗಗಳಿಗೂ, ಅಸಂಧಿಯ ಕಲ್ಪಿತ ದೋಷಕ್ಕೂ, ರೇಫದ ವೈಕಲ್ಪಿತ ಶೈಥಿಲ್ಯಕ್ಕೂ ನಾನೇ ಹೊಣೆಗಾರನು.'[೧೬] ತಾವು ನಡೆಸುತ್ತಿರುವ ಷಟ್ಪದಿಯ ಪ್ರಯೋಗದ ಬಗ್ಗೆ, ಸಾಂಪ್ರದಾಯಿಕ ಕಲ್ಪನೆಯ ಚೌಕಟ್ಟನ್ನು ದಾಟುತ್ತಿರುವ ಬಗ್ಗೆ ಬೇಂದ್ರೆಯವರಗೆ ಪ್ರಾರಂಭದಲ್ಲಿ ಸಹಜ ಹೆದರಿಕೆಗಳಿದ್ದವು. ರಾಜಸ್ತಾನದ ಉದಯಪುರದ ರಾಜ ಭೀಮಸಿಂಹನ ಮಗಳು ರಾಜಕುಮಾರಿ ಕೃಷ್ಣಾಕುಮಾರಿಯ ಸುತ್ತ ಹೆಣೆದ ಬೇಂದ್ರೆಯವರ ಈ ಕವಿತೆಯಲ್ಲಿ ಮನುಷ್ಯನ ಭೋಗಲಾಲಸೆಯ ಪ್ರವೃತ್ತಿಯನ್ನು ಕಟುವಾಗಿ ಟೀಕಿಸುತ್ತಾರೆ. ಮಾನಭಂಗದ ಅವಮಾನಕ್ಕಿಂತ ಸಾಯುವುದೇ ಲೇಸೆಂದು ಬಗೆದ ಯುವತಿಯ ಅಂತ್ಯಕಾಲದ ದೃಶ್ಯವನ್ನು ನೋಡಲಾರದೆ ಆಕಾಶದ ಚಿಕ್ಕೆಗಳು ದಟ್ಟ ಕಾರ್ಮೋಡಗಳಿಂದ ತಮ್ಮನ್ನು ಮುಚ್ಚಿಕೊಂಡವೆಂದು ಬೇಂದ್ರೆ ಆ ಸಾವಿನ ಸಂಕಟವನ್ನು ವ್ಯಕ್ತಮಾಡುತ್ತಾರೆ.

'ಅಂದು ಅಮಾವಾಸ್ಯೆಯಾಗಿತ್ತು. ಚಿಕ್ಕೆಗಳಿಗೂ ಕೂಡ ಈ ನೋಟವು ಅಸಹ್ಯವಾದೀತೆಂದು, ರಾತ್ರಿಯು ಕಾರ್ಮೋಡಗಳಿಂದ ಮುಗಿಲನ್ನು ಬಾಸಣಿಸಿತ್ತು. ಆ ತೆರೆಯ ಹಿಂದೆ ಮೇಳಗೂಡಿ ಚಿಕ್ಕೆಗಳೆಲ್ಲ ಸೌಂದರ್ಯಶಕ್ತಿಯನ್ನು ಕುರಿತು ಇಂತು ಹಾಡಿದವು :

ಸೌಂದರ್ಯವೆಂಬ ಕಟುವಿಷವೆ ಪೀಯೂಷವೆ! ।
ಸೌಂದರ್ಯವೆಂಬ ಮೃತಗರ್ಭ ಬೇವೇ ಮಾವೆ! ।
ಸೌಂದರ್ಯವೆಂಬ ರತ್ನವ ಹೆಡೆಯೊಳಿಟ್ಟಿರುವ ಹಾವೆ, ಸುರವಂದ್ಯ ಆವೇ! ।
ಅಂದವಾದಷ್ಟು ಐಸಿರಿಯ ಪೊಂದಿದ್ದು, ಬಲು ।
ಚೆಂದವಾಗಿರುವ ವೈಸಿರಿಯ ಪಡೆದಿರುವ, ಮದ ।
ದಿಂದಂಧವಾದ ಕಾಮವ ಕೊಂದು ಹೆಸರಾದ ಸೌಂದರ್ಯವೆಂಬ ಸಾವೇ ।[೨]

ನಿಸರ್ಗದ ಚಿಕ್ಕೆಗಳು ಅಭಿವ್ಯಕ್ತಿಸುವ ಸೌಂದರ್ಯದ ಮುಖಗಳು ಬೇಂದ್ರೆಯವರು ನಂಬುವ ಸೌಂದರ್ಯದ ವಿವಿಧ ರೂಪಗಳಾಗಿವೆ. ಅದರ ನಿಜರೂಪ, ಆಕೃತಿ, ಸ್ವರೂಪವನ್ನು ಬಿಂಬಿಸುವುದು ಬೇಂದ್ರೆಯವರ ಉದ್ದೇಶವಾಗಿದೆ. ಸೌಂದರ್ಯಕ್ಕಿರುವ ಎರಡು ಮುಖಗಳನ್ನು ಬೇವು-ಮಾವು, ಅಮೃತ-ವಿಷ ಮುಂತಾದ ಪ್ರತಿಮೆಗಳ ವಿಧಾನದ ಮೂಲಕ ಬೇಂದ್ರೆಯವರು ತೋರಿಸಿಕೊಡುತ್ತಾರೆ. 'ಕೃಷ್ಣಾಕುಮಾರಿ' ಯಲ್ಲಿನ ಬೇಂದ್ರೆಯವರ ಸೌಂದರ್ಯದ ದ್ವಂದ್ವ ಸ್ವರೂಪ ದರ್ಶನದ ಎಳೆಯನ್ನು ಆಮೂರರು ಐರ್ಲಂಡಿನ ಅನುಭಾವಿ ಕವಿ ಯೇಟ್ಸ್‌ನ 'Beauty kindles evil as well as good' ಮಾತಿನೊಂದಿಗೆ ಜೋಡಿಸುತ್ತಾರೆ. 'ಸಾವು ಸೌಂದರ್ಯದ ಇನ್ನೊಂದು ಮುಖ. ಅದಕ್ಕೆ ಕಾಮವನ್ನು ಕೊಲ್ಲುವ ಸಾಮರ್ಥ್ಯವಿದೆ. ಚಿಕ್ಕೆಗಳ ಮೂಲಕ ಈ ಶಕ್ತಿಗೆ ತನ್ನ ಅನಂತ ಪ್ರಣಾಮಗಳನ್ನು ಕವಿ ಸಲ್ಲಿಸುತ್ತಾನೆ.'[೧೮]

ವಿಷ, ಸೌಂದರ್ಯವನ್ನು ಸಾಯಿಸುವಂತೆ ಬೇಡವಾದ ಕಾಮವನ್ನೂ ಸಾಯಿಸುತ್ತದೆ. ತನ್ನ ಸೌಂದರ್ಯ ಮಣ್ಣಾಗುವ ಮುನ್ನ ತಾಯಿಯ, ನಾಡಿನ, ನೆಲದ ಋಣವನ್ನು ಕೃಷ್ಣಾಕುಮಾರಿ ನೆನೆಯುತ್ತಾಳೆ.

ನಿನ್ನ ನೀರಿನ ಕೂಡ ನಿನ್ನ ಕಾಳಿನ ಕೂಡ ।
ನಿನ್ನ ಕಥೆಗಳ ಕೂಡ ನಿನ್ನ ಹಾಡಿನ ಕೂಡ ।
ನಿನ್ನ ಧರ್ಮವ ಹೊತ್ತ ಬೆಟ್ಟಸಾಲಿನ ಕೂಡ ಸ್ವರ್ಗ ಸ್ವರೂಪ ನಾಡೇ ।[೯]

ತನ್ನ ಭಾವಭಕ್ತಿಯ ಪುಷ್ಪವನ್ನು ಈಶ್ವರನಿಗೆ ಅರ್ಪಿಸುತ್ತಾಳೆ. ತನ್ನ ಶ್ರದ್ಧೆ, ಭಕ್ತಿಯನ್ನು ಕಾಪಾಡಿಕೊಳ್ಳುವ ಕೊನೆಯ ಹಂತವಾಗಿ ಪ್ರಾಣಾರ್ಪಣೆಗೆ ಸಿದ್ಧಳಾಗುತ್ತಾಳೆ. ಒಂದೊಂದೆ ವಿಷದ ಬಟ್ಟಲನ್ನು ಗುಟುಕರಿಸುತ್ತ, ಸಾವು-ನೋವು-ಸಂಕಟದ ಒಂದೊಂದು ಹಂತವನ್ನು ದಾಟುತ್ತ ನಿಷ್ಕಾಮ ಹಂತವನ್ನು ತಲುಪುತ್ತಾಳೆ. ಮತ್ತೊಂದು

ಜೀವದ ಅಂತಃಕರಣವನ್ನು ಪ್ರವೇಶ ಮಾಡಿಯೆ ಕವಿತೆ ಬರೆಯಬೇಕೆಂಬ ಬೇಂದ್ರೆಯವರ ಹಂಬಲ ಇದರಲ್ಲಿ ಕಾಣಿಸುವಂತಿದೆ. ಆಕೆಯ ಸಾವಿನ ಘಳಿಗೆಗಳಲ್ಲಿ ಒಡಮೂಡುವ ಮೌಲ್ಯಗಳು, ತತ್ವಗಳು ಜೀವನದ ಕಾಳರಾತ್ರಿಯನ್ನು ದೈವಭಕ್ತಿಯ ಹಂತವನ್ನಾಗಿ ನಿರ್ಮಿಸುತ್ತವೆ.

'ಸೋಮಾನನೇ। ಪದ್ಮ-ಪಾದ-ರಜ-ಪೂತರೀ।
ಭ್ರಾಮಿಸಿದ ರಜಪೂತರೀಗ ಬೀಳಲಿಯೆಂದು।
ನೇಮಿಸಿದನಾ ವಿಧಿಯು, ದೇವಭುಕ್ತಳಿದಾಗು ಹೋಗು ಸೌಭಾಗ್ಯ ಭಾವೇ![೨೯]

ಆಧ್ಯಾತ್ಮಿಕ ನಂಬಿಕೆಯ ಮುಂದೆ ಕಾಮ ಸೋತು ಹೋಗುತ್ತದೆಯೆನ್ನುವ ಆಶಯವನ್ನು, ೨೭ ಷಟ್ಪದಿಗಳ ಮಾಲೆಯ ಮೂಲಕ, ಬೇಂದ್ರೆ ವ್ಯಕ್ತಪಡಿಸುತ್ತಾರೆ.

ಸುಕುಮಾರತೆ, ಪ್ರೇಮ, ಭಕ್ತಿಭಾವಗಳನ್ನು ಮನುಷ್ಯರಲ್ಲಿ ಅರಸಬಯಸಿದ ಬೇಂದ್ರೆಯವರು ಕಾವ್ಯದಲ್ಲಿಯೂ ಅಂತಹ ಭಕ್ತಿ ಹಾಗೂ ನಿಷ್ಕಾಮ ಪ್ರೇಮದ ಮಾರ್ಗವನ್ನು ತುಳಿಯಲು ಬಯಸಿದರು. ಇದು ೧೯೨೨ ರಷ್ಟು ಹಿಂದಿನ 'ಕೃಷ್ಣಾಕುಮಾರಿ'ಯಂತಹ ಕವಿತೆಯಿಂದಲೆ ತಿಳಿಯುತ್ತದೆ. ಅಂದರೆ ಬೇಂದ್ರೆಯವರು ಅನುಭಾವದ ಮಾರ್ಗವನ್ನು ಲೌಕಿಕದ ಜೊತೆಗೆ ಮೊದಲಿನಿಂದಲೆ ಬೆರೆಸುತ್ತ ಬಂದಿದ್ದಾರೆ. ತತ್ವಪದಕಾರರು, ಎ.ಇ. ಯೇಟ್ಸ್, ಅರವಿಂದರು, ಖಲೀಲ್ ಜಿಬ್ರಾನ್‌ರನ್ನು ಓದಿಕೊಂಡಿದ್ದ ಬೇಂದ್ರೆಯವರ ಮನಸ್ಸು ಕವಿತೆಯಲ್ಲಿಯೂ ಆ ಭಾವವನ್ನು ತರಲು ಪ್ರಯತ್ನಿಸಿತು. ಆದರೆ ಸಂಪೂರ್ಣ ಅನುಭಾವವನ್ನಲ್ಲವೆಂಬುದು ವಿರಾಟಸ್ವರೂಪದಲ್ಲಿನ ಅವರ ಈ ಮಾತಿನಿಂದ ತಿಳಿಯುತ್ತದೆ; 'ಆಯರ್ಲ್ಯಾಂಡದ ಖ್ಯಾತ ಕವಿ ಯೇಟ್ಸ್, ಎ.ಈ.ಯವರ ಜೀವದ ಗೆಳೆಯ. ಯೇಟ್ಸ್ ಮೂಲತಃ ಥಿಯೋಸೋಫಿಸ್ಟ್; ಎ.ಈ.ಸೆಲ್ಟಿಕ್ ಅನುಭಾವಿಗಳ ಪಂಥದವರು. ಯೇಟ್ಸ್ ಅವರು ಏ.ಈ.ಯವರ ಆಯ್ದ ಕವನಗಳಿಗೆ ಪ್ರಸ್ತಾವನೆ ಬರೆಯುವಾಗ ವೇದ, ಉಪನಿಷತ್ತು, ನಿಯೋಪ್ಲೆಟೋನಿಸ್ಟ, ಅಭಿನವ ಮಿಸ್ಟಿಕ್ಸ್, ಸ್ಪಿರಿಚ್ಯುಯಾಲಿಸ್ಟರ ಸಂಘದ ಉಲ್ಲೇಖ ಮಾಡಿ ಎ.ಈ. ಆ ಗುಂಪಿನವರು ಎಂದು ಹೇಳಿದ್ದಾರೆ. 'Simplicity of mind and belief in high things- for whose lack imagination perishes'- ಮನದ ಋಜುತನ, ಉತ್ತಮ ಭಾವಗಳ ಬಗ್ಗೆ ಶ್ರದ್ಧೆ ಇಲ್ಲದಿದ್ದರೆ, ಸರಿಯಾದ ರೂಪದರ್ಶಕ ಶಕ್ತಿ ಸೊರಗಿ ಸಾಯುತ್ತದೆ ಎಂಬ ಆ ಗುಂಪಿನ ಸೂತ್ರ ತಿಳಿಸಿದ್ದಾರೆ.'[೩೦] ತಾವು ಅನುಸರಿಸುವುದು ಪಾಶ್ಚಾತ್ಯ ಅನುಭಾವ ಮಾರ್ಗವನ್ನಲ್ಲ. ಬದಲಿಗೆ ಶರಣರ, ಸಂತರ, ಭಕ್ತಿಯ ಕನ್ನಡದ ಅನುಭಾವ ಮಾರ್ಗ ಎಂಬುದನ್ನು ಬೇಂದ್ರೆ ಬಲ್ಲವರಾಗಿದ್ದರು. ಅನುಭಾವಿಕತೆಯ ಅಮೂರ್ತತೆಯಲ್ಲಿ ಕಳೆದು ಹೋಗದಂತೆ ಅವರು ಎಚ್ಚರ ವಹಿಸಿದರು. ನಿಂತ ನೆಲ ಬಿಟ್ಟು ದೂರ ಸರಿಯಬಾರದು ಎಂಬ ಅಭಿವ್ಯಕ್ತಿಯ ಮಾಗದರ್ಶನ ಅವರ ಕಾವ್ಯದಲ್ಲಿ ಕಂಡುಬರುತ್ತದೆ. 'ಬಣ್ಣದಿಂದ ಬೆಳಕು ಮಣ್ಣಾಗಬಾರದು ಎಂದ ಜಿಬ್ರಾನ್; ನಮಗೋ ನಮ್ಮ ಮಣ್ಣಿಗೇ ಮೂಗರಳುವುದು'[೩೧] ದೇವನ ಸ್ವರೂಪವನ್ನು, ಪ್ರಾಪಂಚಿಕ ಪ್ರೇಮವನ್ನು ತಾವು ಕಂಡ ಮಾರ್ಗದ ಮೂಲಕ ಬೇಂದ್ರೆಯವರಿಗೆ ಒಡನುಡಿಸಬೇಕಾಗಿತ್ತು. 'ಮಾನವನ

ಜೀವನದಲ್ಲಿ ಈಶ್ವರನ ಕೈವಾಡ ಪ್ರಕಾಶಗೊಳಿಸುವುದು ಕಲಾವಂತರ ಕಾರ್ಯವಾದೀತೆಂದು ಶ್ರೀ ಅರವಿಂದರು ಪ್ರವಾದಿಗಳಾಗಿ ಘೋಷಿಸಿದ್ದಾರೆ.'[೨೩] ಮಣ್ಣಿನಲ್ಲಿ ಹೂವರಳುವದು, ಬೆಳಕು ಬಿರಿಯುವುದು ಈಶ್ವರನ ಕೈವಾಡದಿಂದಲೆ ಎಂದು ಬೇಂದ್ರೆಯವರಿಗೆ ಪರೋಕ್ಷವಾಗಿ ಹೇಳಬೇಕಾಗಿದೆ. ಈಶನು ಜೀವಜಗತ್ತಿನ ಮೇಲೆ ಹರಿಸುವ ಸ್ಪರ್ಶವನ್ನು ಬೇಂದ್ರೆ ತಮಗೆ ಅನಿಸಿದ ಭಾಷೆ-ಮಾಧ್ಯಮ-ಪ್ರಕಾರದಲ್ಲಿ ಸ್ಮರಣೀಯಗೊಳಿಸಿದರು.

ಹಳೆಯ ಕಾವ್ಯಸಂಪ್ರದಾಯದ ವರ್ಣನಾತ್ಮಕ ಶೈಲಿಯಲ್ಲಿ ಕಸಿವಿಸಿಪಡುತ್ತ ಬರೆಯುವುದು ಅವರಿಗೆ ಇಷ್ಟವಿಲ್ಲದ ಕಾರಣ ತಮ್ಮ ಅಭಿವ್ಯಕ್ತಿಗೆ ತಕ್ಕಂತೆ ಷಟ್ಪದಿ ಪ್ರಕಾರವನ್ನು ಕೂಡ ಅವರು ಮುರಿದು ತಮ್ಮ ಭಾವನಿಷ್ಠ ಕವಿತೆಯನ್ನು ಬೆಳೆಸತೊಡಗಿದರು. ಕನ್ನಡದ ನವೋದಯ ಸಂದರ್ಭದಲ್ಲಿ ಹೊಸ ರೂಪ ಪಡೆಯಲು ಬಿ.ಎಂ.ಶ್ರೀ ಮತ್ತು ಇತರರು ವಹಿಸಿದ ಶ್ರಮವನ್ನು ತಿ.ನಂ.ಶ್ರೀ. ವಿವರಿಸುತ್ತಾರೆ. 'ಸಂಸ್ಕೃತದ ವೃತ್ತಗಳು ಹಳಗನ್ನಡಕ್ಕೆ ಒಗ್ಗಲಿಲ್ಲ; ನಡುಗನ್ನಡದ ಕಾಲಕ್ಕಂತೂ ಕೈಬಿಟ್ಟು ಹೋದವು. ಕಂದವೂ ಅಪ್ರಚುರವಾಯಿತು. ಇನ್ನು ಮುಂದೆ ಮೂರು, ನಾಲ್ಕು, ಐದು ಮಾತ್ರೆಯ ಗಣಗಳು ಪ್ರಬಲಿಸಿ ಮುಖ್ಯವಾಗಿ ಷಟ್ಪದಿಗಳು ರೂಪುಗೊಂಡವು; ರಗಳೆಗಳು ಹರಿಹರನ ಕೃತಿಗಳಲ್ಲಿ ವಿಶಾಲವಾಗಿ ಅರಳಿ ಮತ್ತೆ ಒಳಸರಿದಿದ್ದವು. ಸಾಂಗತ್ಯವೊಂದು ಹಿಂದಿನ ದ್ರಾವಿಡ ಛಂದಸ್ಸಿನ ಕುರುಹಾಗಿ ನೆಲೆಗೊಂಡಿತು.... ಆದರೆ ಎಲ್ಲದರ ಪಡಿಯಚ್ಚೂ ಒಂದೇ. ಪದ್ಯಕ್ಕೆ ಆರು ಅಥವಾ ನಾಲ್ಕು ಪಾದದ ಕಟ್ಟು; ಒಂದೊಂದು ಪಾದಕ್ಕೂ ಇಷ್ಟಿಷ್ಟೇ ಗುಣಗಳಿರಬೇಕೆಂಬ ನಿಯಮ; ಆದಿಪ್ರಾಸವಿದ್ದೇ ತೀರಬೇಕು... ಇಂಥ ಇಕ್ಕಟ್ಟಿನ ಏಕನಾದದಲ್ಲಿ ಕವಿ ತನ್ನ ಭಾವವೈಖರಿಗೆ ತಕ್ಕ ರೂಪವೈವಿಧ್ಯವನ್ನು ಸಾಧಿಸುವುದು ಹೇಗೆ?''[೨೪] ಹಾಗಾಗಿ ಇಂಗ್ಲೀಷ್ ಛಂದಸ್ಸಿನ ಪ್ರಭಾವದಿಂದಾಗಿ ಕನ್ನಡ ಕವಿತೆ ಸರಳತೆ, ಮುಕ್ತತೆ, ನಿರಾಭರಣ ಸೌಂದರ್ಯಪ್ರಜ್ಞೆಗಳಿಂದ ಭಾವಸಂವೇದನೆಯ ಹೊಸ ಬಾಗಿಲನ್ನೆ ತೆರೆಯಿತು. 'ಕನ್ನಡ ನುಡಿಯ ಜಾಯಮಾನಕ್ಕೆ ರಗಳೆ ಷಟ್ಪದಿಗಳ ಕಾಲದಿಂದಲೂ ಒಗ್ಗಿ ಹದವಾಗಿ ಪಳಗಿರುವ ಮಾತ್ರಾಗಣಗಳನ್ನೇ ಇಟ್ಟಿಗೆಯಾಗಿ ಉಪಯೋಗಿಸಿ, ಚರಣ ವಿನ್ಯಾಸ ಪ್ರಾಸವಿಲಾಸಗಳನ್ನು ಮಾತ್ರ ಬಗೆಬಗೆಯಾಗಿ ಏರ್ಪಡಿಸಿ ಹೊಸ ಹೊಸ ಕಟ್ಟಡಗಳನ್ನು ಕಟ್ಟುವುದು ಸಾಧ್ಯ'[೨೫] ಎಂಬುದು ಬಿ.ಎಂ.ಶ್ರೀ.ಯವರಿಗೆ ಹೊಳೆದಂತೆ ಬೇಂದ್ರೆಯವರು ಆ ರೀತಿಯ ಸ್ವಾತಂತ್ರ್ಯವನ್ನು ತಮ್ಮ ಕಾವ್ಯೋದ್ಯೋಗದಲ್ಲಿ ಅನುಸರಿಸಿಕೊಂಡು ಬಂದರು. ಆ ಹೊತ್ತಿನ ಬಿ.ಎಂ.ಶ್ರೀಯವರ ಹೊಸ ಪ್ರಯೋಗಗಳು ಬೇಂದ್ರೆಯವರ ಮೇಲೂ ಪ್ರಭಾವ ಬೀರಿರಬೇಕು. ಬೇಂದ್ರೆಯವರು ಷಟ್ಪದಿಗಳಲ್ಲಿ ಮಾಡಿದ ನಾವೀನ್ಯತೆ ಕನ್ನಡ ಕವಿತೆಗೆ ಇಂಬು ಕೊಟ್ಟಿತು. ಸಹಜ ಲಯದಲ್ಲಿ ಅರಳುವಂತೆ ಮಾಡಿತು. ಬೇಂದ್ರೆಯವರು ಅರಸಿಹೋದ ಈ ಸ್ವಾತಂತ್ರ್ಯಪ್ರಿಯತೆಯನ್ನು ಡಾ. ಗಿರಡ್ಡಿ ಗೋವಿಂದರಾಜರು ಸರಿಯಾಗಿಯೇ ಗುರುತಿಸಿದ್ದಾರೆ. 'ಯಾವಾಗ ಬೇಂದ್ರೆಯವರು ಷಟ್ಪದಿಯ ರೂಪಗಳಲ್ಲಿ ಹೊಸ ಹೊಸ ವಿನ್ಯಾಸಗಳನ್ನು ಗುರುತಿಸಲು ಆರಂಭಿಸಿದರೋ, ಅದರಲ್ಲಿ ಅನಂತ ಸಾಧ್ಯತೆಗಳು ತೆರೆದುಕೊಂಡವು. ಅವರ ಲಯಗಳು ಸ್ವಚ್ಛಂದವಾಗಿ ಕುಣಿಯಲು ಆರಂಭಿಸಿದವು. ಆದಿಪ್ರಾಸವನ್ನು ಕೈಬಿಟ್ಟು, ಅಂತ್ಯಪ್ರಾಸಗಳನ್ನು ಸಂಯೋಜಿಸಿ, ಕೆಲವು ಗಣಗಳನ್ನು ಕಡಿಮೆ ಮಾಡಿ, ಕೆಲವನ್ನು ಹೆಚ್ಚಿಗೆ ಸೇರಿಸಿ, ಅವೇ ಆರು

ಸಾಲುಗಳನ್ನು ಬೇರೆ ಬೇರೆ ರೀತಿಯಿಂದ ಮುರಿದು ಹೊಂದಿಸಿ, ಷಟ್ಪದಿಯ ಹಲವಾರು ರೂಪಗಳನ್ನು ಬೇಂದ್ರೆ ಪ್ರಯೋಗಿಸಿದರು. ಈ ಹೊತ್ತಿಗೆ 'ಇಂಗ್ಲೀಷ್ ಗೀತಗಳು' ಪ್ರಕಟವಾಗಿ, ಬಿ.ಎಂ.ಶ್ರೀಕಂಠಯ್ಯನವರು ಷಟ್ಪದಿ ಮತ್ತು ಮಾತ್ರಾ ವೃತ್ತಗಳಲ್ಲಿ ನಡೆಸಿದ್ದ ಆಕರ್ಷಕ ಪ್ರಯೋಗಗಳು ಅನೇಕರಂತೆ ಬೇಂದ್ರೆಯವರ ಮೇಲೂ ಸಹ ಪ್ರಭಾವ ಬೀರಿರಬೇಕು.'[೨೬] ಹೊಸ ಅರ್ಥಸಾಧ್ಯತೆ ಮತ್ತು ವಿಸ್ತಾರಗಳನ್ನು ಅವರ ಷಟ್ಪದಿಯ ಪ್ರಯೋಗಗಳು ಪಡೆದುಕೊಂಡವು. ಸಾಂಪ್ರದಾಯಿಕತೆಯನ್ನು ಮುರಿದು ರೂಪ ಅರ್ಥವನ್ನು ಅಪ್ಪಿಕೊಳ್ಳುವಂತೆ ಮಾಡಿದರು:

ನಿದ್ದೆಗಡಲಿನಲ್ಲಿ ನಾನು
ಎದ್ದೇಳುತಲಿದ್ದನಾಗ
ಏಳು ಕನ್ನಿಕೆಯರು ಬಂದು
ಏಳು ಎಂದು ಎಂದರೋ- ಏಳು ಎಂದು ಎಂದರು
ನಿಂತೆ ನಡುವೆ ಗೊಮ್ಮಟನೊಲು,
ನಿಂತರವರು ಒರಗಿ ಸುತ್ತು
ದೀಪಮಾಲೆ ಕಂಬದಲ್ಲಿ
ದೀಪದ ಕುಡಿ ಕುಡಿಯೊಲೋ - ದೀಪದ ಕುಡಿ ಕುಡಿಯೊಲು[೨೭]

ಬೇಂದ್ರೆಯವರು ತಮ್ಮ ಕನಸಿನ ಸ್ಮರಣೆಯೊಂದನ್ನು 'ಏಳು ಕನ್ನಿಕೆಯರು' ಹೆಸರಿನ ಕವಿತೆಯನ್ನಾಗಿಸಿದ್ದಾರೆ. ಲೈಂಗಿಕ ಅರ್ಥಗಳನ್ನು ಈ ಷಟ್ಪದಿಯ ರೂಪ ಕೊಡುವಂತೆಯೆ ಬದುಕನ್ನು ಅಧೋಗತಿಗಿಳಿಸಬಾರದೆಂಬ ಎಚ್ಚರಿಕೆಯಿದೆ. ಎಬ್ಬಿಸಲಿಕ್ಕೆ ಬಂದ ಕನ್ನೆಯರ ಜೊತೆ ಚೈತನ್ಯದಿಂದ ಏಳಬೇಕೆಂಬ, ಸ್ವರದೊಂದಿಗೆ ಸ್ವರ ಬೆರೆಸಬೇಕೆಂಬ, ನಾದಕ್ಕೆ ಜೊಳ್ಳುನಾದ ಸೇರಿಸಬಾರದೆಂಬ ಆತ್ಮೋದ್ಧಾರದ ಕಾಳಜಿಯೂ ಅದರಲ್ಲಿ ಅಡಗಿದೆ. ಅದೇ ರೀತಿ ಸೂರ್ಯ ಮತ್ತು ಚಂದ್ರನ ನಡುವೆ ನಡೆದಿರುವ ಅನಂತ ಪ್ರಣಯವನ್ನು ಸೃಷ್ಟಿಯ ವ್ಯಾಪಾರವನ್ನಾಗಿ ಬೇಂದ್ರೆ ಷಟ್ಪದಿಯ ನವರೂಪದಲ್ಲಿ ಚಿತ್ರಿಸುತ್ತಾರೆ:

ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ
ಚುಂಬಕ ಗಾಳಿಯು ಬೀಸುತಿದೆ
ಸೂರ್ಯನ ಬಿಂಬಕೆ ಚಂದ್ರನ ಬಿಂಬವು
ರಂಬಿಸಿ ನಗೆಯಲಿ ಮೀಸುತಿದೆ

ಭೂರಂಗಕೆ ಅಭಿಸಾರಕೆ ಕರೆಯುತ
ತಿಂಗಳು ತಿಂಗಳು ನವೆಯುತಿದೆ
ತುಂಬುತ ತುಳುಕುತ ತೀರುತ ತನ್ನೊಳು
ತಾನೇ ಸವಿಯನು ಸವಿಯುತಿದೆ'[೨೮]

ಶ್ಲೇಷಾರ್ಥವಿಟ್ಟು, ಶಬ್ದಗಳ ಜೊತೆ ಆಟವಾಡುತ್ತ ತಾತ್ವಿಕತೆಯನ್ನು ಮೆರೆಯುವುದೂ ಅವರಿಗೆ ಗೊತ್ತು:

ಮಳಲಹುಡಿಯೊಂದು ಹಿಡಿ
ನಿನ್ನ ಹಿಡಿಯಲ್ಲಿ ಹಿಡಿ,
ಆದರಕತೆಯೇನು? ಗತಿಯೇನು? ಬಾಳು?
ಯಾವ ತ್ರೇತಾಯುಗದ
ಹಾಳಾದ ಹಳೆಜಗಳ
ತಳಕು ಬೆಳಕಿಲ್ಲಿ ಮಡಿದಿಹುದು ಹೇಳು![೨೯]

'ಕೊನೆಯ ಹಾಡು' ಎನ್ನುವ ಈ ಪದ್ಯ ಅವರ ಪ್ರಾರಂಭಿಕ ಪ್ರಯೋಗಗಳಲ್ಲಿ ಒಂದು

ನನ್ನ ಹರಣ
ನಿನಗೆ ಶರಣ
ಸಕಲ ಕಾರ್ಯಕಾರಣಾ
ನಿನ್ನ ಮನನ
ದಿಂದ ತನನ
ವೆನುತಿದೆ ತನು ಪಾವನಾ![೩೦]

'ಅಹಹ ಸ್ವಾತಂತ್ರ್ಯದೇವಿ!', 'ಚಂದ್ರ', 'ಗಂಡಸು-ಹೆಂಗಸಿಗೆ', 'ಹಸಿ -ಹಂಬಲ', 'ಹಂಪೀ-ವಿಜಯನಗರ ದರ್ಶನ', 'ಲೀಲೆ', 'ಮುದ್ದಣ' ಮುಂತಾದ ಕವಿತೆಗಳು ಷಟ್ಪದಿಯ ರೂಪವನ್ನು ಹೊತ್ತು ಬಂದರೂ ಬೇಂದ್ರೆಯವರು ಮಿಡಿಯುತ್ತಿದ್ದ ಹೊಸ ಛಂದಸ್ಸಿಗೆ ಮೊಳಕೆಗಳಾಗಿದ್ದವು. ಅಂದರೆ ಷಟ್ಪದಿಯ ಸಾಲುಗಳನ್ನು ಒಡೆದು ಇಟ್ಟರು. ಲಕ್ಷ್ಮೀಶನ ವಾರ್ಧಕ ಷಟ್ಪದಿ ಅವರಿಗೆ ಬಹಳ ಇಷ್ಟವಾದುದರಿಂದ ಅದೇ ಮಾದರಿಯನ್ನು ಪ್ರಾರಂಭದಲ್ಲಿ ಅವರು ಅನುಸರಿಸಿದರು. 'ಗಂಡಸು-ಹೆಂಗಸಿಗೆ' ಎನ್ನುವ ಪದ್ಯವನ್ನಿಲ್ಲಿ ಉದಾಹರಣೆಯಾಗಿ ನೋಡಬಹುದು.

'ತಾಯೆ ಕನಿಮನಿಯೇ ನೀ ಅಕ್ಕ ಅಕ್ಕರತೆಯೇ
ಬಾಯೆನ್ನ ತಂಗಿ ಬಾ ಮುದ್ದು ಬಂಗಾರವೇ
ನೀಯೆನ್ನ ಹೆಂಡತಿಯೊ ಮೈಗೊಂಡ ನನ್ನಿಯೋ
ಮಗಳೊ ನನ್ನೆದೆಯ ಮುಗುಳೊ?
ಈಯೆನ್ನ ಇರವಿಂಗೆ ಜೀವಸದ ಬಾಳಿಕೆಗೆ
ಈಯುತ್ತ ಕೈಮೈಗಳಂ ಜೀವಭಾವದಿಂ

ಸ್ತ್ರೀಯೆ ಕಾಪಾಡಿದೌ ಪಾಡಾಗಿ ಮೂಢನನು
ತಕ್ಕೈಸಿ ನೂರು ತೆರದಿ'[೩೦]

ಶ್ರೀ ಅರವಿಂದರ ಪ್ರಭಾವಕ್ಕೆ ಒಳಗಾಗಿ 'ಚತುರ್ಮುಖ ಸೌಂದರ್ಯ' (Sensuous Beauty, Imaginative Beauty, Intellectual Beauty and Spiritual Beauty)ದ ಕಲ್ಪನೆಯನ್ನು ಆವಾಹಿಸಿಕೊಂಡು ಆ ಹೊತ್ತಿಗೇನೆ ಅವರು ಷಟ್ಪದಿ ರೂಪವನ್ನು ಬಳಸಿಕೊಂಡು ನಾಲ್ವರಿಗಳನ್ನು ಬರೆದರು. 'ಗರಿ' ಯ 'ಚತುರ್ಮುಖ ಸೌಂದರ್ಯ', 'ಚಂದ್ರ' ಮುಂತಾದ ನಾಲ್ವರಿಗಳು ಆಂತರಿಕ ಸೌಂದರ್ಯದ ಕಡೆಗೆ ಮುಖ ಮಾಡಿವೆ.

ಜಗದ ಜಗುಲಿಯ ಕಟ್ಟೆಯೊಂದೆ ಕಾಲಲಿ ಮೆಟ್ಟಿ
ಜಿಗಿಜಿಗಿಯುತಿಹ ಸಪ್ತಸಾಗರಗಳಂ ಕಟ್ಟಿ
ನಗೆನಗುತಲೆದ್ದು ಹೊರಬಿದ್ದು ಮೇಲಕ್ಕೇರಿ
ಮರುತಲೋಕವನು ಮುಟ್ಟಿ,
ದಿಗಿಲೆದ್ದ ಗಾಳಿಗಳ ಗೂಳಿಗಳ ಬಿಗಿದಿಟ್ಟು
ಹಗಲ ಹೆಗಲಿನ ಮೇಲೆಯೊಂದು ಕಾಲನ್ನಿಟ್ಟು
ಮುಗಿಲಿನೊಳು ಮುಗಿಯದಂತಾಗಿ ಮೇಲಕೆ ಸಾಕಿ
ನಿಂತೆಯೊ ವಿರಾಟನಾಗಿ'[೩೧]

ಒಂದು ಅನುಭವವನ್ನು, ವಸ್ತುವನ್ನು ಇಟ್ಟುಕೊಂಡು ಅದರ ಕಲ್ಪಿತ ಭಾವವನ್ನು ನಾಲ್ಕು ಸಾಲಿನ ಒಂದೊಂದು ನುಡಿಯಲ್ಲಿ ಬೇಂದ್ರೆ ತರುವ ಮೂಲಕ 'ನಾಲ್ವರಿ'ಗೆ ಹೆಸರು ತಂದುಕೊಟ್ಟರು.

೭.೫ ಅನುಭಾವಕ್ಕೆ ನಿಸರ್ಗದ ಭಾಷೆ :

ಭಕ್ತರ, ತತ್ವಪದಕಾರರ, ಸಾಧು-ಸಂತರ ಅಭಿವ್ಯಕ್ತಿಯ ಉದ್ದೇಶವು ಆಗಸದಲ್ಲಿನ ಓಂಕಾರದ ನಾದವನ್ನು ಮನುಷ್ಯನಿಗೆ ಕೇಳಿಸುವದಾಗಿದೆ. ಲೌಕಿಕದ ಕಬ್ಬಿಣವನ್ನು ದೈವದ ಶಕ್ತಿಯಿಂದ ಬಂಗಾರವಾಗಿಸಬೇಕೆಂದು ಬೇಂದ್ರೆ ಬಯಸುತ್ತಾರೆ. 'ಗಂಗಾವತರಣ' ಸಂಕಲನದ 'ಸಿದ್ಧರಾಮರ ವಚನವನ್ನು ನೆನೆದು' ಪದ್ಯ ಅಂತಹ ಅನುಭಾವದ ಅಭಿವ್ಯಕ್ತಿಯಾಗಿದೆ. ಷಟ್ಪದಿಯನ್ನು ನಾಲ್ವರಿಯ ರೂಪದಲ್ಲಿಟ್ಟಿದ್ದಾರೆ.

ಸಾಧು-ಸಂತರ ವಾಣಿ ಭಕ್ತ-ದಾಸರ ವೀಣೆ
ಶರಣರಾವರಣಕ್ಕೆ ಮೊರೆಯುತ್ತಿದೆ
ಬಾನುಲಿ ವಿಮಾನಗಳ ಠಂಕಾರವದಲ್ಲಿ
ಯಾವುದೋ ಓಂಕಾರ ಬೆರೆಯುತ್ತಿದೆ'[೩೨]

ಮನಸ್ಸಿನ ಕೆರೆ ಕಾಲುವೆಗಳಿಗೆ ಒಡ್ಡು ಕಟ್ಟಿ ಧ್ಯಾನವನ್ನು ಬಿತ್ತಿ ಬೆಳೆದು ದೈವದ ಸಂಕಲ್ಪವನ್ನು ಎದೆಯಲ್ಲಿ ಹೊತ್ತಿಸಿಕೊಳ್ಳುವುದು ಬೇಂದ್ರೆಯವರ ಬಯಕೆಯಾಗಿದೆ. ಅದೇ ರೀತಿ ಅಂಶಗಣ ಛಂದಸ್ಸಿನ ತ್ರಿಪದಿಯ ರೂಪದಲ್ಲಿ ಕೆಲವು ಪ್ರಯೋಗಗಳನ್ನು ಮಾಡಿ, ಬೇಂದ್ರೆಯವರು ಸರಳ ಅಭಿವ್ಯಕ್ತಿಯಲ್ಲಿ ಗಹನವಾದ ವಿಚಾರವನ್ನು ತುಂಬಿದರು.

ಒಂದಕ್ಕೆ ಅದ್ವೈತ ಎರಡಕ್ಕೆ ಹರಿ-ಹರಾ
ಮೂರಕ್ಕೆ ಮುಕ್ತಿ ಮೇಲಾಗಿ ನಾಲ್ಕಕ್ಕೆ
ಯುಕ್ತಿ ಪ್ರಪಂಚ ಸರ್ವಜ್ಞ'[೩೪]

'ದಶಪದಿ' ಎಂಬ ಹತ್ತು ಸಾಲಿನ ಕಾವ್ಯ ಛಂದಸ್ಸಿನ ಮೂಲಕ, ಬೇಂದ್ರೆಯವರು, ಕೆಲವು ಚತುರೋಕ್ತಿಗಳನ್ನು ಬರೆದರು. ಕವಿತೆಯ ಮೊದಲ ಸಾಲಿನಲ್ಲಿ ಕವಿಯು ತಾನು ಅಂದುಕೊಂಡ ಭಾವವನ್ನು ವ್ಯಕ್ತಪಡಿಸಿ ಮುಂದಿನ ಎರಡು ಸಾಲುಗಳ ಎರಡನೆ ನುಡಿ, ಮೂರು ಸಾಲಿನ ಮೂರನೇ ನುಡಿ ಹಾಗೂ ನಾಲ್ಕು ಸಾಲಿನ ನಾಲ್ಕನೆ ನುಡಿಯಲ್ಲಿ ಕವಿತೆಯ ಭಾವವನ್ನು ವಿವರಿಸುತ್ತ ಹೋಗವುದು ಈ ಛಂದಸ್ಸಿನ ಲಕ್ಷಣವಾಗಿದೆ.

ಗಿಣೀ ಹಣೀಮ್ಯಾಲೆ ಗೆಣೆತನ ಬರದಾನ

ಬನಾ ಬನಾ, ಮನೀ ಮನೀ
ಥರಾ ಥರಾ, ಧನಿ ಧನಿ

ರೆಕ್ಕಿ ನೋಡಿಕೊಡು
ಹಕ್ಕಿ ಕೂಡತಾವ
ಹಕ್ಕೀಲೆ ಅಕ್ಕಪಕ್ಕ ಸನಿ

ಫಕ್ಕನೆ ಹಾರತಾವ,
ಗಕ್ಕನೆ ಇಳೀತಾವ
ಸಿಕ್ಕಲ್ಲೆ ಕಳೀತಾವ ದಿನಾ
ನೋಡೇನೆ ಈ ಮಂದೀ ನಾ!'[೩೫]

ತಮ್ಮ ಅನುಭವದ ಸಂಭ್ರಮ, ಆಶ್ಚರ್ಯಗಳನ್ನು ದ್ವಿರುಕ್ತಿ ಹಾಗೂ ಜೋಡನುಡಿಯ ಮೂಲಕ ಹೊರಹೊಮ್ಮಿಸುತ್ತಾರೆ. ಚೈತನ್ಯದೊಡನೆ ಗೆಣೆತನ ಹಾಗೂ ಸಖ್ಯ ಬೆಳೆಸುವ ಮೂಲಕ ಭೂಮಿಯಿಂದ ಗಗನಕ್ಕೆ ಹಾರುವ ರೆಕ್ಕೆಗಳನ್ನು ಪಡೆಯಬೇಕೆಂಬ ಅಭಿಲಾಷೆ ಗಿಣಿಗಳ ಪ್ರತಿಮೆಯ ಮೂಲಕ ವ್ಯಕ್ತವಾಗಿದೆ. ಹಕ್ಕಿಯಿಂದ ಹಕ್ಕಿಗಳು ಅಕ್ಕ ಪಕ್ಕ ಕೂಡುವುದು, ಸಿಕ್ಕಲ್ಲಿಯೆ ದಿನ ಕಳೆಯುವುದು ಅನುಭೂತಿಯೆನ್ನುವುದು ಡಂಭಾಚಾರದ ನೇಮ-ನಿತ್ಯದಿಂದ ಬರುವದಿಲ್ಲವೆಂದು ಹೇಳುವ ಪರಿಯಾಗಿದೆ.

ಕಣ್ಣಾಗ ಕಣ್ಣಿದ್ದವರು ಬರೀತಾರ ಕ್ಷೀರಸಾಗರದ ನಕಾಶಾ

ಕಾಲಾಗ ಕಣ್ಣಿದ್ದವರು ಕಾಲಹಾದೀ ಮಾಡತಾರ ಆಕಾಶಾ

ನೆತ್ತಿಮ್ಯಾಲೆ ಕಣ್ಣಿದ್ದವರಿಗೆ ಗ್ವಾಡಿ ಆಗತದ ಪ್ರಕಾಶ[೩೬]

'ಧ್ವನಿ' ಹೆಸರಿನ ಈ ಪದ್ಯದಲ್ಲಿ ಚಮತ್ಕಾರದ ಜೊತೆಗೆ ಭಾವದಲ್ಲಿ, ಹೃದಯದಲ್ಲಿ ಸಮೃದ್ಧತೆಯನ್ನು ತುಂಬಿಕೊಂಡವರಿಗೆ ಅನುಭೂತಿ ದೊರೆಯುವುದು ಕಷ್ಟದ್ದಲ್ಲವೆಂಬ ವಿಚಾರವಿದೆ. ಜನಜೀವನದ ಮಾಗುವಿಕೆಯಲ್ಲಿ ಹಾಯ್ದು ಬಂದಿರುವ ಬೆಡಗು, ರಸಿಕ ಮಾತು, ಆಡು ನುಡಿ, ಗಾದೆ ಮಾತು ಮುಂತಾದವುಗಳ ಪಾಕದಿಂದ ಅನುಭಾವದ ಅರ್ಥವನ್ನು ಕಟ್ಟಿಕೊಡುತ್ತಾರೆ.

ಅನುಭವ ಬೇಯದೆ ಅಭಿವ್ಯಕ್ತಿ ಸಾಧ್ಯವಾಗಲಾರದೆಂದು ಹೇಳುತ್ತ ಒಳಗಿನ ಕಣ್ಣು ತೆರೆಯದೆ ಬೆಳಕಿನ ಬಣ್ಣ ಕಾಣಿಸಲಾರದೆಂದು ಬೇಂದ್ರೆ ನಂಬುತ್ತಾರೆ. ಸರಳವಾದ ಭಾಷೆಯಲ್ಲಿ' ಜನಪದದ ಮೂಸೆಯಲ್ಲಿ ತಾವು ಹೇಳುವ ತತ್ವವನ್ನು ಕರಗಿಸುತ್ತ ಕವಿತೆ ಕಟ್ಟಿ ದೈವಿಕ ಅನುಭೂತಿಯ ಪ್ರತಿಮಾ ಲೋಕವನ್ನು ಸಹೃದಯನ ಕಣ್ಣೆದುರಿಡುತ್ತಾರೆ. 'ಹದಾ ಇಲ್ದs ಪದಾ'[೩೭] ಪದ್ಯದಲ್ಲಿ ಅದು ಸಮರ್ಥವಾಗಿ ಅಭಿವ್ಯಕ್ತಗೊಂಡಿದೆ.

ಹದಾ ಒಳಗs ಇಲ್ದs ತಮ್ಮಾ !

ಪದಾ ಹೊರಗs ಬರೂದಿಲ್ಲಾ

ಕದಾ ತೆರ್ರ್ಯೂದಿಲ್ಲಾ ಅಂತಃಕರಣಾ

ಅಭಿಮಾನ, ಅಹಂಕಾರಗಳನ್ನು ಕಳಚಿಕೊಂಡು ಸಜ್ಜನರ ಸಂಗದಲ್ಲಿ ಬೆರೆಯಬೇಕೆನ್ನುವ ಆಸೆ ಬಲವಾಗಿದೆ.

ಬೆಳಕಿನ್ಯಾಗ ಬಣ್ಣದ ಬೆಳsು

ತನ್ನತನದಾಗ ನಿನ್ನ ಕಳsು

ಉಳಿವಿಲಿಂಗದಾಗ ಉಳಿ

ಶರಣರ ಹಾಗೂ ಭಕ್ತಿ ಚಳುವಳಿಯ ಮಾರ್ಗದೊಡನೆ ಗುರುತಿಸಿಕೊಳ್ಳುವುದು ಕೂಡ ಪ್ರಾಂಜಲ ಮನಸ್ಸಿನ ಆಶಯವಾಗಿದೆ.

ಬರಬೇಕಪ್ಪಾ ಒಳಗಿಂದ ಝುರಿ

ಕಪ್ಪುರ ಕಂಡಾಂಗ ಉರಿ

ಹೀಗೆ ಝುರಿ-ಉರಿ, ಬಣ್ಣಾ-ಕಣ್ಣಾ, ಸಂಜಿ-ಅಂಜಿ, ಭಾವ-ಜೀವ, ಧಾಟೀ-ರಾಟೀ, ಹಾಕಿ-ಬಾಕಿ ಮುಂತಾದ ಪ್ರಾಸದ ಪದಗಳು ಅವರ ಕವಿತೆಗಳಲ್ಲಿ ಕೃತಕವೆನಿಸದೆ ಅನುಭೂತಿಯ ಅರ್ಥ ಹೊರಡಿಸಲು ದುಡಿಯುತ್ತವೆ. ಕವಿತೆಯ ಹದದಲ್ಲಿ ಪದಗಳನ್ನು ಯಾವ ರೀತಿ ಬಳಸಬೇಕೆನ್ನುವ ಸ್ವಾಭಾವಿಕ ಪ್ರತಿಭೆ ಬೇಂದ್ರೆಯವರಲ್ಲಿ ಕೆಲಸ

ಮಾಡುತ್ತಿರುವುದರಿಂದ ಅದು ಅವರಿಗೆ ಕಷ್ಟವಲ್ಲ. ಸಹೃದಯನ ಮಾತು ಹಾಗೂ ತನ್ನ ಮಾತು ಬೇರೆ ಬೇರೆಯಲ್ಲ ಎನ್ನುವ ಮೂಲಕ ಜನಪದದ ಆವರಣವನ್ನು ಅನುಭಾವದ ಗುಡಿಯ ಸುತ್ತ ಕಟ್ಟ ದೇಶೀಯ ಆವಾರವನ್ನು ನಿರ್ಮಿಸಿಕೊಳ್ಳುತ್ತಾರೆ.

ತೆರೀಬೇಕು ದೇವರ ಗುಡಿ
ಇನ್ನ ದೇವರ ಪಾದಾ ಹಿಡಿ!

ಲೌಕಿಕವೆಂಬ ಪಂಕದಲ್ಲಿ ಅನುಭೂತಿ ಹಾಗೂ ಭಕ್ತಿಯ ಪಂಕಜ ಅರಳಬೇಕೆನ್ನುವುದು 'ಕಾಳ್ಮೋ ಮಾಳ್ಮೋ' ಎನ್ನುವ ಕವಿತೆಯ ಅರ್ಥವಾಗಿದೆ.

ಭಾವದ ಜಾಲ ವಿಶಾಲಿಸಿ ಮಣಿದಿರೆ
ಯನುಭಾವವೆ ಹೆಣೆದಿರೆ,
ಅನುಭೂತಿಯ ತುಂಬೆಲ್ಲ ವಿಭೂತೀ
ಭೂತವೆ ಕುಕ್ಕುಣಿದಿರೆಽಽ[೩೮]

ಅನುಭೂತಿಯ ಪರಿಣಾಮ ಕಣ್ಣು ಕೋರೈಸುವಂತಿದ್ದು ಮಹತ್ತಾಗಿ ಭೂಮಿಯನ್ನೆಲ್ಲ ಆವರಿಸಿಕೊಂಡಿದೆಯೆಂದು ಬೇಂದ್ರೆ ಹೇಳುತ್ತಾರೆ. ಅಂತಹ ಅನುಭವದ ಸಾಕ್ಷಾತ್ ರೂಪ ಕಣ್ಣೆದುರು ಕುಣಿಯುತ್ತದೆ.

ಸೃಷ್ಟಿ, ನಿಸರ್ಗಗಳಲ್ಲಿ ಇರುವ ಕಾರುಣ್ಯದ ಗುಣಕ್ಕೆ ಮನಸೋತ ಕವಿ ಒಡಲ ಕಿಚ್ಚಿನಿಂದ ಚಂದ್ರ ಬೇಯುತ್ತಿದ್ದರೂ ಕುದಿಯುವ ಕಡಲನ್ನು ಎದೆಗಪ್ಪಿ ರಮಿಸುವ, ಮುದ್ದಾಡುವ ಪರಿಯನ್ನು 'ಚಂದ್ರ'[೩೯] ಕವಿತೆಯಲ್ಲಿ ಚಿತ್ರಿಸುತ್ತಾನೆ.

ಒಡಲ ಕಿಚ್ಚಿಗೆ ಬೆಂದರೂ ನೀ-
ನೊಡಲುರಿಗೆ ಮೊರೆಯಿಡುವ ಕಡಲನು
ಕಡುಹಿನೊಳು ಮುದ್ದಾಡಿ ರಮಿಸುವೆ
ನಗೆಮೊಗವ ತೋರಿ

ದುಃಖಗಳನ್ನು ಸೈರಿಸುವ, ಪೃಥ್ವಿಯ ಪ್ರೀತಿಯಲ್ಲಿ ಅದ್ದಿರುವ ತನ್ನ ಹಾಡು ಪ್ರತಿಚಂದ್ರನಂತೆ ಮತ್ತೊಂದು ಹೃದಯವನ್ನು ಸಂತೈಸಲಿ ಎನ್ನುತ್ತಾನೆ ಕವಿ.

ನಿನ್ನೊಳವು ನನ್ನೊಳಗೆ ಮೊಳೆಯಿತು
ನಿನ್ನ ಮಣಿಹವು ತಣಿಸಿತೆನ್ನನು

ತನ್ನ ದುಃಖವ ನುಂಗಿ ಪರದುಃ-
ಖವನು ಹಿಂಗಿಸುವ
ಚೆನ್ನಿಗಳು ಭೂದೇವಿ, ಆಕೆಯ
ನನ್ನಿಯಲಿ ಮಡಿಯಾದ ನುಡಿಗಳು
ನನ್ನ ನಾಲಗೆಯಲ್ಲಿ ಮೂಡಲಿ
ಪ್ರತಿಚಂದ್ರರಂತೆ

ರೋಮ್ಯಾಂಟಿಕ್ ಕವಿಗಳ ಅದರಲ್ಲೂ ಕೀಟ್ಸ್‌ನ ಪ್ರಭಾವ 'ಚಂದ್ರ', 'ಚತುರ್ಮುಖ ಸೌಂದರ್ಯ' ಕವಿತೆಗಳಲ್ಲಿ ಒಡೆದು ಕಾಣುತ್ತದೆ. 'ಪುನರ್ಯೋಗಾರೂಢ', 'ಸಂಕಲ್ಪ' ಎನ್ನುವ ಕವಿತೆಗಳಲ್ಲಿ ಆಧ್ಯಾತ್ಮ ಕಂಪಿನ ಕರೆಯಿರುವುದನ್ನು ಗಮನಿಸಬಹುದು.

ಎಲ್ಲಿರುವೆನೆಲ್ಲಿರುವೆನೆಲ್ಲಿರುವೆ ನಾನೀಗ
ಕಲ್ಲಿರುವೆನೋ ಏನು ಮಣ್ಣಿರುವೆನೊ?
ಹೀರಿ ಹೋಯಿತು ಓಜ ಹಾರಿ ಹೋಯಿತು ತೇಜ
ಏರಿರುವೆನೊ ನಾನು ಇಳಿದಿರುವೆನೋ?[೮೦]

ಆತ್ಮೋದ್ಧಾರಕ್ಕಾಗಿ ಪಾಪಗಳಿಂದ ತನ್ನನ್ನು ಬಿಡಿಸಿಕೊಳ್ಳುವ ವಿಶ್ವಾಮಿತ್ರನು ಚೇತನದತ್ತ ಮುಖ ಮಾಡುತ್ತಾನೆ.

ಅಗೋ ನನ್ನ ಪಾಪ ಪಾತರಗಿತ್ತಿ ರೂಪಾಗಿ
ಅಗೋ, ಅಗೋ, ಮೇಲಕ್ಕೆ ಸಾಗಿರುವುದು[೮೧]

'ಈ ಕವಿತೆಯಲ್ಲಿ ಬರುವ ಪಾತರಗಿತ್ತಿ ಮತ್ತು ಗರುಡಗಳ ಪ್ರತಿಮೆಗಳು ಮತ್ತು ಅವುಗಳು ಸ್ಫುರಿಸುವ ಅರ್ಥಗಳು ಬೇಂದ್ರೆಯವರ ಕಾವ್ಯಸೃಷ್ಟಿಯ ಅವಿಭಾಜ್ಯ ಅಂಗಗಳಾಗಿವೆ'[೮೨] ಎಂದು ಡಾ. ಅಮೂರರು ಹೇಳುತ್ತಾರೆ. ಲೌಕಿಕ ಮತ್ತು ಅಲೌಕಿಕ ಆಸೆಗಳ ಪ್ರತಿಮೆಗಳನ್ನು ಬಳಸುವ ಅಪ್ರತಿಮ ಕಲೆ ಅವರಿಗೆ ಸಿದ್ಧಿಸಿತ್ತು.

ವಾರ್ಧಕ ಷಟ್ಪದಿಯಲ್ಲಿ ಬೇಂದ್ರೆಯವರು ಸಾಧಿಸಿದ ಪ್ರಾವೀಣ್ಯತೆಗಾಗಿ 'ಗರಿ' ಸಂಕಲನದಲ್ಲಿನ 'ಮುದ್ದಣ' ಕವಿತೆಯನ್ನು ನೋಡಬೇಕು. ಏಕತಾನತೆಯಿಂದ ಸೊರಗಿ ಹೋಗಿದ್ದ, ಕಲ್ಲಾಗಿದ್ದ ಕನ್ನಡದ ಅಭಿವ್ಯಕ್ತಿಗೆ ಮುದ್ದಣನು ದುಡಿದದ್ದನ್ನು ಬೇಂದ್ರೆ ಸ್ಮರಿಸುತ್ತಾರೆ. ಭಾವಗೀತೆಗೆ, ರಸಾಸ್ವಾದನೆಗೆ ಆತ ಭೂಮಿಕೆ ಒದಗಿಸುವಲ್ಲಿ ನೆರವಾದುದನ್ನು ಈ ಪದ್ಯ ನೆನಪಿಸುತ್ತದೆ.

ಹಳಸಿ ತಂಗಳಾದ ರೀತಿಗಳ ಹೀಗಳಿಸಿ
ಬಳಬಳಿಸಿ ಸವಿಗೆಟ್ಟ ಸಲ್ಗತೆಯ ರಸವೆರಸು

ಬೆಳಿಸಿ ಪೇಳಿದನು ಒಳಹದುಳವನು ಹದಮಾಡಿ ತನ್ನ ಮಿದುಮಾತಿನಿಂದ
ಉಳಿಸಿದನು ಕನ್ನಡದ ಹೆಸರನ್ನು ಕಡೆತನಕ
ಗಳಿಸಿದನು ಸತ್ಕೀರ್ತಿಯನ್ನು ಕವಿಕುಲದೊಳಗೆ
ಕಳಿಸಿದನು ವೀರಮುದ್ದಣನು ನವಕೃತಿಯನ್ನು ಜಗದೊಳಗೆ ಜನ್ನಗುದುರೆ"

ತನ್ನ ನಿರ್ಮಿತಿಯ ಸಾಹಿತ್ಯವನ್ನು ಯಜ್ಞಕುದುರೆಯಾಗಿ ಕಳಿಸಿ ಮುದ್ದಣನು ಕನ್ನಡದ ಕೀರ್ತಿಯನ್ನು ಹೆಚ್ಚಿಸಿದನೆಂದು ಬೇಂದ್ರೆಯವರು ಬಳಸಿರುವ ರೂಪಕ ಅಶ್ವಮೇಧಯಾಗದ ಕುದುರೆಯಾಗಿ ಅದು ಗೆಲ್ಲುವ ದಿಗ್ವಿಜಯದ ಸಾದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ.

ತುಂಬು ತರುಣರಿದ್ದಾಗಲೆ ಭಕ್ತಿಯ ಪರಿಸರದ ನಾದ ಅವರ ಕವಿತೆಗಳಲ್ಲಿ ಉಸಿರಾಡುತ್ತಿರುವುದನ್ನು 'ಗರಿ'ಯಂತಹ ಸಂಕಲನದಿಂದಲೆ ಗುರುತಿಸಬಹುದು. ೧೯೧೮ ರಿಂದ ೧೯೩೨ ರವರೆಗೆ ೧೪ ವರ್ಷಗಳ ಕಾಲ ಅವರು ಬರೆದ ಕವನಗಳು 'ಗರಿ'ಯಲ್ಲಿ ಬೆಳಕು ಕಂಡವು. ಹೆಚ್ಚಾಗಿ ಷಟ್ಪದಿಗಳೆ ಇದ್ದ ಆ ಸಂಕಲನದ ಮೊದಲ ಪದ್ಯ ಮಾತ್ರ ತನ್ನ ಹೊಸ ಛಂದಸ್ಸಿನಿಂದ ಕನ್ನಡದ ಓದುಗರನ್ನು ಹಿಡಿದಿಟ್ಟಿತು. ಆ ಮೊದಲ ಪದ್ಯವೆ ಹಿಂದೆ 'ಸದಾನಂದಿ ಜಂಗಮ' ಎಂಬ ಕಲ್ಪಿತ ಕವಿಯ ಹೆಸರಿನಲ್ಲಿ ಅವರು ಪ್ರಕಟಿಸಿದ್ದ 'ಬೆಳಗು'. ಹೊಸ ಛಂದಸ್ಸಿನಲ್ಲಿ ಬರೆದದ್ದಕ್ಕೆ ಜನ ಹೇಗೆ ಸ್ವೀಕರಿಸುವರೋ ಎನ್ನುವ ಆತಂಕದಿಂದ ಬೇಂದ್ರೆಯವರು 'ಸದಾನಂದಿ ಜಂಗಮ' ಹೆಸರಿನಲ್ಲಿ 'ಸ್ವಧರ್ಮ' ಪತ್ರಿಕೆಯಲ್ಲಿ ೧೯೧೯ ರಲ್ಲಿ ಪ್ರಕಟಿಸಿದ್ದರು. ಆವಾಗಲೆ ಹೊಸ ಅಭಿವ್ಯಕ್ತಿಯ ರೀತಿಗೆ ಮಾರುಹೋಗಿದ್ದ ಮಾಸ್ತಿಯವರು ಮುಂದೆ 'ಬೆಳಗು' ಪದ್ಯದ ವಿಶೇಷತೆಯನ್ನು, ಅದು ತೋರಿಸುವ ನಾನಾ ಮುಖಗಳನ್ನು ಕುರಿತು 'ನಾದಲೀಲೆ' ಸಂಕಲನಕ್ಕೆ ಮುನ್ನುಡಿ ಬರೆದರು. 'ಮೂಡಲ ಮನೆಯಾ ಮುತ್ತಿನ ನೀರಿನ ಎರಕsವ ಹೊಯ್ದಾ' ಎಂಬ ರೀತಿಯ ಪ್ರಕೃತಿಯ ವರ್ಣನೆಯ ಕವಿತೆ; 'ಮುಗಿಲ ಮಾರಿಗೆs ರಾಗರತಿಯ ನಂಜ ಏರಿತ್ತs' ಎಂಬ ರೀತಿಯ ಹೆಣ್ಣುಗಂಡಿನ ಒಲವನ್ನು ಕುರಿತವು; 'ಹಕ್ಕಿ ಹಾರುತಿದೆ', 'ಭೃಂಗದ ಬೆನ್ನೇರಿ ಬಂತು', 'ಸಚ್ಚಿದಾನಂದ' ಮುಂತಾಗಿ ಬುದ್ಧಿಯ ಅಥವಾ ಆತ್ಮದ ಅರಿವಿಗೆ ಮಾತನ್ನು ಕೊಡುವ ಗೀತ... ಹೀಗೆ ಬಹುವಿಧವಾದ ಕೃತಿ ಇವರಲ್ಲಿ ಇವೆ. ಇಲ್ಲಿಯ ತೀವ್ರ ಅನುಭವ, ವಿಪುಲ ಭಾವ ಕವಿತೆಯಲ್ಲಿ ಸಾಗರದ ಅಲೆಯ ಮಾಲೆಯಂತೆ ಮೇಲೆ ಮೇಲೆ ಉರುಬಿ ಬರುತ್ತದೆ. ಇಲ್ಲಿ ಕಾಣುವುದು ದೊಡ್ಡ ಕಲ್ಲುಗಳನ್ನು ಮೇಲೆ ಮೇಲೆ ಹೇರಿ ಕಟ್ಟಿದ ಒಂದು ಹರ್ಮ್ಯ ಪ್ರಾಕಾರದ ಕಟ್ಟಡದ ರೀತಿ.'" ರಸಸಿದ್ಧಿ ಹಾಗೂ ವಿಚಾರಶಕ್ತಿಯ ಕ್ರಮಗಳನ್ನು ಬೇಂದ್ರೆಯವರು ರೂಢಿಸಿಕೊಂಡ ಬಗೆಯನ್ನು ಮಾಸ್ತಿಯವರು ವಿವರಿಸುತ್ತಾರೆ. ಒಂದು ಭವನ ಅಥವಾ ಸೌಧವನ್ನು ಹೇಗೆ ಅಡಿಪಾಯದಿಂದ ಅದರ ಮುಕುಟದವರೆಗೂ ಸುಭದ್ರತೆ, ಬಳಸಿದ ಸಲಕರಣೆಯ ಗುಣಮಟ್ಟ, ಆಕೃತಿ, ವಿನ್ಯಾಸ, ಅಂದ-ಚೆಂದ ಮತ್ತು ಅದು ಮನಸ್ಸಿಗೆ ನೀಡುವ ಆನಂದದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಮಿಸಲಾಗುತ್ತದೆಯೋ ಅದೇ ರೀತಿಯ ಎಚ್ಚರವನು ಕಾವ್ಯ ನಿರ್ಮಾಣದ ಹಂತದಲ್ಲಿ ಬೇಂದ್ರೆಯವರು ವಹಿಸುತ್ತಾರೆ. ಅಸಾಧಾರಣ ಶಿಲ್ಪಿಯೊಬ್ಬ

ಅಸಾಧಾರಣ ಮೂರ್ತಿಯನ್ನು ಕಲ್ಲಿನಲ್ಲಿ ಕೆತ್ತುವಂತೆ ಜನಭಾಷೆಯ ಸಂಪತ್ತಿನಿಂದಲೆ ಕಾವ್ಯಸಂಪತ್ತನ್ನು ಬೇಂದ್ರೆಯವರು ಕ್ರೋಢೀಕರಿಸಿದರು. 'ಗರಿ' ಸಂಕಲನದ ಮೊದಲ ಕವಿತೆ 'ಬೆಳಗು' ಜನಮಾನಸವನ್ನು ಗೆಲ್ಲುವುದು ಖಾತ್ರಿಯಾದ ಕೂಡಲೆ ಅವರ ಹಾದಿ ಸ್ವತಂತ್ರವಾಯಿತು. ಆದಿಪ್ರಾಸದ ಹಂಗು ದೂರಾಯಿತು.

ಹಳೆಯ ಕಾವ್ಯರೂಪಗಳಾದ ವಚನ, ತತ್ವಪದ, ದಾಸರಪದ, ಸರ್ವಜ್ಞ, ಶಿಶುನಾಳ ಶರೀಫ ಮುಂತಾದವರು ಗೀತೆಯ ರೂಪಕ್ಕೆ ದುಡಿದ ಪ್ರೇರಣೆಗಳನ್ನು ಇಟ್ಟುಕೊಂಡು ಷಟ್ಪದಿ, ಮಾತ್ರಾವೃತ್ತಗಳಲ್ಲಿ ಬೇಂದ್ರೆಯವರು ಪ್ರಯೋಗಗಳನ್ನು ಮಾಡುತ್ತ ಹೋದರು. 'ಗರಿ' ಸಂಕಲನದಲ್ಲಿಯೆ ನಾದ, ಲಯ, ಪ್ರತಿಮೆ, ರೂಪಕ, ಅನುಪ್ರಾಸ, ಅಂತ್ಯಪ್ರಾಸಗಳಿಂದ ಹಲವು ಕವಿತೆಗಳನ್ನು ಕಟ್ಟಿಕೊಟ್ಟರು. 'ಚಳಿಯಾಕೆ', 'ಓ ಹಾಡೇ!', 'ಯುಗಾದಿ', 'ಪಾತರಗಿತ್ತಿ ಪಕ್ಕ', 'ನನ್ನ ಕೈಯ ಹಿಡಿದಾಕೆ', 'ಗರಿ', 'ಕುಣಿಯೋಣು ಬಾ' ಮುಂತಾದ ಪದ್ಯಗಳು ಬದುಕಿನ ಪ್ರೇಮ ಮತ್ತು ನಿಸರ್ಗದೊಡನೆ ಅವರು ಸಾಧಿಸಿರುವ ತನ್ಮಯತೆಯನ್ನು ನವೀನ ಅಭಿವ್ಯಕ್ತಿಯಲ್ಲಿ ಸಾಬೀತುಪಡಿಸಿದವು.

'ಗರಿ' ಸಂಕಲನದ ಮೂಲಕ ಅವರು ಮಾಡಿದ ಪ್ರಯೋಗಗಳು ಕುತೂಹಲಕಾರಿಯೆನಿಸಿ ಜನಮಾನಸವನ್ನು ಅವರು ಒಮ್ಮೆಲೆ ಮುಟ್ಟುವಲ್ಲಿ ಯಶಸ್ವಿಯಾದರು. ಪ್ರಾಸದಲ್ಲಿ ಅವರು ಸಾಧಿಸಿದಷ್ಟು ಪರಿಣತಿಯನ್ನು ಪ್ರಾಯಶಃ ಬೇರಾರೂ ಸಾಧಿಸಿರಲಾರರು. ಅವರ ಪ್ರಾಸದ ಪರಿಣತಿಯ ಹಿಂದೆ ಸೃಜನಶೀಲತೆ ಅಡಗಿರುವುದರಿಂದ ಕೃತಕತೆ ಸಮೀಪ ಸುಳಿಯಲಾರದು. ಜನಪದವನ್ನು ಹಾಗೂ ಅಭಿಜಾತತೆಯನ್ನು ಈಡು ಮಾಡಿಕೊಳ್ಳುವ, ತನ್ನ ತೆಕ್ಕೆಗೆ ತೆಗೆದುಕೊಳ್ಳುವ ತಾಕತ್ತನ್ನು ಅವರ ಭಾಷೆ ಪಡೆದಿದ್ದರಿಂದ ಅಭಿವ್ಯಕ್ತಿ ಅನನ್ಯವಾಗಲು ಸಾಧ್ಯವಾಯಿತು. ಕಾವ್ಯಸೌಂದರ್ಯದಿಂದ, ಭಾಷೆಯ ಶಕ್ತಿಯಿಂದ, ರೂಪಕ ಪ್ರತಿಮೆಗಳ ವಿಜೃಂಭಣೆಯಿಂದ ಅವರ ಕಾವ್ಯ ಸಮೃದ್ಧವಾಗಿದೆ. ಕವಿತೆಯ ವಾಚ್ಯಾರ್ಥ, ಕವಿಯ ಭಾವಾರ್ಥ, ಕವಿಯು ಕಾವ್ಯಕ್ಕೆ ಕೊಟ್ಟ ಸ್ವರೂಪ, ಸಹೃದಯನ ಸ್ಪಂದನೆಗಳ ಜೊತೆಗೆ ಓದುಗನ ಹೃದಯಶಕ್ತಿ ಜಾಗೃತವಾಗಬೇಕೆಂದು ಬೇಂದ್ರೆ ಬಯಸುತ್ತಾರೆ. 'ಕವಿಯ ಪದಪದಕ್ಕೂ, ಅಕ್ಷರಕ್ಷರಕ್ಕೂ ಏನು ಧ್ವನಿ ಸಾಮರ್ಥ್ಯವಿದೆಯೋ ಅದನ್ನು ಒಪ್ಪಿಸಬೇಕು. ಇಷ್ಟೆಲ್ಲ ಮಾಡುವದಗತ್ಯವೇ ಎಂದು ಕೆಲವರು ಕೇಳಬಹುದು. ನಾವು ತಿನ್ನುವ ಆಹಾರವು ರಕ್ತ, ವೀರ್ಯ, ತೇಜವಾಗಬೇಕಾದರೆ, ನಮ್ಮ ದೇಹಗತವಾದ ಲಾಲಾರಸ, ಜಠರರಸ, ಪಿತ್ತರಸ, ಸ್ವಾದುಪಿಂಡರಸ, ಅಂತ್ರರಸಗಳು ಹೇಗೆ ತಮ್ಮ ಕಾರ್ಯ ಮಾಡಬೇಕಾಗುವುದೋ ಹಾಗೆಯೇ ಹೃದಯದಿಂದ ಬಂದ ಕವಿತೆ ಹೃದಯಕ್ಕೆ ಸೇರಬೇಕಾದರೆ, ಭಾವುಕನ ಹೃದಯ ಶಕ್ತಿಯೂ ಕಾರ್ಯ ಮಾಡಬೇಕು. ಇಷ್ಟು ತಂತ್ರಗಳೇಕೆ ಎನ್ನಬಹುದು. ನಮ್ಮ ಜೀವವು ಹೊಸದೊಂದು ಕಾಣ್ಕೆ ಕಾಣಬೇಕಾದರೆ, ಅಭೂತಪೂರ್ವ ಸ್ಪರ್ಶ ಅನುಭವಿಸಬೇಕಾದರೆ, ಅದ್ಭುತ ಜೀವನದ ಉಸಿರನ್ನಾಡಿಸಬೇಕಾದರೆ ಈ ತಂತ್ರಗಳನ್ನು ಮಾಡಲೇಬೇಕು. ತಪಿಸದೆ ಪಾಕವಿಲ್ಲ. ಪರಿಪಾಕವಿಲ್ಲದೆ ಪರಿಣಾಮವಿಲ್ಲ. ಈ ಮಾತನ್ನು ಕಾಮಶಾಸ್ತ್ರವೇನು, ಕಾವ್ಯಶಾಸ್ತ್ರವೇನು, ಅನುಭಾವಶಾಸ್ತ್ರವೇನು ಎಲ್ಲವೂ ಸಾರಿ ಸಾರಿ ಹೇಳುವವು. ಕಾವ್ಯದ ರುಚಿ ತಿಳಿಯಬೇಕಾದಸೆ ಹೃದಯದಲ್ಲಿಯೂ ಪರಿಪಾಕ ಬೇಕು.'[೮೯] ಸಹೃದಯ ಕೂಡ ಕವಿಯನ್ನು

ಸ್ವೀಕರಿಸಬೇಕಾದರೆ ಸಿದ್ಧನಾಗಿರಬೇಕು, ಆ ಅನುಭವಕ್ಕಾಗಿ ಕಾದು ಕುಳ್ಳಿರಬೇಕು, ಆ ಅನುಭೂತಿಗಾಗಿ ತಹತಹಿಸುತ್ತಿರಬೇಕು ಎಂದು ಬೇಂದ್ರೆಯವರು ಹೇಳುವ ಮೂಲಕ ಕಾವ್ಯದ ಪ್ರಾಥಮಿಕ ವಾತಾವರಣ ಇರುವುದು ಅವಶ್ಯವೆನ್ನುತ್ತಾರೆ.

೭.೬ ಶಬ್ದ, ಧ್ವನಿ, ಪ್ರಾಸ, ಪುನರುಕ್ತಿಗಳ ಸಂಯೋಜನೆ :

ಆಯ್ದ ಪದಪುಂಜಃ, ಆಕಾರ,ಶಬ್ದ, ಧ್ವನಿ, ನಾದ, ರೂಪಕ, ಪ್ರತಿಮೆಗಳನ್ನು ಬೇಂದ್ರೆಯವರು ಉಪಯೋಗಿಸುವ ಮೂಲಕ, ಅವುಗಳಿಗೆ ಹೆಚ್ಚಿನ ಶಕ್ತಿ ತುಂಬುವ ಮೂಲಕ, ಲೋಕದ ಅನುಭವವನ್ನು ತಮ್ಮ ಕಾವ್ಯದ ಕುಲುಮೆಯಲ್ಲಿ ಕುದಿಸುವ ಮೂಲಕ ಪರಿಪೂರ್ಣವಾದ ಪಾಕವನ್ನು ಸಿದ್ಧಪಡಿಸುತ್ತಾರೆ. ನಮಗೆ ಗೊತ್ತಿದ್ದರೂ ಅದುವರೆಗೂ ಕಾವ್ಯವಲ್ಲವೆಂದು ತಿಳಿದಿದ್ದ ನಮಗೆ ಅದೇ ಶಬ್ದ, ಧ್ವನಿ, ಪ್ರಾಸಗಳ ಕಾವ್ಯವನ್ನು ಬಗೆದು ಕೊಟ್ಟು ಅಚ್ಚರಿ ಹುಟ್ಟಿಸುತ್ತಾರೆ.

ಕಬ್ಬಿನ ಗಣೆ ಡೊಂಕು, ಅದರ ಹಾಲ ಡೊಂಕೆ

ರಸಿಕಾ ಪೇಳೊ;

ಹುಬ್ಬಿನ ಗೆರೆ ಡೊಂಕು, ಕಣ್ಣ ನೋಟವು ಡೊಂಕೆ

ರಸಿಕಾ ಪೇಳೊ;

ಹಲ್ಲ ಸಾಲದು ಡೊಂಕು, ಬಿದ್ದ ಕಿರಣವು ಡೊಂಕೆ

ರಸಿಕಾ ಪೇಳೊ;[೪೬]

* * *

ಪಾತರಗಿತ್ತೀ ಪಕ್ಕಾ

ನೋಡಿದೇನಽ ಅಕ್ಕಾ

ಹಸಿರು ಹಚ್ಚಿ ಚುಚ್ಚಿ

ಮೇಲಽಕರಿಸಿಣ ಹಚ್ಚಿ[೪೭]

ಬದುಕಿನ ಪಾಠಗಳನ್ನು ಕವಿತೆ ಮಾಡುವಾಗ ಲೌಕಿಕದ ಶಬ್ದರೂಪಗಳಿಂದಲೆ ಕವಿಯ ಜಗತ್ತನ್ನು ತೋರಿಸುತ್ತ ಹೋಗಬೇಕೆಂಬುದು ಅವರ ಅಪೇಕ್ಷೆಯಾಗಿತ್ತು. ಸಹೃದಯ ಕೂಡ ಕವಿತೆಯ ಶಬ್ದ, ಧ್ವನಿಗೆ ಅರ್ಥ ಕೊಡಬೇಕು ಎಂಬ ಅವರ ಮಾತನ್ನು ಈಗಷ್ಟೆ ನಾವು ನೋಡಿದ್ದೇವೆ. ಅಂತಹ ಒಂದೆರಡು ಉದಾಹರಣೆಗಳನ್ನು ಕೆ.ವಿ. ತಿರುಮಲೇಶ ಅವರು ಕೊಡುತ್ತ ಬೇಂದ್ರೆ ಕಾವ್ಯದಲ್ಲಿರುವ ಅಸಾಧಾರಣತೆಯನ್ನು ಸಿದ್ಧಮಾಡುತ್ತಾರೆ. 'ಬೇಂದ್ರೆಯವರ ಪ್ರಾಸ, ಶಬ್ದಗಳ ಕಡೆ ನಮ್ಮ ಗಮನ ಸೆಳೆಯುತ್ತದೆ. ಹೀಗೆ ಗಮನ ಸೆಳೆಯುವ ಮೂಲಕ ನಾವು ಇದುವರೆಗೆ ಕಾಣದ, ಕಂಡರೂ

ಏನೂ ಅನಿಸದ, ಸಂಬಂಧಗಳನ್ನು ಕವಿ ತೋರಿಸಿಕೊಡುತ್ತಾರೆ ಎಂದರೆ ಒಂದು ಪದ ಇನ್ನೊಂದರ ಮೇಲೆ ಬೆಳಕು ಚೆಲ್ಲುತ್ತದೆ. ಅದರ ಯಾವುದೋ ಮರೆಯಾದ ಅರ್ಥವೊಂದನ್ನು ಧ್ವನಿಯೊಂದನ್ನು ಹೊರಹೊಮ್ಮಿಸುತ್ತದೆ; ಅಥವಾ ಎರಡು ಪದಗಳು ಸೇರಿ ಮೂರನೆಯದೊಂದನ್ನು ನಮ್ಮ ಮನಸ್ಸಿನಲ್ಲಿ ಮೂಡಿಸುತ್ತವೆ.

ರೇಶಿಮೆ ಪಕ್ಕ ನಯ
ಮುಟ್ಟಲಾರೆ ಭಯ

ಮೊದಲನೆ ಸಾಲು ಪಾತರಗಿತ್ತಿಯ ಪಕ್ಕ ರೇಶಿಮೆಯಷ್ಟು ನಯ ಅನ್ನುತ್ತದೆ. ಆದರೆ ಈ 'ನಯ'ವೆನ್ನುವ ಪದದ ಪೂರ್ತಿ ಅರ್ಥ ಸ್ಫುರಿಸುವುದು ಎರಡನೆ ಸಾಲಿನ 'ಭಯ' ಎನ್ನುವ ಪದದೊಂದಿಗೆ ಮಾತ್ರ. ಇಲ್ಲಿ 'ನಯ'ಕ್ಕೆ ಪ್ರಾಸವಾಗಿ ಬಂದಿರುವ 'ಭಯ' ನಿಜಕ್ಕೂ ಭಯವನ್ನು ಸೂಚಿಸದೆ ಪಾತರಗಿತ್ತಿ ಪಕ್ಕದ ನಯವನ್ನೇ ಇನ್ನೊಂದು ರೀತಿಯಲ್ಲಿ ಹೇಳುತ್ತದೆ.'[೪೮] ಹೀಗೆ ಕಾವ್ಯದಲ್ಲಿ ಹಲವು ಅರ್ಥಗಳನ್ನು ಹೊಳೆಯಿಸುವುದು ಬೇಂದ್ರೆಯವರಿಗೆ ನೀರು ಕುಡಿದಷ್ಟು ಸುಲಭವಾಗಿತ್ತು.

ಮೂವತ್ತು ಮೂರು ಕೋಟ, ಮೂವತ್ತು ಮೂರು ಕೋಟಿ!
ಬಯಕೆಗಳು ಬಸಿರುಗಳು ಹಡೆದದ್ದು ಹಿಂಗಿದ್ದು
ಮೂವತ್ತು ಮೂರು ಕೋಟಿ!
ಸೂಲಗಳು
ಮೂವತ್ತು ಮೂರು ಕೋಟಿ![೪೯]

ಅಗಾಧ ಜನಸಂಖ್ಯೆಯೆನ್ನುವುದು ವರವಾಗದೆ ಶಾಪವಾಗಿರುವ ವ್ಯಂಗವನ್ನು ಪುನರುಕ್ತಿ, ಶ್ಲೇಷೆಗಳ ಮೂಲಕ ಅವರು ಮಂಡಿಸುತ್ತಾರೆ.

ಮಾರ್ಗ ಮತ್ತು ದೇಸಿಯನ್ನು ಸಮನ್ವಯಗೊಳಿಸುವ, ಅವುಗಳನ್ನು ಕಲಾತ್ಮಕ ಹೆಣಿಗೆಯನ್ನಾಗಿ ಮಾರ್ಪಡಿಸಿಕೊಳ್ಳುವ ಕಲೆ ಪಂಪನಿಂದಲೆ ಪ್ರಾರಂಭವಾಗಿದೆ. ಅಭಿವ್ಯಕ್ತಿಯನ್ನು ಮತ್ತಷ್ಟು ಸುಂದರವಾಗಿಸುವ ಶಕ್ತಿ ನಿಸರ್ಗ ಮತ್ತು ಮನುಷ್ಯನ ನಡುವಿನ ಒಲವಿನ ಸಂಬಂಧಕ್ಕಿದೆ. ಪ್ರಕೃತಿ ಮತ್ತು ಮಾನವನ ನಡುವೆ ಇರುವ ಸಾವಯವ ಸಂಬಂಧದ ಕುರಿತು ಪಂಪನ ಕಾವ್ಯ ಹೇಳುವುದನ್ನು ಪ್ರೊ. ಕುರ್ತಕೋಟಿಯವರು ಹೀಗೆ ವಿಶ್ಲೇಷಿಸುತ್ತಾರೆ :

ಬಗೆ ಪೊಸದಪ್ಪುದಾಗಿ ಮೃದುಬಂಧದೊಳೊಂದುವದೊಂದಿ ದೇಸಿಯೊಳ್
ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯಮೊ
ಪ್ಪುಗುಮೆಳಮಾವು ಕೆಂದಳಿರ ಬಿಣ್ಪೊರೆಯಿಂ ಬಳಲ್ದು ತುಂ-
ಬಿಗಳನೆ ತುಂಬಿ ಕೋಗಿಲೆಯ ಬಗ್ಗಿಸೆ ಸುಗ್ಗಿಯೊಳೊಪ್ಪವಂತೆವೋಲ್

ಈ ಪದ್ಯದ ಮೊದಲ ಎರಡು ಸಾಲುಗಳಲ್ಲಿ ಕಾವ್ಯ ಪ್ರಯತ್ನದ ಕಷ್ಟವಿದೆ... ಭಾವ, ವಿಚಾರ, ಅನುಭವ ಇವೆಲ್ಲವನ್ನು ಒಳಗೊಂಡ ಹೊಸ ಬಗೆ ಮೃದುಬಂಧದಲ್ಲಿ ಮೂಡಿಬರುವುದಷ್ಟೇ ಅಲ್ಲದೆ ದೇಸಿ ಮಾರ್ಗಗಳ ಒಪ್ಪಿಗೆಯನ್ನು ಪಡೆದು ಬರಬೇಕು... ಎಳಮಾವು, ಕೋಗಿಲೆ, ತುಂಬಿ ಇವುಗಳ ಸಂಬಂಧ ಸಾಹಚರ್ಯದ ಸಂಬಂಧ. ಸಾಹಚರ್ಯವೆಂದರೆ ಐಕ್ಯವಲ್ಲ. ಕೆಂದಳಿರ ಬಿಣ್ಪೂರೆಯಿಂದೇ ಮಾಮರ ಬೆಳೆಸಿಕೊಳ್ಳುವುದು. ಕೋಗಿಲೆ ಮತ್ತು ದುಂಬಿಗಳನ್ನು ಕರೆಯುತ್ತದೆ. ಪಂಪ ಇದೆಲ್ಲವನ್ನೂ ಒಟ್ಟುಗೂಡಿಸುವ ವಸಂತ ತತ್ವದ ಹುಡುಕಾಟದಲ್ಲಿದ್ದಾನೆ.'[೫೦]

ಪ್ರಕೃತಿಯಲ್ಲಿ ಕೇಳಿಬರುವ ಸಹಮತದ, ವೈವಿಧ್ಯದ, ಜೀವಚೈತನ್ಯದ ಗಾನ ಮನುಷ್ಯನ ಎದೆಯ ಹಾಡಿನಲ್ಲಿಯೂ ಬರಬೇಕು ಎಂದು ಕನ್ನಡದ ಮೇರು ಕವಿಗಳು ಆ ದಿಸೆಯಲ್ಲಿ ದುಡಿದರು. ಬೇಂದ್ರೆಯವರು ಅದಕ್ಕೆ ಹೊರತಾಗಿರಲಿಲ್ಲ. ತಮ್ಮ ಅಭಿವ್ಯಕ್ತಿಗೆ ಮಾರ್ಗ ಮತ್ತು ದೇಸಿಗಳೆರಡನ್ನು ಅವರು ಅನುಪಮವಾಗಿ ಜೋಡಿಸಿಕೊಂಡರು. ಮಣ್ಣು, ನೀರು, ಗಾಳಿಯಲ್ಲಿ ಕಾವ್ಯವನ್ನು ಅದ್ದಿ ಬಾನಿನ ಬೆಳಕಿಗೂ ಅದನ್ನು ಹಿಡಿದರು. ಒಮ್ಮೊಮ್ಮೆ ಏಳು ಸಾಲುಗಳ ಎರಡು ನುಡಿ ಮಾಡಿ ಹೊಸ ಬಗೆಯ ಸುನೀತ ರಚಿಸಿದರು. ಅಂತ್ಯಪ್ರಾಸಕ್ಕೆ ಕೆಚ್ಚು ತುಂಬಿದರು.

ನರಬಲಿ ನರಮೇಧವು ಕೇಳು
ಅಶ್ವಮೇಧಕೂ ಸರಿಮೇಲು
ಇದುವೆ ಕಾಳಿಯ ಪೂಜೆಯು ಶುದ್ಧ!
ಇದಕೇ ಹುಂಬರು ಎಂಬರು ಯುದ್ಧ![೫೧]

ಅದರ ಜೊತೆಗೆ ವಸ್ತುವಿನ ನಯ-ನಾಜೂಕು, ಪ್ರೇಮ-ಕಾಮ, ಅವರ ಅಭಿವ್ಯಕ್ತಿಯನ್ನು ಸಮರ್ಥವಾಗಿ ನಿರ್ವಹಿಸುತ್ತಿತ್ತು.

ತಂದೇನಿ ನಿನಗೆಂದ
ತುಂಬಿ ತುರುಬಿನವಳ
ಕಾಮಕಸ್ತೂರಿಯಾ ತೆನಿಯೊಂದ
ಅದನs ನೀ ಮುಡಿದಂದ
ಮುಡಿದಂಥ ಮುಡಿಯಿಂದ
ಗಾಳಿಯ ಸುಳಿಯೊಂದ
ಬಂದೆನಗ ತಗಲಿದಂದ
ತಣಿತಣಿವಂದ
ಈ ಮನಕ'[೫೨]

ಕವಿತೆಯ ಸೌಂದರ್ಯವನ್ನು ಹೆಚ್ಚಿಸುವುದಷ್ಟೆ ಅಲ್ಲದೆ ಕವಿತೆಯ ಧ್ವನಿಯನ್ನು ಹೆಚ್ಚಿಸುವ ಕೆಲಸವನ್ನು ಪ್ರಾಸದ ರೂಪಗಳು ನಿರ್ವಹಿಸುವುದರಿಂದ ಬೇಂದ್ರೆಯವರ ಅಭಿವ್ಯಕ್ತಿ ಮಹತ್ವ ಪಡೆದುಕೊಳ್ಳುತ್ತದೆ. ಕಾವ್ಯವಸ್ತುವಿಗೆ ಹೊಂದಿಕೆಯಾಗುವ ರೂಪವನ್ನು ಅವರ ಅಪಾರ ಅನುಭವ ನಿರ್ದೇಶಿಸುತ್ತದೆ.

ನಸುಕು ಹರಿಯುವುದನ್ನು, ಉಷೆಯ ಹಿಂದೆ ಹಿಂದೆ ರವಿ ಬರುವುದನ್ನು, ಬೆಳಗಿನಲ್ಲಿ ಬೆರತು ಒಂದಾಗುವುದನ್ನು 'ಉಷೆ ತಂದಾಳಿಕೋ'[೫೩] ಎನ್ನುವ ಪದ್ಯದಲ್ಲಿ ಬೇಂದ್ರೆ ತೋರಿಸುತ್ತಾರೆ. ನಿಸರ್ಗ ವಿಕಸಿಸುವುದನ್ನು ಆ ಶಬ್ದಪ್ರಾಸಗಳಲ್ಲಿ ಅಕ್ಷರಶಃ ಕಾಣಬಹುದಾಗಿದೆ.

ಬೆಳಗಿನ್ಯಾಗ ಬೆರತು ಆಗ್ಯಾರೊಂಽದ
ಗುಲಾಬಿ ತೋರ್‍ಯಾನ ಲಜ್ಜ
ಹಕ್ಕಿ ನುಡಿಸ್ಯಾವ ಗೆಜ್ಜ
ಬೆಳಕು ಹಾಕ್ಯಾವ ಹೆಜ್ಜ
ಅವರು ಬರೋಽದನಽ ಬಲು ಚೆಂಽದ
ಜಗಕ ಸೂರಿಸೂರಿ ಆನಂದ!

ಆಡುಮಾತಿನ ಸವಿಯಲ್ಲಿ ಲಜ್ಜ, ಹೆಜ್ಜ, ಗೆಜ್ಜ ಶಬ್ದಗಳು ಸಹಜವಾಗಿ ಹೊಂದಿಕೊಳ್ಳುವಂತೆ ಮಾಡಿ ತೃಪ್ತಿಯ ಅನುಭವ ಉಂಟು ಮಾಡುತ್ತಾರೆ.

'ಈ ಸಲದ ಸುಗ್ಗಿ'[೫೪] ಎನ್ನುವ ಕವಿತೆ ಕೂಡ ಬೇಂದ್ರೆಯವರು ನಿಸರ್ಗವನ್ನು ಅನುಭವಿಸಿದ ಪರಿಯನ್ನು ವರ್ಣಿಸುತ್ತದೆ.

ಪ್ರತಿ ವರುಷದ ಹಾಗಲ್ಲವು ಈ ಸಲದೀ ಸುಗ್ಗಿ ।
ಏನರಳಿದೆ ಗಿಡಮರ ಬಳ್ಳಿಗಳೆದೆ ಹಿಗ್ಗಿ ॥
ಎಸಳೆಸಳಿನ ಸಿರಸಲ ಚವುರಿಸುವುದು ಮೈಯನ್ನೆ ।
ಬೀಸಲು ಮೈನವಿರೇರಿದ ನೇರಿಳೆ ನವಕನ್ನೆ ॥

ತೋಟದ ಚಿಂವ್ ಚಿಂವ್ ಗುಬ್ಬಿ, ಬೇವಿನ ಹೂವು, ಕಕ್ಕೆ ಜಾತಿಯ ಮರದ ಬಂಗಾರ ಬಣ್ಣದ ಹೂವು, ಸಿರಸಲಗಿಡದ ಎಸಳು, ಮುಖ ಎತ್ತಿ ನೋಡುತ್ತಿರುವ ಪಾರಿಜಾತ, ಮುಂಗುಡಿ ಬಿಟ್ಟಿರುವ ಸಂಪಿಗೆ ಹೀಗೆ ನಿಸರ್ಗದ ಅರಳುವಿಕೆ ಕಾವ್ಯದಲ್ಲಿ ಸಂಭವಿಸುತ್ತದೆ. ಬೂದುಬಣ್ಣದ ನೇರಿಳೆಯು ಹಣ್ಣಿಗೆ ಬಂದಿರುವುದನ್ನು ಬೇಂದ್ರೆಯವರು ವರ್ಣಿಸುವ ರೀತಿಯಂತೂ ಮೋಹಕವಾಗಿದೆ. ಮೈನವಿರೇರಿರುವ ಹರಯದ ಹೆಣ್ಣಿಗೆ ನೇರಿಳೆಯನ್ನು ಹೋಲಿಸಿ ಲೌಕಿಕವನ್ನು ಮೆರೆಸುತ್ತಾರೆ. ಪರಿಚಿತ ಅಲಂಕಾರಗಳಿಂದ ಸೊಬಗು ನೀಡುತ್ತಾರೆ. ಸೌಂದರ್ಯದ ಜೊತೆಗೆ ಭಕ್ತಿಯನ್ನು, ಧ್ಯಾನವನ್ನು ತಂದಿಡುತ್ತಾರೆ.

ತೊಟ್ಟುಚ್ಚುತ ತೊಟ್ಟಿಡುತಿದೆ ಮೊಗ್ಗನು ಹೂ ಹಾಸಿ ।
ಹುಲಗಿಲು ಗಾನನಿಮಗ್ನ ಧ್ಯಾನದ ಹೊಸ ದಾಸಿ ॥

ತೊಟ್ಟಿದ್ದುದು ಮೊಗ್ಗಾಗಿ, ಹೂವಾಗಿ ಉದುರಿ ಹಾಸಿಗೆ ಹಾಸಿದಂತೆ ಹೂ ಬಿದ್ದಿರುವ ನಿಸರ್ಗ; ಹೊಸ ಮೊಗ್ಗಿಗೆ ಕಾವು ಕೊಡುತ್ತಿರುವ ನಿಸರ್ಗ; ಹುಲಗಿಲು ಹುಲ್ಲಿನ ಗಾನದಲ್ಲಿ ತಲ್ಲೀನವಾಗಿರುವ ನಿಸರ್ಗ ಹೀಗೆ ನಿಸರ್ಗದ ಹಲವು ಚಿತ್ರಗಳು, ಸುಗ್ಗಿಯ ವಿವರಗಳು ತಾ ಮುಂದು, ನಾ ಮುಂದೆ ಎಂದು ಓದುಗರ ಮುಂದೆ ಹರಡಿಕೊಳ್ಳುತ್ತವೆ. ಹಾಸಿ, ದಾಸಿ ಎನ್ನುವ ಪದಗಳು ಕೇವಲ ಪ್ರಾಸಕ್ಕಾಗಿ ಬಂದಿರದೆ ತೊಟ್ಟು ಕಳಚಿಕೊಳ್ಳುವ, ಬಂಧನದಿಂದ ಬಿಡಿಸಿಕೊಳ್ಳುವ, ಪ್ರಕೃತಿಯು ದಾಸಿಯಾಗುವ, ಚೈತನ್ಯಕ್ಕೆ ನಿಸರ್ಗ ಗುಲಾಮಳಾಗುವ ಹಲವು ಅರ್ಥ ಸಾಧ್ಯತೆಗಳನ್ನು ಈ ಕವಿತೆ ತನ್ನಲ್ಲಿ ಹುದುಗಿಸಿಕೊಂಡಿದೆ.

ಕೊಳಲ ಗುಬ್ಬಿ ಕರೆಯುತ್ತಿವೆ ತೋಟಕೆ ಬಾ ಹೊರಗೆ ।
ಬೇವಿನ ಹೂ ನೆರಳಿನಲ್ಲಿ ಸವಿನೋಟದೊಳದೊ ನೆರೆಗೆ ॥

ಪ್ರಕೃತಿ ತನ್ನ ನಾದದಿಂದ ಹಾಗೂ ವೈವಿಧ್ಯತೆಯಿಂದ ಮನುಷ್ಯನನ್ನು ಅದರೊಡನೆ ಒಂದಾಗಲು, ಸಮೀಪಕ್ಕೆ ಬರಲು ಕರೆಯುತ್ತಿದೆ. ತಾರುಣ್ಯದಿಂದ, ಆನಂದದಿಂದ, ಸುಗ್ಗಿಯಿಂದ ಸಿದ್ಧವಾಗಿರುವ ಅದು ಅವನಲ್ಲಿಯೂ ಅದನ್ನೆ ಬಯಸುತ್ತದೆ. ಅದೆ ದೈವಿ ಅನುಭೂತಿಯ ಮೊದಲ ಹೆಜ್ಜೆಯಾಗಿದೆ. ಗಾಂಧಿ ವ್ಯಕ್ತಿತ್ವ ಪಡೆದಿದ್ದು ಆಧ್ಯಾತ್ಮಿಕ ಆಯಾಮಗಳನ್ನು ಬೇಂದ್ರೆಯವರು ಚಿತ್ರಿಸುವುದು ಹೀಗೆ :

ಕೀರ್ತಿದೇಹಿಗೆಲ್ಲಿಹುದು ಮರಣ? ಸತ್ಕೀರ್ತಿಯೊಂದು ಬೆಳಕು
ಕಳೆದ ಬಟ್ಟೆ ತೊಳೆದಂತೆ ಹರಿದು ಹೋಗುವುದು ಮಲೆತ ಕೊಳಕು
ಹಗಲು ಬಂದೀತು ಹಗಲು ಹೋದೀತು ಚಿಕ್ಕೆ ಬೆಳಗುತಿಹುದು
ಜೀವ ಜೀವ ಸಂಗ್ರಾಮಗಳಲಿ ಆ ಶಾಂತಿ ಮೊಳಗುತಿಹುದು[೩೫]

'ಅಮರ ಮರಣ' ಹೆಸರಿನ ಗಾಂಧೀಜಿಯವರನ್ನು ಕುರಿತ ಬೇಂದ್ರೆಯವರ ಈ ಪದ್ಯ 'ಸೂರ್ಯಪಾನ' ಸಂಕಲನದಲ್ಲಿದೆ. ಚಿಕ್ಕೆಯಾಗಿ ಬೆಳಗುವುದೆಂದರೆ ಆಧ್ಯಾತ್ಮಿಕ ಆಯಾಮವನ್ನು ಪಡೆದ ಹಂತದಲ್ಲಿ ಹಾಗೂ ಚೈತನ್ಯದ ಕೀರ್ತಿಯೊಳಗೆ ಒಂದಾಗಿರುವಲ್ಲಿ ಎಂಬ ಅರ್ಥವಿದೆ. ಕಣ್ಣಿಗೆ ಕಾಣುವ ಹಗಲಿನ ಬೆಳಕು ಬರುತ್ತದೆ, ಹೋಗುತ್ತದೆ. ಆದರೆ ಗಾಂಧಿಯವರು ಎಂದೆಂದೂ ಬೆಳಗುತ್ತಿರುವ, ಪ್ರಕಾಶಿಸುತ್ತಿರುವ ಬೆಳಕಾಗಿದ್ದಾರೆ, ಚಿಕ್ಕೆಯಾಗಿದ್ದಾರೆ ಎಂಬುದು ಬೇಂದ್ರೆ ಅಭಿಮತವಾಗಿದೆ. ರಗಳೆ ಜಾತಿಯ, ಮೇಘದೂತ ಛಂದಸ್ಸು ಎಂದು ಹೆಸರಾಗಿರುವ ೩, ೩, ೨ ರ ಮೂರು ಗಣಗಳುಳ್ಳ ಎಂಟು ಮಾತ್ರೆಯ ಮೂರು ಗಣ ಮತ್ತು ಕೊನೆಗೆ ಗುರುವಿರುವ ಛಂದಸ್ಸಿನಲ್ಲಿ ಈ ಪದ್ಯವಿದೆ. ನಾದ, ಲಯಗಳಿಂದ ತುಂಬಿ ತುಳುಕುವ, ಬೇಂದ್ರೆಯವರಿಗೆ ತುಂಬ ಪ್ರಿಯವಾಗಿರುವ ಈ ಛಂದಸ್ಸು ಅವರಿಗೆ

ಪಂಪನಿಂದ ಬಂದಿರುವ ಸಾಧ್ಯತೆಯನ್ನು ಡಾ. ಗಿರಡ್ಡಿ ಗೋವಿಂದರಾಜ ಅವರು ಗುರುತಿಸಿದ್ದಾರೆ. 'ಪಂಪನ ಛಂದಸ್ಸು ಹರಿಹರನ ರಗಳೆಗಳಲ್ಲಿಯಂತೆ ಅಂತ್ಯಪ್ರಾಸವಿದ್ದರೂ ಸಾಲಿನ ಕೊನೆಯಲ್ಲಿ ನಿಲ್ಲದೇ ಮುಂದೆ ಮುಂದೆ ಓಡುತ್ತದೆ. ಬೇಂದ್ರೆಯವರ ಛಂದಸ್ಸಿನಲ್ಲಿ ಪ್ರತಿಸಾಲಿನ ಕೊನೆಯಲ್ಲಿ ನಿಲುಗಡೆ ಇದೆ. ಈ ವ್ಯತ್ಯಾಸಕ್ಕೆ ಮುಖ್ಯ ಕಾರಣ ಬೇಂದ್ರೆಯವರ ಛಂದಸ್ಸಿನಲ್ಲಿ ಮೂರು ಗಣಗಳ ಕೊನೆಯಲ್ಲಿ ಹೆಚ್ಚಿನದಾಗಿ ಸೇರುವ ಗುರು ಎಂದು ಕಾಣುತ್ತದೆ. ಅದೇನೇ ಇದ್ದರೂ, ಬೇಂದ್ರೆಯವರಿಗೆ ಇದು ಅತ್ಯಂತ ಪ್ರಿಯವಾದ ಛಂದಸ್ಸೆಂಬುದಂತೂ ನಿಜ. ಇದರ ಲಯ ಗುಂಗು ಹಿಡಿಸುವಂಥದು. ಈ ಲಯದಲ್ಲಿ ಬೇಂದ್ರೆಯವರು ಹಲವಾರು ಕವಿತೆಗಳನ್ನು ಬರೆದಿದ್ದಾರೆ. 'ಮೇಘದೂತ', 'ಹೃದಯಸಮುದ್ರ', 'ಜೋಗಿ' (ಗಂಗಾವತರಣ), 'ಭಾವದೀಪ' (ಉತ್ತರಾಯಣ), 'ಆನಂದ ಲಹರಿ' (ಮುಕ್ತಕಂಠ), 'ಗಾಯತ್ರೀಸೂಕ್ತ', 'ಕಲ್ಪವೃಕ್ಷ ವೃಂದಾವನಗಳಲಿ' (ಹಾಡು-ಪಾಡು) ಇತ್ಯಾದಿ. ಹೆಚ್ಚಾಗಿ ಆಧ್ಯಾತ್ಮಿಕ, ಅನುಭಾವಿಕ ಮತ್ತು ಪ್ರಾರ್ಥನಾ ಕವಿತೆಗಳಲ್ಲಿ ಈ ಛಂದಸ್ಸನ್ನು ಬಳಸಲಾಗಿದೆ.'[೫೬]

೭.೭ ಲೌಕಿಕದ ಶಬ್ದಗಳಿಂದ ಅಲೌಕಿಕದ ಅರ್ಥರೂಪ :

'ಆನಂದ ಲಹರಿ'[೫೭] ಪದ್ಯದ ಕೆಲ ಸಾಲುಗಳನ್ನು ಅವರ ಅನುಭಾವದ ಅನುಭವದ ಉದಾಹರಣೆಯನ್ನಾಗಿ ನೋಡಬಹುದು.

ಈ ಹಗಲು ಬೆಳಗುವೆನು ಎಂದು ಹಣತೆಯೊಂದೊತ್ತಿ ಎತ್ತಲಹುದೆ?
ಬೆಳುದಿಂಗಳಲ್ಲಿ ಬಿಸಿಗಲ್ಲ ನೀಡಿ ತಿಂಗಳನು ತಣಿಸಬಹುದೆ?
ಆ ಕಡಲು ತುಂಬಲೆಂದೆನುತ ಹೊಳೆಯು ಹರಿಹರಿವುದೇನು ಹುಚ್ಚು!
ಏ ಮಾತೆ, ನಿನ್ನನ್ನೇ ನಿನ್ನ ಮಾತಿನಲಿ ಹೊಗಳಲೇನು ಹೆಚ್ಚು?

ನಮ್ಮ ಎದೆಯಲ್ಲಿರುವುದು ಹೊರಗಡೆ ಕಾಣುವ ನಿಸರ್ಗದಲ್ಲಿನ ಉಪ್ಪುನೀರಿನ ಸಾಗರವಲ್ಲ. ನಮ್ಮ ಒಡಲನ್ನೆ ನೆಲೆ ಮಾಡಿಕೊಂಡಿರುವ ಹೃದಯ ಸಮುದ್ರದ ಸೆಲೆಯನ್ನು. ಸೆಲೆ ಸಿಗುವಲ್ಲಿ ಒಡೆದು ಕುಡಿಯಬೇಕೆಂಬ ಆಶಯ ಅವರ 'ಹೃದಯ ಸಮುದ್ರ' ಎಂಬ ಕವಿತೆಯಲ್ಲಿದೆ.

ಕಂಡವರಿಗಲ್ಲೊ, ಕಂಡವರಿಗಷ್ಟೆ ತಿಳಿದಽದ ಇದರ ಬೆಲೆಯು
ಸಿಕ್ಕಲ್ಲಿ ಅಲ್ಲ, ಸಿಕ್ಕಲ್ಲೆ ಮಾತ್ರ, ಒಡೆಯುವುದು ಇದರ ಸೆಲೆಯು.[೫೮]

ಸಿಕ್ಕಲ್ಲಿ ಮತ್ತು ಸಿಕ್ಕಲ್ಲೆ ಎನ್ನುವ ಶಬ್ದಗಳು ಹೊರಡಿಸುವ ಅಗಾಧ ಅರ್ಥವ್ಯತ್ಯಾಸ ಬೇಂದ್ರೆಯವರ ಕಾವ್ಯ ಕೌಶಲ್ಯದ ಒಂದು ಬಗೆಯಾಗಿದೆ. ಯಾವ ಪದವನ್ನು ಎಲ್ಲಿ ಒತ್ತಿ ಹೇಳಬೇಕೆನ್ನುವ ಮೂಲಕ ಬದಲಿ ಅರ್ಥವನ್ನು ಹೊರಡಿಸುತ್ತಾರೆ. ಸಿಕ್ಕಸಿಕ್ಕಲ್ಲಿ, ಬೇಕಾದಲ್ಲಿ ಹುಡುಕುವದಕ್ಕಿಂತ ಅನುಭಾವವು ಸಿಗುವ ಸ್ಥಳದಲ್ಲಿಯೆ ಅದರ ಸೆಲೆಯನ್ನು ಹುಡುಕಬೇಕಾಗುತ್ತದೆ ಎನ್ನುವ ಚಾಣಾಕ್ಷತೆಯನ್ನು ಅವರ ಅಭಿವ್ಯಕ್ತಿ ಸೂಚಿಸುತ್ತದೆ. ಅದೇ ರೀತಿ

'ಕಂಡವರಿಗಲ್ಲೊ, ಕಂಡವರಿಗಷ್ಟೆ' ಎನ್ನುವಲ್ಲಿ ಕಂಡಕಂಡ ಎಲ್ಲರಿಗೂ ಅಲ್ಲದೆ ತಿಳಿದವರಿಗೆ ಮಾತ್ರ ಅದರ ಬೆಲೆಯ ಅರಿವಾಗುತ್ತದೆ ಎನ್ನುವ ಅರ್ಥವಿದೆ. ತಾವು ಪ್ರಯೋಗ ಮಾಡುತ್ತಿದ್ದ ಛಂದಸ್ಸಿನ ರೂಪಗಳಿಗೆ ಮತ್ತೆ ಕೆಲವೆಡೆ ಸ್ವರಗಳನ್ನು ಎಳೆದು ತರುವ, ಅವಧಾರಣೆಯನ್ನು ಬಳಸುವ, ಅವಗ್ರಹ ಚಿಹ್ನೆ(ऽ)ಯನ್ನು ಬಳಸಿ ದೀರ್ಘ ಮಾಡುವ, ವಿಭಕ್ತಿ ಪ್ರತ್ಯಯಗಳಲ್ಲಿ ಭಿನ್ನತೆಯನ್ನು ತರುವ, ಗಾದೆಮಾತು-ನುಡಿಗಟ್ಟುಗಳನ್ನು ಸಲೀಸಾಗಿ ಬಳಸುವ ಮೂಲಕ ಬೇಂದ್ರೆಯವರು ಹೊಸ ಹೊಸ ಭಾವ, ಅರ್ಥಗಳನ್ನು ತಮ್ಮ ಕವಿತೆಗೆ ಕೊಡಲು ಶಕ್ತರಾದರು. ಕಾಲದ ವ್ಯತ್ಯಾಸಗಳನ್ನು ಆಡುನುಡಿಯ ಲೇಪನದ ಮೂಲಕ ಪರಿಣಾಮಕಾರಿಯಾಗಿ ಹೊರಡಿಸುವುದು ಅವರಿಗೆ ಗೊತ್ತಿದೆ.

'ಬಂತು ಸುಗ್ಗಿ ಬಂದಽದ ಸುಗ್ಗಿ ಬರತಽದ ಸುಗ್ಗಿ'[೫೯]

* * *

ನೀ ತೇಜಪುಂಜ, ನಾನೊಂದು ಚುಕ್ಕೆ, ಬಸಿರುಕ್ಕಿ ಹೊರಗೆ ಬಿದ್ದೆ
ಇನ್ನೂನು ಭ್ರಮಣ ನಡೆದಿಹುದು, ತುಸುವು ಹರೆದಿಲ್ಲ ಹುಟ್ಟುನಿದ್ದೆ
ಬಾನಗಲದಲ್ಲು ನನ್ನಗಲದಂತೆ ನನ್ನನ್ನು ಕೂಡಿಕೊಂಡು
ಹೊರಟಿರುವೆ ಎತ್ತೊ, ಬಿಡದೆನ್ನ ನಿನ್ನ ಆ ರಥಕೆ ಹೂಡಿಕೊಂಡು'[೬೦]

'ಹೃದಯ ಸಮುದ್ರ'ದ ಕವಿತೆಗಳಲ್ಲಿ ಅವರು ಕಾಣುವ ನಿಸರ್ಗ ದೈವಿಕವಾಗಿದೆ.

ಏಸಗಲ ಚೆಲುವು ಆಸಗಲ ಹಿಗ್ಗು ಉಕ್ಕುಕ್ಕುತಿರಲು ಇಲ್ಲಿ
ಬಾನರಳು ಏನು ನೀರ್ವಾನವೇನು ನೆಲಹೂವು ಏನು ಅಲ್ಲಿ'[೬೧]

ಅಮೂರ್ತವಾಗಿರುವ ದೈವಿಕ ಪರಿಸರವನ್ನು ಲೌಕಿಕದ ನಿಸರ್ಗದಿಂದ ಕಟ್ಟುತ್ತಾರೆ. ದೇವಗಂಗೆಯ ಸೆಲೆಯಿಂದ ನೆಲದ ಹೂವು ಅರಳುವ ವಿಸ್ಮಯವನ್ನು ಕಣ್ತುಂಬ ತುಂಬಿಕೊಳ್ಳುತ್ತಾರೆ.

ಆಕಾಶದ ಕನ್ನಡಿಯಲ್ಲಿ ನೆಲದ ಜಲ ಪರಿಶುಭ್ರವಾಗಿ ಹೊಳೆಯುವುದನ್ನು 'ನೀರು' ಕವಿತೆ ಪ್ರತಿಫಲಿಸುತ್ತದೆ.

'ಮುಗಿಲುಗನ್ನಡಿ ಬಿಡಿಸಿದಂತಿಹ ಜಲದ ಮೈಯಿಗೆ ಜಳಜಳ'[೬೨]

ಅನುಭಾವದ ಗುಟ್ಟು ಮತ್ತು ದೈವಿಕದ ದಾರಿ ತೋರುವ ಬೆಳಗಿನ ಸ್ವರೂಪವನ್ನು ಬೇಂದ್ರೆ ಅಭಿವ್ಯಕ್ತಿಸುವ ರೀತಿ ಶ್ಲೇಷಾತ್ಮಕವೂ, ಕುತೂಹಲಕಾರಿಯೂ ಆಗಿದೆ.

ಹರಿವ ಹೊಳೆಗಳ ಆಚೆ ನಡುಗುವ ಮರಗಳಾಚೆಗೆ ಒಳಗಿದೆ
ಮರದ ನಡುವಿನ ಬಯಲು ಸುತ್ತಿನ ಬನದ ಒಳಗನೆ ಬೆಳಗಿದೆ[೬೩]

ಚೀನಿ ತತ್ವಜ್ಞಾನಿ ಲಾ-ಓ-ತ್ಸೇ ಅವರ ವಚನಗಳ ಪ್ರೇರಣೆಯಿಂದ ಬೇಂದ್ರೆಯವರು ಬರೆದಿರುವ 'ನೀರಿಗಿಂತ ಅಳ್ಳಕ್ಕೇನು?', 'ಅತ್ತ ನೋಡು ಮುತ್ತಲಾ', 'ಬಯಲು' ಮುಂತಾದ ಪದ್ಯಗಳು ಅವರ 'ಯಕ್ಷ-ಯಕ್ಷಿ' ಸಂಕಲನದಲ್ಲಿ

ಬೆಳಕು ಕಂಡವು. ಆಧ್ಯಾತ್ಮದ ಗಾಳಿಯನ್ನೆ ಉಸಿರಾಡುವ ಅವು ಅಭಿವ್ಯಕ್ತಿಯ ವಿಶೇಷತೆಯಿಂದಲೂ ಗಮನ ಸೆಳೆಯುತ್ತವೆ. ಅನುಭಾವದ ಚೌಕಟ್ಟನ್ನು ಓದುಗನೆದುರು ನಿಲ್ಲಿಸುವಲ್ಲಿ ಶಬ್ದ ಮತ್ತು ಪ್ರಾಸಗಳು ಯಶಸ್ವಿಯಾಗುತ್ತವೆ. 'ನೀರಿಗಿಂತ ಅಳ್ಳಕೇನು?'[೬೪] ಎನ್ನುವ ಕಲ್ಪನೆಯೆ ವಿಶಿಷ್ಟವಾಗಿದೆ.

ಶಿವನ ಕಣ್ಣ ಕಿಚ್ಚಿನಲ್ಲಿ
ಹುಟ್ಟಿ ಬಂದ ಬೆದೆಯನು
ರತಿಯ ಕಣ್ಣ ನೀರಿನಲ್ಲಿ
ಬೆಳೆದು ಬಂದ ಮೆದೆಯನು

ಶಿವನ ತಪಸ್ಸು ಭಂಗವಾಗಬೇಕಾದರೆ ಮನ್ಮಥ ಅವನ ಉರಿಗಣ್ಣಿಗೆ ಸಾಯಬೇಕು. ಶಿವ ಸಿಟ್ಟಿನಿಂದ ಕೊತಕೊತ ಕುದಿಯುತ್ತಿದ್ದರೂ ಕೂಡ ಲೋಕ ಕಲ್ಯಾಣದ ದೃಷ್ಟಿಯಿಂದ ಗಿರಿಜೆಯಲ್ಲಿ ಅನುರಕ್ತನಾಗಬೇಕು. ಅನಂಗನ ಸಾವಿನಿಂದ ರತಿ ಕಣ್ಣೀರಿಟ್ಟರೂ ಜನಹಿತದ ಫಸಲು ಅಲ್ಲಿ ಬೆಳೆಯುತ್ತಿದೆ. 'ಅತ್ತ ನೋಡು ಮುತ್ತಲಾ!'[೬೫] ಕವಿತೆ ಪ್ರಾಸ ಮತ್ತು ನಾದಗಳ ಪರಿಪೂರ್ಣ ಹೊಂದಿಕೆಯಿಂದ ಮನಸ್ಸಿನ ಬಾಗಿಲು ತೆರೆಯುತ್ತದೆ.

ಬೂರಲಾ, ಬೂರಲಾ
ಇಂಥ ಮರವು ನೂರಲಾ
ಕಟ್ಟಿದವನು ಯಾರಲಾ?
ಕುಂಕುಮದ ತೇರಲಾ!

ನೂರಾರು ಪ್ರಬೇಧದ ಮರಗಳನ್ನೊಳಗೊಂಡ ಪ್ರಕೃತಿಯ ಹಿಂದಿನ ಶಕ್ತಿ ಯಾವುದೆಂದು ವಿಸ್ಮಯಪಡುತ್ತಲೆ ಅಲ್ಲಿ ಭಕ್ತಿಯ ತೇರನ್ನು ಎಳೆಯುತ್ತಾರೆ. ಕವಿತೆಯೊಳಗಡೆ ಒಂದು ಆಧ್ಯಾತ್ಮಿಕ ಪರಿಸರವನ್ನು ಸೃಷ್ಟಿ ಮಾಡಿಬಿಡುವುದು ಅವರ ಜಾಣತನವಾಗಿದೆ. ಸಾಮಾನ್ಯವೆನಿಸುವ ಶಬ್ದಗಳು ಅಸಾಮಾನ್ಯ ರೂಪದಿಂದ ಹೊಳೆಯತೊಡಗುತ್ತವೆ. ಬೂರುಗ ಮತ್ತು ಮುತ್ತುಗದ ಮರಗಳ ಸಹಾಯದಿಂದ ಅವರ್ಣನೀಯ ಚೆಲುವಿನ ಹಿಂದಿನ ಶಕ್ತಿ ಯಾವುದೆಂಬ ವಿಸ್ಮಯದ ದೃಶ್ಯವನ್ನು ಶಬ್ದಗಳಲ್ಲಿ ಕೆತ್ತಿ ನಿಲ್ಲಿಸುತ್ತಾರೆ.

ಮೊನ್ನೆ ಕೊಟ್ಟೆ ಎಳ್ಳು ಬೆಲ್ಲಾ
ಇಷ್ಟರೊಳಗೆ ತೀರಿತಲ್ಲಾ;
ಅದರ ಸವಿಯ ಚವಚವ
ನಾಲಿಗೆಯೂ ರವರವ

ತಿಳಿವಿನ ಶಬ್ದಗಳನ್ನು ತರುವ ಮೂಲಕ ದಿನನಿತ್ಯದ ವ್ಯವಹಾರದೊಳಗಿನ ಸವಿಯನ್ನು ಹೊರಡಿಸುತ್ತಾರೆ. ದ್ವಿರುಕ್ತಿ, ಅನುಕರಣಾವ್ಯಯ, ನುಡಿಗಟ್ಟು, ವಚನದ ನುಡಿ, ನಾನಾರ್ಥ ಪದ ಮುಂತಾದವುಗಳ ಸಮೃದ್ಧ ಬಳಕೆಯಿಂದ ತಾವು ಅಂದುಕೊಂಡ ಪರಿಣಾಮವನ್ನು ಸಾಧಿಸುತ್ತಾರೆ.

ಸುತ್ತ ಬಯಲು ಭಣಾಭಣಾ

ಬದುಕು ಸಾವು ಕ್ಷಣಾಕ್ಷಣಾ

ದರದರನೆ, ದಬದಬನೆ, ಪಟಪಟನೆ, ಫಳಫಳನೆ ಮುಂತಾದ ದ್ವಿರುಕ್ತಿಗಳಿಗೆ ಅವು ಸ್ವತಂತ್ರವಿದ್ದಾಗ ಹೆಚ್ಚಿನ ಅರ್ಥವಿರುವುದಿಲ್ಲ. ಆದರೆ ಅವು ಬಳಕೆಯಾದ ಸಂದರ್ಭಗಳಲ್ಲಿ ಬೇಂದ್ರೆ ಬಹಳಷ್ಟು ಕವಿತಾಶಕ್ತಿಯನ್ನು ಆ ಶಬ್ದಗಳಿಂದ ಹೊರಡಿಸುತ್ತಾರೆ. 'ಬೆಳಗು'[೬೬] ಪದ್ಯದಲ್ಲಿ ಬೆಳಕೆಂಬ ರತ್ನದ ಕಾರಂಜಿ 'ಪುಟಪುಟನೆ ಪುಟಿದು' ಬೆಳಗಿನ ಅನುಭೂತಿಯನ್ನು ಸಾಧಿಸುವ ಪರಿ ಹೇಳಲಸದಳವಾದುದು.

ರತ್ನದ ರಸದಾ ಕಾರಂಜೀಯೂ

ಪುಟಪುಟನೆ ಪುಟಿದು

ತಾನೇ - ಪುಟಪುಟನೆ ಪುಟಿದು

ಮಘಮಘಿಸುವಾ ಮುಗಿದ ಮೊಗ್ಗೀ

ಪಟಪಟನೆ ಒಡೆದು

ತಾನೇ - ಪಟಪಟನೆ ಒಡೆದು

ಸಹೃದಯನೆದುರು ಸದ್ಯ ಪುಟಿಯುತ್ತಿದೆಯೆನ್ನುವ ರೀತಿಯಲ್ಲಿ ಶಬ್ದ ಕವಿತೆಯಲ್ಲಿ ತೆರೆದುಕೊಳ್ಳುವುದರಿಂದ ಅಸಂಖ್ಯ ಭಾವಗಳನ್ನು ಅದು ಸೃಷ್ಟಿಸುತ್ತದೆ. ಕವಿತೆಯ ಸಾಲು ಪುನರಾವರ್ತನೆಯಾಗುವುದರಿಂದ ರಸದ ಮಣೆಯನ್ನೆತ್ತಿ ಎದೆಯ ದಾಹವನ್ನು ಮತ್ತೊಮ್ಮೆ ತಣಿಸಿದಂತಾಗುತ್ತದೆ. ಶಬ್ದ, ನುಡಿ, ಯಾವುದೂ ಅನವಶ್ಯಕವೆನಿಸದೆ ಕವಿತೆ ಹೊರಡಿಸುವ ಅರ್ಥದ ಸಲುವಾಗಿ ದುಡಿಯುತ್ತವೆ. ಹೆಚ್ಚಾನುಹೆಚ್ಚು ಅವರು ಬಳಸಿರುವ ಶಬ್ದಗಳು ಮತ್ತು ಅವರು ಅಂದುಕೊಂಡ ಭಾವದ ನಡುವೆ ಅಂತರ ಕಂಡುಬರುವುದಿಲ್ಲ. ಶಬ್ದಗಳು ಅವರಲ್ಲಿ ಸೃಷ್ಟಿಸಿಕೊಡುವ ನಾದಶರೀರವನ್ನು ಡಾ. ಯು.ಆರ್.ಅನಂತಮೂರ್ತಿ ಹೀಗೆ ಬಣ್ಣಿಸುತ್ತಾರೆ. 'ಬೇಂದ್ರೆ ಮುಖ್ಯವಾಗಿ ಪ್ರಜ್ಞೆಯ ವಿವಿಧ ಅವಸ್ಥೆಗಳನ್ನು ಕನ್ನಡದಲ್ಲಿ ಅನನ್ಯವೆಂಬಂತೆ ಸೃಷ್ಟಿಸಿರುವ ಕವಿ. ಹೇಗೆ ಈ ಅವಸ್ಥೆಗಳನ್ನವರು ಬೇರೆ ಮಾತುಗಳಲ್ಲಿ ಭಾವಿಸಿರಲಿಲ್ಲ ಎನ್ನಿಸುಷ್ಟು. ಈ ದೃಷ್ಟಿಯಿಂದ ಅವರ ಪದ್ಯಗಳಲ್ಲಿ 'ಸದ್ಯೋಜಾತ' ತೇಜಸ್ಸಿರುತ್ತದೆ. ಗ್ರಹಿಕೆಗೂ, ಶಬ್ದಕ್ಕೂ ನಡುವೆ ಕಂದಕವಿರುವುದಿಲ್ಲ. ಬೇಂದ್ರೆಗೆ ಅನ್ನಿಸಿದ್ದನ್ನೆಲ್ಲ ಅಂತಂತೆಯೇ ಮೂಡಿಸಿಬಿಡುವ ಶಕ್ತಿ ಇದೆ... ಕವಿ ಜ್ಞಾನಿಯಾಗಿದ್ದೂ ಸಾಮಾನ್ಯನಂತೆ ಮಾತನಾಡಬೇಕು ಎಂಬ ಏಟ್ಸ್‌ನ ಆಶಯ ಸಾಮಾನ್ಯರ ಭಾಷೆಯಲ್ಲೇ ಈ ಶಕ್ತಿ ಇನ್ನೂ ಉಳಿದ ನಾಗರಿಕತೆಯಲ್ಲಿ, ಬೇಂದ್ರೆಯಲ್ಲಿ ಆದಂತೆ, ಸಫಲವಾಗುತ್ತದೆ.'[೬೭]

ಸಾಮಾನ್ಯತೆಯಲ್ಲಿ ಅಸಾಮಾನ್ಯವಾದುದನ್ನು ಭಾಷೆಯಲ್ಲಿ ಕಟ್ಟಿಕೊಡುವ ಕಲೆ ಜಾನಪದ ಹಾಗೂ ಮಾರ್ಗಗಳೆರಡನ್ನು ಅವರು ಹದ ಮಾಡಿದ ಪರಿಣಾಮವಾಗಿ ಮೂಡಿಬಂತು. ಮಣ್ಣಲ್ಲಿ ಮಣ್ಣಾಗಿ ಬೆರೆತಾಗ ಅವರು ನಾಡಿನ ನಾದಲೋಕವನ್ನು ಕಂಡುಕೊಂಡರು. 'ಮಣ್ಣಿನ ವಿಷಯಗಳಲ್ಲಿ ಮಣ್ಣುಗೂಡುವದಲ್ಲ; ನಾದಧ್ವನಿಯ

ಛಂದೋಲಯದಲ್ಲಿ ಮೂಡುವುದು ಕಾವ್ಯಪ್ರಪಂಚ. ಈ ಘನತೆಯ ಒಂದೊಂದಗಲವೂ ಕಾವ್ಯವಸ್ತು. ಕವಿಯ ದರ್ಶನಕ್ಕೆ ಹಿಡಿಸಿದಷ್ಟು, ಶ್ರುತಿಯಲ್ಲಿ ಬಿಡಿಸಿದಷ್ಟು ಕಾವ್ಯವೇ. ಜೋಗುಳ, ಲಾಲಿ, ಕೋಲಾಟ, ಲಾವಣಿ, ಚಾವಡಿ, ಸುಳಾದಿ, ಉಗಾಭೋಗ, ಋತುವರ್ಣನೆ, ನಾಯಕಚಾರಿತ್ರ್ಯ, ಹಾರ್ದಿಕ ಪ್ರೇಮದ ಚುಟುಕು ಇವೆಲ್ಲ ಈ ಘನ ರಸಾಯನದ ಒಂದು ತೊಟ್ಟು ತೊಟ್ಟು?'[೬೮] ಬೇಂದ್ರೆಯವರು ತಾವು ಹಾದುಬಂದ ಹಾದಿಯನ್ನು ಹೀಗೆ ತಿಳಿಸುವಲ್ಲಿ ಪರಂಪರೆಯನ್ನು ಈಸಿಬಂದೆ ಎನ್ನುವ ಅರ್ಥವಿದೆ. ಜನಸಾಮಾನ್ಯರು, ವಿದ್ಯಾರ್ಥಿಗಳು, ಭಕ್ತಿಯ ನೆಲೆಗಳನ್ನು ಅರಸುವರು. ಪ್ರೇಮದ ಸಂವೇದನೆಗಳನ್ನು ಅಪ್ಪುವವರು, ದೈವಿಕ ಸಂಗತಿಗಳನ್ನು ಬಯಸುವವರು, ದ್ಯಾವಾ ಪೃಥಿವಿಗೆ ಸೋಪಾನ ಕಟ್ಟುವವರು ಹೀಗೆ ಎಲ್ಲರನ್ನು ತಮ್ಮ ಕಾವ್ಯ ಮುಟ್ಟಬೇಕು ಎನ್ನುವ ಆಶಯ ಅವರಿಗಿತ್ತು. ಆದುದರಿಂದಲೆ ಅವರ ಹಲವು ಪದ್ಯಗಳು ('ಬೆಳಗು', 'ಪಾತರಗಿತ್ತಿ ಪಕ್ಕ', 'ಹುಬ್ಬಳ್ಳಿಯಾಂವ', 'ಪಾಡು', 'ಮಾಯಾಕಿನ್ನರಿ', 'ಅನಂತಪ್ರಣಯ', 'ಚಳಿಯಾಕೆ', 'ಬೆಳುದಿಂಗಳ ನೋಡs', 'ಗಂಗಾವತರಣ' ಮುಂತಾದವು) ವಿವಿಧ ಸ್ತರದ ಓದುಗರನ್ನು ವಿವಿಧ ತೆರನಾಗಿ ಮುಟ್ಟುವಲ್ಲಿ ಯಶಸ್ವಿಯಾಗುತ್ತವೆ. ಪ್ರಕೃತಿಯ ಸೌಂದರ್ಯ ಬಯಸುವವರಿಗಾಗಿ ಹುಚ್ಚು ಹಿಡಿಸುವ ಪ್ರಕೃತಿ ಸೌಂದರ್ಯ, ಚೈತನ್ಯದ ಸೆಲೆ ಕಾಣುವವರಿಗಾಗಿ ಚೆಲುವನ್ನು ಇಲ್ಲಿ ತಂದಿಟ್ಟವರ ರಹಸ್ಯವನ್ನು ಕುರಿತು ಅವರ ಏಕಕಾಲಕ್ಕೆ ಬರೆಯಬಲ್ಲವರಾಗಿದ್ದರು. ಪ್ರೇಯಸಿಯ ಕಣ್ಣಿನಲ್ಲಿಯ ಗೊಂಬೆಯಂತೆ ಅವಳ ಎದೆಯಲ್ಲಿ ಏಳೇಳು ಜನ್ಮಕೂ ನಟ್ಟು ಬಿಟ್ಟಿರುವ 'ಹುಬ್ಬಳ್ಳಿಯಾಂವ' ಕವಿತೆಯ ಪ್ರಿಯಕರ ಸಾಮಾನ್ಯ ರಸಿಕನಾಗಿರುವ ಚಿತ್ರವನ್ನು ಸರ್ವೇಸಾಮಾನ್ಯ ಎಲ್ಲ ಓದುಗರೂ ಚಿತ್ರಿಸಿಕೊಳ್ಳುವುದು ಸಹಜವಾಗಿದೆ. ಆದರೆ 'ಶರಣಸತಿ ಲಿಂಗಪತಿ' ಎಂಬ ಪರಿಕಲ್ಪನೆಯಲ್ಲಿ ಡಾ. ಗಿರಡ್ಡಿ ಗೋವಿಂದರಾಜ ಅವರು ಅದರ ಅನುಭಾವದ ಅರ್ಥಗಳನ್ನು ವಿಶ್ಲೇಷಿಸುತ್ತಾರೆ. ಅಕ್ಕಮಹಾದೇವಿಯ ವಚನಗಳಿಗೆ ಮತ್ತು ಮಧುರಚೆನ್ನರ 'ನನ್ನ ನಲ್ಲ' ಕವಿತೆಗೆ ಇದನ್ನು ಹೋಲಿಸುತ್ತ ಮಲ್ಲಿಕಾರ್ಜುನನು ಅಕ್ಕನಿಗೆ ಗೊರವನಾಗಿ ಬರುವ, ಬೇಂದ್ರೆಯವರು ಭೂಮಿಯನ್ನು 'ಜೋಗತಿ'ಯೆಂದು ವರ್ಣಿಸುವ, ಬಸವಣ್ಣನ ಮಹದೇವಸೆಟ್ಟಿ ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿ ತೆರೆಯುವ ಲೌಕಿಕದ ವಿವರಗಳನ್ನು ನೀಡುತ್ತಾರೆ. 'ಕನ್ನಡದ ತತ್ವಪದಗಳ ರಚನೆ, ವಸ್ತು, ಲಯ, ಭಾಷೆ, ರೀತಿಗಳನ್ನು ಅದು ನೆನಪಿಗೆ ತರುತ್ತದೆ... 'ಹುಬ್ಬಳ್ಳಿಯಾಂವಾ' ಕವಿತೆ ಅನ್ಯ ಪಠ್ಯಗಳಿಗೆ ಹಲವಾರು ಸಾಹಿತ್ಯಿಕ ಸೂಚನೆಗಳನ್ನು ಕೊಡುವ ಮೂಲಕ ಲೌಕಿಕದಂತೆ ಕಾಣುವ ಒಂದು ಅನುಭವವನ್ನು ಅನುಭಾವದ ಸ್ತರಕ್ಕೆ ಒಯ್ಯಲು ಸಾಧ್ಯವಾಗುತ್ತದೆ.'[೬೯]

'ನಗೀನವಿಲು'[೭೦] ಕವಿತೆಯ ಕೋಗಿಲೆಯ ದುಃಖ ಮಳೆಯಾಗಿ ವಿರಹಿಯನ್ನು ತೋಯಿಸುತ್ತದೆ.

ಮನದ ಮಾಮರದ ಕೊನಿಗೆ
ಕೋಕಿಲೊಂದು ಕೂಡತಿತ್ತ
ಕೂಡತಿತ್ತ ಹಾಡ ಬಿಟ್ಟು
ಬರೇ ನಿನ್ನ ನೋಡತಿತ್ತ

ಅದು ಪ್ರೇಮಿಯನ್ನು ಕರೆಯುತ್ತಿರುವ ಕೋಗಿಲೆಯಾದರೂ ‘ಏನೋ ಒಂದ ಹುಡುಕುತಿತ್ತ’ ಎನ್ನುವಲ್ಲಿ ಅದರ ಪ್ರೇಮ ಹೃದಯವನ್ನು ಬೆಳಗುವ ಪ್ರೇಮವಾಗಿದೆ. ಅದೇ ‘ಗರಿ’ ಸಂಕಲನದ ‘ಕೋಗಿಲೆ’[illegible] ಯಲ್ಲಿ ಪ್ರೀತಿ-ಕಾರುಣ್ಯ-ಕವಿತಾಶಕ್ತಿ, ಶರಣ-ದಾಸರಿಗಿರುವಂತೆ ತನ್ನೊಳು ಮೂಡಲಿ ಎಂದು ಕವಿ ಕೇಳಿಕೊಳ್ಳುತ್ತಿದ್ದಾನೆ. ಕನಕದಾಸರು ‘ಮೋಹನ ತರಂಗಿಣಿ’ಯ ಮೂಲಕ, ರತ್ನಾಕರವರ್ಣಿಯು ‘ಭರತೇಶ ವೈಭವ’ದ ಮೂಲಕ ಸಾಂಗತ್ಯ ಪ್ರಕಾರದಲ್ಲಿ ಭಕ್ತಿ-ಅನುಭಾವಗಳನ್ನು ಕಟ್ಟಿಕೊಡುವಂತೆ ಬೇಂದ್ರೆಯವರು ತಮ್ಮ ಕೆಲವು ಕವಿತೆಗಳಿಗೆ ಅಂಶಗಣಾತ್ಮಕವಾದ ಸಾಂಗತ್ಯ ಛಂದೋಪ್ರಕಾರವನ್ನು ಸಮೃದ್ಧಿಯಿಂದ ಬಳಸಿಕೊಂಡರು. ೧ ಮತ್ತು ೩ನೇ ಸಾಲುಗಳು ಒಂದು ಸಮವಾಗಿಯೂ, ೨ ಮತ್ತು ೪ನೇ ಪಾದಗಳು ಮತ್ತೊಂದು ಸಮವಾಗಿ, ಹನ್ನೆರಡು ವಿಷ್ಣುಗಣ ಹಾಗೂ ಎರಡು ಬ್ರಹ್ಮಗಣದ ಈ ಸಂಪ್ರದಾಯದಲ್ಲಿಯೂ ಬೇಂದ್ರೆಯವರು ಅಲ್ಲಲ್ಲಿ ಬದಲಾವಣೆ ಮಾಡಿಕೊಂಡು ತಮ್ಮ ಸ್ವಾತಂತ್ರ್ಯ, ಪ್ರಯೋಗಶೀಲತೆಯನ್ನು ಮೆರೆದರು.

ತನುವೆಂಬ ವನದಲ್ಲಿ ಮನದ ಮಾಮರದಲ್ಲಿ
ಕೊನೆಕೆಲೆಯಲಿ ಕುಳಿತು ಕೋಗಿಲೇ!
ದಿನವಿಲ್ಲ ನಿಶೆಯಿಲ್ಲ ದನಿಗೈಯುತಿರುವಿ ನೀ-
ನಾವ ಬಸಂತನ ಕೋಗಿಲೆ?

ತಾನು ಪ್ರೇಮದ ಕವಿಯೂ ಹೌದು. ವೇದದ ಕವಿಯೂ ಹೌದು ಎನ್ನುವಂತೆ ಸೌಂದರ್ಯ ಸತ್ಯದ ಕಡೆಗೆ ಚಲಿಸಲಿ ಎನ್ನುವ ಆಶಯ ವ್ಯಕ್ತಪಡಿಸುತ್ತಾನೆ.

ವ್ಯೋಮಮಂಡಲ ಸುಖಧಾಮವಾಗುವಂತೆ
ಕಾಮರತಿಯ ಮೀರಿ ಕೋಗಿಲೆ!
ಪ್ರೇಮಕವಿಯು ಕಂಡ ಸಾಮವೇದವ ನೀನು
ಕೂಗುವಿಯಾ ಹೇಳು ಕೋಗಿಲೆ!

ಕವಿತೆಯ ಕೊನೆಯ ಸಾಲುಗಳು ಬೇಂದ್ರೆಯವರ ತಿಳಿವಿನ ದಿಕ್ಸೂಚಿಯನ್ನು ತೋರಿಸುವಂತಿವೆ. ಅವರ ಭಾವ ಆಧ್ಯಾತ್ಮದಲ್ಲಿ ತಂಗಿದೆ.

ಅಂಬಿಕಾತನಯನ ನಂಬಿಗೆಗಿಂಬಾದ
ನಿಜಗುಣದಲಿ ಬೆರೆತ ಕೋಗಿಲೇ!

‘ನಿಜಗುಣ ಶಿವಯೋಗಿಗಳ ಅಜರಾಮರ ಪದದಂತೆ’ ಎಂದು ಕವಿತೆಯ ಮೊದಲಿಗೆ ನಿಜಗುಣ ಶಿವಯೋಗಿಗಳನ್ನು ಬೇಂದ್ರೆಯವರು ನೆನೆದದ್ದು ಅವರ ಕವಿತೆಯಿಂದ ಪ್ರೇರಣೆ ಪಡೆದದ್ದಕ್ಕೆ ಮತ್ತು ನಿಜಗುಣ

ಪರಂಪರೆಯ ಸಂಗ ಬಯಸುವುದಕ್ಕೆ ಎಂಬುದು ಸ್ಪಷ್ಟವಾಗಿದೆ. ಹೀಗೆ ಲೌಕಿಕದ ಭಾಷೆ, ವಿವರಗಳನ್ನು ಕಣ್ಣಿಗೆ ಕಟ್ಟುವಂತೆ ಹೇಳುತ್ತ ಅಲೌಕಿಕ ಜಗತ್ತಿನ ಸೆಳಕುಗಳನ್ನು ತಮ್ಮ ಕಾವ್ಯದಲ್ಲಿ ಹಾಯಿಸುವುದು ಬೇಂದ್ರೆಯವರಿಗೆ ಸಹಜ ಮಾರ್ಗವಾಗಿದೆ. ಜನಜೀವನದ ಪ್ರತಿಮೆ, ಸಂಕೇತಗಳನ್ನು ಬಳಸುವ ಮೂಲಕ ಅಪರಿಚಿತವಾಗಿರುವ ಸಂಗತಿಗಳ ಮೇಲೆ ಬೆಳಕು ಹಾಯಿಸುತ್ತಾರೆ. ಹೀಗಾಗಿ ಬೆಡಗಿನ ಭಾಷೆ ಪರಿಚಿತವಾಗುತ್ತದೆ. ಕವಿಯು ಹೇಳುವ ಅನುಭವ ನೈಜ ಹಾಗೂ ಸ್ವಂತದ್ದೆನಿಸುತ್ತದೆ. 'ನಾದಲೀಲೆ' ಸಂಕಲನದ 'ಎದೆಯ ಒಕ್ಕಲಿಗ'[೨] ಅಂತಹ ಒಂದು ಪದ್ಯವಾಗಿದೆ.

ಬೆದೆಯರಿತು ಹದಮಾಡು ಹೃದಯದೀ ಹೊಲವನ್ನು
ಹದ ಬೆದೆಯನರಿತಂಥ ಹೃದಯವಾಸೀ ॥ಪ॥

ಗರುವ ಗ್ರಹಿಕೆಗಳೆಂಬ ಹುಲ್ಲುಕರಿಕೆಗಳಿಂದ
ಸರುವವೂ ಕೆಟ್ಟಿಹುದು ನಟ್ಟು ಬೆಳೆದು
ಬರುವ ಸುಗ್ಗಿಯ ಬೆಳೆಯು ಭರದಿಂದ ಬರುವಂತೆ
ಗುರುವೆ! ಮಾಡೋ! ಕಲ್ಪತರುವೆ! ಮಾಡೋ

ಹೃದಯವಾಸಿಯಾದವನನ್ನು ಮರೆತು ಎದೆಯೆಂಬ ಹೊಲವನ್ನು ಹಾಳುಗೆಡಹಿರುವ ಸ್ಥಿತಿಯನ್ನು ಬೇಂದ್ರೆಯವರು ಮನದಲ್ಲಿ ಬೇರುಬಿಟ್ಟಿರುವ ಭೂಮಿಗೆ ಸಂಬಂಧಿಸಿದ ಪರಿಕರಗಳಿಂದಲೆ ಕಟ್ಟಿಕೊಡುವುದು ವಿಶಿಷ್ಟವಾಗಿದೆ.

ಕೋರಪಾಲಿನ ಮಾತು ಮಾಡಿಕೊಟ್ಟೆನು ನಿನಗೆ
ಯಾರೇಕೆ ಮಧ್ಯಸ್ಥರಿಲ್ಲಿ ಬೇಕು?
ಪಾರು ಮಾಡೈ ಹೊಟ್ಟೆಗಿಲ್ಲದೇ ಸಾಯುವೆನು
ತೋರು ಕರುಣದ ಕಸಬು ಎದೆಯ ಒಕ್ಕಲಿಗಾ

ಕೋರಪಾಲಿನಿಂದ ಭೂಮಿಯನ್ನು ಕೃಷಿ ಮಾಡಿಕೊಂಡಲು ಒಪ್ಪಂದ ಮಾಡಿಕೊಳ್ಳುವುದು ನಮ್ಮ ಹಳ್ಳಿಗಳಲ್ಲಿ ಪ್ರಚಲಿತವಿರುವಂಥದು. ಆಧ್ಯಾತ್ಮಿಕ ತಿಳುವಳಿಕೆಯಿಲ್ಲದೆ ಬಂಜರಾಗಿರುವ ಹೊಲವನ್ನು ಕರುಣಾಮಯಿಯಾದ ಹೃದಯದ ಒಕ್ಕಲಿಗ ರಂಟೆ ಕುಂಟೆ ಹೊಡೆದು ಹೊಟ್ಟೆಗೆ ಅನ್ನ ದೊರಕುವಂತಾಗಲೆಂದು ಬೇಂದ್ರೆ ಕೋರುತ್ತಾರೆ. ಒಕ್ಕಲಿಗನನ್ನು ರೂಪಕ ಮಾಡಿಕೊಂಡಿರುವ ತತ್ವಪದದ ಪರಂಪರೆಯ ಈ ಹಾಡು ಸರ್ಪಭೂಷಣ ಶಿವಯೋಗಿಗಳ 'ಶರೀರವೆಂದೆಂಬುವ ಹೊಲನ' ಪದ್ಯವನ್ನು ನೆನಪಿಸುತ್ತದೆಯೆಂದು ಡಾ. ಗಿರಡ್ಡಿ ಗೋವಿಂದರಾಜ ಅವರು ಹೇಳುತ್ತ ಬೇಂದ್ರೆಯವರು ಅಭಿವ್ಯಕ್ತಿಯ ಸಾಧನೆಗಾಗಿ ಪಲ್ಲವಿ, ಅನುಪಲ್ಲವಿ ಮಾದರಿಗಳ ಕೈವಲ್ಯಪದ, ತತ್ವಪದ, ದಾಸರ ಕೀರ್ತನೆ, ಶರಣರ ಸ್ವರವಚನ ಬಳಸಿಕೊಂಡುದುದನ್ನು ವಿವರಿಸುತ್ತಾರೆ. ''ಉಪಮಾನ-ಉಪಮೇಯ'ಗಳನ್ನು

'ಎಂಬ', 'ಎಂದೆಂಬ' ಮೊದಲಾದ ಸಂಬಂಧಕಾವ್ಯಗಳ ಮೂಲಕ ಜೋಡಿಸಿ ರೂಪಕದ ಹೊಸ ನಮೂನೆಯನ್ನು ಬಳಕೆಗೆ ತಂದಿರುವ ರೀತಿಯು ಗಮನಾರ್ಹವಾಗಿದೆ.... ಸರ್ಪಭೂಷಣ ಶಿವಯೋಗಿಗಳ ಹಾಡಿನಲ್ಲಿ ಅನುಭಾವದ ಅಂಶ ಬಹಳ ದಟ್ಟವಾಗಿದೆ. ಬೇಂದ್ರೆಯವರ ಹಾಡಿನಲ್ಲಿಯೂ ಆಧ್ಯಾತ್ಮಿಕ ಸೂಚನೆ ಇದ್ದರೂ ಲೌಕಿಕದ್ದೇ ಒಂದು ಕೈ ಮೇಲಾಗಿದೆ ಎನ್ನಬಹುದು.'[೭೩] ಅವರ 'ಅರಳು-ಮರಳು' ಸಂಕಲನದವರೆಗಿನ ಬಹುತೇಕ ಎಲ್ಲ ಪದ್ಯಗಳಲ್ಲಿ ಲೌಕಿಕ ವಿಜೃಂಭಿಸಿ ಅಲೌಕಿಕ ಸಂಗತಿ ಅಲ್ಲಿಲ್ಲಿ ಹಣಿಕಿ ಹಾಕುತ್ತಿರುತ್ತದೆ. ಉತ್ತರ ಜೀವನದ ಕಾವ್ಯ ದರ್ಶನ, ಅನುಭಾವ, ವೈದಿಕ ಪರಿಭಾಷೆಯನ್ನು ಬಳಸುತ್ತ ಲೌಕಿಕದ ಮೊದಲಿನ ಅಭಿವ್ಯಕ್ತಿ ಮರೆಯಾಗುತ್ತದೆ. ಅನುಭವದ ಉತ್ಕಟತೆ ದಟ್ಟವಾಗಿ ಓದುಗನನ್ನು ಕಾಡುವುದಿಲ್ಲ. ಹಾಗಾಗಿಯೆ ಅಲ್ಲಿಯ ಭಾಷೆ, ಸಂಖ್ಯಾ ರಹಸ್ಯ, ಪುರಾಣ ಪ್ರತಿಮೆ ಆ ಹಿನ್ನೆಲೆ ಮತ್ತು ಅಭ್ಯಾಸದ ಪ್ರವೇಶಿಕೆಯನ್ನು ಬಯಸುತ್ತವೆ. ನಾಕು-ತಂತಿಯವರೆಗಿನ ಕಾವ್ಯ ಅವರನ್ನು ಜನಮಾನದಲ್ಲಿ ಪ್ರತಿಷ್ಠಾಪಿಸಿದ ಕಾವ್ಯ. ಅಲ್ಲಿಯವರೆಗಿನ ಅವರ ನಿಸರ್ಗ ಕಾವ್ಯವಂತೂ ಚೇತೋಹಾರಿಯಾದುದು. ಜನಪದ ಸಂಸ್ಕೃತಿ, ಆಡುಮಾತಿನ ರೂಪ, ನಾದದ ಗುಣ, ಕಲ್ಪನೆಯ ಶಕ್ತಿಗಳಿಂದ ಪ್ರಕೃತಿಯ ವಸ್ತು-ರೂಪಗಳಿಗೆ ಹೊಸ ನೆಲೆಗಳನ್ನು ತಂದುಕೊಟ್ಟರು. 'ಭಾಷೆಯ ವಿವಿಧ ಆಯಾಮಗಳಾದ ಪ್ರಾದೇಶಿಕತೆ, ನಾದಮಯತೆ, ಜನಪದೀಯತೆ, ಗ್ರಾಂಥಿಕತೆ ಮುಂತಾದ ಗುಣಗಳನ್ನು ಆಯಾ ಕವಿತೆಯ ಸೃಜನಾತ್ಮಕ ಅಗತ್ಯಗಳಿಗೆ ಅನುಗುಣವಾಗಿ ಬಳಸುವುದರ ಮೂಲಕ ಬೇಂದ್ರೆಯವರು ಏಕತಾನತೆಯನ್ನು ಕಳೆದುಕೊಂಡು ಬಹುಮುಖಿಯಾದ ಶೈಲಿಯನ್ನು ಬಳಸಿಕೊಂಡರು.'[೭೪] ನಾದ, ಗೇಯತೆ, ಶ್ಲೇಷೆ, ಪ್ರಾಸ ಇಂತಹ ಅವರ ಕಾವ್ಯಗುಣಗಳು ಕನ್ನಡಕ್ಕೆ ವಿಶಿಷ್ಟವೆನಿಸಿದವು. ಆಡುಮಾತನ್ನು ಕವಿತೆಯ ರಚನೆಯೊಳಗೆ ಒಳಗು ಮಾಡಿಕೊಳ್ಳುವ ಬಗೆ ಪ್ರಚಲಿತ ರಚನೆಗಳಿಗಿಂತ ಭಿನ್ನವಾಗಿಸಿತು.

ನೆರಳಿಗೆಲ್ಲಿ ನೆರಳ? ಎತ್ತೂ
ಬರಿಯ ಬಿಸಿಲ, ಬಯಲಿಗೆ ಬಯಲಃ[೭೫]

* * *

ಮರ ಮರಕೊಂದ ಮಾತ । ಕಲಿಸಿ
ಮರವಟ್ಟೇನ ಮಾತಿನ ಜಾಣ ?[೭೬]

* * *

ನೀ ನೀರು ಬೇಡುವಾ ಬಳ್ಳಿ
ನೀರನಿಲ್ಲದಲ್ಲಿ
ಬದುಕು ಎಂತೇನ?[೭೭]

* * *

ಬಾರೊ ಇಲ್ಲಿ ಬೈದಾಗಿ ಬಾರೊ, ಬಾ
ಇಲ್ಲಿದೆ ತಂಗುವ ಸ್ಥಲಾ-
ತಣಿವನರಿಯದೆ ದಣಿದು ಹೋದೆ, ಬಾ
ಇಲ್ಲಿಗೆ ಇಂಗದ ಜಲಾ[೭೮]

'ನೀರನು ಇಲ್ಲದ ಪಕ್ಷದಲ್ಲಿ ನೀರೆ ಏನು ಮಾಡಬೇಕು?'[೭೯] ಬಳ್ಳಿಯಂತಿರುವ ಹೆಣ್ಣಿಗೆ ನಲ್ಲನೆಂಬ ನೀರನು ಜೊತೆಗಿದ್ದಾಗ ಬಳ್ಳಿ ಚಿಗುರುವುದು ಸಹಜವಾಗಿದೆ. ಶ್ಲೇಷಾರ್ಥದಿಂದ ಹಲವು ಅರ್ಥಗಳನ್ನು ಬೇಂದ್ರೆಯವರು ಹೊರಡಿಸುತ್ತಾರೆ.

೭.೮ 'ನಿನ್ನ ಕೊಳಲಹುದು ಈ ನನ್ನ ಕೊರಳು' :

ಬದುಕಿನ ಸುಖ-ದುಃಖಗಳು ಕವಿಯ ಹಾಗೂ ಸಹೃದಯನ ಎದೆಯಲ್ಲಿ ಕರಗುವುದು ಒಂದೇ ರೀತಿಯಲ್ಲಿ ಎಂಬುದನ್ನು ಬೇಂದ್ರೆಯವರು ಮನಗಂಡಿದ್ದರಿಂದ ಮನುಷ್ಯನ ಹಾಡನ್ನೆ ತನ್ನ ಕೊರಳು ಹಾಡುತ್ತಿದೆಯೆಂದು ಭಾವಿಸಿದ್ದರು. ಕವಿಯ ದನಿಗೆ ಸಹೃದಯ ಮರುದನಿಯಾಗಬೇಕೆಂದು ಅಪೇಕ್ಷಿಸಿದರು. ನೆಲದ ಬದುಕು ಹಾಗೂ ದೈವಿಕತೆಯ ಸ್ಪರ್ಶದ ಹಂಬಲಗಳ ನಡುವೆ ಒಂದು ಸಂಬಂಧ ಸೂತ್ರವನ್ನು ಕಾಣಲು ಬೇಂದ್ರೆ ಪ್ರಯತ್ನಿಸಿರುವುದನ್ನು 'ಗರಿ'ಯಿಂದ ಹಿಡಿದು 'ನಾಕು ತಂತಿ'ಯವರೆಗಿನ ಕಾವ್ಯದ ಹಾದಿಯ ಉದ್ದಕ್ಕೂ ನಾವೂ ಕಾಣಬಹುದಾಗಿದೆ. ಅವರು ಮಾಡಿದ ಕಾವ್ಯ ಪ್ರಯೋಗಗಳುದ್ದಕ್ಕೂ ದೈವಿಕ ಅಭಿವ್ಯಕ್ತಿಯ ಹಂಬಲ ಇರುವುದನ್ನು ನಾವು ಗುರುತಿಸಬಹುದು. ಷಟ್ಪದಿ, ತ್ರಿಪದಿ-ಪಿರಿಯಕ್ಕರ-ಸೀಸಪದ್ಯ - ಸಾಂಗತ್ಯ - ಜಾನಪದ ಹಾಡು - ತತ್ವಪದ - ಲಾವಣಿ - ಕೀರ್ತನೆ-ನಾಲ್ವರಿ - ದಶಪದಿ ಮುಂತಾದ ಛಂದೋಪ್ರಕಾರಗಳಲ್ಲಿ ಭೌತಿಕ ಮತ್ತು ಅಲೌಕಿಕದ ಸ್ವರೂಪವನ್ನು ತಿಳಿಸಲು ಅವರ ಕಾವ್ಯ ಕನ್ನಡಿಯಂತೆ ಕೆಲಸ ಮಾಡುತ್ತದೆ. 'ಉಯ್ಯಾಲೆ' ಸಂಕಲನದ 'ಆದಿಕವಿ' ಪದ್ಯ ಸೀಸಪದ್ಯದ ಮಾದರಿಯದಾಗಿದ್ದು ಬೇಂದ್ರೆಯವರು ಕನ್ನಡದ ಭಕ್ತಿ ಪರಂಪರೆಯ ಜೊತೆಗಿನ ತಮ್ಮ ಸಂಬಂಧವನ್ನು ಸ್ಪಷ್ಟಗೊಳಿಸುತ್ತಾರೆ.

ಕೊಕ್ಕಿನಲಿ ಕೊಕ್ಕು, ರೆಕ್ಕೆಗೆ ರೆಕ್ಕೆ, ನೋಟದಲಿ
ನೋಟ ಹುದುಗೊಳಿಸಿರುವ ಹಕ್ಕಿಯೆರಡು-
ಎಲೆ ಚವರೆ ಬೀಸೆ, ಹೂಗಂಪು ಸಲೆ ಸೂಸೆ, ಎಲ-
ರೂದೆ, ಬೆಳಕಾದೆ - ಹೊರ ಜಗವ ಮರೆದು[೮೦]

ಗೆಳತಿ-ಗೆಣೆಯರು ಒಂದೆ ಮೈಯಂತೆ ಮಿಲನ ಹೊಂದಿರುವ ವೇಳೆ ಬೇಡ ವಾಲ್ಮೀಕಿಯ ಬಾಣಕ್ಕೆ ಅಗಲಿ ಆ ನೋವು ಹಾಡು ಬರೆಸಿದಂತೆ, ವೇದ ಕವಿ- ಆದಿಕವಿಯನ್ನು ಸೃಷ್ಟಿಸಿದಂತೆ ತನ್ನ ಹಾಡು ಕೂಡ ಛಂದವಾದ ಸವಿನುಡಿಯ ಜೊತೆ ಸೇರ್ಪಡೆಗೊಳ್ಳುವುದು ಕವಿಗೆ ಬೇಕಾಗಿದೆ. ಹಳೆಯ ಮಾದರಿಯ 'ಸೀಸಪದ್ಯ'ಗಳನ್ನು, ಐದು

ಮಾತ್ರೆಯ ಗಣಗಳನ್ನು ಒಂದನೆಯ ಹಾಗೂ ಮೂರನೆ ಸಾಲಿನಲ್ಲಿ ನಾಲ್ಕು ಗಣಗಳಂತೆ ಇಟ್ಟು; ಎರಡನೆ ಹಾಗೂ ನಾಲ್ಕನೆ ಸಾಲಿನಲಿ ಮೂರುಗಣ ಮತ್ತು ಹೆಚ್ಚಿಗೆ ಒಂದು ಗುರು ಎಂದು ತಮಗೆ ಬೇಕಾದಂತೆ ಹೊಸ ಮಾದರಿಯ ಹಲವಾರು ಸೀಸ ಪದ್ಯಗಳನ್ನು ಬೇಂದ್ರೆಯವರು ಬರೆದಿರುವುದು ಅವರ ಅಭಿವ್ಯಕ್ತಿಯ ಕೌಶಲ್ಯಕ್ಕೆ ಸಾಕ್ಷಿಯಾಗಿದೆ.

ವ್ಯೆ ತಳೆದ । ಕರುಣೆ ವ್ಯೆ । ಮರೆತು ಕುಳಿ । ತಿದೆ ನೋಡು
ಯೋಚನೆಯ । ಯೋಜನೆಯ । ಕುರಿತು ಬೆರೆ । ತು[೮೮]

ಕಲ್ಲಿನಲ್ಲಿ ಶಿಲ್ಪವನ್ನು ಕೆತ್ತಿ ಸ್ಪರ್ಶವನ್ನು ತಂದಿಡುವ ಶಿಲ್ಪಿಯಂತೆ ಕವಿಯಾದವನು ಕೂಡ ತನ್ನ ಭಿತ್ತಿಯಲ್ಲಿ ಮೂಡುವ ಚಿತ್ರಗಳನ್ನು ಅಕ್ಷರಗಳಲ್ಲಿ ಅಭಿವ್ಯಕ್ತಿಸುತ್ತಾನೆ. ಅಂತಹ ಸುಂದರ ಕಾವ್ಯಶಿಲ್ಪವನ್ನು ನಿರಂತರ ಪ್ರಯೋಗಗಳ ಮೂಲಕ ಬೇಂದ್ರೆ ಮಾಡಿದರು. ಇಂಗ್ಲೀಷಿನ ಸಾನೆಟ್ ರೂಪ ಸುನೀತವೆಂದು ಈಗ ಹೆಸರಾಗಿದ್ದರೂ ಬೇಂದ್ರೆಯವರು ತಮ್ಮ ಸಮಕಾಲೀನರೊಡನೆ ಕವಿತೆಯ ಆ ರೂಪದಲ್ಲೂ ಭಾವವನ್ನು ತುಂಬಿದರು. ಪು.ತಿ.ನ., ಮಾಸ್ತಿ, ಕುವೆಂಪು, ಗೋವಿಂದ ಪೈ ಮುಂತಾದ ಕವಿಗಳು ಸಾನೆಟ್ಟಿನಲ್ಲಿ ಕವಿತೆ ರಚಿಸಿ ಕನ್ನಡ ಭಾವಗೀತೆಗೆ ಜೀವ ತಂದುಕೊಟ್ಟರು. ಬೇಂದ್ರೆಯವರ 'ಉಯ್ಯಾಲೆ' (೧೯೩೮) ಸಂಕಲನವು ಅಪರೂಪದ ಸಾನೆಟ್, ಸೀಸಪದ್ಯ ಮತ್ತು ಹಾಡುಗಳ ಗುಚ್ಛವಾಗಿದೆ. ಕನ್ನಡದ ಶಬ್ದರತ್ನಗಳನ್ನು ಬಂಗಾರದ ಚೌಕಟ್ಟಿನಲ್ಲಿ ಕೂಡ್ರಿಸುವ ಪ್ರಯತ್ನವನ್ನು ತಾವು ಮಾಡಿರುವದಾಗಿ ಬೇಂದ್ರೆಯವರು ಮುನ್ನುಡಿಯಲ್ಲಿ ಹೇಳಿದ್ದಾರೆ. ''ಕವಿಶಿಷ್ಯ', ಶ್ರೀ ಗೋವಿಂದ ಪೈ, ಶ್ರೀ ಪು.ತಿ.ನ. ಶ್ರೀನಿವಾಸ ಮೊದಲಾದವರು ಸೊನೆಟ್ಟಿಗೆ ಕನ್ನಡ ರೂಪ ಕೊಡಲು ಹವಣಿಸಿದರು. ಕೆಲವರು ೧೨ ಸಾಲಿನ ಸೀಸಪದ್ಯ, ಕೆಲವರು ನಾಲ್ಕು ಸಾಲಿನ ನಾಲ್ಕು ಶ್ಲೋಕಗಳು, ಕೆಲವರು ಒಂದು ಪಲ್ಲವಿ ಮತ್ತು ನಾಲ್ಕು ಸಾಲಿನ ಮೂರು ನುಡಿಗಳು ಈ ರೀತಿಯಲ್ಲಿ ಸೊನೆಟ್ಟಿಗೆ ದೇಹ ಕೊಡಲು ಪ್ರಯತ್ನಿಸಿದರು. ನಾನು ನಾಲ್ಕು ಷಟ್ಪದಿಗಳಿಂದ ಸಾನೆಟ್ ಸದೃಶವಾದ ನಾಲ್ವರಿಗಳನ್ನು ಬರೆದೆ. ಅವುಗಳ ಉದಾಹರಣೆಗಳು 'ಗರಿ' ಯಲ್ಲವೆ. ಆದರೆ ಹದಿನಾಲ್ಕು ಸಾಲುಗಳು ಅದರಲ್ಲಿಯೂ ಎಂಟು ಸಾಲಿನ ಒಂದು ಖಂಡ, ಆರು ಸಾಲಿನದಿನ್ನೊಂದು, ಈ ಎರಡು ಖಂಡಗಳಲ್ಲಿ ಭಾವದ - ವಿಚಾರದ ತಿರುವು, ಸಾನೆಟ್ ಸಂಪ್ರದಾಯದ ಪ್ರಾಸರಚನೆ, ಈ ಲಕ್ಷಣಗಳುಳ್ಳ ಈ ಕವನ ರೂಪವು ಕನ್ನಡದಲ್ಲಿ ನೆಲೆಗೊಳ್ಳುವಂತೆ ತೋರುತ್ತದೆ. .... ನನ್ನೀ ಅಷ್ಟಪದಿಗಳಲ್ಲಿ ಪ್ರಾಸಸಾಹಿತ್ಯ, ಪಾದಾಂತ ಯತಿಯ ನಿಯತರಾಹಿತ್ಯ ತಿರುಪಿನ ವೈಚಿತ್ರ್ಯ ಇವು ಹೊಸ ಲಕ್ಷಣಗಳಾಗಿವೆ. ಇದಲ್ಲದೆ ಮತ್ತೆ ಬೇರೆ ಪ್ರಯೋಗಗಳನ್ನು ಇವುಗಳಲ್ಲಿ ಮಾಡಿದ್ದಾಗಿದೆ.''[೮೯]

ಬೇಂದ್ರೆಯವರ ನಿರಂತರ ಪ್ರಯೋಗಶೀಲತೆ ಹಾಗೂ ಸುತ್ತಮುತ್ತಲಿನ ಸಾಹಿತ್ಯ ರಚನೆಗೆ ಅವರು ತೋರುತ್ತಿದ್ದ ಪ್ರತಿಕ್ರಿಯೆ ಇದರಿಂದ ಗೊತ್ತಾಗುತ್ತದೆ. 'ಗಂಧವತಿ', 'ಗಾರುಡಿಗ', 'ಅಲ್ಲಮಪ್ರಭು', 'ರತ್ನಾಕರ', 'ನೀನು ಮರೆವುದೇ ನನ್ನ', 'ಇಜ್ಜೋಡು' ಮುಂತಾದ ಹೆಸರಾಂತ ಅಷ್ಟಷಟ್ಪದಿಗಳಲ್ಲಿ ಬೇಂದ್ರೆಯವರು ತಾವಂದುಕೊಂಡ ಭಾವ-ವಿಚಾರಗಳನ್ನು ಶಿಲ್ಪಿಯ ತರಹ ಕಡೆದಿಟ್ಟರು.

ಕವಿ ರತ್ನಾಕರವರ್ಣಿಯು ಶೃಂಗಾರ-ತ್ಯಾಗಗಳನ್ನು ಒಂದುಗೂಡಿಸಿದ ಬಗೆ 'ರತ್ನಾಕರ' ಸಾನೆಟ್ಟಿನ ವಿಷಯವಾಗಿದೆ.

........................ಕಲ್ಲಿನಲು
ನಂದನದ ಅಂದ ಕಂಡರಿಸಿ ಕುಸುರಿಸಿ ನಗುವ
ರೂವಾರಿ ಬಗೆ; ದುಗುಡ ದುಮ್ಮಾನಗಳ ಹಗೆಯೊ
ಜಾತಿ ರಸಿಕರನೆ ನೀನು । ಹಿಡಿದುದೇ ತಿರುಳು, ನುಡಿ
ದುದೆ ಹುರುಳು' ನಿಜವಾಗಿ ಲೌಕಿಕವಲೌಕಿಕವು!

ನೆಲ-ಘುಗಿಲನ್ನು, ಇಹ-ಪರವನ್ನು ಒಂದುಗೂಡಿಸಿ ಬರೆದ ಆ ಪರಂಪರೆ ಬೇಂದ್ರೆಯವರಿಗೆ ಆಪ್ತವಾಗಿರುವುದು ಅವರ ಅಭಿವ್ಯಕ್ತಿಯಲ್ಲಿ ಕಾಣಸಿಗುತ್ತದೆ.

ನೆಲಮುಗಿಲುಗಳನೊಂದೆ ಅಂಗೈಲಿ ಹಿಡಿವಂತೆ
ಭೋಗಯೋಗವ ಹೊಂದಿಸಿಹ ದಿವ್ಯ-ಭವ್ಯ ಕವಿ!

೭.೯ 'ನಾದದ ನದಿಯೊಂದು ನಡೆಧಾಂಗ' :

ಶಬ್ದ, ನಾದ, ಲಯ, ಪ್ರಾಸ, ಧ್ವನಿ, ಗತ್ತುಗಳ ಮೂಲಕ ತಮ್ಮ ಕವಿತೆಗೆ ಬೇಕಾದ ಭಾವ - ಬುದ್ಧಿ - ಸೌಂದರ್ಯವನ್ನು ಬೇಂದ್ರೆಯವರು ತಂದುಕೊಂಡರು. ರೂಪಕ, ಪ್ರತಿಮೆ, ಶ್ಲೇಷೆಗಳ ಮುಖಾಂತರ ನಿಸರ್ಗದ ಪ್ರತಿಮಾಲೋಕವನ್ನು ಸೃಷ್ಟಿಸಿ ಆ ವಾಹಕದಿಂದ ತಾವು ಹೇಳಬೇಕಾಗಿರುವ ಅನುಭೂತಿಯನ್ನು ಚಿತ್ರವನ್ನಾಗಿ ಬಿಡಿಸಿ ಇಡುತ್ತಾರೆ. ಮೂರ್ತ ವಸ್ತುಗಳ ಅನುಭವವನ್ನು ನೀಡುತ್ತ ಅಮೂರ್ತ ಅನುಭವದ ಪರಿಕಲ್ಪನೆ ಒದಗಿಸುತ್ತಾರೆ. ಶ್ರಾವಣದ ಹರಯವನ್ನು, ಸಂಜೆಯ ಸೊಬಗನ್ನು, ಬೆಳದಿಂಗಳಿನ ಸಂಪತ್ತನ್ನು, ಪ್ರೇಮದ ಸುಖವನ್ನು, ಬೆಳಗು ತೋರುವ ಸ್ವರ್ಗವನ್ನು ಬೇಂದ್ರೆಯವರಂತೆ ಅಪ್ಪಟ ಕಾವ್ಯವಾಗಿ ಚಿತ್ರಿಸಿದವರು ವಿರಳ. ನೈಜತೆ ಮತ್ತು ಕಲ್ಪನೆಯನ್ನು ಸೇರಿಸುವ ಕುಸುರಿಯ ಕೆಲಸವನ್ನು ಚೂರೂ ಕುಂದುಂಟಾಗದಂತೆ ನೆರವೇರಿಸಿದರು. ಹೃದಯ ಸಮುದ್ರದ ಶಾಂತಿಯನ್ನು ಮತ್ತು ಕಾಡಿನ ಹಕ್ಕಿಗಳ ಇಂಚರವನ್ನು ಜೊತೆಗೂಡಿಸಿ ಲೌಕಿಕ ಪ್ರತಿಮೆಗಳ ಮೂಲಕ ಅಲೌಕಿಕ ಸಾಧನೆಯ ಮೆಟ್ಟಿಲುಗಳನ್ನು ಸಹೃದಯನಿಗಾಗಿ ಕಟ್ಟುತ್ತಾರೆ. ಬಣ್ಣ, ರೂಪ, ಧ್ವನಿಗಳಲ್ಲಿ ಅಗಾಧ ಅರ್ಥಗಳನ್ನು ತುಂಬಿ ಅಲಂಕಾರಗಳಿಂದ ಸಾದೃಶ್ಯ-ವೈದೃಶ್ಯಗಳನ್ನು ಕಣ್ಣಿಗೆ ಕಟ್ಟುವಂತೆ ಬೇರ್ಪಡಿಸಿ ಕಾವ್ಯದ ಅಭಿವ್ಯಕ್ತಿಯನ್ನು ತಮ್ಮ ಅನುಭವದ ಮಾಧ್ಯಮವನ್ನಾಗಿಸಿಕೊಂಡರು. ಛಂದಸ್ಸಿನಲ್ಲಿ ಹೊಸ ಹೊಸ ಪ್ರಯೋಗಗಳನ್ನು ನಡೆಸಿದಂತೆ ಅಲಂಕಾರ ಪ್ರತಿಮೆಗಳ ಉಪಯೋಗದಲ್ಲಿಯೂ ಅನನ್ಯತೆಯನ್ನು ಅವರು ಸಾಧಿಸಿದರು. ಬೆಳಗು, ಬೆಳದಿಂಗಳು, ಬಿಸಿಲು, ಮಳೆ, ಚಳಿ, ದೀಪ, ಸಂಜೆ, ಸಮುದ್ರ, ಗಾಳಿ, ನೀರು, ಬೆಟ್ಟ, ಗುಡ್ಡ, ಲಿಂಗ, ಗಂಟೆ, ಹೂವು, ಬಸಿರು

ಮುಂತಾದ ಪ್ರತಿಮೆಗಳ ಮೂಲಕ ಲೌಕಿಕದ ಅನುಭವ ಹಾಗೂ ಚೈತನ್ಯದ ಸ್ವರೂಪದ ನಡುವಿನ ಸಂಬಂಧವನ್ನು ಬಿಡಿಸುತ್ತ ಹೋಗುತ್ತಾರೆ. ಅವರ ಕಾವ್ಯ ಹೊರಡಿಸುವ ಅರ್ಥದಲ್ಲಿ, ಅದು ತೋರುವ ರೂಪಕಗಳಲ್ಲಿ, ಅದು ಹರಿಸುವ ನಾದದಲ್ಲಿ ತಾದಾತ್ಮ್ಯತೆಯನ್ನು ಹೊಂದದೆ ಓದುಗನಿಗೆ ಬೇರೆ ದಾರಿಯಿಲ್ಲ. ಬೇಂದ್ರೆಯವರು ಕಡೆದು ಇಡುವ ಅನುಭೂತಿಯ ದರ್ಶನವಾಗದೆ ಇರದು. ಅವರ ನಿಸರ್ಗದ ಪ್ರತಿಮೆಗಳು ಎದೆಯಲ್ಲಿ ನಾಟುತ್ತವೆ. ಶಬ್ದಾಲಂಕಾರ ಹಾಗೂ ಅರ್ಥಾಲಂಕಾರಗಳ ಸೂಕ್ತ ಬಳಕೆಯಿಂದ ಕಾವ್ಯ ಕಿರಣಗಳು ಉಜ್ವಲವಾಗುತ್ತವೆ. ಮೌನ, ಸಂಕಟ, ದುಃಖಗಳನ್ನು ಕಾವ್ಯಪ್ರತಿಮೆಯಲ್ಲಿ ತೀವ್ರ ವಿಷಾದವನ್ನಾಗಿ; ಸುಖ, ಸಂಭ್ರಮ, ಆನಂದಗಳನ್ನು ಚರಮ ಅನುಭೂತಿಯನ್ನಾಗಿ ವ್ಯಕ್ತಪಡಿಸುವ ರೀತಿ ವಿಶೇಷವಾಗಿದೆ. ಅವರ ಪ್ರತಿಮಾ ವಿಧಾನವನ್ನು, ಅಭಿವ್ಯಕ್ತಿಯ ಆಳ-ಅಗಲಗಳನ್ನು ಸಂಪೂರ್ಣವಾಗಿ ಅಭ್ಯಾಸ ಮಾಡುವುದು ಈ ಅಧ್ಯಯನಕ್ಕೆ ಹೊರತಾದುದೂ ಹಾಗೂ ಆ ಕ್ಷೇತ್ರ ಬಹಳಷ್ಟು ವೈಶಾಲ್ಯವೂ ಆದುದರಿಂದ ಅವರ ಅಭಿವ್ಯಕ್ತಿಯ ಮಾದರಿಯಲ್ಲಿ ಪ್ರತಿಮೆ, ಉಪಮೆಗಳು ನಿರ್ವಹಿಸಿರುವ ಕೆಲವು ಉದಾಹರಣೆಗಳನ್ನು ಮಾತ್ರ ಇಲ್ಲಿ ವಿವೇಚಿಸುವ ಪ್ರಯತ್ನ ಮಾಡಲಾಗಿದೆ.

ಬೇಂದ್ರೆಯವರ ಕಾವ್ಯದಲ್ಲಿ ಉಪಮೆ, ರೂಪಕ, ಶ್ಲೇಷೆ, ಶಬ್ದ, ಪ್ರಾಸ, ಅರ್ಥ, ಉತ್ಪ್ರೇಕ್ಷೆ, ದೃಷ್ಟಾಂತ, ವೈರುಧ್ಯ, ವೈದೃಶ್ಯಗಳು ಕೇವಲ ಕಾವ್ಯ ಸೌಂದರ್ಯಕ್ಕಾಗಿ ಬಳಕೆಯಾಗದೆ ಕಾವ್ಯದ ಸ್ವಭಾವವಾಗಿ ಮೂಡಿಬಂದು ಒಂದು ಪ್ರತಿಮಾಲೋಕವನ್ನು ಸೃಷ್ಟಿಸುತ್ತವೆ. ಇಂತಹ ಪ್ರತಿಮಾಲೋಕ ಮನುಷ್ಯ ಬದುಕಿನ ಕನ್ನಡಿಯಾಗಿ, ಅವನ ತಹತಹಿಕೆಯನ್ನು ತಣಿಸುವ ಸಾಧನವಾಗಿ ಮಾರ್ಪಾಟಾಗುತ್ತದೆ. ಬೆಳಕ ಹಕ್ಕಿಯ ಬೆನ್ನು ಏರಿ, ನೀರಿನ ಉಸಿರಿನ ಮೇಲೆ ಹಾರಿ ಗಾಳಿಯಲ್ಲಿ ಸುಳಿಯುವ ಹಂಸ, ಅಪ್ಪಿಕೊಂಡ ಅಪ್ಪುಗೆಯನ್ನು ಬಿಡದ ಚಳಿಯಾಕೆ, ರತ್ನದ ರಸವಾಗಿ ಪುಟಿಯುವ ಬೆಳಕಿನ ಕಾರಂಜಿ, ನಂದನದ ತುಣುಕು ಆಗುವ ಸಾಧನಕೇರಿಯ ಮಳೆ ಬಿದ್ದ ನೆಲ, ಹುಣ್ಣಿಮೆಯ ಮರುದಿನ ಆಕಾಶದಲ್ಲಿ ತೇಲುತ್ತಿರುವ ಚಂದ್ರನ ಹೆಣ, ಹುಬ್ಬು ಹಾರಿಸುವ ಹುಬ್ಬಿ ಮಳೆ, ರಾವಣನಂತೆ ಕುಣಿಯುವ ಶ್ರಾವಣ, ಗಿರಣಿ ಕರೆಯುವಂತೆ ಕೂಗುತ್ತಿರುವ ಕೋಗಿಲೆ ಮುಂತಾದ ಅಸಂಖ್ಯ ಪ್ರತಿಮೆಗಳ ಸಹಾಯದಿಂದ ಬೇಂದ್ರೆ ಸಾಧಿಸುವ ಕಾವ್ಯಶಿಲ್ಪ ಅಸಾಧಾರಣ ಹಾಗೂ ಅಪರಿಮಿತ ಶಕ್ತಿಯ ಕಾವ್ಯಸೃಷ್ಟಿಗೆ ಕಾರಣವಾಗುತ್ತದೆ. ಬಿಸಿಲು ಕುಣಿದು ಬೆವೆಯುವುದು, ನಾದದ ನದಿ ನಡೆಯುವುದು, ಮುಗಿಲು ಕಡಕೊಂಡು ಬೀಳುವುದು ಅಸಾಧಾರಣ ಕಾವ್ಯ ಕೌಶಲ್ಯಕ್ಕೆ ಉದಾಹರಣೆಗಳಾಗಿವೆ. ಅಂತಹ ಒಂದೆರಡು ಉದಾಹರಣೆಗಳು ಹಳೆಗನ್ನಡದ ಪರಂಪರೆಯಲ್ಲಿ ಬೇಂದ್ರೆಯವರಿಗೆ ಪ್ರೇರಣೆ ಕೊಟ್ಟಿದ್ದರೂ ಹೊಸ ಅಭಿವ್ಯಕ್ತಿಗೆ ಬೇಂದ್ರೆ ಜೋಡಿಸಿಕೊಂಡ ವಿಧಾನ ಮಾತ್ರ ಅವರ ಪ್ರತಿಭೆಗೆ ಸಾಕ್ಷಿಯಾಗಿದೆ.

೭.೧೧ ಪ್ರತಿಮಾಲೋಕದ ಅಪ್ರತಿಮ ಸಾಧಕ :

ಲೌಕಿಕತೆ ಮತ್ತು ಅಲೌಕಿಕತೆಗಳನ್ನು ಬೆಸೆಯುವ, ಮನುಷ್ಯ ಜೀವನವನ್ನು ದೈವತ್ವದ ಕಿರಣಗಳಲ್ಲಿ ಹಾಸುವ ಹಾಗೂ ಆನಂದ-ಅನುಭೂತಿಗಳನ್ನು ದೊರಕಿಸುವ ಗುರುತರವಾದ ಉದ್ದೇಶ ಬೇಂದ್ರೆಯವರ

ಕವಿತೆಗಳಿಗಿರುವುದರಿಂದ ಅವರ ಪ್ರತಿಮೆಗಳು ಕವಿತೆಯ ಅರ್ಥ-ವಿಸ್ತಾರಗಳ ಜೊತೆಗೆ ಎರಕ ಹೊಯ್ದಂತೆ ಬೆಸೆದುಕೊಳ್ಳುತ್ತವೆ. ಅಂದರೆ ಯಾವ ಅಲಂಕಾರವೂ ಕವಿತೆಯ ಸೌಂದರ್ಯವನ್ನು ವೃದ್ಧಿಸುವ ಕೆಲಸಕ್ಕಷ್ಟೆ ಸೀಮಿತಗೊಳ್ಳುವುದಿಲ್ಲ. ಪುರಾಣ, ಇತಿಹಾಸ, ನೆನಪು, ಅದೃಷ್ಟಗಳ ಜೊತೆ ಅವು ಸಾಹಚರ್ಯ ನಡೆಸುವುದರಿಂದ ಕಾಲಾತೀತವಾದ ಪರಿಣಾಮವನ್ನು ಸೃಷ್ಟಿಸಲು ಅವರ ಪ್ರತಿಮೆಗಳಿಗೆ ಸಾಧ್ಯವಾಗಿದೆ.

'ಏಳು ಕನ್ನಿಕೆಯರು'[೨೪] ಪದ್ಯದಲ್ಲಿ ಕರ್ಮ ಕುದಿಗೆ ಬರುವುದು; ಹರ್ಷ ಹೆಪ್ಪುಗಟ್ಟುವುದು; ಡೊಳ್ಳು ಬಿದ್ದ ತಂತಿಯಿಂದ ಜೊಳ್ಳುನಾದವೇಳುವುದು, ಬೆಳಕಿನ ಕುಡಿ ಆರುವುದು ಮುಂತಾದ ಪ್ರತಿಮೆಗಳ ಕೆಲಸ, ನಾಯಕನ ಅಸಾಫಲ್ಯತೆಯನ್ನು ತೋರಿಸುವುದಷ್ಟೆ ಆಗಿರದೆ ಗೊಮ್ಮಟ ಮತ್ತು ನಾಯಕನ ನಡುವೆ ಸಾದೃಶ್ಯ-ವೈದೃಶ್ಯಗಳ ಹೊಂದಾಣಿಕೆ ಮಾಡುವದಾಗಿದೆ. 'ಬೆಳುದಿಂಗಳ ನೋಡs'[೨೫] ಕವಿತೆ ಕೆಡುಕೆ ಇಲ್ಲದ ಲೋಕವೊಂದನ್ನು ಕಣ್ಣ ಮುಂದಿಡುತ್ತದೆ. ಹಗಲು ಹಿಂಗುವ, ಗಂಧ ತುಳುಕುವ, ತೆನೆ ಮಾಗುವ, ಅರೆಮರೆವು ಉಂಟು ಮಾಡುವ ಜೀವನಕ್ಕೆ ಸವಿರಾಗ ಬೆರೆಸುವ ಚಿತ್ರಗಳು ಒಂದು ರಮ್ಯ, ಉದಾತ್ತ ಹಾಗೂ ಕಲ್ಪನಾತೀತವಾದ ಸುಖಜಗತ್ತಿನ ಪರಿಚಯ ಮಾಡಿಸುತ್ತವೆ. ಚಂದ್ರನ ಬೆಳದಿಂಗಳು ಹಾಲಿನ ಸಮುದ್ರವಾಗುವ ರೂಪಕ ಬೇಂದ್ರೆಯವರ ಅಸಾಧಾರಣ ಸೃಷ್ಟಿಗಳಲ್ಲೊಂದಾಗಿದೆ.

ಇದು ಹಾಲುಗಡಲಿನs ಸೀಮಿ
ಚಂದ್ರಮನೆ ಸ್ವಾಮಿ
ಚಂದ್ರಮನೆ ಸ್ವಾಮಿ
ಏನೆಂಥ ಹಂದರದ ಈsಡs
ಬೆಳುದಿಂಗಳ ನೋಡs

ಚಂದ್ರಮನು ತರುವ ಕಾಲ ಬೇರೆಯದೆ ಆದ ಲೋಕಕ್ಕೆ ಕರೆದೊಯ್ಯುತ್ತದೆ. ದುಡಿತದ ಕತ್ತಲು ಇಂಗಿ ಜೀವನದಲ್ಲಿ ಸುಖದ ಬೆಳಕು ಪಸರಿಸುತ್ತದೆ.

ದಣಿಸಿದಾ ಹಗಲು ಹಿಂಗ್ಯsದ
ಕತ್ತಲಿಂಗ್ಯದ
ಬೇರೆ ಈ ಕಾsಲs
ಬೇರೆ ಈ ಕಾsಲs
ನಡು ನಿದ್ದಿಯೊಳಗ ಇದ್ದಾಂಗ
ಕನಸು ಬಿದ್ದಾಂಗ
ಕನಸು ಬಿದ್ದಾಂಗ

ತೆರೆದsದ ತಣಿವೀಕಿ ನಾsಡs

ಬೆಳುದಿಂಗಳ ನೋಡs॥

ನಡುನಿದ್ದೆಯೊಳಗೆ ಏನಾಗುತ್ತದೆಯೆಂಬ ವಾಸ್ತವದ ಅರಿವು ಇಲ್ಲದೆ ಕನಸಿನಲ್ಲಿ ತೇಲಾಡುವಂತೆ ಒಂದು ಹೊಸ ತಣಿವಿಕೆಯ ನಾಡಿನ ಬಾಗಿಲು ತೆರೆಯುತ್ತಾರೆ. ಈ ಕವನದಲ್ಲಿ ಕವಿ ಉಪಯೋಗಿಸುವ ಕಾವ್ಯ, ಧ್ವನಿ, ಅರ್ಥ ಹಾಗೂ ನಾದ ಪುನರುಕ್ತಿಗಳು ಕವಿತೆಯ ಬೆಳವಣಿಗೆಗೆ ಪೂರಕವಾಗಿ ಮಂತ್ರವಾದಿಯ ವಶಕ್ಕೆ ಒಳಪಟ್ಟ ವಸ್ತುಗಳಂತೆ ಶಬ್ದಗಳು ಬೇಂದ್ರೆ ಎಂಬ ಗಾರುಡಿಗನ ಕೈಯಲ್ಲಿ ಲೀಲಾಜಾಲವಾಗಿ ಆಟವಾಡುತ್ತವೆ. ಹೊನ್ನಿನ, ಬೆಡಗಿನ ನೀರಿನಿಂದ ಪ್ರೋಕ್ಷಣೆಗೊಳ್ಳುತ್ತವೆ.

ಉಪಮೆ, ರೂಪಕಗಳನ್ನು ಯೋಗ್ಯ ಕ್ರಮದಲ್ಲಿ ಉಪಯೋಗಿಸುವ ಕ್ರಮ, ಅನುಪಮವಾದ ಕಲ್ಪನಾ ಶಕ್ತಿ ಹಾಗೂ ಭಾಷೆಯ ಸಮೃದ್ಧತೆ ಬೇಂದ್ರೆಯವರ ಕಾವ್ಯ ಅಲಂಕಾರಗಳಿಗೆ ವಿಶೇಷ ಅರ್ಥ ಒದಗಿಸುತ್ತವೆ. ಇಂತಹ ಗೇಯ ಹಾಗೂ ನಾದದ ಗುಣವನ್ನು ಅವರು ಲಕ್ಷ್ಮೀಶನಿಂದ ಪಡೆದಿದ್ದಾರೆಂಬುದು ಸ್ಪಷ್ಟವಾಗಿದೆ.

ಅಗಲಿದ ಇನಿಯನ ಥಕ್ಕನೆ ನೋಡುತ

ಬಸಿರ ಹೂ ಕುಲುಕುಲು ನಕ್ಹಾಂಗ

ನಲ್ಲ ಮುಟ್ಟಿದ ಗಲ್ಲ, ನಲ್ಲೆಯ ಮೈಯೆಲ್ಲ

ಹಿಗ್ಗಿನ ಮುಳ್ಳಿಗೆ ಸಿಕ್ಹಾಂಗ

ಜುಮ್ ಜುಮು ರುಮುಜುಮು ಗುಂಗುಣು ದುಮುದುಮು

ನಾದದ ನದಿಯೊಂದು ನಡೆದ್ಹಾಂಗ

ಗಲ್ಲಗಲ್ಲಕೆ ಹಚ್ಚಿ ನಲ್ಲ ನಲ್ಲೆಯರಿರುಳು

ಗುಜುಗುಜು ಗುಲುಗುಲು ನಡೆದ್ಹಾಂಗ[೮೬]

ಬೇಂದ್ರೆ ಸೃಷ್ಟಿಸುವ ರೂಪಕದ ಜಗತ್ತು ತಾದ್ರೂಪ್ಯವನ್ನು ಎಷ್ಟರ ಮಟ್ಟಿಗೆ ಅವರು ಸಾಧಿಸುತ್ತಿದ್ದರೆಂಬುದರ ನಿದರ್ಶನವಾಗಿದೆ. ಉಪಮಾನ- ಉಪಮೇಯಗಳು ಎರಡೂ ಒಂದೆ ಎನ್ನುವಂತೆ ಅವರು ಹೋಲಿಕೆಗಳನ್ನು ಕಾವ್ಯದಲ್ಲಿ ಬಂಧಿಸುತ್ತಿದ್ದರು. 'ನಾದಲೀಲೆ' ಸಂಕಲನದ 'ದೀಪ'[೮೭] ಕವಿತೆ ಇದಕ್ಕೆ ಒಂದು ಒಳ್ಳೆಯ ಉದಾಹರಣೆಯಾಗಿದೆ.

ಬಂತಿದೊ ಶೃಂಗಾರಮಾಸ

ಕಂತು ನಕ್ಕ ಚಂದ್ರಹಾಸ

ಎಂತು ತುಂಬಿತಾsಕಾಶ

ಕಂಡವರನು ಹರಸಲು

ಶೃಂಗಾರ ಮಾಸದಲ್ಲಿನ ಮನ್ಮಥನ ನಗು ಚಂದ್ರನ ನಗೆಯಾಗಿದೆ. ಹಾಗೆಂದೆ, ಎಷ್ಟೊಂದು ರೀತಿಯಲ್ಲಿ ಕಂಡ ಪ್ರೇಮಿಗಳನ್ನು ಹರಸಲು ಆಕಾಶ ತುಂಬಿ ನಿಂತಿದೆ. ಇಂತಹ ಮೋಹಕವಾದ ರಾತ್ರಿಯಲ್ಲಿ ತನ್ನ ನಲ್ಲನನ್ನು ಹುಡುಕುತ್ತ ಹೊರಟ ನಲ್ಲೆಯ ಮುಂಗುರುಳು ಹೂವುಗಳಂತೆ ಕುಣಿಯುತ್ತಿವೆ.

ಕಿರಿಬೆರಳಲಿ ಬೆಳ್ಳಿ ಹರಳು
ಕರಿಕುರುಳೊಳು ಚಿಕ್ಕೆ ಅರಳು
ತೆರಳಿದಳಿದೊ ತರಳೆ ಇರುಳು
ತನ್ನ ರಸನನರಸಲು

“ಶಬ್ದಾಲಂಕಾರ ಹಾಗೂ ಅರ್ಥಾಲಂಕಾರಗಳ ಮಧುರ ಸಂಯೋಜನೆಗೆ ಈ ಸಾಲುಗಳಿಗಿಂತ ಉತ್ತಮ ಉದಾಹರಣೆಗಳು ಸುಲಭದಲ್ಲಿ ಸಿಗಲಾರವು. ‘ಇರುಳು’, ‘ತರಳೆ’ ಗಳ ಸಂಯೋಗದಲ್ಲಿ ಕವಿಗೆ ಹೊಸ ಪ್ರತಿಮೆಗಳು ಲಭ್ಯವಾಗುತ್ತವೆ. ‘ಬೆಳ್ಳಿ ಹರಳು’, ‘ಚಿಕ್ಕೆ ಅರಳು’ ಇಂಥ ಪ್ರತಿಭಾಜನ್ಯ ರೂಪಕಗಳು. ಪ್ರಾಸ-ಅನುಪ್ರಾಸ, ಯಮಕಗಳಿಂದ ಉತ್ಪನ್ನವಾಗುವ ಲಯಮಾಧುರ್ಯ ಈ ಸಾಲುಗಳಿಗೆ ಅಪೂರ್ವ ರಮ್ಯತೆ ತಂದುಕೊಟ್ಟಿವೆ”[೮೮] ಎಂದು ಬೇಂದ್ರೆ ಕಾವ್ಯದ ರೂಪಕ ಶಕ್ತಿಯನ್ನು ಡಾ. ಅಮೂರರು ಪ್ರಶಂಸಿಸುತ್ತಾರೆ. ಹರಳು, ಅರಳು, ಇರುಳು ಇಂತಹ ಪ್ರಾಸ ಸಂಯೋಜನೆಯಿಂದ ಅಪೂರ್ವ ಧ್ವನಿಯನ್ನು ಬೇಂದ್ರೆಯವರು ಕವಿತೆಗೆ ಒದಗಿಸಿಕೊಡುತ್ತಾರೆ. ಅದೇ ರೀತಿ ಹೂವಿನ ಕಂಪನ್ನು ಗಾಳಿ ತಬ್ಬುತ್ತಿರುವ, ಚಂದ್ರನ ಮಾರ್ದವತೆಗೆ ಮನಸ್ಸು ಸೋತಿರುವ, ಕೆರೆಯಲ್ಲಿಯ ತೆರೆಗಳು ದಂಡೆಗೆ ಸೇರುವ ರೂಪಕಗಳನ್ನು ಆಕರ್ಷಕವಾಗಿ ಕಟ್ಟಿಕೊಡುವ ಮೂಲಕ ‘ಗಮ್‌ಗಮಾಗಮಾಡಸ್ತಾವ ಮಲ್ಲಿಗೆ’ ಎನ್ನುವ ಕವಿತೆ ನಲ್ಲ-ನಲ್ಲೆಯರ ಪ್ರೀತಿಯ ಉತ್ಕಟ ಅಭಿವ್ಯಕ್ತಿಯಾಗಿದೆ. ನಿಸರ್ಗದ ಬೆಳದಿಂಗಳು ಹಾಗೂ ಮನದ ಹಾಡು ಒಂದಕ್ಕೊಂದು ಪ್ರೇರಕವಾಗಿವೆಯೆನ್ನುವುದು ಆಕರ್ಷಣೆಗಳು ಸಮೀಪಕ್ಕೆ ಬರುವ ಸೂಚನೆಯಾಗಿದೆ.

ಚಿಕ್ಕಿ ತೋರಿಸ್ತಾವ ಚಾಚಿ ಬೆರಳ
ಚಂದ್ರಾಮ ಕನ್ನಡೀ ಹರಳ
ಗಾಳಿ ತಬ್ಬತಾವ ಹೂಗಂಪ
ಚಂದ್ರನ ತೆಕ್ಕೆಗಿದೆ ತಂಪ
ನೆರಳಲ್ಲಾಡತಾವ ಮರದ ಬುಡುಕ
ಕೆರೆ ತೆರಿ ನೂಗತಾವ ದಡsಕ
ಹಾಡು ಹುಟ್ಟಿ ಒಂದು ಮನದಾಗ
ಬೆಳದಿಂಗಳಾತು ಬನದಾಗ’[೮೯]

ಬಹಳಷ್ಟು ಸಹೃದಯರ ಹಾಗೂ ವಿಮರ್ಶಕರ ಗಮನಕ್ಕೆ ಬಂದಿರುವ, ಉತ್ಕಟ ಕಾವ್ಯಾಭಿವ್ಯಕ್ತಿಗೆ ಉದಾಹರಣೆಯಂತಿರುವ ಅವರ ಒಂದು ರೂಪಕವೆಂದರೆ ಮುಗಿಲಿನಲ್ಲಿ ಹುಣ್ಣಿಮೆ ಚಂದ್ರನ ಹೆಣ ತೇಲಿ ಬರುವುದು. ಹಕ್ಕಿಯ ತುಪ್ಪಳದಂತೆ ಮೃದುವಾದ ಬೆಳಕನ್ನು ಚೆಲ್ಲುವಂತಹ ಚಂದ್ರ, ಮನಸ್ಸಿಗೆ ತಂಪು ನೀಡುವ ಚಂದ್ರ, ಪ್ರೇಮದ ಪ್ರತೀಕವಾಗಿರುವ ಚಂದ್ರ ಮುಂತಾದ ಚಂದ್ರನ ವಿವಿಧ ರೂಪಗಳನ್ನು ಸವಿಯುತ್ತ ಬರುವ ಓದುಗರಿಗೆ 'ನೀ ಹೀಂಗ ನೋಡಬ್ಯಾಡ ನನ್ನ'[೬೦] (ನಾದಲೀಲೆ) ಕವಿತೆಯಲ್ಲಿ ಸತ್ತ ಚಂದ್ರನ ರೂಪವನ್ನು ಕಂಡು ಆಘಾತವಾಗುತ್ತದೆ. ಕವಿತೆಯ ಪಾತ್ರಧಾರಿಗಳಾದ ನಾಯಕ-ನಾಯಕಿಯರು ತಮ್ಮ ಮಗು ಸತ್ತ ದುಃಖದಲ್ಲಿ ಮುಗಿಲು ಕಡಿದುಕೊಂಡು ಕೆಳಗೆ ಬಿದ್ದಂತೆ ದುಃಖದಲ್ಲಿ ಮುಳುಗಿರುವ ಯಾತನೆಯನ್ನು ಸಹೃದಯನಿಗೂ ವರ್ಗಾವಣೆ ಮಾಡಬಲ್ಲ ರೂಪಕ ಶಕ್ತಿಯನ್ನು ಈ ಕವಿತೆ ಪಡೆದುಕೊಂಡಿದೆ.

ಇಬ್ಬನಿ ತೊಳೆದರೂ ಹಾಲು ಮೆತ್ತಿದಾ ಕವಳಿಕಂಟಿಯ ಹಣ್ಣು
ಹೊಳೆಹೊಳೆವ ಹಾಂಗ ಕಣ್ಣಿರುವ ಹೆಣ್ಣ, ಹೇಳು ನಿನ್ನವೇನ ಈ ಕಣ್ಣು?
ದಿಗಿಲಾಗಿ ಅನ್ನತದ ಜೀವ ನಿನ್ನ ಕಣ್ಣಾರೆ ಕಂಡು ಒಮ್ಮಿಗಿಲೆ
ಹುಣ್ಣಿವೀ ಚಂದಿರನ ಹೆಣಾ ಬಂತೋ ಮುಗಿಲಾಗ ತೇಲತ ಹಗಲ!

ಬೇಂದ್ರೆಯವರು ತಮ್ಮ ರೂಪಕ ಶಕ್ತಿಯನ್ನು ಕನ್ನಡ ಕಾವ್ಯ ಪರಂಪರೆ ಹಾಗೂ ಜಗತ್ತಿನ ಸಾಹಿತ್ಯದ ಅಗಾಧ ಓದಿನಿಂದ ಶಕ್ತಿಯುತವಾಗಿ ಮಾಡಿಕೊಂಡಿದ್ದಾರೆಂಬುದರಲ್ಲಿ ಎರಡು ಮಾತಿಲ್ಲ. ಸುಖದ ಛಾಯೆಯೇ ಇರಲಿ, ದುಃಖದ ಛಾಯೆಯೇ ಇರಲಿ, ಪ್ರಣಯದ ನಾದವೇ ಇರಲಿ, ವಿರಹದ ನೋವೆ ಇರಲಿ ಬೇಂದ್ರೆಯವರು ಅದರ ಸಂಪೂರ್ಣ ಭಾವವನ್ನು ಭಾಷೆಯಲ್ಲಿ ತರುತ್ತಾರೆ. ಕಣ್ಣೀರನ್ನು ತಡೆಹಿಡಿಯದೆ 'ಎವೆ ಬಿಡಿಸಿ ಕೆಡವು' ಎನ್ನುವುದು, ಕಣ್ಣಲಿ ಮಳೆ ಕಾಲೂರಿರುವುದು, ಹುಸಿನಗೆಯಿಂದ ಎದೆಯ ದುಃಖವನ್ನು ಮರೆಸದೆ, ಶೋಕ ತುಂಬಿಕೊಂಡ ಗಂಟಲಿನ ಬಿಕ್ಕನ್ನು ಕಚ್ಚಿ ಹಿಡಿಯದೆ ಜೋರಾಗಿ ಅತ್ತುಬಿಡು ಎಂದು ಹೇಳುವುದು ಬೇಂದ್ರೆ ಅನುಭವಿಸಿದ ದುಃಖ ಹಾಗೂ ಸಾವಿನ ಅನುಭೂತಿಯಾಗಿದೆ. ಬದುಕಿನ ವಿಷಾದವನ್ನು ಅನನ್ಯವಾದ ರೂಪಕಗಳಲ್ಲಿ ಹಿಡಿದಿಡುವ ಕಲೆ ಬೇಂದ್ರೆಯವರಿಗೆ ಸಿದ್ಧಿಸಿತ್ತು.

ರಾತ್ರಿ ಮುಗಿದು ಹಗಲು ಬಂದಾಗ ಮುಗಿಲಿನ ಚಂದ್ರ ಸತ್ವ ಕಳೆದುಕೊಂಡವನಂತೆ ಕಾಣುವುದು ಸಾಮಾನ್ಯ ಸಂಗತಿಯೆಂಬಂತೆ ತೋರಿದರೂ ಬೇಂದ್ರೆ ಅದಕ್ಕೆ ಕೊಡುವ ಶಕ್ತಿ ಮಾತ್ರ ಅಸಾಮಾನ್ಯವಾದದ್ದು. ಚಂದ್ರ ಬರೀ ಕಳಾಹೀನನಾಗಿಲ್ಲ. ಸತ್ತು ಹೆಣವಾಗಿದ್ದಾನೆ ಎನ್ನುವುದು ದುಃಖವನ್ನು ಅಭಿವ್ಯಕ್ತಿಸುವ ಪರಾಕಾಷ್ಠೆಯಾಗಿದೆ. ಬೇಂದ್ರೆಯವರಿಗಿಂತಲೂ ಮೊದಲು ಈ ತರಹದ ಹೋಲಿಕೆ ಕನ್ನಡ ಕಾವ್ಯದಲ್ಲಿ ಬಂದಿರುವುದನ್ನು ಹಾಗೂ ಅವರಿಗಿಂತ ಭಿನ್ನವಾಗಿ ಬೇಂದ್ರೆ ಅಭಿವ್ಯಕ್ತಿ ಮಾಡಿರುವುದನ್ನು ೧. ಡಾ. ಗಿರಡ್ಡಿ ಗೋವಿಂದರಾಜ ಹಾಗೂ ೨. ಗೌರೀಶ ಕಾಯ್ಕಿಣಿ ಗುರುತಿಸಿದ್ದಾರೆ.

೧. ಜನ್ನನ 'ಯಶೋಧರ ಚರಿತೆ'ಯಲ್ಲಿ ಕಳೆಗುಂದಿದ ಯಶೋಧರನ ಮುಖವನ್ನು ನೋಡಿ ಅವನ ತಾಯಿ ಚಂದ್ರಮತಿ 'ಏಕೆ ಕಂದ, ಪಗಲೊಗೆದಿಂದುವಿನಂತಾಯ್ತು ನಿನ್ನ ಮಂಗಲವದನಂ?' ಎಂದು ಕೇಳುವ ಪ್ರಸಂಗ ಬರುತ್ತದೆ.... ಜನ್ನನಲ್ಲಿಯ ಹೋಲಿಕೆ ಸಾಧಾರಣೀಕೃತಗೊಂಡದ್ದು. ಬೇಂದ್ರೆಯವರಲ್ಲಿ ಅದು ಖಚಿತ ವಿವರಗಳನ್ನು ಒಳಗೊಂಡ ರೂಪಕವಾಗಿದೆ. ಹುಣ್ಣಿವೆಯ ಚಂದಿರ ಮುಂಜಾವಿನಲ್ಲೂ ಸ್ವಲ್ಪ ಕಾಲ ಕಾಣಿಸುವುದು ಸಹಜ ಸಂಗತಿ... ಹಗಲಿನಲ್ಲಿ ಅವನು ತನ್ನ ಪ್ರಭೆಯನ್ನು ಕಳೆದುಕೊಂಡು ಹೆಣವಾಗುವ ವಿವರ ಹೊಸ ದೃಶ್ಯಪ್ರತಿಮೆಯಾಗಿ ಒಡಮೂಡಿದೆ. ನೀರಲ್ಲಿ ಮುಳುಗಿ ಮೂರು ದಿನಗಳ ನಂತರ ತೇಲತೊಡಗುವ ಹೆಣದ ನೆನಪನ್ನು ಇದು ತರುತ್ತದೆ. ಹೀಗೆ ಹೋಲಿಕೆ ಹಳೆಯದಾದರೂ ಅದು ಸೇಂದ್ರಿಯ ವಿವರಗಳ ಜೊತೆ ಹೊಸ ಔಚಿತ್ಯವನ್ನು ಗಳಿಸಿಕೊಂಡಿದೆ.[೧]

೨. ಸಾವಿರ ವರ್ಷ ಹಿಂದೆ ಭಾಸಕವಿಯ 'ಅವಿಮಾರಕ' ನಾಟಕದ ನಾಯಕನು ನಸುಕಿನ ಚಂದ್ರಬಿಂಬಕ್ಕೆ ಇದೇ ಉಪಮೆ ಕೊಡುತ್ತಾನೆ. ಅದು ಅಲ್ಲಿ ಕೇವಲ ಬಿಂಬ. ನಿಸ್ತೇಜ, ಕಳೆಗೆಟ್ಟ ರೂಪವಷ್ಟೇ ಅಭಿಪ್ರೇತ- ಈ ಚಂದ್ರನ ಪ್ರೇತದಲ್ಲಿ. ಆದರೆ ಅಂಬಿಕಾತನಯರ ಊಹೆಯ ನಿಲುಕು ಅದಕ್ಕೂ ಆಳ. ಅದಕ್ಕೂ ನವಿರಾದ ಕಕುಲಾತಿಯದು. ಹೀಗೆ ಕೆಲಸಲ ಈ ಕವಿಯ ಮನೋಮುಕುರದಲ್ಲಿ ಹಳೆಯ ಕವಿಗಳ ಛಾಯೆ ಕಾಣಿಸಿಕೊಂಡರೂ ಅವು ಇನ್ನೂ ಸಮೃದ್ಧವಾಗಿ ರೂಪಗೊಳ್ಳುತ್ತವೆ.[೨]

'ಕವಿಯ ಎಲ್ಲ ವ್ಯಾಪಾರ ಹೃದಯವೇದ್ಯ; ಹೃದಯಕ್ಕೆ ಹೃದಯದ ನೈವೇದ್ಯ ಅರ್ಪಿಸುವದೇ ಪ್ರತಿಭಾಮೂಲ. ಎಂಥ ಬೌದ್ಧಿಕ ತಿರಸ್ಕಾರಕ್ಕೂ ಸೊಪ್ಪು ಹಾಕದೆ 'ಬಾ ಭೃಂಗವೆ ಬಾ' ಎಂದು ಪರಿಮಳಿಸುತ್ತಿರುವುದೇ ಪರಿಪಾಕದ ಹಾದಿ ಎಂದು ಭಾವಿಸಿ, ಎಲ್ಲ ಕವಿಗಳಂತೆ ನಾನೂ ಅಮರತ್ವಕ್ಕೆ ಎಡೆ ಮಾಡುತ್ತಿದ್ದೇನೆ.'[೩] ಬೇಂದ್ರೆಯವರ ಈ ಮಾತುಗಳಲ್ಲಿ ಭಾವದೀಪವನ್ನು ಸದಾ ಪ್ರಕಾಶಿತಗೊಳಿಸುತ್ತಿರಬೇಕಾದ ಕವಿಯ ಆಶಯವನ್ನು ವ್ಯಕ್ತ ಮಾಡಲಾಗಿದೆ. ಹೃದಯ ಹೃದಯಗಳನ್ನು ಅರಳಿಸುವ ಕೈಂಕರ್ಯವನ್ನು ಅದು ಕೈಗೊಳ್ಳಬೇಕಾಗಿರುವುದರಿಂದ ದೈವವನ್ನು ಆರಾಧಿಸುವ ಒಂದು ತಪಸ್ಸಿನಂತೆ ಕಾವ್ಯವನ್ನು ಬೇಂದ್ರೆಯವರು ಸ್ವೀಕರಿಸಿದರು. 'ಸೌಂದರ್ಯಾವಿಷ್ಕಾರವು ಪಂಚೇಂದ್ರಿಯದ ಸಪ್ತರಂಗ ತರಂಗಿತವಾದರೆ ತೀರದು, ಬಹುರೂಪಿಯಾದ ಪ್ರಜ್ಞೆಯನ್ನು ಅದರ ಅಂತಃಪುರದ ವಿಲಾಸದಲ್ಲಿಯೂ, ನಿರಾಭರಣವಾದ ಸಹಜತೆಯಲ್ಲಿಯೂ ಕಾಣಬೇಕು. ಆವಿರ್ಭಾವ, ತಿರೋಭಾವಗಳ ತೆರೆತೆರೆದಾಟಗಳಲ್ಲಿ ಪ್ರತಿಭೆಯ ಅಂತರಿಕ್ಷ ಗಮನದ ಹೆಜ್ಜೆಗುರುತು ರಸಸ್ಪಂದಿಯಾದ ಸತ್ವದಲ್ಲಿ ಮೂಡುವವು ಎಂಬ ಶ್ರೀ ಅರವಿಂದರ ಪ್ರೇರಣೆ ನನ್ನ ಶ್ರುತಿಯನ್ನು ಹಿಂಡುತ್ತಲೆ ಇತ್ತು. ಆದರೂ ನನ್ನ ಕಾವ್ಯದೃಷ್ಟಿಯ ಉನ್ಮೀಲನವು ರವೀಂದ್ರರ ರಸಿಕೋದ್ಗಾರಗಳಿಂದಲೇ ಆಗಿತ್ತು ಎಂಬುದು ಸುಳ್ಳಲ್ಲ. ಕುರುಡ ಬೇಡಿದ್ದುದು ಒಂದು ಕಣ್ಣು, ದೇವರು ಕೊಟ್ಟದ್ದು ಎರಡು - ಎಂಬಂತಾಯಿತು ನನ್ನ ಕಾವ್ಯಗತಿ'[೪] ಎಂಬ ಅವರ ಮಾತಿನ ಜಾಡು ಹಿಡಿದು ಗಮನಿಸುವುದಾದರೆ ಆನಂದ ನೀಡುವ ಕಾವ್ಯದ ಹುಚ್ಚು ಹಾಗೂ ಆಧ್ಯಾತ್ಮಿಕ ಶೋಧ ಎರಡೂ ಅವರಿಗೆ ಮಹತ್ವದ

ಸಂಗತಿಗಳಾದವು. ಲೌಕಿಕತೆ ಹಾಗೂ ಅಲೌಕಿಕತೆಯೆಂಬ ಎರಡು ಮುಖಗಳು ಅವರ ಕಾವ್ಯಕ್ಕೆ ಪ್ರಾಪ್ತವಾದವು. ಟ್ಯಾಗೋರರನ್ನು ಮೊದಮೊದಲು ಓದಿದಂತೆಲ್ಲ ಅವರಂತೆಯೇ ತಾನೂ ಒಬ್ಬ ಕವಿಯಾದರೆ ಸಾರ್ಥಕವೆನ್ನುವ ಭಾವವಿತ್ತೆಂದು ತೋರುತ್ತದೆ. ಆದರೆ ಬರಬರುತ್ತ ಅರವಿಂದರ ಗಾಢ ಪ್ರಭಾವಕ್ಕೆ ಒಳಗಾದ ಬೇಂದ್ರೆಯವರಿಗೆ ದೈವಿಕ ಅನುಭೂತಿ ಅರವಿಂದರ ಅನುಭಾವದಿಂದ ದೊರೆಯತೊಡಗಿತು. ಅಷ್ಟಾಗಿಯೂ ಕೂಡ ರವೀಂದ್ರರು ಬೇಂದ್ರೆಯವರ ಮೇಲೆ ಅಗಾಧ ಪರಿಣಾಮ ಬೀರಿದ್ದರು. 'ನನ್ನ ಕನಸುಗಳಲ್ಲಿ ಬಂದು ಆನಂದ ದೀಕ್ಷೆ ಕೊಟ್ಟವರು ಅವರೂ ಅಹುದು...

ಅರಿವೆಂಬ ರವಿಯು ಮೂಡಲು
ಗುರುವೆಂಬಾತ್ಮಾರವಿಂದವರಳಿತು ನನ್ನೊಳ್

ನನಗೆ ಇಬ್ಬರೂ ಗುರುಗಳಾಗಿ ಸಮತೂಕ ಕೊಟ್ಟಿದ್ದಾರೆ. ಶೈಲಿಯ ಅನುಕರಣೆ, ವಿಷಯಗಳ ಅನುಸರಣೆ ಕವಿಯನ್ನೂ ಎತ್ತುವದಿಲ್ಲ; ಕಾವ್ಯವನ್ನೂ ಎತ್ತುವದಿಲ್ಲ. ಬೇಕಾದುದು ಮಹಾನುಭಾವರ ಜೀವನದ ಅಖಂಡ ಸ್ಮರಣೆ.'[೯೫]

ಟ್ಯಾಗೋರ್, ಅರವಿಂದರು, ಎ.ಇ.ಜಿಬ್ರಾನ್, ಮೆಟರ್‌ಲಿಂಕ್, ತತ್ವಪದಕಾರರು, ವಚನಕಾರರು, ದಾಸರು, ವೈದಿಕ ಸಾಹಿತ್ಯ, ಪುರಾಣದ ಕಥೆಗಳು, ದೃಷ್ಟಾಂತಗಳು ಹೀಗೆ ಹಲವು ಬಗೆಯ ಓದಿನ ಮೂಲಕವಾಗಿ ತಮ್ಮದೆ ಶೈಲಿ, ಅಭಿವ್ಯಕ್ತಿಯ ವಿಧಾನ, ವಸ್ತುವಿನ ನಿರ್ವಹಣೆಯನ್ನು ರೂಢಿಸಿಕೊಳ್ಳುತ್ತ ಕನ್ನಡದಲ್ಲಿ ಉತ್ಕೃಷ್ಟ ಕಾವ್ಯದ ರಚನೆ ಮಾಡಿದರು. ಅವರ ಕಾವ್ಯ ಪ್ರತಿಭೆಯ ಬೀಜ ಕನ್ನಡದ ಮಣ್ಣಿನ ಗಾಳಿ ಬೆಳಕಿಗೆ ಮೈದುಂಬಿಕೊಳ್ಳುತ್ತ ಅಂತರಿಕ್ಷದ ಕಡೆ ಮುಖ ಚಾಚುತ್ತದೆ.

ಏನು ದೇವ! ಓ ನಾನು ದೇವ ಈ ಭಾನು ದೇವ ಸುಡನೇ
ಬಯಲು ಹರಹೊಡೆದಿರಲು ಬಯಲು ಬಯಲಾಯ್ತು ಬಯಲಿನೊಡನೆ
ಸುತ್ತಲೆತ್ತವೂ ಶಮವು ತಮವು, ನಂದಿಸಿತು ನಂಜು ನೋವ
ಗಾಜುಗೊಳವಿಯಲಿ ದೀಪ ಬೆಳಗಿದೊಲು ಬೆಳಗುತ್ತಿತ್ತು ಭಾವ.[೯೬]

ಉತ್ತರಾಯಣ ಸಂಕಲನದ 'ಭಾವದೀಪ' ಎನ್ನುವ ಈ ಕವಿತೆಯಲ್ಲಿಯ ಮಣ್ಣು, ನದಿ, ಬಿಸಿಲು, ತಾಪ, ತಂಪು, ಬಯಲಿನ ಪ್ರತೀಕಗಳು ಪಾರಮಾರ್ಥಿಕವಾಗಿವೆ. ಅಲ್ಲಿ ಬರುವ ಕೆಲವು ರೂಪಕಗಳು ಸೃಷ್ಟಿಯ ಹಿಂದಿನ ಆನಂದ ಹಾಗೂ ಸಾಮರಸ್ಯದ ಸಂಕೇತಕ್ಕೆ ಉದಾಹರಣೆಗಳಾಗಿವೆ.

ಜಲಕ್ರೀಡೆಯಾಡುತ್ತಲಿದ್ದ ರವಿ ಕೂಡ ತಾಪ ಮರೆತು[೯೭]

*　　*　　*

ಯಾವ ನಾಡೊ ಇದು ಗಾಳಿ ತೀಡುತಿದೆ ಯಾರೊ ಹಾಡಿದಂತೆ[೯೮]

ಹಾಡಿನ ಆಹ್ಲಾದದಂತೆ ಗಾಳಿ, ಮನಸ್ಸನ್ನು ಸೋಕಿ ಕಾಡನ್ನು ನಂದನವನವವಿರುವ ನಾಡನ್ನಾಗಿ ಪರಿವರ್ತನೆ ಮಾಡುವುದು ಬೇಂದ್ರೆ ಅಭಿವ್ಯಕ್ತಿಯ ವಿಶಿಷ್ಟತೆಯಾಗಿದೆ. ಅದರಂತೆಯೆ ಭಾವದಲ್ಲಿಯೆ ಸಕಲವೂ ಅಡಕವಾಗಿರುವ ವಿಸ್ಮಯವನ್ನು 'ಇದ್ದಾಂಗ ಇತ್ತು ಎಲ್ಲಾ' ಕವಿತೆ ಹೇಳುತ್ತದೆ.

> ಬೆಳ್ದಿಂಗ್ಳ ಬಿದ್ದಿತ್ತು ಅಂಗಳ ತುಂಬ
>
> ಅಂಗಳ ತುಂಬಿತ್ತು ಬೆಳ್ದಿಂಗಳದಿಂದ
>
> ಇದರಾಗ ಅದೇ ಬಿತ್ತೊ
>
> ಅದೇನೆ ಇದರಾಗಿತ್ತೊ''

ಸರಳ ಶಬ್ದಗಳಲ್ಲಿ ಹೆಚ್ಚಿನ ಅರ್ಥ ಹುದುಗಿಸಿಟ್ಟು ಇಹದ ಬದುಕಿನಿಂದ ಪರಮಾರ್ಥದ ಮೇಲೆ ಬೆಳಕು ಚೆಲ್ಲುವ ಅನುಭಾವ ಮಾರ್ಗವನ್ನು ತುಳಿಯಲು ಬೇಂದ್ರೆ ಕವಿತೆಗಳು ಪ್ರಯತ್ನಿಸುತ್ತವೆ. ತತ್ವಬೋಧನೆ, ದರ್ಶನ, ವೈದಿಕ ಅರ್ಥಗಳು ಒಮ್ಮೊಮ್ಮೆ ಗಹನವಾಗಿ ಪದ್ಯ ಕ್ಲಿಷ್ಟವಾಗಿ ಉಳಿದುಬಿಡುವ ಸಂದರ್ಭಗಳು ಬರುತ್ತವೆ. ಬೇಂದ್ರೆಯವರ ಕೊನೆಯಕಾವ್ಯದ ದಿನಗಳ ಈ ಕ್ಲಿಷ್ಟತೆಯ ಹಾದಿಯ ಕುರಿತು ಕನ್ನಡ ವಿಮರ್ಶೆ ತನ್ನ ಪ್ರತಿಕ್ರಿಯೆಯನ್ನು ಆಗಾಗ ದಾಖಲಿಸುತ್ತ ಬಂದಿದೆ. ಬೇಂದ್ರೆ ಮತ್ತು ಸಮಕಾಲೀನರನ್ನು ಅಧ್ಯಯನಕ್ಕೆ ಒಳಪಡಿಸಿದ ಅಧ್ಯಾಯದಲ್ಲಿ ಇದನ್ನು ಚರ್ಚಿಸಲಾಗಿದೆ. ಕನ್ನಡದ ದೇಸಿ, ಸಂತ, ಸೂಫಿ ಭಕ್ತ ಪರಂಪರೆಯ ಜೊತೆ ತಮ್ಮನ್ನು ಜೋಡಿಸಿಕೊಳ್ಳುವ ಬೇಂದ್ರೆಯವರು ಶರಣ ಪರಂಪರೆಯ ಅನುಭಾವದೊಂದಿಗೆ ಗುರುತಿಸಿಕೊಂಡಷ್ಟು ಅವರ ಸಾಮಾಜಿಕ ವೈಚಾರಿಕತೆಯ ಕಡೆಗೆ ಹೆಚ್ಚಿನ ಗಮನ ನೀಡಲಿಲ್ಲವೆಂಬುದನ್ನು ಹಲವು ಲೇಖಕರು ಗುರುತಿಸಿದ್ದಾರೆ. ಇದಕ್ಕೆ ನಿದರ್ಶನಗಳನ್ನಾಗಿ ಪ್ರೊ. ಬರಗೂರು ರಾಮಚಂದ್ರಪ್ಪ, ಡಾ. ಜಿ.ಎಸ್.ಶಿವರುದ್ರಪ್ಪ, ಗೌರೀಶ ಕಾಯ್ಕಿಣಿ, ಡಾ. ಎಚ್.ಎಸ್.ರಾಘವೇಂದ್ರರಾವ್, ಡಾ. ಮೊಗಳ್ಳಿ ಗಣೇಶ್ ಮುಂತಾದವರ ಬರಹಗಳನ್ನು ನೋಡಬಹುದಾಗಿದೆ. ''ಬಸವ-ಸಿದ್ಧರಾಮ-ಅಲ್ಲಮ ಮೊದಲಾದವರು ಬೇಂದ್ರೆಯವರಿಗೆ ಪ್ರಿಯರಾದ ಶರಣರು. ಈ ಶರಣರು ಮತ್ತು ತತ್ವಪದಕಾರರಾದ ಸಂತರು ಮುಖ್ಯವಾಗಿ ಚಾತುರ್ವರ್ಣ ವ್ಯವಸ್ಥೆ, ಜಾತಿಪದ್ಧತಿ, ಪುರೋಹಿತಶಾಹಿ, ಸಾಂಸ್ಥಿಕ ಧರ್ಮದ ಪ್ರತಿನಿಧಿಗಳಾದ ಮಠ-ದೇಗುಲಗಳು ಇತ್ಯಾದಿಗಳ ವಿರುದ್ಧವಾಗಿ ಪ್ರತಿಭಟನೆಯ ಹಾಗೂ ನಿರಾಕರಣೆಯ ದನಿಗಳನ್ನೆತ್ತುತ್ತ ತಮ್ಮ ಸಾಮಾಜಿಕ ವೈಚಾರಿಕತೆಯನ್ನು ಪ್ರಕಟಿಸಿದ್ದಾರೆ. ಈ ಸಂತರು 'ಅಚ್ಚಗನ್ನಡದ ಬೇಸಾಯಗಾರ'ರಾದಂತೆ ಬೇಂದ್ರೆಯವರೂ ಅಚ್ಚಗನ್ನಡ ಬೇಸಾಯಗಾರರೆಂಬುದು ನಿಜವಾದರೂ ಈ ದೇಶದ ಬದಲಾಗುತ್ತಿದ್ದ ಕಾಲಮಾನದಲ್ಲಿ ಮನುಷ್ಯರ ಸಮಾನತೆಗೆ ಹಾಗೂ ಏಕತೆಗೆ ಮಾರಕವಾದ ಪಾರಂಪರಿಕವಾದ ನಂಬಿಕೆಗಳನ್ನು, ಸಾಮಾಜಿಕವಾದ ವೈಷಮ್ಯಗಳನ್ನು, ಪಟ್ಟಭದ್ರ ಹಿತಾಸಕ್ತಿಗಳನ್ನೂ, ಒಂದು ನಿಶ್ಚಿತ ನೆಲೆಯಲ್ಲಿ ನಿಂತು ತಮ್ಮ ಸಾಹಿತ್ಯ ನಿರ್ಮಿತಿಯ ಸಂದರ್ಭದಲ್ಲಿ ಪ್ರತಿಭಟಿಸುವ ಹಾಗೂ ಪ್ರಶ್ನಿಸುವ ಒಂದು 'ಸಾಮಾಜಿಕ ಪ್ರಜ್ಞೆ'ಯನ್ನು

ಅವರು ಯಾಕೆ ತಮ್ಮ ದೇಶಿನಿಷ್ಠತೆಯಿಂದ ಅಷ್ಟಾಗಿ ಪಡೆದುಕೊಳ್ಳಲಿಲ್ಲ ಎಂದು ಕೇಳುವುದು ಅಸಂಗತವಾಗಲಾರದು.''[೧೦೦]

ಡಾ. ಜಿ.ಎಸ್.ಶಿವರುದ್ರಪ್ಪನವರು ಹೀಗೆ ಹೇಳುತ್ತ ಜನಪರ ಕಾಳಜಿ ಬೇಂದ್ರೆಯವರ ಕಾವ್ಯದಲ್ಲಿ ಇಲ್ಲವೆಂದು ಇದರ ಅರ್ಥವಲ್ಲವೆಂದು 'ಕುರುಡು ಕಾಂಚಾಣ', 'ನರಬಲಿ', 'ತುತ್ತಿನ ಚೀಲ', 'ಪುಟ್ಟ ವಿಧವೆ' ಮುಂತಾದ ಸಾಮಾಜಿಕ ವಾಸ್ತವದ ತೀಕ್ಷ್ಣ ಅಭಿವ್ಯಕ್ತಿಯ ಕವಿತೆಗಳನ್ನು ಹೆಸರಿಸುತ್ತಾರೆ. ಆಸ್ತಿಕತೆ, ಧರ್ಮಶ್ರದ್ಧೆ ಹಾಗೂ ಭಕ್ತಿಯ ಅವರ ಮನೋಧರ್ಮಕ್ಕೆ ಸಾಮಾಜಿಕ ಅಸಂತುಷ್ಟತೆ ಒಂದು ಘರ್ಷಣೆಯಾಗಿ ಅವರ ಕಾವ್ಯದಲ್ಲಿ ಬರಲಿಲ್ಲವೆಂದು ಅಭಿಪ್ರಾಯವನ್ನು ತಾಳುತ್ತಾರೆ. ಒಂದು ರೀತಿಯಲ್ಲಿ ಇದು ಸರಿ ಎನಿಸುತ್ತದೆ. ಸಾಮಾಜಿಕ ವಿಪ್ಲವವೆ ಆಗಲಿ, ವೈಯಕ್ತಿಕ ವಿಷಾದವೆ ಆಗಲಿ, ತಾವು ನಂಬಿಕೊಂಡ ಶ್ರದ್ಧೆಯನ್ನು ಮೀರಿ ಅವರು ಪ್ರಶ್ನಿಸಲಿಲ್ಲ. ಪ್ರತಿಯೊಂದನ್ನೂ ದೈವದ ಅನುಗ್ರಹವಾಗಿ ಕಂಡ ಅವರು ಕೊನೆಯವರೆಗೂ ತಾವು ರೂಢಿಸಿಕೊಂಡಿದ್ದ ಚೈತನ್ಯದ ನಾಮಸ್ಮರಣೆಯನ್ನು, ಕಾವ್ಯ ತಪಸ್ಸನ್ನು ಬಿಡಲಿಲ್ಲ. 'ನರಬಲಿ' ಕವನ ತಂದ ಜೈಲುವಾಸವನ್ನು, ಗೆಳೆಯರ ವಿಘಟನೆಯನ್ನು ಮೌನವಾಗಿಯೆ ಅವರು ಭರಿಸಿದರು. ಕಷ್ಟಗಳನ್ನು ಹೇಳಿಕೊಳ್ಳಲಿಲ್ಲ. ಭಕ್ತಿಯಲ್ಲಿ ಹಾಗೂ ಕಷ್ಟಗಳ ಬೆಂಕಿಯಲ್ಲಿ ಮನುಷ್ಯ ಹಾದು ಬರಬೇಕೆಂದು ಅವರು ಅಪೇಕ್ಷಿಸಿದರೋ ಏನೋ. ಶಬ್ದ, ನಾದದ ಜೊತೆ ಬೆಸೆದುಕೊಂಡಿದ್ದ ಕವಿ ಕೊನೆಕೊನೆಗೆ ಶಬ್ದಗಳು ಕಾವ್ಯದ ಆಟದಲ್ಲಿ ಮುಗಿದುಹೋಗಿ ಸಂಖ್ಯೆಗಳ, ವೈದಿಕ ಸಂಗತಿಗಳ ಬೆನ್ನು ಬಿದ್ದರು. ಕವಿಯೊಬ್ಬ ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು, ಅವನ ಮಾರ್ಗವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಾರದೆ ಅವನ ಜೊತೆ ಕಟುವಾಗುವ ಹಾಗಿಲ್ಲ. ಬೇಂದ್ರೆಯವರ ವಿಷಯದಲ್ಲಿ ಇದೇ ಸರಿ ಎಂದು ಕಾಣುತ್ತದೆ. ಅವರು ನಂಬಿಕೊಂಡ ತತ್ವ, ಸತ್ಯದ ಆವಿಷ್ಕಾರ, ಭಕ್ತಿ ಪರಂಪರೆಯ ಗಾಢವಾದ ಪ್ರಭಾವಗಳು ಸಾಮಾಜಿಕ ಅಭಿವ್ಯಕ್ತಿಯನ್ನು ಅವರಿಗೆ ಮುಖ್ಯವಾಗಿಸಲಿಲ್ಲವೆಂದು ತೋರುತ್ತದೆ. ದೇಸಿ ಪರಂಪರೆಯಿಂದ ಪ್ರಭಾವಿತರಾಗಿದ್ದ ಬೇಂದ್ರೆಯವರು ವಚನಕಾರರ ಸಾಮಾಜಿಕ ಹಾಗೂ ಪ್ರತಿಭಟನೆಯ ತೀವ್ರತೆಯನ್ನು ಅಳವಡಿಸಿಕೊಳ್ಳದೆ ಇದ್ದ ಕಾರಣಗಳಿಗಾಗಿ ಅವರ ಕಾವ್ಯಕ್ಕೆ ಕುಂದುಂಟಾಗಲಾರದು. 'ಕುರುಡು ಕಾಂಚಾಣ', 'ನರಬಲಿ', 'ಪುಟ್ಟ ವಿಧವೆ'ಯಂತಹ ಕವನಗಳಲ್ಲಿ ಇದ್ದಂತಹ ರೊಚ್ಚು, ಅಸಮಾನತೆಯ ವಿರುದ್ಧದ ಕಹಳೆ 'ಅರಳು ಮರಳು' ಸಂಕಲನದ ನಂತರ ಕಾಣೆಸಿಕೊಂಡದ್ದು ಕಡಿಮೆ ಎಂಬುದನ್ನು ಒಪ್ಪಬಹುದಾದರೂ ಸಾಮರಸ್ಯ, ಪ್ರೀತಿ, ಭಕ್ತಿ, ಸರ್ವರನ್ನು ಒಳಗೊಳ್ಳುವ ಅಭಿವ್ಯಕ್ತಿಯ ಮೂಲಕ ಮನುಷ್ಯನ ಒಳಿತನ್ನೆ ಅವರ ಕವಿತೆಗಳು ಉದ್ದೇಶವಾಗಿಟ್ಟುಕೊಂಡಿವೆ. ತಕ್ಷಣದ ಪರಿಣಾಮವನ್ನು ನಿರೀಕ್ಷಿಸದೆ ಮನುಷ್ಯನನ್ನು ಕಲ್ಮಶರಹಿತನನ್ನಾಗಿ ರೂಪಿಸುವ ದೃಷ್ಟಿಯನ್ನು ಅವರು ಹೊಂದಿದ್ದರು. ಡಾ. ಜಿ.ಎಸ್.ಆಮೂರ ಅವರು ಬೇಂದ್ರೆಯವರ ದರ್ಶನಕಾವ್ಯದ ಮಹತ್ವವನ್ನು ಸಮರ್ಪಕವಾಗಿ ಗುರುತಿಸುತ್ತಾರೆ. 'ಅನೇಕರು ತಿಳಿದುಕೊಂಡಂತೆ ಬೇಂದ್ರೆಯವರು ಸಾಮಾಜಿಕ ಜೀವನದಿಂದ ವಿಮುಖರಾಗಿ ಆಧ್ಯಾತ್ಮಿಕ ಜೀವನಕ್ಕೆ ಶರಣು ಹೋಗಲಿಲ್ಲ. ಹಾಗೆ ನೋಡಿದರೆ, ಶ್ರೀ ಅರವಿಂದರ ಆಧ್ಯಾತ್ಮಿಕ ಸಾಧನೆಯ ಉದ್ದೇಶ ಲೋಕಕಲ್ಯಾಣವೇ ಆಗಿದ್ದಂತೆ ಬೇಂದ್ರೆಯವರ ಆದರ್ಶ ಕೂಡ ಮಾನವನ ಕಲ್ಯಾಣವೇ ಆಗಿತ್ತು.'[೧೦೧]

ಹೀಗೆ ಬೇಂದ್ರೆಯವರ ಕಾವ್ಯದ ಲಕ್ಷ್ಯವನ್ನು, ಅವರ ಮುಖ್ಯ ಉದ್ದೇಶವನ್ನು ಅರ್ಥ ಮಾಡಿಕೊಂಡಾಗ ಸಾಮಾಜಿಕ ವಿಮುಖತೆಯ ಮಿತಿ ಅರ್ಥವಾಗುತ್ತದೆ. ಹಲವು ವಿಡಂಬನೆಯ, ಕವಿತೆಗಳಲ್ಲಿ ಕೂಡ ಅವರ ಸಾಮಾಜಿಕ ಕಾಳಜಿ ಅಡಕವಾಗಿದೆ. ತಮ್ಮ ಪ್ರಯೋಗಶೀಲತೆಯ ಮೂಲಕ 'ಮಧುವಾತಾ ಋತಾಯತೇ', 'ಓವ್ಹರ್ ಹಾಲ್' ಮುಂತಾದ ಕವನಗಳಲ್ಲಿ ನವೋದಯದ ರಸಪ್ರಜ್ಞೆಯನ್ನು, ಪೂರ್ಣದೃಷ್ಟಿಯನ್ನು, ಆಧ್ಯಾತ್ಮಿಕ ಭಾವವನ್ನು, ನಿಸರ್ಗ ಪ್ರೀತಿಯನ್ನು ನವ್ಯವನ್ನು ಟೀಕಿಸುವ ಮೂಲಕ ಸಮರ್ಥಿಸಿಕೊಂಡರು. ಆಗೊಮ್ಮೆ, ಈಗೊಮ್ಮೆ ಅವರು ಹೀಗೆ ವಿಡಂಬನೆಯ ಮೂಲಕ ಕುಟುಕಿದರೂ ಅವರ ಮುಖ್ಯ ಕಾಳಜಿ ಭಕ್ತಿಯಲ್ಲಿ ಮುಳುಗೇಳುವುದೆ ಆಗಿತ್ತು. ತಮ್ಮ ಸುತ್ತಲಿನ ಪ್ರಕೃತಿಯ ರೂಪಕಗಳ ಮೂಲಕ ಮನುಷ್ಯನ ಕಲ್ಯಾಣವನ್ನು, ಅವನ ಆತ್ಮಕಲ್ಯಾಣವನ್ನು ಸಾಧಿಸುವುದೆ ಆಗಿತ್ತು. ಕೇಡುರಹಿತ ಭವಿಷ್ಯ ಮತ್ತು ಸಮಾಧಾನದ ವರ್ತಮಾನವನ್ನು ಅವರು ತಮ್ಮ ಕಾವ್ಯದಲ್ಲಿ ಅಭಿವ್ಯಕ್ತಿಸಲು ಪ್ರಯತ್ನಿಸಿದರು.

ಅರ್ಥ, ನಾದ, ಲಯ, ಪ್ರತಿಮೆ, ರೂಪಕಗಳಿಂದ ಬೇಂದ್ರೆಯವರ ಕವಿತೆಗಳು ಸಹೃದಯರಲ್ಲಿ ಉಂಟು ಮಾಡುವ ಭಾವ, ನಿಸರ್ಗಪ್ರಾಪ್ತಿಯನ್ನು ಹೊಂದುವುದಕ್ಕೆ ಸಮನಾಗಿದೆ. ನಿಸರ್ಗದ ಕಣಕಣದಲ್ಲಿ ಒಂದಾಗಿರುವಂತಹ ತೃಪ್ತಿ ಹೊರಹೊಮ್ಮುತ್ತದೆ. ಮನುಷ್ಯನ ಸುಖ-ದುಃಖಗಳಿಗೆ ಅದನ್ನು ರೂಪಕವಾಗಿ ಬೇಂದ್ರೆ ಬಳಸುತ್ತಾರೆ. ಪ್ರಕೃತಿಯ ವೈವಿಧ್ಯತೆಗೆ ಹಾಗೂ ಚೆಲುವಿಗೆ ಮನಸೋತು ವಿಸ್ಮಯ-ವರ್ಣನಾತ್ಮಕ ಕವಿತೆಗಳನ್ನು ಬರೆದಿರುವಂತೆಯೇ ಮನುಷ್ಯನ ಸ್ಥಿತಿಯನ್ನು, ಅವನ ಅರಸುವಿಕೆಯನ್ನು, ದರ್ಶನದ ಭಾವವನ್ನು ಹೊಮ್ಮಿಸಿದ ನೂರಾರು ಪದ್ಯಗಳನ್ನು ಅವರು ಬರೆದರು. ಪ್ರಾದೇಶಿಕ ಸೊಗಡು, ಚತುರತೆ, ಪ್ರಾಸ-ಪುನರುಕ್ತಿಯ ಸೌಂದರ್ಯ, ಪುರಾಣ-ಇತಿಹಾಸಗಳ ಪ್ರತಿಮೆ ಮುಂತಾದ ಕಾವ್ಯಸೆಲೆಗಳಿಂದ ತಮ್ಮ ವ್ಯಂಜನಶಕ್ತಿ ಹಾಗೂ ಉಕ್ತಿ ಸಾಮರ್ಥ್ಯಗಳನ್ನು ಅವರು ವೃದ್ಧಿಸಿಕೊಂಡರು. ಪರಂಪರೆಯಿಂದ ಪ್ರೇರಣೆ ಪಡೆದುಕೊಂಡರೂ ಹೊಸ ಕಾವ್ಯಮಾರ್ಗ ಸೃಷ್ಟಿಯ ಸೊಗಸನ್ನು ಬೇಂದ್ರೆಯವರು ತಮ್ಮ ಅಭಿವ್ಯಕ್ತಿಯಲ್ಲಿ ಸಾಧಿಸಿ ತೋರಿಸಿದರು. ನೃತ್ಯ ಮತ್ತು ನೃತ್ಯಾಂಗನೆ, ಮೂರ್ತಿ ಮತ್ತು ಶಿಲ್ಪಿ, ನದಿ ಮತ್ತು ಅದರ ಹರಿವು, ಆಕಾಶ ಮತ್ತು ಅದರ ವಿಸ್ತಾರಗಳು ಭೇದವಿರದಂತೆ ಕೂಡಿಕೊಂಡಿರುವ ಹಾಗೆ ಬೇಂದ್ರೆಯವರ ಕಾವ್ಯದಲ್ಲಿ ಅರ್ಥ ಮತ್ತು ಭಾಷೆಗಳು ಎರಕ ಹೊಯ್ದಂತೆ ಕೂಡಿಕೊಳ್ಳುತ್ತವೆ. ಅಂತಹ ಕಲಾತ್ಮಕತೆ ಮತ್ತು ಅನುಭೂತಿ ಅವರ ಕಾವ್ಯಕ್ಕೆ ದಕ್ಕಿದೆ. ಅರ್ಥ ಹೊರಡಿಸುವ ಶಬ್ದ ಹಾಗೂ ಭಾಷೆಯ ಬಳಕೆ, ಧ್ವನಿ, ಭಾವದ ತೀವ್ರತೆ, ಸಂಸ್ಕೃತಿಯ ಸಂಬಂಧ, ಮೌಲ್ಯಗಳನ್ನು ರೂಪಕಗಳನ್ನಾಗಿ ಮಾರ್ಪಡಿಸುವ ಶಕ್ತಿ, ಲಯಗಾರಿಕೆ, ನಾದಮಾಧುರ್ಯ ಮುಂತಾದ ಕಾವ್ಯಪರಿಕರಗಳನ್ನು ಬೇಂದ್ರೆಯವರು ಸಮರ್ಥವಾಗಿ ದುಡಿಸಿಕೊಂಡರು. ನಿಸರ್ಗವೆನ್ನುವುದು ಅದರ ನೆಲ, ನೀರು, ಬೆಳಕು, ಗಾಳಿ, ಮಣ್ಣು, ಅಗ್ನಿ, ಜ್ಯೋತಿ, ಚುಕ್ಕೆ, ನಕ್ಷತ್ರ, ಅಂತರಿಕ್ಷ ಮುಂತಾದ ಅಂಶಗಳೊಂದಿಗೆ ಬೇಂದ್ರೆಯವರ ಜೀವನಾನುಭವದ ವಿಶ್ಲೇಷಣೆಯಾಗಿ ಕಾವ್ಯಪ್ರತಿಮೆ, ರೂಪಕ, ಪ್ರತೀಕ, ವರ್ಣನೆಗಳಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಹಾಡು, ಲಾವಣಿ, ಸೀಸಪದ್ಯ, ತತ್ವಪದ, ಷಟ್ಪದಿ, ಸುನೀತ,

ಭಾವಗೀತ, ಸಾಂಗತ್ಯ, ತ್ರಿಪದಿ ಮುಂತಾದ ರೂಪಗಳಲ್ಲಿ ಒಲಿದಂತೆ ಕಾಣಿಸಿಕೊಳ್ಳುವುದು ಬೇಂದ್ರೆ ಕಾವ್ಯದ ರೀತಿಯಾಗಿದೆ. ಭಾಷೆ ಮತ್ತು ಅರ್ಥ, ಭಾವ ಮತ್ತು ಬುದ್ಧಿಗಳೆರಡು ಹಗೆತನ ಸಾಧಿಸದೆ ಒಗೆತನ ಸಾಧಿಸಬೇಕೆಂದು ಅವರು ಅಂದುಕೊಂಡು ಆ ದಿಸೆಯಲ್ಲಿ ಸತತಾಭ್ಯಾಸ ಮಾಡಿದರೆಂದೆ ಮೇರು ಅಭಿವ್ಯಕ್ತಿಯನ್ನು ಸಾಧಿಸಲು ಅವರಿಗೆ ಸಾಧ್ಯವಾಯಿತು.

ಅಡಿಟಿಪ್ಪಣಿಗಳು :

೧. ದ.ರಾ. ಬೇಂದ್ರೆ: 'ಗರಿ', ಪು. ೨೩, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಮೂ. ಆ. ೧೯೫೧.

೨. ಅದೇ.

೩. ಅದೇ, ಪು. ೩೧.

೪. ಅದೇ.

೫. ಅದೇ, ಪು. ೧೧.

೬. ಅದೇ.

೭. ದ.ರಾ. ಬೇಂದ್ರೆ: 'ಯಕ್ಷ -ಯಕ್ಷಿ', ಪು. ೩೧, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೨.

೮. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ಪುಟ ಬಂಗಾರ', ಸಂಪುಟ-೫, ಶ್ರಾವಣ ಪ್ರತಿಭೆ, ಪು. ೨೩೬, ಮನೋಹರ ಗ್ರಂಥಮಾಲೆ, ಧಾರವಾಡ, ೧೯೮೭.

೯. ದ.ರಾ. ಬೇಂದ್ರೆ: 'ನಾದಲೀಲೆ', ಪು. ೮೪, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು. ೧೯೫೫.

೧೦. ದ.ರಾ. ಬೇಂದ್ರೆ: 'ಬಾ ಹತ್ತರ' (ಹಿನ್ನುಡಿ), ಪು. ೧೮೮-೮೯, ಗೀತಾ ಬುಕ್ ಹೌಸ್, ಮೈಸೂರು, ೧೯೭೦.

೧೧. ಪ್ರೊ. ಕೀರ್ತಿನಾಥ ಕುರ್ತಕೋಟಿ: 'ಪುಟ- ಬಂಗಾರ', ಸಂಪುಟ-೫, ಶ್ರಾವಣ ಪ್ರತಿಭೆ, ಪು. ೭೧, ಮನೋಹರ ಗ್ರಂಥಮಾಲೆ, ಧಾರವಾಡ, ೧೯೮೭.

೧೨. ಡಾ. ಜಿ.ಎಸ್. ಆಮೂರ: 'ಬೇಂದ್ರೆ ಕಾವ್ಯದ ಪ್ರತಿಮಾಲೋಕ', ಲೇ. ಪು. ೧೭೩, (ಬೇಂದ್ರೆ ಕಾವ್ಯ ಸಂ: ಜಿ.ಎಸ್. ಆಮೂರ) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೩.

೧೩. ದ.ರಾ. ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೮೫, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೧೪. ದ.ರಾ. ಬೇಂದ್ರೆ: 'ಮೂರ್ತಿ ಮತ್ತು ಕಾಮಕಸ್ತೂರಿ', ಪು. ೩೦, ಪ್ರತಿಭಾ ಮುದ್ರಣ, ಧಾರವಾಡ, ೧೯೫೫. (ಮೂ.ಮು.)

೧೫. ದ.ರಾ.ಬೇಂದ್ರೆ : 'ಗರಿ', ಪು. ೧೨೭, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಮೂ. ಆ. ೧೯೫೧.

೧೬. ದ.ರಾ. ಬೇಂದ್ರೆ : ಕೃಷ್ಣಾಕುಮಾರಿ ಮತ್ತು ಹಾಡು-ಪಾಡು, ಪು.೨, ಸಮಾಜ ಪುಸ್ತಕಾಲಯ, ಧಾರವಾಡ, ದ್ವಿ.ಮು. ೧೯೫೬.

೧೭. ಅದೇ, ಪು. ೨.

೧೮. ಡಾ. ಜಿ.ಎಸ್. ಅಮೂರ : 'ಭುವನದ ಭಾಗ್ಯ', ಪು. ೪೦, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ತೃ.ಮು. ೨೦೦೭.

೧೯. ದ.ರಾ. ಬೇಂದ್ರೆ : ಕೃಷ್ಣಾಕುಮಾರಿ ಮತ್ತು ಹಾಡು-ಪಾಡು, ಪು.೮, ಸಮಾಜ ಪುಸ್ತಕಾಲಯ, ಧಾರವಾಡ, ದ್ವಿ.ಮು. ೧೯೫೬.

೨೦. ಅದೇ, ಪು. ೧೧.

೨೧. ದ.ರಾ. ಬೇಂದ್ರೆ : 'ಸಾಹಿತ್ಯದ ವಿರಾಟ ಸ್ವರೂಪ', ಪು. ೯೭, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೨೨. ಅದೇ, ಪು. ೯೯.

೨೩. ಅದೇ, ಪು. ೧೧೧.

೨೪. ತೀ.ನಂ. ಶ್ರೀಕಂಠಯ್ಯ : ಪ್ರಸ್ತಾವನೆ-ಇಂಗ್ಲೀಷ್ ಗೀತಗಳು, ಪು. XXV ಕಾವ್ಯಾಲಯ, ಮೈಸೂರು, ಹ.ಮು. ೧೯೮೭.

೨೫. ಅದೇ.

೨೬. ಡಾ. ಗಿರಡ್ಡಿ ಗೋವಿಂದರಾಜ : ಪ್ರಮಾಣು, ಪು. ೪೭, ಕ.ವಿ.ವಿ., ಹಂಪಿ, ೨೦೦೭.

೨೭. ದ.ರಾ. ಬೇಂದ್ರೆ : 'ನಾದಲೀಲೆ', ಪು. ೬, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು., ೧೯೫೫.

೨೮. ಅದೇ, ಪು. ೫೦.

೨೯. ದ.ರಾ. ಬೇಂದ್ರೆ : ಮೂರ್ತಿ ಮತ್ತು ಕಾಮಕಸ್ತೂರಿ, ಪು. ೧೨, ಪ್ರತಿಭಾ ಮುದ್ರಣ, ಧಾರವಾಡ, ಮೂ.ಮು. ೧೯೫೫.

೩೦. ಅದೇ, ಪು. ೨೮.

೩೧. ದ.ರಾ.ಬೇಂದ್ರೆ : 'ಗರಿ', ಪು. ೭, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಮೂ. ಆ. ೧೯೫೧.

೩೨. ಅದೇ, ಪು. ೯.

೩೩. ದ.ರಾ.ಬೇಂದ್ರೆ : 'ಗಂಗಾವತರಣ', ಪು. ೫೧, ಪ್ರತಿಭಾ ಗ್ರಂಥಮಾಲೆ, ಧಾರವಾಡ, ಎ.ಮು. ೧೯೫೫.

೩೪. ದ.ರಾ.ಬೇಂದ್ರೆ : 'ಚತುರೋಕ್ತಿ ಮತ್ತು ಇತರ ಕವನಗಳು', ಪು. ೩೪, ಸಮಾಜ ಪುಸ್ತಕಾಲಯ, ೧೯೭೮.

೩೫. ಅದೇ, ಪು. ೧೦.

೩೬. ಅದೇ, ಪು. ೧.

೩೭. ದ.ರಾ.ಬೇಂದ್ರೆ : 'ಮರ್ಯಾದೆ', ಪು. ೫೨, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೬.

೩೮. ದ.ರಾ.ಬೇಂದ್ರೆ : 'ಚತುರೋಕ್ತಿ ಮತ್ತು ಇತರ ಕವನಗಳು', ಪು. ೩೩, ಸಮಾಜ ಪುಸ್ತಕಾಲಯ, ೧೯೭೮.

೩೯. ಅದೇ, ಪು. ೬.

೪೦. ಅದೇ, ಪು. ೧೯.

೪೧. ಅದೇ.

೪೨. ಡಾ. ಜಿ.ಎಸ್. ಆಮೂರ: 'ಭುವನದ ಭಾಗ್ಯ', ಪು. ೩೨, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ತೃ.ಮು. ೨೦೦೭.

೪೩. ದ.ರಾ. ಬೇಂದ್ರೆ: 'ಗರಿ', ಪು. ೧೭, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಮೂ. ಆ. ೧೯೫೧.

೪೪. ಮಾಸ್ತಿ : 'ನಾದಲೀಲೆ' ಗೆ ಮುನ್ನುಡಿ, ಪು. ೮, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು, ೧೯೫೫.

೪೫. ದ.ರಾ. ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೩೨೬, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೮.

೪೬. ದ.ರಾ. ಬೇಂದ್ರೆ: 'ಗರಿ', ಪು. ೩೨, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಮೂ. ಆ. ೧೯೫೧.

೪೭. ಅದೇ, ಪು. ೯೫.

೪೮. ಕೆ.ವಿ.ತಿರುಮಲೇಶ : ಬೇಂದ್ರೆ ಕಾವ್ಯದಲ್ಲಿ ಪ್ರಾಸ, ಲೇ. ಪು. ೧೯ (ಬೇಂದ್ರೆ ಕಾವ್ಯ : ಸಂ. ಜಿ.ಎಸ್.ಆಮೂರ) ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೩.

೪೯. ದ.ರಾ. ಬೇಂದ್ರೆ: 'ಗರಿ', ಪು. ೫೪, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಮೂ. ಆ. ೧೯೫೧.

೫೦. ಪ್ರೊ. ಕೀರ್ತಿನಾಥ ಕುರ್ತಕೋಟಿ: ಕನ್ನಡ ಸಾಹಿತ್ಯ ಸಂಗಾತಿ, ಪು. ೧೬, ಕ.ವಿ.ವಿ. ಹಂಪಿ.

೫೧. ದ.ರಾ. ಬೇಂದ್ರೆ: 'ಗರಿ', ಪು. ೭೯, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಮೂ. ಆ. ೧೯೫೧.

೫೨. ದ.ರಾ. ಬೇಂದ್ರೆ: 'ಮೂರ್ತಿ ಮತ್ತು ಕಾಮಕಸ್ತೂರಿ', ಪು. ೩೬, ಪ್ರತಿಭಾ ಮುದ್ರಣ, ಮೂ.ಮು. ೧೯೫೫.

೫೩. ದ.ರಾ. ಬೇಂದ್ರೆ: 'ಮುಕ್ತಕಂಠ', ಪು. ೪೩, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೫೪. ಅದೇ, ಪು. ೪೪.

೫೫. ದ.ರಾ. ಬೇಂದ್ರೆ: 'ಸೂರ್ಯಪಾನ', ಪು. ೧೪, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೫೬. ಡಾ. ಗಿರಡ್ಡಿ ಗೋವಿಂದರಾಜ: ಪ್ರಮಾಣು, ಪು. ೫೦, ಕ.ವಿ.ವಿ. ಹಂಪಿ, ೨೦೦೭.

೫೭. ದ.ರಾ. ಬೇಂದ್ರೆ: 'ಮುಕ್ತಕಂಠ', ಪು. ೧೫, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೫೮. ದ.ರಾ. ಬೇಂದ್ರೆ: 'ಹೃದಯಸಮುದ್ರ', ಪು. ೧, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೫೯. ದ.ರಾ. ಬೇಂದ್ರೆ: 'ಗಂಗಾವತರಣ', ಪು. ೮೬, ಪ್ರತಿಭಾ ಗ್ರಂಥಮಾಲೆ, ಧಾರವಾಡ, ಎ.ಮು. ೧೯೫೫.

೬೦. ದ.ರಾ. ಬೇಂದ್ರೆ: 'ಹೃದಯಸಮುದ್ರ', ಪು. ೨೨, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೬೧. ಅದೇ, ಪು. ೬೧.

೬೨. ಅದೇ, ಪು. ೫೮.

೬೩. ಅದೇ, ಪು. ೫೯.

೬೪. ದ.ರಾ. ಬೇಂದ್ರೆ: 'ಯಕ್ಷ - ಯಕ್ಷಿ', ಪು. ೧೪, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೨.

೬೫. ಅದೇ, ಪು. ೧೫.

೬೬. ದ.ರಾ. ಬೇಂದ್ರೆ: 'ಗರಿ', ಪು. ೧, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಮೂ. ಆ. ೧೯೫೧.

೬೭. ಡಾ. ಯು.ಆರ್.ಅನಂತಮೂರ್ತಿ: 'ಯುಗದ ಕವಿ ಬೇಂದ್ರೆ', ಲೇ. ಪು. ೬೧, (ಬೇಂದ್ರೆ ಕಾವ್ಯ: ಸಂ. ಜಿ.ಎಸ್.ಆಮೂರ), ಕ.ಸಾ.ಅ., ಬೆಂಗಳೂರು, ೨೦೦೩.

೬೮. ದ.ರಾ. ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೮೫, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೪.

೬೯. ಡಾ. ಗಿರಡ್ಡಿ ಗೋವಿಂದರಾಜ: 'ಪ್ರಮಾಣು', ಪು. ೮೬-೮೭, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೭೦. ದ.ರಾ. ಬೇಂದ್ರೆ: 'ಗರಿ', ಪು. ೬೨, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಮೂ. ಆ. ೧೯೫೧.

೭೧. ಅದೇ, ಪು. ೨೮.

೭೨. ದ.ರಾ. ಬೇಂದ್ರೆ: 'ನಾದಲೀಲೆ', ಪು. ೧೩, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು., ೧೯೫೫.

೭೩. ಡಾ. ಗಿರಡ್ಡಿ ಗೋವಿಂದರಾಜ: 'ಪ್ರಮಾಣು', ಪು. ೮೬-೮೭, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೭೪. ಪ್ರೊ. ಎಚ್.ಎಸ್.ರಾಘವೇಂದ್ರರಾವ್ : 'ಹಾಡೆ ಹಾದಿಯ ತೋರಿತು', ಪು. ೬೩, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು ೧೯೯೫.

೭೫. ದ.ರಾ. ಬೇಂದ್ರೆ: 'ನಾದಲೀಲೆ', ಪು. ೯, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು., ೧೯೫೫.

೭೬. ಅದೇ.

೭೭. ದ.ರಾ. ಬೇಂದ್ರೆ: 'ವಿನಯ', ಪು. ೩೦, ಪುರೋಗಾಮಿ ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ನಾ.ಮು. ೧೯೮೩.

೭೮. ಅದೇ, ಪು. ೮೧.

೭೯. ಅದೇ, ಪು. ೮೬.

೮೦. ದ.ರಾ. ಬೇಂದ್ರೆ: 'ಉಯ್ಯಾಲೆ', ಪು. ೪೩, ಕಾವ್ಯಾಲಯ, ಮೈಸೂರು, ೧೯೫೦.

೮೧. ಅದೇ, ಪು. ೪೪.

೮೨. ಅದೇ, ಪು. ೫.

೮೩. ಅದೇ, ಪು. ೧೭.

೮೪. ದ.ರಾ. ಬೇಂದ್ರೆ: 'ನಾದಲೀಲೆ', ಪು. ೬, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು., ೧೯೫೫.

೮೫. ಅದೇ, ಪು. ೭೩.

೮೬. ದ.ರಾ. ಬೇಂದ್ರೆ: 'ಮಾಯಾ ಕಿನ್ನರಿ' ಕವಿತೆ, 'ಒಲವೆ ನಮ್ಮ ಬದುಕು', ಪು. ೪೪, ಗೀತಾ ಬುಕ್ ಹೌಸ್, ಮೈಸೂರು, ೧೯೮೦, ದ್ವಿ.ಮು.

೮೭. ದ.ರಾ. ಬೇಂದ್ರೆ: 'ನಾದಲೀಲೆ', ಪು. ೬೨, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು., ೧೯೫೫.

೮೮. ಡಾ. ಜಿ.ಎಸ್. ಆಮೂರ: ಬೇಂದ್ರೆ ಕಾವ್ಯದ ಪ್ರತಿಮಾಲೋಕ, ಲೇ: ಪು. ೧೬೫, ಬೇಂದ್ರೆ ಕಾವ್ಯ, ಸಂ. ಜಿ.ಎಸ್.ಆಮೂರ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೩.

೮೯. ದ.ರಾ.ಬೇಂದ್ರೆ: 'ಗಂಗಾವತರಣ', ಪು. ೬೮, ಪ್ರತಿಭಾ ಗ್ರಂಥಮಾಲೆ, ಧಾರವಾಡ, ಎ.ಮು. ೧೯೫೫.

೯೦. ದ.ರಾ.ಬೇಂದ್ರೆ: 'ನಾದಲೀಲೆ', ಪು. ೫೮, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು., ೧೯೫೫.

೯೧. ಡಾ. ಗಿರಡ್ಡಿ ಗೋವಿಂದರಾಜ: ಪ್ರಮಾಣು, ಪು. ೩೭, ಕ.ವಿ.ವಿ. ಹಂಪಿ, ೨೦೦೭.

೯೨. ಗೌರೀಶ ಕಾಯ್ಕಿಣಿ: 'ಕಂಪಿನ ಕರೆ', ಪು. ೧೩೭, ಸಮಾಜ ಪುಸ್ತಕಾಲಯ, ಧಾರವಾಡ.

೯೩. ದ.ರಾ.ಬೇಂದ್ರೆ: 'ಆತ್ಮಕಥನ', ಲೇ: ಪು. ೪೪೦, (ಪುಟಬಂಗಾರ, ಸಂಪುಟ ಐದು) ಮನೋಹರ ಗ್ರಂಥಮಾಲಾ, ಧಾರವಾಡ, ೧೯೮೭.

೯೪. ಅದೇ, ಪು. ೪೩೨.

೯೫. ದ.ರಾ. ಬೇಂದ್ರೆ: 'ಸಾಹಿತ್ಯದ ವಿರಾಟ ಸ್ವರೂಪ', ಪು. ೧೨೦, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೪.

೯೬. ದ.ರಾ. ಬೇಂದ್ರೆ: 'ಉತ್ತರಾಯಣ', ಪು. ೨೩, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೦.

೯೭. ಅದೇ.

೯೮. ಅದೇ.

೯೯. ಅದೇ, ಪು. ೩೯.

೧೦೦. ಡಾ. ಜಿ.ಎಸ್.ಶಿವರುದ್ರಪ್ಪ: 'ಸಮಗ್ರ ಗದ್ಯ', ಪು. ೩೪೬-೩೪೭, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೦೯.

೧೦೧. ಡಾ. ಜಿ.ಎಸ್. ಆಮೂರ: 'ಭುವನದ ಭಾಗ್ಯ', ಪು. ೧೮೯, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ತೃ.ಮು. ೨೦೦೭.

ಅಧ್ಯಾಯ – ಎಂಟು

ಸಮಾರೋಪ

ಅಧ್ಯಾಯ - ೮

ಸಮಾರೋಪ

ಲೌಕಿಕ ಹಾಗೂ ಅಲೌಕಿಕ, ಇಹ ಹಾಗೂ ಪರ, ಕಾಯ ಹಾಗೂ ಆತ್ಮ ಎಂಬ ಮನುಷ್ಯ ಬದುಕಿನ ಎರಡೂ ಪಾತಳಿಗಳಲ್ಲಿ ಬೇಂದ್ರೆಯವರ ನಿಸರ್ಗಕಾವ್ಯದ ಮಹತ್ವವನ್ನು ಅಧ್ಯಯನ ಮಾಡುತ್ತ, ಸಹೃದಯರ ಭಾವ-ಬುದ್ಧಿಗೆ ಕವಿಯ ಅನುಭವ-ಅರಿವು-ತಿಳುವಳಿಕೆ - ತತ್ವ- ದರ್ಶನಗಳನ್ನು ತಲುಪಿಸಲು ನಿಸರ್ಗ ಹೇಗೆ ಒಂದು ಸಮರ್ಥ ಅಭಿವ್ಯಕ್ತಿಯ ಮಾಧ್ಯಮವಾಗಿ ಅವರಲ್ಲಿ ಮಾರ್ಪಟ್ಟಿತೆಂಬುದನ್ನು ಚರ್ಚಿಸುತ್ತ, ಬೇಂದ್ರೆ ನಿಸರ್ಗ ಕಾವ್ಯವನ್ನು ಅಭ್ಯಾಸ ಮಾಡಿದ ಈ ಪ್ರಬಂಧದ ಫಲಿತಗಳು ಅಧ್ಯಾಯಗಳ ಹಂತಗಳಲ್ಲಿ ನಿದರ್ಶನಗಳ ಮೂಲಕ ಬಿಂಬಿತವಾಗಿದ್ದರೂ ಆ ತಂತುಗಳನ್ನು ಹಿಡಿದು ಅಧ್ಯಯನದ ಫಲಿತಗಳನ್ನು ಒಟ್ಟುಗೂಡಿಸಿ ಇಡುವುದು ಒಂದು ಅಗತ್ಯ ಕ್ರಮವಾಗಿದೆ. ಅಧ್ಯಯನದ ಫಲಶ್ರುತಿ ಹಾಗೂ ಪರಿಣಾಮಗಳನ್ನು ಖಚಿತವಾಗಿರಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಅದರ ಜೊತೆಗೆ ಬೇಂದ್ರೆಯವರ ನಿಸರ್ಗ ಕಾವ್ಯವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಕಂಡುಬಂದಿರುವ ಹೆಚ್ಚಿನ ಅಧ್ಯಯನದ ಕೆಲವು ಸಾಧ್ಯತೆಗಳನ್ನು ಸೂಚಿಸುವ ಪ್ರಯತ್ನವನ್ನು ಕೂಡ ಮಾಡಲಾಗಿದೆ.

೮.೧ ಫಲಿತಗಳು :

೧. ಬೇಂದ್ರೆಯವರಲ್ಲಿ ನಿಸರ್ಗ ಒಂದು ಮೇರು ಮೌಲ್ಯವಾಗಿ ಹಾಗೂ ಅವರ ಕಾವ್ಯದ ಪ್ರಾಣಕ್ಕೆ ಅವಶ್ಯವಿರುವ ಜೀವಸತ್ವವಾಗಿ ಕಾಣಿಸಿಕೊಳ್ಳುತ್ತದೆ. ಅವರು ಕಂಡುಂಡ ಅನುಭವಗಳಿಗೆ ಸಮರ್ಥ ಅಭಿವ್ಯಕ್ತಿಯ ಭಾಷೆಯಾಗಿಯೂ ಅದು ಕೆಲಸ ಮಾಡುತ್ತದೆ. ಬರೀ ಭಾಷೆ ಮಾತ್ರವಲ್ಲದೆ ಸಂಕೇತವಾಗಿ, ಪ್ರತಿಮೆಯಾಗಿ, ನೆನಪಿನ ಕೋಶವಾಗಿ ಕಾವ್ಯಸ್ಮೃತಿ ಹಾಗೂ ಪರಂಪರೆಯ ಭಾಗವಾಗುತ್ತದೆ. ಬೇಂದ್ರೆಯವರು ಕಾಣುವ ಜೀವನದ ವಿವರಗಳಿಗೆ ದಾರ್ಶನಿಕತೆಯ ನೋಟಗಳನ್ನು ಒದಗಿಸುತ್ತದೆ. ಅವರ ಭಾವನಾತ್ಮಕ ಹಾಗೂ ವೈಯಕ್ತಿಕ ಸತ್ಯದ ಆವಿಷ್ಕಾರಗಳಿಗೆ ನಿಸರ್ಗದ ಭಾಷೆ ಸೂಕ್ತ ರೂಪಕವಾಯಿತು. ತಾವು ಬದುಕಿ ಬಾಳಿದ ಪ್ರಾಪಂಚಿಕ ಸುಖ-ದುಃಖಗಳನ್ನು 'ಭೋಗ-ಯೋಗದ ಪದ'ದಲ್ಲಿ ಹಿಡಿದಿಡಲಿಕ್ಕೆ ಹಾಗೂ ಜೈನ-ವಚನ-ದಾಸ- ತತ್ವಪದ ಪರಂಪರೆಯ ಅನುಭಾವದ ಮಧುವಿನ ರುಚಿ ನೋಡಲಿಕ್ಕೆ ಪ್ರಕೃತಿಯ ಪರಿಕರಗಳನ್ನು ಸುಲಿದ ಬಾಳೆಹಣ್ಣಿನಂತೆ ಸರಳವಾಗಿ ಮತ್ತು ಅರ್ಥಪೂರ್ಣವಾಗಿ ಉಪಯೋಗಿಸಿಕೊಂಡರು. ತನ್ನ ಕಾವ್ಯಶಕ್ತಿಯ ನಾಲಗೆಯನ್ನು 'ಮಂಚಕ' ಮಾಡಿಕೊಂಡು ಅವಳ ಕಂಠದಲ್ಲಿ ಕಾವ್ಯಸರಸ್ವತಿ ಪದಗಳನ್ನು ಪೋಣಿಸುತ್ತಿದ್ದಾಳೆಂದು ತಮ್ಮ ಮೇಲಿನ ತಾಯಿಯ ಪ್ರಭಾವವನ್ನು ರೂಪಕವಾಗಿಸುತ್ತ; ಎಲ್ಲೆಯಿಲ್ಲದ ಮುಗಿಲಿನಲ್ಲಿ ಹಕ್ಕಿಗಾಳಿಯಾಗಿ ಹಾರುತ್ತ; ಹಿಂದೆ ಹಾರಿದ ಹಕ್ಕಿಗಳ ಜಾಡು ಹಿಡಿಯುತ್ತ; ನೆಲ-ಮುಗಿಲುಗಳನ್ನು ಕ್ರಮಿಸುತ್ತ ಬೇಂದ್ರೆಯವರು ನಿಸರ್ಗವನ್ನು

ಸೂರೆ ಮಾಡಿದರು. ಪ್ರಕೃತಿಯ ಯಥೇಚ್ಛ ಪ್ರತಿಮೆಗಳಿಂದ ಆಲಯ-ಬಯಲು, ಊರು-ಅಡವಿ, ಇಹ-ಪರಗಳ ಅನುಭೂತಿಯನ್ನು ಕಟ್ಟಿಕೊಟ್ಟರು.

೨. ತಾನು ವಾಸಿಸುತ್ತಿರುವ ಜಗತ್ತಿನೊಡನೆ ಮನುಷ್ಯನ ಸಂಬಂಧ ಸಂಕೀರ್ಣವಾದದ್ದು. ಅಪಾರ ವೈವಿಧ್ಯತೆಯಿಂದ ಕೂಡಿರುವ ನಿಸರ್ಗವನ್ನು ಕವಿಗಳಂತೂ ಆಶ್ಚರ್ಯ, ಕುತೂಹಲಗಳಿಂದ ಕಂಡಿದ್ದಾರೆ. ಕನ್ನಡ ಕಾವ್ಯ ಪರಂಪರೆಯಲ್ಲಿ ಪ್ರಕೃತಿಯನ್ನು ಸೌಂದರ್ಯದ ದೃಷ್ಟಿಯಿಂದ ನೋಡಿದ ಉದಾಹರಣೆಗಳಂತೆಯೇ ಪಾರಮಾರ್ಥಿಕ ವಿಚಾರಗಳಿಗೆ ವಾಹಕವಾಗಿ ಉಪಯೋಗಿಸಿಕೊಂಡ ಸಾಕಷ್ಟು ಸಂದರ್ಭಗಳನ್ನು ನೋಡಬಹುದಾಗಿದೆ. ಪರತತ್ವವೆನ್ನುವುದು ಲೌಕಿಕ ಜಗತ್ತನ್ನು ಬಿಟ್ಟು ಇಲ್ಲವೆನ್ನುವದನ್ನು ನಿರೂಪಿಸಲು ಪಂಪನಿಂದ ಹಿಡಿದು ಆಧುನಿಕ ಸಂದರ್ಭದವರೆಗಿನ ಹಲವಾರು ಕವಿ-ದಾರ್ಶನಿಕರು ಕವಿತೆಯನ್ನು ಅಭಿವ್ಯಕ್ತಿಯ ಮಾಧ್ಯಮವಾಗಿಸಿದ್ದಾರೆ. ಪಂಪನ ಲೌಕಿಕ-ಆಗಮಿಕ, ಬಸವಣ್ಣನ ಇಹ-ಪರ, ಮಹಾದೇವಿಯಕ್ಕನ ಒಡಲ ಬೇಗೆ-ಕದಳಿಯ ಕರುಣೆ, ಕನಕನ ಆಲಯ-ಬಯಲು, ರತ್ನಾಕರವರ್ಣಿಯ ಭೋಗ-ಭೋಗಗಳನ್ನು ಕಂಡಿರುವ ಬೇಂದ್ರೆಯವರು ಅಂತಹ ಪರಂಪರೆಯ ವಾರಸುದಾರರಾಗಿದ್ದಾರೆ. ಅಲ್ಲಮಪ್ರಭು, ಅರವಿಂದರು, ಹರಿಹರ, ಕುಮಾರವ್ಯಾಸ, ಲಕ್ಷ್ಮೀಶ, ನಿಜಗುಣ ಶಿವಯೋಗಿಗಳು ತೋರಿದ ಭಕ್ತಿ-ಅನುಭಾವಗಳ ಎಡೆಯನ್ನು ಒಂದು ಕೈಯಲ್ಲಿ ಮತ್ತು ಸುಖ-ದುಃಖ, ಪ್ರೇಮ-ಕಾಮ, ಆಸೆ-ಆಮಿಷ, ಸೌಂದರ್ಯ-ಮಾಯೆಗಳು ಕಟ್ಟಿಕೊಡುವ ಬುತ್ತಿಯನ್ನು ಇನ್ನೊಂದು ಕೈಯಲ್ಲಿ ಹಿಡಿದುಕೊಂಡಿರುವ ದೃಷ್ಟಾರರಂತೆ ಬೇಂದ್ರೆ ಕಂಡುಬರುತ್ತಾರೆ. ಎರಡೂ ಕಾವ್ಯಪಾತಳಿಗಳಲ್ಲಿ ಕೃಷಿಗೈದ ಅವರು ಬದುಕಿನ ಪ್ರೀತಿಯ ಕಾವ್ಯ ನಿರ್ಮಾಣದಲ್ಲಿ ಅಸಾಧಾರಣ ಪ್ರತಿಭೆ ತೋರಿದರು. ಅವರ ನಿಸರ್ಗಪ್ರೀತಿಯಂತೂ ಅಪ್ರತಿಮ ಸೌಂದರ್ಯದಿಂದ ಕಂಗೊಳಿಸುವ, ಹೊಸ ಭಾವದಿಂದ ಸುಮಕೋಮಲವಾಗಿರುವ ಕಾವ್ಯವನ್ನು ಸೃಷ್ಟಿಸಿತು. ಲೌಕಿಕವೆನ್ನಬಹುದಾದ ಕಾವ್ಯದಲ್ಲಿಯೂ ಆಧ್ಯಾತ್ಮಿಕ ಸಂಗತಿಗಳ ಸೊಡರೊಂದು ಸದಾ ಉರಿಯುತ್ತಲೆ ಇರುವುದು ಅವರ ಕಾವ್ಯದ ವಿಶೇಷವಾಗಿದೆ. ಅಲೌಕಿಕದ ದೀಪಿಕೆ ಅವರ ಲೌಕಿಕ ಕಾವ್ಯದ ದೀಪ್ತಿಯನ್ನು ಹೆಚ್ಚಿಸುತ್ತದೆ.

೩. ಕನ್ನಡ ಕಾವ್ಯ ಪರಂಪರೆಯನ್ನು ಅವಿರತವಾಗಿ ಅವರು ಓದಿಕೊಂಡ ಪರಿಣಾಮದಿಂದಾಗಿ ಅವರಲ್ಲಿ ಜನಪದೀಯತೆ, ಸಾಂಪ್ರದಾಯಿಕತೆ, ಸಂಸ್ಕೃತಿಯ ಶೋಧನೆ, ಐತಿಹಾಸಿಕ-ಪೌರಾಣಿಕ -ವೈದಿಕ ಪ್ರತಿಮೆಗಳ ಬಳಕೆ, ಆಧ್ಯಾತ್ಮಿಕ ಹುಡುಕಾಟಗಳಂತಹ ಅಂಶಗಳು ಬೆಳೆದು ಬಂದವು. ಅವರ ಬಾಲ್ಯದ ಪರಿಸರ ಜನಪದದ ಹಾಡು-ಕುಣಿತಗಳಿಂದ ತುಂಬಿ ತುಳುಕುತ್ತಿತ್ತು. ಜನಪದದಿಂದ ಬೇಂದ್ರೆಯವರು ಪಡೆದ ಪ್ರೇರಣೆಗಳು ಕಾವ್ಯಾನುಭವ ಹಾಗೂ ಅಭಿವ್ಯಕ್ತಿಯ ದೃಷ್ಟಿಯಿಂದ ತುಂಬ ಮಹತ್ವದ್ದಾಗಿವೆ. ದೈವಿಕ ಅನುಭೂತಿಯ ನಿಸರ್ಗದ ಪಾಠಗಳನ್ನು ಜನಪದದ ತ್ರಿಪದಿ, ಗರತಿಯ ಹಾಡು, ಬೀಸುಕಲ್ಲಿನ ಪದ, ಕೋಲಾಟದ ಪದ, ಅಲಾವಿ ಹಾಡು, ಗೀಗೀ ಪದ, ದಾಸರ ಪದಗಳಿಂದಲೆ ಅವರು ಅನುಭವಿಸುವಂತಾದರು. ಜನಪದದ ಹಳೆಯ ಅರ್ಥಗಳಿಂದ

ಹೊಸ ಅರ್ಥಗಳನ್ನು ಅವರು ಕಂಡುಕೊಳ್ಳುವಂತಾದರು. ಮಲ್ಲಯ್ಯನ ಶಿವಪೂಜೆ, ಆಕಾಶದ ಅಡವಿ, ಧೂಪದ ಹೊಗೆ, ಹೂವಿನಲ್ಲಿ ಹುದುಗಿರುವ ಶಿವ, ಎಳೆಮಾವಿನ ಬನದಲ್ಲಿ ನೆಲೆಸಿರುವ ಸತ್ಯವ್ವ, ಹಳ್ಳ-ಕೊಳ್ಳದಲ್ಲಿ ಹರಿಯುತ್ತಿರುವ ಸರಸ್ವತಿ ಇವರನ್ನು ಬೇಂದ್ರೆಯವರು ಜನಪದದಲ್ಲಿ ಕಂಡುಕೊಂಡರು. ಮಂಗಳಮಯವಾದ ಜನಪದದ ಧೂಪದ ಹೊಗೆ; ಪಂಪನ ಆದಿಪುರಾಣದಲ್ಲಿ ಪ್ರಣಯಿಗಳ ಸಾವಿಗೆ ಕಾರಣವಾಗುವ, ಭೋಗ ಹೆಚ್ಚಿಸಲು ಹಾಕಲಾಗಿರುವ ಧೂಪದ ಹೊಗೆ; ಪ್ರತೀಕಾರದ ಬೆಂಕಿಯಿಂದ ಏಳುವ ಕುಮಾರವ್ಯಾಸ ಭಾರತದ ಖಾಂಡವದಹನದ ದಟ್ಟ ಹೊಗೆ- ಇಂತಹ ಹಲವು ರೂಪಗಳ ವ್ಯತ್ಯಾಸಗಳನ್ನು; ಒಂದೇ ಮೂಲದ ಹಲವು ಗುಣಗಳನ್ನು ; ಬದುಕಿನ ಸಂಘರ್ಷಗಳನ್ನು; ಲೋಕೋತ್ತರದ ಎಳೆಗಳನ್ನು ಪರಂಪರೆಯಿಂದ ಅವರು ಅರಿಯಬಲ್ಲವರಾದರು. ಆದಿಪುರಾಣದ ಭರತ ಚಕ್ರವರ್ತಿಯ ಲಲನೆಯರು ಇಷ್ಟಪಡುವ ಸಾವಿರ ಬಗೆಯ ಹೂವುಗಳು ಲೌಕಿಕಕ್ಕೆ ಹಾಗೂ ಹರಿಹರನ ಪುಷ್ಪರಗಳೆಯ ಶಿವನ ಅಡಿದಾವರೆಗೆ ಅರ್ಪಿತವಾಗುವ ಹೂವುಗಳು ದೈವಿಕಕ್ಕೆ ಪ್ರತಿಮೆಗಳಾಗಿರುವುದನ್ನು ಅರಿತ ಬೇಂದ್ರೆಯವರು ಇವೆರಡನ್ನು ಸಮೀಕರಿಸುವಂತೆ ತಮ್ಮ ಕಾವ್ಯತತ್ವವನ್ನು ಕಂಡುಕೊಂಡರು. ಭಕ್ತಿ -ಅನುಭಾವದ ಅಂಶಗಳು ಬೆರೆತ ಲೌಕಿಕ ಕಾವ್ಯ ಹಾಗೂ ಲೌಕಿಕದ ಅಂಶ ಬೆರೆತ ಆಧ್ಯಾತ್ಮಿಕ ಸಾಧನೆಯ ಕಾವ್ಯವೆಂದು 'ನಾಕುತಂತಿ' ಪೂರ್ವದ ಹಾಗೂ ನಂತರದ ಅವರ ಕಾವ್ಯಜೀವನವನ್ನು ನೋಡಬಹುದಾಗಿದೆ. ನಿಸರ್ಗದ ಉಪಮೆ, ರೂಪಕಗಳನ್ನು ಬಹಳಷ್ಟು ಸಲ ತಮ್ಮ ಲೌಕಿಕ ಹಾಗೂ ಭಕ್ತಿಯ ಅನುಭವಗಳನ್ನು ಅಭಿವ್ಯಕ್ತಿಸಲು ಅವರು ಉಪಯೋಗಿಸುತ್ತಾರೆ.

೪. ಭಕ್ತಿಯ ಪರಿಸರದಲ್ಲಿ ಬೆಳೆದ ಬೇಂದ್ರೆಯವರಿಗೆ ಗೆಳೆಯರ ಗುಂಪಿನ ಸಖ್ಯವು ಆರಂಭಿಕ ಕಾವ್ಯ ಬೆಳವಣಿಗೆಗೆ ತಾರಕವಾಗಿ ಪರಿಣಮಿಸಿತು. ನವೋದಯದ ಹುಮ್ಮಸ್ಸು, ರಾಷ್ಟ್ರೀಯತೆಯ ಪ್ರಜ್ಞೆ, ಕನ್ನಡವನ್ನು ಕನ್ನಡಿಸಬೇಕೆಂಬ ಹಂಬಲಗಳು ಕಾವ್ಯ ರಚನೆಗೆ ಬಲ ನೀಡಿದವು. ಮಧುರಚೆನ್ನರ ಗಾಢಸ್ನೇಹದಿಂದಾಗಿಯೇ ಬೇಂದ್ರೆಯವರ ಆಧ್ಯಾತ್ಮಿಕ ಸೆಳೆತಗಳು ಜ್ಯೋತಿಪಥದಲ್ಲಿ ಕ್ರಮಿಸುತ್ತ ಒಂದು ರೂಪವನ್ನು ಪಡೆಯುವಂತಾದವು. ಅಲ್ಲಿಂದಲೆ ಅವರು ಗುಂಪಿನ ಆಸಕ್ತರೊಡನೆ ಭಾರತೀಯ ಹಾಗೂ ಪಾಶ್ಚಾತ್ಯ ಅನುಭಾವಿ ಕವಿಗಳ ಹೆಚ್ಚಿನ ಅಭ್ಯಾಸಕ್ಕೆ ತೊಡಗಿದರು.

೫. ಅಲೌಕಿಕ ಅನುಭವ, ಅನುಭಾವ, ದೈವಿಕ ಸಂಗತಿ, ಆಧ್ಯಾತ್ಮಿಕ ಎಳೆ, ಪಾರಮಾರ್ಥಿಕ ಅನುಭೂತಿ ಎಂದು ಹೇಳಲಾಗುವ ಅನಿರ್ವಚನೀಯ ಗಹನ ವಿಚಾರವನ್ನು ಮತ್ತು ಪರತತ್ವದಲ್ಲಿನ ತಲ್ಲೀನತೆಯನ್ನು ಬೇಂದ್ರೆಯವರು ಸರಳ ಭಾವವನ್ನಾಗಿಸಿದರು. ಹೂವಿನಿಂದ ಹೂವಿಗೆ ಹಾರುತ್ತಿರುವ ಪಾತರಗಿತ್ತಿ ಹೂವಿನ ತೋಟದಿಂದ ನಂದನದ ತೋಟಕ್ಕೆ ಓಡುತ್ತದೆ. 'ಇಹ-ಪರ' ಕೂಡಿಕೊಳ್ಳುವ ದಾರಿ ಬದುಕಿನ ತೋಟದಿಂದಲೆ ಆರಂಭವಾಗುತ್ತದೆಯೆನ್ನುವುದಕ್ಕೆ ಇದು ನಿದರ್ಶನವಾಗಿದೆ. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು, ಮರ್ತ್ಯಲೋಕ ಕರ್ತಾರನ ಕಮ್ಮಟ, ಲೌಕಿಕ ಆಗಮಿಕ ಎರಡೂ ಮುಖ್ಯ ಎನ್ನುವ ವಿಚಾರಗಳಿಗೆ ಅದು

ಪೂರಕವಾಗಿದೆ. ಅಲೌಕಿಕದ ಅನುಭೂತಿ, ಸಹಜವೆಂದು ತೋರುವ ಪ್ರತಿ ಪದ್ಯದಲ್ಲಿಯೂ ಕಾಣಸಿಗುವುದು ಬೇಂದ್ರೆಯವರ ವೈಶಿಷ್ಟ್ಯವಾಗಿದೆ. ಇದು ಧಾರವಾಡದ ಅತ್ತಿಕೊಳ್ಳದಲ್ಲಿ ಕಂಡ ಸೂರ್ಯೋದಯ ಬೆಳಕು ಬರೀ ಬೆಳಗಲ್ಲವೆಂದು ಹೇಳುವಲ್ಲಿ; ಮುಗಿಲ ಸೂರ್ಯನ ಬೆಳಕು ಭೂಮಿಯಲ್ಲಿ ಮನುಷ್ಯನ ಮೈ ತೊಳೆಯುವ ಹೊಳೆಯೆಂದು ಹೇಳುವ ರೂಪಕದಲ್ಲಿ; ಸೂರ್ಯನೆಂಬ ಜಗತ್ತಿನ ಹಣತೆಯನ್ನು ಹಚ್ಚಿದವರು ಯಾರೆಂದು ಪ್ರಶ್ನಿಸುವಲ್ಲಿ; ತುಂಬಿದ ಬೆಳಕ ಬಸಿರಿನಿಂದ ಹೂವು ಅರಳುವಲ್ಲಿ; ಎಷ್ಟು ಬೆಳಕು ಉಂಡರೂ ಸಾಲದೆಂಬಂತೆ ಭೂಮಿ ಸೂರ್ಯನ ಬೆನ್ನು ಹತ್ತಿದ್ದಾಳೆನ್ನುವ ಮಾತಿನಲ್ಲಿ; ಬೆಳಕಿನ ನದಿಯ ಆಳದಲ್ಲಿ ಅಮೂಲ್ಯವಾದದ್ದೇನೋ ಇದೆಯೆನ್ನುವ ಕುತೂಹಲದಲ್ಲಿ ಉದಾಹರಿಸಲ್ಪಟ್ಟಿದೆ. ಹೂವಿನ ಮೊಗ್ಗು ಅರಳಿದಂತೆ ಮನಸ್ಸಿನ ಮೊಗ್ಗು ಪರಂಜ್ಯೋತಿಗೆ ಅರಳಬೇಕೆಂದು ಸೂಚಿಸುತ್ತಾರೆ. ಆಕಾಶದ ಪ್ರಕಾಶ ಮಹಾಲಿಂಗದಂತೆ, ಮುಗಿಲಗಲ ಹಬ್ಬಿರುವ ನೀಲಿಯಾಕಾಶ ಭವ್ಯವಾದ ಗುಡಿಯಂತೆ, ಭೂಮಿಯು ಗುಡಿಯ ಪೀಠದಂತೆ ಕಂಡುಬರುತ್ತದೆಯೆಂದು ಹೇಳಿ ನಿಸರ್ಗದ ಮೂಲಕ ದೈವಿಕ ಅನುಭವಕ್ಕೆ ಸಾಕಾರತೆಯನ್ನು ತಂದುಕೊಡುತ್ತಾರೆ. ಬೆಳಕಿನ ಬದಿಯಲ್ಲಿ ಇರುವುದೆ ಬದುಕಿನ ಹಿಗ್ಗಿನ ರೀತಿಯೆಂದು, ಅದುವೆ ಆತ್ಮದ ನೀತಿಯೆಂದು ಹೇಳುವಲ್ಲಿ, ನೆಲದ ಬದುಕು ಹಾಗೂ ಪಾರಮಾರ್ಥಗಳನ್ನು ಜೋಡಿಸುತ್ತಿರುವುದು ಸ್ಪಷ್ಟವಾಗಿದೆ. ಆದರೆ ಆತ್ಮದ ದೋಣಿಯನ್ನು ಹತ್ತುವ ಪೂರ್ವದಲ್ಲಿ ತುಂಬಿ ಹರಿಯುತ್ತಿರುವ ಬದುಕಿನ ಹೊಳೆಯನ್ನು ಈಜಲು ಬೇಂದ್ರೆಯವರು ಮರೆಯುವುದಿಲ್ಲ.

೬. ಬೇಂದ್ರೆಯವರು ವರ್ಣಿಸುವ ಬೆಳದಿಂಗಳು ನಮ್ಮನ್ನು ಸ್ಪರ್ಶಿಸುತ್ತದೆ. ಬಿಟ್ಟೂ ಬಿಡದೆ ಸುರಿಯುತ್ತಿರುವ ಶ್ರಾವಣ ನಮ್ಮನ್ನು ತೋಯಿಸುತ್ತಾನೆ. ತಾನು ಒಡವೆಯಲ್ಲ, ಉಸಿರಿರುವ ಒಡಲೆಂದು ಭೂಮಿತಾಯಿ ಚೀರುವಲ್ಲಿ ದುರುಳುತನದ ಪಾಪಪ್ರಜ್ಞೆ ನಮ್ಮನ್ನು ಕಾಡುತ್ತದೆ. ಭಕ್ತಿಯ ಧ್ಯಾನದಲ್ಲಿ ಪ್ರಲೋಭನೆಯ ಕೋಗಿಲೆಯ ಕರೆ ಚಿತ್ತವನ್ನು ಕೆಡಿಸಿದೆ. ಇದೇ ಬೇಂದ್ರೆ ನಿಸರ್ಗ ಕಾವ್ಯದ ಮಾಂತ್ರಿಕತೆಯಾಗಿದೆ. ಹಕ್ಕಿಯ ತುಪ್ಪಳದಂತೆ ಬೆಳದಿಂಗಳು ಮಿದುವಾಗಿರುವುದು, ಬೆಳದಿಂಗಳನ್ನು ಕುಡಿದ ಹಕ್ಕಿ ಮತ್ತೇರಿ ತೂಕಡಿಸುತ್ತಿರುವುದು, ಹಗಲಿನ ದಣಿವನ್ನು ಹಿಂಗಿಸುವ ಚಂದ್ರಜ್ಯೋತಿಯ ಕಾಲ ಬೇರೆಯೇ ಆಗಿರುವುದು ನಿಸರ್ಗ ಕಾವ್ಯದ ಅಭಿವ್ಯಕ್ತಿಗೆ ಬೇಂದ್ರೆಯವರು ಕೊಟ್ಟ ವ್ಯಾಖ್ಯೆಗಳಾಗಿವೆ. ತಮ್ಮ ಅನುಭವ ಹಾಗೂ ವರ್ಣನೆಗಳ ಮೂಲಕ ಕಾಲವನ್ನು ಬದಲಿ ಮಾಡುವ, ಲೋಕವನ್ನು ಹೊಸತು ಮಾಡುವ ಕಲೆಗಾರಿಕೆಯನ್ನು ಅವರು ಪಡೆದಿದ್ದಾರೆ. ಅವರು ಹೇಳುವ ಸಮರಸವೇ ಜೀವನವೆಂಬ ಮಾತು ಸೂರ್ಯ-ಚಂದ್ರರು ನಡೆಸುವ ಅನಂತ ಪ್ರಣಯದಲ್ಲಿ; ಭೂಮಿ-ಕಡಲು ಒಂದಕ್ಕೊಂದು ಅಪ್ಪಿಕೊಂಡು ರಮಿಸುವಲ್ಲಿ; ಮಳೆಯು ಭೂಮಿಯ ಮೇಲೆ ತೇರು ಎಳೆಯುವಲ್ಲಿ, ಹುಲ್ಲುಗಾವಲದ ಬೈತಲೆ ಬಾಚುವಲ್ಲಿ; ಹೂವ ಹಡಲಿಗೆಯನ್ನು ಹೊತ್ತ ಸಂತೋಷಕ್ಕೆ ಭೂಮಿತಾಯಿ ಜೋಗತಿಯಂತೆ ಕುಣಿಯುತ್ತಿರುವದರಲ್ಲಿ; ಶ್ರಾವಣನ ತುಂಟತನದಲ್ಲಿ; ವಾಸುದೇವನನ್ನು ಹೊತ್ತ ವಸುದೇವ ತುಂಬಿದ ಹೊಳೆಯನ್ನು ದಾಟುವಲ್ಲಿ; ನೆನಪುಗಳ ಕೆರಿ ಅರವಿಂದರ ಕಾವ್ಯಲಹರಿಯಾಗುವಲ್ಲಿ ವ್ಯಕ್ತವಾಗುತ್ತದೆ.

ಮನುಷ್ಯನ ಎದೆಯಲ್ಲಿ ಉರಿಯುತ್ತಿರುವ ದುಃಖಕ್ಕೆ ಚಂದ್ರ ಹಾಲಿನಂತಹ ತಂಪು ಸುರಿಯುತ್ತಾನೆಂದು ಬಣ್ಣಿಸುವ ಮೂಲಕ ದುಃಖದ ಬದಿಗೆ ತಾಗಿಕೊಂಡೆ ಸುಖದ ಬದಿಯಿದೆಯೆಂದು ಬೇಂದ್ರೆ ಹಲವು ಅರ್ಥಗಳನ್ನು ಹೊರಡಿಸುತ್ತಾರೆ. ಯಾವುದು ಲೌಕಿಕ, ಯಾವುದು ಅಲೌಕಿಕ ಎಂದು ವಿಂಗಡಿಸುವುದು ಕಷ್ಟವಾಗುವ ರೀತಿಯಲ್ಲಿ ಅವೆರಡರ ಸಮನ್ವಯವನ್ನು ಅವರು ಸಾಧಿಸುತ್ತಾರೆ.

೭. ಬೇಂದ್ರೆಯವರ ನಿಸರ್ಗ ಕವಿತೆಗಳಲ್ಲಿ ಬರಿ ಮನೋಹರವಾದದಷ್ಟೆ ಚಿತ್ರಿತವಾಗಿಲ್ಲ. ಬರಿ ಚೆಲುವಾದದಷ್ಟೇ ಕಣ್ಣಿಗೆ ಬೀಳುವುದಿಲ್ಲ. ಪ್ರಕೃತಿಯ ಜೀವದ ಬೇಟೆಯನ್ನು ಮನುಷ್ಯ ಹಾಡೇ ಹಗಲೆ ನಡೆಸಿದ್ದಾನೆ. ಆತ ಮಾಡಿರುವ ವಂಚನೆ, ಕಪಟತನ, ದುರುಳತನ ಕವಿಯ ರೋಷಕ್ಕೆ ಕಾರಣವಾಗಿವೆ. ಮನುಷ್ಯರ ಬೆಳವಣಿಗೆಗೆ ಮನುಷ್ಯರೆ ಅಡ್ಡ ಬಂದಿದ್ದಾರೆಂದು ಶೋಷಣೆಯ ಮುಖಗಳನ್ನು ಚಿತ್ರಿಸುವದರೊಂದಿಗೆ ಪ್ರತಿಭಟನೆ, ಸಾತ್ವಿಕ ಸಿಟ್ಟು, ಹೃದಯದ ತಾಪಗಳನ್ನು ಅವರು ಹೊರಹಾಕುತ್ತಾರೆ. ದುಷ್ಟಪುತ್ರರನ್ನು ತಾಯಿ-ಪ್ರಕೃತಿ ರಕ್ತದ ಒರೆಗಲ್ಲಿಗೆ ಹಚ್ಚಿ ತನ್ನ ನೆಲದ ಆಳದಲ್ಲಿ ಮತ್ತೆ ಏಳದಂತೆ ಮಲಗಿಸಿದ್ದಾಳೆ. ಅನ್ಯಾಯವೆಸಗಿದವರ ವಿರುದ್ಧ ಸೇಡು ತೀರಿಸಿಕೊಂಡಿದ್ದಾಳೆ. ನಿಸರ್ಗಕ್ಕೆ ಕೇಡು ಹೆಚ್ಚಾದಾಗ ಅದು ಮರಳಿ ಮನುಷ್ಯನನ್ನೇ ಆಹುತಿ ತೆಗೆದುಕೊಳ್ಳುತ್ತದೆಯೆಂದು ಬೇಂದ್ರೆ ನಂಬುತ್ತಾರೆ.

ಹಿಂಡಾಗಿ ಪುಂಡರು ಅಂಡಲೆಯಲು ನಿನ್ನ
ನೆತ್ತರು ಒರೆಹಚ್ಚಿ ನೋಡಿರುವೆ
ಪಾತಾಳ ಕಂಡರು ಕೆಲ ತಾಯಿಗ್ಗಂಡರು
ಅವರನ್ನು ಮಡಿಲಾಗೆ ಮಲಗಿಸಿಹೆ
ಹದಿನಾರು ರಾಜರು ತಲೆಕೆಳಗಾದರು
ಆದರೂ ತಲೆಯೆತ್ತಿ ನಿಂತಿರುವೆ[೧]

ದುಷ್ಟರನ್ನು ಸದೆಬಡಿದು ಭೂಮಿತಾಯಿ ಕತ್ತೆತ್ತಿ ನಿಲ್ಲುತ್ತಾಳೆನ್ನುವ ಬೇಂದ್ರೆಯವರ ಆಶಯದಲ್ಲಿ ಯುದ್ಧಗಳಿಗೆ ಕಾರಣರಾದ ರಾಜರುಗಳನ್ನು, ಖಳನಾಯಕರನ್ನು ಟೀಕಿಸಿರುವ ನಿಲುವನ್ನು ಕಾಣಬಹುದು. ಇಂತಹ ಹಲವು ಆಕ್ರೋಶಗಳ ಸಂದರ್ಭಗಳಲ್ಲಿ ಪ್ರತಿಭಟನೆಯ ಸಮಯಗಳಲ್ಲಿ ಕಾಲವೆ ಎಲ್ಲವನ್ನು ಸರಿಮಾಡುತ್ತದೆಯೆನ್ನುವ ನಂಬಿಕೆಗೆ ಅಂಟಿಕೊಂಡರು. ಕಾವ್ಯದ ಸೌಂದರ್ಯ, ಚೆಲುವಿಕೆ ; ವೈಯಕ್ತಿಕ ಸತ್ಯದಲ್ಲಿ ವೈಚಾರಿಕತೆ ಕುದ್ದು ಬರಬೇಕು ಎನ್ನುವ ನಿಲುವು ಮತ್ತು ಭಕ್ತಕವಿಯ ಮನೋಭಾವಗಳಿಂದಾಗಿ ಸಮಾಜ ರಚನೆಯ ವೈರುಧ್ಯ ಮತ್ತು ಸಂಕೀರ್ಣ ವ್ಯವಸ್ಥೆಗಳ ಆಳಕ್ಕೆ ಹೋಗಿ ಕಾರಣಗಳನ್ನು ಹುಡುಕಲು ಅವರು ಬಯಸಲಿಲ್ಲವೆಂದು ತೋರುತ್ತದೆ. ಆದರೂ ಬಡತನ, ಅಸಮಾನತೆ, ದುಡ್ಡಿನ ದರ್ಪ, ಜಾತಿ ವ್ಯವಸ್ಥೆಗಳ ಕುರಿತು ಮನ ಕರಗುವಂತ ಹಲವು ಶ್ರೇಷ್ಠ ಕವಿತೆಗಳನ್ನು ಅವರು ಬರೆದಿದ್ದಾರೆ. ಪ್ರಖರ ಸಾಮಾಜಿಕತೆ ಅವರ ಮನೋಧರ್ಮವಾಗಿರಲಿಲ್ಲವಾದ್ದರಿಂದ

ಅನುಭಾವಿಗಳ, ತತ್ವಪದಕಾರರ, ಭಕ್ತ ಕವಿಗಳ, ಸೂಫಿಸಂತರ ವೈಯಕ್ತಿಕ ಸಾಧನೆ ಹಾಗೂ ಸಕಲ ಕಲ್ಯಾಣದ ಆಶಯಗಳತ್ತ ಹೆಚ್ಚು ವಾಲಿದರು. ಅವರ ಉತ್ತರ ಜೀವಿತದ ಕಾವ್ಯಾಭಿವ್ಯಕ್ತಿಯಲ್ಲಿ ಅದು ಹೆಚ್ಚು ಪ್ರಕಟಗೊಂಡಿದೆ.

೮. ಮನುಷ್ಯತ್ವ-ಸಹೋದರತ್ವಗಳನ್ನು ಗಾಳಿಗೆ ತೂರಿ ಮನುಷ್ಯ ಮನುಷ್ಯರು ಹೊಡೆದಾಡುತ್ತಿದ್ದರೂ ಹಾಗೂ ಮಕ್ಕಳ ಸ್ವಾರ್ಥ, ಲಾಲಸೆ, ಕ್ರೌರ್ಯಗಳಿಂದ ಭೂಮಿತಾಯಿ ನಲುಗಿಹೋಗಿದ್ದರೂ ಮಕ್ಕಳ ಮೇಲಿನ ಮಮತೆಯಿಂದ ತನ್ನ ಪೋಷಕ ಗುಣವನ್ನು ತಾಯಿ ಮರೆಯುವುದಿಲ್ಲವೆಂದು ಬೇಂದ್ರೆ ಹೇಳುತ್ತಾರೆ. ದುಷ್ಟ ಮಕ್ಕಳನ್ನು ಸದೆಬಡಿದಿದ್ದರೂ ನಾಗರಿಕ ಇತಿಹಾಸದಲ್ಲಿ ಅನಾಗರಿಕ ವರ್ತನೆ ಮತ್ತೆ ಮತ್ತೆ ತಲೆ ಎತ್ತುತ್ತಲೆ ಇರುತ್ತದೆ. ಆದರೆ ನಿಸರ್ಗ ಕರುಣಾಮಯಿಯಾಗಿರುವುದರಿಂದ ತನ್ನ ನೋವನ್ನು ಮರೆತು, ವನವಾಸವನ್ನು ತೀರಿಸಿ ಫಲವತ್ತತೆಯ ಬಸುರು ಹೊತ್ತುಕೊಂಡು ಮನುಷ್ಯ ಕುಲವನ್ನು ಸಲಹುತ್ತಾಳೆ. ನಾಗರಿಕ ಇತಿಹಾಸದ ಕ್ರೌರ್ಯದ ಘಳಿಗೆಗಳನ್ನು, ವಿಷಾದದ ಕಾರಣಗಳನ್ನು, ಪ್ರಕೃತಿಯ ಔದಾರ್ಯವನ್ನು ಬೇಂದ್ರೆಯವರು ಗುರುತಿಸುತ್ತಾರೆ. ಜಗತ್ತು ಸೃಷ್ಟಿಯಾಗಿರುವುದು ಪ್ರೀತಿ, ಸಹಬಾಳ್ವೆ, ಶಾಂತಿ ಹಾಗೂ ಆನಂದ ಹೊಂದಲಿಕ್ಕೆ ಎಂದು ಅವರು ನಂಬುತ್ತಾರೆ. ಆದ್ದರಿಂದಲೆ ಮುನಿಸಿಕೊಂಡ ಮೇದಿನಿ ಮತ್ತೆ ಮುಗುಳ್ನಗುವ ಮೊದಲಗಿತ್ತಿಯಾಗಿ, ಸೀಮಂತ ಕಾರ್ಯಕ್ಕೆ ಸಿಂಗರಿಸಿಕೊಂಡು ತೃಪ್ತಿಯ ಭಾವ ಪ್ರಕಟಿಸುತ್ತಾಳೆ. ಹೃದಯವನ್ನು ಹಾಲಿನಿಂದ ತುಂಬಿಕೊಳ್ಳುತ್ತಾಳೆ.

> ಹಾಲಿನ ಹೃದಯಕೆ ಕುಬ್ಬುಸವನು ತೊಡಿಸಿ
> ಹೂ ಮುಡಿಸಿಕೊಡೆಂದು ನೀನಲಿವೆ?
> ಬಸಿರು ತುಂಬಲು ಹಸಿರುಡಿಗೆಯನುಟ್ಟೆಂದು
> ವನವಾಸ ನವಮಾಸ ತೀರಿಸುವೆ?
> ಮುನ್ನಿಲ್ಲ ಇನ್ನಾರೆ ಮಕ್ಕಳದಿನವೆಂದು
> ಮೂಡೀತು ಹೇಳವ್ವ ಬಿನ್ನವಿಸುವೆ

೯. ಹೊಸತನ ಹಾಗೂ ನಿತ್ಯನೂತನದ ಪ್ರತೀಕವಾಗಿ ನಿಸರ್ಗ ಬೇಂದ್ರೆಯವರಲ್ಲಿ ಕಾಣಿಸಿಕೊಳ್ಳುತ್ತದೆ. ಮನುಷ್ಯನ ಬದುಕು ಹಾಗೂ ಪ್ರಕೃತಿಯ ನಡುವಿನ ಸಂಬಂಧಗಳಲ್ಲಿ ಪ್ರಕೃತಿಯಿಂದ ಮನುಷ್ಯನು ಅಳವಡಿಸಿಕೊಂಡ ಮತ್ತು ಅಳವಡಿಸಿಕೊಳ್ಳಬೇಕಾದ ಗುಣಗಳಲ್ಲಿ ಹೊಸತನದ ಗುಣವೂ ಒಂದೆಂದು ಬೇಂದ್ರೆಯವರು ಭಾವಿಸುತ್ತಾರೆ. ಲೋಕವ್ಯಾಪಾರದ ಜಂಜಡ ಮತ್ತು ಆಲಸ್ಯತನವನ್ನು ಹೋಗಲಾಡಿಸುವ ಶಕ್ತಿ ನಿಸರ್ಗಕ್ಕೆ ಇದೆ. ಕಾಲಕಾಲಕ್ಕೆ ಹಳೆಯದನ್ನು ಕೊಡವಿ ಹೊಸ ಚಿಗುರಿನಿಂದ ನಳನಳಿಸುತ್ತಿರುವ ಪ್ರಕೃತಿ ಮನುಷ್ಯನಿಗೆ ನಿತ್ಯನೂತನದ ಪಾಠವನ್ನು ಬೋಧಿಸುತ್ತದೆ. ಯುಗಾದಿ ಮರಳಿ ಬಂದಂತೆ, ಋತುಗಾನ ತಿರುತಿರುಗಿ ಹೊಸದಾಗಿರಿ ಎಂದು ಹೇಳಿದಂತೆ, ನವಕನ್ನೆಯ ಹಾಗೆ ಮೈನವಿರೇರಿರುವ ನೇರಿಳೆಯಂತೆ, ಗಿಡ-ಮರ-ಬಳ್ಳಿಗಳ ಹೃದಯ ಹಿಗ್ಗಿದಂತೆ ಸೃಷ್ಟಿಯ

ಸೊಬಗು, ವಿಸ್ಮಯ, ವಸಂತಗಳು ಬದುಕಿನಲ್ಲಿಯೂ ಬರಬೇಕೆಂದು ಅವರು ಅಪೇಕ್ಷಿಸುತ್ತಾರೆ. ವರುಷ-ವರುಷಕ್ಕೆ, ಋತು ಋತುವಿಗೆ ಹೊಸದಾಗುವ ಚಿರಂತನದ ದಾಹದ ಹಿಂದೆ ಪ್ರಕೃತಿಯ ನಿರಂತರ ದುಡಿಮೆ ಮತ್ತು ತ್ಯಾಗದ ಮೌಲ್ಯಗಳು ಅಡಕವಾಗಿವೆ. ತುಂಗೆಯಾಗಿ, ಗಂಗೆಯಾಗಿ, ಕೂಡಲಸಂಗಮವಾಗಿ ಹರಿಯುತ್ತಿರುವ ಜೀವದಾಯಿನಿ ಒಂದೇ ಮೂಲದ ಒಲವಿನ ಸ್ರೋತವಾಗಿದ್ದಾಳೆ. ಮನುಷ್ಯನ ಎದೆಯಲ್ಲಿ ನಾದದ ನದಿಯಾಗಿದ್ದಾಳೆ.

೧೦. ಭೂಮಿ ಬರೀ ಮಣ್ಣಲ್ಲ. ಅದು ಬೆಳೆಯನ್ನು ಬೆಳೆಯುವ, ಜೀವದ ಕಂಪು ಸೂಸುವ, ಬಾಳಿನ ಚಿಲುಮೆಯನ್ನು ಉಕ್ಕಿಸುವ ಸತ್ವವನ್ನು ಹೊಂದಿದೆ. ಶ್ರೀನಿವಾಸ ತಿರುಮಲೆಯಲ್ಲಿ ನೆಲೆ ನಿಂತು ಭೂಮಿಯನ್ನು ಆತನ ಒಲುಮೆಯನ್ನಾಗಿ ಮಾಡಿದ್ದಾನೆಂದು ಬೇಂದ್ರೆಯವರು ಪ್ರತಿಪಾದಿಸುತ್ತಾರೆ. ಮನುಷ್ಯ ಬದುಕಿ ಬಾಳುತ್ತಿರುವ ಮೃತ್ತಿಕೆಯಲ್ಲಿ ಮೃತ್ಯುಂಜಯನನ್ನು ಕಾಣಬೇಕೆಂದು ಆಗ್ರಹಿಸುತ್ತಾರೆ. ಸೃಷ್ಟಿಯನ್ನು ಪೊರೆಯುವ ಸದ್ಗುಣಗಳು ತಾಯಿಯಲ್ಲಿ ಯಥೇಚ್ಛವಾಗಿರುವಂತೆ ಮಕ್ಕಳು ಕೂಡ ಅಂತಹ ಗುಣಗಳನ್ನು ಪಡೆಯಬೇಕೆಂದು ಕವಿ ಬಯಸುತ್ತಾರೆ. ಸಕಲ ಜೀವಿಗಳಲ್ಲಿ ಸ್ವಸ್ತಿಭವ ಎನ್ನುವುದು ನಿಸರ್ಗದ ಮಂತ್ರವಾಗಿದೆ. ಅದನ್ನು ರೂಢಿಸಿಕೊಳ್ಳುವುದು ಮನುಷ್ಯನಿಗೆ ಬಿಟ್ಟದ್ದೆಂದು ಅವರು ಹೇಳುತ್ತಾರೆ. ಬೆಳಕು, ಭೂಮಿಯನ್ನು ಹೀಗೆ ಬಣ್ಣಿಸುತ್ತ ಭೌತಿಕ ಸೌಂದರ್ಯದ ದಾಹವನ್ನು ತಣಿಸುವುದು ಬೇಂದ್ರೆಯವರ ಉದ್ದೇಶವಾಗಿಲ್ಲ. ಆಧ್ಯಾತ್ಮಿಕ ಚಿಂತನೆಯ ನಂಟನ್ನು ಅವರ ಕವಿತೆಗಳು ಹೊಂದಿರುವುದರಿಂದ ನಿಸರ್ಗದ ಪ್ರೀತಿ ಅವರಿಗೆ ತಮ್ಮ ಇಷ್ಟದೈವವನ್ನು ತಲುಪುವ ಮಾಧ್ಯಮವಾಗಿದೆ. ಬಸವಣ್ಣನವರ ವಚನಗಳಲ್ಲಿ ಕೂಡಲಸಂಗಮನ ಕಾಂತಿ ಇರುವಂತೆ, ಅಕ್ಕಮಹಾದೇವಿಯ ವಚನಗಳಲ್ಲಿ ರೂಪಿಲ್ಲದ ಚೆನ್ನಮಲ್ಲಿಕಾರ್ಜುನನ ರೂಪ ಸದಾ ಅವಳಿಗೆ ಗೋಚರಿಸುವಂತೆ, ಬೇಂದ್ರೆಯವರು ಸಹ ತಮ್ಮ ಕಾವ್ಯಶಕ್ತಿಯ ಹಿಂದೆ ಶಕ್ತಿಯ, ಮಾಯೆಯ, ಜಗದಂಬೆಯ, ಸರಸ್ವತಿಯ ರೂಪವನ್ನು ತಾಯಿ ಅಂಬಿಕೆಯ ರೂಪದಲ್ಲಿ ಕಾಣುತ್ತಿದ್ದಾರೆ. ಅವರ ಎಲ್ಲ ಕವಿತೆಗಳಲ್ಲಿ ತಾಯಿ ಬಂದೇ ಬರುತ್ತಾಳೆ ಎಂದಲ್ಲ. ಆದರೆ ಅವಳ ಜಾಗೃತ ಪ್ರಜ್ಞೆ ಪ್ರತಿ ಕವನದಲ್ಲಿಯೂ ಅವರನ್ನು ಎಚ್ಚರದಲ್ಲಿಟ್ಟಿದೆ. ಅನುಭಾವದ ಬಾಗಿಲಿಗೆ ಅವರನ್ನು ಕರೆದುಕೊಂಡು ಹೋಗುತ್ತದೆ. ದೈವಿಕ ತುಡಿತಗಳು ಬೇಂದ್ರೆಯವರಲ್ಲಿ ಕೆಲವು ಸಲ ಸರಳವಾಗಿ ಮತ್ತೆ ಕೆಲವು ಸಲ ಸಂಕೀರ್ಣ ರೂಪದ್ದಾಗಿ ಕಾಣುತ್ತವೆ. ಕೆಲವೊಮ್ಮೆ ಆಕರ್ಷಕವಾಗಿ ಮತ್ತೆ ಕೆಲವು ಸಲ ಅನಾಕರ್ಷಕವೆನಿಸುವಂತೆ ಕ್ಲಿಷ್ಟವಾಗಿರುವ ಸಂದರ್ಭಗಳೂ ಉಂಟು. ದೇವರ ಬಗ್ಗೆ ಒಲವು ಮೂಡಿಸಿರುವ ಹೆತ್ತತಾಯಿ ದೈವಾವಲಂಬನಕ್ಕೆ ಕಾರಣವಾಗಿದ್ದಾಳೆ. ಹಾಗಾಗಿಯೇ ತಮ್ಮ ಜೀವನದಲ್ಲಿ ಪೌರುಷ ನಿಮಿತ್ತ ಮಾತ್ರ, ದೈವದ ಬೆಂಬಲವೆ ಜೀವನ ನಡೆಸಿತೆಂದು ಹೇಳುತ್ತಾರೆ.

೧೧. ತಾಯಿ, ಬಾಲ್ಯದ ಪರಿಸರ, ಅರವಿಂದರ ಪ್ರಭಾವ, ವಚನಕಾರರು, ದಾಸರು, ತತ್ವಪದಕಾರರು, ಸೂಫಿ ಸಂತರು, ಕಬೀರದಾಸರು, ಟ್ಯಾಗೋರ್, ಎ.ಇ., ಮೆಂಟರ್‌ಲಿಂಕ್, ಜಿಬ್ರಾನ್ ಮುಂತಾದವರ ಪ್ರಭಾವದಿಂದ ಅವರಲ್ಲಿ

ಆಧ್ಯಾತ್ಮಿಕವಾದ ಸಂಗತಿಗಳ ಪ್ರೇರಣೆ ಉಂಟಾಯಿತು. ಭಕ್ತಿಯ ಎಳೆಗಳು ಬಾಲ್ಯದಿಂದಲೆ ಪೋಷಿಸಲ್ಪಟ್ಟವು. ಅವ್ಯಕ್ತ ನೆಲೆಗಳನ್ನು ಹುಡುಕಿ ಅವುಗಳ ಮೇಲೆ ಬೆಳಕು ಬೀರುವಂತಹ ಅಭಿವ್ಯಕ್ತಿಗೆ ಅವರು ಮನಸೋತರು. ನಿಸರ್ಗವನ್ನು ಚೈತನ್ಯಸ್ವರೂಪನ ಸೃಷ್ಟಿಯಾಗಿ ಕಂಡು ಅದರೊಡನೆ ತಾದಾತ್ಮ್ಯತೆಯನ್ನು ಸಾಧಿಸಿದರು. ಅದರ ಸೌಂದರ್ಯ, ಚೆಲುವು, ಸಮೃದ್ಧಿಗಳನ್ನು ಬಣ್ಣಿಸುತ್ತಲೆ ಅದು ಮನಸ್ಸಿನಲ್ಲಿ ಉಂಟು ಮಾಡುವ ಆನಂದ ಬಣ್ಣಿಸಲಸದಳವೆಂದು ಬೇಂದ್ರೆಯವರು ಬಹಳ ಆಕರ್ಷಕವಾಗಿ ನಿರೂಪಿಸಿದರು. ಅನುಭಾವಿಯೊಬ್ಬನ ರಚನೆ ನೀರಸವಾಗಿರುವ ಸಂದರ್ಭಗಳು ಹೆಚ್ಚಾಗಿರುತ್ತವೆ. ಆದರೆ ಬೇಂದ್ರೆಯವರ ರಚನೆಗಳಂತೂ ಅದ್ಭುತ ಕಾವ್ಯ ಕೌಶಲ್ಯದ ಉದಾಹರಣೆಗಳಾಗಿವೆ. ಗಾಳಿ, ಬೆಳಕು, ನೀರು, ನೆಲ ಇವುಗಳ ಅನುಭವ ಹಾಗೂ ಸ್ಪರ್ಶ ಅಪರೂಪವಾದದ್ದೆಂದು; ಅವು ಮನುಷ್ಯನ ಮೇಲೆ ಅಮೃತವನ್ನು ಕರೆಯುತ್ತವೆಯೆಂದು; ಇಹ-ಪರ ಸಂಬಂಧದ ತಂತುಗಳನ್ನು ಜೋಡಿಸುತ್ತವೆಯೆಂದು ಹೇಳುತ್ತ ಅಂತಹ ಆಧ್ಯಾತ್ಮಿಕ ನಂಟನ್ನು ಕಾಣುವ ಕಣ್ಣು ನಮಗಿರಬೇಕೆಂದು ಪ್ರತಿಪಾದಿಸಿದರು. ಅದರ ಜೊತೆಗೆ ಭೌತಿಕವಾದ ಪ್ರಕೃತಿಯ ರಮ್ಯತೆಯನ್ನು ಕೂಡ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾರೆ. ನಿಸರ್ಗದ ಉತ್ಸಾಹ, ಉನ್ಮಾದ, ಹರಯಗಳನ್ನು ಅಭಿವ್ಯಕ್ತಿಸುತ್ತ ಪ್ರಾಪಂಚಿಕ ಜೀವನದ ಎಲ್ಲ ಅನುಭೂತಿಯನ್ನು ಬೇಂದ್ರೆಯವರು ಪಡೆಯುವವರಾಗುತ್ತಾರೆ. ಸೂರ್ಯನನ್ನು ಕೂಡಲು ಭೂಮಿ ಅಭಿಸಾರಿಕೆಯಂತೆ ಶೃಂಗಾರ ಮಾಡಿಕೊಂಡಿದ್ದಾಳೆಂದು ಅವಳ ಚೆಲುವನ್ನು ವರ್ಣಿಸುತ್ತಾರೆ. ಭೂಮಿ-ಸೂರ್ಯನ ನಡುವೆ, ಚಂದ್ರ-ಸೂರ್ಯನ ನಡುವೆ, ಮಳೆ-ಇಳೆಯ ನಡುವೆ ಪ್ರಣಯ ನಡೆದೇ ಇದೆ. ಪ್ರೀತಿ, ಪ್ರೇಮ, ಸಂತೋಷದ ಭಾವದಿಂದ ಮತ್ತು ಮಾತೃಪ್ರಧಾನ ಸಂಸ್ಕೃತಿಯ ಧಾರೆಗಳಿಂದ ಮಂಗಳಮಯ ಜಗತ್ತನ್ನು ಕಟ್ಟಬಹುದೆಂಬುದು ಕವಿಯ ತಿಳುವಳಿಕೆಯಾಗಿದೆ. ಬೆಳಕಿನೊಡನೆ ಬಾಂಧವ್ಯ ಸಾಧಿಸುವ ಮೂಲಕ ತಾಯಸೆರಗಿನ ರಕ್ಷಣೆ ಪಡೆಯುವಲ್ಲಿ ಶಕ್ತರಾಗುತ್ತಾರೆ. ಈ ತಾಯಿತತ್ವವೆ ಅವರ ಭೂಮಿತತ್ವವಾಗಿದೆ.

೧೨. ತುಂಬಿಯಾಗಿರುವ ಮಗನಿಗೆ ತಾವರೆಯಾಗಿ, ಅವನ ಹೃದಯದಲ್ಲಿ ಯೋಗ ತೆರೆಯುವ ಭಗವತಿಯಾಗಿ ತಾಯಿ ಮಗನನ್ನು ಆಧ್ಯಾತ್ಮದ ಲೋಕದಲ್ಲಿ ತಂದುಬಿಡುತ್ತಾಳೆ. ಅರವಿಂದರ ವಿಚಾರಗಳಂತೂ ಈ ವಿಷಯದಲ್ಲಿ ಮತ್ತಷ್ಟು ಸ್ಫೂರ್ತಿದಾಯಕವಾಗಿ ಪರಿಣಮಿಸಿದವು. ಭೋಗದ ಬದುಕಿನಿಂದ ಸಾಧನೆಯ ಸಿದ್ಧಿಗೆ ನಡೆಯಬೇಕೆಂದು ಬೇಂದ್ರೆಯವರು ಅಪೇಕ್ಷಿಸಿದರು. ಅವರ ಕಾವ್ಯದ ಆಶಯ ಬೆಳಕ ತಾಯಿಯ ಇರುವಿಕೆಯ ವಾಸನೆಯನ್ನು ಗ್ರಹಿಸುತ್ತ ಶರಣ ಭಾವದಿಂದ ಅವಳ ದಾಸನಾಗಲು ಬಯಸಿತು. ಮೈಯೆಂಬ ಮಡಕೆ ತೊಳೆದು ಒಳಗೆ ಅಡಿಗೆ ಮಾಡೆಂದು ತಾಯಿಯನ್ನು ಕೋರುವಲ್ಲಿ ಆತ್ಮವನ್ನು ಉದ್ಧರಿಸಬೇಕೆಂಬ, ಪ್ರಲೋಭನೆಗಳನ್ನು ಮೀರಬೇಕೆಂಬ ಅನುಭಾವದ ಇಂಗಿತವನ್ನು ಅರಿಯಬಹುದಾಗಿದೆ. ಯಾವುದೇ ಕಂಬದ ಆಶ್ರಯವಿಲ್ಲದೆ ನಿಂತಿರುವ ಆಕಾಶ ಹಾಗೂ ಯಾವುದೇ ಆಧಾರವಿಲ್ಲದೆ ತಿರುಗುತ್ತಿರುವ ಭೂಮಿ ಅವರ ವಿಸ್ಮಯಕ್ಕೆ ಕಾರಣವಾಗಿ ದೈವಿಕ ಸಂಗತಿಗಳಿಗೆ ಮನಸೋಲುತ್ತಾರೆ.

೧೩. ಭೂಮಿತಾಯಿಯ ನಂತರ ಶ್ರಾವಣ ಬೇಂದ್ರೆಯವರ ಅನುಭಾವದ ಮತ್ತೊಂದು ನೆಲೆಯಾಗಿದೆ. ಭೂಮಿ ಪ್ರಾಣಶಕ್ತಿಯಿಂದ ಚಿಗಿಯಲು, ತುಂಬಿದ ಪೈರಿನಿಂದ ಅದು ತಲೆಯೆತ್ತಿ ನಿಲ್ಲಲು ಮಳೆ ಬರುವುದು ಅವಶ್ಯವಾಗಿದೆ. ಮಳೆಯ ಗೆಳೆತನವಿಲ್ಲದೆ ಭೂಮಿ ಬದುಕಲಾರದೆಂಬುದನ್ನು ಬೇಂದ್ರೆಯವರು ಹೇಳಲು ಇಷ್ಟಪಡುತ್ತಾರೆ. ಯೌವನದ ಉನ್ಮತ್ತತೆಯನ್ನು ಪ್ರಕಟಿಸುವಂತೆ ಮಳೆ ಹಗಲಿರುಳೂ ಸುರಿಯುವುದು, ಭೂಮಿಯ ಮೇಲೆ ಮೋಡಗಳ ಟೊಪ್ಪಿಗೆ ಹಾಕಿದಂತಹ ಚಿತ್ರ ಕಂಡುಬರುವುದು, ಗಾಳಿಯ ಜೊತೆ ಮಳೆ ಪ್ರಣಯದಾಟದಲ್ಲಿ ತೊಡಗಿರುವುದು ಬೇಂದ್ರೆಯವರ ಮಳೆಗಾಲದ ಅಭಿವ್ಯಕ್ತಿಯಾಗಿದೆ. ಈ ಮಳೆಗಾಲದಲ್ಲಿ ಶ್ರಾವಣ ಆನಂದದ ದೋಣಿ ಹತ್ತಿ ಬರುತ್ತಾನೆ. ಶ್ರಾವಣವನ್ನು ವರ್ಣಿಸುತ್ತ ಹಬ್ಬ, ಹುಮ್ಮಸ್ಸು, ಬದುಕಿನ ತಿರುವುಗಳನ್ನು ತರುವ ಕಾಲ ಅದಾಗಿದೆಯೆಂದು ಬೇಂದ್ರೆಯವರ ಅಭಿಪ್ರಾಯವಾಗಿದೆ. ಇದು ಭೂಮಿಯ ಉತ್ಸವದ ಸಮಯವೆಂದು ಲೌಕಿಕವನ್ನು ಹಾಡಿ ಹೊಗಳುತ್ತಾರೆ. ಅದರ ಜೊತೆಗೆ ಸೀಗೆಗೌರಿಯ ದನಿ ಕೇಳುವುದು, ನೀರಿನ ಪುಳಕಕ್ಕೆ ಭೂಮಿಯೆಂಬ ಹಕ್ಕಿಗೆ ರೆಕ್ಕೆ ಒಡೆಯುವುದು, ತಂದೆ-ತಾಯಿಯನ್ನು ಸೆರೆಯಿಂದ ಬಿಡಿಸುವ ಶ್ರೀಕೃಷ್ಣ ತುಂಬು ಶ್ರಾವಣದಲ್ಲಿಯೆ ಹುಟ್ಟುವುದು, ಶ್ರಾವಣದಲ್ಲಿಯೆ ಈ ದೇಶ ಸ್ವಾತಂತ್ರ್ಯ ಗಳಿಸಿರುವುದು; ಜೀವದ ರಘುರಿ ಶ್ರಾವಣದಲ್ಲಿ ಉಕ್ಕಿ ಹರಿಯುವುದು, ಸತ್ತುಹೋದಂತಿರುವ ದೇಹದಲ್ಲಿ ಶ್ರಾವಣದ ಗಾಳಿಯಿಂದ ಮತ್ತೆ ಜೀವ ಬರುವುದು, ಹಾಲಗೇರಿಯ ತುಂಬಿದ ಕೆರೆಯಲ್ಲಿ ಕಾಲರುದ್ರನಿಂದ ತಾಯಿ ತನ್ನನ್ನು ಉಳಿಸುವುದು ಇತ್ಯಾದಿ ಸಂಗತಿಗಳು ಅವರ ಅನುಭಾವದ ಆಸ್ಥೆಯನ್ನು ಪ್ರಕಟಿಸುತ್ತವೆ. ಶ್ರಾವಣದ ಉಲ್ಲಾಸವನ್ನು, ಪ್ರಾಪಂಚಿಕ ಸಂಗತಿಯನ್ನು ಬಣ್ಣಿಸುವದರ ಜೊತೆಗೆ ಶ್ರಾವಣದಲ್ಲಿ ಸಂಭವಿಸುವ ಕೇಡುಗಳನ್ನು ಧೈರ್ಯದಿಂದ ಎದುರಿಸುತ್ತಾರೆ. ತಮ್ಮ ಬಾಳಸಖಿಯನ್ನು ಶ್ರಾವಣದಲ್ಲಿಯೆ ಅವರು ಕಳೆದುಕೊಂಡರು. ಅವಳು ಸತ್ತೇ ಇಲ್ಲವೆನ್ನುವ ರೀತಿಯಲ್ಲಿ ಹೊಸ ಹರೆಯದ ಶ್ರಾವಣ ಉಕ್ಕುತ್ತಿದೆ. ಅನಂತವಾಗಿರುವ ವಿಶ್ವದಲ್ಲಿ ಬೇರಾಗಿ ಬೆರೆಯುವುದರಲ್ಲಿ ಅನುಭಾವದ ಅರ್ಥ ಅಡಗಿದೆಯೆಂದು ಹೇಳುತ್ತಾರೆ. ಶ್ರಾವಣದಲ್ಲಿ ಭಕ್ತಿಯ ಪರಿಧಿ ಹಿಗ್ಗುತ್ತದೆ. ನೆನಪುಗಳ ಚೈತನ್ಯದಿಂದ ದೈವಿಕತೆಯ ಸೆಲೆ ಕಾಲದಿಂದ ಕಾಲಕ್ಕೆ, ಜನಾಂಗದಿಂದ ಜನಾಂಗಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಹರಿದು ಹೋಗುತ್ತದೆಯೆಂಬುದು ಬೇಂದ್ರೆಯವರ ನಂಬಿಕೆಯಾಗಿದೆ.

೧೪. ದೈವಿಕ ಸಂಗತಿಗಳಿಗೆ ಮನಸ್ಸು ಮಾಡಿರುವಾಗ ಪ್ರಲೋಭನೆ, ಸಂಕಷ್ಟ, ಕಾಳರಾತ್ರಿ ಎದುರಾಗುವುದು ಸಹಜವಾಗಿದೆ. ಅಂತಹ ದ್ವಂದ್ವ ಹಾಗೂ ಕಠಿಣ ಸಮಯಗಳಲ್ಲಿ ಗೆದ್ದು ಬರುವುದು ಅನುಭಾವ ಸಾಧಿಸುವ ವಿಜಯವಾಗಿದೆಯೆಂದು ಬೇಂದ್ರೆಯವರು ತಿಳಿದಂತೆ ತೋರುತ್ತದೆ. ಭಕ್ತಿ ಹಾಗೂ ಆಧ್ಯಾತ್ಮಿಕ ಹಂತಗಳನ್ನು ಸಂಭಾಳಿಸುವದೆಂದರೆ ಕರಗಸದ ಬಾಯೊಳಗೆ ಹೋಗಿಬಂದಂತೆಂಬುದು ಅವರಿಗೂ ಮನವರಿಕೆಯಾಗಿದೆ. ಮೋಹದ ಬಾಗಿಲನ್ನು ಮುಚ್ಚುವುದು, ಕಾಮದ ಆಕರ್ಷಣೆಯನ್ನು ಮೀರುವುದು, ಎಷ್ಟು ಕಷ್ಟದ್ದೆಂದು 'ಜೋಗಿ' ಕವಿತೆಯ ತಲ್ಲಣಗಳನ್ನು ಅನುಭವಿಸಿಯೇ ಹೇಳಬೇಕಾಗುತ್ತದೆ. ನಿಜಗುಣ ಶಿವಯೋಗಿಗಳಂತಹ

ಅನುಭಾವಿಕರ ರೀತಿಯಲ್ಲಿ ಕಾಮನ ಜೊತೆ ಇರುವಂತಹ ಕೋಗಿಲೆ (ಪರಪುಟ್ಟ)ಯನ್ನು ಬೇಂದ್ರೆಯವರು ತಿರಸ್ಕರಿಸುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಭಯಾನಕವೆನಿಸುವ ಹಾಗೂ ವಿಸ್ಮಯಕ್ಕೆ ಒಳಪಡಿಸುವ ನಿಸರ್ಗದ ಸಂಗತಿಗಳನ್ನು ಹೇಳುತ್ತಲೆ ಮನುಷ್ಯ ಬದುಕಿನ ತಾತ್ವಿಕತೆ ಹಾಗೂ ತಮ್ಮ ಅನುಭಾವದ ಸಂಗತಿಗಳನ್ನು ಹೇಳುವುದು ಬೇಂದ್ರೆಯವರ ವೈಶಿಷ್ಟ್ಯವಾಗಿದೆ. ಧಾರವಾಡ ಮತ್ತು ಅದರ ಸುತ್ತಮುತ್ತಲಿನ ಕೆರೆ, ಗುಡ್ಡ, ನದಿ, ಹಳ್ಳ, ಕೊಳ್ಳ, ಕಾಲುವೆ, ಹೊಲ, ಗದ್ದೆ, ಹಸಿರು, ಪೈರು, ಏರಿ-ವಾರಿಗಳ ಸುತ್ತ ಇಡೀ ವಿಶ್ವವನ್ನೇ ಪ್ರತಿನಿಧಿಸುವಂತಹ ಲೌಕಿಕ ಹಾಗೂ ಅಲೌಕಿಕದ ಛಾಯೆಯನ್ನು ತಮ್ಮ ಕಾವ್ಯದಲ್ಲಿ ನಿರ್ಮಿಸಿಕೊಂಡಿರುವುದು ಅವರ ಕಲ್ಪನೆ ಹಾಗೂ ಪ್ರತಿಭಾಶಕ್ತಿಯ ದ್ಯೋತಕವಾಗಿದೆ. ಆಧ್ಯಾತ್ಮಿಕ ಬಯಲಿನ ಬಾಗಿಲು ಭಕ್ತನೊಬ್ಬ ಕೇಳಿದ ಕೂಡಲೆ ತೆರೆಯುವುದು ಅಸಾಧ್ಯ. ಅದಕ್ಕೆ ಸಾಧನೆ ಬೇಕು ಎಂಬುದು ಬೇಂದ್ರೆಯವರ ಕವಿತೆಗಳು ಹೊರಡಿಸುವ ಅರ್ಥವಾಗಿದೆ. ಅಲಕ್ಕನೆ ಬರುವ ಕುದುರಿಯವರಿಗಾಗಿ ಜೀವನಪರ್ಯಂತ ಕಾಯುವುದು ಅವಶ್ಯವಾಗಿದೆ. ಬಾಂಧವ್ಯವನ್ನು ಸಾಧಿಸಿ ಉಳಿಸಿಕೊಳ್ಳುವುದು ಮುಖ್ಯವಾಗಿದೆ. ಇಂತಹ ಅನುಭವಕ್ಕೆ ಮಾಧ್ಯಮವಾಗಿ ಬರುವ ನಿಸರ್ಗದ ವಿವರಗಳು ಬರಿ ನಿಸರ್ಗದ ನೋಟಗಳಾಗದೆ ತಮ್ಮೊಳಗೆ ಅರ್ಥಗಳನ್ನು ಗರ್ಭೀಕರಿಸುತ್ತ ಮನುಷ್ಯ ಬದುಕಿನ ವಿಕಾಸಕ್ಕೆ ಪ್ರತಿಮೆ ಹಾಗೂ ಸಂಕೇತಗಳಾಗಿ ಬೆಳೆಯುತ್ತವೆ.

೧೫. ಬೇಂದ್ರೆಯವರಲ್ಲಿ ಪ್ರಕೃತಿಯೆನ್ನುವುದು ಭಾಷೆಯಂತೆ ಉಪಯೋಗವಾಗುವುದರಿಂದ ಅದರ ಅರ್ಥಗಳು ಬೆಳೆಯುತ್ತಲೆ ಹೋಗುತ್ತವೆ. ಅದು ದೂರವೆಂದರೆ ದೂರಾಗಿ, ಸನಿಹವೆಂದರೆ ಸನಿಹವಾಗಿ, ಆರದ ಎಣ್ಣೆದೀಪವಾಗಿ, ಅದೃಷ್ಟದ ಗಾಳಿಯಾಗಿ, ಕರುಳಿನ ಸಂಬಂಧ ಹೇಳುವ ಬಾಂಧವ್ಯವಾಗಿ ಮಾರ್ಪಡುತ್ತದೆ. ಕಾವ್ಯವಸ್ತುವನ್ನು ಬೇಂದ್ರೆಯವರು ನಿರ್ವಹಣೆ ಮಾಡುವ ರೀತಿ ಕೂಡ ಬುದ್ಧಿ-ಭಾವಗಳನ್ನು ಬೆಸೆಯುವ ಕಲಾತ್ಮಕತೆಯಾಗುತ್ತದೆ. ಅಪಾರ ಶಬ್ದ ಸಂಪತ್ತಿನ, ದೇಶಿ ನುಡಿಗಟ್ಟಿನ, ಪುರಾಣ ಪ್ರತಿಮೆಗಳ, ಐತಿಹ್ಯಗಳ, ಗಾದೆಮಾತುಗಳ, ಉಪಮೆ-ರೂಪಕಗಳ ರತ್ನಕೋಶವೆ ಆಗಿದ್ದ ಅವರ ನಾಲಗೆಯಲ್ಲಿ ಕನ್ನಡವು ಹೊಸತನವನ್ನು ಪಡೆಯಿತು. ನವಚೈತನ್ಯದಿಂದ ನಳನಳಿಸಿತು. ಮಾರ್ಗ-ದೇಸಿ-ಜನಪದ-ಶಿಷ್ಟ ಕಾವ್ಯ ಪರಂಪರೆಗಳ ಜೊತೆ ನಡೆಸಿದ ನಿರಂತರ ಅನುಸಂಧಾನ ಹಾಗೂ ಇಂಗ್ಲೀಷ್-ಸಂಸ್ಕೃತ-ಮರಾಠಿ-ಪಾಶ್ಚಾತ್ಯ ಸಾಹಿತ್ಯ ಕೃತಿಗಳ ಪ್ರಭಾವದಿಂದ ಪರಿಪಾಕಗೊಂಡ ಭಾಷೆ-ಶೈಲಿಗಳನ್ನು ಅವರು ರೂಪಿಸಿಕೊಂಡರು.

೮.೨ ಹೆಚ್ಚಿನ ಅಧ್ಯಯನ ಸಾಧ್ಯತೆಗಳು :

'ಬೇಂದ್ರೆ ನಿಸರ್ಗ ಕಾವ್ಯ : ಅನುಭೂತಿ ಹಾಗೂ ಅಭಿವ್ಯಕ್ತಿ' ಎಂಬ ವಿಷಯವನ್ನು ಕುರಿತು ಅಧ್ಯಯನ ಕೈಗೊಂಡಾಗ ಬೇಂದ್ರೆಯವರ ನಿಸರ್ಗಕಾವ್ಯದ ಕುರಿತು ಇನ್ನೂ ಹಲವಾರು ನೆಲೆಗಳಿಂದ ಅಧ್ಯಯನ ಮಾಡಬಹುದಾದ ಸಾಧ್ಯತೆಗಳು ಗೋಚರಿಸಿದ್ದು ಅವುಗಳನ್ನು ಕುರಿತು ಕೆಲವು ಸುಳಿವುಗಳನ್ನು ನೀಡಲಾಗಿದೆ.

೧. ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಂತೆ ಸಾಂದರ್ಭಿಕವಾಗಿ ಹಾಗೂ ಸ್ಥೂಲವಾಗಿ ವಿವೇಚಿಸಲಾಗಿದೆಯಾದರೂ ಬೇಂದ್ರೆ ಹಾಗೂ ಸಮಕಾಲೀನರಲ್ಲಿ ನಿಸರ್ಗ ಕಾವ್ಯದ ಸಾದೃಶ್ಯ ಹಾಗೂ ವೈದೃಶ್ಯಗಳನ್ನು ಗುರುತಿಸಲಿಕ್ಕಾಗಿ ಕುವೆಂಪು, ಪು.ತಿ.ನ. ಹಾಗೂ ಪ್ರಮುಖ ಸಮಕಾಲೀನರ ಜೊತೆ ಬೇಂದ್ರೆ ನಿಸರ್ಗ ಕಾವ್ಯವನ್ನು ಆಳವಾದ ತೌಲನಿಕ ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ.

೨. ಬೇಂದ್ರೆ ಹಾಗೂ ಮಧುರಚೆನ್ನರ ಅನುಭಾವದ ನಂಟು ಗಾಢವಾಗಿರುವಂತಹದು. ಆದುದರಿಂದ ಅವರಿಬ್ಬರ ಅನುಭಾವದ ವಿವಿಧ ನೆಲೆಗಳನ್ನು ಕುರಿತು ತೌಲನಿಕವಾದ ಗಾಢ ಅಧ್ಯಯನಕ್ಕೆ ಅವಕಾಶವಿದೆ.

೩. ಬೇಂದ್ರೆಯವರ ನಿಸರ್ಗ ಕವಿತೆಗಳಲ್ಲಿ ಶ್ರಾವಣ ಕವಿತೆಗಳಿಗೆ ಮಹತ್ವದ ಸ್ಥಾನವಿದೆ. ಬರೀ ಶ್ರಾವಣ ಕವಿತೆಗಳನ್ನು ಇಟ್ಟುಕೊಂಡೆ ಅವುಗಳ ಆಳ-ವಿಸ್ತಾರಗಳನ್ನು, ಅವು ಅಡಗಿಸಿಕೊಂಡಿರುವ ಅರ್ಥಗಳನ್ನು ಅಭ್ಯಸಿಸಿ ದೀರ್ಘ ವಿಶ್ಲೇಷಣೆಯನ್ನು ನಡೆಸಬಹುದಾಗಿದೆ.

೪. ಬೇಂದ್ರೆಯವರ ಕಾವ್ಯದ ಅರ್ಥ, ವ್ಯಾಪ್ತಿಗಳು ಓದಿದಷ್ಟೂ ಹೆಚ್ಚಾಗುತ್ತಲೆ ಹೋಗುವಂತಹವುಗಳು. ಅವರ ಒಟ್ಟು ಕಾವ್ಯದಲ್ಲಿ ಮೂಡಿ ಬಂದಿರುವ ಬರೀ ಆಧ್ಯಾತ್ಮಿಕ ಸಂಗತಿಗಳನ್ನೆ ಕುರಿತು ಅಧ್ಯಯನವನ್ನು ಮಾಡಬಹುದಾಗಿದೆ.

೫. ಬೇಂದ್ರೆಯವರ ನಿಸರ್ಗ ಹಾಗೂ ಇತರ ಕಾವ್ಯದ ಮೇಲೆ ಪಾಶ್ಚಾತ್ಯ ಕವಿಗಳ ಪ್ರಭಾವವೂ ಇದೆ. ಕೀಟ್ಸ್, ಶೆಲ್ಲಿ, ಬೈರನ್, ಶೇಕ್ಸಪೀಯರ್, ಬ್ರೌನಿಂಗ್ ಮುಂತಾದ ಕವಿಗಳ ಪ್ರಭಾವ ಸೇರಿದಂತೆ ತೌಲನಿಕ ಅಧ್ಯಯನ ನಡೆಸಬಹುದಾಗಿದೆ.

೬. ಬೇಂದ್ರೆಯವರು ಭಾಷೆಗೆ ಜೀವಂತಿಕೆಯನ್ನು ತಂದುಕೊಟ್ಟವರು. ಅವರ ಭಾಷೆ, ಅಭಿವ್ಯಕ್ತಿಯ ಕ್ರಮ ಹಾಗೂ ಬೆಳವಣಿಗೆಗಳನ್ನು ಕುರಿತು ಭಾಷೆ, ಶೈಲಿ, ಪದಪ್ರಯೋಗಗಳ ನೆಲೆಯಿಂದ ಅವರ ಕಾವ್ಯವನ್ನು ಅಧ್ಯಯನ ಮಾಡಬಹುದಾಗಿದೆ.

ಕೊನೆಯ ಮಾತು :

ಬೇಂದ್ರೆಯವರ ನಿಸರ್ಗ ಕಾವ್ಯದ ಬಗ್ಗೆ ಅಧ್ಯಯನ ಮಾಡುತ್ತ ಅವರ ಕವಿತೆಯ ಬಗೆಗಿನ ವಿಶ್ಲೇಷಣೆ ಹಾಗೂ ವಿಮರ್ಶೆಗೆ ಕೊನೆಯಿಲ್ಲದೆಂಬುದೆ ಈ ಅಧ್ಯಯನದ ಕೊನೆಯಲ್ಲಿ ಹೇಳಬಲ್ಲ ಸೂಕ್ತ ಮಾತಾಗಬಲ್ಲುದು. ಇದು ಅತಿಶಯೋಕ್ತಿಯೆನಿಸಬಹುದಾದರೂ ಸತ್ಯವಾಗಿದೆ. ಕನ್ನಡ ಕಾವ್ಯ ಪರಂಪರೆಯನ್ನು ಸಮೃದ್ಧಗೊಳಿಸಿದ ಮತ್ತು ಶ್ರೀಮಂತಗೊಳಿಸಿದ ಅವರು ನಿಸರ್ಗ ಕವಿತೆಗಳ ಅಭಿವ್ಯಕ್ತಿಯಲ್ಲಿ ಆಧುನಿಕ ಕನ್ನಡಕ್ಕೆ ಮಾದರಿಯಾದರು. ಪ್ರಕೃತಿಯು ಬೇಂದ್ರೆಯವರ ಭಾವಕೋಶದಲ್ಲಿ ಬೀಡು ಬಿಟ್ಟಿತು. ಅವರ ಆಧ್ಯಾತ್ಮಿಕ ಧ್ಯಾನದಲ್ಲಿ ತಂಗಿತು. ದೈನಂದಿನ ಆಗು-ಹೋಗುಗಳಲ್ಲಿ ಮತ್ತು ಸುಖ-ದುಃಖಗಳಲ್ಲಿ ಜೀವ ತಳೆಯಿತು. ಕವಿತೆಯಾಗಿ ಅರಳಿತು. ಬೇಂದ್ರೆ ಮತ್ತು

ಕನ್ನಡದ ಎಲ್ಲ ಮಹತ್ವದ ಕವಿಗಳು ತಮ್ಮ ಕಾಲದ ಕನ್ನಡದ ಸತ್ವಕ್ಕೆ ಹಾಗೂ ಕನ್ನಡದ ಜೀವ ಪ್ರವಾಹಕ್ಕೆ ಪ್ರತಿಕ್ರಿಯಿಸಿದರು ಎಂಬ ಮಾತನ್ನು ಕಿ.ರಂ. ನಾಗರಾಜ ಹೇಳುತ್ತಾರೆ: 'ಬೇಂದ್ರೆಯವರ ಪ್ರಕಾರ ಕಾವ್ಯವನ್ನು ಓದಿ ನಾವು ಅನುಭವಿಸುವ ಅನುಭೂತಿಯೇ ಎಲ್ಲದಕ್ಕಿಂತ ಹಿರಿದು. ಕಾವ್ಯದ ಬಗೆಗಿನ ವಿಮರ್ಶೆ, ಚರ್ಚೆ ಎಲ್ಲವೂ ಈ ಅನುಭೂತಿಯನ್ನು ಹಿಂಬಾಲಿಸುತ್ತವೆ.'[3] ಬೇಂದ್ರೆಯವರ ನಿಸರ್ಗ ಕವಿತೆಗಳನ್ನು ಅಧ್ಯಯನ ಮಾಡಿದಾಗ ಅದು ದೊರಕಿಸುವ ಲೌಕಿಕ ಹಾಗೂ ಅಲೌಕಿಕ ಅನುಭೂತಿ ಅತ್ಯಂತ ಗಾಢ ಹಾಗೂ ಅನಿರ್ವಚನೀಯವೆಂಬುದರಲ್ಲಿ ಎರಡು ಮಾತಿಲ್ಲ. ಶಬ್ದ ಕಿರಿದು, ಅನುಭೂತಿ ಹಿರಿದಾಗುತ್ತದೆ.

ಅಡಿಟಿಪ್ಪಣಿಗಳು :

೧. ದ.ರಾ. ಬೇಂದ್ರೆ: 'ನಾದಲೀಲೆ', ಪು. ೪೦, ಪ್ರತಿಭಾ ಗ್ರಂಥಮಾಲೆ, ಧಾರವಾಡ, ನಾ.ಮು. ೧೯೫೫.

೨. ಅದೇ, ಪು. ೪೧.

೩. ಕಿ.ರಂ. ನಾಗರಾಜ: 'ಮತ್ತೆ ಮತ್ತೆ ಬೇಂದ್ರೆ', ಪು. ೩೯, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, ೨೦೧೦.

ಅನುಬಂಧಗಳು

ಅನುಬಂಧ - ಒಂದು

ದ.ರಾ. ಬೇಂದ್ರೆಯವರ ಕೃತಿಗಳು

೧. ಕಾವ್ಯ

೧. ಕೃಷ್ಣಾಕುಮಾರಿ, ಶಾರದಾಮಂಡಲ ಪುಸ್ತಕಮಾಲೆ, ಧಾರವಾಡ, ೧೯೨೨.

೨. ಗರಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಮಿತ್ರರು, ೧೯೩೨.

೩. ಮೂರ್ತಿ ಮತ್ತು ಕಾಮಕಸ್ತೂರಿ, ಗೋ.ವೆಂ. ಚುಳಕಿ, ಧಾರವಾಡ, ೧೯೩೪.

೪. ಸಖಿಗೀತ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೩೭.

೫. ಉಯ್ಯಾಲೆ, ಕರ್ನಾಟಕ ಬುಕ್ ಡಿಪೋ, ಹೈದರಾಬಾದ್, ೧೯೩೮.

೬. ನಾದಲೀಲೆ, ಕರ್ನಾಟಕ ಸಂಘ, ಶಿವಮೊಗ್ಗ, ೧೯೩೮.

೭. ಮೇಘದೂತ, ಸಾಧನ ಮುದ್ರಣಾಲಯ, ಧಾರವಾಡ, ೧೯೪೩.

೮. ಹಾಡು-ಪಾಡು, ಆನಂದ ಸಾಹಿತ್ಯ ಮಂದಿರ, ಗಲಗಲಿ, ೧೯೪೬.

೯. ಗಂಗಾವತರಣ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೫೧.

೧೦. ಕೃಷ್ಣಾಕುಮಾರಿ ಮತ್ತು ಹಾಡು-ಪಾಡು, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೦.

೧೧. ಸೂರ್ಯಪಾನ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೧೨. ಹೃದಯಸಮುದ್ರ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೧೩. ಮುಕ್ತಕಂಠ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೧೪. ಚೈತ್ಯಾಲಯ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೭.

೧೫. ಜೀವಲಹರಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೭.

೧೬. ಅರಳು ಮರಳು, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೭.

೧೭. ನಮನ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೮.

೧೮. ಸಂಚಯ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೯.

೧೯. ಉತ್ತರಾಯಣ, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೦.

೨೦. ಮುಗಿಲಮಲ್ಲಿಗೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೧.

೨೧. ಯಕ್ಷ-ಯಕ್ಷಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೨.

೨೨. ನಾಕುತಂತಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೪.

೨೩. ಮರ್ಯಾದೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೬.

೨೪. ಶ್ರೀಮಾತಾ, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೮.

೨೫. ಬಾ ಹತ್ತರ, ಗೀತಾ ಬುಕ್ ಹೌಸ್, ಮೈಸೂರು, ೧೯೬೯.

೨೬. ಇದು ನಭೋವಾಣಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೦.

೨೭. ವಿನಯ, ಗೀತಾ ಬುಕ್ ಹೌಸ್, ಮೈಸೂರು, ೧೯೭೨.

೨೮. ಮತ್ತೆ ಶ್ರಾವಣಾ ಬಂತು, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೮.

೨೯. ಒಲವೆ ನಮ್ಮ ಬದುಕು, ಮಣಿಪಾಲ ಪವರ ಪ್ರೆಸ್, ಮಣಿಪಾಲ, ೧೯೭೭.

೩೦. ಚತುರೋಕ್ತಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೮.

೩೧. ಪರಾಕಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೨.

೩೨. ಕಾವ್ಯವೈಖರಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೨.

೩೩. ಬಾಲಬೋಧೆ, ಮನೋಹರ ಗ್ರಂಥಮಾಲಾ, ಧಾರವಾಡ, ೧೯೮೩.

೩೪. ತಾ ಲೆಕ್ಕಣಿಕಾ ತಾ ದೌತಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೩.

೩೫. ಚೈತನ್ಯದ ಪೂಜೆ, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೮೭.

೩೬. ಪ್ರತಿಬಿಂಬಗಳು, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೮೭.

೩೭. ಶ್ರಾವಣ ಪ್ರತಿಭೆ, ಮನೋಹರ ಗ್ರಂಥಮಾಲಾ, ಧಾರವಾಡ, ೧೯೮೭.

೩೮. ಕುಣಿಯೋಣು ಬಾ, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೯೦.

೩೯. ಸಮರಸವೇ ಜೀವನ, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೯೬.

೪೦. ನಾಳಿನ ಕನಸು, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೯೭.

೪೧. ಅಂಬಿಕಾತನಯನ ಹಾಽಡಽ.... ಶ್ರೀಮಾತಾ ಪ್ರಕಾಶನ, ಧಾರವಾಡ, ೨೦೦೦.

೪೨. ನೋಡ್ಯಾನಽ ದಶಾವತಾರ, ಶ್ರೀಮಾತಾ ಪ್ರಕಾಶನ, ಧಾರವಾಡ, ೨೦೦೧.

೪೩. ಔದುಂಬರ ಗಾಥೆ, ಸಮಗ್ರ ಕಾವ್ಯ ಸಂಪುಟ-೧, ೬ ಬೇಂದ್ರೆ ಸಂಶೋಧನ ಸಂಸ್ಥೆ, ಹುಬ್ಬಳ್ಳಿ, ೨೦೦೩.

೨. ನಾಟಕ

೧. ತಿರುಕರ ಪಿಡುಗು (ಮೂರು ಹುಚ್ಚಾಟಗಳು), ಜಯಕರ್ನಾಟಕ ಗ್ರಂಥಮಾಲೆ, ಧಾರವಾಡ, ೧೯೩೦.

೨. ಉದ್ಧಾರ, ಜಯಕರ್ನಾಟಕ ಗ್ರಂಥಮಾಲೆ, ಧಾರವಾಡ, ೧೯೩೦.

೩. ನಗೆಯ ಹೊಗೆ, ಜಯಕರ್ನಾಟಕ ಗ್ರಂಥಮಾಲೆ, ಧಾರವಾಡ, ೧೯೩೧.

೪. ಹುಚ್ಚಾಟಗಳು, ಸಾಹಿತ್ಯ ಭಂಡಾರ, ಹುಬ್ಬಳ್ಳಿ, ೧೯೩೫.

೫. ಹೊಸ ಸಂಸಾರ ಮತ್ತು ಇತರ ಏಕಾಂಕಗಳು, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೫೦.

೬. ಅಂಬಿಕಾತನಯದತ್ತ ನಾಟಕ ಸಂಪುಟ, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೨.

೩. ಕತೆ ಹರಟೆ

೧. ನಿರಾಭರಣ ಸುಂದರಿ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೪೦.

೨. ಚೀನದ ಬಾಳು ಬದುಕು, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೯೬.

೪. ವಿಚಾರ-ವಿಮರ್ಶೆ

೧. ಸಾಹಿತ್ಯ ಮತ್ತು ವಿಮರ್ಶೆ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೩೭.

೨. ಸಾಹಿತ್ಯ ಸಂಶೋಧನ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೪೦.

೩. ವಿಚಾರ ಮಂಜರಿ, ಮಿಂಚಿನಬಳ್ಳಿ, ಧಾರವಾಡ, ೧೯೪೫.

೪. ಶ್ರೀ ಅರವಿಂದರ ಆಶ್ರಮ ಮತ್ತು ತತ್ತ್ವೋಪದೇಶ (ಹ.ಮ.ಬಬಲೇಶ್ವರರೊಡನೆ), ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೪೭

೫. ಕವಿ ಲಕ್ಷ್ಮೀಶನ ಜೈಮಿನಿ ಭಾರತಕ್ಕೆ ಮುನ್ನುಡಿ, ೧೯೪೭.

೬. ಮಹಾರಾಷ್ಟ್ರ ಸಾಹಿತ್ಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೫೯.

೭. ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೮.

೮. ಮಾತೆಲ್ಲ ಜ್ಯೋತಿ, ಅಕಾಡೆಮಿ ಆಫ್ ಜನರಲ್ ಎಜ್ಯುಕೇಷನ್, ಮಣಿಪಾಲ, ೧೯೭೨.

೯. ಸಾಹಿತ್ಯದ ವಿರಾಟ್ ಸ್ವರೂಪ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪.

೧೦. ಕುಮಾರವ್ಯಾಸ, ರಾಷ್ಟ್ರೋತ್ಥಾನ, ಬೆಂಗಳೂರು, ೧೯೭೬.

೧೧. ಮತಧರ್ಮ ಮತ್ತು ಆಧುನಿಕ ಮಾನವ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೯.

೫. ಸಂಪಾದನೆ

೧. ನನ್ನದು ಈ ಕನ್ನಡ ನಾಡು (ಆಯ್ಕೆ), ಗೆಳೆಯರ ಗುಂಪು, ಧಾರವಾಡ, ೧೯೨೮.

೨. ಹಕ್ಕಿ ಹಾರುತಿದೆ, ಜಯಕರ್ನಾಟಕ ಗ್ರಂಥಮಾಲೆ, ೧೯೩೦.

೩. ಚಂದ್ರಹಾಸ, ಮನೋಹರ ಗ್ರಂಥಮಾಲೆ, ಧಾರವಾಡ, ೧೯೨೯.

೪. ಹೊಸಗನ್ನಡ ಕಾವ್ಯಶ್ರೀ (ಎಂ. ಮರಿಯಪ್ಪ ಭಟ್ಟರೊಡನೆ) ಶ್ರೀ ಕೃಷ್ಣ ಪ್ರೆಸ್, ಬೆಂಗಳೂರು, ೧೯೫೭.

೫. ರವೀಂದ್ರ ಪ್ರಶಸ್ತಿ (ಇತರರೊಡನೆ) ಮೈಸೂರು ಸರಕಾರ, ಬೆಂಗಳೂರು, ೧೯೬೨.

೬. ಕನಕದಾಸ ಚತುಶ್ಶತಮಾನೋತ್ಸವ ಸಂಸ್ಕರಣ ಸಂಪುಟ, ಉತ್ಸವ ಸಮಿತಿ, ೧೯೬೫.

೬. ಅನುವಾದ :ಕನ್ನಡಕ್ಕೆ

೧. ಉಪನಿಷದ್ರಹಸ್ಯ ಅಥವಾ ಭಾರತೀಯ ಆಧ್ಯಾತ್ಮ ಶಾಸ್ತ್ರ ಪೀಠಿಕೆಯು, (Tr. of Dr. R.D. Ranade's Upanishadrahasya) ರಂ.ರಾ.ದಿವಾಕರ ಮತ್ತು ಶಂ.ಬಾ.ಜೋಶಿಯವರೊಡನೆ, ಆಧ್ಯಾತ್ಮ ಕಾರ್ಯಾಲಯ, ಧಾರವಾಡ, ೧೯೨೮.

೨. ಭಾರತೀಯ ನವಜನ್ಮ, (Tr. of Sri Aurobindo's The Indian Renaissance) ಶ್ರೀ ಅರವಿಂದ ಗ್ರಂಥಾಲಯ, ಚಡಚಣ, ೧೯೩೬.

೩. ನೂರೊಂದು ಕವನ, (ಹೂಮಾಯೂನ್ ಕಬೀರ ಸಂಪಾದಿತ ಟಾಗೋರ್ ಕವನಗಳ ಅನುವಾದ), ನಾರಾಯಣ ಸಂಗಮರೊಡನೆ, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೬೭.

೪. ಕಬೀರ ವಚನಾವಲಿ, ಗುರುನಾಥ ಜೋಶಿಯವರೊಡನೆ, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೬೮.

೫. ಭಗ್ನಮೂರ್ತಿ (ಮರಾಠಿ ಕವಿ ಅನಿಲರ ಮೂಲಗ್ರಂಥ ಅನುವಾದ), ಪ್ರತಿಭಾ ಗ್ರಂಥಮಾಲೆ, ಸಾಹಿತ್ಯ ಅಕಾಡೆಮಿಯ ಪರವಾಗಿ, ೧೯೭೨.

೬. ಗುರುಗೋವಿಂದ ಸಿಂಗ್, (ಹರಬನ್ಸ್‌ಸಿಂಗ್‌ರ ಗ್ರಂಥದ ಅನುವಾದ), ವಾಮನ ಬೇಂದ್ರೆ, ಕೆ.ಎಸ್.ಶರ್ಮರೊಡನೆ, ಗುರುಗೋವಿಂದ ಸಿಂಗ್ ಸಂಸ್ಥೆ, ಚಂಡೀಗಡ, ೧೯೭೬.

೭. **In English**

೧. Four Strings, Tr. K. Raghavendra Rao, Vaman Bendre and K.S. Sharma, Kavyadhara Prakashana, Dharwad, 1974.

೨. A Theory of Immortality, Purogami Sahitya Prakashana, Dharwad, 1977.

೩. Spring Fire, An Anthology of Bendre Poetry, by K. Raghavendra Rao, Vaman Bendre, K.S. Sharma, Dr. D.R. Bendre Research Institute, Hubli, 1986.

೪. Dreaming Tommorrow, Tr. K.R. Rao, Vaman Bendre, K.S. Sharma, D.R. Bendre Research Institute, Hubli.

೫. Three Plays, Tr. K.R. Rao, 2006.

೮. ಮರಾಠಿ

೧. ಸಂತ ಮಹಾಂತಾಂಚಾ ಪೂರ್ಣ ಶಂಭೂ ವಿಠ್ಠಲ, ಶಿಕ್ಷಣ ಪ್ರಸಾರಕ ಮಡಳಿ, ಪುಣೆ, ೧೯೬೩.

೨. ಸಂವಾದ, ಪಾಪ್ಯುಲರ್ ಪ್ರಕಾಶನ, ಮುಂಬಯಿ, ೧೯೬೫.

೩. ವಿಠ್ಠಲ ಸಂಪ್ರದಾಯ, ಸಮಾಜ ಶಿಕ್ಷಣ ಮಾಲಾ, ಪುಣೆ, ೧೯೮೪.

೪. ಶಾಂತಲಾ (ಮೂಲ ಕನ್ನಡ ಗ್ರಂಥ ಅನುವಾದ) ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೭೨.

೫. ಚಾರ್‌ತಂತು (ನಾಕುತಂತಿಯ ಅನುವಾದ), ಪ್ರೊ. ವಿ.ಎಲ್. ಜೋಶಿ, ನವಸಾಹಿತ್ಯ ಪ್ರಕಾಶನ, ಬೆಳಗಾವಿ, ೧೯೭೯.

೬. ಉಮಾಳಾ, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೯೧.

೯. ಹಿಂದೀ

೧. ಚಾರ್‌ತಾರ್, ನಾಕುತಂತಿಯ ಹಿಂದೀ ಅನುವಾದ, ಡಾ. ವಾಸುಪುತ್ರನ್ ಮತ್ತು ಇತರರು, ಭಾರತೀಯ ಜ್ಞಾನಪೀಠ ಪ್ರಕಾಶನ, ದೆಹಲಿ, ೧೯೭೪.

ಅನುಬಂಧ - ಎರಡು

ದ.ರಾ.ಬೇಂದ್ರೆಯವರ ಬದುಕಿನ ಪ್ರಮುಖ ಘಟನೆಗಳು

೧೮೯೬ ಜನೇವರಿ ೩೧, (೧೮೧೭ ಮನ್ಮಥ ಸಂವತ್ಸರದ ಮಾಘ ವದ್ಯ ಪ್ರತಿಪದೆ) ಧಾರವಾಡದಲ್ಲಿ ಜನನ.

೧೯೧೩ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ.

೧೯೧೮ ಪುಣೆಯ ಫರ್ಗೂಸನ್ ಕಾಲೇಜಿನಲ್ಲಿ ಉಚ್ಚ ಶಿಕ್ಷಣ.

೧೯೧೮ ಮುಂಬೈ ವಿಶ್ವವಿದ್ಯಾಲಯದ ಬಿ.ಎ. ಪದವಿ, ಇಂಗ್ಲೀಷ್ ಮತ್ತು ಸಂಸ್ಕೃತಗಳಲ್ಲಿ. ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಶಿಕ್ಷಕ ವೃತ್ತಿಯ ಪ್ರಾರಂಭ.

೧೯೧೯ ಜೋಗಳೇಕರ ಲಕ್ಷ್ಮೀಬಾಯಿಯವರೊಡನೆ ಹುಬ್ಬಳ್ಳಿಯಲ್ಲಿ ವಿವಾಹ.

೧೯೨೨ ಪ್ರಥಮ ಕಾವ್ಯ ಸಂಕಲನ 'ಕೃಷ್ಣಾಕುಮಾರಿ'ಯ ಪ್ರಕಟಣೆ.

೧೯೨೩ 'ಗೆಳೆಯರ ಗುಂಪು' ಸ್ಥಾಪನೆ; ೧೯೩೩ ರಲ್ಲಿ ವಿಘಟನೆ.

೧೯೨೬ 'ಸ್ವಧರ್ಮ'ದ ಸಂಪಾದಕತ್ವ. ಮುಂದಿನ ವರ್ಷಗಳಲ್ಲಿ 'ಜಯಕರ್ನಾಟಕ' (೧೯೨೯-೩೦) ಮತ್ತು 'ಜೀವನ'ದ (೧೯೩೯-೧೯೪೩) ಸಂಪಾದಕರೆಂದೂ ಕಾರ್ಯನಿರ್ವಹಣೆ.

೧೯೩೦ ೧೦ನೆಯ ಸಾಹಿತ್ಯ ಸಮ್ಮೇಳನದಲ್ಲಿ ಲೇಖಕರ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದು, ಮೈಸೂರು.

೧೯೩೨ 'ನರಬಲಿ' (ಜಯಕರ್ನಾಟಕ ಆಗಸ್ಟ ೧೯೩೦)ಯ ಕಾರಣದಿಂದ ಶಿಕ್ಷೆ : ಹಿಂಡಲಗಾ ಜೈಲುವಾಸ, ಮುಗದದಲ್ಲಿ ನಜರಬಂದಿ.

೧೯೩೪ ಎಂ.ಎ. ಪದವಿ : ಕನ್ನಡ ಮತ್ತು ಇಂಗ್ಲೀಷ್ ಪ್ರಮುಖ ವಿಷಯಗಳು. ಮುಂಬೈಯಲ್ಲಿ ನಡೆದ ೨೧ನೆಯ ಸಾಹಿತ್ಯ ಸಮ್ಮೇಳನದಲ್ಲಿ ಕವಿಗೋಷ್ಠಿಯಅಧ್ಯಕ್ಷತೆ.

೧೯೪೧ ಗದುಗಿನ ಸಮಿತಿ ಹೈಸ್ಕೂಲಿನ ಮುಖ್ಯಾಧ್ಯಾಪಕರಾಗಿ ಕಾರ್ಯನಿರ್ವಹಣೆ.

೧೯೪೩ ಪುಣೆಯ ಬೃಹನ್ಮಹಾರಾಷ್ಟ್ರ ಕಾಲೇಜಿನಲ್ಲಿ ಕನ್ನಡದ ಪ್ರಾಧ್ಯಾಕರೆಂದು ನಿಯುಕ್ತಿ. ೨೭ನೆಯ ಡಿಸಂಬರದಂದು ಶಿವಮೊಗ್ಗದಲ್ಲಿ ನಡೆದ ೨೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

೧೯೪೪ ಸೊಲ್ಲಾಪುರದ ಡಿ.ಎ.ವಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರೆಂದು ನಿಯುಕ್ತಿ, ೧೯೫೬ ರಲ್ಲಿ ನಿವೃತ್ತಿ.

೧೯೪೬ ೫೦ನೆಯ ಹುಟ್ಟುಹಬ್ಬದ ಸಮಾರಂಭ, ಧಾರವಾಡದಲ್ಲಿ.

೧೯೫೬ ಆಕಾಶವಾಣಿ ಧಾರವಾಡ ಕೇಂದ್ರದಲ್ಲಿ ಸಾಹಿತ್ಯಸಲಹಾಗಾರರೆಂದು ಕೇಂದ್ರ ಸರಕಾರದಿಂದ ನೇಮಕ. ಸೊಲ್ಲಾಪುರ, ಪುಣೆ, ಧಾರವಾಡಗಳಲ್ಲಿ ೬೦ ನೆಯ ಜನ್ಮ ದಿನದ ಉತ್ಸವಗಳು. ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸನ್ಮಾನ.

೧೯೫೮ 'ಅರಳು ಮರಳು' ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ.

೧೯೬೪ ಮೈಸೂರು ದಸರಾ ಮಹೋತ್ಸವದಲ್ಲಿ ಸನ್ಮಾನ.

೧೯೬೫ ಮರಾಠಿ ಗ್ರಂಥ 'ಸಂವಾದ'ಕ್ಕೆ ನ.ಚಿ.ಕೇಳಕರ ಪ್ರಶಸ್ತಿ.

೧೯೬೬ ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ. ಹಿಂದೀ ಪ್ರಚಾರ ಸಭೆಯಿಂದ 'ಸಾಹಿತ್ಯ ಆಚಾರ್ಯ' ಪ್ರಶಸ್ತಿ. ಆಗಸ್ಟ್ ೧೭ ರಂದು ಸಖಿಗೀತದ ನಾಯಕಿ, ಪತ್ನಿ ಶ್ರೀಮತಿ ಲಕ್ಷ್ಮೀಬಾಯಿ ನಿಧನ.

೧೯೬೮ 'ಪದ್ಮಶ್ರೀ' ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್.

೧೯೬೯ ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಶಿಪ್.

೧೯೭೨ ಉಡುಪಿಯ ಅದಮಾರು ಮಠದಿಂದ 'ಕರ್ನಾಟಕ ಕವಿತಿಲಕ' ಪ್ರಶಸ್ತಿ.

೧೯೭೪ 'ನಾಕುತಂತಿ'ಗೆ ಜ್ಞಾನಪೀಠ ಪ್ರಶಸ್ತಿ.

೧೯೭೬ ವಾರಾಣಾಸಿಯ ಕಾಶೀ ವಿದ್ಯಾಪೀಠದಿಂದ ಗೌರವ ಡಾಕ್ಟರೇಟ್ ಪದವಿ.

೧೯೭೭ ಧಾರವಾಡ ಆಕಾಶವಾಣಿಯ ಸುವರ್ಣ ಮಹೋತ್ಸವದ ಸನ್ಮಾನ.

೧೯೮೧ ೨೬ನೆಯ ಅಕ್ಟೋಬರ್‌ದಂದು ಮುಂಬೈಯ ಹರಕಿಶನ್‌ದಾಸ್ ಆಸ್ಪತ್ರೆಯಲ್ಲಿ ನಿಧನ.

ಅನುಬಂಧ - ಮೂರು

ಗ್ರಂಥಋಣ

೧. ಅಂತರಂಗದ ಆಕಾಶ (೧೯೯೭), ಡಾ. ಚಿಂತಾಮಣಿ ಕೊಡ್ಲೆಕೆರೆ, ಚಿತ್ರಮೂಲ ಪ್ರಕಾಶನ, ಅಘನಾಶಿನಿ.

೨. ಅಂತರಂಗದ ರತ್ನ -ಡಾ. ಗುರುಲಿಂಗ ಕಾಪಸೆ ಅಭಿನಂದನ ಗ್ರಂಥ, (೨೦೦೧), ಪ್ರ.ಸಂ. ಪ್ರೊ. ಎಸ್.ಜಿ. ಕೆರೂರ, ಗುರುಲಿಂಗ ಕಾಪಸೆ ಅಭಿನಂದನ ಸಮಿತಿ, ಹಲಸಂಗಿ, ಧಾರವಾಡ.

೩. ಅಂಬಿಕಾತನದತ್ತರ ಭಾವಗೀತೆಗಳು, (೧೯೮೨), ಡಾ. ರುಕ್ಮಿಣಿ ಪರ್ವತಿ, ಉಷಾ ಸಾಹಿತ್ಯಮಾಲೆ, ಮೈಸೂರು.

೪. ಅಕ್ಕನ ವಚನಗಳು (೧೯೯೦), ಸಂ. ಎಲ್. ಬಸವರಾಜು, ಗೀತಾ ಬುಕ್ ಹೌಸ್, ಮೈಸೂರು.

೫. ಅನುಭಾವ : ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, ಡಾ. ಬಸವರಾಜ ಕಲ್ಗುಡಿ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೬. ಅಮೃತ ಮತ್ತು ಗರುಡ, (೨೦೦೩),ಡಿ.ಆರ್. ನಾಗರಾಜ್, ಅಕ್ಷರ ಪ್ರಕಾಶನ ಹೆಗ್ಗೋಡು.

೭. ಅರಳು-ಮರಳು, (೧೯೫೬, ೩ನೇ ಮುದ್ರಣ) ದ.ರಾ. ಬೇಂದ್ರೆ, ಶ್ರೀ ಮಾತಾ ಪ್ರಕಾಶನ, ಧಾರವಾಡ.

೮. ಅರಿವಿಂಗೆ ಬೇರೊಂದೊಡಲುಂಟೆ (೨೦೦೪), ಪ್ರೊ. ಹಸನಬಿ ಬೀಳಗಿ, ಸಂವಹನ, ಮೈಸೂರು.

೯. ಅಲ್ಲಮಪ್ರಭು ಚಿಂತನ (೨೦೦೪), ಸಂ. ಡಾ. ಎಸ್.ಕೆ. ಕೊಪ್ಪಾ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೦. ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ, (೧೯೯೯), ಡಿ.ಆರ್. ನಾಗರಾಜ್, ಅಕ್ಷರ ಪ್ರಕಾಶನ ಹೆಗ್ಗೋಡು.

೧೧. ಅಲ್ಲಮಪ್ರಭು -ಚಿಂತನೆ (೨೦೦೪), ಸಂ. ಎಸ್.ಕೆ.ಕೊಪ್ಪಾ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೨. ಇಂಗ್ಲೀಷ ಗೀತೆಗಳು (೧೯೮೬), ಬಿ.ಎಂ.ಶ್ರೀ. ಕಾವ್ಯಾಲಯ, ಮೈಸೂರು.

೧೩. ಇಂಗ್ಲೀಷ ಗೀತೆಗಳು-ಸಾಂಸ್ಕೃತಿಕ ಮುಖಾಮುಖಿ (೨೦೦೭), ಸಂ. ರಹಮತ ತರೀಕೆರೆ, ಕ.ವಿ.ವಿ. ಹಂಪಿ.

೧೪. ಇಳಿದು ಬಾ ತಾಯಿ (೧೯೭೭), ಸಂ. ಡಾ. ಬುದ್ದಣ್ಣ ಹಿಂಗಮಿರೆ, ಸಮಾಜ ಪುಸ್ತಕಾಲಯ, ಧಾರವಾಡ.

೧೫. ಉತ್ತರಾಯಣ (೧೯೬೦ ಪ್ರ.ಮು.), ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ.

೧೬. ಒಲವೆ ನಮ್ಮ ಬದುಕು (೧೯೮೦ ದ್ವಿ.ಮು.) ದ.ರಾ.ಬೇಂದ್ರೆ.

೧೭. ಔದುಂಬರಗಾಥೆ-ಸಂಪುಟ-೧ರಿಂದ ೬, (೨೦೦೩), ಸಂ. ಡಾ. ವಾಮನ ಬೇಂದ್ರೆ, ಡಾ. ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ.

೧೮. ಕಣವಿ ಕಾವ್ಯ ಭಂಡಾರ (೨೦೦೯), ಡಾ. ಚೆನ್ನವೀರ ಕಣವಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೧೯. ಕಣವಿ ಸಮಗ್ರ ಕಾವ್ಯ (೧೯೯೬), ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ.

೨೦. ಕಣವಿಯವರ ಕವಿತೆ ಹೊಸ ಓದು (೨೦೦೮), ಸಂ. ಡಾ. ಗುರುಲಿಂಗ ಕಾಪಸೆ, ಡಾ. ಜಿ.ಎಂ. ಹೆಗಡೆ, ಸುಮುಖ ಪ್ರಕಾಶನ, ಬೆಂಗಳೂರು.

೨೧. ಕದಡು (೨೦೦೮), ಡಾ. ಬಿ.ಎಂ.ಪುಟ್ಟಯ್ಯ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ.

೨೨. ಕನ್ನಡ ಕಾವ್ಯ ಪರಂಪರೆ ಮತ್ತು ಬೇಂದ್ರೆಯವರ ಕಾವ್ಯ (೨೦೦೪), ಡಾ. ಗಿರಡ್ಡಿ ಗೋವಿಂದರಾಜ, ಪ್ರಸಾರಾಂಗ, ಕ.ವಿ.ವಿ. ಧಾರವಾಡ.

೨೩. ಕನ್ನಡ ಭಾರತಿ (೧೯೮೪), ಸಂ. ಎಲ್.ಎಸ್. ಶೇಷಗಿರಿರಾವ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೪. ಕನ್ನಡದಲ್ಲಿ ಭಾವಗೀತೆ (೨೦೦೦), ಡಾ. ಪ್ರಭುಶಂಕರ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.

೨೫. ಕನ್ನಡ ಭಾವಗೀತೆಗಳಲ್ಲಿ ಪ್ರಕೃತಿ : ಒಂದು ಅಧ್ಯಯನ (೧೯೯೩), ಡಾ. ಕೆ.ಆರ್.ಸಿದ್ದಗಂಗಮ್ಮ (ಪಿಎಚ್.ಡಿ. ಮಹಾಪ್ರಬಂಧ) ಕ.ವಿ.ವಿ. ಧಾರವಾಡ.

೨೬. ಕನ್ನಡ ಸಾಹಿತ್ಯ ಚರಿತ್ರೆ (೧೯೯೬), ಡಾ. ರಂ.ಶ್ರೀ. ಮುಗಳಿ, ಸಮಾಜ ಪುಸ್ತಕಾಲಯ, ಧಾರವಾಡ.

೨೭. ಕನ್ನಡ ಸಾಹಿತ್ಯ ಸಂಗಾತಿ (೧೯೯೭), ಪ್ರೊ. ಕೀರ್ತಿನಾಥ ಕುರ್ತಕೋಟಿ, ಪ್ರಸಾರಾಂಗ, ಕ.ವಿ.ವಿ.ಹಂಪಿ.

೨೮. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೩, ಧರ್ಮ (೨೦೦೦), ಸಂ. ರಹಮತ್ ತರೀಕೆರೆ, ಕ.ವಿ.ವಿ. ಹಂಪಿ.

೨೯. ಕಬೀರ ವಚನಾವಳಿ (೧೯೬೮), ಅನು. ದ.ರಾ.ಬೇದ್ರೆ, ಸಾಹಿತ್ಯ ಅಕಾಡೆಮಿ, ನವದೆಹಲಿ.

೩೦. ಕರುಳಬಳ್ಳಿಯ ಸೊಲ್ಲು (೨೦೦೧), ಡಾ. ರಾಜೇಂದ್ರ ಚೆನ್ನಿ, ಅಭಿನವ ಬೆಂಗಳೂರು.

೩೧. ಕರ್ಣಾಟ ಭಾರತ ಕಥಾಮಂಜರಿ (೧೯೮೮), ಸಂ. ಕುವೆಂಪು ಮತ್ತು ಮಾಸ್ತಿ, ಮೈಸೂರು ವಿ.ವಿ. ಮೈಸೂರು.

೩೨. ಕವಿತಾ ಸಂಚಯ (೨೦೦೫), ರವೀಂದ್ರನಾಥ ಟ್ಯಾಗೋರ್, ಅನುವಾದ : ಜಿ. ರಾಮನಾಥ ಭಟ್, ಕಾವ್ಯಾಲಯ, ಮೈಸೂರು.

೩೩. ಕಾವ್ಯ ಮಂಥನ ಪ್ರಾಯೋಗಿಕ ವಿಮರ್ಶೆ (೧೯೮೦), ಜಾಲಿಹಾಳ ಗೋವಿಂದ, ಸಮಾಜ ಪುಸ್ತಕಾಲಯ, ಧಾರವಾಡ.

೩೪. ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ (೨೦೦೬), ಸಂ. ಡಾ. ಜಿ.ಎಸ್.ಭಟ್, ಅಕ್ಷರ ಪ್ರಕಾಶನ, ಹೆಗ್ಗೋಡು.

೩೫. ಕುಮಾರವ್ಯಾಸ ಭಾರತ : ಸಾಂಸ್ಕೃತಿಕ ಮುಖಾಮುಖಿ (೨೦೦೪), ಸಂ. ರಹಮತ್ ತರೀಕೆರೆ, ಕ.ವಿ.ವಿ. ಹಂಪಿ.

೩೬. ಕುವೆಂಪು ಸಾಹಿತ್ಯ ಜಗತ್ತಿನಲ್ಲಿ (೨೦೦೮), ಪ್ರೊ. ಎಲ್.ಎಸ್.ಶೇಷಗಿರಿರಾವ್, ಸಪ್ನ ಬುಕ್‌ಹೌಸ್, ಬೆಂಗಳೂರು.

೩೭. ಕೃಷ್ಣಾಕುಮಾರಿ ಮತ್ತು ಹಾಡು-ಪಾಡು, (೧೯೫೬ ದ್ವಿ.ಮು.), ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ.

೩೮. ಕೈವಲ್ಯ ಪದ್ಧತಿ (೧೯೮೫), ನಿಜಗುಣ ಶಿವಯೋಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೩೯. ಗಂಗಾವತರಣ (೧೯೫೫ ಎ.ಮು.), ದ.ರಾ.ಬೇಂದ್ರೆ, ಪ್ರತಿಭಾ ಗ್ರಂಥಮಾಲೆ, ಧಾರವಾಡ.

೪೦. ಗಂಗೋತ್ರಿ - ಕುವೆಂಪು ಅಭಿನಂದನ ಗ್ರಂಥ (೧೯೯೮), ಸಂ. ಪ್ರೊ. ಎಸ್.ವಿ.ಪರಮೇಶ್ವರ ಭಟ್, ಗೀತಾ ಬುಕ್ ಹೌಸ್, ಮೈಸೂರು.

೪೧. ಗಮನ (೧೯೯೦), ಡಿ.ಎಸ್.ನಾಗಭೂಷಣ, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ.

೪೨. ಗರಿ (೧೯೫೧, ಮೂ. ಆ.), ದ.ರಾ.ಬೇಂದ್ರೆ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ.

೪೩. ಚತುರೋಕ್ತಿ ಮತ್ತು ಇತರ ಕವನಗಳು (೧೯೭೮ ಪ್ರ.ಮು.), ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ.

೪೪. ಜನಪದ ಗೀತಾಂಜಲಿ (೨೦೦೯), ಸಂ. ಹಲಸಂಗಿ ಗೆಳೆಯರು, ಪ್ರಸಾರಾಂಗತ ಕ.ವಿ.ವಿ. ಹಂಪಿ.

೪೫. ಜನಪ್ರಿಯ ಕನಕ ಸಂಪುಟ (೧೯೮೯), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೪೬. ಜಾನಪದ ಸೃಷ್ಟಿ - ದೃಷ್ಟಿ (೨೦೦೦), ಪ್ರೊ.ಹಸನಬಿ ಬೀಳಗಿ, ಸಾಯಿ ಪ್ರಕಾಶನ, ಧಾರವಾಡ.

೪೭. ಜಿ.ಎಸ್.ಶಿವರುದ್ರಪ್ಪ ಸಮಗ್ರ ಕಾವ್ಯ (೧೯೯೭), ಡಾ. ಜಿ.ಎಸ್.ಶಿವರುದ್ರಪ್ಪ, ಕಾಮಧೇನು ಪ್ರಕಾಶನ, ಬೆಂಗಳೂರು.

೪೮. ಜೀವನ ಸಂಗೀತ (೧೯೭೧), ಸಂ. ಸಿಂಪಿ ಲಿಂಗಣ್ಣ ಹಾಗೂ ಪಿ. ಧೂಲಾ, ಅರವಿಂದ ಗ್ರಂಥಾಲಯ, ಚಡಚಣ.

೪೯. ತಕರಾರು (೨೦೦೮), ಮೊಗಳ್ಳಿ ಗಣೇಶ್, ಪಲ್ಲವ ಪ್ರಕಾಶನ, ಚೆನ್ನಪಟ್ಟಣ.

೫೦. ತತ್ವಪದಗಳು-ಪ್ರಾತಿನಿಧಿಕ ಸಂಕಲನ (೨೦೦೦), ಪ್ರ.ಸಂ. ಶಾಂತರಸ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫೧. ತಿಟ್ಹತ್ತಿ ತಿರುಗಿ (೨೦೦೨), ವಿ. ಚಂದ್ರಶೇಖರ ನಂಗಲಿ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

೫೨. ನನ್ನ ನಲ್ಲ (೧೯೮೫), ಮಧುರಚೆನ್ನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೫೩. ನಮನ (೧೯೫೮ ಪ್ರಮು.), ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ.

೫೪. ನಮ್ಮ ಕನ್ನಡ ಕಾವ್ಯ (೧೯೯೭), ಸಂ. ಓ.ಎಲ್. ನಾಗಭೂಷಣ ಸ್ವಾಮಿ, ಕ.ವಿ.ವಿ. ಹಂಪಿ.

೫೫. ನಾಕುತಂತಿ (೧೯೭೪ ದ್ವಿ.ಮು.) ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ.

೫೬. ನಾದಲೀಲೆ (೧೯೫೫ ನಾ.ಮು.), ದ.ರಾ.ಬೇಂದ್ರೆ, ಪ್ರತಿಭಾ ಗ್ರಂಥಮಾಲೆ, ಧಾರವಾಡ.

೫೭. ನೂರು ಮರ ನೂರು ಸ್ವರ (೧೯೯೮), ಕೀರ್ತಿನಾಥ ಕುರ್ತಕೋಟಿ, ಪ್ರಸಾರಾಂಗ, ಕ.ವಿ.ವಿ. ಹಂಪಿ.

೫೮. ಪಂಪ: ಒಂದು ಅಧ್ಯಯನ (೧೯೭೩), ಸಂ. ಡಾ. ಜಿ.ಎಸ್.ಶಿವರುದ್ರಪ್ಪ, ಬೆಂಗಳೂರು ವಿ.ವಿ., ಬೆಂಗಳೂರು.

೫೯. ಪಂಪ ಮಹಾಕವಿ ವಿರಚಿತ ಆದಿಪುರಾಣ (೧೯೯೯), ಗದ್ಯಾನುವಾದ ಕೆ.ಎಲ್. ನರಸಿಂಹಸ್ವಾಮಿ, ಕ.ಸಾ.ಪರಿಷತ್ತು, ಬೆಂಗಳೂರು.

೬೦. ಪರಾಕಿ (೧೯೮೨), ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ.

೬೧. ಪಸರಿಪ ಕನ್ನಡಕ್ಕೊಡೆಯನೀಗ ದರಾಂಕಿತ ಬೇಂದ್ರೆ (೧೯೮೨), ಪ್ರೊ. ಬಿ.ಎಚ್.ಶ್ರೀಧರ, ಶ್ರೀಮಾತಾ ಪ್ರಕಾಶನ, ಧಾರವಾಡ.

೬೨. ಪುಟ ಬಂಗಾರ, ಸಂಪುಟ-೫, (೧೯೮೭),(ಶ್ರಾವಣ ಪ್ರತಿಭೆ), ಸಂ. ಜಿ.ಬಿ.ಜೋಶಿ, ಪ್ರೊ. ಕೀರ್ತಿನಾಥ ಕುರ್ತಕೋಟಿ, ಮನೋಹರ ಗ್ರಂಥಮಾಲೆ, ಧಾರವಾಡ.

೬೩. ಪು.ತಿ.ನ. ಸಮಗ್ರ ಕಾವ್ಯ (೧೯೮೮), ಪು.ತಿ.ನ., ಲಿಪಿ ಪ್ರಕಾಶನ, ಬೆಂಗಳೂರು.

೬೪. ಪುರಂದರದಾಸರ ಕೀರ್ತನೆಗಳು (೧೯೪೮, ೯ನೇ ಮು.), ಶ್ರೀಕೃಷ್ಣ ಮುದ್ರಣಾಲಯ, ಉಡುಪಿ.

೬೫. ಪ್ರಮಾಣು (೨೦೦೭), ಡಾ. ಗಿರಡ್ಡಿ ಗೋವಿಂದರಾಜು, ಕ.ವಿ.ವಿ. ಹಂಪಿ.

೬೬. ಬಯಲು ಆಲಯ (೧೯೯೨), ಕೀರ್ತಿನಾಥ ಕುರ್ತಕೋಟಿ, ಕ.ವಿ.ವಿ. ಹಂಪಿ.

೬೭. ಬರಕೋ ಪದಾ ಬರಕೋ (೧೯೯೯), ಸಂ. ಶಿವಾನಂದ ಗುಬ್ಬಣ್ಣವರ, ಕ.ಸಾ.ಪ. ಬೆಂಗಳೂರು.

೬೮. ಬರೆಹದಲ್ಲಿ ಬೇಂದ್ರೆಯವರ ಬದುಕು (೨೦೦೮), ಡಾ.ಜಿ. ಕೃಷ್ಣಪ್ಪ, ದ.ರಾ.ಬೇಂದ್ರೆ ಟ್ರಸ್ಟ್ ಗ್ರಂಥಮಾಲೆ,ಧಾರವಾಡ.

೬೯. ಬಾರೋ ಸಾಧನಕೇರಿಗೆ (೧೯೯೩), ಪ್ರೊ. ಕೀರ್ತಿನಾಥ ಕುರ್ತಕೋಟಿ, ಮನೋಹರ ಗ್ರಂಥಮಾಲಾ, ಧಾರವಾಡ.

೭೦. ಬಾಲಬೋಧೆ (೧೯೮೩ ಪ್ರ.ಮು.), ದ.ರಾ.ಬೇಂದ್ರೆ, ಮನೋಹರ ಗ್ರಂಥಮಾಲೆ, ಧಾರವಾಡ.

೭೧. ಬಸವಣ್ಣನವರ ವಚನ ಸಂಗ್ರಹ (೧೯೯೬), ಸಂ. ಸ.ಸ. ಮಾಳವಾಡ, ಸಾಹಿತ್ಯ ಅಕಾಡೆಮಿ, ನವದೆಹಲಿ.

೭೨. ಬೆಳಗರೆ ಕಂಡ ಬೇಂದ್ರೆ (೨೦೧೦), ಬೆಳಗೆರೆ ಕೃಷ್ಣಶಾಸ್ತ್ರಿ, ದ.ರಾ.ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಧಾರವಾಡ.

೭೩. ಬೇಂದ್ರೆ ಅನುಸಂಧಾನ, (೨೦೦೭), ಸಂ. ಡಾ. ಕೆ. ರಾಘವೇಂದ್ರರಾವ್, ದ.ರಾ.ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಧಾರವಾಡ.

೭೪. ಬೇಂದ್ರೆ ಮತ್ತು ಕನ್ನಡ ಭಾವಗೀತದ ಸ್ವರೂಪ (೧೯೯೬), ಡಾ. ಕೃಷ್ಣ ಕಟ್ಟಿ, ಕ.ವಿ.ವಿ. ಹಂಪಿ.

೭೫. ಬೇಂದ್ರೆ ಕಾವ್ಯ (೨೦೦೩), ಸಂ. ಜಿ.ಎಸ್.ಆಮೂರ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೭೬. ಬೇಂದ್ರೆ ಕಾವ್ಯಲೋಲಕ (೧೯೮೨), ಡಾ. ವಾಮನ ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ.

೭೭. ಬೇಂದ್ರೆಯವರ ಕಾವ್ಯಭಾಷೆ (೧೯೯೮), ಡಾ. ಬಿ.ಬಿ. ರಾಜಪುರೋಹಿತ, ಕ.ವಿ.ವಿ. ಧಾರವಾಡ.

೭೮. ಬೇಂದ್ರೆ ಸಾಹಿತ್ಯ :ಒಂದು ಅಧ್ಯಯನ (೨೦೦೦), ಸಂ. ಚಿ. ಶ್ರೀನಿವಾಸ ರಾಜು, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು.

೭೯. ಬೇಂದ್ರೆಯವರ ಮರಾಠಿ ಸಾಹಿತ್ಯಕೃಷಿ (೨೦೧೦), ವಿಠ್ಠಲರಾವ್ ಗಾಯಕವಾಡ, ದ.ರಾ.ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಧಾರವಾಡ.

೮೦. ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ - ಒಂದು ಅಧ್ಯಯನ (೨೦೦೧), ಡಾ. ಜಿ. ಕೃಷ್ಣಪ್ಪ, ಶ್ರೀರಂಗ ಪ್ರಕಾಶನ, ಮೈಸೂರು.

೮೧. ಭಾರತ ಸ್ವಾತಂತ್ರ್ಯದ ಗಾಯತ್ರಿ (೨೦೧೦), ಸಂ. ಡಾ. ಜಿ.ಎ.ಸನದಿ, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ.

೮೨. ಭಾರತೀಯ ನವಜನ್ಮ (೧೯೭೪), ದ.ರಾ.ಬೇಂದ್ರೆ, ಅರವಿಂದ ಗ್ರಂಥಾಲಯ, ಚಡಚಣ.

೮೩. ಭುವನದ ಭಾಗ್ಯ (೨೦೦೭, ತೃ.ಮು.) ಡಾ. ಜಿ.ಎಸ್.ಆಮೂರ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೮೪. ಮತಧರ್ಮ ಮತ್ತು ಆಧುನಿಕ ಮಾನವ (೧೯೭೮), ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ.

೮೫. ಮಧುರಚೆನ್ನ (೧೯೯೪), ಬಸವರಾಜ ನರೇಗಲ್, ಪ್ರಸಾರಾಂಗ, ಕ.ವಿ.ವಿ. ಧಾರವಾಡ.

೮೬. ಮಧುರಚೆನ್ನ (೨೦೦೮ ಎ.ಮು.), ಡಾ. ಗುರುಲಿಂಗ ಕಾಪಸೆ, ಸಾಹಿತ್ಯ ಅಕಾಡೆಮಿ, ನವದೆಹಲಿ.

೮೭. ಮರ್ಯಾದೆ (೧೯೬೬ ಪ್ರ.ಮು.), ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ.

೮೮. ಮಾತೆಲ್ಲ ಜ್ಯೋತಿ (೧೯೭೨), ದ.ರಾ.ಬೇಂದ್ರೆ, ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್, ಮಣಿಪಾಲ.

೮೯. ಮುಕ್ತಕಂಠ (೧೯೫೬ ಪ್ರ.ಮು.), ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ.

೯೦. ಮುಗಿಲ ಮಲ್ಲಿಗೆ (೧೯೬೧ ಪ್ರ.ಮು.), ದ.ರಾ. ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ.

೯೧. ಮುಪ್ಪಿನ ಷಡಕ್ಷರಿಗಳ ಕೈವಲ್ಯ ಪದಗಳು (೧೯೯೮), ಸಂ. ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ, ಶಿವರಾತ್ರೀಶ್ವರ ಗ್ರಂಥಮಾಲೆ, ಬೆಂಗಳೂರು.

೯೨. ಯಕ್ಷಯಕ್ಷಿ (೧೯೬೨ ಪ್ರ.ಮು.), ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ.

೯೩. ಯುಗಧರ್ಮ ಹಾಗೂ ಸಾಹಿತ್ಯ ವಿಕಾಸ (೧೯೬೫), ಪ್ರೊ. ಕೀರ್ತಿನಾಥ ಕುರ್ತಕೋಟಿ, ಮನೋಹರ ಗ್ರಂಥಮಾಲೆ, ಧಾರವಾಡ.

೯೪. ವಚನಸಾಹಿತ್ಯ ಛಂದೋಲಯ (೨೦೦೮), ಡಾ. ಎಸ್.ಎಸ್.ಅಂಗಡಿ, ಕ.ವಿ.ವಿ. ಹಂಪಿ ಮತ್ತು ಕೂಡಲಸಂಗಮ ಅಭಿವೃದ್ಧಿ ಮಂಡಳಿ.

೯೫. ವಿನಯ (೧೯೭೩ ಪ್ರ.ಮು.), ದ.ರಾ.ಬೇಂದ್ರೆ, ಗೀತಾ ಬುಕ್ ಹೌಸ್, ಮೈಸೂರು.

೯೬. ವಿಮರ್ಶೆಯ ಪರಿಭಾಷೆ (೧೯೮೩), ಡಾ. ಓ.ಎಲ್.ನಾಗಭೂಷಣ ಸ್ವಾಮಿ, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ.

೯೭. ವಿಮರ್ಶೆಯ ವಿನ್ಯಾಸ (೨೦೦೬), ಡಾ. ಸಿ.ವಿ. ಪ್ರಭುಸ್ವಾಮಿಮಠ, ಅಕ್ಷರ ಪ್ರಕಾಶನ, ಹೆಗ್ಗೋಡು.

೯೮. ಸಂಚಯ (೧೯೫೫ ಪ್ರ.ಮು.), ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ.

೯೯. ಸಂಶೋಧನೆ (೧೯೬೭ ಪ್ರ.ಮು.), ಡಾ. ಎಂ.ಚಿದಾನಂದಮೂರ್ತಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ಮೈಸೂರು.

೧೦೦. ಸಖಿಗೀತ (೧೯೪೦ ಪ್ರ.ಮು.), ದ.ರಾ.ಬೇಂದ್ರೆ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ.

೧೦೧. ಸಮಗ್ರ ವಿಮರ್ಶೆ (೨೦೦೧), ಡಾ. ಗಿರಡ್ಡಿ ಗೋವಿಂದರಾಜ, ಸಪ್ನ ಬುಕ್ ಹೌಸ್, ಬೆಂಗಳೂರು.

೧೦೨. ಸರ್ವಜ್ಞನ ವಚನಗಳು (೧೯೯೯), ಸಂ. ಚೆನ್ನಪ್ಪ ಉತ್ತಂಗಿ, ಪ್ರಕಾಶ ಸಾಹಿತ್ಯ, ಬೆಂಗಳೂರು.

೧೦೩. ಸಾಲುದೀಪಗಳು (೧೯೯೦), ಸಂ. ಜಿ.ಎಸ್.ಸಿದ್ಧಲಿಂಗಯ್ಯ, ಎಂ.ಎಚ್.ಕೃಷ್ಣಯ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೦೪. ಸಾವಿರಾರು ಕೀರ್ತನೆಗಳು(೨೦೦೨), ಸಂ. ಎ.ವಿ.ನಾವಡ, ಅಂಕಿತ ಪುಸ್ತಕ, ಬೆಂಗಳೂರು.

೧೦೫. ಸಾಹಿತ್ಯ ಸಮಾಹಿತ (೨೦೦೭), ಚೆನ್ನವೀರ ಕಣವಿ, ಕ.ವಿ.ವಿ. ಹಂಪಿ.

೧೦೬. ಸಾಹಿತ್ಯದ ವಿರಾಟ ಸ್ವರೂಪ, (೧೯೭೪ ಪ್ರ.ಮು.), ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ.

೧೦೭. ಸೂರ್ಯಪಾನ (೧೯೫೬ ಪ್ರ.ಮು.), ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ.

೧೦೮. ಶತಮಾನದ ಕವಿತೆ-ಜೋಗಿ (೧೯೯೯), ಸಂ. ಕೆ.ಸಿ. ಶಿವಾರೆಡ್ಡಿ, ಕನ್ನಡ ವಿ.ವಿ. ಹಂಪಿ.

೧೦೯. ಶತಮಾನದ ಸಾಹಿತ್ಯ ವಿಮರ್ಶೆ, ೨೦೦೧, ಸಂ. ಎಚ್.ಎಸ್.ಆರ್, ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೧೦. ಶಕ್ತಿ ಶಾರದೆಯ ಮೇಳ (೧೯೮೭), ಡಾ. ಡಿ.ಆರ್.ನಾಗರಾಜ್, ಅಕ್ಷರ ಪ್ರಕಾಶನ, ಹೆಗ್ಗೋಡು.

೧೧೧. ಶರೀಫರ ಜನಪ್ರಿಯ ಪದಗಳು (೧೯೬೩), ಸಂ. ಡಾ. ಡಿ.ಎಸ್.ಕರ್ಕಿ ಮತ್ತು ತಲ್ಲೂರ ರಾಯನಗೌಡರು, ಶರೀಫ ಸಾಹಿತ್ಯ ಸಮಿತಿ, ಶಿಶುವಿನಾಳ.

೧೧೨. ಹರಿಹರನ ರಗಳೆಗಳು (೧೯೯೯), ಸಂ. ಡಾ.ಎಂ.ಎಂ.ಕಲಬುರ್ಗಿ, ಕ.ವಿ.ವಿ. ಹಂಪಿ.

೧೧೩. ಹಲಸಂಗಿ ಹಾಡು (೨೦೦೦), ಸಂ. ಹಲಸಂಗಿ ಗೆಳೆಯರು, ಪ್ರಸಾರಾಂಗತ ಕ.ವಿ.ವಿ. ಹಂಪಿ.

೧೧೪. ಹೃದಯಸಮುದ್ರ (೧೯೫೬ ಪ್ರ.ಮು.), ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ.

೧೧೫. ಹೊಸಗನ್ನಡ ಸಾಹಿತ್ಯ ಚರಿತ್ರೆ (೧೯೯೯), ಪ್ರೊ. ಎಲ್.ಎಸ್.ಶೇಷಗಿರಿರಾವ್, ಅಂಕಿತ ಪುಸ್ತಕ, ಬೆಂಗಳೂರು.

English Books :

1. A Compendious History of English Literature, by. R.D. Trivedi, Vikas Publishing House, New Delhi.

2. A Short History of English Literature (1966), Sir Ifor Evans, Penguin Books, Mumbai.

3. Bendre : Poet and Seer : (1970), V.K. Gokak, Somaiya Publications, Mumbai.

4. D.R.Bendre : The Poet and his Poetry : (2007), Prof. Kirtinath Kurtakoti, D.R. Bendre National Trust, Dharwad.

5. Indian Writing in English (1985), K.R.Srinivas Iyengar, Sterling Publishing (P), Ltd, New Delhi.

6. Literary Criticism and Theory, (2007), Dr. D.B. Gavani, Navanidhu Publications, Gadag.

7. Poetry : Sixteen fifty to Ninteen fifty (1954), Edited by L.G Salingar, Blckie and Son Ltd, London.

8. Poetry for Pleasure: (1950), Ed.Maung Kaung Oxford University Press London.

9. Selected English Verses (1948), Karnataka Publishing House Mumbai.

10. The Complete works of Shakespeare, (1972), Shakespeare, Harcourt Brue,

11. The Complete Poetical Works of Wordsworth (1964), Houghton Mifflin Company Costaon.

12. The Poems of John Keats, Ed. Mirian Allott, Longman, Norton.

13. Vacanas of Women Saints (2006), C.R. Yaravintelimath, Basavasamiti, Bangalore.

ಲೇಖನಗಳು :

೧. ಕನ್ನಡ ಕಾವ್ಯ : ಗಾಂಧೀ ಯುಗ (೨೦೦೩), ಮಧು ವೆಂಕಾರೆಡ್ಡಿ, ಸಂಕ್ರಮಣ ೩೫೧ನೇ ಸಂಚಿಕೆ.

೨. ಕುವೆಂಪು ಬದುಕು-ಬದುಕಿನಾಚೆಯ ಬದುಕು (೨೦೦೫), ಎಂ.ಬಿ.ಹೂಗಾರ, ಸಂಕ್ರಮಣ ೩೬೩ನೇ ಸಂಚಿಕೆ.

೩. ಖಲೀಲ್ ಗಿಬ್ರಾನ್ - ಮಣ್ಣ ಕಣ್ಣಲ್ಲಿ ಉರಿವ ಜ್ಯೋತಿ (೨೦೦೫), ಎಸ್. ಚಂದ್ರಕಿರಣ, ಸಂಕ್ರಮಣ ೩೬೧ನೇ ಸಂಚಿಕೆ.